ಮಂಡ್ಯ ಜಿಲ್ಲೆಯ ಶಾಸನಗಳು : ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಅಧ್ಯಯನ

ಕನ್ನಡ ಪಿಎಚ್.ಡಿ.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ (ಹಂಪಿ)

ಸಾದರಪಡಿಸುವ ಪರಿಷ್ಕೃತ ಆವೃತ್ತಿ ಮಹಾಪ್ರಬಂಧ

ಸಂಶೋಧಕರು.

ಎಸ್. ಪೂರ್ಣಿಮ

೬ನೇ ತಿರುವು, ಸಿದ್ಧಾರ್ಥನಗರ

ಮದ್ದೂರು, ಮಂಡ್ಯ ಜಿಲ್ಲೆ

ನೋಂದಣಿ ಸಂಖ್ಯೆ : ಕೆವಿಹೆಚ್‌ಎಂ-೧೨೪

ಮಾರ್ಗದರ್ಶಕರು

ಡಾ|| ಬೋರೇಗೌಡ ಚಿಕ್ಕಮರಳಿ

ಕನ್ನಡ ಪ್ರಾಧ್ಯಾಪಕರು

ವಿಜಯ ಪ್ರಥಮ ದರ್ಜೆ ಕಾಲೇಜು

ಪಾಂಡವಪುರ

ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

(ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ)

ಕರ್ನಾಟಕ ಸಂಘ (ರಿ), ಮಂಡ್ಯ

೨೦೧೫

ಮಂಡ್ಯ ಜಿಲ್ಲೆಯ ಶಾಸನಗಳು : ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಅಧ್ಯಯನ

ಕನ್ನಡ ಪಿಎಚ್.ಡಿ.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ (ಹಂಪಿ)

ಸಾದರಪಡಿಸುವ ಪರಿಷ್ಕೃತ ಆವೃತ್ತಿ ಮಹಾಪ್ರಬಂಧ

ಸಂಶೋಧಕರು.

ಎಸ್. ಪೂರ್ಣಿಮ

೬ನೇ ತಿರುವು, ಸಿದ್ದಾರ್ಥನಗರ

ಮದ್ದೂರು, ಮಂಡ್ಯ ಜಿಲ್ಲೆ

ನೋಂದಣಿ ಸಂಖ್ಯೆ : ಕೆಎಸ್ಎಂ-೧೨೪

ಮಾರ್ಗದರ್ಶಕರು

ಡಾ॥ ಬೋರೇಗೌಡ ಚಿಕ್ಕಮರಳಿ

ಕನ್ನಡ ಪ್ರಾಧ್ಯಾಪಕರು

ವಿಜಯ ಪ್ರಥಮ ದರ್ಜೆ ಕಾಲೇಜು

ಪಾಂಡವಪುರ

ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

(ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ)

ಕರ್ನಾಟಕ ಸಂಘ (ರಿ), ಮಂಡ್ಯ

೨೦೧೫

ಸಂಶೋಧಕರ ಪ್ರಮಾಣ ಪತ್ರ

ಕನ್ನಡ ವಿಶ್ವವಿದ್ಯಾನಿಲಯದ ಹಂಪಿ ಪಿಎಚ್.ಡಿ. ಪದವಿಗಾಗಿ ಸಿದ್ಧಪಡಿಸಿರುವ **"ಮಂಡ್ಯ ಜಿಲ್ಲೆಯ ಶಾಸನಗಳು:- ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಅಧ್ಯಯನ"** ಎಂಬ ಸಂಶೋಧನಾ ಮಹಾಪ್ರಬಂಧವನ್ನು ಎಂ.ಎಲ್.ಶ್ರೀಕಂಠೇಶಗೌಡ ಸಂಶೋದನಾ ಕೇಂದ್ರ ಕರ್ನಾಟಕ ಸಂಘ (ರಿ), ಮಂಡ್ಯ (ಕನ್ನಡ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದಿದೆ), ಈ ಸಂಸ್ಥೆಯ ಮೂಲಕ ಎಂ.ಎಲ್.ಶ್ರೀಕಂಠೇಶಗೌಡ ಸಂಶೋದನಾ ಕೇಂದ್ರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿರುವ **ಡಾ॥ ಬೋರೇಗೌಡ ಚಿಕ್ಕಮರಳಿ** ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಈ ಮಹಾಪ್ರಬಂಧ ನನ್ನ ಸ್ವಂತ ಸಂಶೋಧನೆಯಾಗಿದೆ. ಇದನ್ನು ಸಂಪೂರ್ಣವಾಗಿ ಆಗಲೀ ಅಥವಾ ಭಾಗಶಃವಾಗಲೀ, ಯಾವುದೇ ವಿಶ್ವವಿದ್ಯಾನಿಲಯದ ಪದವಿ ಅಥವಾ ಡಿಪ್ಲೊಮಗೆ ಸಲ್ಲಿಸಿರುವುದಿಲ್ಲವೆಂದು ಪ್ರಮಾಣಕರೀಸುತ್ತೇನೆ.

ಸ್ಥಳ: ಮಂಡ್ಯ

ದಿನಾಂಕ: 04/04/2015

ಪೂರ್ಣಿಮ. ಎಸ್.

(ಎಸ್.ಪೂರ್ಣಿಮ)

ಮಾರ್ಗದರ್ಶಕರ ದೃಢೀಕರಣ ಪತ್ರ

ಕನ್ನಡ ವಿಶ್ವವಿದ್ಯಾನಿಲಯದ ಶ್ರೀಮತಿ ಎಸ್.ಪೂರ್ಣಿಮ ಇವರು ಎಂ.ಎಲ್.ಶ್ರೀಕಂಠೇಶಗೌಡ ಸಂಶೋದನಾ ಕೇಂದ್ರ ಕರ್ನಾಟಕ ಸಂಘ (ರಿ), ಮಂಡ್ಯ (ಕನ್ನಡ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದಿದೆ), ಈ ಸಂಸ್ಥೆಯ ಮೂಲಕ **"ಮಂಡ್ಯ ಜಿಲ್ಲೆಯ ಶಾಸನಗಳು:– ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಅಧ್ಯಯನ"** ಎಂಬ ವಿಷಯವನ್ನು ಕುರಿತು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಂಶೋಧಕರಾಗಿ ಸಂಶೋಧನೆ ನಡೆಸಿ ಈ ಮಹಾಪ್ರಬಂಧವನ್ನು ಸಿದ್ಧಪಡಿಸಿದ್ದಾರೆ.

ಈ ಮಹಾಪ್ರಬಂಧವನ್ನು ಇಡಿಯಾಗಿ ಅಥವಾ ಬಿಡಿಯಾಗಿ ಈ ಮೊದಲು ಇವರು ಯಾವುದೇ ಪದವಿ ಅಥವಾ ಡಿಪ್ಲೊಮ ಪದವಿಗಾಗಿ ಬಳಸಿಕೊಂಡಿಲ್ಲ. ಈ ಅಭ್ಯರ್ಥಿ ನನ್ನೊಂದಿಗೆ ನಾಲ್ಕು ವರ್ಷ ಸಂಶೋಧನೆಯ ಕೆಲಸ ಮಾಡಿದ್ದಾರೆಂದೂ ಈ ಪ್ರಬಂಧವನ್ನು ಪಿಎಚ್.ಡಿ.ಪದವಿಗಾಗಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ (ಹಂಪಿ) ಸಾದರಪಡಿಸಲು ನಾನು ಸಮ್ಮತಿಸುತ್ತೇನೆಂದು ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ: ಮಂಡ್ಯ

ದಿನಾಂಕ: 04-04-2015

ಮಾರ್ಗದರ್ಶಕರು

(ಡಾ॥ ಬೋರೇಗೌಡ ಚಿಕ್ಕಮರಳಿ)
ಕನ್ನಡ ಪ್ರಾಧ್ಯಾಪಕರು
ವಿಜಯ ಪ್ರಥಮ ದರ್ಜೆ ಕಾಲೇಜು
ಪಾಂಡವಪುರ

[illegible]

[illegible]

[illegible]

[illegible]

[illegible]

[illegible]

ಮಂಡ್ಯ ಜಿಲ್ಲೆಯ ಶಾಸನಗಳು : ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಅಧ್ಯಯನ

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಯಾವುದೇ ಒಂದು ಪ್ರದೇಶದ ಸಾಂಸ್ಕೃತಿಕ ಇತಿಹಾಸ ರಚನೆಗೆ ನೆರವಾಗುವ ಆಕರ ಸಾಮಾಗ್ರಿಗಳಲ್ಲಿ ಶಾಸನಗಳಿಗಿಂತ ಪ್ರಮುಖ ಸಾಧನ ಮತ್ತೊಂದಿಲ್ಲ. ನಮ್ಮ ಹಿರಿಯರ ಜೀವನ ಶೈಲಿಗೆ ಇವು ಸಾಕ್ಷಿಯಾಗಿವೆ. ಜೊತೆಗೆ ಅವರು ಆಚರಿಸುತ್ತಿದ್ದ ಹಬ್ಬ ಹರಿದಿನಗಳು ಮೊದಲಾದ ಆಚರಣೆಗಳನ್ನು ಈ ಶಾಸನಗಳಿಂದ ತಿಳಿಯಬಹುದು.

ಮಂಡ್ಯ ಜಿಲ್ಲೆಯ ಶಾಸನಗಳಲ್ಲಿ ಬರುವ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಅಂಶಗಳ ಅಧ್ಯಯನ ನಡೆಸುವುದು ಪ್ರಸ್ತುತ ಸಂಶೋಧನೆಯ ಉದ್ದೇಶವಾಗಿದೆ. ಜೊತೆಗೆ ಹಿಂದಿನ ಜನರ ಜೀವನ ಹೇಗಿತ್ತು ಎಂಬುದನ್ನು ತಿಳಿಯುವುದರ ಜೊತೆಗೆ ಅವರು ಆಚರಿಸುತ್ತಿದ್ದ ಎಲ್ಲ ಸಾಂಸ್ಕೃತಿಕ ಚಟುವಟಿಕೆಗಳನ್ನು ಮತ್ತು ಶಾಸನಗಳ ಸಾಹಿತ್ಯಿಕ ದೃಷ್ಟಿಯನ್ನು ಅರಿಯಲು ಪ್ರಯತ್ನಿಸುವುದಾಗಿದೆ.

ಯಾವುದೇ ಒಂದು ಪ್ರದೇಶದ ಜನಜೀವನ ತನ್ನದೇ ಆದ ಭಾಷೆ, ಉಡುಗೆ, ತೊಡುಗೆ, ಆಹಾರ, ನೆಲ-ಜಲ ಇವುಗಳಿಂದ ಪ್ರತ್ಯೇಕವಾಗಿ ಭಿನ್ನವಾಗಿ ನಿಲ್ಲುವುದು ಅಸಾಧ್ಯವಾಗಿದೆ. ಮಂಡ್ಯ ಜಿಲ್ಲೆ ಈ ಮೇಲ್ಕಂಡ ಲಕ್ಷಣಗಳನ್ನೆಲ್ಲಾ ಒಳಗೊಂಡಿದ್ದು, ತನ್ನದೇ ಆದ ಪ್ರಾಚೀನ ಇತಿಹಾಸ, ಸಾಹಿತ್ಯ ಹಾಗೂ ಸಾಂಸ್ಕೃತಿಕ ದಾಖಲೆಗಳನ್ನು ಒಡಲಲ್ಲಿರಿಸಿಕೊಂಡು ತನ್ನ ಅಸ್ತಿತ್ವವನ್ನು ದಾಖಲು ಮಾಡಿದೆ.

ಬೆಂಗಳೂರು-ಮೈಸೂರು ಹೆದ್ದಾರಿಯ ನಡುವಿನ ಸಮತಟ್ಟಾದ ಭೌಗೋಳಿಕ ಪ್ರದೇಶ ಹಿತವಾದ ವಾತಾವರಣಗಳನ್ನೊಳಗೊಂಡ ಈ ಜಿಲ್ಲೆಗೆ ಭತ್ತದ ಕಣಜ, ಸಕ್ಕರೆಯ ನಾಡು ಎಂದು ಅಭಿಮಾನದಿಂದ ಕರೆದ ಹೆಸರುಗಳುಂಟು.

ದಕ್ಷಿಣ ಮತ್ತು ನೈರುತ್ಯ ಪ್ರದೇಶದಲ್ಲಿ ಮೈಸೂರು ಜಿಲ್ಲೆ, ಪೂರ್ವದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ, ವಾಯುವ್ಯದಲ್ಲಿ ಹಾಸನ ಹಾಗೂ ಉತ್ತರ ದಿಕ್ಕಿನಲ್ಲಿ ತುಮಕೂರು ಜಿಲ್ಲೆಗಳಿಂದ ಸುತ್ತುವರಿದ ಈ ಜಿಲ್ಲೆಯ ಇತಿಹಾಸ ಶಿಲಾಯುಗದಿಂದ ಆರಂಭವಾಗಿ ೪ನೇ ಶತಮಾನದ ಗಂಗರಿಂದ ಹಿಡಿದು ರಾಷ್ಟ್ರಕೂಟರು, ಚೋಳರು, ಹೊಯ್ಸಳರು, ವಿಜಯನಗರ ಅರಸರು, ಮೈಸೂರು ಒಡೆಯರು, ಹೈದರ್ ಮತ್ತು ಟಿಪ್ಪು ಬ್ರಿಟೀಷರವರೆಗೆ ಬಂದು ನಿಲ್ಲುತ್ತದೆ.

ಈ ಪ್ರದೇಶ ಪುರಾಣೋಕ್ತಿಯಲ್ಲಿ ದಂಡಕಾರಣ್ಯ; ಮೃಗ, ಪಕ್ಷಿಗಳ ಆಶ್ರಯಧಾಮ, ಮಹಾನ್ ಋಷಿಗಳಾದ ಮಾಂಡವ್ಯ, ಕದಂಬ, ಅಗಸ್ತ್ಯ, ಗೌತಮ, ಭೃಗು, ಕಣ್ವ, ಲಂಬಕರ್ಣರ ತಪೋಭೂಮಿ, ಪವಿತ್ರ ಜೀವಧಾರೆ ಎನಿಸಿದೆ. ಕಾವೇರಿ, ಹೇಮಾವತಿ, ಲೋಕಪಾವನಿ, ಶಿಂಷಾ, ವೀರವೈಷ್ಣವಿ ನದಿಗಳು ಪ್ರಾಚೀನ ಕಾಲದಿಂದಲೂ ಹರಿದು ಜನಜೀವನಕ್ಕೆ ಆಶ್ರಯ ನೀಡಿವೆ. ನದಿ ದಂಡೆಯಲ್ಲಿ ಪವಿತ್ರ ಕ್ಷೇತ್ರಗಳಿವೆ. ಮನೋಹರವಾದ ಗಗನಚುಕ್ಕಿ, ಭರಚುಕ್ಕಿ, ಶಿಂಷಾ ಜಲಪಾತಗಳು ಕಂಗೊಳಿಸಿದೆ. ರಂಗನತಿಟ್ಟು, ಕೊಕ್ಕರೆ ಬೆಳ್ಳೂರು, ಗೆಂಡೆಹೊಸಹಳ್ಳಿ ಪಕ್ಷಿಧಾಮಗಳು ಕಂಗೊಳಿಸಿವೆ. ಕಬ್ಬಾಳು ದುರ್ಗ ಮತ್ತು ಕರಿಘಟ್ಟದಸಾಲು, ಕುಂತಿಬೆಟ್ಟ, ಬೇಬಿಬೆಟ್ಟ, ಬೆಳ್ಳಿಬೆಟ್ಟ, ಹೇಮಗಿರಿ, ನಾರಾಯಣದುರ್ಗ, ಗಜರಾಜಗಿರಿ, ಅರೆತಿಪ್ಪೂರು ಬೆಟ್ಟಗಳಲ್ಲದೆ, ಆಲತಿಗಿರಿ, ಅನಂತಗಿರಿ, ಮೇಲುಕೋಟೆ, ಆದಿಚುಂಚನಗಿರಿ ಬೆಟ್ಟಗಳು ಜಿಲ್ಲೆಯಲ್ಲಿ ಪ್ರಾಕೃತಿಕ ಸೌಂದರ್ಯವನ್ನು ಹೆಚ್ಚಿಸಿವೆ. ಇವುಗಳೆಲ್ಲ ಅನೇಕ ಪುರಾಣಕಥೆ, ಕಾವ್ಯಗಳಿಗೆ ಐತಿಹ್ಯಗಳಿಗೆ ವಸ್ತುವಾಗಿವೆ. ಪ್ರಾಗೈತಿಹಾಸಿಕ ಕಾಲದಲ್ಲಿ ಜನವಸತಿಯಿದ್ದ, ಕುರುಹುಗಳು ಪಾಂಡವಪುರ, ಬೆಳಕವಾಡಿ, ಮುತ್ತತ್ತಿ, ತಿಪ್ಪೂರು ಪ್ರದೇಶಗಳಲ್ಲಿ ಕಂಡುಬಂದಿವೆ. ಇತಿಹಾಸದ ಕಡೆಗೆ ಇಣುಕಿದಾಗ ಕೆರೆಯನ್ನು ಕಟ್ಟಿಸಿದ, ಬಾವಿಯನ್ನು ತೋಡಿಸಿದ, ಮಠ ಮಂದಿರ ದೇವಾಲಯಗಳನ್ನು ನಿರ್ಮಿಸಿದ ಅಗ್ರಹಾರಗಳನ್ನು ನಿರ್ಮಿಸಿರುವುದು ಕಾಣಬಹುದು. ಅಧ್ಯಯನದ ಉದ್ದೇಶ ಜಿಲ್ಲೆಯ ಶಾಸನಗಳನ್ನು ಕುರಿತು ಅಧ್ಯಯನ ನಡೆಸುವುದರ ಜೊತೆಗೆ ಅಲ್ಲಿನ ಜನರ ಜೀವನ ಹೇಗಿತ್ತು, ಸಾಂಪ್ರದಾಯಿಕವಾಗಿ ಅವರು ಆಚರಿಸುತ್ತಿದ್ದ ಹಬ್ಬಗಳು ಹೇಗಿದ್ದುವು, ಅವುಗಳಲ್ಲಿ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ದೃಷ್ಟಿಯಿಂದ ಕಾಣಬಹುದಾದ ವಿಶೇಷಗಳೇನು, ಜೊತೆಗೆ ಅಲ್ಲಿನ ನದಿಗಳು, ಅಲ್ಲಿನ ವ್ಯವಸಾಯ, ಶಾಸನ ಕವಿಗಳು, ಶಾಸನೋಕ್ತ ಕವಿಗಳು ಯಾರು ಯಾರಿದ್ದಾರೆ? ಶಾಸನಗಳ ಮೂಲಕ ತಿಳಿಯಬಹುದಾದ ಮಂಡ್ಯ ಜಿಲ್ಲೆಯ ಪ್ರಾಚೀನ ಸಾಹಿತ್ಯದ ವೈಶಿಷ್ಟ್ಯಗಳೇನು? ಎಂಬುದನ್ನು ಈ ಅಧ್ಯಯನದಿಂದ ಅರಿತುಕೊಳ್ಳಲು ಪ್ರಯತ್ನಿಸಲಾಗುವುದು.

ಜಗತ್ತಿನ ಯಾವುದೇ ಭಾಗದಲ್ಲಿ ಸಂಸ್ಕೃತಿ ಮತ್ತು ನಾಗರೀಕತೆ ಪ್ರಾರಂಭವಾಗಿರುವುದು ನದೀತೀರದಲ್ಲಿ, ಮನುಷ್ಯನ ಬದುಕಿನ ಅವಿಭಾಜ್ಯ ಅಂಗದಂತಿರುವ ನೀರಿನ ಮೂಲವಾದ ನದಿಗಳು ಪ್ರತಿಯೊಂದು ಪ್ರದೇಶದ ಹಾಗೂ ಅಲ್ಲಿನ ಜನ ಜೀವನದ ಮೇಲೆ ದಟ್ಟ ಪ್ರಭಾವ ಬೀರಿ ಜೊತೆಗೆ ಪ್ರಮುಖ ಪಾತ್ರ ವಹಿಸಿರುವುದು ಇತಿಹಾಸದುದ್ದಕ್ಕೂ ಕಂಡುಬಂದಿದೆ.

ಕಾವೇರಿ ದಕ್ಷಿಣ ಭಾರತದ ಪ್ರಮುಖ ನದಿಗಳಲ್ಲಿ ಒಂದು, ಕೊಡಗಿನ ತಲಕಾವೇರಿಯಲ್ಲಿ ಹುಟ್ಟಿ ತಮಿಳುನಾಡಿನ ಬಳಿ ಅರಬ್ಬೀಸಮುದ್ರ ಸೇರುವ ಈ ನದಿ ಕರ್ನಾಟಕ ತಮಿಳುನಾಡುಗಳಲ್ಲಿ ವ್ಯವಸಾಯದ ಪ್ರಗತಿಗೆ ತನ್ನದೇ ಆದ ಕೊಡುಗೆ ನೀಡಿದೆ.

ಮಂಡ್ಯ ಜಿಲ್ಲೆಯ ಅರ್ಥಿಕ ಪ್ರಗತಿಗೆ ಹಾಗೂ ಬೇಸಾಯಾದಾರಿತ ಸಾಂಸ್ಕೃತಿಕ ಉನ್ನತಿಗೆ ಈ ನದಿಗಳ ಕಾಣಿಕೆ ಅಪಾರವಾದದ್ದು. ಮಲೇರಿಯಾದ ತವರೂರಾಗಿದ್ದ ಮಂಡ್ಯ ಪ್ರದೇಶದಲ್ಲಿ ಈ ನದಿಗಳ ನೀರು ಹರಿದು ಇಲ್ಲಿನ ಬೆಂಗಾಡು ನಿತ್ಯಹರಿದ್ವರ್ಣದ ಸಿರಿನಾಡಾಯಿತು. ಇಲ್ಲಿಯ ನದಿಗಳು ಜಿಲ್ಲೆಯ ಜನಾಂದೋಲನಕ್ಕೆ ಮೂಲ ನೆಲೆಯಾದುದಲ್ಲದೆ ಜಿಲ್ಲೆಯ ಕೃಷಿ ಉತ್ಪನ್ನಗಳ ಅಭಿವೃದ್ಧಿಗೆ ಕೃಷಿ ಕಾರ್ಮಿಕರ ಜೀವನ ನಿರ್ವಹಣೆಗೆ ದಾರಿ ದೀಪಗಳಾಗಿವೆ.

ಎಫಿಗ್ರಾಫಿಯ ಕರ್ನಾಟಕ ಸಂಪುಟ ಮಾಲಿಕೆಯಲ್ಲಿ ಆರು ಮತ್ತು ಏಳು ಸಂಪುಟಗಳು ಮಂಡ್ಯ ಜಿಲ್ಲೆಗೆ ಸೇರಿವೆ. ಆರನೆಯ ಸಂಪುಟದಲ್ಲಿ ಕೃಷ್ಣರಾಜಪೇಟೆ ೧೧೪, ಪಾಂಡವಪುರದ ೨೬೩, ಶ್ರೀರಂಗಪಟ್ಟಣದ ೧೨೨ ಹೀಗೆ ಮೂರು ತಾಲ್ಲೂಕುಗಳಿಂದ ಒಟ್ಟು ೪೯೯ ಶಾಸನಗಳಿವೆ. ಏಳನೆಯ ಸಂಪುಟದಲ್ಲಿ ನಾಗಮಂಗಲದ ೧೮೫, ಮಂಡ್ಯದ ೮೭, ಮದ್ದೂರಿನ ೧೪೫, ಮಳವಳ್ಳಿಯ ೧೪೯, ಹೀಗೆ ನಾಲ್ಕು ತಾಲ್ಲೂಕುಗಳಿಂದ ಒಟ್ಟು ೫೬೬ ಶಾಸನಗಳಿವೆ. ಎರಡು ಸಂಪುಟಗಳಲ್ಲಿರುವ ಏಳು ತಾಲ್ಲೂಕುಗಳಿಂದ ಅಂದರೆ ಇಡೀ ಮಂಡ್ಯ ಜಿಲ್ಲೆಯ ಶಾಸನಗಳ ಒಟ್ಟು ಸಂಖ್ಯೆ ೧೦೬೫ ಆಗಿದೆ. ಮೇಲುಕೋಟೆ ಮತ್ತು ತೊಣ್ಣೂರುಗಳು ಸಾಕಷ್ಟು ಸಂವೃದ್ಧವಾದ ಶಾಸನ ಸಂಪತ್ತನ್ನು ಒಳಗೊಂಡಿದೆ. ಅವುಗಳನ್ನು ಬಿಟ್ಟರೆ ಶ್ರೀರಂಗಪಟ್ಟಣವು ಹೆಚ್ಚು ಸಂಖ್ಯೆಯಲ್ಲಿ ಶಾಸನಗಳನ್ನು ಪಡೆದಿದೆ. ಮಿಕ್ಕಂತೆ ಅರಕೆರೆ, ಗಂಜಾಂ, ಕನ್ನಂಬಾಡಿ, ಮಾರೇಹಳ್ಳಿ, ಬೆಳ್ಳೂರು, ನಾಗಮಂಗಲ, ಕಿಕ್ಕೇರಿಗಳಲ್ಲಿ ತಕ್ಕಷ್ಟು ಸಂಖ್ಯೆಯಲ್ಲಿ ಶಾಸನಗಳಿವೆ. ಈ ಶಾಸನಗಳಲ್ಲಿ ಬಹುಪಾಲು ಕನ್ನಡ ಭಾಷೆಯಲ್ಲಿವೆ. ಆರಂಭದಲ್ಲಿ ಸಂಸ್ಕೃತ ಕನ್ನಡ ಮಿಶ್ರಣದಿಂದ ಕೂಡಿದ ಶಾಸನಗಳೂ ಇವೆ. ತಮಿಳು ಮತ್ತು ತೆಲುಗು ಭಾಷೆಗಳಲ್ಲೂ ಕೆಲವು ಶಾಸನಗಳಿವೆ, ಅತ್ಯಲ್ಪ ಸಂಖ್ಯೆಯಲ್ಲಿ ಪರ್ಷಿಯನ್, ಇಂಗ್ಲೀಷ್ ಮತ್ತು ಗುಜರಾತಿ ಭಾಷೆಯ ಶಾಸನಗಳಿವೆ. ಈ ಎಲ್ಲಾ ಶಾಸನಗಳು ಗಂಗ, ರಾಷ್ಟ್ರಕೂಟ, ಚೋಳ, ಹೊಯ್ಸಳ, ವಿಜಯನಗರ, ಮೈಸೂರು ಮುಂತಾದ ರಾಜಮನೆತನಗಳು ಆಳಿದ ವಿವಿಧ ಕಾಲಾವದಿಗೆ ಸೇರಿವೆ.

ಗಂಗರ ಆಳ್ವಿಕೆಗೆ ಸೇರಿದ ಮಂಡ್ಯ ತಾಲ್ಲೂಕಿಗೆ ಹಳ್ಳಿಗೆರೆ ತಾಮ್ರಶಾಸನವೇ ಜಿಲ್ಲೆಯ ಪ್ರಾಚೀನ ಬರಹವಾಗಿದೆ. ಒಂದನೆಯ ಶಿವಮಾರನ ಕಾಲಕ್ಕೆ ಸೇರಿದ ಕೆರಗೋಡು, ಕೂಳುಗೊಳ, ಬಳ್ಕೆರೆ ಮತ್ತು ಇತರ ಕೆಲವು ಗ್ರಾಮಗಳು ಶಾಸನಗಳಲ್ಲಿ ನಿರೂಪಿತವಾಗಿವೆ.

ಶಾಸನಗಳನ್ನು ಅಧ್ಯಯನ ಮಾಡುವಾಗ ಒಂದು ನಿಯಮವನ್ನು ಉದ್ದಕ್ಕೂ ಅನುಸರಿಸಿದೆ. ರಾಜಕೀಯ ಇತಿಹಾಸಕ್ಕೆ ಸಂಬಂಧಿಸಿದ ವಿಷಯಗಳನ್ನು ಬಿಟ್ಟು ಉಳಿದಂತೆ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಅಂಶಗಳನ್ನು ಶಾಸನಗಳಿಂದ ಸಂಗ್ರಹಿಸಲಾಗಿದೆ.

ಕನ್ನಡ ನಾಡಿನ ಜೀವನವು ಎಲ್ಲಿಯೂ ಯಾವ ಕೃತಿಯಲ್ಲಿಯೂ ಮಡುಗಟ್ಟನಿಂತಿಲ್ಲ. ಅದು ಕೇವಲ ಕಾವ್ಯಗಳಲ್ಲಿ ಅಲ್ಲಲ್ಲಿ ಗೋಪಾದ ಜಲದಂತೆ ಕಂಡುಬಂದರೂ ಹೆಚ್ಚು ಪ್ರಮಾಣದಲ್ಲಿ ಹೆಚ್ಚು ವಿಸ್ತಾರವಾಗಿ ಹೆಚ್ಚು ಶುದ್ಧ ರೂಪದಲ್ಲಿ ಕಾಣಿಸಿಕೊಳ್ಳುವುದು. ಶಾಸನಗಳಲ್ಲಿ ಪಾಶ್ಚಾತ್ಯರ ಐತಿಹಾಸಿಕ ಪ್ರಜ್ಞೆ ಭಾರತೀಯರಿಗೆ ಇಲ್ಲ ಎನ್ನುವುದು ಎಲ್ಲರಿಗೂ ತಿಳಿದ ವಿಷಯ. ಗ್ರೀಕರು, ಚೀನೀಯರು, ಅರಬ್ಬರು ಬೇರೆ ಬೇರೆ ನಾಡುಗಳಿಗೆ ಹೋಗಿ ಅಲ್ಲಿನ ಜೀವನವನ್ನು ಅಭ್ಯಸಿಸಿ, ತಮ್ಮ ಅನುಭವಗಳನ್ನು ಬರೆದಿಟ್ಟರು. ನಮ್ಮವರು ಬೇರೆ ದೇಶಗಳಿಗೆ ಹೋಗಿ ಅಲ್ಲಿನ ಜೀವನವನ್ನು ಬೆರೆದಿಡುವುದಿರಲ್ಲಿ ನಮ್ಮ ದೇಶದ ನಿಜವಾದ ಚಿತ್ರವನ್ನೇ ಎಲ್ಲಿಯೂ ಬರೆದಿಟ್ಟಿಲ್ಲ. ಹನ್ನೊಂದನೆಯ ಶತಮಾನದ ಪ್ರವಾಸಿ ಅಲ್ಬೆರೂನಿ ಎಂಬ ಅರಬ್ ವರ್ತಕ ಹೇಳುವಂತೆ ಸಂಗತಿಗಳ ಐತಿಹಾಸಿಕ ಅನುಕ್ರಮಣಿಕೆಯ ವಿಷಯದಲ್ಲಿ ಭಾರತೀಯರಿಗೆ ಆಸಕ್ತಿಯೇ ಇಲ್ಲ. ರಾಜಾವಳಿಗಳ ನಿರೂಪಣೆಗಳಲ್ಲಿಯೂ ಅಷ್ಟೇ ಸತ್ಯ ಸಂಗತಿಗಳನ್ನು ಹೇಳಲು ಬಲವಂತ ಪಡಿಸಿದರೆ ಕಟ್ಟು ಕಥೆಗಳನ್ನೇ ಎನ್ನುತ್ತಾನೆ.

ಶಾಸನ ಪರಿವೀಕ್ಷಣೆ, ಶಾಸನಗಳ ವಿಶ್ಲೇಷಣೆ ಎಂಬುದಾಗಿ ವಿವರಿಸಬಹುದು. ಶಾಸನಗಳ ಪರಿವೀಕ್ಷಾಕಾರ್ಯ ಸಂಪೂರ್ಣವಾಗಿ ಮತ್ತು ಸಂಪರ್ಕವಾಗಿ ಕರ್ನಾಟಕದ ಎಲ್ಲಾ ಭಾಗಗಳಲ್ಲಿಯೂ ನಡೆದಿದೆ. ಎಂಬುದಾಗಿ ಹೇಳಲಾಗದಿದ್ದರೂ, ಗಮನಾರ್ಹವಾದ ಮಟ್ಟಿಗೆ ನಡೆದಿದೆ. ಶಾಸನಗಳ ವಿಶ್ಲೇಷಣೆ ಬಗ್ಗೆ ಹೇಳುವುದರಿಂದ ಶಾಸನಗಳಿಂದ ದೊರೆಯಬಹುದಾದ ಬಹುಪಾಲು ಮಾಹಿತಿಯನ್ನು ವಿದ್ವಾಂಸರು ನೀಡಿದ್ದಾರೆ. ಶಾಸನಗಳನ್ನು ಆಧರಿಸಿ ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಕೃತಿಗಳು ಕಡಿಮೆಯಾಗಿದರು. ತುಂಬಾ ಮಹತ್ವವನ್ನು ಹೊಂದಿದೆ. ಮಂಡ್ಯ ಜಿಲ್ಲೆಯ ಜನರ ಇತಿಹಾಸವನ್ನು ವಿವಿಧ ಮುಖಗಳಿಂದ ಅಧ್ಯಯನ ಮಾಡುವ ಸಂಶೋಧಕನಿಗೂ ಶಾಸನಗಳು ಇನ್ನು ಅಕ್ಷಯವಾದ ಸಾಮಾಗ್ರಿಗಳನ್ನು ಒದಗಿಸುತ್ತದೆ.

ಜಿಲ್ಲೆಯ ಶಾಸನಗಳ ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಅಂಶವನ್ನು ಮುಖ್ಯವಾಗಿ ಗಮನದಲ್ಲಿಟ್ಟುಕೊಂಡು ಅವುಗಳಿಂದ ತಿಳಿದು ಬರುವ ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಅಂಶಗಳನ್ನು ಗುರುತಿಸಿ ವಿಶ್ಲೇಷಿಸುವುದು ನಮ್ಮ ಮುಖ್ಯ ಉದ್ದೇಶವಾಗಿದೆ. ಈ ಉದ್ದೇಶಕ್ಕೆ ನೆರವಾಗುವಂತ ಇತರ ಮೂಲ ಸಾಮಾಗ್ರಿಗಳನ್ನು ಪ್ರಾಸಂಗಿಕವಾಗಿ ಬಳಸಿಕೊಂಡಿದ್ದೇನೆ. ಈ ಪ್ರಬಂಧವನ್ನು ೮

ಅಧ್ಯಯಗಳಲ್ಲಿ ವಿವರವಾಗಿ ಮಂಡಿಸಿದ್ದೇನೆ. ಎರಡನೇ ಅಧ್ಯಯದಲ್ಲಿ ಐತಿಹಾಸಿಕ ಪರಂಪರೆಯನ್ನು ಸಾಕಷ್ಟು ದೀರ್ಘವಾಗಿ ಚರ್ಚಿಸಿದ್ದೇವೆ. ಏಕೆಂದರೆ ಮಂಡ್ಯ ಜಿಲ್ಲೆಯ ಇತಿಹಾಸ ರಚನೆಯನ್ನು ಹಾಗೂ ಐತಿಹ್ಯವನ್ನು ಕಾಲಾನುಕ್ರಮದಲ್ಲಿ ಚರ್ಚಿಸಲಾಗಿದೆ. ಮುಂದಿನ ಅಧ್ಯಾಯ ಶಾಸನಗಳ ಸ್ವರೂಪ ಮತ್ತು ಇತಿಹಾಸ ಹಾಗೂ ವರ್ಗೀಕರಣ ಮತ್ತು ವಿತರಣೆ. ಈ ಅಧ್ಯಯದಲ್ಲಿ ಶಾಸನಗಳ ಸ್ವರೂಪ ಮತ್ತು ಶಾಸನಗಳ ಇತಿಹಾಸ ಅಂದರೆ ಗಂಗರು, ಹೊಯ್ಸಳರು, ಚೋಳರು, ರಾಷ್ಟ್ರಕೂಟರು, ವಿಜಯನಗರದ ಅರಸರು, ಪಾಳೇಯಗಾರರು, ಹೈದರಾಲಿ ಮತ್ತು ಟಪ್ಪುವಿನ ಆಳ್ವಿಕೆಯಲ್ಲಿ ಜಿಲ್ಲೆಯ ಶಾಸನಗಳನ್ನು ಕುರಿತು ಕೂಲಂಕುಷವಾಗಿ ಚರ್ಚಿಸಿದ್ದೇನೆ. ಹಾಗೂ ಶಾಸನಗಳ ವರ್ಗೀಕರಣ ಮತ್ತು ವಿತರಣೆಯಲ್ಲಿ ತಾಮ್ರಶಾಸನಗಳು, ಶಿಲಾಶಾಸನಗಳು, ಬಂಡೆಶಾಸನಗಳಿರುತ್ತವೆ. ಅವುಗಳ ಅಭ್ಯಾಸ ಮಾಡಿ ದತ್ತಿಶಾಸನಗಳು, ವೀರಗಲ್ಲು, ಮಾಸ್ತಿಗಲ್ಲು, ಕೆರೆ, ಕಟ್ಟೆ, ದೇವಾಲಯ ನಿರ್ಮಾಣ ಎಂದು ಅಧ್ಯಾಯ ಮಾಡಲಾಗಿದೆ. ಮುಂದಿನ ಶಾಸನಗಳಲ್ಲಿ ಕವಿಗಳು ಮತ್ತು ಶಾಸನೋಕ್ತ ಕವಿಗಳು ಎಂದು ಅಬ್ಯಾಸ ಮಾಡಲಾಗುತ್ತದೆ. ಶಾಸನಗಳಲ್ಲಿ ಕವಿಗಳ ಉಲ್ಲೇಖವನ್ನು ಮಾಡಲಾಗಿದೆ. ಜಿಲ್ಲೆಯ ಶಾಸನಗಳ ಸಾಹಿತ್ಯಿಕ ಅಧ್ಯಯನದ ಶಾಸನಗಳಲ್ಲಿ ಅಲಂಕಾರ, ಶೈಲಿ ಪತನಗುಣವನ್ನು ಚರ್ಚಿಸಿದ್ದೇನೆ. ಶಾಸನಗಳು ಸಾಹಿತ್ಯಿಕವಾಗಿ ಹೇಗೆ ಇರುತ್ತವೆ ಎಂದು ಕೆಲವು ಶಾಸನಗಳನ್ನು ಚರ್ಚಿಸಿದ್ದೇನೆ. ಸಾಂಸ್ಕೃತಿಕ ಅಧ್ಯಾಯದಲ್ಲಿ ಸಂಸ್ಕೃತಿ ಎಂದರೆ ನಾಗರೀಕತೆ ಮತ್ತು ಅಲ್ಲಿನ ಜನರ ಜೀವನದ ರೀತಿ ನೀತಿಗಳನ್ನು ಚರ್ಚಿಸಿದ್ದು, ಈ ಅಧ್ಯಾಯದಲ್ಲಿ ಶಾಸನಗಳ ಶಿಲ್ಪಗಳನ್ನು ಚರ್ಚಿಸಲಾಗಿದೆ. ಶಾಸನಗಳ ಭಾಷಿಕ, ಜನರ ಭಾಷೆ ಮಂಡ್ಯದಲ್ಲಿ ಅತಿ ಹೆಚ್ಚು ಕನ್ನಡ ಮಾತನಾಡುವವರೇ ಇದ್ದಾರೆ, ಅಲ್ಲಿನ ಭಾಷಾ ಸ್ವೀಕರಣ ಅನ್ಯಭಾಷಾ ಪ್ರಭಾವ ಇವುಗಳ ಚರ್ಚಿಸಲಾಗಿದೆ.

ನಮ್ಮ ಕಾವ್ಯಗಳು ಸಾಮಾನ್ಯವಾಗಿ ಪೌರಾಣಿಕ ವಿಷಯಗಳನ್ನು ಆರಿಸಿಕೊಂಡು ರಚಿತವಾದ ರಮ್ಯಾದ್ಭುತ ಕಥೆಗಳು, ಅವು ಐತಿಹಾಸಿಕ ವ್ಯಕ್ತಿಗಳನ್ನು ಆರಿಸಿಕೊಂಡರೂ ಅವರ ಸುತ್ತ ೬ ಸಂಗತಿಗಳ ಜಾಲವನ್ನೇ ಹೆಣೆದುಬಿಡುತ್ತೇವೆ. ಅತ್ತಿಮಬ್ಬೆ, ಬಸವ, ಏಕಾಂತದ ರಾಮಯ್ಯ, ಮುಂತಾದವರ ಕಾಲದಲ್ಲಿಯೇ ಅಥವಾ ಅವರಿಂದ ಈಚೆಗೆ ನಲವತ್ತು, ಐವತ್ತು ವರ್ಷಗಳ ಅವಧಿಯಲ್ಲಿಯೇ ಅವರ ಪವಾಡದ ಕಥೆಗಳು ತಮ್ಮ ದೇಶದಿಂದ ಹೊರಹೋಗಿ ಹೊರಗಿನ ಜನರನ್ನು ಅವರ ಜೀವನ ವಿಧಾನವನ್ನು ತಿಳಿಯಲು ಪ್ರಯತ್ನಿಸದಿರುವುದರಿಂದ ಭಾರತೀಯರ ದೃಷ್ಟಿಯು ಸಂಕುಚಿತವಾಗಿದೆ ಎಂದು ಅಲ್ಬೆರೂನಿ ಕೊರಗಿದ್ದಾನೆ. "ಕಾವ್ಯಗಳೆಲ್ಲ ಬರಿಯ ಕಟ್ಟು ಕಥೆಗಳೆಂದು ಅವುಗಳನ್ನು ಐತಿಹಾಸಿಕ ಅಧ್ಯಯನದಲ್ಲಿ ತಿರಸ್ಕರಿಸುವುದು, ಶಾಸನಗಳಲ್ಲಿ

ತಾಮ್ರಪಟಗಳಲ್ಲಿ ಬರುವುದೆಲ್ಲವೂ ಅಕ್ಷರಶಃ ನಿಜವೆಂದು ಕಣ್ಣುಮುಚ್ಚಿ ನಂಬಿಬಿಡುವುದು ಎರಡೂ ದಡ್ಡತನಗಳೇ" ಎಂದು ಡಾ॥ ಕೆ.ಎ. ನೀಲಕಂಠಶಾಸ್ತ್ರಿಗಳವರು ಒಂದೆಡೆ ಎಚ್ಚರಿಸಿದ್ದಾರೆ.

ಜಿಲ್ಲೆಯ ಶಾಸನಗಳಲ್ಲಿ ಸಾಹಿತ್ಯಿಕ ಅಂಶಗಳನ್ನು ಕಾಣಬಹುದು. ವಿಷಯ ನಿರೂಪಣೆಯ ವಿಶಿಷ್ಟತೆ, ಕಥನಗುಣ, ವರ್ಣನೆ, ಅಲಂಕಾರ, ಭಾಷೆ, ಶೈಲಿ ಇತ್ಯಾದಿ ಜಿಲ್ಲೆಯ ಅನೇಕ ಪದ್ಯ ಶಾಸನಗಳು, ಕಾವ್ಯಗುಣ ಪರಿಪೂರಿತವಾಗಿವೆ. ವೀರರ ಶೌರ್ಯ ಸಾಹಸಗಳನ್ನು ಕೊಂಡಾಡುವಲ್ಲಿ ಮಹಾಸತಿಯರ ಪಾತಿವ್ರತ್ಯವನ್ನು ವರ್ಣಿಸುವಲ್ಲಿ ದಾನಿಗಳ ತ್ಯಾಗಬುದ್ಧಿಯನ್ನು ಎತ್ತಿ ಹಿಡಿಯುವಲ್ಲಿ ಬಂದಿರುವ ವರ್ಣನೆಗಳು ಸಹೃದಯರ ಮನಸ್ಸನ್ನು ಸೆಳೆದುಕೊಳ್ಳುತ್ತವೆ. ಅಲಂಕಾರಯುಕ್ತವಾದ ಆ ಮಾತುಗಳು ಕವಿಹೃದಯದಿಂದ ಮೂಡಿಬಂದ ಸಹಜ ಸುಂದರ ಕಾವ್ಯಖಂಡಗಳಾಗಿವೆ. ವಿಜಯನಗರ ಸಾಮ್ರಾಜ್ಯದ ಅವಧಿಯಲ್ಲಿ ಆನಂತರ ಮೈಸೂರು ಅರಸರ ಕಾಲದಲ್ಲಿ ಶ್ರೀರಂಗಪಟ್ಟಣ ವೈಭವದ ಪರಕಾಷ್ಠೆಯನ್ನು ಮುಟ್ಟಿತ್ತು. ಅಲ್ಲಿಯ ರಂಗನಾಥಸ್ವಾಮಿಯನ್ನು ದರ್ಶಿಸದ ಸಂತರಿಲ್ಲ, ಸ್ತುತಿಸದ ಅಸ್ತಿಕರಿಲ್ಲ, ಪುರಂದರ ಕನಕದಾಸಾದಿ ದಾಸವರೇಣ್ಯರು ಪರಿಪರಿಯಾಗಿ ಈ ದೇವರನ್ನು ಸ್ತುತಿಸಿದ್ದಾರೆ.

ಇನ್ನೆಷ್ಟು ಕಾಲ ನೀನೆಲ್ಲಿ ಮಲಗಿದ್ದರೂ
ನಿನ್ನ ನೆಚ್ಚಿಸುವರೊಬ್ಬರನು ಕಾಣೆ
ಉನ್ನತ ಕಾಗಿನೆಲೆಯಾದಿಕೇಶವರಾಯ
ಚನ್ನ ಶ್ರೀರಂಗಪಟ್ಟಣದ ರಂಗಧಾಮ
ಎಂದು ಕೀರ್ತನೆ ಭಾವಮಯವಾಗಿದೆ.

ಪ್ರಾಚೀನ ಕಾಲದಿಂದ ಈ ಜಿಲ್ಲೆಯಲ್ಲಿ ಸಂಪದ್ಭರಿತವಾದ ಸಾಹಿತ್ಯ ಪರಂಪರೆ ಕೋಂಡಿವರಿದಿದೆ. ಗೋವಿನ ಕಥೆಯ ಕವಿ ಮದ್ದೂರಿನವರೆಂದು ಹೇಳಲಾಗಿದೆ. ಮಂಡ್ಯ ಜಿಲ್ಲೆ ಆಧುನಿಕ ಆಡಳಿತಾತ್ಮಕ ದೃಷ್ಟಿಯಿಂದ ರಚನೆಯಾಗಿ ಎಪ್ಪತ್ತೈದು ವರ್ಷಗಳು ಕಳೆದಿವೆ. ಈ ಪ್ರದೇಶವನ್ನು ಅತ್ಯಂತ ಪ್ರಾಚೀನ ಕಾಲದಿಂದಲೂ, ಗಂಗರು, ಹೊಯ್ಸಳರು, ವಿಜಯನಗರದವರು ಮತ್ತು ಮೈಸೂರಿನ ಅರಸರು ತಮ್ಮ ಆಡಳಿತದ ನೆಲೆಗಳಾಗಿ ಮಾಡಿಕೊಂಡಿದ್ದರು. ಗಂಗರ ಕಾಲದಲ್ಲಿ ಈಗ ಮಂಡ್ಯ ತಾಲ್ಲೂಕಿನ ಬಸರಾಳು ಹೋಬಳಿಯಲ್ಲಿರುವ ಚಿಕ್ಕಗಂಗವಾಡಿ ಒಂದು ಪ್ರಮುಖ ಕೇಂದ್ರವಾಗಿತ್ತು. ಹೊಯ್ಸಳರ ಕಾಲದಲ್ಲಿ ಈಗಿನ ಪಾಂಡವಪುರ ತಾಲ್ಲೂಕಿನ ತೊಣ್ಣೂರು ಪ್ರಮುಖ ಆಡಳಿತ ಕೇಂದ್ರವಾಗಿತ್ತು. ಇವಲ್ಲದೇ ಕೆರೆಗೋಡು, ಮದ್ದೂರು, ಕಂಬಂದಹಳ್ಳಿ, ಜಾಗಿನಕೆರೆ, ಸಾಸಲು, ದೊಡ್ಡರಸಿನಕೆರೆ ಮುಂತಾದುವು ಅನೇಕಾನೇಕ ಸ್ಥಾನಿಕ ಪ್ರಭುಗಳ ಆಡಳಿತ

ಕೇಂದ್ರವಾಗಿದ್ದವು. ಈ ಕಾರಣದಿಂದಾಗಿಯೇ ಈ ಸ್ಥಳಗಳಲ್ಲಿ ಕವಿಗಳು, ಕಲಾವಿದರು, ರಾಜಕೀಯ ಧುರೀಣರು ಮುಂತಾದವರು ನೆಲೆಸುವಂತಾಯಿತು. ಇವರಿಗೆ ರಾಜಾಶ್ರಯ ದೊರೆಯಿತು. ಈ ಕಾರಣದಿಂದಾಗಿ ಮಂಡ್ಯ ಜಿಲ್ಲೆಯ ಪ್ರದೇಶದಲ್ಲಿ ಅನೇಕ ಪ್ರಾಚೀನ ಕವಿಗಳು ತಮ್ಮ ಕಾವ್ಯಗಳನ್ನು ರಚಿಸಿದ್ದಾರೆ. ಅವುಗಳು ಇಂದಿಗೂ ಉಳಿದುಕೊಂಡು ಬಂದಿರುವುದನ್ನು ಕಾಣಬಹುದು.

ಕ್ರಿ.ಶ. ೫೪೦ ರಿಂದ ೬೦೦ ರವರೆಗೆ ಆಳಿದ ಗಂಗದೊರೆಯಾದ ದುರ್ವಿನೀತನೆ ಈ ಪ್ರದೇಶದ ಮೊದಲನೆಯ ಕವಿ ಹಾಗೂ ಕವಿಜನಾಶ್ರಿತನೆಂದು ಹೇಳಬಹುದು. ಈತ ಗಂಗದೊರೆ ಅವನೀತನ ಮಗ. ಯೌವ್ವನದ ದಿನಗಳಲ್ಲಿ ಈತ ಚಿಕ್ಕಗಂಗವಾಡಿಯಿಂದ ಆಡಳಿತ ನೆಡೆಸುತ್ತಿದ್ದ, ದುರ್ವಿನೀತನು ಮಂತ್ರಾಲೋಚನಾನಿಪುಣ ಕಾವ್ಯಾಕಲಾಚತುರ ಎಂದು ಈತನನ್ನು ವರ್ಣಿಸಿದ್ದಾನೆ. ಕಿರಾತಾರ್ಜುನೀಯದ ಕವಿಭಾರವಿ ಈತನ ಆಶ್ರಯದಲ್ಲಿದ್ದನೆಂದು ಆಧಾರಗಳಿಂದ ತಿಳಿದುಬರುತ್ತದೆ. ದುರ್ವಿನೀತ ಶಬ್ದಾವತಾರ ಎಂಬ ವ್ಯಾಕರಣ ಗ್ರಂಥವನ್ನು ಬರೆದಿದ್ದಾನೆ. ಈತ ಕನ್ನಡ ಸಂಸ್ಕೃತಿ ಎರಡರಲ್ಲೂ ಅಪಾರ ವಿದ್ವತ್ತನ್ನು ಸಂಪಾದಿಸಿದವನಾಗಿದ್ದು, ಪೈಶಾಚಿ ಭಾಷೆಯ ಬೃಹತ್ಕತೆಯನ್ನು ಸಂಸ್ಕೃತ ಭಾಷೆಗೆ ಅನುವಾದಿಸಿದನೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ದುರ್ವಿನೀತನು ಅಸಮಾನಶೂರ ಮತ್ತು ಕಾವ್ಯ ರಚನಾಚತುರನೆಂದು ಹೆಸರು ಪಡೆದಿದ್ದಾನೆ.

ಅಧ್ಯಯನದ ಉದ್ದೇಶ ಜಿಲ್ಲೆಯ ಶಾಸನಗಳನ್ನು ಕುರಿತು ಅಧ್ಯಯನ ನಡೆಸುವುದರ ಜೊತೆಗೆ ಅಲ್ಲಿನ ಜನರ ಜೀವನ ಹೇಗಿತ್ತು. ಸಾಂಪ್ರದಾಯಿಕವಾಗಿ ಅವರು ಆಚರಿಸುತ್ತಿದ್ದ ಹಬ್ಬಗಳು, ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ದೃಷ್ಟಿಯಿಂದ ಕಾಣುವುದು. ಜೊತೆಗೆ ಅಲ್ಲಿನ ಶಾಸನಗಳ ಐತಿಹಾಸಿಕ ಪರಂಪರೆ ಶಾಸನಗಳ ಸ್ವರೂಪ, ಅಲ್ಲಿನ ಶಾಸನ ಕವಿಗಳು, ಶಾಸನೋಕ್ತಕವಿಗಳು, ಶಾಸನಗಳನ್ನು ಯಾವ ರೀತಿಯಲ್ಲಿ ವರ್ಗೀಕರಣವನ್ನು ಮಾಡಬಹುದು. ದಾನಶಾಸನಗಳು, ತಾಮ್ರಶಾಸನಗಳು, ವೀರಗಲ್ಲಗಳು ಹಾಗೂ ಮಾಸ್ತಿಗಲ್ಲುಗಳು ಹೀಗೆ ವಿಂಗಡಣೆಯನ್ನು ಕಾಣಬಹುದು. ಶಾಸನಗಳಲ್ಲಿ ಭಾಷಾ ಸ್ವರೂಪವನ್ನು ಅಂದರೆ ಆಯಾ ರಾಜರ ಕಾಲಕ್ಕೆ ಅಲ್ಲಿನ ಭಾಷೆ ಯಾವ ಸ್ಥಿತಿಯಲ್ಲಿತ್ತು ಎಂಬುದನ್ನು ಕುರಿತು ಅಧ್ಯಯನವನ್ನು ನಡೆಸಲಾಗಿದೆ.

ಅಧ್ಯಾಯ ೨

ಜಿಲ್ಲೆಯ ಐತಿಹಾಸಿಕ ಪರಂಪರೆ

ಅಧ್ಯಾಯ ೨

ಜಿಲ್ಲೆಯ ಐತಿಹಾಸಿಕ ಪರಂಪರೆ

ಮಂಡ್ಯ ಜಿಲ್ಲೆಯು ಇತಿಹಾಸ ಪ್ರಸಿದ್ಧವಾಗಿದ್ದು, ಜಿಲ್ಲೆಯ ಶಾಸನಗಳಿಗೆ ಐತಿಹಾಸಿಕ ಪರಂಪರೆಯೂ ಇದೆ. ಅನೇಕ ರಾಜರು ಈ ಜಿಲ್ಲೆಯಲ್ಲಿ ಆಳ್ವಿಕೆಯನ್ನು ನೆಡೆಸಿ ಜಿಲ್ಲೆಯನ್ನು ಸಾಂಸ್ಕೃತಿಕವಾಗಿ ಶ್ರೀಮಂತಗೊಳಿಸಿದ್ದಾರೆ. ಇವರ ರಾಜಮನೆತನಗಳನ್ನು ಸ್ಥೂಲವಾಗಿ ಕಾಲಾನುಕ್ರಮದಂತೆ ಇಲ್ಲಿ ಪರಿಚಯಾತ್ಮಕವಾಗಿ ದಾಖಲಿಸಲಾಗುತ್ತದೆ. ಗಂಗರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಒಡೆಯರು, ಹೈದರ್ ಟಿಪ್ಪು ಹಾಗೂ ಪಾಳೆಯಗಾರರು.

ಮಂಡ್ಯ ಜಿಲ್ಲೆಯು ಕರ್ನಾಟಕದ ಇತರ ಪ್ರಮುಖ ಜಿಲ್ಲೆಗಳಷ್ಟೇ ಪ್ರಾಚೀನವಾದ ಪ್ರಾದೇಶಿಕ ಇತಿಹಾಸವನ್ನು ಹೊಂದಿದೆ. ೧೯೩೯ನೇ ಜುಲೈ ಒಂದರಂದು, ಆ ವೇಳೆಗೆ ನಿರ್ಮಿತವಾಗಿದ್ದ ಕೃಷ್ಣರಾಜಸಾಗರ ಮತ್ತು ಇರ್ವಿನ್ ನಾಲೆಯ ಆಡಳಿತ ನಿರ್ವಹಣೆ ಮತ್ತು ಈ ಪ್ರದೇಶದ ಮುಖಂಡರ ಕ್ರಿಯಾಶೀಲ ಚಟುವಟಿಕೆಗಳಿಂದಾಗಿ ಮೈಸೂರು ಜಿಲ್ಲೆಯಿಂದ ಬೇರ್ಪಟ್ಟು, ಮಂಡ್ಯ ಪ್ರತ್ಯೇಕ ಜಿಲ್ಲೆಯಾಗಿ ವಿಂಗಡಣೆಯಾಯಿತು. ಈ ಮಂಡ್ಯ ಜಿಲ್ಲೆಯು ಮಂಡ್ಯ, ಮದ್ದೂರು, ನಾಗಮಂಗಲ, ಕೃಷ್ಣರಾಜಪೇಟೆ, ಪಾಂಡವಪುರ, ಶ್ರೀರಂಗಪಟ್ಟಣ ಮತ್ತು ಮಳವಳ್ಳಿ ತಾಲ್ಲೂಕುಗಳಿಂದ ಕೂಡಿದೆ.

ಬೆಂಗಳೂರು ಮೈಸೂರು ಹೆದ್ದಾರಿಯಲ್ಲಿರುವ ಮಂಡ್ಯ ನಗರವು ಜಿಲ್ಲೆಯ ಮುಖ್ಯ ಕೇಂದ್ರ. ಮಂಡ್ಯ ಎಂಬ ಹೆಸರಿನ ನಿಗಮಕ್ಕೆ ಸಂಬಂಧಿಸಿದಂತೆ ಅನೇಕ ಸ್ವಾರಸ್ಯಕರವಾದ ಐತಿಹ್ಯಗಳಿವೆ. ಸ್ಥಳ ಪುರಾಣಗಳು, ಈ ಪ್ರದೇಶದ ಇತಿಹಾಸವನ್ನು ಕೃತಯುಗಕ್ಕೆ ಕೊಂಡೊಯ್ಯುತ್ತವೆ. ಆಗ ಈ ಪ್ರದೇಶವು ಅರಣ್ಯಮಯವಾಗಿತ್ತೆಂದೂ ಇಲ್ಲಿ ತಪಸ್ಸಿನಲ್ಲಿ ತೊಡಗಿದ್ದ ಮುನಿಯೊಬ್ಬರು ಜನಾರ್ಧನ ಅಥವಾ ವರದರಾಜಸ್ವಾಮಿಯ ಮೂರ್ತಿಯನ್ನು ಸ್ಥಾಪಿಸಿ ದೇವಾಲಯ ಕಟ್ಟಿಸಿದನೆಂದೂ ಹಾಗೂ ವನ್ಯ ಪ್ರಾಣಿಗಳಿಗೂ ವೇದಾಧ್ಯಯನ ಮಾಡಿಸುತ್ತಿದ್ದನೆಂದೂ ಆದ್ದರಿಂದ ಈ ಸ್ಥಳಕ್ಕೆ ವೇದಾರಣ್ಯವೆಂಬ ಅಭಿದಾನವಿತ್ತಿದ್ದೆನೆಂದು ಉಲ್ಲೇಖಿಸಲಾಗಿದೆ. ಮತ್ತೊಂದು ಹೇಳಿಕೆಯ ಪ್ರಕಾರ ಅದೇ ಕೃತಯುಗದಲ್ಲಿ ಶತಮಾನಗಳ ಅವಧಿಯಲ್ಲಿ ಮತ್ತೊಬ್ಬ ಋಷಿಯೂ ಅದೇ ಸ್ಥಳದಲ್ಲಿ ತಪಸ್ಸನ್ನಾಚರಿಸುತ್ತಿದ್ದು ಸಕಲೇಶ್ವರ ಸ್ವಾಮಿಯನ್ನು ಸ್ಥಾಪಿಸಿದನೆಂದೂ ಹಾಗೂ ಶ್ರೀಮನ್ಮಹಾವಿಷ್ಣುವು ಅವನ ಕನಸಿನಲ್ಲಿ ಗೋಚರಿಸಿದುದರಿಂದ ಆ ತಾಪಸಿಯು ವಿಷ್ಣುವಿನ ಮೂರ್ತಿಯನ್ನು

ಸ್ಥಾಪಿಸುದುದಲ್ಲದೆ ವಿಷ್ಣುಪುರ ಎಂಬ ಹೆಸರನ್ನು ಕೊಟ್ಟನೆಂದೂ ತಿಳಿದುಬರುತ್ತದೆ. ಇನ್ನೊಂದು ಹೇಳಿಕೆಯ ಪ್ರಕಾರ ಅದೇ ಯುಗದಲ್ಲಿ ಇಂದ್ರವರ್ಮ ಎಂಬ ರಾಜನು ಸಂತಾನಾಪೇಕ್ಷೆಯಿಂದ ಈ ಸ್ಥಳಕ್ಕೆ ಒಂದು ಪೂಜಾ ಕೈಂಕರ್ಯದಲ್ಲಿ ತೊಡಗಿದನು. ಅವನ ಭಕ್ತಿಯ ಫಲವಾಗಿ ಅವನಿಗೆ ವಂಶೊದ್ದಾರಕನಾದ ಪುತ್ರನು ಜನಿಸಿದನು. ಅ ಮಗುವಿಗೆ ಸೋಮವರ್ಮ ಎಂದು ಹೆಸರಾಯಿತು. ಸೋಮವರ್ಮನು ಈ ಸ್ಥಳವನ್ನು ಒಂದು ಅಗ್ರಹಾರವಾಗಿ ಪರಿವರ್ತಿಸಿ ಒಂದು ಕೋಟೆಯನ್ನು ಕಟ್ಟಿಸಿ ಮಂಡೆವೇಮು ಎಂಬ ಹೆಸರನ್ನು ಕೊಟ್ಟನೆಂದೂ ಮಂಡೆವೇಮು ಎಂಬುದರಿಂದಲೇ ಕ್ರಮೇಣ ಮಂಡ್ಯ ಎಂಬ ಹೆಸರು ಬಂದಿತೆಂದೂ ಹೇಳಲಾಗಿದೆ. ಮತ್ತೊಂದು ಐತಿಹ್ಯದ ಪ್ರಕಾರ ಪ್ರಾಚೀನ ಕಾಲದಲ್ಲಿ ಈ ಸ್ಥಳದಲ್ಲಿ ಮಾಂಡವ್ಯ ಎಂಬ ಮಹರ್ಷಿಯೂ ತಪಸ್ಸು ಮಾಡುತ್ತಿದ್ದನೆಂದೂ ಜನಪ್ರಿಯಾವಾದ ಋಷಿಯ ಹೆಸರಿನಿಂದ ಈ ಗ್ರಾಮಕ್ಕೆ ಮಂಡ್ಯ ಎಂದು ಹೆಸರಾಯಿತೆಂದು ತಿಳಿದು ಬರುತ್ತದೆ.

ಐತಿಹಾಸಿಕ ಹಿನ್ನಲೆ:-

ಹದಿನಾರನೇ ಶತಮಾನದ ಶಾಸನಗಳು ಮಂಡ್ಯ ಎಂಬ ಹೆಸರಿಗೆ ಸಂಬಂಧಿಸಿದ ಐತಿಹಾಸಿಕ ದಾಖಲೆಯನ್ನೊದಗಿಸುತ್ತವೆ. ಕ್ರಿ.ಶ. ೧೫೧೬ರಲ್ಲಿ ಶ್ರೀ ರಾಮಾನುಜಾಚಾರ್ಯರ ಅನುಯಾಯಿ ಅನಂತಾಚಾರ್ಯರ ಪರಂಪರೆಯಲ್ಲಿ ಹನ್ನೆರೆಡನೆಯವರಾದ ಗೋವಿಂದಾಚಾರ್ಯ ಎಂಬುವರು, ವಿಜಯನಗರದ ಕೃಷ್ಣದೇವರಾಯನ ಪ್ರೋತ್ಸಾಹದಿಂದ ತಿರುಪತಿಯ ಬಳಿಯ ಮಂಡ್ಯ ಎಂಬ ಗ್ರಾಮದಿಂದ ಇನ್ನೂ ಹಲವು ಶ್ರೀ ವೈಷ್ಣವ ಕುಟುಂಬಗಳೊಡನೆ ಹೊರಟು ಬಂದು ಇಲ್ಲಿ ನೆಲೆಸಿದರು. ತಮ್ಮ ಮೂಲ ಗ್ರಾಮದ ಸ್ಮರಣಾರ್ಥವಾಗಿ ತಾವು ಹೊಸದಾಗಿ ಬಂದೂ ನೆಲೆಸಿದೆ. ಮಂಡ್ಯ ತಾಲ್ಲೂಕು, ಹೊಸಬೂದನೂರಿನ ಕೇಶವ ದೇವಸ್ಥಾನದ ಒಳಗಡೆ ಇರುವ ಶಾಸನ (ಮಂ.೭೦)ದಲ್ಲಿ 'ಮಂಡೆಯ' ಎಂಬ ಉಲ್ಲೇಖವಿದೆ. ಇದು ಹೊಯ್ಸಳ ೩ನೇ ನರಸಿಂಹ ಕಾಲದ ಶಾಸನವಾಗಿದ್ದು, ಕ್ರಿ.ಶ.೧೨೭೬ರ ಕಾಲ ಇದರಲ್ಲಿ ನಮೂದಿಸಲಾಗಿದೆ. ಸ್ಥಳವು ಬಹು ಪ್ರಾಚೀನ ಕಾಲದಲ್ಲೇ ಸ್ಥಾಪಿತವಾಗಿ ಬೇರೆ ಬೇರೆ ಹೆಸರುಗಳಿಂದ ಕರೆಯಲ್ಪಟ್ಟಿತ್ತೆಂದೂ ಹಾಗೂ ಇದು ಶ್ರೀ ವೈಷ್ಣವ ಆಗ್ರಹಾರವಾಗಿ ಮಾರ್ಪಡುವ ಹಿಂದೆ ಶೈವ ಮತ್ತು ವೈಷ್ಣವ ಸಂಪ್ರದಾಯಾವಲಂಬಿಗಳಿಂದ ಕೂಡಿತ್ತೆಂದೂ ಸ್ಥಳ ಪುರಾಣಗಳಲ್ಲಿ ದೊರೆಯುವ ಮಾಹಿತಿಯಿಂದ ಮನವರಿಕೆಯಾಗುತ್ತದೆ. ಪ್ರಾಚೀನ ಕಾಲದಲ್ಲಿ ಕಾಲಾನುಕ್ರಮವಾಗಿ ತಲಕಾಡಿನ ಗಂಗರ, ದೋರಸಮುದ್ರದ ಹೊಯ್ಸಳರ ಮತ್ತು ವಿಜಯನಗರ ಸಾಮ್ರಾಜ್ಯದ ಆಡಳಿತಕ್ಕೊಳಪಟ್ಟಿದ್ದ ಮಂಡ್ಯ ಜಿಲ್ಲೆಯು ಅನೇಕ ಐತಿಹಾಸಿಕ ಸ್ಥಳಗಳನ್ನೂ, ಧಾರ್ಮಿಕ ಕ್ಷೇತ್ರಗಳನ್ನು, ಉಪಯುಕ್ತ ನದಿಗಳನ್ನೂ ಮತ್ತು ನೈಸರ್ಗಿಕ ರಮಣೀಯ ದೃಶ್ಯಗಳನ್ನು ಒಳಗೊಂಡಿದೆ."[೧]

ಮಂಡ್ಯ ಜಿಲ್ಲೆಯ ಏಳು ತಾಲ್ಲೂಕುಗಳಲ್ಲಿ ಕ್ರಮವಾಗಿ ಕೃಷ್ಣರಾಜಪೇಟೆ ೧೧೫, ಪಾಂಡವಪುರ ೨೬೩, ಶ್ರೀರಂಗಪಟ್ಟಣ ೧೨೨, ನಾಗಮಂಗಲ ೧೮೫, ಮಂಡ್ಯ ೮೭, ಮದ್ದೂರು ೧೮೫, ಮಳವಳ್ಳಿ ೧೪೯ ಹೀಗಿ ಒಟ್ಟು ೧೦೬೫ ಶಾಸನಗಳಿವೆ. ಅದರಲ್ಲಿ ಗಂಗರ ಶಾಸನಗಳು ೨೪, ಚೋಳರ ಶಾಸನಗಳು ೭, ರಾಷ್ಟ್ರಕೂಟರ ಶಾಸನಗಳು ೧. ಚಾಳುಕ್ಯರ ಶಾಸನಗಳು ೧, ಹೊಯ್ಸಳರ ಶಾಸನಗಳು ೩೪೬, ವಿಜಯನಗರದ ಅರಸರ ಶಾಸನಗಳು ೧೨೧, ಮೈಸೂರು ಅರಸರ ಶಾಸನಗಳು ೬೬, ನೊಳಂಬರ ಶಾಸನಗಳು ೧, ಪಾಂಡ್ಯರ ಶಾಸನಗಳು ೧, ಕಳಲೆ ಅರಸರ ಶಾಸನಗಳು ೧, ಉಮ್ಮತ್ತೂರಸರ ಶಾಸನಗಳು ೫, ಹದಿನಾಡು ಅರಸರ ಶಾಸನಗಳು ೩, ನಂದ್ಯಾಲ ಅರಸರ ಶಾಸನಗಳು ೧, ಚನ್ನಪಟ್ಟಣದ ಅರಸರ ಶಾಸನಗಳು ೩, ಹರತಿ ಅರಸರ ಶಾಸನಗಳು ೧, ವಿವಿಧ ಶಾಸನಗಳು ೫೮೩ ಎಂದು ಶ್ರೀ ಸೀರಾರಾಮಜಾಗಿರ್‌ದಾರ್ ಅವರು ವಿಂಗಡಿಸಿದ್ದಾರೆ. 'ವಿಶೇಷ ಅಧ್ಯಯನ ಮಾಡಿದಾಗ ಇನ್ನಷ್ಟು ರಾಜಮನೆತನಗಳು ಪ್ರಕಾಶಕ್ಕೆ ಬರುತ್ತವೆ ಎಂದು ಹೇಳಿರುವ ಅವರು ಕೊಂಗಾಳ್ವರು, ಸಗರವಂಶ, ವಿಜಯನಗರದ ಮಾಂಡಲಿಕರಾದ ಬಡುವಾರ ವಂಶದವರು ಮುಂತಾದವುಗಳನ್ನು ಉದಾಹರಣೆಯಾಗಿ ನೀಡಿದ್ದಾರೆ. ಈ ಪ್ರಬಂಧದಲ್ಲಿ ಅನೇಕ ಮಹಾಪ್ರಧಾನ ದಂಡನಾಯಕರು, ಮಹಾಮಂಡಲೇಶ್ವರರ ಸಾಧನೆಗಳನ್ನು, ಅವರ ವಂಶಾವಳಿಯನ್ನೂ ಶಾಸನಗಳ ಆಧಾರದ ಮೇಲೆ ಕಟ್ಟಿಕೊಡಲಾಗಿದೆ.

ಮಂಡ್ಯ ಜಿಲ್ಲೆಯ ಪ್ರದೇಶದ ಮೇಲೆ ಆಳ್ವಿಕೆ ನಡೆಸಿದ ರಾಜಮನೆತನಗಳ ಕಾಲವನ್ನು ಆಧಾರವಾಗಿ ಇಟ್ಟುಕೊಂಡು ಶಾಸನಗಳನ್ನು ಸ್ಥೂಲವಾಗಿ ವಿಂಗಡಿಸಿದಲ್ಲಿ, ಗಂಗ ವಂಶದ ಅರಸರ ಹೆಸರಿನಲ್ಲಿ ಹೊರಟಿರುವ ಶಾಸನಗಳು ೨೩ ಅವರ ಕಾಲದ ಶಾಸನಗಳು ೨೬ ಒಟ್ಟು ೪೯, ಹೊಯ್ಸಳ ಅರಸರ ಹೆಸರಿನಲ್ಲಿ ಹೊರಟಿರುವ ಶಾಸನಗಳ ಸಂಖ್ಯೆ ಸು.೨೪೫, ಅವರ ಕಾಲದ ಶಾಸನಗಳ ಸಂಖ್ಯೆ ಸು.೧೩೫ ಒಟ್ಟು ೩೮೦, ವಿಜಯನಗರ ಅರಸರ ಹೆಸರಿನಲ್ಲಿ ಹೊರಟಿರುವ ಶಾಸನಗಳ ಸಂಖ್ಯೆ ಸು.೧೨೩, ಅವರ ಕಾಲದ ಶಾಸನಗಳ ಸಂಖ್ಯೆ ಸು.೧೫೨, ಒಟ್ಟು ೨೭೫, ಮೈಸೂರು ಅರಸರ ಹೆಸರಿನಲ್ಲಿ ಹೊರಟಿರುವ ಶಾಸನಗಳ ಸಂಖ್ಯೆ ಸು.೫೭, ಹೈದರ್ ಆಲಿ ಮತ್ತು ಟಿಪ್ಪೂಸುಲ್ತಾನ್ ಹೆಸರಿನಲ್ಲಿ ಹೊರಟಿರುವ ಶಾಸನಗಳು ೯, ಕಳಲೆ ಅರಸರ ೧, ಚನ್ನಪಟ್ಟಣದ ಪಾಳೆಯಗಾರರ ೩, ಹದಿನಾಡು ಪಾಳೆಯಗಾರರ ೩ ಸೇರಿ ಇವರ ಕಾಲದಲ್ಲಿ ಹೊರಟಿರುವ ಶಾಸನಗಳ ಸಂಖ್ಯೆ ೨೬೭ ಇನ್ನುಳಿದವು ವ್ಯಕ್ತಿನಾಮ ಇತ್ಯಾದಿಯನ್ನುಳ್ಳ ತುಂಡು ಶಾಸನಗಳು.

ವಿಷ್ಣುವರ್ಧನ:–

ಒಂದನೆಯ ಬಲ್ಲಾಳನ ಮರಣಾನಂತರ ಅವನ ತಮ್ಮ ವಿಷ್ಣುವರ್ಧನನು ಅಧಿಕಾರಕ್ಕೆ ಬಂದನು. ಈತನ ಆಳ್ವಿಕೆಯ ಕಾಲ ಕ್ರಿ.ಶ.೧೧೦೮–೦೧೪೨. ಈತನು ಹೊಯ್ಸಳರಲ್ಲಿಯೇ ಅತ್ಯಂತ ಶ್ರೇಷ್ಠನಾದ ಮಹತ್ವಾಕಾಂಕ್ಷಿಯಾದ ಅರಸು, ಸಾಮಂತನಾದರೂ ಸ್ವತಂತ್ರರಾಜನಂತೆ ಆಳಿದನು ಎಂದು, ಚಾಲುಕ್ಯ ವಿಕ್ರಮಾದಿತ್ಯನಿಗೆ ಅತ್ಯಂತ ದುಸ್ಸಾಧ್ಯವಾದ ಮಂಡಳೇಶ್ವರನಾಗಿ[೨] ಉಳಿದನು ಎಂದು ಇತಿಹಾಸಕಾರರು ಹೇಳಿದ್ದಾರೆ. ಹಿರೆಮರಳಿಯ ಶಾಸನದ ಆಧಾರದ ಮೇಲೆ ವಿಷ್ಣುವರ್ಧನನು ಕ್ರಿ.ಶ.೧೧೧೯ರಲ್ಲೇ ತಲಕಾಡನನು ವಶಪಡಿಸಿಕೊಂಡು ಅಲ್ಲಿಂದ ರಾಜ್ಯವಾಳುತ್ತಿದ್ದನೆಂದು ಎ.ವಿ.ನರಸಿಂಹಮೂರ್ತಿಯವರು ಹೇಳಿದ್ದಾರೆ. ಈ ಶಾಸನದ ತೇದಿ 'ವಿರೋಧಿಸಂವತ್ಸರದ ಶ್ರಾವಣಸುದ ಆದಿವಾರ ಆಗಿದ್ದು, ಇದರ ಆಧಾರದ ಮೇಲೆ ಶಾಸನದ ಕಾಲ ೧೧೧೯ ಜೂನ್ ೩೦ ಎಂದು ನಿಗದಿಪಡಿಸಲಾಗಿದೆ. ಆದರೆ ಕ್ರಿ.ಶ.೧೧೧೬ ರವರೆಗಿನ ವಿಷ್ಣುವರ್ಧನನ ಬೇರೆ ಯಾವುದೇ ಶಾಸನವೂ ಕೂಡ ತಲಕಾಡು ವಿಜಯದಂತಹ ಮಹತ್ವದ ವಿಷಯವನ್ನು ಹೇಳುವುದಿಲ್ಲ. ೧೧೧೬ರಲ್ಲಿ ಹೊರಟ ಮೂರು ನಾಲ್ಕು ಶಾಸನಗಳು ಒಟ್ಟಾಗಿ ಈ ತಲಕಾಡು ವಿಜಯವನ್ನು ವರ್ಣಿಸುತ್ತವೆ ಎಂದಮೇಲೆ ಕ್ರಿ.ಶ.೧೧೧೯ರಲ್ಲಿ ವಿಷ್ಣುವರ್ಧನನು ತಲಕಾಡನ್ನು ಗೆದ್ದು ಅಲ್ಲಿಂದಲೇ ಆಳುತ್ತಿದ್ದನೆಂದು ಊಹಿಸುವುದು ಸಾಧ್ಯವಿಲ್ಲ. ಶಾಸನದ ತೇದಿಗಳು ತಪ್ಪಾಗಿರುವ ಅನೇಕ ಉದಾಹರಣೆಗಳಿವೆ. 'ತಲಕಾಡಿನ ಕ್ರಿ.ಶ.೧೧೧೭ರ ಶಾಸನ ವಿಷ್ಣುವರ್ಧನನು ಅಡಿಯಮನನ್ನು ಸೋಲಿಸಿ ತಲಕಾಡನ್ನು ವಶಪಡಿಸಿಕೊಂಡ ವಿಷಯವನ್ನು ವಿವರವಾಗಿ ತಿಳಿಸುತ್ತದೆಂದು' ಅವರೇ ಹೇಳಿದ್ದಾರೆ. ಕನ್ನಂಬಾಡಿಯ ಕ್ರಿ.ಶ.೧೧೧೪ ಶಾಸನವು ಕುಲೋತ್ತುಂಗಚೋಳನ ಆಳ್ವಿಕೆಯನ್ನೇ ಸೂಚಿಸುತ್ತಿದೆ. ವಿಷ್ಣುವರ್ಧನನಿಗೆ ಸಂಬಂಧಿಸಿದಂತೆ ಅತ್ಯಂತ ಪ್ರಮುಖವಾದ ಸುಮಾರು ೩೨ ಶಾಸನಗಳು ಮಂಡ್ಯ ಜಿಲ್ಲೆಯಲ್ಲಿ ದೊರಕಿವೆ. ಈತನ ಆಳ್ವಿಕೆಯ ಆರಂಭದ ಶಾಸನಗಳು 'ತ್ರಿಭುವನಮಲ್ಲ ಹೊಯ್ಸಳದೇವರು ಗಂಗವಾಡಿ ತೊಂಬತ್ತರು ಸಾಸಿರಮನು ಸುಖದಿನರಸುಗೆಯ್ಯುತ್ತಮಿರೆ. 'ಮಹಾಮಂಡಳೇಶ್ವರ ಬಿಟ್ಟಿ ಹೊಯ್ಸಳದೇವನ ರಾಜ್ಯಂ' ಎಂದೂ ಹೇಳಿವೆ. ಯಾವ ವಿಜಯದ ಪ್ರಸ್ತಾವವೂ ಈ ಶಾಸನಗಳಲ್ಲಿ ಕಂಡುಬರುವುದಿಲ್ಲ. ವಿಷ್ಣುವರ್ಧನನ ಪ್ರಮುಖ ಸಾಧನೆಗಳಲ್ಲಿ ಅದ್ವಿತೀಯವಾದುದೆಂದರೆ ತಲಕಾಡನ್ನು ಜಯಿಸಿ ಗಂಗವಾಡಿಯಿಂದ ಚೋಳರನ್ನು ಓಡಿಸಿದುದು. ಮೊದಲಿಗೆ ಈತನು ಚೆಂಗಾಳ್ವರು ಮತ್ತು ಕೊಂಗಳ್ವರನ್ನು ಅಡಗಿಸಿ, ಕೊಂಗಾಳ್ವರಾಜಕುಮಾರಿ ಚಂದಲದೇವಿಯನ್ನು ವಿವಾಹವಾದನು. ಇದರಿಂದ ಹೊಯ್ಸಳರು ಮತ್ತು ಕೊಂಗಾಳ್ವರಿಗಿದ್ದ ವೈರವು ಉಪಶಾಂತವಾಯಿತು. ವಿಷ್ಣುವರ್ಧನ ಹೊಯ್ಸಳ ದೇವರ ಪಿರಿಯರಸಿ

ಚಂದಲದೇವಿಯರು ತ್ರಿಭುವನ ತಿಳಕ ತೀರ್ಥದ ವೀರಕೊಂಗಾಳ್ವ ಜಿನಾಲಯಕ್ಕೆ ಕಾವನಹಳ್ಳಿ ಗ್ರಾಮವನ್ನು ತನ್ನ ತಮ್ಮ ದುದ್ದಮಲ್ಲದೇವನ ಒಡಗೂಡಿ ಪ್ರಭಾಚಂದ್ರಸಿದ್ಧಾಂತದೇವರಿಗೆ ದತ್ತಿಯಾಗಿ ಬಿಟ್ಟಳೆಂದು ಶ್ರವಣನಹಳ್ಳಿ ಶಾಸನವು ಹೇಳಿದೆ. ಈ ಘಟನೆಯು ಕ್ರಿ.ಶ.೧೧೧೫ ಕ್ಕೆ ಮುಂಚೆ ನಡೆದಿರಬಹುದು. ಮದುವೆಯ ಸಮಯದಲ್ಲಿ ಪೃಥ್ವೀ ಕೊಂಗಾಳ್ವನು ತನ್ನ ಮಗಳಿಗೆ ನಾಡಿನ ಕೆಲವು ಭಾಗವನ್ನು ಬಳುವಳಿಯಾಗಿ ನೀಡಿರುವ ಸಾಧ್ಯತೆ ಇದೆ.

ವಿಷ್ಣುವರ್ಧನನ ತಲಕಾಡು ದಿಗ್ವಿಜಯದ ತಕ್ಷಣದಲ್ಲಿಯೇ ಹೊರಟ ಅನೇಕ ಶಾಸನಗಳು ಜಿಲ್ಲೆಯಲ್ಲಿದ್ದು, ಇದೊಂದು ಅತ್ಯಂತ ಪ್ರಮುಖ ಘಟನೆ ಎಂದು ಹಾಡಿಹೊಗಳಿವೆ. 'ತಲಕಾಡುಗೊಂಡ' ಎಂಬುದು ವಿಷ್ಣುವರ್ಧನನ ಪ್ರಮುಖ ಬಿರುದುಗಳಲ್ಲಿ ಒಂದಾಗಿ ಶಾಸನಗಳಲ್ಲಿ ಕಾಣಿಸಿಕೊಂಡಿದೆ. ಈ ವಿಜಯದ ಸ್ಮರಣಾರ್ಥ ಅನೇಕ ಧಾರ್ಮಿಕ ಕಾರ್ಯಗಳು ನಡೆದಿರುವುದನ್ನು ಜಿಲ್ಲೆಯ ಶಾಸನಗಳು ಉಲ್ಲೇಖಿಸುತ್ತವೆ. ತಲಕಾಡು ವಿಜಯದಲ್ಲಿ ಪ್ರಮುಖಪಾತ್ರವಹಿಸಿದ್ದ ಮಹಾಪ್ರಧಾನ ದಂಡನಾಯಕ ಗಂಗರಾಜನನ್ನು ಅಥವಾ ಗಂಗದಂಡಾಧೀಶನನ್ನು ವಿಷ್ಣುವರ್ಧನನು ಮೆಚ್ಚಿದ್ದನ್ನು ಬೇಡಿಕೋ ಎಂದಾಗ ಗಂಗರಾಜನು ತಿಪ್ಪೂರು ವೃತ್ತಿಯನ್ನು ಬೇಡಿಪಡೆದು ಅದನ್ನು ತನ್ನ ಗುರು ಮೇಘಚಂದ್ರಸಿದ್ಧಾಂತ ದೇವರಿಗೆ ನೀಡಿದನೆಂದು ತಿಪ್ಪೂರು ಶಾಸನವು, ಬಿಂಡಗನವಿಲೆಯ ತೀರ್ಥಕ್ಕೆ ತಳವೃತ್ತಿಯನ್ನು ಪಡೆದು ಅದನ್ನು ಶುಭಚಂದ್ರಸಿದ್ಧಾಂತ ದೇವರಿಗೆ ಬಿಟ್ಟನೆಂದು ಕಂಬದಹಳ್ಳಿ ಶಾಸನವೂ ತಿಳಿಸುತ್ತವೆ. ಈ ವಿಜಯದ ನಂತರ ತಲಕಾಡಿನಲ್ಲಿ ಬೀಡುಬಿಟ್ಟಿದ್ದ ವಿಷ್ಣುವರ್ಧನನಿಗೆ ಅವನ ಮಹಾಪ್ರಧಾನ ದಂಡನಾಯಕ ಲಿಂಗಪಯ್ಯನು ಬಿನ್ನಹಮಾಡಿ ಕನ್ನಂಬಾಡಿಯ ಮಹಾದೇವರಿಗೆ ದತ್ತಿಯನ್ನು ಬಿಟ್ಟನೆಂದು ಕನ್ನಂಬಾಡಿ ಶಾಸನವೂ ತಿಳಿಸುತ್ತವೆ.

ಆದುದರಿಂದ ವಿಷ್ಣುವರ್ಧನನ ತಲಕಾಡು ವಿಜಯ ಸುಮಾರು ೧೧೧೫-೧೬ರ ಹೊತ್ತಿಗೆ ನಡೆದಿರಬಹುದೆಂದು ಊಹಿಸಬಹುದು. ವಿಷ್ಣುವರ್ಧನನಿಗೆ ನೀಲಗಿರಿ ಕೊಂಗು ಪ್ರಾಂತಗಳನ್ನು ಗೆದ್ದುಕೊಟ್ಟ ದಂಡನಾಯಕ ಪುಣಿಸಮಯ್ಯನು ಬಸ್ತಿಯಲ್ಲಿ ಹೊಯ್ಸಳ ಜಿನಾಲಯವನ್ನು ನಿರ್ಮಿಸಿದನು. ಇವನೂ ಕೂಡಾ ವಿಷ್ಣುವರ್ಧನನಿಂದ ವೃತ್ತಿಯನ್ನು ಪಡೆದು ಇದನ್ನು ನಿರ್ಮಿಸಿರಬಹುದು. ಈ ಶಾಸನದಲ್ಲಿ ವಿಷ್ಣುವರ್ಧನನ ಹೆಸರಿದ್ದು ಉಳಿದ ವಿವರಗಳನ್ನು ಅಳಿಸಿಹೋಗಿದೆ. ಹೊಸಹೊಳಲು ಶಾಸನದಲ್ಲಿ ವಿಷ್ಣುವರ್ಧನನ್ನು 'ತ್ರಿಭುನಮಲ್ಲ ತಳಕಾಡುಗೊಂಡ'ನೆಂದು ಕರೆಯಲಾಗಿದೆ. 'ನಂಗಲಿ'ಯನ್ನು ಗೆದ್ದ ವಿಷ್ಣುವರ್ಧನನು ತೊಳಂಚೆಯ ಅಂಕಕಾರ ದೇವರಿಗೆ ದತ್ತಿಯನ್ನು ಬಿಟ್ಟನೆಂದು ಭದ್ರನಕೊಪ್ಪಲು ಶಾಸನ ಹೇಳುತ್ತದೆ. ಆದುದರಿಂದ

ನಂಗಲಿಯ ಗೆಲವು ಕ್ರಿ.ಶ.೧೧೧೮ರ ಹೊತ್ತಿಗೆ ಆಗಿರುವುದು ಖಚಿತವಾಗುತ್ತದೆ. ಮಾಳಗೂರು ಶಾಸನವು ಕುತೂಹಲಕರವಾದ ವಿವರವನ್ನು ನೀಡುತ್ತದೆ. ವಿಷ್ಣುವರ್ಧನನ ಪಿರಿಯರಸಿ ಪಟ್ಟ ಮಹಾದೇವಿ ಶಾಂತಲದೇವಿಯರ ಮಯ್ದುನ ಬಲ್ಲೆಯ ನಾಯಕನು ಮಾಳಿಗೆಯನ್ನು ಆಳುತ್ತಿದ್ದನೆಂದೂ, ಈ ಬಲ್ಲೆಯನಾಯಕನು ಶಾಂತಲೆಯ ಸೋದರಮಾವ ನಾಗದೇವನ ಮಗನೆಂದೂ, ಶಾಂತಲೆಯು ಶೈವಳೆಂದೂ ವಿದ್ವಾಂಸರು ಸಾಧಾರವಾಗಿ ನಿರೂಪಿಸಿದ್ದಾರೆ.

ಚಕ್ರವರ್ತಿಗಳಾಗಿದ್ದ ಕಲ್ಯಾಣದ ಚಾಲುಕ್ಯರ ವಿರುದ್ಧ ತಿರುಗಿಬಿದ್ದು ತುಂಗಭದ್ರೆಯನ್ನು ದಾಟಿ ವಿರಾಟನ ಕೋಟೆ ಎಂದು ಹೆಸರಾದ ಹಾನುಂಗಲ್ಲನ್ನು ಜಯಿಸಿ ಹೆದ್ದೊರೆಯವರೆಗೆ ಸಾಗಿದ್ದ ವಿಷ್ಣುವರ್ಧನನಿಗೆ ಸುಮಾರು ೧೧೨೨ರಲ್ಲಿ ಚಾಲುಕ್ಯರ ಮಾಂಡಲಿಕ ಎರಂಬರಗೆಯ ಸಿಂಧವಂಶದ ಪೆರ್ಮಾನಡಿಯಿಂದ ಸೋಲಾಯಿತು. ಆ ನಂತರ ವಿಷ್ಣುವರ್ಧನನು ಕಲ್ಯಾಣದ ಚಾಲುಕ್ಯರ ಮಹಾಮಂಡಲೇಶ್ವರನಾಗಿಯೇ ಮುಂದುವರಿದನು. ೧೧೩೨ರ ಹೊತ್ತಿಗೆ ಮತ್ತೆ ಬನವಾಸಿ, ಹಾನುಂಗಲ್ಲುಗಳನ್ನು ಜಯಿಸಿರಬಹುದೆಂದು ತೋರುತ್ತದೆ. ಮಹಾಮಂಡಳೇಶ್ವರ ವಿಷ್ಣುವರ್ದನನು ತಲಕಾಡು, ಕೊಂಗು, ನಂಗಲಿ, ಬನವಾಸಿ, ಹಾನುಂಗಲ್ಲು, ಉಚ್ಚಂಗಿಗಳನ್ನು ಜಯಿಸಿ, ಗಂಗವಾಡಿ ತೊಂಬತ್ತಾರುಸಾವಿರ, ನೊಳಂಬವಾಡಿ ಮೂವತ್ತರ್ಛಾಸಿರ, ಹಾನುಂಗಲ್ಲು ಐನೂರು ಇವುಗಳನ್ನು ದೋರಸಮುದ್ರದ ನೆಲೆಬೀಡಿನಿಂದ ಆಳುತ್ತಿದ್ದನೆಂದು ವೈದ್ಯನಾಥಪುರ ಶಾಸನದಲ್ಲಿ ಹೇಳಿದ್ದರೂ, ಅದು ಮೊದಲಿನ ವಿಜಯಗಳು. ಈ ಸಂದರ್ಭದಲ್ಲಿ (೧೧೨೨ ರಿಂದ ೧೧೩೭ ರವರೆಗೆ) ವಿಷ್ಣುವರ್ಧನನು ತನ್ನ ನಾಡಿನಲ್ಲಿಯೇ ಇದ್ದನು.

ಈ ಸಂದರ್ಭದಲ್ಲಿ ವಿಷ್ಣುವರ್ಧನನು ಯಾದವಪುರವಾದ ತೊಂಡನೂರು ಬೀಡಿನಲ್ಲಿ ಕೆಲವುಕಾಲ ತಂಗಿದ್ದು ಸುತ್ತಮುತ್ತಲ ಪ್ರದೇಶಗಳಿಗೆ ಭೇಟಿನೀಡಿರುವಂತೆ ತೋರುತ್ತದೆ ಎಂದು ವಿದ್ವಾಂಸರು ಊಹಿಸಿದ್ದಾರೆ. ಪೂರ್ವೋಕ್ತ ಶಂಭೂನಹಳ್ಳಿ ಮತ್ತು ಹೊಸಕೋಟೆ ಶಾಸನಗಳಲ್ಲಿ ವಿಷ್ಣುವರ್ಧನನು ಯಾದವಪುರದಲ್ಲಿದ್ದನೆಂದು ಹೇಳಿದೆ. ಇದೇ ಕಾಲದಲ್ಲಿ ವಿಷ್ಣುವರ್ಧನನ ಆಜ್ಞೆಯಂತೆ ಅವನ ಮಹಾಪ್ರಧಾನ ದಂಡನಾಯಕ ಹೆಗ್ಗಡೆ ಸುರಿಗೆ ನಾಗಯ್ಯನು ಲಕ್ಷ್ಮೀನಾರಾಯಣ ದೇವಾಲಯದ ಓಲಗಸಾಲೆಯನ್ನು ನಿರ್ಮಿಸಿದನೆಂದು ತೊಣ್ಣೂರು ಶಾಸನದಲ್ಲಿ ಹೇಳಿದೆ. ಇದರಿಂದ ವಿಷ್ಣುವರ್ಧನನು ಯಾದವಪುರ ಅಂದರೆ ತೊಣ್ಣೂರಿನಲ್ಲಿ ಬೀಡುಬಿಟ್ಟಿದ್ದುದು ಖಚಿತವಾಗುತ್ತದೆ. ಹಾಗೂ ಬಹುಶಃ ಈ ಕಾಲದಲ್ಲೇ ಅವನು ಅಲ್ಲಿದ್ದ ರಾಮಾನುಜಾಚಾರ್ಯರನ್ನು ಭೇಟಿಯಾಗಿರಬಹುದು. ಮತ್ತು ತೊಣ್ಣೂರಿನ ಲಕ್ಷ್ಮೀನಾರಾಯಣ ದೇವಾಲಯದ ನಿರ್ಮಾಣವೂ ಈ ಕಾಲದಲ್ಲೇ ಆಗಿರಬಹುದೆಂದು ಹೇಳಬಹುದು. ಇಲ್ಲಿಂದ ವಿಷ್ಣುವರ್ಧನನು ನಾಗಮಂಗಲದ

ಕಡೆಗೆ ಬಂದಿರುವ ಸಾಧ್ಯತೆ ಇದೆ. ವಿಷ್ಣುವರ್ಧನನ ಪಟ್ಟದರಸಿ ನೊಳಂಬ ವಂಶವ ರಾಜಕುಮಾರಿ ಬಮ್ಮಲದೇವಿ ನಾಗಮಂಗಲದ ಶಂಕರನಾರಾಯಣ ದೇವಾಲಯವನ್ನು ವಿಷ್ಣುವರ್ಧನನು ದೇವರ ಕಾರುಣ್ಯದಿಂದ ಜೀರ್ಣೋದ್ಧಾರ ಮಾಡಿ ಅದಕ್ಕೆ ಅರಿಕನಕಟ್ಟ ಗ್ರಾಮವನ್ನು ದತ್ತಿ ಹಾಕಿಕೊಟ್ಟಳೆಂದು ನಾಗಮಂಗಲ ಶಾಸನದಿಂದ ತಿಳಿದು ಬರುತ್ತದೆ.

ವಿಷ್ಣುವರ್ಧನನು ಕ್ರಿ.ಶ.೧೧೩೭-೩೮ರ ಹೊತ್ತಿಗೆ ಮತ್ತೆ ಹಾನುಂಗಲ್ಲು, ಬನವಸೆಗಳನ್ನು ವಶಪಡಿಸಿಕೊಂಡಿದ್ದನು. ವಿಷ್ಣುವರ್ಧನನು ತಲಕಾಡನ್ನು ಕೈಕೊಂಡು, ಕೊಂಗರನ್ನು ಸೋಲಿಸಿ, ಚಕ್ರಗೊಟ್ಟ, ತಳವನಪುರ, ಉಚ್ಚಂಗಿ, ಕೋಳಾಲ, ಏಳುಮಲೆ, ಕಂಚಿ, ಕೊಂಗು, ನಂಗಲಿ, ಗಂಗವಾಡಿ, ನೊಳಂಬವಾಡಿ, ಬನವಸೆ, ಹಾನುಂಗಲ್ಲು, ಉಚ್ಚಂಗಿಗಳನ್ನು ದೋರಸಮುದ್ರದ ನೆಲೆಬೀಡಿನಿಂದ ಆಳುತ್ತಿದ್ದನೆಂದು ಕ್ರಿ.ಶ. ೧೧೩೮ರ ಲಾಳನಕೆರೆ ಶಾಸನದಿಂದ ತಿಳಿದುಬರುತ್ತದೆ. ಆದುದರಿಂದ ೧೧೩೮ರ ಹೊತ್ತಿಗೆ ಮತ್ತೆ ಬನವಸೆ, ಹಾನುಂಗಲ್ಲು ಇವನ ವಶವಾಗಿರಬಹುದು. ಅದರೆ ವಿಕ್ರಮನ ಸಾವಿನ ನಂತರ ಅಂದರೆ ೧೧೪೦-೪೧ರ ಹೊತ್ತಿಗೆ ವಿಷ್ಣುವರ್ಧನನು ಈ ಪ್ರದೇಶಗಳನ್ನು ಗೆದ್ದಿರಬಹುದೆಂದು ಇತಿಹಾಸವಿದ್ವಾಂಸರು ಊಹಿಸಿದ್ದಾರೆ. ಆದರೆ ೧೧೩೭-೩೮ರ ಹೊತ್ತಿಗೇ ವಿಷ್ಣುವರ್ಧನನು ಈ ಪ್ರದೇಶಗಳನ್ನು ವಶಪಡಿಸಿಕೊಂಡಿದ್ದನೆಂಬುದು ಮೇಲಿನ ಶಾಸನಗಳ ಆಧಾರದಿಂದ ತಿಳಿದುಬರುತ್ತದೆ. ವಿಷ್ಣುವರ್ಧನನು ಬನವಸೆ ಪನ್ನಿರ್ಚ್ಛಾಸಿರ, ಪಲಸಿಗೆ ಪನ್ನಿರ್ಚ್ಛಾಸಿರ, ಎರಡುನೂರು ಪ್ರದೇಶಗಳನ್ನು ಗೆದ್ದು ವಿಜಯರಾಜಧಾನಿ ಬಂಕಾಪುರದ ನೆಲೆಬೀಡಿನಿಂದ ಆಳುತ್ತಿದ್ದನೆಂದು ಕ್ರಿ.ಶ.೧೧೩೮ರ ಉಂಡಿಗನಹಾಳು ಶಾಸನದಿಂದ ಶ್ರೀರಾಜಧಾನಿ ಬಂಕಾಪುರದ ನೆಲೆಬೀಡಿನಿಂದ ಆಳುತ್ತಿದ್ದನೆಂದು ಕ್ರಿ.ಶ.೧೧೪೯ರ ಅಣತಿ ಶಾಸನದಿಂದ ತಿಳಿದುಬರುತ್ತದೆ.

ದಂಡನಾಯಕ ಮಸಣಯ್ಯನ ಮೇಲೆ ಹೊಯ್ಸಳದೇವರು ಅಂದರೆ ವಿಷ್ಣುವರ್ಧನನು ಕಪಿಲೆಯ ಹೊಳೆಯ ಹತ್ತಿರ ಎತ್ತಿಕಟ್ಟಿದ ಯುದ್ಧದಲ್ಲಿ ಹಡುವಳದ ಮಸಣಯ್ಯನು ಹಲವರನ್ನು ಇರಿದು ಸುಲೋಕಪ್ರಾಪ್ತನಾದನೆಂದು ಹೊನ್ನೇನಹಳ್ಳಿ ವೀರಗಲ್ಲು ಶಾಸನದಿಂದ ತಿಳಿದುಬರುತ್ತದೆ. 'ಸಮರ ಮಸಣಯ್ಯನೆಂಬುವವನನ್ನು ಜಯಿಸಿ ಸಾಮ್ರಾಜ್ಯಮಮ್ ಕೊಂಬುದುಮಾತನ ಮಹಾದೇವಿ ಲಕ್ಷ್ಮೀದೇವಿಗೆ ಪುತ್ರೋತ್ಸವಮಾಗಲ್' ಎಂದು ದೇವಚಂದ್ರನು ತನ್ನ ರಾಜಾವಳಿ ಕಥೆಯಲ್ಲಿ ಹೇಳಿದ್ದಾನೆ. ಈ ಘಟನೆಯು ಶಕ ೧೦೫೫ ಅಂದರೆ ಕ್ರಿ.ಶ. ೧೧೩೩ರ ನಂತರ ನಡೆಯಿತೆಂದು ಅವನು ಹೇಳಿದ್ದಾನೆ. ಇದರಿಂದ ಕದಂಬರ ದಳಪತಿ ಸಮರ ಮಸಣಯ್ಯನನ್ನು ಸೋಲಿಸಿ, ಬನವಾಸಿ ಮಂಡಲವನ್ನು ವಶಪಡಿಸಿಕೊಂಡ ವಿಚಾರವನ್ನು ಈ ಶಾಸನ ತಿಳಿಸುತ್ತದೆಂದು

ಊಹಿಸಬಹುದು. ವಿಕ್ರಮಾದಿತ್ಯನ ಪರವಾಗಿ ಹೋರಾಡಿದ ಮಸಣಯ್ಯನನ್ನು ತ್ರಿಭುವನಮಲ್ಲ ಅಂದರೆ ವಿಷ್ಣುವರ್ಧನ ಹಾಗೂ ಅವನ ಕಡೆಯ ವೀರರು ಎದುರಿಸಿ ಹೋರಾಡಿದ ವಿಚಾರ ಹಾಸನ ತಾಲ್ಲೂಕು ಕಬ್ಬಿನಹಳ್ಳಿ ವೀರಗಲ್ಲು ಶಾಸನದಿಂದ ತಿಳಿಯುತ್ತದೆ. ಈ ಶಾಸನದಲ್ಲಿ ಶಾರ್ವರಿ ಸಂವತ್ಸರದ ಹೆಸರನ್ನು ಮಾತ್ರ ನೀಡಲಾಗಿದ್ದು ಶಕವರ್ಷವನ್ನು ನೀಡಿಲ್ಲ. ಇದು ಕ್ರಿ.ಶ.೧೧೨೦-೨೧ಕ್ಕೆ ಸರಿಹೊಂದುತ್ತದೆಂದು ಎಪಿಗ್ರಾಫಿಯಾ ಕರ್ನಾಟಕಾ ಸಂಪಾದಕರು ಊಹಿಸಿದ್ದಾರೆ.

ವಿಷ್ಣುವರ್ಧನನು ಬಂಕಾಪುರದ ನೆಲೆಬೀಡಿನಿಂದ ರಾಜ್ಯವಾಳುತ್ತಿದ್ದಾಗ ಆತನ ಸೇನಾಧಿಪತಿ ಕೇರಾಳನಾಯಕನು ನಾಗರಘಟ್ಟದ ಮಹಾದೇವರಿಗೆ ದತ್ತಿಬಿಟ್ಟನೆಂದು ತಿಳಿದುಬರುತ್ತದೆ. ಈ ಘಟನೆ ೧೧೪೦ ರ ಹೊತ್ತಿಗೆ ನಡೆದಿರಬಹುದು. ಇದೇ ಜಿಲ್ಲೆಯಲ್ಲಿ ದೊರಕುವ ವಿಷ್ಣುವರ್ಧನನ ಕೊನೆಯ ಶಾಸನವಾಗಿದೆ. ಕ್ರಿ.ಶ.೧೧೪೦ ಅಕ್ಟೋಬರ್ ೧೮ಕ್ಕೆ ಸರಿಹೊಂದುವ ಕೃಷ್ಣರಾಜಪೇಟೆ ತಾಲ್ಲೂಕು ಹುಬ್ಬನಹಳ್ಳಿ ಶಾಸನವು 'ಶ್ರೀ ವೀರ ವಿಷ್ಣುವರ್ಧನನು ಹಳ್ಳದಬೀಡಿನಲು ಸುಕಸಂಕಥಾವಿನೋದದಿಂ ರಾಜ್ಯಂಗೆಯ್ಯುತ್ತಿದ್ದನು' ಎಂದು ಹೇಳಿದೆ. ಇದು ತುಂಗಭದ್ರಾತೀರ ಹಳ್ಳಬೀಡಾಗಿರಬಹುದು. ಅಥವಾ ವಿಷ್ಣುವರ್ಧನನು ಬಂಕಾಪುರದಿಂದ ಹಿಂದಿರುಗಿ ಪ್ರಯಾಣ ಮಾಡುವಾಗ ಈ ಹಳ್ಳಬೀಡಿನಲ್ಲಿ ತಂಗಿರಬಹುದೆಂದು ಊಹಿಸುವುದು ಹೆಚ್ಚು ಸೂಕ್ತವಾಗುತ್ತದೆ.

ಕ್ರಿ.ಶ.೧೧೪೫ರ ಯಲ್ಲಾದಹಳ್ಳಿ ಶಾಸನದಲ್ಲಿ 'ವಿಷ್ಣುವರ್ಧನದೇವರು...ದುಷ್ಟನಿಗ್ರಹ ಶಿಷ್ಟಪ್ರತಿಪಾಳನ ಪೂರ್ವಕವೇಕಚ್ಛ ತ್ರಚ್ಛಾಯೆಯಿಂದಾಳ್ದನಾ ಮಹಾನುಭಾವನಿಂ ಬಳಿಯೆ' ನರಸಿಂಹನು ಆಳುತ್ತಿದ್ದನು ಎಂದು ಸ್ಪಷ್ಟವಾಗಿ ಹೇಳಿರುವುದರಿಂದ ಈ ವೇಳೆಗೆ ವಿಷ್ಣುವರ್ಧನನು ಅವನ ಮಗ ಒಂದನೆಯ ನರಸಿಂಹನಿಗೆ ಪಟ್ಟ ಕಟ್ಟಿದ್ದನೆಂದು ಹೇಳಬಹುದು. ವಿಷ್ಣುವರ್ಧನನು ಸಾಧಿಸಿದ ವಿಜಯಗಳನ್ನು ಸುಂಕಾತೊಂಡನೂರು ಶಾಸನವು ಸಂಕ್ಷಿಪ್ತವಾಗಿ ಈ ಕೆಳಗಿನಂತೆ ಪಟ್ಟಿಮಾಡುತ್ತದೆ. ಶ್ರೀಮನ್ಮಹಾಮಂಡಲೇಶ್ವರಂ ತ್ರಿಭುವನಮಲ್ಲ ಹೊಯ್ಸಳ ಶ್ರೀ ವಿಷ್ಣವರ್ಧನದೇವರ ಪ್ರತಾಪವೆಂತೆಂದರೆ:

ನಂಗಲಿ ಕೊಂಗು ಸಿಂಗಮಲೆ ರಾಯಪುರಂ ತಳಕಾಡುರೊದ್ದ
ಬೆಂಗಿರಿ ಹೊಸಕೊಳ್ಳಗ್ಗಿರಿ ಬಳ್ಳರೆವಲ್ಲುರು ಚಕ್ರಗೊಟ್ಟಮು
ಚ್ಚಂಗಿ ವಿರಾಟನಪಳಲು ಬಂಕಪುರಂ ಬನವಾಸಿ ಕೊಯತೂ
ರ್ತುಂಗಪರಾಕ್ರಮಂ ವಿಜಯವರ್ದ್ಧನನೀ ಕಲಿ ವಿಷ್ಣುವರ್ಧನದೇವ

ನೀಳಾದ್ರೀಪಡಿಯಘಟ್ಟಂ
ಏಳುಂಮಲೆ ಕಂಚಿ ತುಳುವರಾಜೇಂದ್ರಪುರಂ
ಕೋಳಾಲಬಯಲುನಾಡುಮಂ
ನಾಳಾಪದೆ ಕೊಂಡ ವಿಷ್ಣುವರ್ಧನದೇವ

ಹಲಸಿಗೆ ಬೆಳುವಲವೊಪ್ಪುವ
ಹುಲಿಗೆರೆಯಾಲೊಕ್ಕುಗುಂಡ ಹೆದ್ದರೆವರೆಗಂ
ಕಲಿಗಳನೆ ತಗುಳ್ದು ವಿಕ್ರಮ
ಬಲದಿಂ ಕೈಕೊಂಡ ವಿಷ್ಣು ಭೂಮಂಡಳಮಂ

ವಿಷ್ಣುವರ್ಧನನು ಚಾಲುಕ್ಯ ಸೋಮೇಶ್ವರನನ್ನು ಸೋಲಿಸಿದ, ಕಾಂಚಿಪುರವನ್ನು ಗೆದ್ದ ವಿಚಾರವನ್ನು ಹೊಸಕೋಟೆ ಶಾಸನವು 'ಸೋಮೇಶ್ವರ ಪ್ರಚಂಡವೇದಂಡಕಬಳನ ಪ್ರಬಳ ಕಂಠೀರವನುಂ ಕಾಂಚೀಪುರನುಂ ಉದ್ದಂಡಿತ ಪ್ರಚಂಡ ತೇಜಂ ಎಂದು ವರ್ಣಿಸಿದೆ. ಹಟ್ಟಣ ಶಾಸನವು ಇರುಂಗೋಳನಕೋಟೆ, ಕಾರುಕನಕೊಳ್ಳ ಕುಂಮಟ, ರಾಚವೂರು, ಮುದುಗನೂರುದುರ್ಗಗಳನ್ನು ವಿಷ್ಣುವರ್ಧನನು ವಶಪಡಿಸಿಕೊಂಡಿದ್ದನೆಂದು ಹೇಳಿದೆ. ಕಾಂಚಿಪುರವನ್ನು ಗೆದ್ದು ಕಂಚಿಗೊಂಡ ವಿಕ್ರಮಗಂಗ ಎಂಬ ಬಿರುದನ್ನು ಧರಿಸಿದ್ದನ್ನು ಅಳಿಸಂದ್ರಶಾಸನ ಹೇಳುತ್ತದೆ. ಆದುದರಿಂದ ಹೊಯ್ಸಳ ದೊರೆಗಳಲ್ಲಿ ಚೋಳನಾಡನ್ನು ಒಳಹೊಕ್ಕವರಲ್ಲಿ ಸೋಮೇಶ್ವರನೇ ಮೊದಲಿಗನಲ್ಲ ಎಂಬ ವಿದ್ವಾಂಸರ ಅಭಿಪ್ರಾಯ ಒಪ್ಪತಕ್ಕದ್ದೇ. ವಿಷ್ಣುವರ್ದನನ ಪರಾಕ್ರಮ ಹಾಗೂ ಸಾಧನೆಗಳನ್ನು ಯಾಲಾದಹಳ್ಳಿ ಶಾಸನ ವರ್ಣಿಸಿದ್ದು ಈತನು ಹಿರಣ್ಯಗರ್ಭ, ತುಲಾಪುರುಷಾದಿ ಮಹಾಕ್ರತುಗಳನ್ನು ಮಾಡಿದ್ದನೆಂದು ಶಾಸನ ತಿಳಿಸುತ್ತದೆ. ಈ ರೀತಿ ಹೊಯ್ಸಳರ ಗಣ್ಯದೊರೆ ವಿಷ್ಣುವರ್ಧನನ ಇತಿಹಾಸ ರಚನೆಗೆ ಮಂಡ್ಯ ಜಿಲ್ಲೆಯ ಶಾಸನಗಳು ಪ್ರಮುಖ ಆಧಾರಗಳನ್ನು ಒದಗಿಸುತ್ತವೆ. ವಿಷ್ಣುವರ್ಧನನ ಮರಣಾನಂತರ ತಕ್ಷಣದಲ್ಲಿ ಹಾಕಿರಬಹುದಾದ ಯಾಲಾದಹಳ್ಳಿ ಶಾಸನವು ವಿಷ್ಣುವಿನ ವ್ಯಕ್ತಿತ್ವ ಮತ್ತು ವಿಜಯಗಳನ್ನು ಪಟ್ಟಿಮಾಡುತ್ತದೆ.

ಇತಿಹಾಸ ಪೂರ್ವ ಕಾಲವು ಕಳೆದು ಲಿಖಿತ ದಾಖಲೆಗಳುಳ್ಳ ಇತಿಹಾಸ ಕಾಲಕ್ಕೆ ಬರುವಾಗ ಮಂಡ್ಯ ಜಿಲ್ಲೆಯು ವಿಪುಲ ಐತಿಹಾಸಿಕ ಚಟುವಟಿಕೆಗಳ ರಂಗಸ್ಥಳವಾಗಿ ಧಾರ್ಮಿಕ, ಸಾಂಸ್ಕೃತಿಕ ಹಾಗೂ ಆರ್ಥಿಕ ಚಟುವಟಿಕೆಗಳ ಕೇಂದ್ರವಾಗಿದ್ದುದು ಕಂಡುಬರುತ್ತದೆ. ಇತಿಹಾಸವೆಂದಾಗ ರಾಜಕೀಯ ಇತಿಹಾಸ ರಾಜರವಂಶಾವಳಿ, ಅವರ ದಂಡಯಾತ್ರೆಗಳ ವಿವರ ಮುಂತಾದ ಕಲ್ಪನೆಗಳೇ ನಮ್ಮ ಕಣ್ಣು ಕಟ್ಟವಂತೆ ನಮ್ಮ ಇಂದಿನ ಇತಿಹಾಸ ಸಂಬಂಧಿ ಬರಹಗಳಲ್ಲಿ

ಮೂಡಿಬಂದಿವೆ. ಇದಕ್ಕೆ ಕಾರಣ ನಮ್ಮಲ್ಲಿ ಇತಿಹಾಸ ಲೇಖನ (ಹಿಸ್ಟೋರಿಯೊಗ್ರಫಿ) ಇನ್ನೂ ವಿಖ್ಯಾತ ರೂಪತಾಳದೇ ಇರುವುದು, ರಾಜರ ರಾಜಕೀಯ ಚಟುವಟಿಕೆಗಳನ್ನು ಮೀರಿ ಅವರು ನಡೆಸಿದ್ದ ಆರ್ಥಿಕ, ಸಾಂಸ್ಕೃತಿಕ ಚಟುವಟಿಕೆಗಳ ಕಡೆ ನಮ್ಮ ಗಮನ ಹರಿಸಿದಾಗ ಹಿಂದೆ ಆಗಿ ಹೋದ ರಾಜ ವಂಶಗಳು ಇಂದಿಗೂ ನಮ್ಮ ಜೀವನದ ಮೇಲೆ ಪ್ರಭಾವ ಬೀರುತ್ತಿರುವ ಸಾಧನೆಗಳನ್ನು ಮಾಡಿದ್ದು ನಮ್ಮ ಗಮನಕ್ಕೆ ಬರುತ್ತದೆ.

ತೊಣ್ಣೂರು

ರಾಮಾನುಜಾಚಾರ್ಯರು ಕನ್ನಡನಾಡಿಗೆ ಬರುವ ಮುನ್ನ ತಮಿಳುನಾಡಿನಲ್ಲಿ ಆಗ ಆಳ್ವಿಕೆ ಮಾಡುತ್ತಿದ್ದ ಚೋಳರ ದೊರೆಯಾದ ಕುಲೋತ್ತುಂಗ ಚೋಳನ ಆಶ್ರಯದಲ್ಲಿ ನೆಲೆಸಿದ್ದರು.[೩] ನಂತರದ ಕಾಲದಲ್ಲಿ ರಾಜನಾದ ಕುಲೋತ್ತುಂಗ ಚೋಳನು ಶೈವಧರ್ಮಿಯನಾಗಿದ್ದನು. ಇವನು ಆಳ್ವಿಕೆಯ ಕಾಲದಲ್ಲಿ ತಮಿಳುನಾಡಿನಲ್ಲಿ ಶೈವಧರ್ಮದ ಪ್ರಚಾರ ಮತ್ತು ಬೆಳವಣಿಗೆಗಾಗಿ ಬಹಳ ಪ್ರಯತ್ನ ನಡೆಸಲಾಗಿತ್ತು. ಹೀಗಿರುವಾಗ ಕುಲೋತ್ತುಂಗ ಚೋಳನು ರಾಮಾನುಜರನ್ನು ವೈಷ್ಣವ ಧರ್ಮವನ್ನು ತ್ಯಜಿಸಿ ಶೈವಧರ್ಮಕ್ಕೆ ಮತಾಂತರಗೊಳಿಸಲು ಮುಂದಾಗುತ್ತಾನೆ. ಆದರೆ ರಾಮಾನುಜಾಚಾರ್ಯರು ವೈಷ್ಣವ ಧರ್ಮವನ್ನು ಬಿಟ್ಟುಹೋಗಲು ಒಪ್ಪಿಗೆ ನೀಡದಿದ್ದುದರಿಂದ ಕುಲೋತ್ತುಂಗ ಚೋಳರು ಒಮ್ಮೆ ರಾಮಾನುಜರನ್ನು ರಾಜ್ಯಸಭೆಗೆ ಕರೆದು ಅವರನ್ನು ಅವಮಾನ ಮಾಡಲು ಮತ್ತು ಅವರ ಶಿರಚ್ಛೇದನಕ್ಕೆ ಪ್ರಯತ್ನ ನಡೆಸುತ್ತಾನೆ. ಇದನ್ನು ತಿಳಿದ ರಾಮಾನುಜಾಚಾರ್ಯರ ಶಿಷ್ಯರೊಬ್ಬರು ಗುರುಗಳನ್ನು ರಕ್ಷಿಸಲು ತಾನು ರಾಮಾನುಜಾಚಾರ್ಯರಂತೆ ವೇಷ ಧರಿಸಿಕೊಂಡು ರಾಜನ ಸಭೆಗೆ ಹೋಗುತ್ತಾರೆ. ಇಲ್ಲಿ ರಾಮಾನುಜಾಚಾರ್ಯರ ಶಿಷ್ಯ ರಾಜ ಸಭೆ ಹೋಗುತ್ತಾನೆ ಅಂತಾ ಹೇಳುತ್ತಾರೆ. ಆದರೆ ಅಲ್ಲಿ ಹೋದ ಬಳಿಕ ಅವನ ಶಿರಚ್ಛೇದನವಾಯಿತು. ಇಲ್ಲವೂ ಅದರ ಬಗ್ಗೆ ಚರ್ಚಿಸಿಲ್ಲ ಕಾರಣಗಳೇನು ಇಲ್ಲ. ನಂತರ ರಾಮಾನುಜಾಚಾರ್ಯರು ಕನ್ನಡನಾಡಿಗೆ ಬರುತ್ತಾರೆ. ಕನ್ನಡ ನಾಡಿಗೆ ಆಗಮಿಸಿದ ಅವರು ವೈಷ್ಣವ ದೇವಾಲಯಗಳನ್ನು ಸಂದರ್ಶಿಸುತ್ತಾರೆ. ನಂತರ ಮೇಲುಕೋಟೆಗೆ ತೆರಳಿ ಅಲ್ಲಿ ಕೆಲವು ದಿನಗಳ ಕಾಲ ವೈಷ್ಣವ ಧರ್ಮದ ಉಪದೇಶವನ್ನು ಮಾಡಿ, ನಂತರ ತೊಣ್ಣೂರಿಗೆ ಆಗಮಿಸಿ ಅಲ್ಲಿಯೇ ನೆಲೆಯೂರಲು ಮುಂದಾಗುತ್ತಾರೆ. ಆಗ ಕನ್ನಡ ನಾಡಿನ ದಕ್ಷಿಣ ಭಾಗವನ್ನು ಆಳ್ವಿಕೆ ಮಾಡುತ್ತಿದ್ದ ದೊರೆ ಎಂದರೆ ಹೊಯ್ಸಳ ದೊರೆಯಾದ ಬಿಟ್ಟಿದೇವನು ರಾಮಾನುಜಾಚಾರ್ಯರಿಗೆ ಆಶ್ರಯ ನೀಡಿ ಅವರಿಗೂ, ಅವರ ಶಿಷ್ಯವೃಂದಕ್ಕೂ ಒಂದು ಮಠವನ್ನು ಕಟ್ಟಿಸಿಕೊಡುತ್ತಾನೆ ಎಂಬುದು ಒಂದು ಪ್ರತೀತಿ.

ರಾಮಾನುಜಾಚಾರ್ಯರು ಕನ್ನಡ ನಾಡಿನಲ್ಲಿ ನೆಲೆನಿಂತ ಸಮಯದಲ್ಲಿ ಬಿಟ್ಟಿದೇವನಿಗೆ ಒಬ್ಬಳು ಮಗಳಿರುತ್ತಾಳೆ (ಹರಿಯಲಾದೇವಿ) ಇವಳಿಗೆ ಒಂದು ಪೀಡೆಯ ಸಂಬಂಧಿ ರೋಗವು ಅಂಟಿಕೊಂಡಿದ್ದು, ಅವಳಿಗೆ ತುಂಬಾ ತೊಂದರೆಯನ್ನು ಕೊಡುತ್ತಿರುತ್ತದೆ. ಆಗ ಬಿಟ್ಟಿದೇವನು ಈ ಪೀಡೆ ರೋಗದಿಂದ ನರಳುತ್ತಿರುವ ತನ್ನ ಮಗಳನ್ನು ವಿಮುಕ್ತಿಗೊಳಿಸುವುದಕ್ಕಾಗಿ ಆಗ ಇದ್ದ ಜೈನ ಪಂಡಿತರಲ್ಲಿ ಮನವಿ ಮಾಡಿಕೊಳ್ಳುತ್ತಾನೆ. ಆದರೆ ಜೈನ ಪಂಡಿತರು ಬಿಟ್ಟಿದೇವನ ಮಗಳಿಗೆ ಅಂಟಿಕೊಂಡಿದ್ದ ಪೀಡೆಯನ್ನು ತೊಲಗಿಸಲು ಮಾಡಿದ ಪ್ರಯತ್ನಗಳೆಲ್ಲವೂ ನಿರರ್ಥಕವಾದುದರಿಂದ, ಅದೇ ವೇಳೆಗೆ ತಮಿಳುನಾಡಿನಿಂದ ಕನ್ನಡನಾಡಿಗೆ ಆಗಮಿಸಿದ್ದ ರಾಮಾನುಜರಿಗೆ ಈ ವಿಷಯ ತಿಳಿಯುತ್ತದೆ. ಆಗ ರಾಮಾನುಜಾಚಾರ್ಯರು ಬಿಟ್ಟಿದೇವನಲ್ಲಿ ಕೇಳಿದಾಗ ಈ ವಿಷಯವನ್ನು ತಿಳಿಸುತ್ತಾನೆ. ಅದೇ ವೇಳೆಯಲ್ಲಿ ರಾಮಾನುಜಾಚಾರ್ಯರು ನಿಮ್ಮ ಮಗಳಿಗೆ ಹಿಡಿದಿರುವ ಪೀಡೆಯನ್ನು ನಾನು ತೊಲಗಿಸುತ್ತೇನೆ. ಆದರೆ ಒಂದು ಷರತ್ತು. ಅದೇನೆಂದರೆ ನಿಮ್ಮ ಮಗಳು ಕಾಯಿಲೆಯಿಂದ ಉಪಶಮನವಾದ ನಂತರ ನೀವು ಜೈನಧರ್ಮವನ್ನು ತ್ಯಜಿಸಿ ವೈಷ್ಣವ ಧರ್ಮವನ್ನು ಸ್ವೀಕರಿಸುವುದಾದರೆ ಮಾತ್ರ ಎಂದು ಹೇಳುತ್ತಾರೆ. ಆಗ ಬಿಟ್ಟಿದೇವನು ಸಮ್ಮತಿಯನ್ನು ನೀಡುತ್ತಾನೆ. ಅದರಂತೆ ರಾಜನ ಮಗಳಿಗೆ ಅಂಟಿಕೊಂಡಿದ್ದ ಪೀಡೆಯನ್ನು ತಮ್ಮ ದೈವಬಲದಿಂದ ಹೋಗಲಾಡಿಸುತ್ತಾರೆ. ಇದನ್ನು ತಿಳಿದ ಬಿಟ್ಟಿದೇವನು ರಾಮಾನುಜರಲ್ಲಿದ್ದ ದೈವಭಕ್ತಿಗೆ ಮಾರುಹೋಗಿ ಮಾತಿನಂತೆ ಜೈನಧರ್ಮವನ್ನು ಬಿಟ್ಟು ವೈಷ್ಣವ ಧರ್ಮವನ್ನು ಸ್ವೀಕರಿಸಿದನಂತೆ. ನಂತರ ರಾಮಾನುಜರಿಗೆ ರಾಜಧರ್ಮದ ಆಶ್ರಯವನ್ನು ನೀಡಿ, ಅವರನ್ನು ವೈಷ್ಣವ ಧರ್ಮದ ಪ್ರವರ್ತಕರನ್ನಾಗಿ ನೇಮಿಸುತ್ತಾನೆ.

ರಾಮಾನುಜಾಚಾರ್ಯರಿಗೆ ರಾಜಾಶ್ರಯ ನೀಡಿ ವೈಷ್ಣವ ಧರ್ಮದ ಪ್ರವರ್ತಕರನ್ನಾಗಿ ನೇಮಿಸಿದಾಗ ಅಲ್ಲಿಯೇ ನೆಲೆಸಿದ್ದ ಜೈನಧರ್ಮಿಯರಿಗೆ ಆತಂಕ ಉಂಟಾಗುತ್ತದೆ. ಅದೇನೆಂದರೆ ರಾಮಾನುಜರು ಇಲ್ಲಿಯೇ ಉಳಿದರೆ ಜೈನಧರ್ಮಕ್ಕೆ ಉಳಿಗಾಲವಿರುವುದಿಲ್ಲವೆಂದು ತಿಳಿದು, ಅವರನ್ನು ತಮಿಳುನಾಡಿಗೆ ಹೋಗುವಂತೆ ಮಾಡಲು ಪ್ರಯತ್ನಿಸುತ್ತಾರೆ. ರಾಮಾನುಜರಿಗೆ ಜೈನಧರ್ಮೀಯರು ಹಲವಾರು ಪ್ರಶ್ನೆಗಳನ್ನು ಹಾಕುತ್ತಾರೆ. ಆಗ ರಾಮಾನುಜರು ಅವರು ಕೇಳಿದ ಎಲ್ಲ ಪ್ರಶ್ನೆಗಳಿಗೂ ಒಂದೇ ಬಾರಿ ಉತ್ತರವನ್ನು ನೀಡಿ ಜಯಶಾಲಿಯಾಗುತ್ತಾರೆ. ಜೈನ ವಿದ್ವಾಂಸರುಗಳು ಇದರಿಂದ ವಿಚಲಿತರಾಗಿ ರಾಮಾನುಜರೊಡನೆ ವಾದಮಾಡಿ ಸೋತರು. ನಂತರ ತೊಂಡನೂರಿನ ಸಹಸ್ರಾರು ಪ್ರಜೆಗಳಿಗೆ ಅವರು ವೈಷ್ಣವ ದೀಕ್ಷೆ ನೀಡಿದರು. ಈ ಊರಿನ ಪಕ್ಕದಲ್ಲಿ ಎರಡು ಬೆಟ್ಟಗಳ ಮಧ್ಯೆ ಹರಿಯುವ ನೀರಿಗೆ ಅಡ್ಡಕಟ್ಟೆಯನ್ನು ಕಟ್ಟಿ ತಿರುವಲಸಾಗರವನ್ನು ನಿರ್ಮಿಸಲು ಸಹಾಯ ಮಾಡಿದರು.

ಇಲ್ಲಿನ ಇನ್ನೊಂದು ಐತಿಹ್ಯದ ಪ್ರಕಾರ, ಹಿಂದೆ ಒಮ್ಮೆ ಧಾರಾಕಾರವಾಗಿ ಮಳೆ ಸುರಿದಿದ್ದರಿಂದಾಗಿ ಊರಿನ ವಾಯವ್ಯ ಭಾಗದಲ್ಲಿರುವ ಕೆರೆಯು ತುಂಬಿಕೊಂಡಿತಂತೆ. ಆಗ ಈ ಕೆರೆಯಲ್ಲಿಯೇ ಇದ್ದ ಒಂದು ಹೆಬ್ಬಾವು ಕೆರೆಯ ತೂಬಿನೊಳಗೆ ಬಂದು ಸೇರಿಕೊಂಡು ಹೊರಬರಲಾಗದೇ ಅಲ್ಲಿಯೇ ಸೇರಿಕೊಂಡಿದ್ದರಿಂದ ಕೆರೆಯ ನೀರು ಹೊರಹೊಗದೆ ಇದ್ದುದರಿಂದಾಗಿ ಕೆರೆಯು ಒಡೆದುಹೋಗುವ ಅಪಾಯದಲ್ಲಿತ್ತು. ಇದನ್ನು ಮನಗಂಡ ಊರಿನ ಯಜಮಾನ (ಮುಖ್ಯಸ್ಥ) ಡಂಗೂರವನ್ನು ಹೊಡೆಸಿ ಸಾರಿದನಂತೆ. ಅದೇನೆಂದರೆ ಕೆರೆಯ ತೂಬಿನಲ್ಲಿ ಸೇರಿಕೊಂಡಿರುವ ಹಾವನ್ನು ಕೊಂದುಹಾಕಿ ನೀರು ಹೊರಬರುವಂತೆ ಮಾಡಿದವರಿಗೆ ಬಹುಮಾನವನ್ನು ಮತ್ತು ಒಂದಿಷ್ಟು ಭೂಮಿಯನ್ನು ಕೊಡುವುದಾಗಿ ಸಾರಿದನಂತೆ. ಹೀಗೆ ಸಾರಿದಾಗ ಊರಿನ ಯಾವುದೇ ವ್ಯಕ್ತಿಗಳು ತೂಬಿನಲ್ಲಿ ಸೇರಿಕೊಂಡಿದ್ದ ಹಾವನ್ನು ಕೊಂದು ಹಾಕಲು ಯಾರು ಮುಂದೆ ಬರಲಿಲ್ಲವಂತೆ. ಅದೇ ಊರಿನಲ್ಲಿ ವಾಸವಾಗಿದ್ದ ಹರಿಜನ ಕೇರಿಯ ಯುವಕನು ಧೈರ್ಯಮಾಡಿ ಮೈಗೆಲ್ಲ ಕತ್ತಿಯನ್ನು ಕಟ್ಟಿಕೊಂಡು ಕೈಯಲ್ಲೊಂದು ಕತ್ತಿಯನ್ನು ಹಿಡಿದು ಮುಂದೆ ಬಂದು ನಿಂತನಂತೆ. ಇದನ್ನು ನೋಡಿದ ಯಜಮಾನನು ಅವನ ಕೊರಳಿಗೆ ಹೂವಿನ ಹಾರವನ್ನು ಹಾಕಿ ನೀರಿಗಿಳಿದು ಹೆಬ್ಬಾವನ್ನು ಕೊಂದು ಹಾಕಲು ಆದೇಶ ನೀಡಿದನಂತೆ. ಆಗ ಯುವಕನು ಯಜಮಾನನ ಆದೇಶದಂತೆ ನೀರಿಗಿಳಿದು ಈಜಿಕೊಂಡು ಹೋಗಿ ಕೆರೆಯ ನೀರು ಹೋಗುವ ತೂಬಿನಲ್ಲಿ ಸೇರಿಕೊಂಡಿದ್ದ ಹೆಬ್ಬಾವಿನೊಡನೆ ಸೆಣಸಾಡಿ ಅದನ್ನು ಕೊಂದು ಹಾಕಿದನಂತೆ. ಯುವಕನು ಹಾವಿನೊಡನೆ ಹೋರಾಡಿದ್ದರಿಂದ ಅವನೂ ಸಹ ಆ ಸ್ಥಳದಲ್ಲಿಯೇ ಸಾವನ್ನಪ್ಪಿದನಂತೆ. ಯುವಕನ ಕೊರಳಿಗೆ ಹಾಕಿಕೊಂಡಿದ್ದ ಹೂವಿನಹಾರದ ಚೂರುಗಳು ಕೆರೆಯ ತೂಬಿನ ಮೂಲಕ ಹೊರಗೆ ತೇಲಿಹೋದವು. ಅವು ಎಲ್ಲಿಯವರೆಗೆ ತೇಲಿಹೋದವೋ ಅಲ್ಲಿಯವರೆಗಿನ ಭೂಮಿಯನ್ನು ಅವನ ಸಂಬಂಧಿಕರಿಗೆ ಕೊಟ್ಟು, ಮಾತಿನಂತೆ ನಡೆದುಕೊಂಡನೆಂಬುದಾಗಿ ಜನರು ವಿವರಣೆಯನ್ನು ನೀಡುತ್ತಾರೆ.

ಕೆರೆಯ ತೂಬಿನೊಳಗೆ ಹೆಬ್ಬಾವು ನುಂಗಿದೆ ಎಂದಾಕ್ಷಣ ಆ ಊರಿನ ಮುಖಂಡ ತನ್ನ ಜನರಿಗಾಗಿ ತಾನು ಮುಂದೆ ನಿಂತು ಆ ಕೆಲಸವನ್ನು ಮಾಡಿಮುಗಿಸಬಹುದಿತ್ತು. ಆದರೆ ಹರಿಜನ ಎಂದರೆ ದಲಿತ ಜನಾಂಗಕ್ಕೆ ಸೇರಿದವನು ಎಂದು ಹೇಳುವಾಗ ಅವರು ಎಲ್ಲ ಮೇಲುವರ್ಗದ ಜನರು ಕುಡಿವುದಕ್ಕೂ, ಕೃಷಿಗೆ ಬಳಸುವ ನೀರನ್ನು ಅವನು ನುಂಗಿ ಮಲೀನಗೊಳಿದಂತಾಗಲಿಲ್ಲವೇ?

ರಾಮಾನುಜರು ಹರಿಜನರ ವಿಷಯದಲ್ಲಿ ಅಪಾರವಾದ ಕರುಣೆಯನ್ನು ತಾಳಿ ಅವರೆಲ್ಲರೂ ತಮ್ಮ ಧರ್ಮಬೋಧನೆಯನ್ನು ಕೇಳಲು ಅವಕಾಶ ಕೊಟ್ಟಿದ್ದರು. ಅವರಿಗೆ ವರ್ಷದಲ್ಲಿ ಕೆಲಕಾಲ ದೇವಾಲಯದ ಪ್ರವೇಶಕ್ಕೆ ಅವಕಾಶ ನೀಡಿದ್ದರೂ. ವರ್ಷದಲ್ಲಿ ಕೆಲವು ದಿನ ಮಾತ್ರ ದೇವಾಲಯದ ಪ್ರವೇಶಕ್ಕೆ ಅವಕಾಶ ಕೊಟ್ಟಿದ್ದರು. ರಾಮಾನುಜಾಚಾರ್ಯರು ಇದನ್ನು ವಿರೋದಿಸಿ ಎಲ್ಲಾ ದಿನಗಳಲ್ಲಿಯೂ ಹರಿಜನರ ಅಂದರೆ ದಲಿತರು ಶೋಷಣೆಗೆ ಒಳಗಾದವರು, ತುಳಿತಕ್ಕೆ ಒಳಗಾದವರು ಎಂದರೆ ತಪ್ಪಾಗಲಾರದು. ಎಲ್ಲಾ ದಿನಗಳಲ್ಲಿಯೂ ದೇವಾಲಯದ ಪ್ರವೇಶವನ್ನು ಕಲ್ಪಿಸಬಹುದಾಗಿತ್ತು. ಇಲ್ಲಿಯಾ ದಲಿತರನ್ನು ಅಮಾನವೀಯವಾಗಿ ಕಾಣುತ್ತಾರೆ. ಎಂಬುದನ್ನು ಗಮನಿಸಬಹುದು ಎಂಬುದು ನನ್ನ ಅಭಿಪ್ರಾಯ.

ಯಾವುದೇ ರಾಜವಂಶವು ಎಷ್ಟೇ ಪತನ ಸ್ಥಿತಿಯಲ್ಲಿ ಇದ್ದರೂ ಆ ರಾಜವಂಶದ ಅರಸರು ಅವರ ರಾಣಿಯರು, ಸೇನಾನಿಗಳು ಹಾಗೂ ಅಧಿಕಾರಿಗಳು ಕೆಲವೊಂದು ಸಂಗತಿಗಳನ್ನು ಪುಣ್ಯಕಾರ್ಯ ಇಲ್ಲವೇ ಅನಿವಾರ್ಯ ಕರ್ತವ್ಯ ಎಂದು ಮಾಡುತ್ತ ಬಂದರೂ, ಕೆಲವೊಮ್ಮೆ ಇಂಥ ಕೆಲಸಗಳು ಕೇವಲ ಮಾಮುಲು ಕ್ರಮವಾಗಿ ಆದರೂ ಆಗಿರಬಹುದು. ಅಂಥವೆಂದರೆ ಕೆರೆ, ಕಾಲುವೆ, ಮುಂತಾದ ನೀರಾವರಿ ಕ್ರಮಗಳನ್ನು ಕೈಗೊಳ್ಳುವುದು, ದೇವಾಲಯಗಳ ರಚನೆ, ಇದ್ದ ದೇವಾಲಯ ಅಥವಾ ಮಠಗಳಿಗೆ ದಾನ ನೀಡುವಿಕೆ ಹಾಗೂ ಅಗ್ರಹಾರಗಳ ಸ್ಥಾಪನೆಯ ಲಾಭ ಬಹುಮಟ್ಟಿಗೆ ಬ್ರಾಹ್ಮಣರಿಗೆ ಸಲ್ಲುವುದೆಂಬ ಮಾತು ನಿಜವೇ ಅದರೂ ಅದರೆ ಪರೋಕ್ಷ ಲಾಭ ಇತರರಿಗೂ ಆಗುತಿತ್ತು,

ಕ್ರಿ.ಪೂ ಶತಮಾನಗಳ ಇತಿಹಾಸಕ್ಕೆ ಸಂಬಂಧಿಸಿದ ಮಾಹಿತಿಗಳು ದೊರೆತಿಲ್ಲವಾದರೂ ಈ ಪ್ರದೇಶವು ಕರ್ನಾಟಕದ ಇತರ ಭಾಗಗಳಂತೆ ಶಿಲಾಯುಗದ ನಾಗರೀಕತೆಯನ್ನು ದಾಟಿ ಇತಿಹಾಸಯುಗಕ್ಕೆ ಮುಂದುವರಿದ ಅನೇಕ ಕುರುಹುಗಳು ದೊರೆತಿವೆ. ಕಾವೇರಿ ಮತ್ತು ಶಿಂಷಾನದಿಗಳ ಬಯಲಿನಲ್ಲಿ ಜನರು ನೆಲೆನಿಂತು ವ್ಯವಸಾಯ ಪಶುಪಾಲನೆಯನ್ನು ಮುಂದುವರಿಸಿಕೊಂಡು ಬಂದರು. ಮೈಸೂರು ಜಿಲ್ಲೆಯ ತಿರುಮಕೊಡಲು ನರಸೀಪುರದ ಬಳಿಯ ಹೆಮ್ಮಿಗೆಯಲ್ಲಿ ನೆಡೆದ ಪ್ರಾಚ್ಯ ಸಂಶೋಧನೆಗಳು ಮೇಲ್ಕಂಡ ಸಂಗತಿಯನ್ನು ಪುಷ್ಟೀಕರಿಸುತ್ತದೆ. ಕ್ರಿ.ಪೂ. ಶತಮಾನಗಳಲ್ಲಿ ದಕ್ಷಿಣ ಭಾರತದ ಇತರ ಭಾಗಗಳಂತೆ ಆರ್ಯರ ನಾಗರೀಕತೆಯು ಈ ಪ್ರದೇಶದಲ್ಲೂ ಪ್ರಸಾರವಾಯಿತು. ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ, ಕನ್ನಂಬಾಡಿ (ಕೃಷ್ಣರಾಜಸಾಗರ), ಮದ್ದೂರು, ಮೇಲುಕೋಟೆ, ಮಂಡ್ಯ ಮತ್ತು ಇತರ ಪಟ್ಟಣಗಳ ಸ್ಥಳ ಪುರಾಣಗಳ ಪ್ರಕಾರ ವೈದಿಕ ಯುಗದ ಉತ್ತರಾರ್ಧ ಮತ್ತು ಮಹಾಕಾವ್ಯಗಳ ಕಾಲದಲ್ಲಿ ಈ

ಪ್ರದೇಶಗಳಲ್ಲಿ ಉತ್ತರದಿಂದ ಬಂದ ಗೌತಮ, ಕದಂಬ, ಕಣ್ವ ಮಾಂಡವ್ಯ ಮೊದಲಾದ ಋಷಿಗಳು ಆಶ್ರಮಗಳನ್ನು ಸ್ಥಾಪಿಸಿಕೊಂಡಿದ್ದಾರೆಂದು ವೇದ್ಯವಾಗುತ್ತದೆ. ಇಂದಿನ ಮದ್ದೂರು ಪಟ್ಟಣಕ್ಕೆ ಆ ಕಾಲದಲ್ಲಿ **"ಅರ್ಜುನಪುರಿ"** ಎಂಬುದಾಗಿ ಹೆಸರಾಗಿತ್ತೆಂದೂ ಅರ್ಜುನನು ಕೃಷ್ಣನೊಡನೆ ಈ ಸ್ಥಳಕ್ಕೆ ಭೇಟಿ ನೀಡಿದ್ದನೆಂದೂ ಪ್ರತೀತಿ ಇದೆ. ಮೌರ್ಯ ಮತ್ತು ಶಾತವಾಹನರ ಆಳ್ವಿಕೆಯ ಕಾಲದಲ್ಲಿ ಈ ಪ್ರದೇಶದಲ್ಲಿ ಸಣ್ಣಪುಟ್ಟ ಸಾಮಂತರು ಆಳುತ್ತಿದ್ದರೆಂದು ಊಹಿಸಲಾಗಿದೆ.[೪]

ಕೆರೆ ಕಾಲುವೆಗಳಿಂದ ಒಂದು ಪ್ರದೇಶಕ್ಕೆ ನೀರಾವರಿ ಅನುಕೂಲವಾಗಿ ಅಲ್ಲಿ ಕೃಷಿಯು ಬೆಳೆಯಲಿ ಅರ್ಥಿಕ ಸಂವೃದ್ದಿಯಾಗಲಿ ಎಂಬುದರ ಬಗೆ ಯಾರು ಸಂಶಯಪಡಲಾರರು, ದೇವಾಲಯಗಳ ಸ್ಥಾಪನೆಯೂ ಜನರ ಅರ್ಥಿಕ, ಸಾಂಸ್ಕೃತಿಕ ಚಟುವಟಿಕೆಗಳಿಗೂ ಸಾಧಕವಾಗುತ್ತಿತ್ತು. ಅರ್ಚಕರು, ಅಡುಗೆಯವರು, ಪುರಾಣಿಕರು ಇವರನ್ನು ಬಿಟ್ಟರೆ ದೇವಾಲಯದ ಇತರೆ ಸೇವೆಗಳಿಗಾಗಿ ಉದಾ:– ಪಲ್ಲಕಿ ಹೊರುವವರು, ದೇವರ ಬಿರುದು ಬಾವಲಿ ಹಿಡಿಯುವವರು, ಕಸಗುಡಿಸುವವರು, ಓಲಗದವರು, ದೇವದಾಸಿಯರು, ದೇವಾಲಯದ ತೋಟ ತುಡಿಕೆ, ಕೆರೆ ದೇವಾಲಯಕ್ಕಿರುವ ಪಶುಸಂಪತ್ತು ನೋಡಿಕೊಳ್ಳುವವರು, ಹೀಗೆ ಹಲವಾರು ಊಳಿಗದವರು ಇರುತ್ತಿದ್ದರು. ಇವರಿಗೆ ದೇವಾಲಯದಿಂದ ವಾರ್ಷಿಕ ಸಂಬಳ ಇಲ್ಲವೇ ಭೂಮಿಯ ಕೊಡುಗೆ ಇರುತ್ತಿತ್ತು

ಪೇಟೆಪಟ್ಟಣಗಳಿಂದ ದೂರವಾಗಿದ್ದರೂ ಒಂದು ದೂರದ ಹಳ್ಳಿಯಲ್ಲಿರುವ ದೇವಾಲಯವು ಸಕಲ ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವಾಗುತ್ತಿತ್ತು. (ನಮ್ಮ ನಾಡಿನ ಒಬ್ಬ ಗಣ್ಯ ಸಂಗೀತಗಾರ ಒಂದು ದೇವಾಲಯದ ಓಲಗದವರಪುತ್ರ, ಒಬ್ಬ ಅಗ್ರಗಣ್ಯ, ಪಿಟೀಲುವಾದಕ, ಒಬ್ಬ ದೇವದಾಸಿಯ ಮಗ ಭಾರತದ ಅಗ್ರಗಣ್ಯ, ಹಿನ್ನೆಲೆಗಾಯಕಿಯೊಬ್ಬಳು ಗೋವೆಯ ಒಂದು ದೇವಾಲಯದ ಕಲಾವಿದರ ಕುಟುಂಬದವರು ಎಂಬ ಅಂಶ ಇಲ್ಲಿ ಜ್ಞಾಪಿಸಬೇಕಾದದ್ದು) ಇಂದಿಗೂ ಅವಶೇಷದ ರೂಪದಲ್ಲಿ ಈ ಸಾಂಸ್ಕೃತಿಕ ಚಟುವಟಿಕೆಗಳು ದೇವಾಲಯಗಳಲ್ಲಿ ಸಾಗಿವೆ. ದೇವಾಲಯದ ಪರಿಸರದಲ್ಲಿ ಈ ಚಟುವಟಿಕೆಗಳು ಲುಪ್ತವಾದರೂ ಈ ಪರಂಪರೆಗೆ ಸೇರಿದ ಜನರ ವಂಶಜರು ನಾಡಿನ ಉದ್ದಗಲಕ್ಕೂ ಚದುರಿ ಹೋಗಿ ಅಲ್ಲಲ್ಲಿ, ಒಂದಲ್ಲ ಒಂದು ರೂಪದಲ್ಲಿ ಈ ಚಟುವಟಿಕೆಗಳನ್ನು ಪರೋಕ್ಷವಾಗಿ ಸಾಗಿಸಿದ್ದಾರೆ.

ಅಗ್ರಾಹಾರಗಳು ಬ್ರಾಹ್ಮಣರಿಗೆ ನೀಡಿದ ಭೂದಾನಗಳಾದರೂ ಅಗ್ರಹಾರವಿದ್ದ ಸ್ಥಳಗಳಲ್ಲಿ ಬುದ್ದಿ ಜೀವಿಗಳಾದ ಜನ ಕೃಷಿ ನೀರಾವರಿಗಳ ಅಭಿವೃದ್ಧಿಗಾಗಿ ಶ್ರಮಿಸಿದ್ದು ಕಾಣಬರುತ್ತದೆ. ಸ್ವತಃ ಕೃಷಿಯನ್ನು ಮಾಡದಿದ್ದರೂ ಅನೇಕ ಬಾರಿ ಸಾಗುವಳಿ ಆಗದ ಬರಡು ನೆಲವನ್ನು ಪಡೆದು

ಅವುಗಳ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಅನೇಕ ಬಾರಿ ಅಗ್ರಹಾರಗಳ ಸ್ಥಾಪನೆ ಕೃಷಿಯ ವಿಸ್ತರಣೆಯ ಉದ್ದೇಶದಿಂದಲೇ ಆಗುತ್ತಿತ್ತು. ಕೆಲವು ಗ್ರಾಮಗಳ ಪರಿಸರದಲ್ಲಿ (೫ ಅಥವಾ ೬ ಗ್ರಾಮದ ಗುಂಪಿಗೆ ಒಂದರಂತೆ) ಇದ್ದಂಥ ಅಗ್ರಹಾರಗಳು ಕೇವಲ ಧಾರ್ಮಿಕ ಸಾಹಿತ್ಯದ ಆಧ್ಯಯನಕ್ಕೆ ಮೀಸಲಾಗಿರದೆ, ವೈಜ್ಞಾನಿಕ ಅಧ್ಯಯನ ಕೇಂದ್ರಗಳು ಅಗಿದ್ದವು. ಕೃಷಿಗೆ ಸಂಬಂದಪಟ್ಟ ಜ್ಞಾನವಷ್ಟೇ ಅಲ್ಲ ನೀರಾವರಿ, ವಾಸ್ತುಶಿಲ್ಪ, ಕುಶಲಕರ್ಮಗಳು ಇವುಗಳಿಗೆ ಸಂಬಂಧಿಸಿದ **ಲೋಕೋಪಕಾರ** (ಕ್ಷೇಮೇಂದ್ರನ ಸಂಸ್ಕೃತ ಕೃತಿ) 'ಬೃಹತ ಸಂಹಿತಾ'ದಂಥ ಕೃತಿಗಳ ಅಧ್ಯುನ ಮಾಡಿದವರಾಗಿದ್ದೂ ಲೌಕಿಕ ವಿದ್ಯೆಗಳಿಗೂ ಅಗ್ರಹಾರದ ವಿದ್ವಾಂಸರು ಮಾರ್ಗದರ್ಶಕರಾಗಿದ್ದರು. ಇಂದಿಗೂ ಹಳ್ಳಿಯ ಜ್ಯೋತಿಷಿಯ ಬಳಿ ಮಳೆ ನಕ್ಷತ್ರವನ್ನು ವಿಚಾರಿಸುವ ಪರಿಪಾಠ ರೈತರಲ್ಲಿ ಇದೆ. ಹಿಂದಿನವರ ತಾಂತ್ರಿಕ ಮಾರ್ಗದರ್ಶನ ಇಂದು ಇಷ್ಟಕ್ಕಾದರೂ ಸೀಮಿತವಾಗಿ ಉಳಿದಿದೆ. ಬಾವಿ ತೋಡಲು ಶಾಸ್ತ್ರಾಧಾರದಿಂದ ಮಾರ್ಗದರ್ಶನ ಮಾಡುವ ಕೆಲವು ವಿದ್ವಾಂಸರು ಇಲ್ಲಿ ಉಳಿದಿದ್ದಾರೆ. ವಿದ್ಯೆಯ ಅಧ್ಯಯನ ಕೇವಲ ಪಾರಂಪರಿಕವಾಗಿ ಅಗ್ರಹಾರದಲ್ಲಿ ಉಳಿಯಬೇಕಾದ ಕಾರಣದಿಂದ ಹಾಗೂ ಇತರ ಅನೇಕ ಕಾರಣಗಳಿಂದ ಈ ವ್ಯವಸ್ಥೆ ಅವದೆಸೆಗೆ ಇಳಿದುದು ನಿಜವಾದರೂ ಒಂದು ವಿಶಿಷ್ಟ ಸದುದ್ದೇಶದಿಂದ ಸ್ಥಾಪನೆಗೊಂಡ ಈ ಅಗ್ರಹಾರಗಳ ವಿದ್ವಾಂಸರ ವಂಶಜರು ಇಂದು ಹಲವು ಕ್ಷೇತ್ರಗಳಲ್ಲಿ (ಆಡಳಿತ, ಶಿಕ್ಷಣ, ತಾಂತ್ರಿಕ ವಿದ್ಯೆ ಇತ್ಯಾದಿ) ಪರಿಣಿತರಾಗಿ ಮುಂದೆ ಬಂದರೆಂಬ ಐತಿಹಾಸಿಕ ಸತ್ಯವನ್ನು ಕಡೆಗಣಿಸಲಾಗದು, ಇದೆ ರೀತಿಯ ಶಿವಪುರಗಳೆಂಬ ವ್ಯವಸ್ಥೆಗಳೂ ಆಕಾಲದಲ್ಲಿ ಸ್ಥಾಪನೆಗೊಂಡಿದ್ದವು[೫]

ಆಗ ಸ್ಥಾಪನೆಗೊಂಡ ಅಥವಾ ರಾಜರಿಂದ ದತ್ತಿದಾನ ಪಡೆದು ಅಭಿವೃದ್ಧಿ ಹೊಂದಿದ ಅನೇಕ ಧಾರ್ಮಿಕ ಕ್ಷೇತ್ರಗಳೂ, ಮಠಗಳೂ ಇಂದಿಗೂ ಜೀವಂತ ಸಾಂಸ್ಕೃತಿಕ ಪ್ರವಾಹಕ್ಕೆ ದಾರಿ ಮಾಡಿಕೊಟ್ಟಿವೆ. ಆದಿಚುಂಚನಗಿರಿಯ ನಾಥಪಂಥದ ಭೈರವನ ಆರಾಧನೆಯು ಗಣ್ಯ ಕೇಂದ್ರವಾಗಿದ್ದು, ಅಲ್ಲಿನ ಸೇವಕರಾಗಿದ್ದ ಜೋಗಿಗಳು ಜನರ ಧಾರ್ಮಿಕ, ಸಾಂಸ್ಕೃತಿಕ ಜೀವನದ ಮೇಲೆ ಬೀರಿದ ಪ್ರಭಾವ ಉಲ್ಲೆಖನೀಯ, ಅದೇರೀತಿ ಮಳವಳ್ಳಿ ಬಳಿಯ ಬೋಪ್ಪೇಗೌಡನಪುರದ ಮಂಟೇಸ್ವಾಮಿ ಪಂಥದ ಅನುಯಾಯಿಗಳು ಹಾಗೂ ಬೆಳ್ಳೂರಿನ ಮೈಲಾರಲಿಂಗ ದೇವರ ಭಕ್ತರಾದ ಗೊರವರು ನಾಡಿನ ಸಾಂಸ್ಕೃತಿಕ ಜೀವನದ ಮೇಲೆ ತಮ್ಮದೇ ಪ್ರಭಾವ ಬೀರಿದವರು. ಶ್ರೀ ವೈಷ್ಣವಪಂಥದವರ ಮೇಲೆ ಮೇಲುಕೋಟೆ, ಶ್ರೀರಂಗಪಟ್ಟಣಗಳ ಪ್ರಭಾವ ಸಣ್ಣದಲ್ಲ, ಸಾವಿರಾರು ಒಕ್ಕಲಿಗ ಕುಟುಂಬಗಳು ಈ ದೇವರ ಒಕ್ಕಲಾಗಿದ್ದಾರೆ.

ತಲಕಾಡಿನ ಗಂಗರು:–

ಮಂಡ್ಯ ಜಿಲ್ಲೆಯ ಪ್ರದೇಶವು ಗಂಗ, ಹೊಯ್ಸಳ ಮತ್ತು ಮೈಸೂರು ಅರಸರ ರಾಜ್ಯಗಳ ತಿರುಳು ನಾಡಾಗಿತ್ತು. ರಾಜಧಾನಿಯ ಪ್ರದೇಶವು ತಿರುಳುನಾಡು (ಕೋರ್‌ಕಂಟ್ರಿ) ಎನಿಸಿ, ರಾಜರ ಅವರ ಗಣ್ಯ ಅಧಿಕಾರಿಗಳ ವಿಶೇಷ ಕೃಪಾಕಟಾಕ್ಷಕ್ಕೆ ಪಾತ್ರವಾಗಿ ಮೇಲೆ ಹೇಳಿದ ನೀರಾವರಿ ವ್ಯವಸ್ಥೆ, ದೇವಾಲಯ ಹಾಗೂ ಅಗ್ರಹಾರಗಳ ರಚನೆಗಳ ವಿಚಾರದಲ್ಲಿ ಹೆಚ್ಚಿನ ಅವಕಾಶಗಳನ್ನು ಪಡೆಯುವಂತೆ ಆಯಿತು. ಮೂರು ಗಣ್ಯ ರಾಜವಂಶಗಳ ವಿಶೇಷ ಗಮನಕ್ಕೆ ಅವಕಾಶ ಪಡೆದ ಪ್ರದೇಶಗಳು ಕರ್ನಾಟಕದಲ್ಲಿ ಬಹಳವಿಲ್ಲ. ಅದರಲ್ಲೂ ಗಂಗರು ೪ ರಿಂದ ೧೦ ನೇ ಶತಮಾನದವರೆಗೆ, ಹೊಯ್ಸಳರು ೧೧ ರಿಂದ ೧೪ ನೇ ಶತಮಾನದವರೆಗೆ ಹಾಗೂ ಮೈಸೂರಿನ ಅರಸರು ೧೬ ರಿಂದ ೨೦ ನೇ ಶತಮಾನದವರೆಗೆ ಈ ಪ್ರದೇಶದಲ್ಲಿ ಅಳಿದವರಾಗಿ ಇಷ್ಟು ದೀರ್ಘಕಾಲ ರಾಜರ ಕೃಪಕಟಾಕ್ಷಕ್ಕೆ ಒಳಗಾದ ಪುಣ್ಯ ಇತರ ಜಿಲ್ಲೆಗಳಿಗೆ ಇಲ್ಲ ಹೀಗಾಗಿ ಅಯಾ ರಾಜವಂಶಗಳಿಂದ ಈ ಜಿಲ್ಲೆಯು ವಿಶೇಷ ಸವಲತ್ತು ಪಡೆಯುವಲ್ಲಿ ಅಗ್ರಗಣ್ಯವಾಗಿದೆ.

ಇದಲ್ಲದೆ ಚೋಳ, ವಿಜಯನಗರ, ವಿಜಯನಗರದ ಪಾಳೆಯಗಾರರ ವಂಶಗಳೂ ಇಲ್ಲಿ ಸಾಕಷ್ಟು ಪ್ರಗತಿ ಕಾರ್ಯಗಳಾಗಲು ಮಾಡಿದ ವಿಚಾರ ಇಲ್ಲಿನ ದಾಖಲೆಗಳಿಂದ ಸ್ಪಷ್ಟವಾಗುತ್ತದೆ. ಕರ್ನಾಟಕದಲ್ಲಿ ಮಂಡ್ಯ ಹಾಗೂ ಮೈಸೂರು ಜಿಲ್ಲೆಗಳು ವಿಧ್ವಂಸಕಾರೀ ದಂಡ ಯಾತ್ರೆಗಳಿಂದ ಇತರ ಜಿಲ್ಲೆಗಳಿಗಿಂತ ಹೆಚ್ಚು ಮುಕ್ತವಾಗಿದ್ದುದರಿಂದ ಇಲ್ಲಿನ ದೇವಾಲಯಗಳು ಅದಕ್ಕೂ ಹೆಚ್ಚಾಗಿ ಈ ದೇವಾಲಯಗಳ ಪರಿಸರದಲ್ಲಿ ಇರುವ ಶಾಸನಗಳು ವಿಪುಲ ಸಂಖ್ಯೆಯಲ್ಲಿ ಉಳಿದು ಬಂದಿರುವುದನ್ನು ಕಾಣಬಹುದು.[೬]

ಕ್ರಿ.ಶ. ೪ ನೇ ಶತಮಾನದ ಪ್ರಾರಂಭದಲ್ಲಿ ತಲಕಾಡಿನ ಗಂಗ ರಾಜ್ಯವು ಸ್ಥಾಪನೆಯಾಯಿತು. ಗಂಗ ಮನೆತನದ ಪ್ರಭುಗಳು ಕ್ರಿ.ಶ.೧೧ನೇ ಶತಮಾನದ ಪ್ರಾರಂಭದವರೆಗೂ ಗಂಗವಾಡಿ ೯೬೦೦೦ ಎಂದು ಪ್ರಸಿದ್ಧವಾಗಿದ್ದ ಕನ್ನಡ ನಾಡಿನ ದಕ್ಷಿಣ ಭಾಗವನ್ನು ವಿಚಕ್ಷಣತೆಯಿಂದ ಆಳಿದರು. ಏಳು ಶತಮಾನದ ದೀರ್ಘ ಆಳ್ವಿಕೆಯ ಕಾಲದಲ್ಲಿ ಈ ಸಂತತಿಯ ಸುಮಾರು ಮೂವತ್ತು ಮಂದಿ ರಾಜರು ಕ್ರಮವಾಗಿ ಆಳ್ವಿಕೆ ನಡೆಸಿದರು. ಇವರಲ್ಲಿ ಮಾಧವ, ಹರಿವರ್ಮ, ಅವನೀತ, ದುರ್ವಿನೀತ, ಭೂವಿಕ್ರಮ, ಮುತ್ತರಸ, ಶ್ರೀಪುರುಷ, ಶಿವಮಾರ, ರಾಜಮಲ್ಲ, ಭೂತುಗ, ಮತ್ತು ಮಾರಸಿಂಹ ಮೊದಲಾದವರು ಅತ್ಯಂತ ಪ್ರಖ್ಯಾತರು. ಮಂಡ್ಯ ಪ್ರದೇಶವು ಸರಿಸುಮಾರಾಗಿ ಗಂಗ ರಾಜ್ಯದ ಕೇಂದ್ರ ಪ್ರಾಂತ್ಯವಾಗಿತ್ತು. ಮದ್ದೂರು ಮತ್ತು ಸುತ್ತಮುತ್ತಲ ಪ್ರದೇಶಕ್ಕೆ

ಚಿಕ್ಕಗಂಗವಾಡಿ ಎಂಬ ಹೆಸರಿತ್ತು. "ಪರಾಕ್ರಮಿಗಳು ಆಡಳಿತನಿಪುಣರೂ ಮತ್ತು ಪ್ರಜಾಭ್ಯುದಯಾಕಾಂಕ್ಷಿಗಳೂ ಆದ ಗಂಗರ ಆಳ್ವಿಕೆಯಲ್ಲಿ ಅವರ ರಾಜ್ಯವು ಸುಭೀಕ್ಷದಿಂದ ಕೂಡಿದ್ದು ಅವರ ರಾಜ್ಯಕ್ಕೆ **'ಸಿರಿರಾಜ್ಯ'** ಎಂಬ ಹೆಸರೂ ಇದ್ದಿತು ದಕ್ಷಿಣ ರಾಜ್ಯ ಸಂರಕ್ಷಣ ದಕ್ಷರೆಂದು ಬಿರುದು ಹೊಂದಿದ್ದ ಗಂಗ ಪ್ರಭುಗಳು ತಮ್ಮ ರಾಜ್ಯದಲ್ಲಿ ದೇವಾಲಯಗಳನ್ನು ನೀರಾವರಿ ಕಾಲುವೆಗಳನ್ನೂ ಕೆರೆಕಟ್ಟೆಗಳನ್ನೂ ಕಟ್ಟಿಸಿದ್ದರು". ಮಂಡ್ಯ ಜಿಲ್ಲೆಯಲ್ಲಿ ಅವರ ಕಾಲದ ಅನೇಕ ಶಾಸನಗಳು ದೊರೆತಿವೆ. ಒಂದು ಶಾಸನವು ಈಜಿಲ್ಲೆಯ ನದಿಯೊಂದಕ್ಕೆ ಗಂಗ ರಾಜನೊಬ್ಬನ ಕಟ್ಟಿಸಿದ ಸೇತುವೆಯನ್ನು ಉಲ್ಲೇಖಿಸುತ್ತದೆ. ಗಂಗರ ಆಡಳಿತವನ್ನು ಗಮನಿಸಿದಾಗ ಅವರ ಕಾಲದ ಸುಮಾರು ೨೦ ಶಾಸನಗಳು ಈ ಜಿಲ್ಲೆಯಲ್ಲಿ ದೊರೆತಿವೆ.

ಮಂಡ್ಯ ಜಿಲ್ಲೆಯ, ಮದ್ದೂರು ತಾಲ್ಲೂಕಿನ, ಚಿಕ್ಕಗಂಗವಾಡಿ ನಾಡು ಎಂಬ ಪ್ರಾಚೀನ ಆಡಳಿತವಿಭಾಗ, ಗಂಗವಾಡಿ, ಚಿಕ್ಕಗಂಗವಾಡಿ, ದೊಡ್ಡಗಂಗವಾಡಿ, ಗಂಗಸಮುದ್ರ, ಗಂಗಸಂಧ್ರ, ಗಂಗನಹಳ್ಳಿ ಎಂಬ ಅನೇಕ ಊರುಗಳು ನಾಗಮಂಗಲ ತಾಲ್ಲೂಕಿನಲ್ಲಿವೆ. ಈ ಪ್ರದೇಶದಲ್ಲಿ ಗಂಗರು ಕ್ರಿ.ಶ.೬೫೦ ರಿಂದ ೯೮೦ ರವರೆಗೆ ಆಡಳಿತ ನಡೆಸಿದ್ದರ ಬಗ್ಗೆ ಶಾಸನಗಳು ದೊರಕಿವೆ. ಶ್ರೀರಂಗಪಟ್ಟಣ, ಮೇಲುಕೋಟೆ ಸ್ಥಳಗಳು ಗಂಗರ ಕಾಲದಲ್ಲೇ ಪ್ರಸಿದ್ದ ಧಾರ್ಮಿಕ ಕ್ಷೇತ್ರಗಳಾಗಿದ್ದವು. ಕ್ರಿ.ಶ.೯.ನೇ.ಶತಮಾನದ ಮಧ್ಯಭಾಗದವರೆಗೂ ಆಳಿದ ಗಂಗರಾಜರು ಹಿಂದೂಮತಾವಲಂಬಿಗಳಾಗಿದ್ದು, ಅನೇಕ ಸ್ಥಳಗಳಲ್ಲಿ ದೇವಾಲಯಗಳನ್ನು ಕಟ್ಟಿಸಿದರು. ಆದರೆ ಅವರ ಕಾಲದಲ್ಲಿ ಕಟ್ಟಲಾದ ದೇವಾಲಯಗಳು ಶಿಥಿಲಗೊಂಡು ಅನಂತರ ರಾಜವಂಶಗಳ ಕಾಲದಲ್ಲಿ ಪುನರ್ ನಿರ್ಮಾಣಗೊಂಡವು. ಶ್ರೀರಂಗಪಟ್ಟಣದ ಶ್ರೀರಂಗನಾಥ ದೇವಾಲಯವನ್ನು ಕ್ರಿ.ಶ. ೮೯೪ ರಲ್ಲಿ ತಿರುಮಲಯ್ಯನೆಂಬ ಗಂಗ ಅಧಿಕಾರಿ ಕಟ್ಟಿಸಿದ ವಿಚಾರ ತಿಳಿಯುತ್ತದೆ. ಶ್ರವಣಬೆಳಗೊಳದ ಬಳಿಯ ಕಂಬದಹಳ್ಳಿಯ ಪ್ರಸಿದ್ದ ಪಂಚಕೂಟ ಬಸದಿಯು ಕ್ರಿ.ಶ ಸುಮಾರು ೯೦೦ ರ ಸುಮಾರಿಗೆ ರಚನೆಯಾಯಿತು. ಅದೇ ರೀತಿ ಮದ್ದೂರಿನ ದೇವೇಶ್ವರ ದೇವಾಲಯ (ಶಿವಾಲಯ) ಕೂಡ ಕ್ರಿ.ಶ. ಸುಮಾರು ೯೦೦ರ ಕಾಲದ ಗಂಗರ ರಚನೆಯೆಂದು ಅಭಿಪ್ರಾಯವಿದೆ. ಇದಲ್ಲದೆ ಪಾಂಡವಪುರ ತಾಲ್ಲೂಕು ಕ್ಯಾತನಹಳ್ಳಿಯ ಕೆಲವು ಬಸದಿಯು ಗಂಗರ ಕಾಲದ್ದೇ ಆಗಿದೆ, ಚಾಗಿಪೆರ್ಮ್ಮಾನಡಿ ಎಂಬಾತನು ಕಟ್ಟಿದ ಈ ಬಸದಿಗೆ ಗಂಗ ಸತ್ಯವಾಕ್ಯ ಪೆರ್ಮಾನಡಿ ಹಾಗೂ ಎರೆಯಪ್ಪರಸರು ದಾನ ನೀಡಿದ ವಿಚಾರವು ಇದಕ್ಕೆ ಸಂಬಂಧಿಸಿದ ಶಾಸನದಿಂದ ತಿಳಿಯುತ್ತದೆ. ದೇವರಹಳ್ಳಿ ತಾಮ್ರಶಾಸನವು ೭೭೬-೭೭ ರ ಸುಮಾರಿಗೆ ರಚನೆಯಾದ ಬಸದಿಯೊಂದನ್ನು ಉಲ್ಲೇಖಿಸುತ್ತದೆ. [೭]

[illegible]

ನಾಗಮಂಗಲ ತಾಲ್ಲೂಕು ಅರಣಿಯಲ್ಲಿ ಗಂಗಮಂತ್ರಿ ಮಾಬಲಯ್ಯನು ತಾನು ಕಟ್ಟಿಸಿರಬಹುದಾದ ಒಂದುಕೆರೆಗೆ ಅದರ ದುರಸ್ತಿಗಾಗಿ (ಸುಸ್ಥಿತಿಯನ್ನು ನೋಡಿಕೊಳ್ಳಲಿಕ್ಕಾಗಿ) **'ಬಿತ್ತುವಟ್ಟ'** ಭೂಮಿಯನ್ನು ಸುಮಾರು ೯೭೨ ರಲ್ಲಿ ಬಿಟ್ಟಿದ್ದನು. ಮಂಡ್ಯ ತಾಲ್ಲೂಕಿನ ಬೇಲೂರಿನಲ್ಲಿ ಕೆರೆಯೊಂದನ್ನು ಒಬ್ಬ ಗಂಗ ಅಧಿಕಾರಿ (ಪೆರ್ಗಡೆ ಬಾಸಣಯ್ಯ) ಕಟ್ಟಿಸಿ ತೂಬನ್ನು ಹಾಕಿಸಿದ್ದ ವಿಚಾರ ೯೯೭ ಶಾಸನದಲ್ಲಿ ಬಂದಿದೆ. ಮದ್ದೂರು ತಾಲ್ಲೂಕು ವೈದ್ಯನಾಥಪುರದ ದೇವಾಲಯವೂ ಗಂಗರ ಕಾಲದ ರಚನೆಯಾಗಿದ್ದು, ಅದಕ್ಕೆ ಗಂಗ ಶಿವಮಾರನು ಹಲಗೂರು ಗ್ರಾಮವನ್ನು ದಾನವಾಗಿ ಕೊಟ್ಟಿದ್ದನು. ಗಂಗರ ಕಾಲದಲ್ಲೇ ಹಲಗೂರಿನಲ್ಲಿ ಗಂಗ ನೀತಿಮಾರ್ಗನ ಕಾಲದಲ್ಲಿ (ಸುಮಾರು ೯ನೇ ಶತಮಾನ) ನೀರಾವರಿ ವ್ಯವಸ್ಥೆಯನ್ನು ಸುಧಾರಿಸಲು (ಭತ್ತದ ಗದ್ದೆಗಳಾಗಿ ಪರಿವರ್ತಿಸಲು) ಮಾಡಲಾದ ಪ್ರಯತ್ನವನ್ನು ಶಾಸನವೊಂದು ಸೂಚಿಸುತ್ತದೆ. ಶ್ರೀ ಪುರುಷನ ಕಾಲದಲ್ಲಿ ಮಳವಳ್ಳಿ ತಾಲ್ಲೂಕು ಪುರಿಗಾಲಿಯಲ್ಲಿ ಬಂದು ಕೆರೆಯನ್ನು ಗ್ರಾಮಸಭೆ ಕಟ್ಟಿಸಿತು.

ಶ್ರೀರಂಗಪಟ್ಟಣ ಮೇಲುಕೋಟೆ ಮೊದಲಾದ ಸ್ಥಳಗಳು ಗಂಗರ ಕಾಲದಲ್ಲೇ ಪ್ರಸಿದ್ಧ ಧಾರ್ಮಿಕ ಕ್ಷೇತ್ರಗಳಾಗಿದ್ದವು. ಕ್ರಿ.ಶ ೯ನೇ ಶತಮಾನದ ಮಧ್ಯಭಾಗದವರೆಗೂ ಆಳಿದ ಗಂಗರಾಜರು ಹಿಂದೂ ಮತಾವಲಂಬಿಗಳಾಗಿದ್ದು ಅನೇಕ ಸ್ಥಳಗಳಲ್ಲಿ ದೇವಾಲಯಗಳನ್ನು ಕಟ್ಟಿದರು. ಆದರೆ ಅವರ ಕಾಲದಲ್ಲಿ ಕಟ್ಟಲಾದ ದೇವಾಲಯಗಳು ಶಿಥಿಲಗೊಂಡು ಆನಂತರ ರಾಜವಂಶಗಳ ಕಾಲದಲ್ಲಿ ಪುನರ್ ನಿರ್ಮಾಣಗೊಂಡವು. ಶ್ರೀರಂಗನಾಥಸ್ವಾಮಿ ಮತ್ತು ಜನಾರ್ಧನ ದೇವಾಲಯಗಳು ಮೂಲತಃ ೯ನೇ ಶತಮಾನದಲ್ಲಿ ಗಂಗರ ದಳಪತಿಯೊಬ್ಬನಾದ ತಿರುಮಲದಂಡನಾಯಕನಿಂದ ಕಟ್ಟಲ್ಪಟ್ಟಿದ್ದು ಆನಂತರ ವಿಕಾಸಗೊಂಡವು.

ಶ್ರೀರಂಗಪಟ್ಟಣ ರಾಮಪುರದಲ್ಲಿ ಕಾವೇರಿನದಿಗೆ ಅಡ್ಡಗಟ್ಟೆ ಕಟ್ಟಿದ (ಕಟ್ಟಂ ಕಟ್ಟುವುದರ್ಕೆ) ಕೇಸಿಗ ಎಂಬುವವನಿಗೆ ನೀಡಲಾದ ಕೆಲವು ತೆರಿಗೆ ರಿಯಾಯಿತಿಗಳು ೯೦೪-೫ರ ಒಂದು ಗಂಗ ಶಾಸನದಲ್ಲಿ ಉಲ್ಲೇಖಿತವಾಗಿವೆ. ಹುಳ್ಳೇನಹಳ್ಳಿ ತಾಮ್ರಪಟವು ಶ್ರೀಪುರುಷನ ಕಾಲದಲ್ಲಿ ಮೂವರು ವಿದ್ವಾಂಸರಿಗೆ ಭೂ ದಾನ ನೀಡಿದ ವಿಚಾರವನ್ನು ಹಳ್ಳಿಗೆರೆ ತಾಮ್ರಪಟವು ಶಿವಮಾರ-೧ನೇ ಕಾಲದಲ್ಲಿ ಕೆರಗೋಡಿನಲ್ಲಿ ಅಗ್ರಹಾರ ಸ್ಥಾಪಿಸಿ ೬೬ ಬ್ರಾಹ್ಮಣರಿಗೆ ವೃತ್ತಿಗಳನ್ನು ನೀಡಿದ ವಿಚಾರವನ್ನು ತಿಳಿಸುತ್ತದೆ. ಜಿಲ್ಲೆಯಲ್ಲಿ ಇರುವ ಕೆಲವು ಗಂಗರ ವೀರಗಲ್ಲುಗಳು ವೀರ ವಂಶಜರಿಗೆ ನೀಡಿದ್ದ ಭೂಮಿಯ ವಿಚಾರ ತಿಳಿಸುತ್ತದೆ. ತಕ್ಕೋಳಂನಲ್ಲಿ ಆದ ಪ್ರಸಿದ್ದ ಚೋಳ ರಾಷ್ಟ್ರಕೂಟ ಯುದ್ದದಲ್ಲಿ ಗಂಗರು ನೀಡಿದ ನೆರವಿನ ಖ್ಯಾತ ಆತಗೂರು ಶಾಸನದಲ್ಲಿ ಇದೆ.

[illegible]

ರಾಷ್ಟ್ರಕೂಟರ ಸಹಾಯಕ್ಕೆ ಧಾವಿಸಿದ ಗಂಗ ಪ್ರಭು ಇಮ್ಮಡಿ ಭೂತುಗನು ಚೋಳ ರಾಜ್ಯವನ್ನು ಮುತ್ತಿ ಪರಾಕ್ರಮದಿಂದ ಹೋರಾಡಿ ತಕ್ಕೋಲಂ ಎಂಬ ಯುದ್ಧದಲ್ಲಿ ಚೋಳ ಪರಾಂತಕನ ಸೈನ್ಯವನ್ನು ಸೋಲಿಸಿದುದಲ್ಲದೆ ಅವನ ಹಿರಿಯ ಮಗನಾದ ರಾಜಾದಿತ್ಯನನ್ನು ಯುದ್ಧದಲ್ಲಿ ಕೊಂದು ಕೋದಂಡರಾಮ ಎಂಬ ಬಿರುದನ್ನು ಧರಿಸಿದನು. ಭೂತುಗನು ನಂತರ ನಾಲ್ಕನೇ ರಾಜಮಲ್ಲ ಮತ್ತು ರಕ್ಕಸ ಗಂಗರು ಆಳಿದರು. ರಾಜಮಲ್ಲನ ಮಂತ್ರಿಯಾದ ಚಾವುಂಡರಾಯನು ಅನೇಕ ಜೈನಬಸದಿಗಳನ್ನೂ ಗಂಗಾವಾಡಿಯಲ್ಲಿ ಕಟ್ಟಿಸಿದುದಲ್ಲದೆ ಶ್ರವಣಬೆಳಗೊಳದ ಬೃಹತ್ ಗೊಮ್ಮಟ ವಿಗ್ರಹವನ್ನು ಕೆತ್ತಿಸಿದನು. ರಕ್ಕಸ ಗಂಗನ ಆಳ್ವಿಕೆಯ ಕಾಲದಲ್ಲಿ ತಮಿಳುನಾಡಿನ ಚೋಳರು ಪ್ರಬಲವಾಗಿ ಗಂಗವಾಡಿಯಲ್ಲಿ ಕ್ರಿ.ಶ.೧೪೦೦ರಲ್ಲಿ ಆಕ್ರಮಿಸಿದರು. ಗಂಗವಾಡಿಯು ಚೋಳರ ವಶವಾದರೂ ರಕ್ಕಸ ಗಂಗನು ೧೦೨೪ರ ವರೆಗೂ ಅಧೀನ ರಾಜನಾಗಿ ಅಳುತ್ತಿದ್ದನೆಂದು ಮಂಡ್ಯ ತಾಲ್ಲೂಕಿನ ಹಳೇಬೂದನೂರಿನಲ್ಲಿ ದೊರೆತಿರುವ ಅವನ ಶಾಸನವೊಂದರಿಂದ ತಿಳಿದುಬರುತ್ತದೆ. ಏಳೂವರೆ ಶತಮಾನಗಳ ಕಾಲ ಮಂಡ್ಯ ಜಿಲ್ಲೆಯು ಗಂಗವಾಡಿಯ ಭಾಗವಾಗಿತ್ತು. ಗಂಗ ಮನೆತನವು ಆಳಿದಾಗ್ಯೂ ಅವರ ಆಳ್ವಿಕೆಯನ್ನು ಸಾರುವ ಸ್ಮಾರಕಗಳು ಮತ್ತು ಆ ಕಾಲದ ಹಲವು ಉನ್ನತ ಸಾಮಾಜಿಕ ಸಾಹಿತ್ಯಿಕ ಪದ್ಧತಿಗಳು ಉಳಿದು ಬಂದಿವೆ. ಅವರ ಕಾಲದಲ್ಲಿ ಸ್ಥಾಪನೆಯಾದ ಅನೇಕ ಗ್ರಾಮಗಳು ಚಿಕ್ಕ ಗಂಗವಾಡಿ ಮತ್ತು ದೊಡ್ಡಗಂಗವಾಡಿ ಎಂಬ ಹೆಸರಿನಿಂದ ಇಂದಿಗೂ ಇವೆ. ಗಂಗ ರಾಜ ವಂಶದ ಹಾಗೂ ಗಂಗವಾಡಿಯ ಮೂಲದಿಂದಲೇ ಒಕ್ಕಲಿಗರ ಗಂಗಡಿಕಾರ ಪಂಗಡವು ಪ್ರಚಲಿತಕ್ಕೆ ಬಂದಿತೆಂದು ವಿದ್ವಾಂಸರು ಅನುಮೋದಿಸಿದ್ದಾರೆ. ಗಂಗರ ಮುಖ್ಯ ಸಂತತಿಯು ಆಳಿದ ಮೇಲೆ ಗಂಗವಾಡಿಯ ಮೇಲೆ ಚೋಳರ ಆಳ್ವಿಕೆಯು ಕ್ರಿ.ಶ.೧೧೧೪ ರವರೆಗೂ ಮುಂದುವರಿಯಿತು. ಮಂಡ್ಯ ಜಿಲ್ಲೆಯೂ ಸಹ ಚೋಳರ ಆಳ್ವಿಕೆಗೊಳಪಟ್ಟಿತ್ತು.

ಚೋಳರು:-

ಗಂಗರ ನಂತರ ಒಂದು ಶತಮಾನಕ್ಕೂ ದೀರ್ಘಕಾಲ ಆಳಿದ ಚೋಳರ ಕೇವಲ ಕೆಲವೇ ಶಾಸನಗಳು ಈ ಜಿಲ್ಲೆಯಲ್ಲಿ ದೊರೆಕಿವೆ. ಹಳೇಬೂದನೂರು ಶಾಸನದಲ್ಲಿ ರಕ್ಕಸಗಂಗನು ೧೦೦೪ ರಲ್ಲಿ ಚೋಳ ರಾಜೇಂದ್ರನ ಮಾಂಡಲಿಕನಾಗಿದ್ದನೆಂದು ಹೇಳಿದೆ. ಆಗ ಮಂಡ್ಯವು ಚೋಳರ ಮುಡಿಗೊಂಡ ಚೋಳ ಮಂಡಲಕ್ಕೆ ಸೇರಿದ್ದು ಅದರ ಭಾಗವಾದ ರಾಜೇಂದ್ರ ಚೋಳ ಒಳನಾಡಲ್ಲಿ ಇತ್ತು. ಮದ್ದೂರಿನ ದೇಶೇಶ್ವರರಾದ ರಾಜೇಂದ್ರ ಚೋಳನು ದಾನವೊಂದನ್ನು ಮಾಡಿದಂತೆ ತೋರುತ್ತದೆ. ಶ್ರೀರಂಗಪಟ್ಟಣದ ಬೊಮ್ಮೂರು ಅಗ್ರಹಾರವನ್ನು ಬಹುಶಃ ಚೋಳರೇ ಸ್ಥಾಪಿಸಿದರು.

ಇದನ್ನು ವಾನವನ್ ಮಾದೇವಿ ಚತುರ್ವೇದಿ ಮಂಗಲಂ ಎಂದು ಕರೆದಿದ್ದು ಇದು ಚೋಳ ರಾಣಿಯೊಬ್ಬಳ ಹೆಸರಾಗಿ ಇರಬಹುದು. ಊರಕೆರೆಯು ಒಡೆದು ಹೋಗಿರಲು ಚೋಳ ಅಧಿಕಾರ ಪೋಮನ್ ಇರಾಮನ್ ಎಂಬಾತನು ಆ ಕೆರೆಯನ್ನು ದುರಸ್ತಿಮಾಡಿದನೆಂದು ತಮಿಳು ಶಾಸನ ಹೇಳುತ್ತದೆ. ಇದು ಕುಲೋತ್ತುಂಗ – ೧ನೇ ಕಾಲದ (೧೧೦೨–೩) ಇದೇ ಅರಸನ ಕಾಲದಲ್ಲಿ ಮಾದಿಯಣ್ಣ ಮತ್ತು ಲಂಕಣ್ಣ ಎಂಬ ಇಬ್ಬರು ಸಹೋದರರು ಕನ್ನಂಬಾಡಿಯಲ್ಲಿ ಎರಡು ದೇವಾಲಯಗಳನ್ನು ಕಟ್ಟಿಸಿದ ವಿವರಗಳಿವೆ. ಚೋಳರ ಶಾಸನಗಳು ಇಲ್ಲಿ ಸಿಕ್ಕಿದ್ದು ಕಡಿಮೆಯಾದರೂ ಅವರ ಆಡಳಿತ ಬಿಗಿಯಾಗಿತ್ತು. ಅವರು ಸ್ಥಾಪಿಸಿದ ಆಡಳಿತ ವ್ಯವಸ್ಥೆ ನೆಲೆಗೊಳಿಸಿದ ಸಿಬ್ಬಂದಿ ಯಂತ್ರ ಎಷ್ಟು ಭದ್ರವಾಗಿದ್ದುದೆಂದರೆ ಮುಂದೆ ಹೊಯ್ಸಳ ಹಾಗೂ ವಿಜಯನಗರದ ಆರಂಭದ ದಿನಗಳಲ್ಲಿನ ಆಡಳಿತ ಭಾಷೆ ಬಹುಮಟ್ಟಿಗೆ ತಮಿಳೇ ಆಗಿ ಮುಂದುವರಿದುದನ್ನು ಈ ಪ್ರದೇಶದ ಬಹುಪಾಲು ಶಾಸನಗಳಿಂದ ತಿಳಿಯಬಹುದು.

ಹೊಯ್ಸಳರು:–

ಹೊಯ್ಸಳರ ಆಡಳಿತಕ್ಕೆ ಸಂಬಂದಿಸಿದ ಶಾಸನಗಳಲ್ಲಿ ೧೧ನೇ ಯ ಶತಮಾನದ ಮಧ್ಯ ಭಾಗದಲ್ಲಿಯೇ ಅವರು ಚೋಳರ ಆಡಳಿತವನ್ನು ಮಂಡ್ಯ ಜಿಲ್ಲೆಯ ಕೆಲವು ಭಾಗಗಳಲ್ಲಿ ಪ್ರತಿಭಟಿಸಿ ಅಲ್ಲಿ ತಳ ಊರಿದ ಸಂಗತಿಯನ್ನು ಸೂಚಿಸುತ್ತದೆ. ಆಗ ಅವರು ಕಲ್ಯಾಣ ಚಾಲುಕ್ಯರ ಮಾಂಡಲಿಕರಾಗಿದ್ದರು. ವಿನಯಾದಿತ್ಯನ ೧೦೪೮–೯೮ರ ತೊಣಚಿಯ ಶಾಸನ ಹಾಗೂ ಎರೆಯಂಗನ ೧೦೫೨ ರ ಹಳೇಬೂದನೂರು ಶಾಸನಗಳು ಇಲ್ಲಿ ಉಲ್ಲೇಖನೀಯ, ವಿಷ್ಣುವರ್ದನನ ಸೋದರ ಉದಯಾದಿತ್ಯನು ೧೧೨೦ ರ ಸುಮಾರಿಗೆ ಶ್ರೀರಂಗಪಟ್ಟಣದಲ್ಲಿ ಅಧಿಕಾರಿಯಾಗಿದ್ದ (ಮುಂದೆ ಬಹುಶಃ ಅವನು ಚೋಳರ ಜೊತೆ ಯುದ್ದದಲ್ಲಿ ಹತನಾದ). ಇದಲ್ಲದೆ ಮಂಡ್ಯ ಜಿಲ್ಲೆಯ ತೊಣ್ಣೂರು ಹೊಯ್ಸಳರ ಆಡಳಿತದ ಒಂದು ಗಣ್ಯ ಕೇಂದ್ರವಾಗಿತ್ತು. (ಇದು ಎರಡನೆಯ ರಾಜಧಾನಿಯಾಗಿ ಕೂಡ ಕೆಲಕಾಲ ಇತ್ತು ಎಂಬ ಅಭಿಪ್ರಾಯವಿದೆ) ಹೊಯ್ಸಳರ ಶಾಸನಗಳು ಈ ಜಿಲ್ಲೆಯಲ್ಲಿ ೨೫೦ ಕ್ಕೂ ಮೀರಿದೆ. ಇವರ ಕಾಲದ ದೇವಾಲಯಗಳು ಈ ಕಾಲದಲ್ಲಿ ಸಾಕಷ್ಟು ಇವೆ.

ಕ್ರಿ.ಶ.೧೧ ನೇಯ ಶತಮಾನದ ವೇಳೆಗೆ ದೋರಸಮುದ್ರದ ಹೊಯ್ಸಳರು ತಮ್ಮ ಪ್ರಾಬಲ್ಯವನ್ನು ವಿಸ್ತರಿಸಿದರು. ಈ ಸಂತತಿಯ ಮೊದಲನೇ ಪ್ರಮುಖ ರಾಜನಾದ ಇಮ್ಮಡಿ ವಿನಯಾದಿತ್ಯನು (೧೦೪೮–೧೧೦೦) ಕನ್ನಂಬಾಡಿಯವರೆಗೂ ರಾಜ್ಯ ವಿಸ್ತರಿಸಿದನು. ಮೇಲುಕೋಟೆ, ಶ್ರೀರಂಗಪಟ್ಟಣಗಳು ಅವನ ಆಡಳಿತಕ್ಕೊಳಪಟ್ಟಿದವು. ಅವನ ಮೊಮ್ಮಗನಾದ

[illegible]

ವಿಷ್ಣುವರ್ಧನನು ಬಾಲ್ಯದಲ್ಲಿ ಈ ಪ್ರಾಂತ್ಯದ ರಾಜ್ಯಪಾಲಕನಾಗಿದ್ದು, ಕ್ರಿ.ಶ ೧೧೯೬ ರಲ್ಲಿ ಬೆಳಗೊಳದ ಸೀತರಾಮ ದೇವಸ್ಥಾನಕ್ಕೆ ದತ್ತಿ ನೀಡಿ ಈ ಗ್ರಾಮವನ್ನು ಅಗ್ರಹಾರವಾಗಿ ಪರಿವರ್ತಿಸಿ ಬ್ರಾಹ್ಮಣರಿಗೆ ನೀಡಿದನು ಮದ್ದೂರಲ್ಲಿ ನರಸಿಂಹ ಚತುರ್ವೇದಿ ಮಂಗಲ್ವನೆಂಬ ಅಗ್ರಹಾರವಿತ್ತು. ಹೊಯ್ಸಳ ದೊರೆಯ ಹೆಸರಿನಲ್ಲಿ ಇದು ಸ್ಥಾಪನೆಗೊಂಡಿದೆ. ಬೆಳ್ಳೂರಲ್ಲಿ ಉದ್ಭವ ನರಸಿಂಹಪುರ ಅಗ್ರಹಾರವಾಯಿತು. ಬೆಳ್ಳೂರಿನ ಅಗ್ರಹಾರಕ್ಕೆ ಸಂಬಂಧಿಸಿದ ಶಾಸನ (೧೨೭೧) ರಲ್ಲಿ ಋಗ್ವೇದ, ಯಜುರ್ವೇದಗಳ ಅಧ್ಯಯನ ನಡೆಸುವುದಕ್ಕೆ ಅಲ್ಲದೆ ಮಕ್ಕಳ ಶಿಕ್ಷಣವನ್ನು ಉಲ್ಲೇಖಿಸಿ (ಬಾಲಶಿಕ್ಷೆ) ಅದಕ್ಕೂ ದಾನ ಮಾಡಿದ್ದನ್ನು ಕಾಣಬಹುದು. ಒಂದೊಂದು ಅಗ್ರಹಾರದಲ್ಲಿಯೂ ೧೦-೨೦ ರಿಂದ ೧೧೦-೨೦೦ ರವರೆಗೆ ಚತುರ್ದಶ ವಿದ್ಯಾಪಾರಾಂಗತರಿಗೆ ವೃತ್ತಿಗಳನ್ನು ನೀಡಲಾಗಿದೆ.

ಪಾಂಡವಪುರ -೨೪೧ ತೊಂಡನೂರು ಗ್ರಾಮದಲ್ಲಿ ದೊರೆತ ಶಾಸನ ಇದರಲ್ಲಿ ಮಹಾಮಂಡಲೇಶ್ವರ ಹೊಯ್ಸಳ ದೇವನು ದೋರಸಮುದ್ರದಲ್ಲಿ ರಾಜ್ಯವಾಳುತ್ತಿದ್ದನೆಂದಿದೆ. ವೀರಗಲ್ಲಿನ ಮೇಲಿರುವ ಈ ಶಾಸನ ಸವೆದಿದೆ. ಮಹಾಪ್ರಧಾನದ ಉಲ್ಲೇಖವಿದ್ದರೂ ಆತನ ಹೆಸರು ಇತ್ಯಾದಿ ವಿವರಗಳು ದೊರೆತಿಲ್ಲ. ಈ ಶಾಸನ ವಿಷ್ಣುವರ್ಧನದೇವನೆಂದು ನರಸಿಂಹಾಚಾಯರು ತಿಳಿಸಿದ್ದಾರೆ. ಆದರೆ ಇದಕ್ಕೆ ಆಧಾರಗಳೇನೋ ತಿಳಿಯದು. ವಿನಯಾದಿತ್ಯನ ಶಾಸನಗಳಲ್ಲಿ ದೋರಸಮುದ್ರದ ಉಲ್ಲೇಖ ವಿಲ್ಲದಿರುವುದರಿಂದ ಈ ಹೊಯ್ಸಳದೇವನು ವಿಷ್ಣುವರ್ಧನನೇ ಆಗಿರಬಹುದೆಂಬುದೊಂದು ಕಾರಣವಾಗಿರಬಹುದು ಆದರೆ ೧೧೯೫-೯೬ರ ವೇಳೆಗೆ ವಿನಯಾದಿತ್ಯನೇ ದ್ವಾರಾವತೀಪುರವಾದಿಶ್ವರ ಮುಂತಾದ ಬಿರುದುಗಳನ್ನು ಧರಿಸಿದುದನ್ನು ಮೇಲೆ ಕಂಡಿದ್ದೇವೆ. ಅಲ್ಲದೇ ತೊಣಚಿ ಶಾಸನದಲ್ಲಿ ಈತನನ್ನು ಮಹಾಮಂಡಲೇಶ್ವರ ತ್ರಿಭುವನಮಲ್ಲ ಪೊಯ್ಸಳದೇವನೆಂದಷ್ಟೇ ಕರೆಯಲಾಗಿದೆ. ಇದು ವಿನಯಾದಿತ್ಯನನ್ನು ಪೊಯ್ಸಳನೆಂದು ಕರೆದಿರುವುದನ್ನು ಗಮನಿಸಿ ಸುಂಕಾತೊಂಡನೂರು ಗ್ರಾಮದ ಶಾಸನವನ್ನು ಸಹ ವಿನಯಾದಿತ್ಯನಿಗೆ ಅನ್ವಯಿಸಬಹುದಾಗಿದೆ.

ಹೊಯ್ಸಳರ ಕಾಲದ ದೇವಾಲಯಗಳು ಈ ಕಾಲದಲ್ಲಿ ಸಾಕಷ್ಟು ಇವೆ. ಇದರಲ್ಲಿ ೧) ಕಿಕ್ಕೇರಿಯ ಬ್ರಹ್ಮೇಶ್ವರ (೧೧೭೧ ಒಮ್ಮವೆನಾಯಕತಿ ಕಟ್ಟಿಸಿದ್ದು, ಇದೇ ಊರಲ್ಲಿ ಸುಮಾರು ೧೧೧೧ ರ ಮಲ್ಲೇಶ್ವರ ಅಲ್ಲದೇ ಜನಾರ್ಧನ ಮುಂತಾದ ಹೊಯ್ಸಳ ಮಂದಿರಗಳಿವೆ). ೨) ಬಸರಾಳುವಿನ ಮಲ್ಲಿಕಾರ್ಜುನ (೧೨೩೪ ಹರಿಹರ ದಂಡನಾಯಕ ಕಟ್ಟಿಸಿದ್ದು) ಹಾಗೂ ೩) ಗೋವಿಂದನ ಹಳ್ಳಿಯ ಪಂಚಲಿಂಗ ದೇವಾಲಯಗಳು ಪ್ರಸಿದ್ಧವಾಗಿವೆ. ಮದ್ದೂರಿನ ವರದರಾಜಸ್ವಾಮಿ ದೇವಾಲಯವನ್ನು ವಿಷ್ಣುವರ್ಧನನೇ ಕಟ್ಟಸಿದನೆಂದು ಪ್ರತೀತಿ (ಇದೇ ಊರ

ನರಸಿಂಹ ದೇವಾಲಯವೂ ಹೊಯ್ಸಳ ರಚನೆ) ಇದಲ್ಲದೆ ಮಾದಾಪುರ, ಬಿಂಡಿಗನವಿಲೆ, ಹೊಸಹೊಳಲು, ಸಾಸಲು, ಭೀಮನಹಳ್ಳಿ, ಬೆಳ್ಳೂರು, (ರಾಮಕೃಷ್ಣ ಮತ್ತು ಮಾಧವ ದೇವಾಲಯ) ನಾಗಮಂಗಲ (ಶಂಕರನಾರಾಯಣ) ತೊಣಚಿ, ತೆಂಗಿನಘಟ್ಟ, ದೊಡ್ಡ ಜಟಕ, (ಹೆಮ್ಮೇಶ್ವರ) ಅಗ್ರಹಾರ, ಬಾಚಹಳ್ಳಿ, ಆಘಲಯ, ಸೊಳ್ಳೆಪುರ, ಲಾಲನಕೆರೆ (ಮಧುಕೇಶ್ವರ), ನಾಯಕನಹಳ್ಳಿ (ಬೈರವೇಶ್ವರ) ಮುಂತಾದ ಊರುಗಳಲ್ಲಿ ದೇವಾಲಯಗಳನ್ನೂ ಕತ್ತರಿ ಘಟ್ಟ (ತ್ರಿಕೂಟ ಜನಾಲಯ), ಅರಳಗುಪ್ಪೆ (ಪುಣಿಸಮಯ್ಯ ಕಟ್ಟಿಸಿದ್ದು) ಸುಕ್ಕುದುರೆ, ಸೂರಗನಹಳ್ಳಿ, ಮುಂತಾದ ಊರುಗಳಲ್ಲಿ ಜೈನ ಬಸದಿಗಳನ್ನು ಹೊಯ್ಸಳರ ಕಾಲದಲ್ಲಿ ಕಟ್ಟಿದರು. ಇಂಥ ಹಿರಿಕಿರಿಯ ರಚನೆಗಳ ಪಟ್ಟಿ ಮಾಡಿದರೆ ಮಂಡ್ಯ ಜಿಲ್ಲೆಯಲ್ಲಿ ನೂರರಷ್ಟಾದರೂ ದೇವಾಲಯಗಳೂ ಜಿನಾಲಯಗಳೂ ಹೊಯ್ಸಳರ ಕಾಲದಲ್ಲಿ ತಲೆ ಎತ್ತಿದುದನ್ನು ಗಮನಿಸಬಹುದು. ಈ ದೇವಾಲಯಗಳಲ್ಲಿ ಪೂಜೆ, ಪುರಸ್ಕಾರ ಹಾಗೂ ಇತರ ಊಳಿಗಗಳು, ಅವ್ಯಾಹತವಾಗಿ ಸಾಗಲು ಭೂದಾನ ಮಾಡಿದ ವಿವರಗಳೂ ಇವೆ. ಬಸರಾಳಿನ ದೇವಾಲಯದಲ್ಲಿ ಪೂಜಾರಿ, ಪರಿಚಾರಕ, ಬಾಣಸಿಗ, ತೋಟಿಗ ಮಾಲೆಗಾರ ಇವರಿಗೆಲ್ಲ ದಾನ ನೀಡಿದ ವಿವರಗಳಿವೆ.

ವಿಷ್ಣುವರ್ಧನ:-

ವಿಷ್ಣುವರ್ಧನನು ಕ್ರಿ.ಶ ೧೧೦೮ ರಿಂದ ೧೧೪೨ ರವರೆಗೆ ಆಳಿದನು. ತನ್ನ ಅಮಾತ್ಯನು, ಪ್ರತಾಪಿಯೂ ಆದ ಗಂಗರಾಜನ ನೆರವಿನಿಂದ ೧೧೧೪ ರಲ್ಲಿ ಚೋಳರಾಜರ ಮೇಲೆ ಯುದ್ಧ ಘೋಷಿಸಿ ತಲಕಾಡನ್ನು ಆಕ್ರಮಿಸಿ, ಗಂಗರಸರ ಗಂಗವಾಡಿಯ ಮೇಲೆ ಚೋಳರ ಆಳ್ವಿಕೆಯನ್ನು ಕೊನೆಗಾಣಿಸಿದನು. ಗಂಗವಾಡಿ, ನೊಳಂಬವಾಡಿ ಹಾಗೂ ಕೊಂಗುನಾಡಿನ ಮೇಲೆ ಹೊಯ್ಸಳರ ಅಧಿಕಾರವನ್ನು ಸ್ಥಾಪಿಸಿ ಮಂಡ್ಯ ಜಿಲ್ಲೆಯು ಹೊಯ್ಸಳ ರಾಜ್ಯದ ಭಾಗವಾಯಿತು. ವಿಷ್ಣುವರ್ಧನನ ಆಳ್ವಿಕೆಯಲ್ಲಿ ಮಂಡ್ಯ ಜಿಲ್ಲೆಯು ಸಾಂಸ್ಕೃತಿಕ ಹಾಗೂ ಧಾರ್ಮಿಕ ಚಟುವಟಿಕೆಗಳಲ್ಲಿ ಹೆಚ್ಚು ಮಹತ್ವ ಹೊಂದಿದ ಸುಪ್ರಸಿದ್ಧಿ ತತ್ತ್ವವೇತ್ತರೂ, ಧರ್ಮಸುಧಾರಕರೂ ಆದ ಶ್ರೀ ರಾಮಾನುಜಾಚಾರ್ಯರು ಇದೇ ವೇಳೆಯಲ್ಲಿ ತಮಿಳುನಾಡಿನ ಚೋಳರಾಜನ ಮತೀಯ ವೈಷಮ್ಯದಿಂದ ನೆಮ್ಮದಿಯನ್ನರಸುತ್ತಾ ಕನ್ನಡ ನಾಡಿಗೆ ಬಂದರು ಆಶ್ರಯ ನೀಡಿ ಅವರು ಧರ್ಮಪ್ರಚಾರ ಮಾಡಲು ಸಹಕಾರಿಯಾದನು. ಅವರು ಸಾಲಿಗ್ರಾಮ, ತೊಂಡನೂರು ಮತ್ತು ಮೇಲುಕೋಟೆಯಲ್ಲಿ ೨೦ ವರ್ಷಗಳ ಕಾಲ ನೆಲೆಸಿದ್ದರು. ಅವರಿಗೆ ಆಶ್ರಯವಿತ್ತನು. ಹೊಯ್ಸಳದೊರೆ ವಿಷ್ಣುವರ್ಧನ, ಜನಜನಿತ ನಂಬಿಕೆಯ ಪ್ರಕಾರ ಮೊದಲು ವಿಷ್ಣುವರ್ಧನನು ಜೈನನಾಗಿದ್ದು, ಶ್ರೀ ರಾಮಾನುಜಾಚಾರ್ಯರ ಪ್ರಭಾವದಿಂದ ಮುಂದೆ ವೈಷ್ಣವ ಧರ್ಮಕ್ಕೆ ಮತಾಂತರ

[illegible]

ಹೊಂದಿದನೆಂದು ಹೇಳಲಾಗಿದೆ. ವಿಷ್ಣುವರ್ಧನನ ಕಾಲದಲ್ಲೇ ಬೇಲೂರು, ಹಳೇಬೀಡು, ತಲಕಾಡು, ದೊಡ್ಡಗದ್ದವಳ್ಳಿ, ದೋರಸಮುದ್ರಗಳಲ್ಲಿ ಮಂಡ್ಯ ಜಿಲ್ಲೆಯ ಮತ್ತು ತೊಂಡನೂರು (ಈಗಿನ ತೊಣ್ಣೂರು) ಮೇಲುಕೋಟೆಗಳಲ್ಲಿ ಸುಂದರವಾದ ದೇವಾಲಯಗಳು ನಿರ್ಮಾಣವಾದವು. ಶ್ರೀರಂಗಪಟ್ಟಣ ಮತ್ತು ಮೇಲುಕೋಟೆ ದೇವಾಲಯಗಳಿಗೆ, ಧಾರ್ಮಿಕ ಸಂಸ್ಥೆಗಳಿಗೆ ಅನೇಕ ಉಂಬಳಿಗಳನ್ನು ವಿಷ್ಣುವರ್ಧನನು ಕೊಟ್ಟಿರುವುದು ಶಾಸನಗಳಿಂದ ತಿಳಿದುಬರುತ್ತದೆ.

ವಿಷ್ಣುವರ್ಧನನ ಉತ್ತರಾಧಿಕಾರಿಯಾದ ಒಂದನೇ ನರಸಿಂಹನ ಶಾಸನವೊಂದು ಶ್ರೀರಂಗಪಟ್ಟಣದ ಸಮೀಪದ ಕಾಲುವೆಯನ್ನು ದುರಸ್ಥಿಗೊಳಿಸಲು ಇನ್ನೂರು **'ಗದ್ಯಾಣವನ್ನು'** ಖರ್ಚು ಮಾಡಿದುದಲ್ಲದೆ, ಅದರ ನಿರ್ವಹಣೆಗೆ ಭೂಮಿಯನ್ನು ಉಂಬಳಿಯಾಗಿ ನೀಡಿದ ಬಗ್ಗೆ ಬೆಳಕು ಚೆಲ್ಲುತ್ತದೆ. ಇದರಿಂದ ನೀರಾವರಿ ವ್ಯವಸ್ಥೆಯು ಹೊಯ್ಸಳರ ವೇಳೆಗೆ ಪ್ರಾಮುಖ್ಯತೆ ಪಡೆದಿತ್ತು ಎಂದು ತಿಳಿದು ಬರುತ್ತದೆ. ಅಲ್ಲದೆ ನರಸಿಂಹನು ಮೇಲುಕೋಟೆಯ ತಿರುನಾರಾಯಣ ದೇವಾಲಯಕ್ಕೆ ದಾನದತ್ತಿ ನೀಡಿದ ಬಗ್ಗೆ ಮದ್ದೂರಿನ ಗ್ರಾಮಸಭೆಯ ಬಗ್ಗೆ ಅವನ ಕಾಲದಶಾಸನ ಉಲ್ಲೇಖಿಸಿದೆ. ಇದೆಲ್ಲಕ್ಕಿಂತ ಮುಖ್ಯವಾಗಿ ಶಿಂಷಾನದಿಯ ಬಯಲಿನಲ್ಲಿ ವಿಶೇಷವಾಗಿ ಕಬ್ಬನ್ನು ಬೆಳೆಯುತ್ತಿದ್ದರೆಂದು, ಅಲ್ಲಿನ ಕಬ್ಬಿನ ಗಾಣಗಳ ಮೇಲೆ ಅಲೆದರ ಎಂಬ ಸುಂಕ ವಿಧಿಸಲಾಗುತ್ತಿತೆಂದು ಮತ್ತೊಂದು ಶಾಸನದಲ್ಲಿ ಕಂಡುಬಂದಿದೆ. ನರಸಿಂಹನ ಮಗನಾದ ವೀರಬಲ್ಲಾಳನ (೧೧೭೩-೧೨೨೧) ಕಾಲದ ಅನೇಕ ಶಾಸನಗಳಿಂದ ಕೃಷ್ಣರಾಜಪೇಟೆಯ (ಅತ್ತಿಗುಪ್ಪೆ) ತಾಲ್ಲೂಕಿನ ಜನರು ಬಲ್ಲಾಳನು ಸೇವುಣರ ಮೇಲೆ ಯುದ್ಧದಲ್ಲಿ ಭಾಗವಹಿಸಿ ಪ್ರಚಂಡ ಜಯಗಳಿಸಿದ. ಸಂಗತಿಯನ್ನು ಅಲ್ಲಿಯ ಶಾಸನಗಳು ಮನವರಿಕೆ ಮಾಡಿಕೊಡುತ್ತವೆ. ನಾಗಮಂಗಲ ಪ್ರದೇಶವನ್ನು ವೀರಬಲ್ಲಾಳ ಚತುರ್ವೇದಿಮಂಗಲ ಎಂದು ಕರೆಯುತ್ತಿದ್ದದ್ದನ್ನು, ಇವನ ಅಧಿಕಾರಿಯೊಬ್ಬ ಬೆಳ್ಳೂರಿನ ಬಳಿಯಲ್ಲಿ ಒಂದು ದೇವಾಲಯವನ್ನೂ ಕೆರೆಯನ್ನೂ ಕಟ್ಟಿಸಿ ವಾರದ ಸಂತೆ ಸ್ಥಾಪಿಸಿದ ಬಗ್ಗೆ ತಿಳಿಸುತ್ತದೆ. ಮಂಡ್ಯ ಜಿಲ್ಲೆಯ ಹೊಯ್ಸಳರ ಆಳ್ವಿಕೆಯ ಕೊನೆಯ ಕಾಲದವರೆಗೆ ಅವರ ಸಾಮ್ರಾಜ್ಯದ ಒಂದು ಭಾಗವೇ ಆಗಿ ಉಳಿದು ಮೇಲುಕೋಟೆಯು ಈ ಪ್ರದೇಶದ ಉಪರಾಜಧಾನಿಯಾಗಿತ್ತು. ಹೊಯ್ಸಳರ ಆಳ್ವಿಕೆಯ ಕಾಲದಲ್ಲಿ ಮಂಡ್ಯ ಜಿಲ್ಲೆಯಲ್ಲಿ ಅನೇಕ ದೇವಾಲಯಗಳು ಕಟ್ಟಲ್ಪಟ್ಟಿದ್ದು, ಅವುಗಳಲ್ಲಿ ಮೇಲುಕೋಟೆ, ಕೆರೆತೊಣ್ಣೂರು, ಶ್ರೀರಂಗಪಟ್ಟಣ, ಕಿಕ್ಕೇರಿ, ಬಸರಾಳು, ಬೂದನೂರು, ಗೋವಿಂದನಹಳ್ಳಿ, ನಾಗಮಂಗಲದ ದೇವಾಲಯಗಳು ಪ್ರಸಿದ್ಧವಾಗಿವೆ.

ಮುಮ್ಮಡಿಬಲ್ಲಾಳ:-

ಕ್ರಿ.ಶ. ೧೩೪೨ ರಲ್ಲಿ ಹೊಯ್ಸಳ ಸಂತತಿಯ ಕೊನೆಯ ಸಾಮ್ರಾಜ್ಯ ಮೂರನೇ ವೀರಬಲ್ಲಾಳನ ಮರಣದ ವೇಳೆಗೆ ಸ್ಥಾಪನೆಯಾಗಿದ್ದ ವಿಜಯನಗರವು ಕ್ರಮೇಣ ವಿಸ್ತಾರಗೊಂಡು ಇಡೀ ದಕ್ಷಿಣ ಭಾರತವನ್ನೆಲ್ಲಾ ಒಳಗೊಂಡಿತ್ತು. ಮೈಸೂರು, ಮಂಡ್ಯ ಮತ್ತು ಇತರೆ ಜಿಲ್ಲೆಗಳಲ್ಲಿ ಸಣ್ಣಪುಟ್ಟ ಪಾಳೆಪಟ್ಟು ಮನೆತನಗಳು ತಲೆಯತ್ತಿ ವಿಜಯನಗರ ಸಾಮ್ರಾಟರಿಗೆ ಅಧೀನರಾಗಿ ಆಳುತ್ತಿದ್ದರು. ವಿಜಯನಗರದ ಸುಪ್ರಸಿದ್ದ ಸಾಮ್ರಾಟನಾದ ಕೃಷ್ಣದೇವರಾಯನು ಆ ವೇಳೆಗೆ ಶ್ರೀರಂಗಪಟ್ಟಣದಲ್ಲಿ ಆಳುತ್ತಿದ್ದ ಸಾಮಂತ ಕುಮಾರವೀರಯ್ಯನಕುಮಾರಿಯನ್ನು ವರಿಸಿದ್ದನೆಂದೂ. ಅವಳು ಅವನ ಮೂವರು ಮುಖ್ಯ ರಾಣಿಯರಲ್ಲೊಬ್ಬಳಾಗಿದ್ದಳೆಂದೂ ತಿಳಿದುಬರುತ್ತದೆ. ಆ ವೇಳೆಗೆ ಉಮ್ಮತ್ತೂರು ರಾಜ್ಯವನ್ನು ಸ್ಥಾಪಿಸಿ ಶಿವನಸಮುದ್ರವನ್ನು ರಾಜಧಾನಿಯಾಗಿ ಮಾಡಿಕೊಂಡು ಆಳುತ್ತಿದ್ದ ಗಂಗ ಶಾಖೆಯ ರಾಜನನ್ನು ಸೋಲಿಸಿ, ಕ್ರಿ.ಶ ೧೫೧೧ ರಲ್ಲಿ ಕೃಷ್ಣದೇವರಾಯನು ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡನು. ಉಮ್ಮತ್ತೂರು ಗಂಗರಸರ ಕಾಲದಲ್ಲಿ ಶಿವನಸಮುದ್ರ ಸೀಮೆಯ ಒಂದು ಮುಖ್ಯ ಪಟ್ಟಣವಾಗಿತ್ತು. ಕೃಷ್ಣದೇವರಾಯನ ಆನಂತರ ಆಳಿದ ಅಚ್ಯುತರಾಯನು ಕ್ರಿ.ಶ ೧೫೩೨ ರಲ್ಲಿ ಶ್ರೀರಂಗಪಟ್ಟಣಕ್ಕೆ ಭೇಟಿ ನೀಡಿದ್ದನು.

ಚೋಳರು:-

ಮಂಡ್ಯ ಜಿಲ್ಲೆಯ ಪ್ರದೇಶವು ಅಂದು ಚೋಳರ ಅಳ್ವಿಕೆಗೆ ಒಳಪಟ್ಟಿತ್ತೆಂಬುದೂ, ಚೋಳಮಹಾದಂಡನಾಯಕನಾದ ಪಂಚವ ಮಹಾರಾಯನ ನೇರ ಅಧಿಪತ್ಯಕ್ಕೆ ಸೇರಿತ್ತೆಂಬುದು ಚೋಳ ಆಡಳಿತಗಾರರು ಕೂಡ ಬಹಳ ವಿರಳವಾಗಿಯಾದರೂ ಇಲ್ಲಿಯ ದೇವಾಲಯಗಳಿಗೆ ದತ್ತಿಗಳನ್ನು ಬಿಟ್ಟಿದ್ದಾರೆಂಬುದೂ ಈ ಶಾಸನದಿಂದ ದೃಢಪಡುತ್ತದೆ. ಮೂರನೆಯದು, ಮಂಡ್ಯ ತಾಲ್ಲೂಕಿನ ಹಳೇಬೂದನೂರಿನ ಸೋಮೇಶ್ವರ ದೇವಾಲಯದ ಮುಂದಿರುವ ಒಂದು ಶಾಸನ ಕನ್ನಡ ಲಿಪಿಯಲ್ಲಿರುವ ಈ ತಮಿಳು ಶಾಸನವು ಮೊದಲನೆಯ ರಾಜೇಂದ್ರ ಚೋಳನ ಆಳ್ವಿಕೆಯ ಕಾಲಕ್ಕೆ ಸೇರುತ್ತದೆ. ಇದರ ಕಾಲ ಕ್ರಿ.ಶ. ೧೦೨೪ ಶಾಸನದ ಹೆಚ್ಚಿನ ಭಾಗವು ತ್ರುಟಿತವಾಗಿರುವದರಿಂದ ಇದರ ರಚನೆಯ ಉದ್ದೇಶವೇನೆಂಬುದು ತಿಳಿಯುವುದಿಲ್ಲ. ಆದರೆ ಚಕ್ರವರ್ತಿಗೆ ಸಂಬಂಧಿಸಿದ ಕೆಲವು ಪ್ರಮುಖ ವಿಚಾರಗಳಂತೂ ತಿಳಿದುಬರುತ್ತದೆ. ರಾಜೇಂದ್ರ ಚೋಳನು ಎಡದೊರೆನಾಡು, ಬನವಾಸಿ, ಕೊಲ್ಲಿಪಾಕೆ, ಮನಕಡಕಂ(ಮಾನ್ಯಖೇಟ) ಸಮುದ್ರ ಮಧ್ಯದಲ್ಲಿದ್ದ ಈಳಂಮಂಡಲ ಇವನ್ನೆಲ್ಲಾ ಗೆದಿದ್ದ: ಪಾಂಡ್ಯದೊರೆ ಸುಂದರನನ್ನು ಜಯಿಸಿದ್ದ

ಚಾಲುಕ್ಯ ಜಯಸಿಂಹನನ್ನು ಮುಸಂಗಿಯಲ್ಲಿ ಸೋಲಿಸಿದ್ದ ಚೇರಳ (ಕೇರಳ) ಒಡ್ಡವಿಷಯ, ಉತ್ತರಲಾಟ, ದಕ್ಷಿಣಲಾಟಗಳನ್ನು ಜಯಸಿದ್ದ, ಗಂಗೆಯ ಬಯಲನ್ನು ಕೈವಶಮಾಡಿಕೊಂಡಿದ್ದ ಎಂಬಿವೇ ಮುಂತಾದ ವಿಚಾರಗಳು ಇದರಲ್ಲಿ ಕಾವ್ಯಮಯವಾಗಿ ವರ್ಣಿತವಾಗಿದೆ. ಇದರಿಂದ ಚೋಳರಾಜ್ಯದ ವಿಸ್ತಾರ ಹಾಗೂ ಕರ್ನಾಟಕದ ಮೇಲಿನ ಅದರ ಹಿಡಿತ ಇವು ಸ್ಪಷ್ಟವಾಗುತ್ತದೆ.

ನಾಲ್ಕನೆಯದು ಮದ್ದೂರು ತಾಲ್ಲೂಕಿನ ವೈದ್ಯನಾಥಪುರದ ಒಂದು ಶಾಸನ ಇದು ಕೂಡ ರಾಜೇಂದ್ರ ಚೋಳನ ಆಳ್ವಿಕೆಯ ಕಾಲಕ್ಕೆ ಸೇರುತ್ತದೆ. ತ್ರುಟಿತವಾಗಿರುವುದರಿಂದ ಇದರ ರಚನೆಯ ಉದ್ದೇಶ ಕೂಡ ತಿಳಿಯುವುದಿಲ್ಲ. ಆದರೆ ರಾಜೇಂದ್ರ ಚೋಳನು ಉತ್ತರಲಾಟ, ಗಂಗಾಪ್ರದೇಶ, ಇವನ್ನೆಲ್ಲಾ ಜಯಸಿದ್ದು, ಕಡಾರಂನ ಸಂಗ್ರಾಮ ವಿಜಯೋತ್ತುಂಗವರ್ಮನನ್ನು ಗೆದ್ದದ್ದು ಮುಂತಾದ ವಿಚಾರಗಳ ಉಲ್ಲೇಖವಿದ್ದು, ಚೋಳರ ಚರಿತ್ರೆ ಅಧ್ಯಯನಕ್ಕೆ ಇದು ಆಧಾರವನ್ನು ಒದಗಿಸಿಕೊಡುತ್ತದೆ.

ಐದನೆಯದು ಶ್ರೀರಂಗಪಟ್ಟಣ ತಾಲ್ಲೂಕಿನ ಕಿರಂಗೂರಿನ ಒಂದು ಶಾಸನ (ಶ್ರೀ.ಪ ೮೭) ಇದರಲ್ಲಿ ಬಹುಭಾಗ ತ್ರುಟಿತವಾಗಿ ಹೋಗಿದೆ. ಆದರೆ ಉಳಿದಿರುವ ಒಂದು ಒಂದೂವರೇ ಸಾಲೆ ಒಂದು ಮುಖ್ಯ ಅಂಶವನ್ನು ತಿಳಿಸುತ್ತದೆ. ಅದರಲ್ಲಿ ಬರುವ "ಪಂಚವ ಮಾರಾಯನಾದ ರಾಜೇಂದ್ರ ಚೋಳನೆಂಬ ಮಾತು ಗಮನಾರ್ಹ ಹಿಂದೆ ನೋಡಿದ ರಾಜರಾಜಚೋಳನ ಆಳ್ವಿಕೆಯ ಕಾಲದ ಎರಡನೆಯ ಶಾಸನದಲ್ಲಿ ಪಂಚವ ಮಾರಾಯನ ವಿಚಾರವಿದೆ. ಅವನೇ ಈ ರಾಜೇಂದ್ರಚೋಳನೆಂಬುದು ಇವರಿಂದ ಸ್ಪಷ್ಟವಾಗುತ್ತದೆ. ಈ ಶಾಸನದ ಕಾಲ ಗೊತ್ತಿಲ್ಲ. ಶಾಸನದ ಕಾಲ ಗೊತ್ತಿಲ್ಲದೇ ಇದು ಚೋಳರಾಜನ ಆಳ್ವಿಕೆಯ ಒಂದು ಶಾಸನ ಎಂದು ಹೇಗೆ ಒಪ್ಪಿಕೊಳ್ಳಲು ಸಾಧ್ಯ. ಇದರಲ್ಲಿ ರಾಜೇಂದ್ರ ಚೋಳನು ಪಟ್ಟಕ್ಕೆ ಬಂದಿದ್ದನೆಂಬ ಉಲ್ಲೇಖವೂ ಇಲ್ಲ ಹಾಗಾಗಿ ಇದು ಬಹುಶಃ ರಾಜ ರಾಜ ಚೋಳರ ಆಳ್ವಿಕೆಯ ಕಾಲಕ್ಕೆ ಸೇರುತ್ತದೆಯೆಂದು ತೋರುತ್ತದೆ.

ಆರನೆಯದು ಶ್ರೀರಂಗಪಟ್ಟಣ ತಾಲ್ಲೂಕಿನಬೊಮ್ಮೂರು ಆಗ್ರಹಾರದ ಒಂದು ಶಾಸನ (ಶ್ರೀ.ಪ.೬೭) ಇದು ಗ್ರಂಥ ಲಿಪಿಯಲ್ಲಿರುವ ಒಂದು ತಮಿಳು ಶಾಸನ. ಇದರ ಕಾಲ ಕ್ರಿ.ಶ. ೧೧೦೨-೧೧೦೩ ಕುಲೋತ್ತುಂಗ ಚೋಳನ ಆಳ್ವಿಕೆಯ ಅವಧಿಗೆ ಸೇರುವ ಈ ಶಾಸನದಲ್ಲಿ ಇಡತ್ತು ರೈ ನಾಟ್ಟಿನ (ಎಡ ತೊರೆನಾಡಿನ) ಸಿರಿಯಕಲಸತ್ತ ಪಾಡಿಯಾದ ವಾನವನ್ ಮಾದೇವಿ ಚತುರ್ವೇದಿ ಮಂಗಲದಲ್ಲಿ ಹಾಳಾಗಿದ್ದ ಜಲಾಶಯವೊಂದನ್ನು ಜೀರ್ಣೋದ್ಧಾರ ಮಾಡಿಸಲು ಇನ್ನೂರು ವರ್ಷಗಳಿಂದ ಯಾರು ಮುಂದೆ ಬರದೆ ಇರಲು ಆ ಊರ ಅಡೈಕ್ಕಾರನೊ ಚೋಳನ ಮಾಂಡಲಿಕನೂ ಆದ ಪೋಮನ್ ಇರಾಮನಾದ ವಿರುದರಾಯಬಯಂಕರಮಾರಾಯನ್

[illegible]

[illegible]

[illegible]

[illegible]

ಎಂಬುವನು ಮುಂದೆ ಬಂದು ಅದನ್ನು ಜೀರ್ಣೋದ್ಧಾರ ಮಾಡಿಸಿದನು ಎಂಬ ವಿಚಾರ ನಿರೂಪಿತವಾಗಿದೆ.

ಏಳನೆಯದು ಪಾಂಡವಪುರ ತಾಲ್ಲೂಕಿನ ಕನ್ನಂಬಾಡಿಯ ಕಣ್ವೇಶ್ವರ ದೇವಾಲಯದ ಒಂದು ಶಾಸನ (ಪಾಂಪು ೪೪) ಇದರ ಕಾಲ ಕ್ರಿ.ಶ. ೧೧೧೪ –೧೫ ಇದೊಂದು ಕನ್ನಡ ಶಾಸನ ಕುಲೋತ್ತುಂಗ ಚೋಳನ ಆಳ್ವಿಕೆಯ ಕಾಲದಲ್ಲಿ ವಡುಗ ವೇಳೆ ಕಾರಿ ಮುತಹಡೆರಾಯನ ಮಕ್ಕಳಾದ ಮಾದಿಯಣ್ಣ ಮತ್ತು ಲಂಕಣ್ಣ ಎಂಬುವರು ಎರಡು ದೇವಾಲಯಗಳನ್ನು ಕಟ್ಟಿಸಿದರು. ಕೊವರ ಬಮ್ಮ ಗಾವುಂಡನು (ಅಲ್ಲಿ) ಇದ್ದು ಶಿವಕೆರೆಯಲ್ಲಿ ೧೨ **ಖಂಡುಗ** ನೀರಾವರಿ ಭೂಮಿಯನ್ನು ಎರಡು ಖಂಡುಗ ಐಗುಳ ಕಪ್ಪು ಮಣ್ಣಿನ ಭೂಮಿಯನ್ನೂ, ಹರಿಯಕೆರೆಯಲ್ಲಿ ಒಂದು ಖಂಡುಗ ಜೋಳದ ಭೂಮಿಯನ್ನೂ ದತ್ತಿಯಾಗಿ ಬಿಟ್ಟ ಅವನ ಮಗ ಮಾಚಗಾವುಂಡನು (ಅದನ್ನು) ಕೊಂಗಜೀಯರಿಗೆ ಧಾರೆಯರೆದುಕೊಟ್ಟ ಎಂಬುದು ಇದರಲ್ಲಿ ನಿರೂಪಿತವಾಗಿದೆ. ನೇರವಾಗಿ ಚೋಳದೊರೆಗಳಿಗೆ ಸಂಬಂದಿಸದಿದ್ದರೂ, ಆ ಕಾಲದಲ್ಲಿ ಅಲ್ಲಿ ಅವರ ಆಳ್ವಿಕೆಯಿತ್ತೆಂಬುದಕ್ಕೆ ಮಾತ್ರ ಇದೊಂದು ಒಳ್ಳೆಯ ಆಧಾರವಾಗಿದೆ.

ಎಂಟನೇಯದು ಮಂಡ್ಯ ತಾಲ್ಲೂಕಿನ ಚನ್ನಪ್ಪನದೊಡ್ಡಿಯ ಒಂದು ಬಹುತ್ರುಟಿತ ಶಾಸನ (ಮಂ.೬೬) ಇದರಲ್ಲಿ ಎರಡು ಪದಗಳು ಮಾತ್ರ ಕಾಣಿಸುತ್ತವೆ. ಅವುಗಳಲ್ಲಿ ಒಂದು **"ಉತ್ತಮ ಚೋಳ"** ಎಂಬುದು ಇದು ಯಾವ ದೊರೆಯನ್ನು ಸೂಚಿಸುತ್ತದೆ. ಯಾವ ಕಾಲಕ್ಕೆ ಸೇರುತ್ತದೆ. ಎಂಬುದು ತಿಳಿಯದೇ ಇದ್ದರೂ, ಆ ಪ್ರದೇಶದಲ್ಲಿ ಚೋಳರ ಆಡಳಿತವಿದ್ದುದಕ್ಕಂತೂ ಸಾಕ್ಷಿಯಾಗಿದೆ.

ಇವಿಷ್ಟೂ ಈ ಪ್ರದೇಶದಲ್ಲಿ ದೊರಕುವ ಚೋಳಶಾಸನಗಳು ಹೆಚ್ಚಾಗಿ ತಮಿಳಿಗೆ ಪ್ರಾಧ್ಯಾನ್ಯ ವಿರುವುದನ್ನು ಇವುಗಳಲ್ಲಿ ಕಾಣುತ್ತೇವೆ. ಜೊತೆಗೆ ಇವೆಲ್ಲಾ ಶ್ರೀರಂಗಪಟ್ಟಣ, ಪಾಂಡವಪುರ, ಮಂಡ್ಯ, ಮದ್ದೂರು ಈ ನಾಲ್ಕು ತಾಲ್ಲೋಕುಗಳಿಗಷ್ಟೇ ಸೀಮಿತವಾಗಿವೆ. ಅಂತೆಯೇ ಮೊದಲನೆಯ ರಾಜಾಧಿರಾಜ ಮೊದಲನೆಯ ರಾಜೇಂದ್ರ ಮತ್ತು ಕುಲೋತ್ತುಂಗ ಈ ಮೂವರ ಆಳ್ವಿಕೆಗಷ್ಟೇ ಸೇರುತ್ತದೆ ರಾಜೇಂದ್ರ ಮತ್ತು ಕುಲೋತ್ತುಂಗರ ನಡುವಿನ ಕಾಲದಲ್ಲಾಗಲೀ ಕುಲೋತ್ತುಂಗನ ನಂತರದಲ್ಲಾಗಲೀ ಆಳಿದ ದೊರೆಗಳ ಒಂದು ಶಾಸನವೂ ಸಿಕ್ಕಿಲ್ಲ. ಆ ಅವಧಿಯಲ್ಲಿ ಈ ಪ್ರದೇಶದ ಮೇಲೆ ಅವರ ಹಿಡಿತ ತಪ್ಪಿರಬಹುದು.

ಮಂಡ್ಯದ ಹೆಸರು ಪ್ರಪ್ರಥಮವಾಗಿ ಕ್ರಿ.ಶ. ೧೫೧೬ ನೆಯ ವರ್ಷದ ಕೃಷ್ಣದೇವರಾಯನ ಕಾಲದ ತಾಮ್ರಶಾಸನದಲ್ಲಿ ಬಂದಿದೆ. ಈ ಗ್ರಾಮದ ಹೆಸರಿನಲ್ಲಿ ಹೆಚ್ಚಿನ ಬದಲಾವಣೆಯಾಗಿಲ್ಲ. ಅರಸನು ಘೃತಪರ್ವತದಾನವನ್ನು ಮಾಡುವ ಸಂದರ್ಭದಲ್ಲಿ ತುಂಗಭದ್ರಾ ತೀರದ ವಿಠಲೇಶ್ವರನ ಸನ್ನಿಧಿಯಲ್ಲಿ ಧಾತುಸಂವತ್ಸರದ ಕಾರ್ತಿಕ ಪೌರ್ಣಿಮೆ ಭಾನುವಾರದಂದು ಉಭಯವೇದಾಂತ ತಂತ್ರವ್ಯಾಖ್ಯಾನೆಗಳಲ್ಲಿ ಪ್ರತಿಷ್ಠರಾದ ವರದಾಚಾರ್ಯರ ಮಕ್ಕಳಾದ ಗೋವಿಂದರಾಜಗುರುಗಳಿಗೆ **'ಮಂಟೆಯ'** ಎಂಬ ಗ್ರಾಮವನ್ನು ಅದಕ್ಕೆ ಸೇರಿದ ಉಪಗ್ರಾಮಗಳಾದ ಚಿಕ್ಕ ಮಂಟೆಯ, ಕಲ್ಲಹಳ್ಳಿ, ಹೊಸಹಳ್ಳಿ, ತಂಡಸೇಹಳ್ಳಿ ಹಾಗೂ ಕೋಣನಹಳ್ಳಿಗಳನ್ನು, ದಾನಮಾಡಿದ್ದಾನೆ. ಇಲ್ಲಿ ಮಂಡ್ಯವನ್ನು 'ಮಂಟೆಯ' ಎಂದು ಕರೆದಿದ್ದು ಅದಕ್ಕೆ ಚಿಕ್ಕ ಮಂಠಯ ಎಂಬ ಉಪಗ್ರಾಮವಿದ್ದುದು ಸ್ಪಷ್ಟ. ಈ ಮಂಟೆಯವೇ ಈಗ 'ಮಂಡ್ಯ' ರೂಪವನ್ನು ಪಡೆದಿದೆ. 'ಮಂಠಯ' ಗ್ರಾಮವು ಹೊಯ್ಸಳರ ಕಾಲದಲ್ಲಿ 'ಮಂಡೆಯ' ಅಗ್ರಹಾರವಾಗಿತ್ತು ಹೀಗೆ ಆಗ್ರಹಾರವಾಗಿದ್ದ ಮಂಡೆಯ ವಿಜಯನಗರದ ಕಾಲಕ್ಕೆ ಮಂಟೆಯ ಗ್ರಾಮವಾಗಿ ಈಗ ಏಳು ತಾಲ್ಲೂಕುಗಳನ್ನೊಳಗೊಂಡ ಮಂಡ್ಯ ಜಿಲ್ಲೆಯಾಗಿ ಬೆಳೆದಿದೆ. ಈಗಿನ ಮಂಡ್ಯ ಜಿಲ್ಲೆಯಲ್ಲಿ ಗಂಗರು, ರಾಷ್ಟ್ರಕೂಟರು, ಹೊಯ್ಸಳರು, ತಮ್ಮ ಆಡಳಿತವನ್ನು ನಡೆಸಿದ್ದಾರೆಂಬುದಕ್ಕೆ ಇಲ್ಲಿ ದೊರೆತಿರುವ ಶಾಸನಗಳೇ ಪ್ರಮಾಣಗಳು ಹೊಯ್ಸಳರ ನಂತರ ಈ ಪ್ರದೇಶವನ್ನು ಆಳಿದವರು ವಿಜಯನಗರದ ಅರಸರು ಒಂದನೆಯ ಬುಕ್ಕನಿಂದ ಮೂರನೆಯ ಶ್ರೀರಂಗನವರೆಗೆ ಸುಮಾರು ಮೂರು ಶತಮಾನಗಳ ಕಾಲ ಈ ಪ್ರದೇಶವನ್ನು ವಿಜಯನಗರದ ಅರಸರು ಆಳಿದ್ದಾರೆ. ಈ ಅರಸರಿಗೆ ಸಂಬಂಧಿಸಿದ ಸುಮಾರು ೧೨೦ ಶಾಸನಗಳು ಈ ಜಿಲ್ಲೆಯಲ್ಲಿ ದೊರೆಕಿವೆ. ಇಲ್ಲಿ ದೊರಕಿರುವ ಶಾಸನಗಳ ಆಧಾರದಿಂದ ಆ ಕಾಲದ ಇಲ್ಲಿನ ರಾಜಕೀಯ ಧಾರ್ಮಿಕ - ಸಾಮಾಜಿಕ ವಿಷಯಗಳನ್ನು ಸಂಕ್ಷಿಪ್ತವಾಗಿ ಸಮೀಕ್ಷಿಸುವ ಪ್ರಯತ್ನ.

ವಿಜಯನಗರದ ನೂರಕ್ಕೂ ಮೇಲ್ಪಟ್ಟು ಶಾಸನಗಳು ಜಿಲ್ಲೆಯಲ್ಲಿವೆ. ಆದರೆ ಅವು ಸಂಖ್ಯೆಯಲ್ಲಿ ಹೊಯ್ಸಳ ಶಾಸನಕ್ಕಿಂತ ಬಹಳ ಕಡಿಮೆ. ರಾಜಧಾನಿಯು ಜಿಲ್ಲೆಯಿಂದ ಬಲು ದೂರವಿರುವ ಸಂಗತಿಯನ್ನು ಗಮನಿಸಿದಾಗ ಬಹುಮಟ್ಟಿಗೆ ದಾನದತ್ತಿಗಳನ್ನು ಪ್ರಕಟಿಸುವ ದಾಖಲೆಗಳಾಗಿರುವ ಶಾಸನಗಳ ಸಂಖ್ಯೆ ಕಡಿಮೆಯಾದುದಕ್ಕೆ ಕಾರಣವನ್ನು ಊಹಿಸಲು ಕಷ್ಟವಾಗಲಾರದು. ಈ ಕಾಲದಲ್ಲಿ ದೇವಾಲಯಗಳ ರಚನೆ ಮುಂಚೆಗಿಂತ ಕಡಿಮೆ. ಆದರೆ ದೇವಾಲಯಗಳ ದುರಸ್ತಿ ವಿಸ್ತರಣೆ ನೀರಾವರಿ ಕಾರ್ಯಗಳನ್ನು ಕೈಗೊಳ್ಳುವಿಕೆ ಸತತವಾಗಿ ಸಾಗಿತು. ೧೩೪೧ ರ ಬುಕ್ಕನ (ಬೀಜೆನಹಳ್ಳಿ) ಜಿಲ್ಲೆಯಲ್ಲಿನ ವಿಜಯನಗರದ ಮೊದಲಶಾಸನವಾಗಿದ್ದು ಬುಕ್ಕನು ಹರಿಹರನ ಜೊತೆ ಜಂಟಿ ಅರಸನಾಗಿದ್ದನೆಂಬ ಹೇಳಿಕೆಯನ್ನು ದೃಢಪಡಿಸುತ್ತದೆ. ಏಕೆಂದರೆ ಈ ಶಾಸನದಲ್ಲಿ ಹರಿಹರನ ಹೆಸರೇ ಇಲ್ಲ. ಮದ್ದೂರು ತಾಲ್ಲೂಕಿನ ಬುಕ್ಕರಾಯಸಮುದ್ರ,

[illegible]

ಕೀರ್ತಿಸಮುದ್ರ, ಮಾಳವ್ವೆಯಕೆರೆ, ಬಾಚಪ್ಪನಕೆರೆ, ಬೊಪ್ಪಸಮುದ್ರ ನಾಗಮಂಗಲ ತಾಲ್ಲೂಕಿನಲ್ಲಿ ವರದರಾಜ ಸಮುದ್ರ, ಪಾಂಡವಪುರ ತಾಲ್ಲೂಕಿನ ಪರಾಂಕುಶ ಸಮುದ್ರ ಹೀಗೆ ಹಲವು ಹತ್ತು ಕೆರೆಗಳ ರಚನೆಯು ಈ ಕಾಲದಲ್ಲಿ ಆದ ಉಲ್ಲೇಖ ಶಾಸನಗಳಲ್ಲಿದೆ. ಮೇಲುಕೋಟೆಯ ಬಳಿಯ ಹೊಸಕೆರೆ ಕೃಷ್ಣದೇವ ಒಡೆಯರ ಕೆರೆಗಳ ದುರಸ್ತಿ ಕೂಡ ಆಗ ನಡೆಯಿತು. ವಿಜಯನಗರದ ಮಾಂಡಳಿಕರಾಗಿ ಈ ಕಾಲದಲ್ಲಿ ಶ್ರೀರಂಗಪಟ್ಟಣ, ನಾಗಮಂಗಲಗಳಲ್ಲಿ ಪಾಳೆಯಗಾರರು ನೆಲೆಗೊಂಡಿದ್ದರು. ಉಮ್ಮತ್ತೂರು, ಪಾಳೆಯಗಾರರಿಗೆ ಸೇರಿದ ಭೂಮಿಗಳೂ ಆಗ ಈ ಜಿಲ್ಲೆಯಲ್ಲಿ ಇದ್ದವು. ನಾಗಮಂಗಲದ ಸಿಂಗಣ್ಣ ಒಡೆಯರ ಮಗ ದೇವರಾಜನು ಕಾವೇರಿ ನದಿಗೆ ತೋಡಿದ ಒಂದು ಕಾಲುವೆಯ ವಿಚಾರವೂ ಶಾಸನದಲ್ಲಿ ಬಂದಿದೆ. ರಾಜಧಾನಿಯಲ್ಲಿ ಆದ ಅಸ್ಥಿರತೆಯ ಲಾಭ ಪಡೆದು ಎಲ್ಲೆಡೆ ಬಂಡಾಯಗಳು ನಡೆದಾಗ ಸಾಳುವ ನರಸಿಂಹನು ೧೪೮೫ ರಲ್ಲಿ ತುಳುವ ನರಸನಾಯಕನ್ನು ಕಳುಹಿಸಿ ನಾಗಮಂಗಲ ಶ್ರೀರಂಗಪಟ್ಟಣಗಳನ್ನು ಕೃಷ್ಣದೇವರಾಯನ ತಂದೆ ಗೆದ್ದನು. ಸಂತೆ ಬಾಚಹಳ್ಳಿಯ ವೀರನಾರಾಯಣ ದೇವಾಲಯಕ್ಕೆ ನರಸನಾಯಕನು ಪುಣ್ಯಾರ್ಥ (೧೫೦೩ರಲ್ಲಿ ಅವನು ತೀರಿಕೊಂಡಾಗ) ನೀಡಿದ ದಾನಶಾಸನವೊಂದಿದೆ. ೧೫೦೬ರಲ್ಲಿ ಮಳವಳ್ಳಿ ತಾಲ್ಲೂಕು ಒಂದು ಶಾಸನದಂತೆ ಉಮ್ಮತ್ತೂರಿನ ಪಾಳೆಗಾರನು ವಿಜಯನಗರದ ವಿರುದ್ಧ ಅಗಿನ್ನು ಬಂಡು ಹೂಡಿರಲಿಲ್ಲ. ಮುಂದೆ ಆತನು ಹೂಡಿದ ಬಂಡಾಯವನ್ನು ಹತ್ತಿಕ್ಕಲು ತಾನು ಪಟ್ಟವೇರಿದ. ತಕ್ಷಣ ಕೃಷ್ಣದೇವರಾಯನು ಈ ಪ್ರದೇಶಕ್ಕೆ ದಂಡೆತ್ತಿ ಬಂದುದೊ ಮುಂದೆ ಶ್ರೀರಂಗಪಟ್ಟಣದ ಪಾಳೆಯಗಾರ ವೀರ ಒಡೆಯನ ಪುತ್ರಿ ತಿರುಮಲಾಂಬೆಯನ್ನು ತನ್ನ ಪಟ್ಟದ ರಾಣಿಯಾಗಿ ಸ್ವೀಕರಿಸಿದ್ದು, ಸಾಹಿತ್ಯ ಮೂಲಗಳಿಂದ ತಿಳಿಯುತ್ತದೆ. ಕೃಷ್ಣದೇವರಾಯ ಮತ್ತು ಅಚ್ಯುತರಾಯರು ಶ್ರೀರಂಗಪಟ್ಟಣ ಮತ್ತು ಮೇಲುಕೊಟೆ ದೇವಾಲಯಗಳಿಗೆ ಅನೇಕ ದಾನಗಳನ್ನು ನೀಡಿದ್ದಾರೆ. ತನ್ನ ಗುರುವಾದ ಗೋವಿಂದರಾಜ ಎಂಬುವವರಿಗೆ ೧೫೧೬ರಲ್ಲಿ ಕೃಷ್ಣದೇವರಾಯನು ನೀಡಿದ ದಾನಗಳಲ್ಲಿ ಮಂಡೆಯ (ಇಂದಿನ ಮಂಡ್ಯ) ಸೇರಿತ್ತು. ಇದು ಮಂಡ್ಯದ ಬಗೆಗಿನ ಪ್ರಥಮ ಶಾಸನೋಲ್ಲೇಖವಾಗಿದ್ದು ಇದು ಶ್ರೀರಂಗಪಟ್ಟಣ ಸೀಮೆಯ ಭಾಗವಾಗಿತ್ತು.[೮]

ಕ್ರಿ.ಶ. ೧೫೬೫ರ ತಾಳಿಕೋಟೆಯ ಕದನದ ಬಳಿಕ ವಿಜಯನಗರ ಸಾಮ್ರಾಜ್ಯವು ಒಡೆದು ಹೋಯಿತು. ರಾಮರಾಯನ ತಮ್ಮನಾದ ತಿರುಮಲರಾಯನು ಪೆನುಕೊಂಡೆಯಿಂದ ಆಳಲು ಪ್ರಾರಂಭಿಸಿ ತನ್ನ ಮಗ ರಾಜರಾಮನನ್ನು ಶ್ರೀರಂಗಪಟ್ಟಣದ ಸುತ್ತ–ಮುತ್ತಲಿನ ಪ್ರದೇಶಕ್ಕೆ ಮಾಂಡಲೀಕನಾಗಿ ನೇಮಿಸಿದನು. ಅವನು ಶ್ರೀರಂಗಪಟ್ಟಣದಿಂದ ಆಡಳಿತ ನಿರ್ವಹಿಸುತಿದ್ದು ಶಿವನಸಮುದ್ರ ಮತ್ತು ಮೇಲುಕೋಟೆಯ ದೇವಾಲಯಗಳಿಗೆ ದತ್ತಿ ನೀಡಿದನು. ಅವನ

ಮರಣಾನಂತರ ಕ್ರಿ.ಶ.೧೫೮೪ರಲ್ಲಿ ಅವನ ಮಗನಾದ ಎರಡನೇ ತಿರುಮಲನು ಶ್ರೀರಂಗಪಟ್ಟಣ ಪ್ರಾಂತ್ಯದ ಆಡಳಿತ ವಹಿಸಿಕೊಂಡನು.

ಈ ವೇಳೆಗಾಗಲೇ ಹದಿನಾಡು ಎಂಬಲ್ಲಿ ತಮ್ಮ ಆಳ್ವಿಕೆ ಪ್ರಾರಂಭಿಸಿದ್ದ ಯದುವಂಶದ ಒಡೆಯರ ಸಂತತಿಯ ಅರಸರು ರಾಜ್ಯ ವಿಸ್ತರಣೆಯಲ್ಲಿ ತೊಡಗಿದ್ದರು. ಈ ಮನೆತನದ ರಾಜ ಒಡೆಯನು (೧೫೭೮–೧೬೧೭) ಶ್ರೀರಂಗಪಟ್ಟಣದ ಎರಡನೇ ತಿರುಮಲನ ಮೇಲೆ ಯುದ್ಧ ಮಾಡಿ ಅವನನ್ನು ಸೋಲಿಸಿ ಕ್ರಿ.ಶ.೧೬೧೦ರಲ್ಲಿ ಶ್ರೀರಂಗಪಟ್ಟಣವನ್ನು ವಶಪಡಿಸಿಕೊಡನು. ನಂತರ ರಾಜ ಒಡೆಯನು ಶ್ರೀರಂಗಪಟ್ಟಣವನ್ನೇ ರಾಜಧಾನಿಯನ್ನಾಗಿ ಮಾಡಿಕೊಂಡು ಮಂಡ್ಯ, ಮದ್ದೂರಿನವರೆಗೂ ರಾಜ್ಯವನ್ನು ವಿಸ್ತರಿಸಿದನು. ಚನ್ನಪಟ್ಟಣದ ಪಾಳೇಗಾರನಾದ ಜಗದೇವರಾಯನನ್ನು ಸೋಲಿಸಿ ಚನ್ನಪಟ್ಟಣವನ್ನು ವಶಪಡಿಸಿಕೊಂಡನು. ಮೇಲುಕೋಟೆಯ ಚಲುವನಾರಾಯಣ ಸ್ವಾಮಿ ದೇವಾಲಯದ ಕಂಬವೊಂದರಲ್ಲಿ ರಾಜ ಒಡೆಯನ ಆಕೃತಿಯನ್ನು ಕೆತ್ತಲಾಗಿದೆ. ರಾಜ ಒಡೆಯನ ನಂತರದ ಕಂಠೀರವ ನರಸರಾಜನ ಕಾಲದಲ್ಲಿ ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿದರು. ಆದರೆ ಕಂಠೀರವ ಎದೆಗೂಂದದೆ ಹೋರಾಡಿ ಅವರನ್ನು ಬಗ್ಗುಬಡಿದು ಓಡಿಸಿದನು. ಆನಂತರ ಶ್ರೀರಂಗಪಟ್ಟಣವನ್ನು ಆಕ್ರಮಿಸಲು ಯತ್ನಿಸಿದ ಕೆಳದಿಯ ನಾಯಕ ಮತ್ತು ಮಧುರೆಯ ನಾಯಕರು ಪರಾಭವಗೊಂಡರು.

ಒಡೆಯರ ಸಂತತಿಯ ಪೂರ್ವಾರ್ಧದ ಆಳ್ವಿಕೆಯ ಕಾಲದ ರಾಜರಲ್ಲೆಲ್ಲಾ ಪ್ರಸಿದ್ಧನಾದವನು. ಕ್ರಿ.ಶ.೧೬೭೩ರಿಂದ ೧೭೦೪ರವರೆಗೆ ಆಳಿದ ಚಿಕ್ಕದೇವರಾಜ ಒಡೆಯರ್. ಇವನ ಕಾಲದಿಂದ ಮಂಡ್ಯ ಜಿಲ್ಲೆಯ ಶ್ರಿರಂಗಪಟ್ಟಣವು ಸುಮಾರು ವರ್ಷಗಳ ಕಾಲ ಕನ್ನಡ ನಾಡಿನ ರಾಜಕೀಯ ಮತ್ತು ಸಾಂಸ್ಕೃತಿಕ ಚಟುವಟಿಕೆಯ ಕೇಂದ್ರವಾಗಿತ್ತು . ಚಿಕ್ಕದೇವರಾಜನು ಕೆಳದಿ ಮತ್ತು ಮಧುರೆಯ ಪಾಳೆಯಗಾರನನ್ನು ಸೋಲಿಸಿ ಪಾಳೆಯಗಾರರಾದ ಮರಾಠರ ಹುಟ್ಟಡಗಿಸಿ ಬಾಬಾ ಬುಡನ್‌ಗಿರಿಯಿಂದ ಬಾರಾಮುಲ್ಲವರೆಗೆ ರಾಜ್ಯವನ್ನು ವಿಸ್ತರಿಸಿ ಸುಭದ್ರ ಆಡಳಿತವನ್ನು ಸ್ಥಾಪಿಸಿದನು. ಶ್ರೀರಂಗಪಟ್ಟಣ, ಮೇಲುಕೋಟೆ ಮತ್ತು ಮಳವಳ್ಳಿ ಪಟ್ಟಣಗಳು, ವ್ಯಾಪಾರ, ವಿದ್ಯಾಭ್ಯಾಸ ಮತ್ತು ಧಾರ್ಮಿಕ ಕೇಂದ್ರಗಳಾಗಿ ವಿಶೇಷವಾಗಿ ಪುರೋಭಿವೃದ್ದಿಗೊಂಡವು. ಶ್ರೀರಂಗಪಟ್ಟಣದಲ್ಲಿ ದೇವಾಲಯವನ್ನು ಕಟ್ಟಿಸುದುದಲ್ಲದೆ ಮೇಲುಕೋಟೆಯ ದೇವಾಲಯಗಳಿಗೆ ಅನೇಕ ಸವಲತ್ತುಗಳನ್ನು ದಾನ ದತ್ತಿಗಳನ್ನು ನೀಡಿದನು. ಚಿಕ್ಕದೇವರಾಜನ ಆಸ್ಥಾನವು ಅನೇಕ ಸಂಸ್ಕೃತ ಮತ್ತು ಕನ್ನಡ ಕವಿಗಳಿಂದ ಕೂಡಿದ್ದು, ಚಿಕ್ಕದೇವರಾಜನು ತಾನೆ ಸ್ವತಃ ಕವಿಯಾಗಿ ಅನೇಕ ಕೃತಿಗಳನ್ನು ರಚಿಸುದುದಲ್ಲದೆ, ತಿರುಮಲಾರ್ಯ ಚಿಕ್ಕೋಪಾದ್ಯಾಯ, ಸಂಚಿಯಹೊನ್ನಮ್ಮ ಮೊದಲಾದ ಕವಿಗಳು, ವಿದ್ವಾಂಸರು, ಅನೇಕ ಕೃತಿಗಳನ್ನು ಈ ಕಾಲದಲ್ಲಿ ರಚಿಸಿದ್ದರು.

ಕ್ರಿ.ಶ. ೧೩೫೮ರ ಅರುವನಹಳ್ಳಿಯ (ಮ.೯೩)ಯ ಮೊದಲನೆಯ ಬುಕ್ಕನ ಶಾಸನವೇ ವಿಜಯನಗರ ಅರಸರ ಪ್ರಾಚೀನ ಶಾಸನ. ಈ ಶಾಸನದಲ್ಲಿ ವಿಜಯನಗರದ ಅರಸರಿಗೆ ಸಾಮಾನ್ಯವಾಗಿ ಬರುವ ಅರಿರಾಯವಿಭಾಡ ಭಾಷೆಗೆ ತಪ್ಪುವರಾಯಗಂಡ ಇತ್ಯಾದಿ, ಬಿರುದಾವಳಿಗಳೊಂದಿಗೆ ವರ್ತಮಾನರಾಯಪರಮೇಶ್ವರ, ಅಭಂಗರಾಯದಾನವಜನಾರ್ಧನ, ಶ್ರೀವೀರಸಂಗಮೇಶ್ವರದ ರಾಯಾಬಾಹುತು ಎಂಬ ಪ್ರಶಸ್ತಿಗಳೂ ಇರುವುದು ಗಮನಾರ್ಹ. ಕ್ರಿ.ಶ. ೧೪೨೨-೨೩ ರ ಇಮ್ಮಡಿ ಹರಿಹರನ ಮಗ ಚಿಕ್ಕರಾಯನ ಹೆಸರಿರ ಅಪರೂಪದ ಶಾಸನ (ಮಂ.೧೦೭) ಇಲ್ಲಿದೆ. ದುರದೃಷ್ಟವಶಾತ್ ಶಾಸನ ತ್ರುಟಿತವಾಗಿದ್ದು ಚಿಕ್ಕರಾಯನ ಹೆಸರಿನಲ್ಲಿ ದಾನ ನೀಡಲಾಗಿರುವ ವಿಷಯ ಮಾತ್ರ ತಿಳಿದುಬರುತ್ತದೆ.

ಜಿಲ್ಲೆಯ ಶಾಸನಗಳು ಒಂದನೆಯ ಬುಕ್ಕನಿಂದ ಮೂರನೆಯ ಶ್ರೀರಂಗರಾಯನವರೆಗಿನ ಒಟ್ಟು ಹದಿನಾರು ಅರಸರನ್ನು ಉಲ್ಲೇಖಿಸಿವೆ. ಇವುಗಳಲ್ಲಿ ಕೃಷ್ಣದೇವರಾಯ, ಅಚ್ಯುತರಾಯ ಹಾಗೂ ಸದಾಶಿವರಾಯರ ಶಾಸನಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ತಾಮ್ರಶಾಸನಗಳಲ್ಲಿ ವಂಶಾವಳಿಯನ್ನು ನಿರೂಪಿಸಿದೆ. ಬಹುಪಾಲು ಶಾಸನಗಳು ದಾನದತ್ತಿ ಬಿಟ್ಟ ವಿಷಯವನ್ನು ನಿರೂಪಿಸುವ ದಾಖಲೆಗಳೇ ಆಗಿವೆ. ಶ್ರೀರಂಗಪಟ್ಟಣ ತಾಲ್ಲೂಕಿನ ಒಂದು ಶಾಸನದಲ್ಲಿ ಉಕ್ತನಾದ ವಿಜಯರಾಯನ ಹೆಸರು ಸಾಂಪ್ರದಾಯಿಕ ವಂಶಾವಳಿಯಲ್ಲಿ ಸೇರಿರುವುದು ವಿರಳ ಆದರೆ ಆತ ರಾಜ್ಯವಾಳುತ್ತಿದ್ದ ಸಂಗತಿ ಹೊಸಳ್ಳಿ ಶಾಸನದಲ್ಲಿ ಸ್ಪಷ್ಟ ಮಾತುಗಳಲ್ಲಿ ನಿರೂಪಿತವಾಗಿದೆ. **"ಶ್ರೀವೀರಪ್ರತಾಪ ವಿಜಯ ಮಹಾರಾಯರು ರಾಜ್ಯಂಗೆವಿತಿರಲು"** ಈ ಶಾಸನದ ಕಾಲ ಕ್ರಿ.ಶ.೧೪೪೬–೪೭ ಇದೇ ಕಾಲದಲ್ಲಿ ಮಲ್ಲಿಕಾರ್ಜುನನೂ ಆಳುತ್ತಿದ್ದನೆಂದು ಶ್ರೀರಂಗಪಟ್ಟಣದ ಒಂದು ಶಾಸನದಿಂದ ತಿಳಿದುಬರುತ್ತದೆ. ಏಕಕಾಲದಲ್ಲಿ ಇಬ್ಬರು ಅರಸರು ಆಳುತ್ತಿದ್ದ ವಿಷಯ ಕುತೂಹಲಕರವಾಗಿದೆ. ಈ ವಿಜಯರಾಯ ಇಮ್ಮಡಿ ದೇವರಾಯನ ಮಗನೆಂದು ಗುರುತಿಸಿದೆ. ತುಳುವ ನರಸನಾಯಕ ಕ್ರಿ.ಶ.೧೫೦೩ರ ಹೊತ್ತಿಗೆ ಮೃತನಾಗಿದ್ದ ವಿಷಯ ಸಂತೇಬಾಚನಹಳ್ಳಿಯ ಶಾಸನದಿಂದ ಗೊತ್ತಾಗುತ್ತದೆ.

ಕ್ರಿ.ಶ.೧೫೪೫ರ ಹೊನ್ನೇನಹಳ್ಳಿ ತಾಮ್ರಶಾಸನದಲ್ಲಿ ಚಾರಿತ್ರಿಕ ಅಂಶಗಳು ಉಲ್ಲೇಖಿತವಾಗಿವೆ. ಅಚ್ಯುತರಾಯನ ತರುವಾಯ ಆತನ ಮಗ ವೆಂಕಟದೇವರಾಯ ಸ್ವಲ್ಪಕಾಲ ರಾಜ್ಯವಾಳಿ ಮೃತ್ಯುಗೀಡಾದ. ಅನಂತರ ಸದಾಶಿವರಾಯನು ತನ್ನ ಭಾವ ರಾಮನಿಂದ ಪಟ್ಟಾಭಿಷಿಕ್ತನಾದ. ಈತ ಸುಗಿರಿಯ ಶತ್ರುಗಳನ್ನು ಸದೆಬಡೆದ ಸಂಗತಿಯೂ ಇದೇ ಶಾಸನದಲ್ಲಿ ನಿರೂಪಿತವಾಗಿದೆ.

ಕ್ರಿ.ಶ.೧೬೨೩ರ ಹೊನ್ನಲಗೆರೆ ತಾಮ್ರಶಾಸನ ವೀರರಾಮದೇವರಾಯನನ್ನು ಹೆಸರಿಸಿದ್ದರೂ ವಿಜಯನಗರ ಅರಸರ ಸಾಮಂತರಾಗಿದ್ದ ಮೈಸೂರು ಒಡೆಯರ ಸಂತತಿಗೆ ಸೇರಿದ ಚಾಮರಾಜೇಂದ್ರನನ್ನು **"ಶ್ರೀರಂಗಪಟ್ಟಣ ಖ್ಯಾತ ಬೋಜಸಿಂಹಾಸನಾಧಿಪ"** ಎಂದು ಉಲ್ಲೇಖಿಸಿರುವುದು ಗಮನಿಸಬೇಕಾದ ಸಂಗತಿ ಈ ಹೊತ್ತಿಗಾಗಲೇ ವಿಜಯನಗರ ಸಾಮ್ರಾಜ್ಯ ಛಿದ್ರಗೊಂಡು ಹತ್ತಾರು ಪಾಳೆಯ ಪಟ್ಟುಗಳು ಸ್ವತಂತ್ರವಾಗಿ ತಲೆಯೆತ್ತ ತೊಡಗಿದ್ದವು. ಶ್ರೀರಂಗಪಟ್ಟಣದ ಶಾಸನವೊಂದರಿಂದ ಮೂರನೆಯ ಶ್ರೀರಂಗರಾಯ ಪೆನುಗೊಂಡೆಯಿಂದ ಆಳುತ್ತಿದ್ದನೆಂಬ ವಿಷಯ ತಿಳಿದುಬರುತ್ತದೆ.

ಸುಮಾರು ಐದು ಶತಮಾನಗಳ ಕಾಲ ಆಳಿದ ಮೈಸೂರು ಒಡೆಯರ ಬಹುಪಾಲು ಶಾಸನಗಳು ಅಗ್ರಹಾರ ಸ್ಥಾಪನೆ ಕೆರೆದೇಗುಲಗಳ ಜೀರ್ಣೋದ್ಧಾರ ಇಲ್ಲವೇ ದಾನದತ್ತಿಗಳಿಗೆ ಸಂಬಂಧಿಸಿವೆ. ರಾಜವಡೆಯರಿಂದ ನಾಲ್ವಡಿಕೃಷ್ಣರಾಜಒಡೆಯರವರೆಗಿನ ಶಾಸನಗಳು ಮಂಡ್ಯ ಜಿಲ್ಲೆಯಲ್ಲಿ ಉಪಲಬ್ಧವಾಗಿವೆ. ಅನೇಕ ತಾಮ್ರಶಾಸನಗಳಲ್ಲಿ ಈ ಅರಸರ ವಂಶದ ಉಗಮವನ್ನು ವಿಷ್ಣುವಿನಿಂದ ಆರಂಭಿಸಿದೆ. ಈ ಪೌರಾಣಿಕ ಹಿನ್ನಲೆಯನ್ನು ತಿಳಿಸುವುದು ತಮ್ಮ ವಂಶಕ್ಕೆ ಪ್ರಾಚೀನತೆಯ ಬಣ್ಣ ಲೇಪಿಸುವುದಕ್ಕಾಗಿ ಶ್ರೀರಂಗಪಟ್ಟಣದ ಒಂದು ಶಾಸನ ಮತ್ತು ಮೇಲುಕೋಟೆಯ ಒಂದು ಶಾಸನಗಳಲ್ಲಿ ಇಂಥ ಪ್ರಯತ್ನಗಳನ್ನು ಕಾಣಬಹುದು. ಇತರ ಆಕರಗಳಿಂದ ತಿಳಿದುಬರುವ ಮೈಸೂರಿನ ಒಡೆಯರ ಇತಿಹಾಸವನ್ನು ಬದಲಿಸುವಂಥ ಯಾವುದೇ ಅಂಶ ಮಂಡ್ಯ ಜಿಲ್ಲೆಯ ಶಾಸನಗಳಲ್ಲಿ ಕಂಡುಬರುವುದಿಲ್ಲ. ಇದೇ ಮಾತು ಉಮ್ಮತ್ತೂರು, ಹದಿನಾಡು, ಕಳಲೆ, ಚನ್ನಪಟ್ಟಣ ಮತ್ತು ನಾಗಮಂಗಲದ ಅಧಿಪರಿಗೂ ಅನ್ವಯವಾಗುತ್ತದೆ.

ಹೊಯ್ಸಳ ಸಾಮ್ರಾಜ್ಯದ ವಿನಾಶದ ನಂತರ ಉಂಟಾಗಿದ್ದ ರಾಜಕೀಯ ಶೂನ್ಯವು ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯೊಂದಿಗೆ ನಿವಾರಣೆಗೊಂಡು ರಾಜಕೀಯ ಭದ್ರತೆಗೆ ಎಡೆಮಾಡಿಕೊಟ್ಟಿತು. ಸಂಗಮನ ಮಕ್ಕಳಾದ ಹರಿಹರ, ಬುಕ್ಕ, ಕಂಪಣ, ಮಾರಪ್ಪ ಮತ್ತು ಮುದ್ದಪ್ಪ ಇವರುಗಳು ಹೊಯ್ಸಳ ವಂಶದೊಡನೆ ಸಂಬಂದ ಹೊಂದಿದ್ದರು. ವಿಜಯನಗರದ ಹರಿಹರನು ತನ್ನ ಮಗಳನ್ನು ಹೊಯ್ಸಳ ಅಧಿಕಾರಿ ಸೋಮಯ್ಯ ದಂಡನಾಯಕನ ಮಗ ಬಲ್ಲಪ್ಪ ದಂಡನಾಯಕನಿಗೆ ವಿವಾಹ ಮಾಡಿಕೊಟ್ಟಿದ್ದನು. ಮುಮ್ಮಡಿ ಬಲ್ಲಾಳನ ತಂಗಿಯನ್ನು ಸೋಮಯ್ಯನು ವಿವಾಹವಾಗಿದ್ದನು ಮತ್ತು ಮುಮ್ಮಡಿಬಲ್ಲಾಳನ ಸೋದರನ ಮಗನು ಹರಿಹರನ ಅಳಿಯನಾಗಿದ್ದನು. ಸೋಮನಾಥಪುರ (ಟಿ.ನರಸೀಪುರ ತಾಲ್ಲೂಕು) ದೇವಾಲಯವನ್ನು ನಿರ್ಮಿಸಿದ ಸೋಮಯ್ಯ ದಂಡನಾಯಕನು, ಮೇಲೆ ಹೆಸರಿಸಿರುವ ಸೋಮಯ್ಯ ದಂಡನಾಯಕನ

ಮೊಮ್ಮಗನೆಂದು ಹಲವಾರು ವಿದ್ವಾಂಸರು ಒಪ್ಪಿರುತ್ತಾರೆ. ಸಂಗಮ ವಂಶ ಮತ್ತು ಹರಿಹರನು ಬೇಲೂರಿನ ಕೇಶವ (ವಿಜಯನಾರಾಯಣ) ದೇವಾಲಯದೊಡನೆ ಹೊಂದಿದ್ದ ಸಂಬಂಧಗಳು ಹಾಗೂ ಹಂಪಿಯ ವಿರೂಪಾಕ್ಷದೇವಾಲಯದಲ್ಲಿ ಕಂಡುಬರುವ ಹಲವು ಸಿಂಹ ಶಿಲ್ಪಗಳು ಮತ್ತು ಅವರು ಧರಿಸಿದ್ದ ಬಿರುದುಗಳಾದ ಭಾಷೆಗೆ ತಪ್ಪದ 'ರಾಯರಗಂಡ' ಹಾಗೂ 'ಮೂರು ರಾಯರಗಂಡ' ಇವುಗಳು ಸಂಸ್ಕೃತ ಶಾಸನಗಳಲ್ಲೂ ಕಂಡುಬರುವುದರಿಂದ ವಿಜಯನಗರದ ಅರಸರು ಮೂಲತಃ ತೆಲಗು ದೇಶದವರಲ್ಲದೇ ಕನ್ನಡ ಮೂಲದವರೆಂಬ ವಾದವು ಪುಷ್ಟಿ ಪಡೆಯುತ್ತದೆ. ಅದರೆ ವಾರಂಗಲ್‌ನ ತೆಲುಗು ಶಾಸನಗಳು ಅವರನ್ನು ತೆಲುಗು ಮೂಲದವರೆಂದು ಪ್ರತಿಪಾದಿಸುತ್ತದೆ. ಮುಮ್ಮಡಿ ಬಲ್ಲಾಳನು ತನ್ನ ಸಾಮ್ರಾಜ್ಯ ಉತ್ತರ ಭಾಗದ ರಾಜಧಾನಿಯನ್ನು **'ವಿರೂಪಾಕ್ಷ ಹೊಸಪಟ್ಟಣ'** ವೆಂದು ಕರೆದಿದ್ದು, ಇದು **'ಹಂಪಿ'** ಇರಬೇಕೆಂದು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಈ ಹೊಸಪಟ್ಟಣದ ಆಡಳಿತವನ್ನು ನಿರ್ವಹಿಸಲು ಬಲ್ಲಾಳನು ಹರಿಹರನನ್ನು ನೇಮಿಸಿದ್ದನೆಂಬ ಅಭಿಪ್ರಾಯವಿದೆ. ವಿಜಯನಗರದ ಸ್ಥಾಪನೆಯು ಕ್ರಿ.ಶ.೧೩೩೬ರಲ್ಲಿ ಸಂಭವಿಸಿತೆಂಬ ಸಾಂಪ್ರದಾಯಿಕ ನಂಬಿಕೆಯಿದ್ದು, ಉಡುಪಿ ಜಿಲ್ಲೆಯ ಬಾರ್ಕೂರಿನಲ್ಲಿ ದೊರೆತ ಹಸ್ತ ಪ್ರತಿ ದಾಖಲೆಗಳನ್ನು ಪರೀಕ್ಷಿಸಿದ ಪ್ರಾನ್ಸಿಸ್‌ಬುಕಾನನ್ ಸಹ ಇದೇ ದಿನಾಂಕವನ್ನು ಸಮರ್ಥಿಸಿರುವುದುನ್ನು ಕಾಣಬಹುದು.

ಮದ್ದೂರು ತಾಲ್ಲೂಕಿನ ಬೊಪ್ಪಸಂದ್ರ ಗ್ರಾಮದಲ್ಲಿ ದೊರೆತಿರುವ ಕ್ರಿ.ಶ.೧೩೬೩ರ ಶಾಸನವು ವಿಜಯನಗರ ಅರಸು ವೀರಬುಕ್ಕಣ್ಣ ಒಡೆಯನ ಅಳ್ವಿಕೆಯಲ್ಲಿ ಈತನು ಬೊಪ್ಪಸಮುದ್ರದ ವ್ಯಾಪ್ತಿಯಲ್ಲಿದ್ದ ಫಲವತ್ತಾದ ಭೂಮಿಯನ್ನು ತೀರ್ಥದ ತಿಪ್ಪೂರು ಗ್ರಾಮದ ಬೊಮ್ಮಣ್ಣನ ಮಗ **'ಹರಿಯಣ್ಣನಿಗೆ'** ದಾನವಾಗಿ ನೀಡಿದ ಬಗ್ಗೆ ಉಲ್ಲೇಖಿಸುತ್ತದೆ.

ವಿಜಯನಗರದ ಇತಿಹಾಸದಲ್ಲಿ ಕ್ರಿ.ಶ.೧೪೮೬ರಿಂದ ಎರಡು ದಶಕಗಳನ್ನು ರಾಜಕೀಯವಾಗಿ ಹೆಚ್ಚು ಮಹತ್ವ ಪಡೆದ ನೂತನ ಹಂತವೆಂದು ಪರಿಗಣಿಸಲಾಗಿದೆ. ಈ ಅವಧಿಗೆ ಸಂಬಂದಿಸಿದಂತೆ ನಮಗೆ ಮುಖ್ಯವಾಗಿ ಮಾಹಿತಿ ಕೊಡುವವನು ನ್ಯೂನಿಚ್ ಫೆರ್ನಾವೋ, ನ್ಯೂನಿಚ್ ಈ ಸಾಮ್ರಾಜ್ಯಕ್ಕೆ ಭೇಟಿ ನೀಡಿದ್ದ ಒಬ್ಬ ಕುದುರೆ ವ್ಯಾಪಾರಿ ಹಾಗೂ ಅವನು ಸುಮಾರು ಎರಡು ವರ್ಷಗಳಷ್ಟು ಕಾಲವನ್ನು ವಿಜಯನಗರದಲ್ಲಿ ಕಳೆದನೆಂಬ ನಂಬಿಕೆ ಇದೆ. ಸಾಳುವ ವಂಶದ ದೊರೆಯಾದ ನರಸಿಂಹನು ಮೂಲತಃ ಸುಮಾರು ಕ್ರಿ.ಶ.೧೪೫೭ರಲ್ಲಿ ಮಲ್ಲಿಕಾರ್ಜುನನ ಅಧೀನದಲ್ಲಿ ಆಳುತ್ತಿದ್ದನು.

ಹದಿನಾಡು ಪಾಳೆಯಗಾರರು ವಿಜಯನಗರ ಸಾಮ್ರಾಜ್ಯದ ಸಾಮಂತರಾಗಿ ಪ್ರಾಂತೀಯ ಅರಸರ (ಮಾಂಡಲಿಕ ಮನೆತನ) ಸ್ಥಾನವನ್ನು ಪಡೆದಿದ್ದು ಯಳಂದೂರು, ನಂಜನಗೂಡು ಮತ್ತು ಕೊಳ್ಳೇಗಾಲಗಳ ಸುತ್ತಮುತ್ತಲ ಪ್ರದೇಶವನ್ನು ಆಳುತ್ತಿದ್ದರು. ಇವರಲ್ಲಿ ಮುಖ್ಯರಾದವರು ಹದಿನಾಡಿನ ಅರಸರು ಎಂಬುದು ಶಾಸನಗಳಿಂದಲೂ ಹಾಗೂ ಇತರೆ ದಾಖಲೆಗಳಿಂದಲೂ ತಿಳಿದು ಬರುತ್ತದೆ. ಗಂಗ ಮತ್ತು ಚೋಳರ ಶಾಸನಗಳಲ್ಲಿ ಇವರನ್ನು 'ಅದಿನಾರು' ಎಂದು ಹೆಸರಿಸಿದೆ. ಹೊಯ್ಸಳ ಮತ್ತು ವಿಜಯನಗರದ ಶಾಸನಗಳಲ್ಲಿ 'ಹದಿನಾಡು' ಎಂಬ ಉಲ್ಲೇಖವಿದೆ. ವಿಜಯನಗರ ಕಾಲದಲ್ಲಿ ಪ್ರಾಮುಖ್ಯತೆ ಪಡೆದಿದ್ದ ಹದಿನಾಡಿನ ರಾಜರು ವಿಜಯನಗರ ಅರಸರ ಪ್ರಭುತ್ವವನ್ನು ಒಪ್ಪಿಕೊಂಡಿದ್ದರು. ಯಳಂದೂರು ಹದಿನಾಡಿನ ರಾಜಧಾನಿಯಾಗಿತ್ತು. ಈ ಅರಸರು ಕ್ರಿ.ಶ.೧೫೪೪ರಿಂದ ಕ್ರಿ.ಶ.೧೬೬೭ ರವರೆಗೆ ಒಟ್ಟು ೧೧೮ ವರ್ಷಗಳು ರಾಜ್ಯಭಾರ ಮಾಡಿದರು. ಇವರ ರಾಜ್ಯಾಡಳಿತದಲ್ಲಿ ಸಾಹಿತ್ಯ ಮತ್ತು ಸಂಸ್ಕೃತಿಗಳಿಗೆ ತಮ್ಮದೆ ಆದ ವಿಶೇಷ ಕೊಡುಗೆಯನ್ನು ನೀಡಿದರು. ಮೂಲತಃ ಗೌಡ ಜನಾಂಗಕ್ಕೆ ಸೇರಿದ ಹದಿನಾಡು ರಾಜರು ಕಾಲಕ್ರಮದಲ್ಲಿ ಸ್ವಾತಂತ್ರ್ಯ ರಾಜರಾಗಿ ಆಳ್ವಿಕೆ ನಡೆಸಿದರು. ಈ ವಂಶದಲ್ಲಿ ಕಂಡು ಬರುವ ಸಿಂಘದೇವಭೂಪ ಅಥವಾ ದೇವಪ್ಪಗೌಡನೇ ಮೂಲ ದೊರೆಯೆಂದು ತಿಳಿದುಬರುತ್ತದೆ. ಇವನ ತರುವಾಯ ಪ್ರಬಲನಾಗಿದ್ದ ಮಹಾಮಾಡಳೇಶ್ವರ ನರಪರಾಜನು ಹದಿನಾಡು ಪ್ರಾಂತವನ್ನು ಆಳುತ್ತಿದ್ದಾಗ ಕ್ರಿ.ಶ.೧೫೪೬ರಲ್ಲಿ ಚಾಮರಸಗೌಡನು (ದೇವಪ್ಪಗೌಡನಮಗ) ಒಬ್ಬ ಅಧೀನ ಅಧಿಕಾರಿಯಾಗಿದ್ದನು. ಅನಂತರ ಸದಾಶಿವರಾಯನು ವಿಜಯನಗರವನ್ನು ಆಳುತ್ತಿದ್ದಾಗ ಕ್ರಿ.ಶ.೧೫೬೩ರಲ್ಲಿ ಅವನು ಪ್ರಾಂತೀಯ ರಾಜ್ಯಪಾಲನಾಗಿದ್ದ ಜಗದೇವರಾಯನ ಅಧಿಕಾರಿಯೂ ಆಗಿದ್ದನು.

ಜಿಲ್ಲೆಯು ವಿಜಯನಗರದ ಅರಸರ ಕಾಲದಲ್ಲಿ ಹೊಯ್ಸಳನಾಡೆಂದೇ ಪ್ರಸಿದ್ಧವಾಗಿತ್ತು. ವಿಜಯನಗರದ ಸ್ಥಾಪನೆಯೊಂದಿಗೆ ಈ ಪ್ರದೇಶದಲ್ಲಿ ದುರ್ಬಲವಾಗಿದ್ದ ಹಲವು ಪ್ರಾದೇಶಿಕ ರಾಜಕೀಯ ಶಕ್ತಿಗಳು ಅಸ್ತಿತ್ವಕ್ಕೆ ಬಂದವು. ಇಂತಹವುಗಳಲ್ಲಿ ಉಮ್ಮತ್ತೂರಿನ ಪಾಳೆಗಾರರದು ಪುನಃಶ್ಚೇತಗೊಂಡ ಇಂತಹ ಒಂದು ಮುಖ್ಯವಾದ ರಾಜಕೀಯ ಶಕ್ತಿಯಾಗಿತ್ತು. ಈ ಪಾಳೆಯಗಾರರು ಮೈಸೂರು ಜಿಲ್ಲೆಯ ದಕ್ಷಿಣ ನಂಜನಗೂಡಿನ ಸ್ವಲ್ಪ ಭಾಗಗಳಾದ ಗುಂಡ್ಲುಪೇಟೆ, ಚಾಮರಾಜನಗರ, ಯಳಂದೂರು ಮತ್ತು ಮಳವಳ್ಳಿ ಹಾಗೂ ಕೊಯಮತ್ತೂರು ಜಿಲ್ಲೆಯ ಸ್ವಲ್ಪ ಭಾಗಗಳ ಮೇಲೆ ತಮ್ಮ ಹತೋಟಿಯನ್ನು ಸ್ಥಾಪಿಸಿಕೊಂಡಿದ್ದರು. ಇವರು ಮೈಸೂರಿನ ದಕ್ಷಿಣ ಭಾಗದ ಪ್ರಮುಖ ಅರಸರಾಗಿದ್ದು, ಮೈಸೂರಿನ ಒಡೆಯರಿಗೆ ಈ ಭಾಗದ ಮುಖ್ಯ ವೈರಿಗಳಾಗಿದ್ದರು. ಆದರೆ ಇವರು ವಿಜಯನಗರದ ಸಾಮಂತರಾಗಿದ್ದುದರಿಂದ ರಾಜಕೀಯವಾಗಿ

ಪ್ರಭಾವಶಾಲಿಗಳಾಗಿದ್ದರು. ಉಮ್ಮತ್ತೂರು ಚಾಮರಾಜನಗರ ತಾಲ್ಲೂಕಿನಲ್ಲಿರುವ ಚಿಕ್ಕ ಗ್ರಾಮವಾಗಿದೆ. ಈ ಅರಸರ ಮುಖ್ಯಕೋಟೆಯು ಮಳವಳ್ಳಿ ತಾಲ್ಲೂಕಿನ ಶಿವನಸಮುದ್ರದ ದ್ವೀಪದಲ್ಲಿದೆ. ಶಿಂಷಾ ಜಲಪಾತದ ಸಮೀಪವಿದ್ದು ಅದರ ಸಮೀಪವೇ ಅವರ ಕಾಲದೈವ ಸೋಮೇಶ್ವರನ ದೇವಾಲಯವೂ ಇದೆ. ಕಾವೇರಿ ಮತ್ತು ಕಪಿಲೆಗಳಿಂದ ಸುತ್ತುವರಿಯಲ್ಪಟ್ಟು ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಈ ಮನೆತನದವರು ಆಳುತ್ತಿದ್ದರು. ಇವರ ಸಾಮ್ರಾಜ್ಯದ ಸ್ಥಾಪನೆಯ ಕಾಲ ಈ ಪ್ರಭುಗಳು ಉಮ್ಮತ್ತೂರಿಗೆ ಸೇರಿದವರೋ ಇಲ್ಲವೋ? ಅಥವಾ ಇವರ ಮೂಲ ಸ್ಥಳ ಯಾವುದು ಎಂಬ ಹಲವಾರು ಪ್ರಶ್ನೆಗಳಿಗೆ ಸಮಂಜಸವಾದ ಉತ್ತರಗಳು ದೊರೆಯುವುದಿಲ್ಲ. ಆದರೆ ಲಭ್ಯವಿರುವ ಅವರ ಹಲವಾರು ಶಾಸನಗಳ ಆಧಾರದ ಮೇಲೆ ಅವರ ಇತಿಹಾಸವು ಬೆಳಕಿಗೆ ಬಂದಿದೆ.

ಜಿಲ್ಲೆಯಲ್ಲಿ ಉಮ್ಮತ್ತೂರು ಪಾಳೆಯಗಾರರ ಕಾಲದ ಐದು ಶಾಸನಗಳು ಲಭ್ಯವಿದ್ದು, ಮಳವಳ್ಳಿ ತಾಲ್ಲೂಕಿನ ಹೊನ್ನಗನಹಳ್ಳಿಯ ಶಾಸನವು ಕ್ರಿ.ಶ.೧೫–೧೬ನೇ ಶತಮಾನದ ಲಕ್ಷಣವನ್ನು ವ್ಯಕ್ತಪಡಿಸುತ್ತದೆ. ಮಹಾಮಂಡಳೇಶ್ವರ ವೀರಇಮ್ಮಡಿರಾಯ ಒಡೆಯನನ್ನು ಬನ್ನಿಯಾರು ಗ್ರಾಮದ ಬಳಿಯ ಹೊನಗನಹಳ್ಳಿ (ಇಂದಿನ ಮಳವಳ್ಳಿ ತಾಲ್ಲೂಕು)ಯನ್ನು ಬನ್ನಿಯಾರ ಮಾಯಪ್ಪನೆಂಬ ಅಧಿಕಾರಿಗೆ ದತ್ತಿ ಬಿಟ್ಟ ವಿಚಾರವನ್ನು ಈ ಶಾಸನದಲ್ಲಿ ದಾಖಲಿಸಿದೆ. ಇದೇ ತಾಲ್ಲೂಕಿನ ಮುಟ್ಟನಹಳ್ಳಿಯ ೧೫೦೬ರ ಶಾಸನವು ವಿಜಯನಗರದ ತುಳುವ ವಂಶದ ನರಸಿಂಹನ ಕಾಲಕ್ಕೆ ಸೇರಿದ್ದು, ತಲಕಾಡು ನಾಡಿನ ಧನಗೂರು ಸ್ಥಳದ ಮೊನೆ ಮುಟ್ಟರಹಳ್ಳಿಯನ್ನು ಚಿಕ್ಕ ರಾಯಸಾಗರವೆಂದು ಕರೆದು ಅಗ್ರಹಾರವನ್ನಾಗಿ ಪರಿವರ್ತಿಸಿ ಆಲಿಕೊಂಡದ ತಿರುಮಲ ಭಟ್ಟನ ಮಗ ಉತ್ತಮ ವ್ಯಾಕರಣಪಂಡಿತರಾಗಿದ್ದ ನಾಗಭಟ್ಟನಿಗೆ ಏಕಸ್ವಾಮ್ಯದ ಗ್ರಾಮವನ್ನಾಗಿ ದತ್ತಿ ಬಿಟ್ಟ ವಿಚಾರವನ್ನು ದಾಖಲಿಸಿದೆ. ಇದೇ ತಾಲ್ಲೂಕಿನ ಕುಂದೂರು ಗ್ರಾಮದ ಕ್ರಿ.ಶ.೧೫೧೦ರ ಶಾಸನದಲ್ಲಿ ಮಹಾಮಂಡಳೇಶ್ವರ ಪಿರಿಯ ಒಡೆಯನು ಕಿರುಗಾವಲು ಸ್ಥಳದ ಕಲ್ಕುಣಿ ಗ್ರಾಮವನ್ನು ಸಂಗಮ ಕ್ಷೇತ್ರದಲ್ಲಿರುವ ನಂಜುಂಡೇಶ್ವರ ದೇವರಿಗೆ ದತ್ತಿಬಿಟ್ಟ ವಿಚಾರವನ್ನು ಉಲ್ಲೇಖಿಸಿದೆ. ಇದೇ ತಾಲ್ಲೂಕಿನ ನೆಟ್ಟಕಲ್ಲು ಗ್ರಾಮದ ಕ್ರಿ.ಶ.೧೫೩೨ರ ಶಾಸನದಲ್ಲಿ ಉಮ್ಮೆತ್ತೂರಿನ ವೀರ ಮಂಗಪ್ಪ ಒಡೆಯನ ಮಗನಾದ ಮಹಾಮಂಡಳೇಶ್ವರಮಲ್ಲರಾಜ ಒಡೆಯನು ತಲಕಾಡು ಸೀಮೆಯ ವ್ಯಾಪ್ತಿಯಲ್ಲಿದ್ದ ಹಾಗೂ ಧನಗೂರು ಸೀಮೆಯೊಳಗೂ ನೆಟ್ಟಕಲ್ಲ ಗ್ರಾಮವನ್ನು ದತ್ತಿ ಬಿಟ್ಟ ವಿಷಯವನ್ನು ದಾಖಲಿಸಲಾಗಿದೆ. ಇದರಿಂದಾಗಿ ಕಾವೇರಿ ಜಲಪಾತವಿರುವ ಶಿವನ ಸಮುದ್ರದ ದ್ವೀಪದಲ್ಲಿ ಕೋಟೆಯನ್ನು ಕಟ್ಟಿಕೊಂಡು ಕ್ರಿ.ಶ.೧೬ನೇ ಶತಮಾನದ ಆರಂಭದಲ್ಲಿ ಸ್ವತಂತ್ರನಾದವನು ಈತನೆಂಬುದು ಸ್ಪಷ್ಟವಾಗಿತ್ತದೆ. ಮೈಸೂರು ರಾಜ್ಯವು ಕೃಷ್ಣದೇವರಾಯನ ಆಳ್ವಿಕೆಯಲ್ಲಿ

ವಿಜಯನಗರದ ಅಧೀನವಾಗಿತ್ತು. ಆಗ ಆತನು ಉಮ್ಮತ್ತೂರು ಗಂಗರಾಜನನ್ನು ಸೋಲಿಸಿ ಶಿವನಸಮುದ್ರ ಕೋಟೆಯನ್ನು ಹಾಗೂ ಶ್ರೀರಂಗಪಟ್ಟಣವನ್ನೂ ವಶಪಡಿಸಿಕೊಂಡನು.೫ ನಂಜನಗೂಡಿನ ಕ್ರಿ.ಶ.೧೫೧೨ರ ಶಾಸನದ ಪ್ರಕಾರ ಕೃಷ್ಣದೇವರಾಯನು ತಲಕಾಡು ಉಮ್ಮತ್ತೂರುಗಳೆರಡನ್ನೂ ಗೆದ್ದು ಸಾಳುವ ಗೋವಿಂದರಾಜನನ್ನು ಉಮ್ಮತ್ತೂರಿನ ರಾಜ್ಯ ಪಾಲನಾಗಿ ನೇಮಕ ಮಾಡಿದನು. ಅನಂತರ ಈ ಎಲ್ಲಾ ಪ್ರದೇಶಗಳೂ ವಿಜಯನಗರದ ಸಾಮ್ರಾಜ್ಯದಲ್ಲಿ ಲೀನವಾದವು. ಮುಂದೆ ಮೈಸೂರಿನ ರಾಜ ಒಡೆಯರು ಉಮ್ಮತ್ತೂರು ಪಾಳೆಯಪಟ್ಟನ್ನು ಮೈಸೂರು ರಾಜ್ಯಕ್ಕೆ ಸೇರಿಸಿಕೊಂಡರು.೬

ವಿಜಯನಗರದ ಸಾಮ್ರಾಜ್ಯವು ಅವನತಿಗೊಂಡು ಪೆನುಗೊಂಡೆಯಲ್ಲಿ ಸಣ್ಣ ಪ್ರಮಾಣದಲ್ಲಿ ಅರವೀಡು ವಂಶದ ಆಳ್ವಿಕೆಯು ಪ್ರಾರಂಭವಾಗಿದ್ದ ಕೊನೆಯ ಹಂತದಲ್ಲಿ ಮೈಸೂರು ಒಡೆಯರ ವಂಶದ ಆಳ್ವಿಕೆಯು ಉಗಮಗೊಂಡಿತು. ವಿಜಯ ಮತ್ತು ಕೃಷ್ಣ ಎಂಬ ಯಾದವ ಕುಲದ ಇಬ್ಬರು ಸಹೋದರರು. ಉತ್ತರ ಭಾರತದ ಗುಜರಾತ್‌ನ ದ್ವಾರಕೆಯಿಂದ ಹೊರಟು ಹದಿನಾಡಿಗೆ ಬಂದು ನೆಲೆಸಿದರೆಂಬ ಪ್ರತೀತಿಯಿದೆ. ಸಾಂಪ್ರದಾಯಿಕ ನಂಬಿಕೆಯ ಪ್ರಕಾರ ಕ್ರಿ.ಶ.೧೩೯೯ರಲ್ಲಿ ಮೈಸೂರು ಅರಸು ಮನೆತನವು ಅಸ್ತಿತ್ವಕ್ಕೆ ಬಂದು ಯದುವಂಶದ ವಿಜಯ ಮತ್ತು ಕೃಷ್ಣರೆಂಬ ಸಹೋದರರು ಕಾರುಗಹಳ್ಳಿ ನಾಯಕನಿಗೆ ಬಲವಂತವಾಗಿ ವಿವಾಹ ಮಾಡಬೇಕಾಗಿದ್ದ ಸಂದರ್ಭ ಒದಗಿದಾಗ ಹದಿನಾಡು ಪ್ರಭುವಿನ ಕನ್ಯೆಗೆ ರಕ್ಷಣೆ ನೀಡಿದರು. ನಂತರ ಇವರು ಅಧಿಕಾರಕ್ಕೆ ಬಂದು ಹದಿನಾಡು ಮತ್ತು ಕಾರುಗಹಳ್ಳಿಗಳನ್ನೊಳಗೊಂಡಂತೆ ರಾಜ್ಯವನ್ನು ರೂಪಿಸಿಕೊಂಡರು. ವಿಜಯ ಮತ್ತು ಕೃಷ್ಣರ ರಕ್ಷಣೆ ಪಡೆದ ಆ ಕನ್ಯೆಯು ಸ್ವಾಭಾವಿಕವಾಗಿ ವಿಜಯನಿಗೆ ಒಲಿದು ಆತನನ್ನು ವಿವಾಹವಾದಳೆಂದು ಸಾಂಪ್ರದಾಯಿಕ ವರದಿಗಳು ತಿಳಿಸುತ್ತವೆ. ಯದುರಾಯ ಮತ್ತು ವಿಜಯರು ಕ್ರಿ.ಶ. ೧೩೯೯-೧೪೨೩ ರವರೆಗೆ ಆಳುತ್ತಿದ್ದರೆಂದೂ ಮತ್ತು ಆಗ ಮೈಸೂರಿನಲ್ಲಿ ಸಣ್ಣ ಪ್ರಮಾಣದ ಪಾಳೆಯಗಾರನಾಗಿದ್ದ ಚಾಮರಾಜನು ಆ ಪ್ರದೇಶದಲ್ಲಿ ಆಳ್ವಿಕೆ ಮಾಡುತ್ತಿದ್ದನೆಂದು ಹೇಳಲಾಗುತ್ತದೆ.

ಚಿಕ್ಕದೇವರಾಯನ ಕಾಲಾನಂತರ ಒಡೆಯರ ಸಂತತಿಯ ಅಧಿಕಾರವು ಕ್ಷೀಣಿಸಿ ಅನೇಕ ದಳವಾಯಿಗಳ ಕೈವಶವಾಯಿತು. ದಳವಾಯಿ ಕರಾಚುರಿ ನಂಜರಾಜಯ್ಯನ ಕೊನೆಗಾಲದಲ್ಲಿ ಈತನನ್ನು ಗೃಹ ಬಂಧನದಲ್ಲಿರಿಸಿ ಹೈದರಾಲಿಯು ಪ್ರಾಬಲ್ಯಕ್ಕೆ ಬಂದನು.

ಹೈದರಾಲಿ ಮತ್ತು ಟಿಪ್ಪು ಅಪ್ರತಿಮ ಸೇನಾನಿಗಳಾಗಿದ್ದು, ಹೈದರಾಲಿಯು ಅನೇಕ ಪಾಳೇಗಾರರನ್ನು ನೆರೆಹೊರೆಯ ರಾಜರನ್ನು ಸೋಲಿಸಿ ಶ್ರೀರಂಗಪಟ್ಟಣವನ್ನು ಅಕ್ರಮಿಸಲು ಬಂದಿದ್ದ ಮರಾಠರನ್ನು ಓಡಿಸಿ ಸಂಪೂರ್ಣ ಅಧಿಕಾರವನ್ನು ೧೭೬೦ರಲ್ಲಿ ತನ್ನ ವಶಕ್ಕೆ ತೆಗೆದುಕೊಂಡನು ಈ

ಸಮಯದಲ್ಲಿ ಹೈದರನು ಮಂಗಳೂರು, ಹೊನ್ನಾವರ, ಧಾರವಾಡದವರೆಗೆ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿದುದಲ್ಲದೆ. ತಮಿಳುನಾಡಿನ ಹಲವು ಭಾಗಗಳನ್ನು ಗೆದ್ದುಕೊಂಡನು ಬ್ರಿಟಿಷರನ್ನು ಸೋಲಿಸಿ ಮಂಗಳೂರು ಒಪ್ಪಂದ ಮಾಡಿಕೊಂಡನು ಎರಡನೇ ಮೈಸೂರು ಯುದ್ಧದಲ್ಲಿ ಹೈದರಾಲಿ ಮರಣ ಹೊಂದಿದ್ದರಿಂದ ೧೭೮೨ರಲ್ಲಿ ಅವನ ಮಗ ಟಿಪ್ಪು ಸುಲ್ತಾನ್ ಅಧಿಕಾರ ವಹಿಸಿಕೊಂಡು ಇಡೀ ಶ್ರೀರಂಗಪಟ್ಟಣವನ್ನು ಭಾರತದ ಭೂಪಟದಲ್ಲಿ ಉನ್ನತಿಗೇರಿಸಿ ಸಾಮ್ರಾಟ ಎಂದೇ ಹೆಸರಾದನು ತನ್ನ ಅಳ್ವಿಕೆಯ ೧೭ ವರ್ಷಗಳ ಅವಧಿಯಲ್ಲಿ ಬಹುಭಾಗ ಯುದ್ಧದಲ್ಲೇ ಕಳೆಯಬೇಕಾಗಿ ಬಂದರೂ ತನ್ನ ಸಂಸ್ಥಾನದ ನೀರಾವರಿ ವ್ಯವಸಾಯ ಕೈಗಾರಿಕೆ, ವಾಣಿಜ್ಯ ವ್ಯವಹಾರಗಳಿಗೆ ಪ್ರೋತ್ಸಾಹ ನೀಡಿದ ಮೊದಲ ದೊರೆ ಎನಿಸಿಕೊಂಡನು. ವಿದೇಶಗಳಿಂದ ತಂತ್ರಜ್ಞರನ್ನು ಆಹ್ವಾನಿಸಿ ಕೈಗಾರಿಕಾ ರಂಗದಲ್ಲಿ ಕಬ್ಬಿಣ–ಉಕ್ಕು ಮುಂತಾದವುಗಳಿಗೆ. ಚಾಲನೆ ನೀಡಿದನು. ರೇಷ್ಮೆ ಬೆಳೆಗೆ ವಿಶೇಷ ಪ್ರೋತ್ಸಾಹ ನೀಡಿದುದಲ್ಲದೇ ವಿದೇಶ ವ್ಯಾಪಾರಕ್ಕೆ ಹೆಚ್ಚಿನ ಆಸಕ್ತಿ ವಹಿಸಿ ತನ್ನ ರಾಜ್ಯದ ಸರ್ವೋತೋಮುಖ ಬೆಳವಣಿಗೆಗೆ ಶ್ರಮಿಸಿದನು. ಬ್ರಿಟಿಷರ ವಿರುದ್ಧದ ಹೋರಾಟದಲ್ಲೇ ಮುಳಿಗಿದ್ದ ಟಿಪ್ಪು ಕಡೆಗೆ ೧೭೯೯ರಲ್ಲಿ ನಾಲ್ಕನೇ ಮೈಸೂರು ಯುದ್ಧದಲ್ಲಿ ರಣರಂಗದಲ್ಲೇ ಮರಣವನ್ನಪ್ಪಿದಾಗ ಟಿಪ್ಪುವಿನ ಸಾಮ್ರಾಜ್ಯದ ಹೆಚ್ಚಿನಭಾಗವನ್ನು ಬ್ರಿಟಿಷರು ತಾವೇ ವಹಿಸಿಕೊಂಡು. ಹಿಂದಿನ ಮೈಸೂರು ರಾಜ್ಯವನ್ನು ಮಾತ್ರ ಒಡೆಯರ ಸಂತತಿಗೆ ಕೊಟ್ಟು ರಾಜಧಾನಿಯನ್ನು ಶ್ರೀರಂಗಪಟ್ಟಣದಿಂದ ಮೈಸೂರಿಗೆ ವರ್ಗಾಯಿಸಿದರು.

ದಳವಾಯಿ ನಂಜರಾಜನ ಸೇನೆಯಲ್ಲಿ ಹೈದರಾಲಿಯ ಒಬ್ಬ ಸಾಮಾನ್ಯ ಸೈನಿಕನಾಗಿ ಕ್ರಿ.ಶ.೧೭೩೬ರಲ್ಲಿ ವೃತ್ತಿಯನ್ನು ಆರಂಭಿಸಿದನು. ಈತನು ದೇವನಹಳ್ಳಿಯ ಕ್ರಿ.ಶ.೧೭೪೬ರ ಕಾಳಗದಲ್ಲಿ ಹೆಚ್ಚಿನ ಧೈರ್ಯ ಮತ್ತು ಬುದ್ಧಿಶಕ್ತಿಗಳನ್ನು ಪ್ರದರ್ಶಿಸಿ ತನ್ನ ವೈಯಕ್ತಿಕ ಪ್ರತಿಷ್ಠೆಯನ್ನು ಹೆಚ್ಚಿಸಿಕೊಂಡನು. ತರುವಾಯ ಕ್ರಿ.ಶ.೧೭೫೧ರಲ್ಲಿ ಅರ್ಕಾಟನ ದಾಳಿಯ ಸಮಯದಲ್ಲಿ ಜಿಂಜಿಯ ಸಮೀಪ ಯುದ್ಧವು ಸಂಭವಿಸಿದಾಗ ಬರಕಿ ವೆಂಕಟರಾಯನ ನೇತೃತ್ವದಲ್ಲಿ ಒಂದು ಸೈನ್ಯದ ತುಕಡಿಯೊಂದಿಗೆ ಹೈದರನನ್ನು ಅರಸರು ಕಳುಹಿಸಿಕೊಟ್ಟರು. ಮೂಲತಃ ಈ ಸೇನೆಯು ಹೈದರಾಬಾದ್‌ನ ನಿಜಾಮ ನಾಸೀರ್ ಜಂಗನಿಗೆ ಸಹಾಯ ಮಾಡುವುದಕ್ಕಾಗಿ ಹೋಗಿತ್ತು. ಆದರೆ ಯುದ್ಧದಲ್ಲಿ ನಾಸೀರಜಂಗನು ಕೊಲ್ಲಲ್ಪಟ್ಟಾಗ ಬಂಗಾರದ ನಾಣ್ಯಗಳನ್ನು ಹೊತ್ತುಕೊಂಡು ಪ್ರಯಾಣಿಸುತ್ತಿದ್ದ ನಿಜಾಮನ ಸಂಚಾರಿತಿಜೋರಿಗಳೇ ಆಗಿದ್ದೆ ಒಂಟೆಗಳನ್ನು ತನ್ನ ವಶಕ್ಕೆ ಪಡೆಯುವಲ್ಲಿ ಹೈದರನು ಯಶಸ್ವಿಯಾದನು. ಈ ವಿಜಯವು ಹೈದರಾಲಿಯು ದಿಂಡಿಗಲ್‌ನಲ್ಲಿ ಮೈಸೂರು ಸೇನೆಯ ಮೇಲೆ ಹೈದರಾಬಾದಿನ ಸಲಾಬತ್‌ಜಂಗನು ದಾಳಿ ಮಾಡಿ ಮೈಸೂರು ರಾಜನಿಗೆ ೫೬ ಲಕ್ಷರೂ ಹಣವನ್ನು ಯುದ್ಧ ವೆಚ್ಚ ಬಾಬ್ತಾಗಿ ನೀಡಬೇಕೆಂಬ ಷರತ್ತು ಒಡ್ಡಿದನು.

ದೇವರಾಜನ ಭಂಡಾರ ಖಾಲಿಯಾಗಿದ್ದು ಹೆಚ್ಚು ಮೊತ್ತದ ಹಣವನ್ನು ಹೊಂದಿಸಲು, ಸಂಸ್ಥಾನದ ಎಲ್ಲ ಚಿನ್ನಾಭರಣಗಳ ಜೊತೆಗೆ ದೇವಾಲಯಗಳಲ್ಲಿದ್ದ ಆಭರಣಗಳನ್ನು ಒತ್ತೆ ಹಾಕಿದಾಗಲು ಸಹ ಸಲಾಬತ್‌ಜಂಗನು ಒತ್ತಾಯಿಸಿದ್ದ ಹಣದ ಮೂರನೇ ಒಂದು ಭಾಗದಷ್ಟು ಹಣವನ್ನು ಮಾತ್ರ ಹೊಂದಿಸಲು ಸಾಧ್ಯವಾಯಿತು. ಈ ಕಾರಣದಿಂದಾಗಿ ನಂಜರಾಜನು ತನ್ನ ಸೇನಾ ಬಲದಲ್ಲಿ ಒಂದನೇ ಮೂರು ಭಾಗದಷ್ಟು ಸೇನೆಯನ್ನು ಕಡಿತಗೊಳಿಸಿದನು. ಈ ಬೇಡಿಕೆಗಳಿಂದ ಹಾಗೂ ನಂಜರಾಜನ ತಮಿಳುನಾಡಿನ ದುಸ್ಸಾಹಸಗಳಿಂದ ಬೊಕ್ಕಸವು ಬರಿದಾಗಿತ್ತು. ಪುನಃ ಮರಾಠರು ಪೇಶ್ವೆ ಬಾಳಾಜಿರಾಯನ ಆದೇಶದಂತೆ ಸದಾಶಿವಭಾವುವಿನ ನಾಯಕತ್ವದಲ್ಲಿ ಪೇಶ್ವೆಯು ೩೨ ಲಕ್ಷ ರೂ. ಬೇಡಿದಾಗ ಮೈಸೂರು ಅರಸರು ಆರು ಲಕ್ಷ ರೂಪಾಯಿಗಳನ್ನು ಕೊಡಲೊಪ್ಪಿ ಉಳಿದುದಕ್ಕೆ ನಾಗಮಂಗಲ ತಾಲ್ಲೂಕು ಸೇರಿದಂತೆ ೧೩ ತಾಲ್ಲೂಕುಗಳನ್ನು ಒತ್ತೆ ಹಾಕಿದನು.

ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ದಳವಾಯಿ ನಂಜರಾಜನು ಹೈದರ್ ಆಲಿಯನ್ನು ರಾಜಧಾನಿಗೆ ಕರೆಸಿಕೊಂಡನು. ಶ್ರೀರಂಗಪಟ್ಟಣದಲ್ಲಿ ರಾಜಕೀಯ ಪರಿಸ್ಥಿತಿಯು ಅಸ್ತವ್ಯಸ್ತಗೊಂಡಿತು. ಅನೇಕ ದಿನಗಳಿಂದಲೂ ಸಂಬಳಕ್ಕಾಗಿ ಕಾದು ನಿರಾಶರಾಗಿದ್ದ ಸೈನಿಕರು ದಂಗೆ ಎದ್ದಿದ್ದರು. ಮರಾಠರಿಗೆ ಒತ್ತೆಹಾಕಿದ್ದ ಪ್ರದೇಶಗಳನ್ನು ಬಿಡಿಸಿಕೊಳ್ಳವಂತೆ, ಹೈದರನು ನಂಜರಾಜನಿಗೆ ಸಲಹೆ ನೀಡಿದನು. ಈ ಕಾರಣದಿಂದಾಗಿ ಮರಾಠರು ಕ್ರಿ.ಶ.೧೭೫೯ರಲ್ಲಿ ಪುನಃ ದಾಳಿ ಮಾಡಿದರು. ಮೈಸೂರು ಸೈನಿಕರು ಸಂಬಳ ದೊರೆಯುವವರೆಗೂ ಯುದ್ಧ ಮಾಡಲು ನಿರಾಕರಿಸಿದನು. ಹೈದರನು ತನ್ನ ಸಹಾಯಕನಾದ ಖಂಡೇರಾಯನ ನೆರವಿನಿಂದ ಅಸಂತೋಷಗೊಂಡಿದ್ದ ಸೈನಿಕನನ್ನು ಸಮಾಧಾನಪಡಿಸಿ ಮರಾಠರ ಜೊತೆಗೆ ಚಾಣಾಕ್ಷತೆಯಿಂದ ಮಾತನಾಡಿ ಕಠಿಣ ಪ್ರಸಂಗವನ್ನು ದೂರ ಮಾಡಿದನು. ನಂತರ ದಳವಾಯಿ ನಂಜರಾಜನ್ನು ಹೊರ ಹಾಕಲಾಯಿತು. ನಂಜರಾಜನಿಂದ ಮುಕ್ತನಾಗಿ ಅವನ ಸ್ಥಾನದಲ್ಲಿ ಹೈದರ್‌ನನ್ನು ನೇಮಿಸಿದ ಅರಸರ ಪರಿಸ್ಥಿತಿ ದರಿಯಿಂದಪಾರಾಗಿ ಹುಲಿಯ ಕೈಯಲ್ಲಿ ಸಿಕ್ಕಿದಂತಾಯಿತು. ಇದನ್ನರಿತ ಇಮ್ಮಡಿ ಕೃಷ್ಣರಾಜ ಒಡೆಯರ (ಕ್ರಿ.ಶ.೧೭೩೪–೧೭೬೬) ಖಂಡೇರಾಯನನ್ನು ತನ್ನಡೆಗೆ ಸೆಳೆದುಕೊಂಡು, ಮನವೊಲಿಸಿ, ಅವನ ಸಹಾಯದಿಂದ ದಕ್ಷಿಣದಲ್ಲಿ ದಂಡಯಾತ್ರೆಯನ್ನು ಮಾಡುತ್ತಿದ್ದ ಮರಾಠ ನಾಯಕ ವಿಸಾಜಿಕೃಷ್ಣಬಿನಿವಾಲೆಯ ನೆರವನ್ನು ಪಡೆದರು. ಇವರಿಬ್ಬರೂ ದಾಳಿ ಮಾಡಿದ್ದರಿಂದ ಹೈದರನು ಶ್ರೀರಂಗಪಟ್ಟಣವನ್ನು ಬಿಡಬೇಕಾಯಿತು. ಹೈದರ್ ಅನೇಕಲ್‌ನಲ್ಲಿ ಆಶ್ರಯ ಪಡೆದನು. ಅನಂತರ ಬೆಂಗಳೂರನ್ನು ವಶಪಡಿಸಿಕೊಳ್ಳವಲ್ಲಿ ಯಶ್ವಸ್ವಿಯಾದನು.[೧೦] ರಾಜನ ಸೈನ್ಯೆ ಮತ್ತು ಮರಾಠರು ಅವನನ್ನು ಸುತ್ತುವರಿದಾಗ ಹೈದರನು ನಿಸ್ಸಾಹಾಯಕನಾದನು. ಇದೇ ಸಮಯದಲ್ಲಿ ಪಾಣಿಪತ್‌ನ

[illegible]

[illegible]

ಪರಾಭವದ ವಾರ್ತೆವಿಸಾಜಿಗೆ ತಲುಪಿತು. ಹೈದರನು ಮಾತುಕತೆಯ ಮೂಲಕ ವಿಸಾಜಿಯು ಹಾಕಿದ ಕರಾರುಗಳಿಗೆ ಒಪ್ಪಿದನು. ಇದರಿಂದಾಗಿ ಮೈಸೂರು ಅರಸು ಹೈದರನನ್ನು ಗುರುತಿಸುವಂತಾಯಿತು. ಆಗಿನ (ಕ್ರಿ.ಶ.೧೭೬೧) ಆಂತರಿಕ ಮತ್ತು ಬಾಹ್ಯ ಬಿಕ್ಕಟ್ಟುಗಳಾದ ಮೈಸೂರಿನ ಸ್ವಾತಂತ್ರ್ಯ ಮತ್ತು ಐಕ್ಯತೆಯನ್ನು ಕಾಪಾಡಲು ಹೈದರ್ ಆಲಿಯ ಮುಖಂಡತ್ವದ ಆಡಳಿತದ ಹೊರತು. ಅನ್ಯಮಾರ್ಗವೇ ಇರಲಿಲ್ಲ. ಹೈದರನು ದಂಗೆಕೋರ ನಿಜಾಮ ಸಲಾಬತ್ ಜಂಗನಿಗೆ ಕರ್ನಾಟಕದಲ್ಲಿ ಮರಾಠರ ವಿರುದ್ಧ ಸಹಾಯ ಮಾಡಿದನು.

ಟಿಪ್ಪು ಸುಲ್ತಾನನು ಎರಡನೇ ಅಂಗ್ಲೋ ಮೈಸೂರು ಯುದ್ಧದಲ್ಲಿ ಹಾಗೂ ಅದಕ್ಕೂ ಮೊದಲು ತನ್ನ ತಂದೆಗೆ ಒತ್ತಾಸೆಯಾಗಿ ಸೈನ್ಯಗಳನ್ನು ತೆಗೆದುಕೊಂಡು ಹೋಗಿ ಅನೇಕ ಜಯಗಳನ್ನು ಸಾಧಿಸಿದ್ದನು. ಹೈದರನಂತೆ ಟಿಪ್ಪು ಬ್ರಿಟಿಷರ ವಿರುದ್ಧ ಯುದ್ಧಗಳನ್ನು ಮುಂದುವರಿಸಿದನು ಲಾರ್ಡಕಾರ್ನವಾಲಿಸನ ಮುಂದಾಳತ್ವದಲ್ಲಿ ಸಾಂಪ್ರದಾಯಿಕವಾದ ಚನ್ನಪಟ್ಟಣ, ಮದ್ದೂರು, ಮಂಡ್ಯ ಮಾರ್ಗಕ್ಕೆ ಬದಲು ಕನಕಪುರ, ಬನ್ನೂರು, ಅರಕೆರೆ ಮಾರ್ಗವಾಗಿ ಕನ್ನಂಬಾಡಿ ತಲುಪಿದ ಬ್ರಿಟಿಷರ ಸೈನ್ಯವು ಶ್ರೀರಂಗಪಟ್ಟಣಕ್ಕೆ ಕ್ರಿ.ಶ.೧೭೯೧ರಲ್ಲಿ ಮುತ್ತಿಗೆ ಹಾಕಿದರೂ ಮಳೆಯಿಂದಾಗಿ ಯಶಸ್ಸು ದೊರಕಲಿಲ್ಲ. ಆದರೆ ಮರುವರ್ಷದ (ಕ್ರಿ.ಶ.೧೭೯೨) ನಿಜಾಂ ಸಿಕಂಧರಝಾನ ನೆರವಿನೊಂದಿಗೆ ಹುಲಿಯೂರುದುರ್ಗದ ಕಡೆಯಿಂದ ಹೊರಟು ಪಾಂಡವಪುರದಲ್ಲಿ ತಂಗಿದ್ದು, ನಂತರ ಮೂರು ಗುಂಪಾಗಿ ಶ್ರೀರಂಗಪಟ್ಟಣದ ಮೇಲೇರಿ ಬಂದ ಕಾರ್ನವಾಲೀಸನು ಟಿಪ್ಪುವನ್ನು ಸೋಲಿಸಿದನು. ಮೂರು ವರ್ಷಕಾಲ ನಡೆದ ಈ ಯುದ್ಧವು ಕ್ರಿ.ಶ.೧೭೯೨ರ ಶ್ರೀರಂಗಪಟ್ಟಣ ಒಪ್ಪಂದದೊಂದಿಗೆ ಅಂತ್ಯಗೊಂಡು ಈ ಅಪಮಾನಕಾರಿ ಒಪ್ಪಂದಕ್ಕೆ ಟಿಪ್ಪು ಸಹಿ ಹಾಕುವಂತಾಯಿತು. ಆ ಪ್ರಕಾರ ಯುದ್ಧ ದಂಡವಾಗಿ ಮೂರು ಕೋಟಿ ಮೂವತ್ತು ಲಕ್ಷ ರೂ.ಗಳ ನಗದು ಹಣ ಹಾಗೂ ಸಾಮ್ರಾಜ್ಯದ ಅರ್ಧಭಾಗವನ್ನು ಟಿಪ್ಪು ನೀಡಬೇಕಾಗಿ ಬಂತು.

ಅಡಿಟಿಪ್ಪಣಿಗಳು:-

೧. ಸಿಂಗಾರ: ಕೆ. ಸಿಂಗಾರಿಗೌಡ ಗೌರವ ಗ್ರಂಥ, ಸಂ. ಹ. ಕ. ರಾಜೇಗೌಡ, ಪು.೧೪೦.

೨. ನಂಜುಂಡಸ್ವಾಮಿ, ಮಂಡ್ಯ ಜಿಲ್ಲೆಯ ಶಾಸನಗಳು, ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು.

೩. ತೊಣ್ಣೂರು ಡಾ.ಸಿ.ಮಹದೇವು ಪು ೧೧

೪. ಅದೇ ಪು ೧೪೧

೫. ಅದೇ ಪು ೧೮೯

೬. ಸುವರ್ಣ ಮಂಡ್ಯ: ಸಂ. ಡಾ॥ ದೇ ಜವರೇಗೌಡ, ಸ್ವಾಗತ ಸಮಿತಿ ೬೩ ನೇಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಪು.೨೫.

೭. ಅದೇ, ಪು. ೨೬

೮. ಅದೇ, ಪು. ೨೭

೯. ಅದೇ, ಪು. ೩೦

೧೦. ಮಂಡ್ಯ ಜಿಲ್ಲಾ ಗ್ಯಾಸೆಟಿಯರ್ ಮುಖ್ಯ ಸಂ, ಶ್ರೀ.ಟಿ.ಎ.ಪಾರ್ಥಸಾರಥಿ ಕರ್ನಾಟಕ ಗ್ಯಾಸೆಟಿಯರ್ ಇಲಾಖಾ ಪ್ರಕಟಣೆ (ಪರಿಷ್ಕೃತ ಆವೃತ್ತಿ) ಬೆಂಗಳೂರು ಪು. ೨೦೩

ಅಧ್ಯಾಯ ೩

ಜಿಲ್ಲೆಯ ಶಾಸನಗಳ ಇತಿಹಾಸ ಮತ್ತು ಸ್ವರೂಪ ಹಾಗೂ ವರ್ಗೀಕರಣ ಮತ್ತು ವಿತರಣೆ

ಅಧ್ಯಾಯ ೩

ಜಿಲ್ಲೆಯ ಶಾಸನಗಳ ಇತಿಹಾಸ ಮತ್ತು ಸ್ವರೂಪ ಹಾಗೂ ವರ್ಗೀಕರಣ ಮತ್ತು ವಿತರಣೆ

ಶಾಸನಗಳು ಬರಹ ರೂಪದಲ್ಲಿರುತ್ತವೆ. ಬರಹಗಳು ತ್ರಿಪದಿ, ವೃತ್ತ ಹಾಗೂ ಕಂದಪದ್ಯಗಳಲ್ಲಿರುತ್ತವೆ. ಗದ್ಯ ಬರಹಗಳೂ ಉಂಟು. ಕೆಲವು ಶಾಸನಗಳು ಶಿಲ್ಪಕಲಾ ಮಾದರಿಗಳನ್ನು ಒಳಗೊಂಡಿರುತ್ತವೆ. ಶಾಸನಗಳನ್ನು ಅವುಗಳ ರಚನೆಯ ಕಾಲಾನುಕ್ರಮಕ್ಕೆ ಒಳಪಡಿಸುವ ಮತ್ತು ಅವುಗಳ ಸ್ವರೂಪವನ್ನು ವಿಶ್ಲೇಷಿಸಲಾಗುತ್ತದೆ.

ಇತಿಹಾಸವನ್ನು ರೂಪಿಸುವುದರಲ್ಲಂತೂ ಶಾಸನಗಳೇ ಪ್ರಮುಖ ಆಧಾರ. ವಿದ್ವಾಂಸರೊಬ್ಬರು ಹೇಳಿರುವಂತೆ ಶಾಸನಗಳು "ಪ್ರಾಚೀನ ಭಾರತದ ಕಾಲಾನುಕ್ರಮಣಿಕೆಯ (Chronology) ಏಕೈಕ **'ಬಿಣ್ಗುಂಡು'** (Sheet anchor)" ಮನುಷ್ಯನು ಇತಿಹಾಸದ ವಿಷಯದಲ್ಲಿ ನಮಗಿರುವ ಜ್ಞಾನವೆಲ್ಲ, ಅಜ್ಞಾತಕ್ಕೆ ಹೋಗಿ ಸಂಪಾದಿಸಿದುದು ಈ "ಜ್ಞಾತ"ವಾದುದೆಲ್ಲವೂ ಬಹುಮಟ್ಟಿಗೆ ಎಲ್ಲಾ ದೇಶಗಳಲ್ಲಿಯೂ, ಶಾಸನಗಳಿಂದ ತಿಳಿದುಬರುತ್ತದೆ. ದಿಸ್ಕಲರ್ ಎಂಬ ವಿದ್ವಾಂಸರ ಮಾತುಗಳು ಇಲ್ಲಿ ಉಲ್ಲೇಖಾರ್ಹವಾಗಿವೆ. "ಭಾರತೀಯ ಸಂಸ್ಕೃತಿಯನ್ನು ಅಧ್ಯಯನ ಮಾಡುವವರಿಗೆ ಸಂಸ್ಕೃತ ಸಾಹಿತ್ಯದಂತೆಯೇ ಶಾಸನ ಸಾಹಿತ್ಯವೂ ವಿಷಯದ ಗಣಿಯಾಗಿದೆ. ಭಾರತೀಯರ ಜೀವನ ಮತ್ತು ಆಲೋಚನೆಗಳು ಬೇರೆ ಬೇರೆ ಕೋನಗಳ ಮೇಲೆ ಅವು ಸಾಕಷ್ಟು ಬೆಳಕನ್ನು ಬೀರುತ್ತವೆ. ಭಾರತೀಯ ಸಂಸ್ಕೃತಿಯ ಐಕ್ಯತೆಯನ್ನು ಕಾಪಾಡುವುದರಲ್ಲಿ ಇವು ಪ್ರಧಾನ ಪಾತ್ರವನ್ನು ವಹಿಸಿವೆ. ಪ್ರಾಚೀನ ಭಾರತದ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಇತಿಹಾಸದ ಅಭ್ಯಾಸಗಳು ತಮ್ಮ ಮಾಹಿತಿಯ ಕೊರತೆಯನ್ನು ಶಾಸನಗಳ ಅಭ್ಯಾಸದಿಂದ ಹೋಗಲಾಡಿಸಬಹುದು.

ನಮ್ಮ ನಾಡಿನ ಜನಜೀವನವು ಶಾಸನಗಳಲ್ಲಿ ಅಭಿವ್ಯಕ್ತಗೊಂಡಿರುವಂತೆ ಪ್ರಾಯಶಃ ಇನ್ನೆಲ್ಲೂ ವ್ಯಕ್ತವಾಗಿಲ್ಲ. ಶಾಸನಗಳಿಂದ ರಾಜರ ಇತಿಹಾಸವನ್ನೂ, ಅವರು ಪರಸ್ಪರ ನಡೆಯಿಸಿದ ಘೋರ ಯುದ್ಧಗಳನ್ನು, ಅವರ ಕಾಲ್ಪನಿಕ ಪ್ರಶಂಸೆಗಳನ್ನು ಮಾತ್ರ ಅರಿಯಬಹುದೇ ಹೊರತು ಆ ಕಾಲದ ಒಳ ಆಡಳಿತ, ವ್ಯಾಪಾರ, ಸಾಮಾಜಿಕ ವ್ಯವಸ್ಥೆಗಳು, ಧಾರ್ಮಿಕ ಪರಿವರ್ತನೆಗಳು ಮತ್ತು ಶಿಕ್ಷಾಟಗಳು ಈ ವಿಷಯಗಳಲ್ಲಿ ಶಾಸನಗಳಿಂದ ನಮಗೆ ಯಾವ ಉಪಯೋಗವೂ ಇಲ್ಲವೆಂಬ

ಭಾವನೆ ಒಬ್ಬಿಬ್ಬರು ವಿದ್ವಾಂಸರಲ್ಲಿ ಇದ್ದಿತು. ಆದರೆ ಈ ಅಭಿಪ್ರಾಯಕ್ಕೆ ವಿರುದ್ಧವಾದ ಅಭಿಪ್ರಾಯಗಳೂ ಒಂದೆರಡು ಕಡೆ ಕಾಣಿಸಿಕೊಂಡಿದ್ದುವು. ಶಾಸನಗಳೇನಿದ್ದರೂ ಜನರ ನೀತಿ ನಡವಳಿಕೆಗಳು, ಮತತತ್ವಗಳು ಅವರ ಕಲೆಗಳು ಈ ವಿಷಯಗಳನ್ನು ತಿಳಿಸಬಹುದೇ ಹೊರತು "ಇಲ್ಲಿ ಆಳಿದ ರಾಜರು, ಅವರಿಗೆ ಸಂಬಂಧಿಸಿದ ಯುದ್ಧ ಸಂಗತಿಗಳು, ಬೇರೆ ಬೇರೆ ರಾಜನೀತಿಗಳ ಪರಿಣಾಮಗಳು ಈ ವಿಷಯಗಳನ್ನು ಶಾಸನಾಧ್ಯಯನದಿಂದ ಪಡೆಯಬಹುದುದೆಂಬ ಅಪೇಕ್ಷೆಯು ನಿರೀಕ್ಷೆಗೆ ಮೀರಿದ್ದು" ಶಾಸನಗಳು ಆಗ ತಾನೇ ಪ್ರಕಟವಾಗಲಾರಂಭವಾಗಿದ್ದ ಕಾಲದಲ್ಲಿ ಈ ಅಭಿಪ್ರಾಯಗಳು ಹೊರಬಂದಿವೆ ಎಂಬುದನ್ನು ನಾವು ಮರೆಯಬಾರದು. ಹೆಚ್ಚು ಹೆಚ್ಚಾಗಿ ಶಾಸನಗಳು ಪ್ರಕಟವಾಗಿ ಅವುಗಳನ್ನು ಆಳವಾಗಿ ಅಧ್ಯಯನ ಮಾಡದಿದ್ದರೆ ಇಂತಹ ಅಭಿಪ್ರಾಯಗಳು ಹೊರಬರುತ್ತಿರಲಿಲ್ಲವೆಂಬುದನ್ನು ನಾವು ನೆನಪಿಡಬೇಕು. ಶಾಸನಗಳು ಯಾವ ವಿಷಯಗಳನ್ನು ಪ್ರಧಾನವಾಗಿ ನಿರೂಪಿಸಲು ಹೊರಬರುತ್ತವೆಯೋ ಅವುಗಳಿಗಿಂತ ಅನುದ್ದೇಶಪೂರ್ವಕವಾಗಿಯೋ ಪ್ರಾಸಂಗಿಕವಾಗಿಯೋ ಅವು ಕೊಡುವ ವಿವರಗಳು ನಮಗೆ ಬಹು ಅಮೂಲ್ಯವಾಗಿರುತ್ತವೆ. ಉದಾಹರಣೆಗೆ ಯಾವುದೋ ದಾನದ ವಿಷಯವನ್ನು ಹೇಳಲು ಹೊರಟ ಶಾಸನವು ಆ ಕಾಲದ ಬೇರೆ ಬೇರೆ ತೆರಿಗೆಗಳು, ಅವುಗಳನ್ನು ಸಂಗ್ರಹಿಸುತ್ತಿದ್ದ ಅಧಿಕಾರಿಗಳು, ವ್ಯಾಪಾರ, ಊರು ಮತ್ತು ಅಗ್ರಹಾರಗಳ ಆಡಳಿತ ಆ ಕಾಲದ ಧಾರ್ಮಿಕ ಮನೋಭಾವ ಇತ್ಯಾದಿ ವಿಷಯಗಳನ್ನು ತಿಳಿಸಬಹುದು. ಶಾಸನಗಳನ್ನು ರಾಜಕೀಯ ಇತಿಹಾಸದ ದೃಷ್ಟಿಯಿಂದ ತಕ್ಕಮಟ್ಟಿಗೆ ಅಧ್ಯಯನ ಮಾಡಿದ್ದಾರೆ. ಆದರೆ ಸಾಂಸ್ಕೃತಿಕ ಇತಿಹಾಸದ ದೃಷ್ಟಿಯಿಂದ ಅವುಗಳ ಅಭ್ಯಾಸ ಇನ್ನೂ ಸಮರ್ಪಕವಾಗಿ ನಡೆಯಬೇಕಾಗಿದೆ.[೧]

ಎಲ್ಲವನ್ನೂ ಅಲಂಕಾರಿಕವಾಗಿ, ಛಂದೋಬದ್ಧವಾಗಿ ಹೇಳಬೇಕೆಂಬ ಪ್ರವೃತ್ತಿ ಪ್ರಾಚೀನ ಭಾರತೀಯರಲ್ಲಿ ರಕ್ತಗತವಾಗಿದ್ದಿತು. (ಆದ್ದರಿಂದಲೇ ನಮ್ಮಲ್ಲಿ ಐತಿಹಾಸಿಕ ಗ್ರಂಥಗಳ ಕೊರತೆಕಂಡುಬರುವುದು.) ಕಾವ್ಯಗ್ರಂಥಗಳಂತೂ ಸರಿಯೇ. ಧಾರ್ಮಿಕ ಗ್ರಂಥಗಳೂ, ಛಂದೋಬದ್ಧವಾಗಿರುತ್ತವೆ. ಹೇಳುವುದನ್ನು ಸೊಗಸಾಗಿ ಹೇಳಬೇಕೆಂಬ ದೃಷ್ಟಿ ಮೆಚ್ಚಬೇಕಾದುದೇ, ಆದರೆ ಇದನ್ನು ಒಂದು ಅತಿರೇಕಕ್ಕೆ ತೆಗೆದುಕೊಂಡು ಹೋದದ್ದು ಭಾರತೀಯರ ದೌರ್ಬಲ್ಯವೆಂದೇ ಹೇಳಬೇಕಾಗುತ್ತದೆ. ಈ ಅತಿರೇಕವು ನಮ್ಮ ಶಾಸನಗಳಲ್ಲಿಯೂ ಒಮ್ಮೊಮ್ಮೆ ತಲೆಹಾಕಿರುವುದುಂಟು. ನಮ್ಮಲ್ಲಿ ಶುದ್ಧ ಐತಿಹಾಸಿಕ ಶಾಸನಗಳ ಸಂಖ್ಯೆ ಕಡಿಮೆ. ಅಲಹಾಬಾದಿನಲ್ಲಿರುವ ಹರಿಷೇಣ ಕೃತವಾದ ಸಮುದ್ರಗುಪ್ತನ ಸ್ತಂಭಶಾಸನ, ವಾಸ್ತುಲಂಕೃತವಾದ ಯಶೋಧರ್ಮನ ಮಂದಸೋರ್ ಸ್ತಂಭ ಶಾಸನಗಳು ಕೇವಲ ಪ್ರಶಸ್ತಿಗಳಾದರೂ ಇವೂ ಕೂಡ ಯಾವುದೋ ಧಾರ್ಮಿಕ ಸನ್ನಿವೇಶದಲ್ಲಿ ರಚಿತವಾಗಿದ್ದರೆ ಆಶ್ಚರ್ಯವಿಲ್ಲ. ಕರ್ನಾಟಕದಲ್ಲಿಯಂತೂ ಇಂತಹ ಶಾಸನಗಳ

ಸಂಖ್ಯೆ ಬಹಳ ಕಡಿಮೆಯೆಂದೇ ಹೇಳಬಹುದು. ಐಹೊಳೆಯ ಪುಲಕೇಶಿಯ ಶಾಸನದ ಬಹುಭಾಗವು ಅವನ ದಿಗ್ವಿಜಯವನ್ನು ಕುರಿತದ್ದಾದರೂ ಅದರ ಮುಖ್ಯ ಉದ್ದೇಶ, ಆ ಶಾಸನದ ಕರ್ತೃವಾದ ರವಿಕೀರ್ತಿಯು ಐಹೊಳೆಯಲ್ಲಿ ಜಿನಾಲಯವನ್ನು ಕಟ್ಟಿಸಿದ ವಿಷಯವನ್ನು ನಿರೂಪಿಸುವುದೇ ಆಗಿದೆ. ಕನ್ನಡ ಶಾಸನವೊಂದರಲ್ಲಿ ಯಾವ ಬೇರೆಯ ವಿಷಯವನ್ನೂ ಹೇಳದೆ. ಕೇವಲ ಜೈನ ಗುರುಪರಂಪರೆಯನ್ನು ಮಾತ್ರ ಕೊಟ್ಟು ಕೊನೆಯಲ್ಲಿ ನೇಮಿಚಂದ್ರಪಂಡಿತದೇವ ಎಂಬುವವನನ್ನು ಬಹುವಾಗಿ ಪ್ರಶಂಸೆ ಮಾಡಲಾಗಿದೆ. ಇದನ್ನು **"ಪ್ರಶಸ್ತಿಶಾಸನ"** ವೆಂದು ಕರೆಯಬಹುದಾದರೆ ಅನೇಕ ನಿಷಿದಿ ಕಲ್ಲುಗಳನ್ನೂ, ವೀರಗಲ್ಲು, ಮಾಸ್ತಿಗಲ್ಲುಗಳನ್ನೂ ಅದೇ ಹೆಸರಿನಿಂದ ಕರೆಯಬೇಕಾಗುತ್ತದೆ. ಮಂಗಳೇಶನ ಸಂಸ್ಕೃತ ಭಾಷೆಯ ಮಹಾಕೂಟ ಸ್ತಂಭಶಾಸನದಲ್ಲಿ ಅವನ ದಿಗ್ವಿಜಯದ ವರ್ಣನೆ ಇದ್ದರೂ ಮಕುಟ್ಟೇಶ್ವರನಾಥ ದೇವರಿಗೆ ಹತ್ತು ಹಟ್ಟಿಗಳನ್ನು ದತ್ತಿಯಾಗಿ ಕೊಡಲು ತನ್ನ ಮಲತಾಯಿ ದುರ್ಲಭದೇವಿಗೆ ಅಧಿಕಾರವನ್ನು ಬಿಟ್ಟುಕೊಟ್ಟ ವಿಷಯವೇ ಮುಖ್ಯವಾದುದು. ಕೇವಲ ಪ್ರಶಸ್ತಿಗಳನ್ನೇ ಹೇಳುವ ತಾಮ್ರಪಟಗಳು ಇದ್ದವು. ಎನ್ನುವುದಕ್ಕೆ ನಮಗೆ ಕೆಲವು ನಿದರ್ಶನಗಳು ಸಿಕ್ಕುತ್ತವೆ. ಚಾಳುಕ್ಯರ ದೀರ್ಘ ಶಾಸನವೊಂದರ ಆರಂಭದಲ್ಲಿ ಆ ರಾಜರ ಇತಿಹಾಸವನ್ನು ಸಂಸ್ಕೃತದಲ್ಲಿ ಹೇಳಿ "ಇದು ತಾಂಬ್ರ ಶಾಸನದೊಳ್ ಇಳ್ದ ಚಾಳುಕ್ಯ ಚಕ್ರವರ್ತಿಗಳ ವಂಶದ ರಾಜ್ಯಂಗೆಯ್ದರಸುಗಳ ರಾಜಾವಳಿ ಮಂಗಳ" ಎಂದಿದೆ. ಇದರ ಜೊತೆಯಲ್ಲಿ Ej. Xii.p. ೧೫೦ ರಲ್ಲಿ ಪ್ರಕಟವಾಗಿರುವ ಕ್ರಿ.ಶ. ೧೦೮೭ರ ತಾಮ್ರಪಟವನ್ನು ಹೋಲಿಸಬಹುದು. ಆರಂಭದ ರಾಜಾವಳಿಯ ಭಾಗವು ಎರಡರಲ್ಲಿಯು ಒಂದೇ. ಎಂದರೆ ಶಾಸನಗಳಲ್ಲಿ ಮತ್ತು ತಾಮ್ರಪಟಗಳಲ್ಲಿ ರಾಜರ ಇತಿಹಾಸವನ್ನು ವರ್ಣಿಸುವಾಗ ಅನ್ಯರಿಂದ ರಚಿತವಾದ 'ರಾಜಾವಳಿ'ಯನ್ನಿಟ್ಟುಕೊಂಡು ಪ್ರತಿಮಾಡಿಕೊಳ್ಳುತ್ತಿದ್ದರೆಂದು, ಕಾಣುತ್ತದೆ. ಇಂತಹ 'ರಾಜಾವಳಿ' ಗಳು ನಮಗೆ ಈಗ ದುರ್ಲಭವಾಗಿವೆ. ಬಹುಶಃ ಅವು ಬೇಗ ನಾಶವಾಗುವ ವಸ್ತುಗಳ ಮೇಲೆ ಬರೆದಿರುವ ದಾಖಲೆಗಳಾಗಿದ್ದುವು.

ಈ ಪ್ರದೇಶ ಕರ್ನಾಟಕವನ್ನಾಳಿದ ಪ್ರಮುಖ ರಾಜವಂಶಗಳಾದ ಗಂಗರು, ಹೊಯ್ಸಳರು, ವಿಜಯನಗರದ ಅರಸರು ಮತ್ತು ಮೈಸೂರು ಪ್ರಭುಗಳ ಆಳ್ವಿಕೆಗೆ ಒಳಪಟ್ಟಿತ್ತು. ನಾಗಮಂಗಲದ ಪ್ರವಾಸಿ ಮಂದಿರದ ಎದುರಿಗೆ ಇರುವ ವೀರಗಲ್ಲು ಗೋವುಗಳನ್ನು ರಕ್ಷಿಸುತ್ತಾ ಪ್ರಾಣತ್ಯಾಗ ಮಾಡಿದ ತನದಕ್ಕಯ್ಯನ ವೀರಮರಣದ ಗೌರವಾರ್ಥವಾಗಿ ಪ್ರತಿಷ್ಠಾಪಿಸಲ್ಪಟ್ಟಿದೆ. ಕಾಲ ಕ್ರಿ.ಶ.೯೬೩ ಈ ವೀರಗಲ್ಲು ತಾಲ್ಲೂಕಿನ ಪ್ರಾಚೀನ ಸ್ಮಾರಕಗಳಲ್ಲಿ ಒಂದಾಗಿದ್ದು ಗಂಗರ ದೊರೆ ಮಾರಸಿಂಗಪರಮನಂದಿಯ ಆಳ್ವಿಕೆಯ ವಿವರವನ್ನು ನೀಡುತ್ತದೆ. ಹೊಯ್ಸಳ ದೊರೆ ವಿಷ್ಣುವರ್ಧನನು ಗಂಗರನ್ನು ಕ್ರಿ.ಶ.೧೧೧೭ರಲ್ಲಿ ಸೋಲಿಸಿ ವೀರಗಂಗ ಎಂಬ ಬಿರುದನ್ನು

ಪಡೆಯುತ್ತಾನೆ. ಚೋಳರಿಂದ ಗಂಗವಾಡಿಯನ್ನು ಪೂರ್ತಿಗೆದ್ದು **"ತಲಕಾಡುಗೊಂಡ"** ಎಂಬ ಬಿರುದನ್ನು ಪಡೆಯುತ್ತಾನೆ. ಹೀಗೆ ನಾಗಮಂಗಲವು ಹೊಯ್ಸಳರ ಆಳ್ವಿಕೆಗೆ ಒಳಪಡುತ್ತದೆ. ವಿಷ್ಣುವರ್ಧನನ ರಾಣಿ ಶಾಂತಲೆಯ ನಿಧನದ ನಂತರ ಇವನ ಪಟ್ಟದ ರಾಣಿಯಾಗಿದ್ದ ಬೊಮ್ಮಲಾದೇವಿಯು ನಾಗಮಂಗಲದ ಶಂಕರನಾರಾಯಣ ದೇವಾಲಯವನ್ನು ಜೀರ್ಣೋದ್ಧಾರ ಮಾಡಿಸಿದ ಹಾಗೂ ಈ ದೇವಾಲಯಕ್ಕೆ ದತ್ತಿ ನೀಡಿದ ಅಂಶಗಳು ಶಾಸನಗಳಿಂದ ತಿಳಿದುಬರುತ್ತದೆ. ಕಾಲ ಕ್ರಿ.ಶ.೧೧೩೪ ಹೊಯ್ಸಳರ ದೊರೆ ಎರಡನೆಯ ಬಲ್ಲಾಳನ ಕಾಲದಲ್ಲಿ (೧೧೭೩ ರಿಂದ ೧೨೨೦) ನಾಗಮಂಗಲ ಒಂದು ಅಗ್ರಹಾರವಾಗಿತು. ಶ್ರೀ ವೀರಬಲ್ಲಾಳ ಚತುರ್ವೇದಿ ಭಟ್ಟರತ್ನಾಕರ ಅಗ್ರಹಾರ ಎಂಬ ಹೆಸರನ್ನು ಪಡೆದಿತ್ತು. ನಾಗಮಂಗಲದ ಸೌಮ್ಯಕೇಶವ ದೇವಾಲಯಕ್ಕೆ ಸೇರಿದ ಅನೇಕ ಶಾಸನಗಳು ಈತನ ಕಾಲಕ್ಕೆ ಸೇರಿದವು ಅರಕಲಗೂಡಿನ ಶಾಸನ ಇವನ ಆಳ್ವಿಕೆಯನ್ನು ರಾಮರಾಜ್ಯ ಎಂದು ಕರೆದಿದೆ.

ಭೌಗೋಳಿಕವಾಗಿ ಬಹುತೇಕ ಸಮತಟ್ಟಾದ ಬಯಲು ಪ್ರದೇಶವನ್ನುಳ್ಳ ಈ ಜಿಲ್ಲೆಯು ಬಹಳಷ್ಟು ಮಟ್ಟಿಗೆ ಶುಷ್ಕ ವಾತಾವರಣವನ್ನು ವ್ಯಕ್ತಪಡಿಸುತ್ತದೆ. ಆದರೆ ಈ ಜಿಲ್ಲೆಯಲ್ಲಿ ಪ್ರವಹಿಸುವ ನದಿಗಳಿಂದಾಗಿ ಜಿಲ್ಲೆಯು ಆರ್ಥಿಕವಾಗಿ ಸಂಪದ್ಭರಿತವಾಗಿದೆ. ಈ ಜಿಲ್ಲೆಯು ಪ್ರಧಾನವಾಗಿ ಬಯಲು ಪ್ರದೇಶವನ್ನು ಹೊಂದಿದ್ದರು ನಾರಾಯಣಗಿರಿ, ಆದಿಚುಂಚನಗಿರಿ, ಬಸವನಬೆಟ್ಟ, ವೇಬಿಬೆಟ್ಟ, ಬೆಳ್ಳಿಬೆಟ್ಟ, ಕುಂತಿಬೆಟ್ಟ ಮೊದಲಾದ ಬೆಟ್ಟಗುಡ್ಡಗಳನ್ನು ಹೊಂದಿದೆ. ಮಂಡ್ಯ ಜಿಲ್ಲೆಯಲ್ಲಿ ಪ್ರವಹಿಸುತ್ತಿರುವ ಕಾವೇರಿ, ಹೇಮಾವತಿ, ಶಿಂಷಾ, ವೀರವೈಷ್ಣವಿ ಮತ್ತು ಲೋಕಪಾವನಿ ನದಿಗಳಿಂದಾಗಿ ಈ ಜಿಲ್ಲೆಗೆ ಪಂಚನದಿಗಳ ನಾಡೆಂಬ ಹೆಗ್ಗಳಿಕೆ ಇದ್ದು, ಈ ಪ್ರದೇಶವು ಪ್ರಾಚೀನಕಾಲದಿಂದಲೂ ಮಾನವ ನಾಗರೀಕತೆಯ ವಿಕಾಸಕ್ಕೆ ಯೋಗ್ಯಸ್ಥಾನವೆಂದು ಪರಿಗಣಿಸಲ್ಪಟ್ಟಿದೆ. ಫಲವತ್ತಾದ ನದಿ ಕಣಿವೆಗಳು, ಬೆಟ್ಟಗುಡ್ಡಗಳ ಪ್ರದೇಶಗಳು, ಬಯಲು ಪ್ರದೇಶ ದಟ್ಟವಾದ ಅರಣ್ಯ ನದಿ ದ್ವೀಪಗಳು, ಪ್ರಾಣಿಸಂಪತ್ತು, ವಾಸಿಸಲು ಯೋಗ್ಯವಾದ ನೈಸರ್ಗಿಕ ಗುಹೆಗಳು, ಶಿಲಾಯುಧಗಳನ್ನು ತಯಾರು ಮಾಡಲು ಅವಶ್ಯಕವಾದ ವಿವಿಧ ಜಾತಿಯ ಕಲ್ಲಗಳೂ ಮುಂತಾದ ನೈಸರ್ಗಿಕ ಸಂಪತ್ತುಗಳಿಂದ ಕೂಡಿದ ಪ್ರದೇಶವಾಗಿ ಮಾನವ ವಿಕಾಸದ 'ಸರಣಿಯಲ್ಲಿ ಸಾಕಷ್ಟು ಪ್ರಭಾವವನ್ನು ಬೀರಿವೆ. ಈ ಜಿಲ್ಲೆಯಲ್ಲಿ ದೊರೆತಿರುವ ಪೂರ್ವೇತಿಹಾಸದ ನೆಲೆಗಳು ತೀರ ವಿರಳವಾದರೂ ಪಾಂಡವಪುರ ತಾಲ್ಲೂಕಿನಲ್ಲಿ ಬೆಳಕಿಗೆ ಬಂದಿರುವ ಹೊಸಶಿಲಾಯುಗದ ನೆಲೆಗಳು ಗಮನಾರ್ಹವಾಗಿದೆ. ಪಾಂಡವಪುರ ಬಳಿಯ ಕುಂತಿಬೆಟ್ಟ ಮತ್ತು ಶ್ರೀರಂಗಪಟ್ಟಣ, ಬೆಳಕವಾಡಿ, ಮುತ್ತತ್ತಿ ಮುಂತಾದೆಡೆ ಕಾಣಬಹುದು.

ತಲಕಾಡಿನ ಗಂಗರು ಕರ್ನಾಟಕದ ದಕ್ಷಿಣ ಭಾಗದಲ್ಲಿ ಸುಮಾರು ನಾಲ್ಕನೇ ಶತಮಾನದ ಮಧ್ಯಭಾಗದಿಂದ ಹತ್ತನೇ ಶತಮಾನದ ಕೊನೆಯವರೆಗೂ ಆಳ್ವಿಕೆ ಮಾಡಿದರು. ಗಂಗ ರಾಜವಂಶದ ಆಳ್ವಿಕೆಯ ಅವಧಿಗಳು ಮತ್ತು ಇತಿಹಾಸ ಕಾಲಾನುಕ್ರಮಣಿಕೆಯ ಸ್ವರೂಪದ ಬಗ್ಗೆ ವಿದ್ವಾಂಸರಲ್ಲಿ ನಿರಂತರ ಚರ್ಚೆ ನಡೆಯುತ್ತಿದೆ. ಫ್ಲೀಟ್ ಅವರು ಗಂಗರ ಬಹುಪಾಲು ತಾಮ್ರಶಾಸನಗಳನ್ನು, ಕೂಟ(spurious) ಶಾಸನಗಳೆಂದೂ ಐತಿಹಾಸಿಕ ಪುರಾವೆಗಳಿಲ್ಲವೆಂದು ಅಭಿಪ್ರಾಯಪಟ್ಟರೆ, ಬಿ.ಎಲ್, ರೈಸ್ ಅವರು ಗಂಗರ ಕಾಲದ ಹೆಚ್ಚಿನ ತಾಮ್ರಶಾಸನಗಳು ನೈಜವಾದುವುವೆಂದು ಅದುದರಿಂದ ಅವರ ಇತಿಹಾಸ ರಚನೆಗೆ ಈ ತಾಮ್ರಶಾಸನಗಳು ವಿಶ್ವಾಸಾರ್ಹವೆಂದೂ ಭಾವಿಸಿದ್ದಾರೆ. ಗಂಗರ ಉಗಮದ ವಿಚಾರಗಳು ಕ್ರಿ.ಶ. ೧೦ನೇ ಶತಮಾನದಿಂದೀಚಿನ ಶಾಸನಗಳಲ್ಲಿ ಮಾತ್ರ ಕಂಡು ಬರುತ್ತದೆ. ಅವುಗಳ ಪ್ರಕಾರ ಈ ವಂಶದವರು ಮೊದಲು ಅಯೋಧ್ಯೆಯಲ್ಲಿ ಆಳುತ್ತಿದ್ದರೆಂದು ಅನಂತರ **“ಅಹಿಚ್ಛತ್ರ”** ಎಂಬ ಸ್ಥಳಕ್ಕೆ ಹೋದರೆಂದೂ ಅಹಿಚ್ಛತ್ರ ಎಂಬುದು ಯಾವ ಊರು ಎಲ್ಲಿದೆ ಯಾವ ಜಿಲ್ಲೆ ಎಂದು ಹೇಳಲಿಲ್ಲ ಅಹಿಚ್ಛತ್ರ ಎಂಬ ಸ್ಥಳಕ್ಕೆ ಹೋದರು ಎಂದರೆ ಅದು ಯಾವ ಊರು ಎಂದು ತಿಳಿಯುವುದಾದರೂ ಹೇಗೆ? ತರುವಾಯ ದಡಿಗ ಮತ್ತು ಮಾಧವ ಎಂಬ ಇಬ್ಬರು ರಾಜಕುಮಾರರು ದಕ್ಷಿಣದಲ್ಲಿರುವ ಗಂಗೆಪೆರೂರಿಗೆ ವಲಸೆ ಹೋಗಿ ನಂದಗಿರಿ (ನಂದಿಬೆಟ್ಟ) ಮತ್ತು ಕುವಲಾಲಪುರ (ಕೋಲಾರ) ಎಂಬ ಮುಖ್ಯ ನಗರಗಳನ್ನುಳ್ಳ ಗಂಗವಾಡಿ ೯೬೦೦೦ ಪ್ರಾಂತ್ಯದಲ್ಲಿ ತಮ್ಮ ಸುಭದ್ರ ಸಾಮ್ರಾಜ್ಯದ ಸ್ಥಾಪನೆಯನ್ನು ಮಾಡಿದರೆಂಬ ಅಂಶವು ಸ್ಪಷ್ಟವಾಗುತ್ತದೆ. ಕಲ್ಲೂರು ಗುಡ್ಡದ ಕ್ರಿ.ಶ.೧೧೨೨ರ ಶಾಸನದ ಪ್ರಕಾರ ಗಂಗರು ಸೂರ್ಯವಂಶದವರಾಗಿದ್ದು, ಇಕ್ಷ್ವಾಕು ವಂಶಕ್ಕೆ ಸೇರಿದವರೆಂದು ತಿಳಿದುಬರುತ್ತದೆ. ಈ ನಂಬಿಕೆಯ ಪ್ರಕಾರ, ರಾಜ ಹರಿಶ್ಚಂದ್ರ ಮತ್ತು ಆತನ ಪತ್ನಿ ರೋಹಿಣಿದೇವಿಯರ ಮಗನಾಗಿದ್ದ ಭರತನ ಪತ್ನಿ ವಿಜಯಮಾಹಾದೇವಿಯು ಗರ್ಭವತಿಯಾಗಿದ್ದಾಗ ಗಂಗಾನದಿಯಲ್ಲಿ ಸ್ನಾನ ಮಾಡಿದ ನಂತರ ಜನಿಸಿದ ಮಗನಿಗೆ ಗಂಗದತ್ತ (ಗಂಗೆಯ ವರಪ್ರಸಾದದ ಶಿಶು) ಎಂದು ನಾಮಕರಣ ಮಾಡಿದಳೆಂದು ಪ್ರತೀತಿಯಿದೆ. ಗಂಗದತ್ತನು ಈ ವಂಶದ ಮೂಲದವನೆಂದು ಹಾಗೂ ಆತನು ತನ್ನ ವಂಶೋದ್ಧಾರಕನಿಗೆ ಗಂಗ ವಂಶದವನೆಂದು ಕರೆದ ಕಾರಣ ಈ ರಾಜವಂಶಕ್ಕೆ ಗಂಗರೆಂದು ಕರೆಯಲಾಯಿತೆಂದು ಶಾಸನಗಳಿಂದ ಖಚಿತವಾಗುತ್ತದೆ. ಅವರು ನಂದಗಿರಿ ಮತ್ತು ಕುವಾಲಾಲಪುರ ಎಂಬ ಮುಖ್ಯ ನಗರಗಳನ್ನು ಹೊಂದಿದ್ದ ಗಂಗವಾಡಿ ೯೬೦೦೦ ಪ್ರಾಂತ್ಯದಲ್ಲಿ ತಮ್ಮ ರಾಜ್ಯವನ್ನು ಸ್ಥಾಪಿಸಿದರೆಂದೂ ಶಾಸನಗಳಿಂದ ತಿಳಿದುಬರುತ್ತದೆ. ಸ್ವಲ್ಪ ಕಾಲಾನಂತರ ಅವರು ತಮ್ಮ ರಾಜಧಾನಿಯನ್ನು ಕುವಲಾಲಪುರದಿಂದ ಮಣ್ಣೆ (ಮಾನ್ಯಪುರ)ಗೂ ನಂತರ ತಲಕಾಡಿಗೂ ಬದಲಾಯಿಸಿದರು.[೨]

ಈ ಸ್ಥಳಗಳ ಪೈಕಿ ಆಯೋಧ್ಯೆ ಮತ್ತು ಅಹಿಚ್ಛತ್ರಗಳನ್ನು ಉತ್ತರ ಭಾರತದಲ್ಲಿಯಾ ಗಂಗಪೆರೂರು ಆಂಧ್ರಪ್ರದೇಶದ ಕಡಪ ಜಿಲ್ಲೆಯಲ್ಲಿಯೂ ಇರುವ ಸ್ಥಳಗಳೆಂದು ಗುರುತಿಸಲಾಗಿದೆ. ನಂದಿಗಿರಿಯು ಬೆಂಗಳೂರಿನ ಸಮೀಪದಲ್ಲಿರುವ ನಂದಿಬೆಟ್ಟ ಮತ್ತು ಕುವಲಾಲಪುರವನ್ನು ಈಗಿನ ಕೋಲಾರವೆಂದು ಗುರುತಿಸಲಾಗಿದೆ. ಗಂಗರು ಆಯೋಧ್ಯೆ ಮತ್ತು ಅಹಿಚ್ಛತ್ರದಿಂದ ಬಂದವರು ಎನ್ನುವ ವಾದವನ್ನು ಇತಿಹಾಸಕಾರರು ಒಪ್ಪಿರುವುದಿಲ್ಲ. ಅದುದರಿಂದ ಇವರು ಕರ್ನಾಟಕದ ಮೂಲದವರೆಂಬ ವಾದಕ್ಕೆ ಪುಷ್ಠಿ ದೊರೆಯುತ್ತದೆ ಹಾಗೂ ಬಹುಪಾಲು ವಿದ್ವಾಂಸರು ಈ ವಾದವನ್ನು ಅಂಗೀಕರಿಸಿರುತ್ತಾರೆ. ಇವರ ಶಾಸನಗಳ ಪ್ರಕಾರ ಕೊಂಗುಣಿವರ್ಮನು ಈ ವಂಶದ ಮೊದಲ ದೊರೆ. ಆತನು ಕಾಣ್ವಾಯನ ಗೋತ್ರಕ್ಕೆ ಸೇರಿದ್ದು, ಜಾಹ್ನವೇಯ ಕುಲದವನೆಂದು ತಿಳಿದುಬರುತ್ತದೆ. ಅವನು ಸ್ವ ಸಾಮರ್ಥ್ಯದಿಂದ ಗಂಗವಂಶದ ಸಾಮ್ರಾಜ್ಯ ಸ್ಥಾಪನೆ ಮಾಡಿದನು. ಜೈನ ಆಕರಗಳ ಪ್ರಕಾರ ಸಿಂಹ ನಂದಿ ಎಂಬ ಮುನಿಯು ಇವರ ರಾಜ್ಯದ ಸ್ಥಾಪನೆಗೆ ಕಾರಣನೆಂದು ಹಾಗೂ ಗಂಗರು ಮೂಲತಃ ಜೈನ ಪರಂಪರೆಗೆ ಸೇರಿದವರೆಂದೂ ಪ್ರತೀತಿಯಿದೆ. ಈ ಪರಂಪರಾನುಗತ ಕಥೆಯ ಪ್ರಕಾರ ಸಿಂಹ ನಂದಿಯು ದಡಿಗ ಮತ್ತು ಮಾಧವ ಎಂಬ ಸಹೋದರರು ರಾಜ್ಯ ಸ್ಥಾಪನೆಗೆ ಅರ್ಹರೆಂದು ಅಭಿಪ್ರಾಯಪಟ್ಟು ಪದ್ಮಾವತಿ ಯಕ್ಷಿಯ ವರಪ್ರಸಾದದಿಂದ ಅವರಿಗೆ ಕತ್ತಿ ಮತ್ತು ರಾಜ್ಯವನ್ನು ಕೊಟ್ಟನೆಂದೂ ಹೇಳಲಾಗುತ್ತದೆ. ಆದರೆ ಈ ವಾದಕ್ಕೆ ಯಾವುದೇ ಸಮಕಾಲೀನ ದಾಖಲೆಯಾಗಲೀ ಅಥವಾ ಶಾಸನಗಳಾಗಲೀ ಆಧಾರವನ್ನು ನೀಡುವುದಿಲ್ಲವೆಂದು ವಿದ್ವಾಂಸರುಗಳಾದ ಡಾ॥ ಎಸ್.ಶ್ರೀಕಂಠಶಾಸ್ತ್ರಿ ಮತ್ತು ಡಾ॥ ಎಸ್.ನಾಗರಾಜು ಅವರು ಅಭಿಪ್ರಾಯ ಪಡುತ್ತಾರೆ. ಈ ಸಾಂಪ್ರದಾಯಿಕ ಕಥೆಗಳ ಸತ್ಯಾಸತ್ಯತೆ ಏನೇ ಇದ್ದರೂ ಬಲು ಸೂಕ್ಷ್ಮವಾದ ಇತಿಹಾಸದ ಎಳೆಯೊಂದನ್ನು ಇದರಲ್ಲಿ ಗುರುತಿಸಬಹುದಾಗಿದೆ. ಕರ್ನಾಟಕದವರೇ ಆದ ದಡಿಗ ಮತ್ತು ಮಾಧವ ಎಂಬ ಗಂಗ ಪರಾಕ್ರಮಿಗಳು ಸುಮಾರು ನಾಲ್ಕನೇ ಶತಮಾನದ ಮಧ್ಯೆ ಭಾಗದಲ್ಲಿ ಸಣ್ಣ ಪ್ರಮಾಣದ ರಾಜ್ಯವನ್ನು ಸ್ಥಾಪನೆ ಮಾಡಿದರು. ಸಮಕಾಲೀನ ದಾಖಲೆಗಳ ಪ್ರಕಾರ ಕೊಂಗುಣಿವರ್ಮ ಮತ್ತು ದಡಿಗ ಎಂಬ ಎರಡು ಹೆಸರುಗಳು ಒಂದೇ ವ್ಯಕ್ತಿಯನ್ನು ಕುರಿತದ್ದು ಎಂದು ಬಹುಮಂದಿ ವಿದ್ವಾಂಸರು ಒಪ್ಪಿರುತ್ತಾರೆ. ಆಶ್ಚರ್ಯವೆಂದರೆ ಗಂಗರ ಪ್ರಾಚೀನ ಶಾಸನಗಳಲ್ಲಿ ದಡಿಗನ ಹೆಸರೇ ಕಾಣಬರುವುದಿಲ್ಲ. ಅವುಗಳು ಕೇವಲ ಕೊಂಗುಣಿವರ್ಮನನ್ನು ಮಾತ್ರ ಹೆಸರಿಸುತ್ತವೆ. ತಮಿಳು ಶಾಸನಗಳು ಈ ವಂಶವನ್ನು ಕೊಂಗುಣಿ ಅರಸರ್ ಎಂದು ತಿಳಿಸುತ್ತದೆ. ಈತನೇ ಈ ರಾಜವಂಶದ ಪ್ರಥಮ ಅರಸನೆಂದು ಹಾಗೂ ಈ ವಂಶಕ್ಕೆ ಗಂಗವಂಶವೆಂಬ ಹೆಸರು ಬಂದಿತೆಂದು ಹೇಳಲಾಗುತ್ತದೆ. ಅನಂತರ ಅವನ ಮಗನಾದ ಮೊದಲನೇ ಮಾಧವನು ಅಧಿಕಾರಕ್ಕೆ ಬಂದನು ಇವನು ನಂದಿವರ್ಮ ಪಲ್ಲವಮಲ್ಲನ ನೇತೃತ್ವದಲ್ಲಿ

[illegible]

ಗಂಗರ ರಾಜಧಾನಿ ಕುವಲಾಲಪುರದ ಮೇಲೆ ಮಾಡಿದ ದಾಳಿಯನ್ನು ತಡೆಗಟ್ಟಿದ್ದು ಮಾತ್ರವಲ್ಲದೆ ನಾಲ್ಕನೇ ಶತಮಾನದಲ್ಲಿ ಗಂಗ ಸಾಮ್ರಾಜ್ಯದ ಸುಭದ್ರ ತಳಹದಿಯನ್ನು ಸ್ಥಾಪಿಸಲು ಕಾರಣನಾದನು. ಮಾಧವನು ನಂದಗಿರಿ ಅಥವಾ ನಂದಿಬೆಟ್ಟದಲ್ಲಿ ಭದ್ರಕೋಟೆಯನ್ನು ನಿರ್ಮಿಸಿಕೊಂಡು ಆಳ್ವಿಕೆ ಮಾಡಿದನೆಂಬ ಅಂಶ ಶಾಸನಗಳಿಂದ ತಿಳಿದುಬರುತ್ತದೆ. ಕೊಂಗುಣಿವರ್ಮನ ಕೆಲವು ವಿವರಗಳು ಮೈಸೂರು ಮತ್ತು ನಿಟ್ಟೂರು ತಾಮ್ರಪಟ ಶಾಸನಗಳಿಂದ ತಿಳಿದುಬರುತ್ತವೆ. ಮೈಸೂರು (ಎ.ಕ.ಶಾಸನ ಸಂಖ್ಯೆ ೧೦೩) ತಾಮ್ರಪಟವು ಕೊಂಗುಣಿವರ್ಮ ಧರ್ಮಮಹಾರಾಜನು ಕಾಣ್ವಾಯನ ಗೋತ್ರದಲ್ಲಿ ಜನಿಸಿದವನೆಂದು ಹಾಗೂ ಮಹಾರಾಜಾದಿರಾಜ ಎಂಬ ಬಿರುದು ಪಡೆದಿದ್ದ ಮಾಧವನು ಈತನ ಮಗನೆಂದೂ ಉಲ್ಲೇಖಿಸುತ್ತದೆ. ಕೊಂಗುಣಿವರ್ಮನು ಹಲವಾರು ಶಾಸ್ತ್ರಧ್ಯಯನಗಳಿಂದ ಶಿಸ್ತಿನ ವ್ಯಕ್ತಿತ್ವವನ್ನು ಬೆಳಸಿಕೊಂಡಿದ್ದನೆಂದೂ ಶಾಸನಗಳು ತಿಳಿಸುತ್ತವೆ. ಒಂದನೇ ಮಾಧವನನ್ನು ಚಿನ್ನವನ್ನು ಪರೀಕ್ಷಿಸುವ ಓರೆಗಲ್ಲಿಗೆ ಹೋಲಿಸಿ ಕವಿಗಳಿಗೆ ಮತ್ತು ವಿದ್ವಾಂಸರಿಗೆ ಆಶ್ರಯದಾತನಾಗಿದ್ದನೆಂದೂ ಮತ್ತು ತನ್ನ ಸೈನ್ಯಶಕ್ತಿಗೆ ಉಂಟಾಗಿದ್ದ ಹಲವು ಅಡೆತಡೆಗಳನ್ನು ಸ್ವಸಾಮರ್ಥ್ಯದಿಂದ ಹೋಗಲಾಡಿಸಿಕೊಂಡನೆಂದೂ ತಿಳಿದುಬರುತ್ತದೆ. ಈತನು **"ದತ್ತಕಸೂತ್ರಾವೃತ್ತಿ"** ಎಂಬ ಗ್ರಂಥಕ್ಕೆ ಭಾಷ್ಯವನ್ನು ರಚಿಸಿದನೆಂದೂ ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಮಾಧವವರ್ಮನ ನಂತರ ಅವನ ಮಗ ಹರಿವರ್ಮನು ಅಧಿಕಾರಕ್ಕೆ ಬಂದನು. ಶ್ರೀರಂಗಪಟ್ಟಣದಲ್ಲಿ ದೊರೆತಿರುವ ತಾಮ್ರಪಟದಲ್ಲಿ (ಎ.ಕ.ಸಂ.೬ ಶಾಸನ-ಸಂಖ್ಯೆ ೬೬) ಕೊಂಗುಣಿವರ್ಮನಿಂದ ಆರಂಭಗೊಂಡ ಗಂಗರ ವಂಶಾವಳಿಯನ್ನು ಕೊಡಲಾಗಿದೆ. ಹರಿವರ್ಮನ ಮಗ ವಿಷ್ಣುಗೋಪನನ್ನು ಹೆಸರಿಸಿರುವ ಈ ಶಾಸನದಲ್ಲಿ ತ್ರಿವಿಕ್ರಮನ ಮಗನನ್ನು ದುಗ್ಗನೆಂದು ಕರೆಯಲಾಗಿದೆ. ಗಂಗರ ಪ್ರಮುಖ ಪ್ರಾಂತ್ಯವಾಗಿದ್ದ ಚಿಕ್ಕಗಂಗವಾಡಿಯು ಗಂಗವಾಡಿ-೯೬೦೦೦ದ ಆಡಳಿತ ವಿಭಾಗದ ಮುಖ್ಯ ಕೇಂದ್ರ ಸ್ಥಳವಾಗಿದ್ದು, ಆ ಕಾಲದ ಪ್ರಮುಖ ಪ್ರಾಚೀನ ನಗರವಾಗಿತ್ತೆಂದು ಶಾಸನಗಳಿಂದ ಖಚಿತವಾಗುತ್ತದೆ. ಮಾಧವವರ್ಮನ ತರುವಾಯ ಅಧಿಕಾರಕ್ಕೆ ಬಂದ. ಹರಿವರ್ಮನನ್ನು ಆರ್ಯವರ್ಮ ಮತ್ತು ಕೃಷ್ಣವರ್ಮನೆಂದು ಹಲವು ಬಾರಿ ಸಂಬೋಧಿಸಿರುವುದು ಖಚಿತವಾಗುತ್ತದೆ. ಕೆಲವು ವಿದ್ವಾಂಸರು ಅರ್ಯವರ್ಮ ಮತ್ತು ಕೃಷ್ಣವರ್ಮ ಇಬ್ಬರು ಹರಿವರ್ಮನ ಸಹೋದರರೆಂದು ಕರೆದಿದ್ದು ಅದಕ್ಕೆ ಯಾವುದೇ ಅಧಾರವಿಲ್ಲವಾಗಿದೆ. ಪ್ರಾಯಶಃ ಹರಿವರ್ಮನು ತಲಕಾಡನ್ನು ತನ್ನ ದ್ವಿತೀಯ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದನೆಂದು ದಾಖಲೆಗಳಿಂದ ತಿಳಿದು ಬರುತ್ತದೆ.[೩]

ಭಾರತದ ಇತಿಹಾಸವನ್ನಾಗಲಿ ಕರ್ನಾಟಕದ ಇತಿಹಾಸವನ್ನಾಗಲಿ ಪುನಾರಚಿಸಬೇಕಾದರೆ ಶಾಸನಗಳ ಮೊರೆಹೋಗದೆ ಗತ್ಯಂತರವಿಲ್ಲ. ಇತಿಹಾಸ ರಚನೆಗೆ ಕಾವ್ಯಗಳು ವಿದೇಶಿ ಪ್ರವಾಸಿಗಳ ಬರಹಗಳು ಇತ್ಯಾದಿಗಳಿರಬಹುದಾದರೂ ಅವು ಶಾಸನಗಳಷ್ಟು ಪ್ರಮಾಣವಲ್ಲ. ಆದರೆ ಶುದ್ಧ ಐತಿಹಾಸಿಕ ಶಾಸನಗಳು ಸಂಖ್ಯೆ ನಮ್ಮಲ್ಲಿ ಕಡಿಮೆ. ಕೇವಲ ಪ್ರಶಸ್ತಿಗಳನ್ನೆ ಹೇಳುವ ಕೆಲವು ತಾಮ್ರಪಟಗಳು ಇದ್ದುವು ಎನ್ನುವುದಕ್ಕೆ ನಿದರ್ಶನಗಳು ಸಿಗುತ್ತವೆ. ಹಾಗೆಯೇ (ಶಿಲಾ) ಪ್ರಶಸ್ತಿ ಶಾಸನಗಳು ಇವೆ. ಇವೆಲ್ಲವುಗಳನ್ನು ಇತಿಹಾಸದ ಪುನಾರಚನೆಗೆ ಬಳಸಿಕೊಳ್ಳಬೇಕಾಗುತ್ತದೆ. ಶಿಲಾ ಶಾಸನಗಳಿಗಿಂತ ತಾಮ್ರಪಟಗಳು ಸಂಖ್ಯೆಯಲ್ಲಿ ಕಡಿಮೆಯಾಗಿವೆ. ಆದರೂ ಇತಿಹಾಸ ಪುನಾರಚನೆಗೆ ಶಿಲಾ ಶಾಸನಕ್ಕಿಂತ ತಾಮ್ರಪಟಗಳನ್ನೇ ಹೆಚ್ಚಾಗಿ ಆಧರಿಸಲಾಗಿದೆ.

ಇತಿಹಾಸ ಪುನಾರಚನೆಯಲ್ಲಿ ಶಾಸನಗಳಿಗೆ ಇಷ್ಟೊಂದು ಮಹತ್ವ ಏಕೆ ಎಂಬ ಪ್ರಶ್ನೆ ಏಳುತ್ತದೆ. ಏಕೆಂದರೆ ಅವು ರಾಜರುಗಳಿಗೆ ಸಂಬಂಧಿಸಿದಂತೆ ಮತ್ತು ಚಾರಿತ್ರಿಕ ಘಟನೆಗಳಿಗೆ ಸಂಬಂಧಿಸಿದಂತೆ ವಿಶೇಷವಾದ ಹೆಚ್ಚಿನ ವಿವರಗಳನ್ನು ಕೊಡುತ್ತವೆ. ಬಹುಶಃ ಶಾಸನಗಳು ಕೊಡುವಷ್ಟು ವಿವರಗಳನ್ನು ಬೇರೆಲ್ಲೂ ನಾವು ಕಾಣಲಾರೆವು. ಕಾವ್ಯಗಳಲ್ಲಿ, ಇತರ ಬರವಣಿಗೆಗಳಲ್ಲಿ ರಾಜರ ಮತ್ತು ಐತಿಹಾಸಿಕ ಘಟನೆಗಳ ವಿವರ ಬರುವುದಾದರೂ ಅಲ್ಲಿ ಅದು ಅನುಷಂಗಿಕ. ಅಲ್ಲದೆ ಅಲ್ಲಿಯ ಬರವಣಿಗೆ ಲಿಪಿಕಾರರ ಕೈವಾಡದಿಂದಾಗಿ ಬದಲಾಗುವ ಸಾಧ್ಯತೆ ಹೆಚ್ಚು. ಆದರೆ ಶಾಸನಗಳ ಪಾಠ ಅಚಲವಾದುದು, ಅಲ್ಲದೆ ಶಾಸನಗಳ ಕಾಲವನ್ನು ನಿರ್ದಿಷ್ಟವಾಗಿ ಹೇಳಬಹುದು ಹೊರತು ಇತರ ಆಕಾರಗಳ ಬಗ್ಗೆ ಇಷ್ಟೊಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಶಾಸನಗಳಲ್ಲಿ ಬರುವ ರಾಜಾವಳಿಗಳನ್ನು ಅಧಿಕಾರಿಯುತರಾಗಿ ನಿರೂಪಿಸಬಲ್ಲ ಕವಿಗಳು ರಚಿಸುತ್ತಿದ್ದರೂ ಅವುಗಳಿಗೆ ರಾಜರ ಒಪ್ಪಿಗೆ ದೊರೆತ ಮೇಲೆ ತಾಮ್ರಶಾಸನ ಕರ್ತೃಗಳು ಮತ್ತು ಶಿಲಾ ಶಾಸನ, ಕರ್ತೃಗಳು ಉಪಯೋಗಿಸಿಕೊಳ್ಳುತ್ತಿದ್ದರು. ಶಾಸನಗಳು ರಾಜನ ಭಂಡಾರದಲ್ಲಿ ಮುಂದಿನ ರಾಜರ ಅವಗಾಹನೆಗಾಗಿ ಇರುತ್ತಿದ್ದುವು. ಕೆಲವು ವೇಳೆ ರಾಜರ ಭಂಡಾರದಲ್ಲಿನ ಹಿಂದಿನ ಶಾಸನಗಳ ಅವಲೋಕನದಿಂದ ತನ್ನ ಸಂಶಯವನ್ನು ಪರಿಹಾರ ಮಾಡಿಕೊಳ್ಳುತ್ತಿದ್ದ. ಇಂಥ ಒಂದು ಪ್ರಸಂಗವನ್ನು ಇಲ್ಲಿ ಹೇಳಬಹುದು. ಕ್ರಿ.ಶ.೧೫೦ರ ಜುನಾಗಡದ ಶಾಸನ ಸುದರ್ಶನ ಮಹಾಸರೋವರದ ವಿಚಾರವನ್ನು ಹೇಳುತ್ತಾ ಅದು ಚಂದ್ರಗುಪ್ತ ಮೌರ್ಯ (ಕ್ರಿ.ಪೂ ೩೨೨-೨೯೮) ನ ಕಾಲದಲ್ಲಿ ರಾಷ್ಟ್ರೀಯ ಪುಷ್ಯಗುಪ್ತನಿಂದ ನಿರ್ಮಿತವಾಯಿತೆಂದು ಹೇಳಿದೆ. ಪುಷ್ಯಗುಪ್ತನು ಚಂದ್ರಗುಪ್ತ ಮೌರ್ಯನ ಮಾಂಡಲಿಕ. ಆನಂತರ ಆಶೋಕಮೌರ್ಯನ (ಕ್ರಿ.ಪೂ ೨೭೨-೨೩೨) ಮಾಂಡಲಿಕ ಯುವನರಾಜ ತುಷಾಸ್ತ್ರ ಅದನ್ನು ಅಂದಗೊಳಿಸಿ ಬೇಸಾಯಕ್ಕೆ ಅನುಕೂಲವಾಗುವಂತೆ ನಾಲೆಗಳನ್ನು ತೋಡಿಸಿದನೆಂದು ಹೇಳುತ್ತದೆ. ಕ್ರಿ.ಶ.೧೫೦ ಜುನಾಗಡ ಶಾಸನವು ತನಗಿಂತ ಕೆಲವು

ಶತಮಾನಗಳ ಹಿಂದಿನ ಸಾರ್ವಜನಿಕ ಕಾರ್ಯವನ್ನು ಹೇಳುವುದರಿಂದ ಆ ಶಾಸನದ ಕರ್ತೃವು ವಿಷಯವನ್ನು ಬಲ್ಲವರಿಂದ ಕೇಳಿ ತಿಳಿದಿರಬೇಕು ಇಲ್ಲವೆ ಹಿಂದಿನ ಶಾಸನಗಳನ್ನು ಅವಲೋಕಿಸಿರಬೇಕು.[೪]

ಭಾರತೀಯರಿಗೆ ಇತಿಹಾಸ ಪ್ರಜ್ಞೆಯಿಲ್ಲವೆನ್ನುವುದು ಸಾಮಾನ್ಯವಾಗಿ ಎಲ್ಲರೂ ಮಾಡುವ ಒಂದು ಟೀಕೆ ಈ ಟೀಕೆಯನ್ನು ಒಪ್ಪುವುದು ಬಿಡುವುದೂ ಬೇರೆ ವಿಚಾರ. ನಮ್ಮ ಸಂಖ್ಯಾತವಾದ ಶಾಸನಗಳಲ್ಲಿ ಕೆಲವಾದರೂ ಇತಿಹಾಸ ಪ್ರಜ್ಞೆಯನ್ನು ತೋರಿವೆ ಎಂಬುದನ್ನು ಹೆಮ್ಮೆಯಿಂದ ಇಲ್ಲಿ ನಿರೂಪಿಸಬಹುದು. ಕೆಲವು ಶಾಸನಗಳು ಹಿಂದಿನ ಘಟನೆಗಳನ್ನು ಅವು ನಡೆದ ವರ್ಷಗಳೊಂದಿಗೆ ಹೇಳುತ್ತವೆ. **ಮಂದಸೋರ್** (Mandasore) ನ ಒಂದು ಶಾಸನವು ಅಲ್ಲಿ ಸೂರ್ಯ ದೇವಾಲಯವೊಂದು ನಿರ್ಮಾಣವಾದುದನ್ನು ಮತ್ತು ಅದರ ಜೀರ್ಣೋದ್ಧಾರ ಕಾರ್ಯ ನಡೆದುದನ್ನು ಹೇಳುವಾಗ ಅದು ನಿರ್ಮಾಣವಾದ ವರ್ಷ ಮತ್ತು ಅದರ ಜೀರ್ಣೋದ್ಧಾರದ ಕಾರ್ಯ ನಡೆದ ವರ್ಷವನ್ನು ಹೇಳುತ್ತದೆ. ಮದರಾಸು ಮ್ಯೂಸಿಯಂನಲ್ಲಿರುವ **'ಉತ್ತಮಚೋಳನ' ತಾಮ್ರಪಟವೊಂದು** ಪರಕೇಸರಿನ್ (ಒಂದನೆಪರಾಂತಕ)ನ ಆಳ್ವಿಕೆಯ ಇಪ್ಪತ್ತೆರಡನೆಯ ವರ್ಷದಲ್ಲಿ ನಡೆದ ಮತ್ತು ಕಂಪವರ್ಮನ ಅಳ್ವಿಕೆಯ ಒಂಭತ್ತನೆಯ ವರ್ಷದಲ್ಲಿ ನಡೆದ ಎರಡು ಘಟನೆಗಳನ್ನು ಹೇಳುತ್ತದೆ. ಪೂರ್ವ ಚಾಲ್ಯುಕರ ಕೆಲವು ಶಾಸನಗಳು ಹಿಂದಿನ ಕಾಲದ ಆಳ್ವಿಕೆಯ ವರ್ಷಗಳನ್ನು ಹೇಳುತ್ತವೆ. ಇದು ಇತಿಹಾಸಕಾರನಿಗೆ ಎಷ್ಟೊಂದು ಉಪಯುಕ್ತವೆಂಬುದನ್ನು ಮತ್ತೆ ಹೇಳಬೇಕಾಗಿಲ್ಲ. ಪೂರ್ವ ಗಂಗರ ಶಾಸನಗಳಲ್ಲಿ ತನ್ನ ಕೆಲವು ಹಿಂದಿನ ರಾಜರ ಆಳ್ವಿಕೆಯ ವರ್ಷಗಳನ್ನು ಹೇಳುವುದರ ಜೊತೆಯಲ್ಲಿ ಅವರು ಪಟ್ಟವೇರಿದ ಮತ್ತು ಮೃತರಾದ ಪಕ್ಷ, ಮಾಸ, ತಿಥಿ, ವಾರಗಳನ್ನೂ ಕೊಟ್ಟಿರುತ್ತದೆ. ಕೆಲವು ಶಾಸನಗಳಲ್ಲಿ ಇತಿಹಾಸದ ಘಟನೆಗಳನ್ನು ಕಾಲಾನುಕ್ರಮವಾಗಿ ಜೋಡಿಸಿ ಕೊಟ್ಟಿರುತ್ತದೆ. ಸಿರಾನ್ ಕುರ್ದ್ (**Siron Khurd**)ನ ಸಿಯಾಡೋನಿ (**Siyadoni**) ಶಾಸನದಲ್ಲಿ ಹಿಂದಿನ ಘಟನೆಗಳನ್ನು ಕಾಲಾಕ್ರಮದಲ್ಲಿ ಜೋಡಿಸಿ ಕೊಟ್ಟಿರುವುದನ್ನು ನೋಡಬಹುದು. ಖಾರವೇಲನ ಹಾಥಿಗುಂಫ ಶಾಸನವು ಅವನ ಆಳ್ವಿಕೆಯ ಹದಿಮೂರನೆಯಾ ವರ್ಷದಲ್ಲಿ ಹುಟ್ಟಿದ್ದು, ಅದು ಅವನು ಹದಿನಾರು ವರ್ಷದ ಹುಡುಗನಾಗಿದ್ದಾಗ ಯುವರಾಜನಾದುದನ್ನು ಹೇಳಿ ಅಲ್ಲಿಂದ ಅವನ ಹದಿಮೂರು ವರ್ಷದ ಆಳ್ವಿಕೆಯ ಸಾದನೆಗಳನ್ನು ಕಾಲಾನುಕ್ರಮದಲ್ಲಿ ನಿರೂಪಿಸುತ್ತದೆ. ಚೋಳರ ಶಾಸನಗಳಲ್ಲಿಯೂ ಕೂಡಾ ಆಯಾ ರಾಜನ ಸಿದ್ದಿ ಸಾಧನೆಗಳನ್ನು ಕಾಲಾನುಕ್ರಮವಾಗಿ ಕೊಟ್ಟಿದೆ, ಆದರೆ ಯಾವ ಯಾವ ಘಟನೆಗಳು ಯಾವ ಯಾವ ವರ್ಷಗಳಲ್ಲಿ ನಡೆದವು ಎಂದು ಹೇಳಿಲ್ಲದಿರುವುದು ಆ ಶಾಸನಗಳ ಒಂದು ಕೊರತೆ.[೫]

ಹಾಗಾದರೆ ಶಾಸನಗಳಲ್ಲಿ ಬಂದಿರುವುದುನ್ನು ನೂರಕ್ಕೆ ನೂರರಷ್ಟು ಸತ್ಯ ಎಂದು ತೆಗೆದುಕೊಳ್ಳಬಹುದೋ ಎಂದರೆ ಆಗದು ಏಕೆಂದರೆ ಅವು ಎಷ್ಟೇ ಐತಿಹಾಸಿಕಾಂಶಗಳನ್ನು ಕೊಟ್ಟರೂ ಅವುಗಳಲ್ಲಿ ಪ್ರತಿಕೂಲವಾದ ಅಂಶಗಳು ಇದ್ದೇ ಇರುತ್ತದೆ. ಆದ್ದರಿಂದ ಐತಿಹಾಸಿಕ ವಿಚಾರಗಳನ್ನು ಇತಿಹಾಸಕಾರ ಶಾಸನಗಳಿಂದ ಸ್ವೀಕರಿಸುವಾಗ ಬಹು ಎಚ್ಚರಿಕೆಯಿಂದಿರಬೇಕಾಗುತ್ತದೆ. ಸಾಮಾನ್ಯವಾಗಿ ಎಲ್ಲಾ ಶಾಸನಗಳೂ ಅವು ಉತ್ತರ ಭಾರತದ ಶಾಸನಗಳಾಗಿರಬಹುದು ಅಥವಾ ದಕ್ಷಿಣ ಭಾರತದ ಶಾಸನಗಳಾಗಿರಬಹುದು. ತಮ್ಮದು ಯಾವುದೋ ಪುರಾಣ ಪ್ರಸಿದ್ದವಾದ ವಂಶವೆಂದು ಹೇಳಿಕೊಂಡು ತಮ್ಮ ವಂಶವನ್ನು ಬ್ರಹ್ಮನಿಂದ ಆರಂಭಿಸುತ್ತವೆ. ಬಹುಶಃ ಜನತೆಯ ದೃಷ್ಟಿಯಲ್ಲಿ ತಮ್ಮ ವಂಶಗಳಿಗೆ ಘನತೆಯನ್ನು ತಂದುಕೊಡುವುದು ಅವುಗಳ ಉದ್ದೇಶ ಎಂದು ಕಾಣುತ್ತದೆ. ಈಗ ನಮ್ಮ ಹೊಯ್ಸಳ ವಂಶವನ್ನೇ ತೆಗೆದುಕೊಳ್ಳೋಣ. ಅವರು ಮಲೆನಾಡಿನ ಶಶಕಪುರ ಅಥವಾ ಸೊಸೆವೂರಿನವರು ಅದು ಈಗಿನ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಅಂಗಡಿ ಎಂಬುವುದೇ ಆಗಿದೆ, ಅಂದರೆ ಹೊಯ್ಸಳರು, ಬಹುಶಃ ಮೂಲತಃ ಮಲೆಪರು ಎಂದು ಹೇಳಬಹುದು. ಆದರೆ ಅವರ ಶಾಸನಗಳು ಅವರನ್ನು ಯಾದವರೆಂದು ಕರೆಯುವುದಲ್ಲದೇ ಅವರ ವಂಶವನ್ನು ಬ್ರಹ್ಮನಿಂದ ಆರಂಭಿಸುತ್ತವೆ. ಇನ್ನೂ ಆನೇಕ ರಾಜ ವಂಶಗಳು ತಮ್ಮದು ಯದುವಂಶವೆಂದು ಕರೆದು ಕೊಳ್ಳುತ್ತವೆ. ಅಲ್ಲದೆ ಒಂದೇ ವಂಶದ ಶಾಸನಗಳಲ್ಲಿಯೂ ಆ ವಂಶದ ಮೂಲ ಪುರುಷನ ಬಗೆಗೆ ಸರಿಯಾದ ಕಲ್ಪನೆಯಿಲ್ಲದಿರುವುದು ಕಂಡು ಬರುತ್ತದೆ. ಇನ್ನು ಕೆಲವು ಶಾಸನಗಳಲ್ಲಿ ಆ ಕಾಲದ ಆ ಶಾಸನಕ್ಕೆ ಕಾರಣನಾದ ರಾಜ ಸಣ್ಣವನಾದರೂ ಅವನ ದಿಗ್ವಿಜಯಗಳನ್ನು ಅತಿಯಾಗಿ ಹೊಗಳಿರುತ್ತವೆ. ಕ್ರಿ.ಶ.೬೦೨ರ ಮಹಾಕೂಟ ಶಾಸನಗಳಲ್ಲಿ ಕೀರ್ತಿವರ್ಮನು ಅಂಗ, ವಂಗ, ಕಳಿಂಗ, ವಟ್ಟೂರ, ಚೋಳ, ಆಳುಪ, ವೈಜಯಂತಿಯ ಅರಸರನ್ನು ಗೆದ್ದಂತೆ ಹೇಳಿದೆ. ಆದರೆ ಕೀರ್ತಿವರ್ಮನ ಮಗನಾದ ಇಮ್ಮಡಿ ಪುಲಿಕೇಶಿಯ ಐಹೊಳೆಯ ಶಾಸನದಲ್ಲಿ ಇವುಗಳ ಪ್ರಸ್ತಾಪ ಬರುವುದಿಲ್ಲ. ಕೀರ್ತಿವರ್ಮ ಗೆದ್ದುದು ನಳರು, ಮೌರ್ಯರು ಮತ್ತು ಕದಂಬರನ್ನು ಮಾತ್ರ ಕೀರ್ತಿವರ್ಮನ ಬಗೆಗೆ ಹೇಳಿದ ಮಾತುಗಳನ್ನೇ ಉಳಿದ ರಾಜರ ಶಾಸನಗಳಿಗೂ ಹೇಳಬಹುದು ಅಂಗ, ವಂಗ, ಕಳಿಂಗ ಮೊದಲಾದ ಛಪ್ಪನ್ನೈವತ್ತಾರು ದೇಶಗಳನ್ನು ತಮ್ಮ ತಮ್ಮ ರಾಜರು ಗೆದ್ದಂತೆ ಆಯಾ ಶಾಸನ ಕರ್ತೃಗಳು ಹೇಳಿರುತ್ತಾರೆ. ಈ ಪ್ರಶಸ್ತಿಯ ಭಾಗ ಸಾಂಪ್ರದಾಯಿಕಾದುದರಿಂದ ಹೆಚ್ಚು ಗಮನ ಕೊಡಬೇಕಾಗಿಲ್ಲ. ಅಂದರೆ ಎಲ್ಲಿ ಈ ಪ್ರಶಸ್ತಿಗಳ ಸಾಧಾರಣೀಕರಿಸಲ್ಪಟ್ಟು ಹೇಳಿರುತ್ತವೆಯೋ ಅಂತಹ ಹೇಳಿಕೆಗಳನ್ನು ಗಮನಿಸಬೇಕಾಗಿಲ್ಲ. ಆದರೆ ಯಾವ ಘಟನೆಯ ಬಗ್ಗೆ ಹೆಚ್ಚು ವಿವರಗಳಿದ್ದು ಖಚಿತವಾಗಿರುತ್ತದೆಯೊ ಅದನ್ನು ಗಮನಿಸಲೇಬೇಕಾಗುತ್ತದೆ. ಪ್ರಶಸ್ತಿಯ ಭಾಗದಲ್ಲಿ ಉತ್ಪ್ರೇಕ್ಷೆ

[illegible]

ಏಕೆಂದರೆ ಶಾಸನ ಕವಿಗಳು ಆಯಾ ರಾಜರ ಆಶ್ರಿತರಾಗಿರುತ್ತಿದ್ದರು. ಕೆಲವು ವೇಳೆ ಸಾಮಂತ ಅಥವಾ ಮಾಂಡಲಿಕನೊಬ್ಬನು ಪ್ರಬಲನಾಗಿದ್ದರೆ ಅವನ ಶಾಸನಗಳಲ್ಲಿ ಅವನನ್ನು ಅಸಂದಿಗ್ಧ ಮಾತುಗಳಲ್ಲಿ ಮಹರಾಜಾಧಿರಾಜ ಅಥವಾ ಚಕ್ರವರ್ತಿಯನ್ನು ಹೋಗಳುವಂತೆಯೇ ಹೊಗಳಿರುತ್ತದೆ. ಇದಕ್ಕೆ ಗಂಗರ ಕೆಲವು ಶಾಸನಗಳನ್ನು ಉದಾಹರಣೆಯಾಗಿ ಕೊಡಬಹುದು. ಗಂಗರ ದೊರೆ ಎರೆಯಪ್ಪನನ್ನು ಶಾಸನವೊಂದು ಪೃಥ್ವೀಪತಿಯೆಂದೂ, ಚತುಸ್ಸಮುದ್ರದಿಂದಾವರಿಸಲ್ಪಟ್ಟ ಭೂಮಿಗೆ ಒಡೆಯನೆಂದು ವರ್ಣಿಸುತ್ತದೆ. ಕೆಲವು ಶಾಸನಗಳು ಅನಿರ್ಣಾಯಕವಾದ ಯುದ್ಧಗಳನ್ನು ತಮ್ಮ ರಾಜರು ಗೆದ್ದಂತೆ ಹೇಳಿರುತ್ತದೆ. ಸಣ್ಣ ಪುಟ್ಟ ರಾಜರು ಶಾಸನಗಳನ್ನು ಹಾಕಿಸುವಾಗ ತಾವು ಯಾರ ಮಾಂಡಲಿಕರೋ ಅವರ ವಂಶವಾಳಿಯನ್ನು, ಪ್ರಶಸ್ತಿಯನ್ನು ತಮ್ಮ ಶಾಸನಗಳಲ್ಲಿ ಹಾಕಿಸುತ್ತಿದ್ದರು. ತಮ್ಮ ಅಧಿನಾಯಕರ ರಾಜಾವಳಿ, ಪ್ರಶಸ್ತಿಗಳನ್ನು ಹಾಕಿಸುವಾಗ ತಮ್ಮ ಅದಿನಾಯಕರ ಭಂಡಾರದಲ್ಲಿರುತ್ತಿದ್ದ ಶಾಸನಗಳನ್ನು ಬಹುವೇಳೆ ಅವಲೋಕಿಸುತ್ತಿರಲಿಲ್ಲ. ಹೀಗಾಗಿ ಶಾಸನಗಳ ರಾಜಾವಳಿಗಳಲ್ಲಿ ತಪ್ಪು ಕಂಡುಬರುತ್ತದೆ. ಒಂದೇ ವಂಶದವರು ಹಾಕಿಸಿರುವ ಶಾಸನಗಳ ರಾಜಾವಳಿ ಅಥವಾ ಘಟನೆಗಳ ವಿಚಾರದಲ್ಲಿ ಹತ್ತಾರು ತಪ್ಪಿರುವುದನ್ನು ಕಾಣಬಹುದು. ಹಾಗೇಯೇ ಎಲ್ಲ ಶಾಸನಗಳನ್ನು ಪ್ರೌಢರಾದ ವಿದ್ವಾಂಸರೆ ಬರೆಯುತ್ತಿರಲಿಲ್ಲ. ಅವಿದ್ಯಾವಂತರಾದ, ಆದರೆ ತಕ್ಕ ಮಟ್ಟಿಗೆ ಓದುಬರಹ ಬಲ್ಲವರೂ ಶಾಸನಗಳನ್ನು ಬರೆಯುತ್ತಿದ್ದರು. ಹಾಗಾಗಿ ತಪ್ಪುಗಳು, ತಪ್ಪು ಹೇಳಿಕೆಗಳು ಸಹಜವಾಗಿಯೇ ಉಂಟಾಗುತ್ತಿದ್ದುವು. ಕವಿಗಳು ಬರೆದ ಓಲೆಗರಿಯ ಮೇಲಿನ ಶಾಸನ ಪಾಠವನ್ನು ತಾಮ್ರಪಟದ ಮೇಲೆ ಮಸಿಯಿಂದಾಗಲಿ, ಶಿಲೆಯ ಮೇಲೆ ಬಳಪದಿಂದಾಗಲಿ ಬರೆಯುವಾಗ ಕೆಲವು ಪದಗಳು ಬಿಟ್ಟು ಹೋಗಿರಬಹುದು ಕಲ್ಲಿನ ಮೇಲೆ ಕೆತ್ತುವಾಗ ಕೆಲವು ಅಕ್ಷರಗಳೇಹಾರಿ ಹೋಗಿರಬಹುದು. ಮುಂದೆಯೂ ಗಾಳಿ, ಮಳೆ, ಜನರಿಂದಾಗಿ ಅಕ್ಷರಗಳು ಹಾಳಾಗಿರಬಹುದು ಇವೆಲ್ಲವೂ ಶಾಸನದಲ್ಲಿನ ಹೇಳಿಕೆಗಳು ತಪ್ಪಾಗಿ ಅರ್ಥವಾಗಲೂ ಕಾರಣವಾಗುತ್ತದೆ.[೬]

ಇಷ್ಟೆಲ್ಲಾ ಪ್ರತಿಕೂಲಗಳಿದ್ದರೂ ಹೇಗೆ ಶಾಸನಗಳ ಐತಿಹಾಸಿಕ ಮಹತ್ವಕ್ಕೆ ಚ್ಯುತಿಯಿಲ್ಲವೆಂಬುದನ್ನು ನೋಡೋಣ. ಅಶೋಕನ ಶಾಸನಗಳಲ್ಲಿ **'ದೇವಾನಾಂ ಪ್ರಿಯ: ಪ್ರಿಯದರ್ಶಿ'** ಎಂದು ಇದೆ. ಇದು ಅಶೋಕನ ನೆಚ್ಚಿನ ಬಿರುದು ಅಶೋಕನ ಹೆಸರು ಸ್ಪಷ್ಟವಾಗಿ ಅವನ ಶಾಸನಗಳಲ್ಲಿ ಇಲ್ಲದೇ ಇದ್ದುದರಿಂದ ಅವು ಅವನ ಶಾಸನಗಳು ಎಂಬ ವಿಚಾರದಲ್ಲಿ ಮೊದಲು ವಿದ್ವಾಂಸರಲ್ಲಿ ಸಂದೇಹ ಹುಟ್ಟಿತ್ತು. ಅಷ್ಟೇ ಅಲ್ಲ ದೇವಾನಾಂಪ್ರಿಯ ಎಂಬ ಪದಕ್ಕೆ ದಡ್ಡ ಮೂರ್ಖ ಎಂಬ ಅರ್ಥವೂ ಬಂದಿತು. ವಾಸ್ತವವಾಗಿ ದೇವನಾಂ ಪ್ರಿಯ ಎಂದರೆ ದೇವತೆಗಳಿಗೆ ಪ್ರಿಯನಾದವನು ಎಂದು ಅರ್ಥ. ದೀಪ ವಂಶ ಎಂಬ ಗ್ರಂಥದಲ್ಲಿ ದೇವನಾಂ ಪ್ರಿಯ ಎಂಬ

ಪದವನ್ನು ರಾಜ ಎಂಬುದಕ್ಕೆ ಬದಲಾಗಿಯೇ ಉಪಯೋಗಿಸಿದೆ. ಮಸ್ಕಿಯ ಅಶೋಕನ ಶಾಸನ ದೊರೆತ ಮೇಲೆ ದೇವಾನಾಂ ಪ್ರಿಯದರ್ಶಿ ಎಂದರೆ ಅಶೋಕನಲ್ಲದೆ ಬೇರಾರು ಅಲ್ಲ ಎಂಬುದು ಖಚಿತವಾಗಿತ್ತು. ಏಕೆಂದರೆ ಆ ಶಾಸನದಲ್ಲಿ ದೇವನಾಂ ಪ್ರಿಯ ಅಶೋಕ ಎಂಬ ಮಾತು ಬಂದಿದೆ ಇದು ಮಹತ್ವವಾದ ಸಂಗತಿಯೆಂಬುದರಲ್ಲಿ ಯಾರು ಭಿನ್ನಾಭಿಪ್ರಾಯಪಡುವುದಿಲ್ಲ. ಹಾಗೆಯೇ ತಾಳಗುಂದದ ಶಾಸನ ಎರಡು ದೃಷ್ಟಿಯಿಂದ ಪ್ರಮುಖವಾದದ್ದು ಎನಿಸುತ್ತದೆ. ಮೊದಲನೆಯದಾಗಿ ತಾಳಗುಂದದ ಶಾಸನ ಕದಂಬವಂಶದ ಉಗಮವನ್ನು ನಿರೂಪಿಸುತ್ತದೆ. ತಾಳಗುಂದದ ಶಾಸನ ಸಿಗುವವರೆಗೂ ಕದಂಬರ ಉಗಮವನ್ನು ಕುರಿತು ಬೇರೆ ಬೇರೆಯ ಶಾಸನಗಳು ಬೇರೆ ಬೇರೆ ರೀತಿಯಲ್ಲಿ ವರ್ಣಿಸುತ್ತದೆ. ಕದಂಬವಂಶದ ಮೂಲಪುರುಷನಾದ ಮಯೂರ ಶರ್ಮ(ವರ್ಮ)ನನ್ನು ಮುಕ್ಕಣ್ಣ ಕದಂಬನೆಂದು ಕರದಿದೆ ಅವನನ್ನು ಶಿವಪಾರ್ವತಿಯಾ ಮಗನೆಂದೂ, ಶಿವಭೂದೇವಿಯರ ಮಗನೆಂದೂ ಕರೆದಿವೆ. ಕೆಲವು ಶಾಸನಗಳಲ್ಲಿ ಅವನಿಗೆ ಮೂರು ಕಣ್ಣು ನಾಲ್ಕು ಕೈಗಳಿದ್ದುವೆಂದು ಹೇಳಿವೆ. ಇನ್ನು ಕೆಲವು ಶಾಸನಗಳು ಅವನಿಗೆ ಜೈನ ಮೂಲವನ್ನು ಆರೋಪಿಸುವ ಪ್ರಯತ್ನವನ್ನು ಮಾಡಿವೆ. ತಾಳಗುಂದದ ಶಾಸನ ದೊರೆತ ಮೇಲೆ ಈ ಎಲ್ಲ ಊಹಾಪೋಹಗಳಿಗೆ ಒಂದು ನಿಲುಗಡೆ ಬಂದಿತ್ತು. ಮಯೂರಶರ್ಮ(ವರ್ಮ)ನು ವೇದಾಧ್ಯಯನ ನಿರತನಾಗಿದ್ದ ವೈದಿಕ ಮನೆತನಕ್ಕೆ ಸೇರಿದವನೆಂದೂ ಮನೆಯ ಬಳಿಯಲ್ಲಿದ್ದ ಕದಂಬ ವೃಕ್ಷದಿಂದ ವಂಶಸ್ಥರಿಗೆ ಕದಂಬರೆಂದು ಹೆಸರು ಬಂದಿತೆಂದೂ ಅದು ಹೇಳುತ್ತದೆ. ಮಯೂರ ವರ್ಮನ ಕಾಲದವರಲ್ಲಿ ಬ್ರಾಹ್ಮಣರು ದಕ್ಷಿಣ ಭಾರತದಲ್ಲಿ ಇರಲಿಲ್ಲವೆನ್ನುವ ಮಾತನ್ನೂ ಅದು ಸುಳ್ಳಾಗಿಸುತ್ತದೆ. ಏಕೆಂದರೆ ಮಯೂರನೇ ಬ್ರಾಹ್ಮಣ ಎರಡನೇದಾಗಿ ಮಯೂರವರ್ಮನ ಮೊಮ್ಮಗನಾದ ಭಗೀರಥ ಮಗನನ್ನು ರಘುವಿನ ಸಹೋದರನ್ನೂ ಆದ ಕಾಕುಸ್ಥವರ್ಮನ ಕಾಲದಲ್ಲಿ ಕದಂಬವಂಶ ಮುಟ್ಟಿದ್ದ ಉಚ್ಛ್ರಾಯ ಸ್ಥಿತಿಯನ್ನು ಅದು ನಿರೂಪಿಸುತ್ತದೆ. ಗುಪ್ತರೇ ಮೊದಲಾದ ಅಖಿಲ ಭಾರತ ವ್ಯಾಪ್ತಿಯ ಅರಸರೊಂದಿಗೆ ವೈವಾಹಿಕ ಸಂಬಂಧವನ್ನು ಕದಂಬರು ಹೊಂದಿದ್ದುದನ್ನು ಆ ಶಾಸನ ಹೇಳಿದೆ. ಇದೂ ಕೂಡ ಮಹತ್ವದ ವಿಷಯ ಎನ್ನುವುದರಲ್ಲಿ ಸಂಶಯವಿಲ್ಲ. ಇಮ್ಮಡಿ ಪುಲಿಕೇಶಿಯ ಐಹೊಳೆ ಶಾಸನಗಳು ಎರಡು ದೃಷ್ಟಿಯಿಂದ ಪ್ರಮುಖವಾಗಿದೆ. ಅದು ಇಮ್ಮಡಿಯ ಪುಲಿಕೇಶಿಯ ದಿಗ್ವಿಜಯಗಳನ್ನು ವಿವರವಾಗಿ ಚಿತ್ರಿಸಿರುವುದಲ್ಲದೆ ಉತ್ತರಾಪದೇಶ್ವರನಾದ ಕನೂಜನ ಚಕ್ರವರ್ತಿ ಹರ್ಷನನ್ನು ಸೋಲಿಸಿ ಹಿಮ್ಮೆಟಿಸಿದುದನ್ನು ಹೇಳುತ್ತದೆ. ಕನ್ನಡಿಗರಿಗೆ ಹೆಮ್ಮೆಯನ್ನುಂಟು ಮಾಡುವ ಸಂಗತಿಯಿಂದ ಕ್ರಿ.ಶ.೬೩೦ರ ಸುಮಾರಿಗೆ ಈ ಘಟನೆ ನಡೆದಿರಬೇಕು. ಆ ಕಾಲದಲ್ಲಿ ಕರ್ನಾಟಕಕ್ಕೆ ಬಂದಿದ್ದ ಹೂಯನ್‌ತ್ಸಾಂಗನ ಬರವಣಿಗೆಯಲ್ಲೂ ಈ ವಿಷಯವಿದೆ. ಈ ಶಾಸನವನ್ನು ಬರೆದ ಕವಿಯ ಹೆಸರು ರವಿಕೀರ್ತಿ ಅವನು ತನ್ನನ್ನು ಭಾರವಿ ಕಾಳಿದಾಸರ ಸಮನಾದ

ಕೀರ್ತಿಯನ್ನುಳ್ಳವನು ಎಂದು ಹೇಳಿಕೊಂಡಿದ್ದಾನೆ. ಭಾರವಿ ಕಾಳಿದಾಸರ ಕಾಲ ಅನಿಶ್ಚಯದಿಂದ ಕೂಡಿದೆ. ಅವರ ಕಾಲ ನಿರ್ಣಯದಲ್ಲಿ ಇದು ಕೆಳಗಿನ ಮಿತಿಯನ್ನು ಹೇಳುವುದರಲ್ಲಿ ನೆರವಾಗುತ್ತದೆ. ಇದು ಕೂಡ ಪ್ರಮುಖವಾದ ವಿಷಯವೆನ್ನುವುದರಲ್ಲಿ ಭಿನ್ನಾಬಿಪ್ರಾಯವಿಲ್ಲ. ಹೀಗೆ ಶಾಸನಗಳ ಐತಿಹಾಸಿಕ ಮಹತ್ವವನ್ನು ನಿರೂಪಿಸುವ ಸಂಗತಿಗಳನ್ನೂ ಇನ್ನೂ ಹೇಳುತ್ತಾ ಹೋಗಬಹುದಾದರೂ ಆತಕೂರಿನ ಶಾಸನದ ಪ್ರಸ್ತಾಪ ಮಾಡಿ ನಿಲ್ಲಿಸಬಹುದೆಂದು ಕಾಣುತ್ತದೆ. ರಾಷ್ಟ್ರಕೂಟರ ಮೂರನೇ ಕೃಷ್ಣನು ಚೋಳರ ರಾಜಾದಿತ್ಯವನ್ನು ಕೊಂದನೆಂದು ಆತಕೂರು ಶಾಸನ ಸಿಗುವವರೆಗೂ ಸಾಮಾನ್ಯವಾದ ನಂಬುಗೆಯಾಗಿತ್ತು. ಆತಕೂರು ಶಾಸನ ಸಿಕ್ಕಿದ ಮೇಲೆ ರಾಜಾದಿತ್ಯನನ್ನು ಕೊಂದವನ್ನು ಕೃಷ್ಣನಲ್ಲನೆಂದು ಅವನ ಭಾವನಂಟನಾದ ಗಂಗರ ಇಮ್ಮಡಿ ಬೂತುಗನೆಂದೂ ಸ್ಪಷ್ಟವಾಗಿ ತಿಳಿದು ಬರುತ್ತದೆ. ಭೂತುಗನು ರಾಜಾದಿತ್ಯನ ಕುಳಿತಿದ್ದ ಆನೆಯ ಅಂಬಾರಿಗೇ ಬಂದು **'ಬಿಸುಗೆಯೆ ಕಳನಾಗಿರಲು'** ಎಂದರೆ ಅಂಬಾರಿಯೇ ಯುದ್ಧ ಭೂಮಿಯಾಗಲು ಸುರಗಿ (ಕತ್ತಿ)ಯಿಂದ ಇರಿದು ಕೊಂದುದನ್ನು ಆ ಶಾಸನ ಹೇಳುತ್ತದೆ. ಬ್ರಿಟಿಷ್ ಮ್ಯೂಸಿಯಮ್ಮಿನಲ್ಲಿರುವ ಚೋಳರ ಶಾಸನಹೊಂದು ಈ ವಿಷಯವನ್ನು ಹೇಳುತ್ತಾ ಸೂರ್ಯವಂಶದ ರಾಜಾದಿತ್ಯನು ವೀರಾವೇಷದಿಂದ ಹೋರಾಡಿ ಶತ್ರುಸೈನ್ಯವನ್ನು ದಿಕ್ಕಾಪಾಲಾಗಿ ಓಡಿ ಸ್ವರ್ಗಸ್ಥನಾದನು ಎಂದು ಹೇಳುತ್ತದೆ. ಇದ್ದರಿಂದ ಆತಕೂರು ಶಾಸನದ ಐತಿಹಾಸಿಕ ಪ್ರಾಮುಖ್ಯತೆಯನ್ನು ಕಂಡು ಕೊಳ್ಳಬಹುದು.[೭]

ಶಾಸನಗಳ ಅಧ್ಯಯನದ ಇತಿಹಾಸವನ್ನು ಹೀಗೆ ಸಂಗ್ರಹಿಸಬಹುದು. ೧೮ನೇಯ ಶತಮಾನದ ತನಕ ಇವುಗಳ ಅಧ್ಯಯನವು ಆರಂಭವಾಗುವುದಿರಲಿ, ಇವುಗಳ ಮಹತ್ವವನ್ನು ಯಾರೂ ಗುರುತಿಸಿದ್ದಿಲ್ಲ. ಈ ಶತಮಾನದ ಅಂತ್ಯದಲ್ಲಿ ಶ್ರೀರಂಗಪಟ್ಟಣದ ಪತನವಾಗಿ ಅಂಗ್ಲರ ಪ್ರಭುತ್ವವು ಆರಂಭವಾದ ಬಳಿಕ, ಎಂದರೆ ಸಂ.೧೭೯೯–೧೮೦೦ರಲ್ಲಿ ಆಂಗ್ಲ ಅಧಿಕಾರ ಮೆಕೆಂಜಿಯು ಮೊದಲು ಅವುಗಳ ಬೆಲೆಯನ್ನರಿತು ಅವುಗಳಲ್ಲಿ ಆಸಕ್ತಿಯನ್ನು ತಾಳಿ ಸಂಗ್ರಹಿಸಿದನು. ಕವೆಲ್ಲಿ ವೆಂಕಟ ಬೋರೈಯ ಎಂಬ ದೇಶಿಯನು ಶಾಸನಗಳನ್ನು ಓದುವ ಪ್ರಯತ್ನವನ್ನು ಮಾಡಿದನು ತಕ್ಕಮಟ್ಟಿಗೆ ಓದಿದನು. ೧೮೩೬–೩೮ರಲ್ಲಿ ಲಾಸೆನ್ ಮತ್ತು ಪ್ರಿನ್ಸೆಪ್ ಎನ್ನುವವರು ಬ್ರಾಹ್ಮಿ ಲಿಪಿಯನ್ನು ಓದಿದರು. ಅಷ್ಟು ಹೊತ್ತಿಗಾಗಲೇ ವಥೆನ್ ಮುಂತಾದವರು ಕರ್ನಾಟಕದ ಶಾಸನಗಳನ್ನು ಓದಲು ಪ್ರಯತ್ನಸಿದ್ದರು. ಇದರಲ್ಲಿ ಪ್ರಾರಂಭದ ಅತ್ಯಂತ ಪ್ರಮುಖನಾದವನು ಹೆಜ್ಜೆ ವಾಲ್ವರ್ ಇಲಿಯಟ್ಟನದು ಬ್ರಾಹ್ಮೀಲಿಪಿಯನ್ನು ಸರಿಯಾಗಿ ಓದಿದುದು ಕರ್ನಾಟಕದ ಶಾಸನಗಳನ್ನು ಓದುವ ಕಾರ್ಯವನ್ನು ತ್ವರಿತಗೊಳಿಸಿತು. ಇದರಲ್ಲಿ ಪ್ರಾರಂಭದ ಅತ್ಯಂತ ಪ್ರಮುಖ ಹೆಜ್ಜೆ ವಾಲ್ಟರ್ ಇಲಿಯಟ್ಟನದು. ಶಾಸನಗಳನ್ನು ಓದುವ ಕಾರ್ಯವು

ಪರಿಪೂರ್ಣತೆಯನ್ನು ಮುಟ್ಟಿದುದು ಫ್ಲೀಟ್ ಮತ್ತು ರೈಸ್ ಅವರಲ್ಲಿ ಸು ೧೮೬೮-೭೦ ರ ಹೊತ್ತಿಗೆ ಶಾಸನಾಧ್ಯಯನವು ಒಂದು ನಿರ್ದಿಷ್ಟತೆಯನ್ನು ಪಡೆಯಿತು. ಕರ್ನಾಟಕದ ದೇಶಿಯ ವಿದ್ವಾಂಸರ ಸಹಾಯ ಏನಿದ್ದರೂ ಭಾಷೆಯ ವಿಷಯದಲ್ಲಿ ಲಿಪಿಯನ್ನು ಓದುವುದರಲ್ಲಿ ಪಾಶ್ಚಾತ್ಯ ವಿದ್ವಾಂಸರ ಪ್ರಯತ್ನವೇ.

ನಮ್ಮ ದೇಶದ ಪ್ರಾಚೀನ ಇತಿಹಾಸವನ್ನು ಬರೆಯತೊಡಗಿದ್ದಾಗ, ಯಾವುದನ್ನು ಆಧರಿಸಿ ಅಂತಹ ಇತಿಹಾಸವನ್ನು ರಚಿಸಬೇಕು ಎಂಬ ಪ್ರಶ್ನೆ ನಮ್ಮನ್ನು ಕಾಡುತ್ತದೆ. ಇತಿಹಾಸ ಎಂದರೆ ಹಿಂದೆ ಹೀಗೆ ನಡೆದಿತ್ತು–ಇತಿ–ಹ ಅಸ–ಎಂದು ಅರ್ಥ. ಮಾನವ ಪ್ರಪಂಚದಲ್ಲಿ ನಡೆದುಹೋದ ಘಟನೆಗಳ ನಿರೂಪಣೆಯ ಇತಿಹಾಸ ಭಾರತೀಯರಿಗೆ ಇತಿಹಾಸದ ಜ್ಞಾನ ಇರಲಿಲ್ಲ. ಎನ್ನುವದು ಒಂದು ಅಪಾದನೆ. ಗ್ರೀಸ್ ದೇಶದಲ್ಲಿ ಅರಂಭದಿಂದಲೂ ಅಲ್ಲಿನ ಇತಿಹಾಸಕಾರರು ತಮ್ಮ ದೇಶದ ಅಗುಹೋಗುಗಳನ್ನು ಗುರುತಿಸಿದ್ದಾರೆ. ಹೇರೊಡೋಟಸ್, ಥೊಸಿಡೈಡಸ್ ಮುಂತಾದವರು ತಮ್ಮ ಕಾಲದಲ್ಲಿ ಅಥವಾ ಸ್ವಲ್ಪ ಹಿಂದೆ ನೆಡೆದ ಘಟನೆಗಳನ್ನು ತಮ್ಮ ಬರಹಗಳಲ್ಲಿ ಮೆಲುಕು ಹಾಕಿದ್ದಾರೆ. ಅವುಗಳನ್ನು ವಿಶ್ಲೇಷಿಸುವ ಪ್ರಯತ್ನಗಳನ್ನೂ ಮಾಡಿದ್ದಾರೆ. ತಮ್ಮದೇ ಅತಿ ಪ್ರಬಲವಾದ ರಾಜ್ಯ ತಮ್ಮ ಸಂಸ್ಕೃತಿಯೇ ಪಿಶಿಷ್ಟವಾದ ಸಂಸ್ಕೃತಿ ಎಂದು ಭಾವಿಸಿದ್ದ ಅವರು ಪರ್ಷಿಯನ್ನರೊಡನೆ ಕಾದುಸೋತಾಗ, ಅದಕ್ಕೆ ಕಾರಣಗಳೇನು ಎಂಬುದನ್ನು ಪರಿಶೀಲಿಸಲು ವಿದ್ಯುಕ್ತರಾಗಿ ಇತಿಹಾಸವನ್ನು ರಚಿಸಿದರು. ಅವು ಇಂದಿಗೂ ನಮಗೆ ಅನನ್ಯಕೃತಿಗಳಾಗಿ ಲಭಿಸಿವೆ. ಆದರೆ ಇಂತಹ ಕಾಣಬಹುದಾದಂತಹ ಇತಿಹಾಸ ಗ್ರಂಥಗಳು ನಮ್ಮಲ್ಲಿ ಹಿಂದೆ ಇರಲಿಲ್ಲ.

ಹಾಗೆಂದಾಕ್ಷಣ ನಮ್ಮ ಪ್ರಾಚೀನರಲ್ಲಿ ಇತಿಹಾಸ ಪ್ರಜ್ಞೆ ಇರಲಿಲ್ಲ. ಎಂದು ಹೇಳುವುದು ತಪ್ಪಾಗುತ್ತದೆ. ಪ್ರಾಚೀನ ವೈದಿಕ ಸಾಹಿತ್ಯದಲ್ಲಿ ದೇವ, ಧರ್ಮ. ನೀತಿ, ತತ್ವಭೋದೆ. ಇಂತಹವುಗಳಿಗೆ ವಿಶೇಷವಾದ ಗಮನವನ್ನು ನೀಡಲಾಗಿತ್ತು. ಸಮಕಾಲಿನ ಸಾಮಾಜಿಕ, ರಾಜಕೀಯ ಘಟನೆಗಳು ಸಾಹಿತ್ಯದಲ್ಲಿ ಅಲ್ಲಲ್ಲಿ ನಿರೂಪಿಸಲ್ಪಟ್ಟಿದ್ದರೂ ಅವು ನೇರವಾಗಿ ಅಂತಹ ಪ್ರಸ್ತಾಪನೆಗಳನ್ನು ಮಾಡದಿರುವುದರಿಂದ ಅವುಗಳನ್ನು ಖಚಿತವಾದ ಇತಿಹಾಸಕ್ಕೆ ಸಂಬಂಧಿಸಿದ ಬರಹಗಳೆಂದು ಹೇಳಲಾಗುವುದಿಲ್ಲ. ಇತಿಹಾಸ ಎಂಬ ಪದ ವೇದಕಾಲಗಳಲ್ಲಿಯೇ ಬಳಸಲಾದ ಪದ ಇದು ಪುರಾಣದಲ್ಲಿ ಅದಕ್ಕಿಂತ ಭಿನ್ನವಾದ ರಚನೆ ಎಂಬುದನ್ನು ಅವರು ಅರಿತಿದ್ದರು. ವೇದದಲ್ಲಿ ಹತ್ತು ರಾಜರ ಕಾಳಗದ ಪ್ರಸ್ತಾಪ ಇದೆ. ರಾಜರ ರಾಜವಂಶಗಳ ಪ್ರಶಸ್ತಿಗಳನ್ನು ಆ ಸಾಹಿತ್ಯದಲ್ಲಿ ಅಲ್ಲಲ್ಲಿ ಕಾಣಬಹುದು. ಪುರಾಣಗಳಲ್ಲಿ ಇವು ಇನ್ನೂ ಹೆಚ್ಚಾಗಿ ಲಭಿಸುತ್ತದೆ. ನಮ್ಮಲ್ಲಿ ಲಭ್ಯವಿರುವ ಸಾವಿರಾರು ಶಾಸನಗಳಲ್ಲಿ ಘಟನೆಗಳ ನಿರೂಪಣೆಗಳಿವೆ, ಕಾಲ ನಿದರ್ಶನಗಳು ಇವೆ. ನಮ್ಮಲ್ಲಿ ಇತಿಹಾಸ ಪ್ರಜ್ಞೆ ಇಲ್ಲದಿದ್ದಲ್ಲಿ ಈ ವಿಧದ ಶಾಸನಗಳು ಇರುತ್ತಿರಲಿಲ್ಲ.

ಭಾರತದಲ್ಲಿ ಕ್ರಿ.ಶ ೧ನೇ ಶತಮಾನದಲ್ಲಿ ಪರ್ಯಟನೆ ಮಾಡಿದಾಗ ಅಲ್ಬೆರೂನಿ ಘಜ್ನಿ ಮಹಮ್ಮದನ ಸಮಕಾಲಿನ ಅಬುರಿಹಾನ್ ಎಂಬ, ಅಲ್ಬೆರೂನಿ ಎಂದು ಪ್ರಸಿದ್ಧನಾದ, ವಿದ್ವಾಂಸನು ನಮ್ಮ ದೇಶದ ಸಂಸ್ಕೃತಿ ನಾಗರೀಕತೆಗಳನ್ನು ಕಂಡುಕೊಳ್ಳತೊಡಗಿದ. ಸಂಸ್ಕೃತ ಭಾಷೆಯನ್ನು ಕಲಿತ ಪರದೇಶದ ವಿದ್ವಾಂಸರು ಈ ದೇಶದ ಬಗೆಗೆ ಬರೆದಿಟ್ಟು ಹೋದ ಗ್ರಂಥಗಳಲ್ಲಿ ಗಾತ್ರದಲ್ಲೂ, ಮೌಲ್ಯದಲ್ಲೂ ಹಿರಿದಾದದು ಅಲ್ಬೆರೂನಿಯ ಗ್ರಂಥ ಆದರೆ ವಿಶೇಷವಾಗಿ ಭಾರತೀಯ ಸಾಹಿತ್ಯವನ್ನು ಆಧಾರವಾಗಿಟ್ಟುಕೊಂಡು ಬರೆದುದು ರಾಜಕೀಯ ಘಟನೆಗಳ ಪ್ರಸ್ತಾಪವಿಲ್ಲ. ಈ ದೃಷ್ಟಿಯಲ್ಲಿಯೇ ಆತ ಭಾರತೀಯರಿಗೆ ಇತಿಹಾಸ ಪ್ರಜ್ಞೆ ಇಲ್ಲ ಎಂದುದು ರಾಜಕೀಯ ಇತಿಹಾಸವನ್ನು ಅರಿಯಲು ಅಂತಹ ಯಾವುದೇ ಗ್ರಂಥ ಆತನಿಗೆ ದೊರೆಯಲಿಲ್ಲ. ಕಾಲಾನುಪೂರ್ವಿಯ ನಿರೂಪಣೆಯಲ್ಲಿ ಅಲಕ್ಷ್ಯ ತೋರಿಸುವ ಹಿಂದೂಗಳು ವಿಷಯಕ್ಕಾಗಿ ಒತ್ತಾಯ ಪಡಿಸಿದಾಗ ಕತೆಗಳನ್ನು ಕಟ್ಟುತ್ತಾರೆ. ಎಂದಿದ್ದಾನೆ.[೮]

ಭಾರತೀಯರು ಇತಿಹಾಸ ಗ್ರಂಥ ರಚನೆಯಲ್ಲಿ ಹೆಚ್ಚಿನ ಆಸಕ್ತಿಯನ್ನು ತೋರಿಸಲಿಲ್ಲ. ಈ ವಿಶ್ವದಲ್ಲಿ ನೆಡೆಯುವ ಯಾವ ಘಟನೆಯು ಶಾಶ್ವತವಲ್ಲ, ಕ್ಷಣಿಕವಾದುದು ಎಂಬ ಅವರ ಮನೋಭಾವ ಈ ನ್ಯೂನತೆಗೆ ಕಾರಣವಿದ್ದಂತೆ ತೋರುತ್ತದೆ. ಆದರೂ ನಂತರದ ಶತಮಾನಗಳಲ್ಲಿ ಒಂದೆರಡು ಇತಿಹಾಸ ಗ್ರಂಥಗಳು ರಚಿತವಾಗಿವೆ. ಕಾಶ್ಮೀರದ ಇತಿಹಾಸಕ್ಕೆ ಸಂಬಂಧಿಸಿದಂತೆ ಕಲ್ಹಣನ 'ರಾಜತರಂಗಿಣಿ' ಇಂತಹ ಒಂದು ಗ್ರಂಥ ಕರ್ನಾಟಕಕ್ಕೇ ಸಂಬಂಧಿಸಿದಂತೆ ೧೧ನೇಯ ಶತಮಾನದಲ್ಲಿ ರಚಿತವಾದ ಬಿಲ್ಹಣನ 'ವಿಕ್ರಮಾಂಕದೇವ ಚರಿತ್ರೆ' ಎಂಬ ಕೃತಿ ಒಂದು ಇತಿಹಾಸ ಗ್ರಂಥ ಇದನ್ನು ಆಧರಿಸಿ ಕಲ್ಯಾಣದ ಚಾಲುಕ್ಯ ಮನೆತನದ ಮುಮ್ಮಡಿ ಸೋಮೇಶ್ವರ 'ವಿಕ್ರಮಾಂಕಾಭ್ಯುದಯ' ವನ್ನು ರಚಿಸಿದ ಇದಕ್ಕೂ ಮೊದಲೇ ಕರ್ನಾಟಕದ ಆದಿಕವಿ ಎನ್ನಿಸಿದ ಪಂಪನು **'ವಿಕ್ರಮಾರ್ಜುನವಿಜಯ'** ವೆಂಬ ಹೆಸರಿನ **'ಪಂಪಭಾರತ'** ವೆಂದೇ ಖ್ಯಾತಿ ಹೊಂದಿದ ಕೃತಿಯಲ್ಲಿ ತನ್ನ ಆಶ್ರಯದಾತನಾದ ಆಂಧ್ರಪ್ರದೇಶದ ವೇಮುಲವಾಡದಲ್ಲಿ ಆಳಿದ ಚಾಳುಕ್ಯ ವಂಶದ ಇಮ್ಮಡಿ ಅರಿಕೇಸರಿಯ ಸಾಧನೆಗಳನ್ನು ವರ್ಣಿಸಿದ್ದಾನೆ. ಈತನನ್ನು ಆಕೃತಿಯ ಕಥಾನಾಯಕನಾದ ಅರ್ಜುನನೊಡನೆ ಹೋಲಿಸಿ ಪ್ರಾಸಂಗಿಕವಾಗಿ ಅರಿಕೇಸರಿಯ ಸಾಧನೆಗಳನ್ನು ನಿರೂಪಿಸಿದ್ದಾನೆ. ಇದು ಕ್ರಿ.ಶ.೯೪೧ರಲ್ಲಿ ಕ್ರಿ.ಶ. ೯೭೮ರಲ್ಲಿ ಗಂಗರ ದೊರೆ ಇಮ್ಮಡಿ ಮಾರಸಿಂಹನ ಮಂತ್ರಿಯಾದ ಚಾವುಂಡರಾಯನ 'ಚಾವುಂಡರಾಯಪುರಾಣ' ವೆಂಬ ಗ್ರಂಥದಲ್ಲಿ ಮಾರಸಿಂಹನು ಆತನ ಸ್ವಾಮಿಯಾದ ರಾಷ್ಟ್ರಕೂಟ ಮನೆತನದ ಯುವರಾಜ ಇಂದ್ರನನ್ನು ಅಧಿಕಾರಕ್ಕೆ ತರಲು ಮಾಡಿದ ಪ್ರಯತ್ನಗಳ ಉಲ್ಲೇಖಗಳಿವೆ. ಕವಿ ರನ್ನನ 'ಗದಾಯುದ್ಧ' ವೆಂಬ ಚಂಪೂಕಾವ್ಯ (ಕ್ರಿ.ಶ.೧೦೦೫ ನಂತರದ್ದು) ಕಲ್ಯಾಣಿ ಚಾಲುಕ್ಯ ಅರಸುಮನೆತನದ ಇಮ್ಮಡಿ ತೈಲಪ ಹಾಗೂ ಆತನ ಮಗ

ಇರಿವಬೆಡಂಗ ಸತ್ಯಾಶ್ರಯನ ಸಾಧನೆಗಳನ್ನು ಚಿತ್ರಿಸಿದ ರಾಜಾದಿತ್ಯನ 'ವ್ಯವಹಾರಗಣಿತ' (೧೨ನೇಯ ಶತಮಾನ) ದಲ್ಲಿ ಯಾದವರ ಐದನೆಯ ಭಿಲ್ಲಮೆ ಹಾಗೂ ಹೊಯ್ಸಳ ಇಮ್ಮಡಿ ಬಲ್ಲಾಳರ ನಡುವೆ ಸೊರಮಾರಿನಲ್ಲಿ ನೆಡೆದ ಭೀಕರ ಕಾಳಗಕ್ಕೆ ಸಂಬಂಧಿಸಿದ ವಿವರಗಳು ಅಂಕಿ ಅಂಶಗಳೊಡನೆ ಲಭಿಸಿವೆ. ನಂಜುಂಡಕವಿಯ ಕುಮಾರ ರಾಮನ ಕಥೆ (ಕ್ರಿ.ಶ.ಸುಮಾರು ೧೫೨೫) ೧೪ನೇ ಶತಮಾನದ ತುಂಗಭದ್ರಾ ನದಿಯ ಪ್ರದೇಶಕ್ಕೆ ಸೇರಿದ ಕುಮ್ಮಟದಲ್ಲಿ ಕಂಪಿಲರಾಯ ಹಾಗೂ ಆತನ ಮಗ ಕುಮಾರ ರಾಮರು ದೆಹಲಿಯ ಸುಲ್ತಾನರ ವಿರುದ್ಧ ಹೂಡಿದ ಹೋರಾಟಗಳ ವಿವರಗಳನ್ನೊಳಗೊಂಡ ಕೃತಿ. ಇವುಗಳನ್ನು ಸಂಪೂರ್ಣವಾಗಿ ಚಾರಿತ್ರಿಕ ಕೃತಿಗಳೆನ್ನಲಾಗದಿದ್ದರೂ ಚಾರಿತ್ರಿಕ ವಿವರಗಳನ್ನು ನಿರೂಪಿಸುವ ಅರೆ ಚಾರಿತ್ರಿಕ ಕೃತಿಗಳೆಂದು ಪರಿಗಣಿಸಿಬಹುದು. ಇವುಗಳಲ್ಲಿ ಕಂಡುಬರುವ ವಿವರಗಳೆಲ್ಲವನ್ನೂ ನೈಜವಾದವುಗಳೆಂದು ಪರಿಗಣಿಸಬಹುದು. ಅನ್ಯ ಆಧಾರಗಳ ಮೂಲಕ ಆ ವಿವರಗಳ ಸತ್ಯಾಸತ್ಯತೆಯನ್ನು ಓರೆಗಲ್ಲಿಗೆ ಹಚ್ಚಿ ನೋಡಬೇಕಾಗುತ್ತದೆ.

ಚಾಲುಕ್ಯ ಆರನೆಯ ವಿಕ್ರಮಾಧಿತ್ಯನ ಆಸ್ಥಾನ ಕವಿಯಾದ ವಿಜ್ಞಾನೇಶ್ವರನು **"ಮಿತಾಕ್ಷರ"** ಎಂಬ ಧರ್ಮಶಾಸ್ತ್ರದ ಕರ್ತೃ ಇದರಲ್ಲಿ ಸಮಕಾಲೀನ ಸಾಮಾಜಿಕ ಪರಿಸ್ಥಿತಿಗಳ ಒಂದು ವಿಹಂಗಮ ನೋಟವನ್ನು ಕಾಣಬಹುದು. ಮುಮ್ಮಡಿಸೋಮೇಶ್ವರನ 'ಅಭಿಲಷಿತಾರ್ಥ' **"ಚಿಂತಾಮಣಿ"** (ಅಥವಾ **"ಮಾನಸೋಲ್ಲಾಸ"**) ಒಂದು ವಿಶ್ವಕೋಶ ಅಂದಿನ ಸಾಮಾಜಿಕ, ಆರ್ಥಿಕ, ಪರಿಸ್ಥಿತಿಗಳ ಪರಿಚಯ ನಮಗೆ ಅದರಲ್ಲಿ ಉಂಟಾಗುತ್ತದೆ. ಹೇಮಾದ್ರಿಯ **'ಚಾತುರ್ವರ್ಗ'** ಚಿಂತಾಮಣಿಯ ರಾಜ ಪ್ರಶಸ್ತಿಯ ಭಾಗದಲ್ಲಿ ಸೇವುಣರ ವಂಶಾವಳಿ ಹಾಗೂ ಇತರ ಕೆಲವು ಅನ್ಯತ ತಿಳಿಯಬಾರದ ವಿವರಗಳಿವೆ. ಗುಜರಾತಿನ ಸಂಸ್ಕೃತ ಕೃತಿಗಳಾದ ಸೋಮೇಶ್ವರನ 'ಕೀರ್ತಿಕೌಮಾದಿ' ಬಾಲಚಂದ್ರ ಸೂರಿಯ **'ವಸಂತವಿಲಾಷ್ಮ'** ಜಯಸಿಂಹನ ಹಮ್ಮೀರ ಮದಮರ್ದನ ಮುಂತಾದವುಗಳಲ್ಲಿ ಕರ್ನಾಟಕದ ೧೧-೧೨ನೇಯ ಶತಮಾನಗಳಿಗೆ ಸಂಬಂದಿಸಿದ ಅನೇಕ ಅಂಶಗಳು ಲಭಿಸುತ್ತವೆ. ಅದರೂ ಇಲ್ಲಿ ನಮಗೆ ತಿಳಿದು ಬರುವ ವಿಷಯಗಳು ಕೇವಲ ತುಣುಕುಗಳು ನಮ್ಮ ಪ್ರಾಚೀನ ಇತಿಹಾಸವನ್ನು ಸಮಗ್ರವಾಗಿ ಅರಿಯಲು ಇವು ನೆರವಾಗುವುದಿಲ್ಲ.

ಎಂತಲೇ ನಾವು ಇತರ ಆಧಾರಗಳನ್ನು ಪರಿಶೀಲಿಸಿ ಇತಿಹಾಸವನ್ನು ಪುನಾರಚಿಸಬೇಕಾಗಿದೆ. ಈ ಆಧಾರ ಸಾಮಾಗ್ರಿಗಳು ಪುರಾತತ್ವಾನ್ವೇಷಣೆಯಿಂದ ಲಭಿಸುವುದು. ಅಲ್ಲದೆ ಇತರ ಸಾಹಿತ್ಯ ಕೃತಿಗಳಿಂದಲೂ ವಿವರಗಳನ್ನು ಸ್ಥೂಲವಾಗಿ ತಿಳಿಯಬಹುದಾಗಿದೆ. ಪುರಾತತ್ವ ಶಾಸ್ತ್ರವು ವಿಶೇಷವಾಗಿ ಇತಿಹಾಸ ಪೂರ್ವಕಾಲಕ್ಕೆ ಸಂಬಂದಿಸಿದುದು ಆ ಕಾಲದ

ಉಪಕರಣಗಳು, ಅಯುಧಗಳು, ಮಡಕೆ ಚೂರುಗಳು, ಅವರು ವಾಸಿಸುತ್ತಿದ್ದ ಗೃಹಗಳ ಅವಶೇಷಗಳು ಇತ್ಯಾದಿಗಳ ಪರಿಶೀಲನೆಯಿಂದ ಅಂದಿನ ಜನಜೀವನದ ಸಾಮಾನ್ಯ ಸ್ಥಿತಿಗತಿಗಳನ್ನು ಅರಿಯಬಹುದಾಗಿದೆ. ಕರ್ನಾಟಕದಲ್ಲಿ ಕೆಲವಡೆ (ಉದಾ:– ಮಲಪ್ರಭಾ ನದೀ ತೀರದ ಹಲವು ಗ್ರಾಮಗಳು ಮತ್ತು ಮೈಸೂರು ಜಿಲ್ಲೆಯ ಕಿಬ್ಬನಹಳ್ಳಿ) ಪುರಾತನ ಶಿಲಾಯುಗದ ಪಳೆಯುಳಿಕೆಗಳು ದೊರೆತಿವೆ. ಈ ಪ್ರಾಚೀನ ಶಿಲಾಯುಗದ ಮಾನವನು ಮೂಲತಃ ಆಫ್ರಿಕಾ ಖಂಡದವನಾಗಿದ್ದು, ಹಿಂದೊಮ್ಮೆ ದಕ್ಷಿಣಭಾರತ, ಆಫ್ರಿಕಾ ಮತ್ತು ಆಸ್ಟ್ರೇಲಿಯಾ ದೇಶಗಳು ಕೂಡಿಕೊಂಡು ಒಂದೇ ಭೂಭಾಗವಾಗಿದ್ದ ಸಮಯದಲ್ಲಿ ಅವರು ಭಾರತಕ್ಕೆ ವಲಸೆ ಬಂದಿರಬಹುದೆಂದೂ ಊಹಿಸಲಾಗಿದೆ. ಬಳ್ಳಾರಿ, ರಾಯಚೂರು, ಧಾರವಾಡ, ಕಾರವಾರ, ಮೈಸೂರು ಜಿಲ್ಲೆಗಳಲ್ಲಿ ಕೆಲವು ಸ್ಥಳಗಳಲ್ಲಿ ದೊರೆತ ವಿಶಿಷ್ಟ ರೀತಿಯಲ್ಲಿ ಕೊರೆದ ರೇಖಾ ಚಿತ್ರಗಳುಳ್ಳ (roulette) ಮಡಕೆಯ ಚೂರುಗಳು ರೋಮ್ ಸಾಮ್ರಾಜ್ಯದ ಅರಸರಾದ ಆಗಸ್ಟಸ್, ಪೈಬೀರಿಯಸ್ ಮುಂತಾದವರ ದಿನಾರಿ ಎಂಬ ನಾಣ್ಯಗಳು ಶಾತವಾಹನರ ಮಾಂಡಲಿಕರಾಗಿದ್ದ ಚುಟುಕುಲದ ಸಾಮಂತ ಪೊಟನ್ ನಾಣ್ಯಗಳು ನವಶಿಲಾಯುಗದ ಕುರುಹುಗಳು ಸಿಗುತ್ತವೆ.[೮]

ಆದರೆ ಇತಿಹಾಸ ಕಾಲಕ್ಕೆ ಸಂಬಂಧಿಸಿದಂತೆ ಕಟ್ಟಡದ ಅವಶೇಷಗಳು, ನಾಣ್ಯಗಳು, ವರ್ಣಚಿತ್ರಗಳು ಸಾಮಾಜಿಕ, ಆರ್ಥಿಕ ಕಲಾತ್ಮಕ ಜೀವನದ ಬಗೆಗೆ ಬೆಳಕು ಚೆಲ್ಲುತ್ತವೆಯಾದರೂ ಇವುಗಳ ನೆರವಿನಿಂದ ಖಚಿತವಾದ ಇತಿಹಾಸ ವಿಷಯಗಳನ್ನು ತಿಳಿಯಲಾಗದು. ಸಾಹಿತ್ಯ ಕೃತಿಗಳು ರಾಜರ ಕೃಪಾಪೋಷಿತರಾದ ಕವಿಗಳ ರಚನೆಗಳಾಗಿದ್ದು, ಅವುಗಳಲ್ಲಿ ಬಹಳಷ್ಟು ಉತ್ಪ್ರೇಕ್ಷಗಳನ್ನು ಕಾಣುತ್ತವೆ. ಅರಸರ ವಂಶಾವಳಿಯ ಬಗೆಗೆ ಕೆಲವು ವಿಷಯಗಳು ತಿಳಿದುಬರಬಹುದು. ಈ ದೃಷ್ಟಿಯಲ್ಲಿ ೧೪ನೇಯ ಶತಮಾನದಲ್ಲಿ ಗಂಗಾದೇವಿ ರಚಿಸಿದ 'ಮಧುರಾವಿಜಯಂ' ಅಥವಾ ವೀರಕಂಪರಾಯ ಚರಿತಮ್ ಹಾಗೂ ೧೮ನೇಯ ಶತಮಾನದಲ್ಲಿ ಲಿಂಗಣ್ಣ ಕವಿ ರಚಿಸಿದ **'ಕೆಳದಿನೃಪ ವಿಜಯ'** ಮೈಸೂರಿನ ಒಡೆಯರ ಕಾಲದ ತಿರುಮಲ ಕವಿಯ **'ಚಿಕ್ಕದೇವರಾಯ ವಂಶಾವಳಿ'** ಮತ್ತು ಗೋವಿಂದ ವೈದ್ಯನ 'ಕಂಠೀರವ ನರಸರಾಜ ವಿಜಯಗಳನ್ನು ಸ್ವಲ್ಪ ಮಟ್ಟಿಗೆ ಐತಿಹಾಸಿಕ ಕೃತಿಗಳೆಂದು ಪರಿಗಣಿಸಬಹುದಾಗಿದೆ.

ಈ ಸಂದರ್ಭದಲ್ಲಿ ಪರದೇಶಗಳಿಂದ ಯಾತ್ರಾರ್ಥಿಗಳಾಗಿ, ರಾಯಭಾರಿಗಳಾಗಿ, ದರೋಡೆಕಾರರಾಗಿ ಬಂದ ಅನ್ಯದೇಶದವರು ತಾವು ಇಲ್ಲಿ ಕಂಡು ಕೇಳಿದ ವಿಷಯಗಳನ್ನು ಸಾಹಿತ್ಯ ರೂಪದಲ್ಲಿ ಬಿಟ್ಟು ಹೋಗಿರುವುದನ್ನು ಪರಿಗಣಿಸಬಹುದು. ಇವುಗಳನ್ನು ಪ್ರವಾಸಿ ಸಾಹಿತ್ಯವೆಂಬ ಶೀರ್ಷಿಕೆಯಲ್ಲಿ ಸೇರಿಸಬೇಕು. ಕರ್ನಾಟಕದಲ್ಲಿ ಕ್ರಿ.ಶ. ಎರಡನೆಯ ಶತಮಾನದ ಮಧ್ಯೆದಲ್ಲಿ ಈಜಿಪ್ಟ್

[illegible]

[illegible]

[illegible]

ದೇಶದ ಅಲೆಕ್ಸಾಂಡ್ರಿಯಲ್ಲಿದ್ದ ಭೂಗೋಳಜ್ಞನಾದ ಟೋಲೆಮಿ (ಕ್ಲಾಡಿಯೆಸ್ ಟೋಲೆಮಿಯೊಸ್) ಯಿಂದ ಆರಂಭವಾಗಿ ೧೭-೧೮ನೇಯ ಶತಮಾನದವರೆಗಿನ ಹಲವಾರು ಪ್ರವಾಸಿಗಳು ಬರೆದಿಟ್ಟು ಹೋದ ಸಾಹಿತ್ಯ ಲಭ್ಯವಾಗಿದೆ. ಅದರೆ ನಮ್ಮ ಸಂಸ್ಕೃತಿ ಸಂಪ್ರದಾಯಗಳ ಪರಿಚಯವಿಲ್ಲದವರು ನಮ್ಮ ಇತಿಹಾಸವನ್ನು ಕಲುಷಿತ ದೃಷ್ಠಿಯಿಂದ ಅಪಾರ್ಥಮಾಡಿಕೊಂಡು ಬರೆದಿದ್ದಾರೆ. ತಿರಸ್ಕಾರ ಮನೋಭಾವವನ್ನೂ ಈ ಬರಹಗಳಲ್ಲಿ ಕಾಣಬಹುದು. ಈ ದೃಷ್ಠಿಯಿಂದ ಇಂತಹ ಸಾಹಿತ್ಯವನ್ನು ಬಳಸುವಾಗ ಬಹಳ ಎಚ್ಚರ ವಹಿಸಬೇಕಾಗುತ್ತದೆ.

ವರ್ಗೀಕರಣ ಮತ್ತು ವಿತರಣೆ

ಶಾಸನಗಳನ್ನು ಅಧ್ಯಯನದ ದೃಷ್ಟಿಯಿಂದ ವರ್ಗೀಕರಿಸುವುದು ಅಗತ್ಯ ವಿವಿಧ ರೀತಿಯ ಭಿನ್ನ ವಿಷಯಗಳು ಮತ್ತು ಬೇರೆ ಬೇರೆ ಕಾಲಗಳ ಶಾಸನಗಳು ದೊರೆಯುವುದರಿಂದ ಎಲ್ಲವನ್ನೂ ಒಟ್ಟಿಗೆ ಕ್ರೋಢೀಕರಿಸಿ ಅಭ್ಯಸಿಸಲು ಸಾಧ್ಯವಿಲ್ಲ ಅಲ್ಲದೆ ಶಾಸನ ಶಿಲ್ಪಗಳೂ ಹೆಚ್ಚಾಗಿ ದೊರೆಯುವುದರಿಂದ ಶಾಸನಗಳನ್ನು ಒಂದು ಕ್ರಮದಲ್ಲಿ ವಿಂಗಡಿಸಿ ಅಧ್ಯಯನ ನೆಡೆಸುವುದು ಅಗತ್ಯವಾಗಿದೆ. ಶಾಸನಗಳು ತಾಮ್ರಶಾಸನಗಳು, ಶಿಲಾಶಾಸನಗಳು, ಸ್ತಂಭಶಾಸನಗಳು, ಬಂಡೆಶಾಸಗಳಿರುತ್ತವೆ. ಅವುಗಳನ್ನು ಅಭ್ಯಾಸ ಮಾಡಿ ದತ್ತಿಶಾಸನಗಳು, ವೀರಗಲ್ಲುಗಳು, ಮಾಸ್ತಿಕಲ್ಲುಗಳು, ಕೆರೆಕಟ್ಟೆ, ದೇವಾಲಯ ನಿರ್ಮಾಣ ಇತ್ಯಾದಿ ವಿಷಯಗಳ ಅನುಸಾರ ಶಾಸನಗಳನ್ನು ವರ್ಗೀಕರಿಸಬಹುದು.

ಗಂಗರ ಆಳ್ವಿಕೆಗೆ ಸೇರಿದ ಮಂಡ್ಯ ತಾಲ್ಲೂಕಿನ ಹಳ್ಳಿಗೆರೆ ತಾಮ್ರಶಾಸನವೇ ಜಿಲ್ಲೆಯ ಪ್ರಾಚೀನ(ಮಂ.೩೫) ಬರಹವಾಗಿವೆ. ಒಂದನೆಯ ಶಿವಮಾರನ ಕಾಲಕ್ಕೆ ಸೇರಿದ ಈ ಶಾಸನವು ಸಂಸ್ಕೃತ ಭಾಷೆಯಲ್ಲಿದ್ದು, ಕ್ರಿ.ಶ.೭೧೩ರ ಕಾಲದ್ದಾಗಿದೆ. ಕೆರಗೋಡು, ಕೊಳುಗೂಳು, ಬೆಳ್ಕರೆ ಮತ್ತು ಇತರ ಕೆಲವು ಗ್ರಾಮಗಳನ್ನು ಕೆಲವರಿಗೆ ದಾನವಾಗಿ ಕೊಟ್ಟ ವಿಚಾರ ಇಲ್ಲಿ ನಿರೂಪಿತವಾಗಿದೆ.[೧೧]

ತಾಮ್ರಶಾಸಗಳು ತಮ್ಮ ಆಕಾರದಲ್ಲಿ ತಾಳೆಯೋಲೆ ಗ್ರಂಥದ ಓಲೆಗಳನ್ನು ಹೋಲುತ್ತವೆ. ತಾಳೆಯಗರಿಯಷ್ಟು ಉದ್ದ ಇರುವುದಿಲ್ಲ. ಸುಮಾರು ಹದಿನೈದು ಸೆಂಟಿಮೀಟರ್‌ನಿಂದ ಇಪ್ಪತ್ತು ಸೆಂಟಿಮೀಟರ್‌ನಷ್ಟು ಉದ್ದ ಇರುತ್ತವೆ. ಐದು ಅಥವಾ ಆರು ಸೆಂಟಿಮೀಟರ್ ಅಗಲವಿದ್ದು ಅರ್ಧ ಅಥವಾ ಕಾಲು ಸೆಂಟಿಮೀಟರ್ ದಪ್ಪ ಇರುತ್ತವೆ. ಈ ಫಲಕದ ಬಲಬದಿಗೆ ಒಂದು ರಂಧ್ರವನ್ನು ಮಾಡಿರುತ್ತಾರೆ. ಈ ರಂಧ್ರದ ಮೂಲಕ ಹಲವಾರು ತಾಮ್ರ ಫಲಕಗಳನ್ನು ಒಂದು ಉಂಗುರದಲ್ಲಿ ಸೇರಿಸಿ ಬೆಸುಗೆ ಹಾಕುತ್ತಿದ್ದರು.

ಬರಹವಿರುವ ತಾಮ್ರ ಫಲಕಗಳನ್ನು ಒಂದುಗೂಡಿಸುವ ಉಂಗುರವನ್ನು ಬೆಸುಗೆ ಹಾಕಿರುತ್ತಾರೆ. ಈ ಬೆಸುಗೆ ಹಾಕಿರುವ ಸ್ಥಳದಲ್ಲಿ ಸಾಮಾನ್ಯವಾಗಿ ರಾಜರ ಲಾಂಛನಗಳು ಇರುತ್ತವೆ. ಇವು ಆ ದಾಖಲೆ ಅಧಿಕೃತ ಎಂಬುದರ ಸಂಕೇತವಾಗಿ ಹಾಕಲ್ಪಟ್ಟಂಥವು. ಯಾವ ಅರಸು ಮನೆತನ ತಾಮ್ರಶಾಸನವನ್ನು ಕೊಟ್ಟಿರುತ್ತದೆಯೋ ಆ ಅರಸು ಮನೆತನದ ಲಾಂಛನವಾಗಿರುತ್ತದೆ. ಗಂಗರ ತಾಮ್ರ ಶಾಸನಗಳ ಮೇಲೆ ಆನೆಯ ಮುದ್ರೆಯನ್ನು ಗಮನಿಸಬಹುದು. ಚಾಲುಕ್ಯರು ಮತ್ತು ವಿಜಯನಗರದ ಅರಸರ ತಾಮ್ರ ಶಾಸನಗಳ ಉಂಗುರಗಳ ಮೇಲೆ ವರಾಹ ಮುದ್ರೆಯನ್ನು, ರಾಷ್ಟ್ರಕೂಟ ಮತ್ತು ಸೇವುಣರ ತಾಮ್ರ ಶಾಸನಗಳ ಮೇಲೆ ಗರುಡ ಮುದ್ರೆಯನ್ನು, ಕದಂಬರು ನೀಡಿರುವ ತಾಮ್ರ ಶಾಸನಗಳಲ್ಲಿ ಸಿಂಹದ ಮುದ್ರೆಯನ್ನು ನಾವು ಗಮನಿಸಬಹುದು. ಹೊಯ್ಸಳರ ತಾಮ್ರ ಶಾಸನಗಳ ಉಂಗುರದ ಮೇಲೆ ಶಾರ್ದೂಲ ಮುದ್ರೆಯಿರುತ್ತದೆ. ಈ ಮುದ್ರೆಯಗಳೊಂದಿಗೆ ಕೆಲವೊಮ್ಮೆ ಬರಹವಿರುವ ನಿದರ್ಶನಗಳು ಉಂಟು.[೧೨]

ವಿಜಯನಗರ, ಕೆಳದಿ, ಚಿತ್ರದುರ್ಗ ಮುಂತಾದ ಅರಸು ಮನೆತನದವರು ಹೊರಡಿಸಿರುವ ಕೆಲವು ತಾಮ್ರಶಾಸನಗಳು ಮೇಲೆ ವಿವರಿಸಿದ ತಾಮ್ರ ಶಾಸನಗಳ ಆಕಾರಕ್ಕಿಂತ ಭಿನ್ನವಾಗಿರುತ್ತವೆ. ಅವುಗಳು ಗಾತ್ರದಿಂದ ದೊಡ್ಡದಾಗಿರುತ್ತವೆ. ಸುಮಾರು ಇಪ್ಪತ್ತೈದರಿಂದ ಐವತ್ತು ಸೆಂಟೀ ಮೀಟರ್ ಉದ್ದವೂ, ಹದಿನೈದರಿಂದ ಮೂವತ್ತು ಸೆಂಟಿಮೀಟರ್ ಅಗಲವೂ ಇದ್ದು ಕೆಲವೊಮ್ಮೆ ಒಂದೇ ಫಲಕದ ಮೇಲೆ ಇಡೀ ಶಾಸನ ಇರುವುದುಂಟು. ಕೆಲವೊಮ್ಮೆ ಮುಂದಿನ ಫಲಕಗಳಲ್ಲಿ ಬರಹವು ಮುಂದುವರಿದ ನಿದರ್ಶಗಳೂ ಉಂಟು.

ಶಿಲಾಶಾಸನಗಳು ಹೇಗೆ ಅವು ದೊರೆತ ಸ್ಥಳದ ಬಗ್ಗೆ ಸಂಬಂಧವನ್ನು ಹೊಂದಿರುತ್ತವೆಯೋ ಹಾಗೆಯೇ ತಾಮ್ರಶಾಸನಗಳು ಅವು ದೊರೆತ ಸ್ಥಳಗಳೊಂದಿಗೆ ಸಂಬಂಧವನ್ನು ಹೊಂದಿಯೇ ಇರುತ್ತವೆಂದು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ಅವುಗಳನ್ನು ಪಡೆದ ಮನೆತನದವರು ಒಂದು ಕಡೆಯಿಂದ ಮತ್ತೊಂದು ಕಡೆಗೆ ವಲಸೆ ಹೋದಾಗ ತಮ್ಮೊಂದಿಗೆ ಈ ದಾಖಲೆಗಳನ್ನೂ ಕೊಂಡೊಯ್ಯುತ್ತಿದ್ದರು. ಉದಾ:– ಚಾಲುಕ್ಯ ರಾಜನಾದ ಕೀರ್ತಿವರ್ಮನು ಭಾಗೀರಥೀ ನದಿಯ ಭಂಡಾರಗವಿಟ್ಟಿಗೆ ಕೊಟ್ಟ ತಾಮ್ರಶಾಸನವು ಕೋಲಾರ ಜಿಲ್ಲೆಯ ವಕ್ಕಲೇರಿ ಗ್ರಾಮದಲ್ಲಿ ದೊರೆತಿದೆ.

ಅನೇಕ ತಾಮ್ರಶಾಸನಗಳೂ ನೆಲದಲ್ಲಿಯೇ ದೊರೆತಿವೆ. ಅವುಗಳು ಮೂಲ ದಾಖಲೆಗಳಾದ ಕಾರಣ ಅವುಗಳನ್ನು ಸುರಕ್ಷಿತವಾಗಿಟ್ಟಿರಲು ಒಂದು ಮಡಿಕೆಯಲ್ಲಿ ಹಾಕಿ ಇಡುತ್ತಿದ್ದರು. ತಾವು ಇಟ್ಟ ಸ್ಥಳವನ್ನು ಮರೆತೋ ಅಥವಾ ಅನಿರೀಕ್ಷಿತ ಅಪಘಾತಗಳಿಗೆ ಒಳಗಾಗಿಯೋ ಆ ಮನೆಯ ಜನ

ಸ್ಥಳಾಂತರ ಮಾಡಿದಾಗ ಅವು ಅಲ್ಲೇ ಉಳಿಯುತ್ತಿದ್ದುವು. ಹಾಗೆ ಭೂಗತವಾದ ಶಾಸನಗಳು ಅಗೆಯುವಾಗಲೋ, ಉಳುವಾಗಲೋ ದೊರೆಯುತ್ತವೆ.

ಬಹುಪಾಲು ತಾಮ್ರಶಾಸನಗಳು ದಾನ ಶಾಸನಗಳಾಗಿರುತ್ತವೆ. ಕೆಲವೊಮ್ಮೆ **'ಜಯರೇಖೆ'**ಗಳನ್ನು ತಾಮ್ರಫಲಕಗಳ ಮೇಲೆ ಬರೆದಿರುವುದುಂಟು. ಆದರೆ ಇವುಗಳ ಸಂಖ್ಯೆ ತೀರಾ ಕಡಿಮೆ.[೧೩]

ಈ ಹಿಂದೆ ತಿಳಿಸಿರುವಂತೆ ಶಾಸನಗಳು ಅಂದಿನ ಕಾಲದ ದಾಖಲೆಗಳಾಗಿದ್ದವು. ಈ ದಾಖಲೆಗಳೇ ನಂಬಲರ್ಹ ಪ್ರಮಾಣವೆಂದು ಭಾವಿಸಲಾಗಿತ್ತು. ಯಾವುದೇ ದತ್ತಿ, ದಾನ, ವಿಶೇಷ ಸವಲತ್ತುಗಳ ಬಗ್ಗೆ ಭಿನ್ನಾಭಿಪ್ರಾಯ ಬಂದಾಗ ಪೂರ್ವ ಶಾಸನಗಳನ್ನು ಪರಿಶೀಲಿಸಿ ತೀರ್ಪನ್ನು ನೀಡುತ್ತಿದ್ದರು. ಸಾರ್ವಜನಿಕರ ಗಮನಕ್ಕಾಗಿ ಶಿಲಾಶಾಸನದ ಮೇಲೆಯೂ, ವೈಯುಕ್ತಿಕ ದಾಖಲೆಯಾಗಿ ತಾಮ್ರಶಾಸನದ ಮೇಲೆಯೂ ಶಾಸನವನ್ನು ಬರೆದು ಕೊಡುತ್ತಿದ್ದರು. ಎಲ್ಲಾ ಸಮಯಗಳಲ್ಲಿಯೂ ಈ ರೀತಿ ಬಹುಶಃ ಕೊಡಲಾಗುತ್ತಿರಲಿಲ್ಲ. ಯಾವುದಾದರೂ ಒಂದು ಶಾಸನವನ್ನು ಹಾಕಿಸುತ್ತಿದ್ದರು. ಅಥವಾ ನೀಡುತ್ತಿದ್ದರು.

ತಮಗೆ ಸೇರದ ಆಸ್ತಿಯನ್ನು ತಮ್ಮದನ್ನಾಗಿ ಮಾಡಿಕೊಳ್ಳುವ ಸಲುವಾಗಿ ಕೆಲವರು ಸ್ವಾರ್ಥಿಗಳು ಕೃತಕ ತಾಮ್ರಶಾಸನಗಳನ್ನು ತಯಾರುಮಾಡಿ, ಅದನ್ನು ಅರಸನ ಅಥವಾ ಅಧಿಕಾರಿಯ ಮುಂದೆಯೋ ಸಾದರಪಡಿಸಿ ಭೂಮಿಯನ್ನು ವಶಪಡಿಸಿಕೊಳ್ಳುವ ಪ್ರಯತ್ನಗಳು ಇತಿಹಾಸದಲ್ಲಿ ನಡೆದಿವೆ. ಈ ದಿಶೆಯಲ್ಲಿ ಬಿಹಾರ ರಾಜ್ಯದ ಒಂದು ಶಾಸನವು ಕುತೂಹಲಕರವಾದ ವಿಷಯವನ್ನು ತಿಳಿಸುತ್ತದೆ. ಈ ಶಾಸನದಲ್ಲಿ ಗಾಹಡವಾಲ ಮನೆತನದ ಅರಸು ವಿಜಯ ಚಂದ್ರ ಎಂಬುವನು ಬ್ರಾಹ್ಮಣರಿಗೆ ಕಲಹಂಡಿ ಮತ್ತು ಬಡುಯಿಲಾ ಎಂಬ ಗ್ರಾಮಗಳನ್ನು ಅಕರವಾಗಿ ದಾನ ಮಾಡಿದನೆಂದು ಹೇಳಲಾಗಿದೆ. ಈ ಶಾಸನ ನೈಜವೆಂದು ನಂಬಿದ ಪ್ರತಾಪಧವಳನು ಬ್ರಾಹ್ಮಣರ ವಶಕ್ಕೆ ಆ ಎರಡೂ ಗ್ರಾಮಗಳನ್ನು ಬಿಡುತ್ತಾನೆ. ಇದು ನಡೆದ ಎರಡು ವರ್ಷಗಳ ನಂತರ ಪ್ರತಾಪದವಳನು ಬ್ರಾಹ್ಮಣರು ತನ್ನ ಮುಂದೆ ಸಾದರ ಪಡಿಸಿದ ಶಾಸನವು ಕೃತಕವೆಂಬುದನ್ನು ತಿಳಿಯುತ್ತಾನೆ. ಬ್ರಾಹ್ಮಣರು ತನಗೆ ಮಾಡಿದ ಮೋಸಕೃತ್ಯವನ್ನು ಅವನು ಒಂದು ಕಲ್ಲಿನ ಶಾಸನದ ಮೇಲೆ ಈ ರೀತಿ ದಾಖಲು ಮಾಡಿದ್ದಾನೆ. "ಬ್ರಾಹ್ಮಣರು ರಾಜಸೇವಕ ದೇಊ ಎಂಬಾತನಿಗೆ ಲಂಚವನ್ನು ಕೊಟ್ಟು ಈ ತಾಮ್ರಶಾಸನವನ್ನು ಪಡೆದಿದ್ದಾರೆ. ಅದು ಖಂಡಿತಾ ಅರಸನು ನೀಡಿದ ದಾಖಲೆಯಲ್ಲ. ಈ ಬ್ರಾಹ್ಮಣರು ಸೂಜಿಯ ಮೊನೆಯಷ್ಟು ಜಮೀನಿಗೂ ಒಡೆಯರಲ್ಲ. ಆದ ಕಾರಣ ಅವರಿಂದ ಎಲ್ಲಾ ರೀತಿಯ ತೆರಿಗೆಗಳನ್ನೂ ವಸೂಲು ಮಾಡತಕ್ಕದ್ದು" ಎಂದು ತಾಮ್ರ ಶಾಸನಗಳು ಅಂದಿನ ಆಡಳಿತಗಾರರಿಗೆ ತಲೆನೋವು ಆಗಿತ್ತೆಂದರೆ ಅತಿಶಯೋಕ್ತಿಯೇನಲ್ಲ.

ಈ **'ಕೂಟ'** ಅಥವಾ ಕೃತಕ ತಾಮ್ರಶಾಸನಗಳು ಇತಿಹಾಸಕಾರರಿಗೂ ಒಂದು ರೀತಿಯ ತಲೆನೋವೇ. ಯಾವುದು ನೈಜಶಾಸನ ಯಾವುದು ಕೃತಕಶಾಸನ ಎಂಬುದನ್ನು ಖಚಿತಪಡಿಸಿಕೊಂಡು ಆ ನಂತರ ಅವುಗಳ ವ್ಯಾಖ್ಯಾನವನ್ನು ಮಾಡಬೇಕಾಗುತ್ತದೆ.

ಈ ಕೂಟಶಾಸನಗಳಿಗೆ ಸಂಬಂಧಪಟ್ಟಂತೆ ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಗಂಗರ ಕಾಲದ ಅನೇಕ ತಾಮ್ರ ಶಾಸನಗಳನ್ನು ಶ್ರೀ ಬಿ.ಎಲ್. ರೈಸ್ ರವರು ನೈಜ ಶಾಸನಗಳೆಂದು ನಂಬಿದರು. ಆದರೆ ಜೆ.ಎಫ್.ಫ್ಲೀಟರು ಈ ಎಲ್ಲಾ ತಾಮ್ರ ಶಾಸನಗಳನ್ನು ಸಂಶಯದ ದೃಷ್ಟಿಯಿಂದ ನೋಡಿ, ಅವುಗಳಲ್ಲಿನ ಹಲವಾರು ವಿರೋಧಾಭಾಸಗಳನ್ನು ಗಮನಿಸಿ ಅವುಗಳಲ್ಲಿ ಕೆಲವನ್ನು ಮಾತ್ರ ನೈಜ ಶಾಸನಗಳೆಂದು ಪರಿಗಣಿಸಿದರು. ಉಳಿದೆಲ್ಲವುಗಳನ್ನು ಕೃತಕ ಶಾಸನಗಳೆಂದು ಸಾರಿದರು. ಆನಂತರ ಬಂದ ವಿದ್ವಾಂಸರು. ಫ್ಲೀಟರು ಕೃತಕ ತಾಮ್ರಶಾಸನಗಳೆಂದು ಹೇಳಿದ ಎಲ್ಲಾ ತಾಮ್ರಶಾಸನಗಳೂ ಕೃತಕ ಅಲ್ಲ ಅವುಗಳಲ್ಲಿಯೂ ನೈಜ ಶಾಸನಗಳು ಇವೆ ಎಂಬ ಅಂಶವನ್ನು ತಿಳಿಸಿದರು.

ಯಾವುದೇ ಒಂದು ತಾಮ್ರಶಾಸನ ನೈಜವಾದದ್ದೇ ಅಥವಾ ಕೃತಕವಾದದ್ದೇ ಎಂಬುದನ್ನು ಪರಿಶೀಲಿಸಲು ಶಾಸನತಜ್ಞರು ಆ ಶಾಸನದ ಲಿಪಿ, ಭಾಷೆಯ ಸ್ವರೂಪ ಅದರಲ್ಲಿ ಉಕ್ತವಾಗಿರುವ ವಂಶಾವಳಿ, ಕಾಲ ಮತ್ತು ಐತಿಹಾಸಿಕ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳುತ್ತಾರೆ.

ಉದಾಹರಣೆಗೆ ಒಂದು ಶಾಸನ ಕ್ರಿ.ಶ. ಆರನೆಯ ಶತಮಾನದ್ದು ಎಂದು ಅದರಲ್ಲಿ ಉಕ್ತವಾಗಿದ್ದರೆ ಆರನೆಯ ಶತಮಾನದ ಇತರ ಶಾಸನಗಳು ಲಿಪಿ ಮತ್ತು ಭಾಷೆಯ ಸ್ವರೂಪದೊಂದಿಗೆ ಅದು ಹೋಲಿಕೆಯನ್ನು ಪಡೆದಿರಬೇಕು. ಲಿಪಿ ಮತ್ತು ಭಾಷೆ ಕಾಲಾನುಕ್ರಮದಲ್ಲಿ ಬದಲಾಗುತ್ತಿರುವ ಅಂಶವನ್ನು ಕೃತಕ ತಾಮ್ರಶಾಸನಕಾರರು ಗಮನಿಸುವುದಿಲ್ಲ. ಅವರ ದಾಖಲೆ ಹಿಂದಿನದು ಎಂಬುದಾಗಿ ಹಿಂದಿನ ಯಾವುದೋ ತೇದಿಯ ವಿವರಗಳನ್ನು ಮತ್ತು ಅರಸನ ಹೆಸರನ್ನು ನಮೂದಿಸಿರುತ್ತಾರೆ. ಆ ಕಾಲದ ವಿವರಗಳನ್ನು ಪಂಚಾಗದೊಂದಿಗೆ ಹೋಲಿಸಿದಾಗ, ಆ ಸಂವತ್ಸರದ ಆ ಮಾಸದಲ್ಲಿ ತಿಥಿ ವಾರ ನಕ್ಷತ್ರಗಳಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಹಾಗೆಯೇ ಇತರೇ ಶಾಸನಗಳು ನೀಡುವ ಅರಸರ ಕಾಲದ ಆಳ್ವಿಕೆಗಳು ಇದಕ್ಕೂ ವ್ಯತ್ಯಾಸ ಇರುತ್ತದೆ. ಇತಿಹಾಸಕ್ಕೆ ಸಂಬಂಧಪಟ್ಟ ಈ ಬಗೆಯ ವಿಷಯಗಳ ಬಗೆ ಕೃತಕ ಶಾಸನಕಾರನಿಗೆ ಎಚ್ಚರವಿರುವುದಿಲ್ಲ.

ಕೆಲವು ಅಂಶಗಳು ಶಾಸನದಲ್ಲಿ ಸರಿಹೊಂದುತ್ತಿಲ್ಲ ಎಂಬ ಕಾರಣಕ್ಕಷ್ಟೇ ಒಂದು ಶಾಸನವನ್ನು ಕೃತಕ ಎಂದು ಹೇಳಬರುವುದಿಲ್ಲ. ನಶಿಸಿಹೋಗುವ ಶಾಸನಗಳನ್ನು ಮತ್ತೆ ಪ್ರತಿ

ಮಾಡಿಟ್ಟಿರುವ ಸಾಧ್ಯತೆಗಳೂ ಉಂಟು. ಆದ್ದರಿಂದ ಸರಿ ಹೊಂದದಿರುವುದಕ್ಕೆ ಕಾರಣಗಳೇನು? ಎಂಬುದನ್ನೂ ಖಚಿತಪಡಿಸಿಕೊಳ್ಳಬೇಕು.

ಪ್ರಾಚೀನ ವಿಗ್ರಹಗಳಿಗೆ ಮತ್ತು ಪ್ರಾಚ್ಯವಸ್ತುಗಳಿಗೆ ಮಾರುಕಟ್ಟೆ ಇರುವುದನ್ನು ಗಮನಿಸಿ ಈ ಶತಮಾನದ ಕೆಲವರು ವಿಶೇಷವಾಗಿ ವ್ಯಾಪಾರಿ ಮತ್ತು ಹೆಸರುಗಳಿಸುವ ಮನೋಭಾವದವರು ವಿಗ್ರಹ ಮತ್ತು ಪ್ರಾಚೀನ ವಸ್ತುಗಳ ಮೇಲೆ ಪ್ರಾಚೀನ ಲಿಪಿಯನ್ನು ಬರೆದಿರುವ ನಿದರ್ಶನಗಳು ಹಲವಾರು ಬೆಳಕಿಗೆ ಬಂದಿವೆ. ಅಶೋಕನ ಧರ್ಮಲಿಪಿಯನ್ನು ಕಲ್ಲಿನ ಬಟ್ಟಲ ಮೇಲೆ ಕೊರೆಯಲಾಗಿದೆ ಎಂದು ಸಾದರಪಡಿಸಿದರು, ಅತ್ಯಪೂರ್ವ ದಾಖಲೆಯೆಂದು ಭಾವಿಸಿ ಇದನ್ನು ಮುಂಬಯಿನ ಪ್ರಿನ್ಸ್ ಅಫ್ ವೇಲ್ಸ್‌ನ ಮ್ಯೂಸಿಯಂನಲ್ಲಿ ಇಡಲಾಯಿತು. ಅನಂತರ ಸುಲಭವಾಗಿ ನಾಶಮಾಗುವ ಈ ಬಗೆಯ ಬಟ್ಟಲಿನ ಮೇಲೆ ಅಶೋಕ ಶಾಸನ ಕೊರೆಯಿಸಿರುವುದು ಅಸಂಭವ. ಇದನ್ನು ಯಾರೋ ವ್ಯಾಪಾರಿ ಮನೋಭಾವದವರು ಅವನ ಏಳನೆಯ ಬಂಡೆಗಲ್ಲು ಶಾಸನವನ್ನು ನೋಡಿ ಹಾಗೆಯೇ ಪ್ರತಿಮಾಡಿ ಕೊರೆದಿರಬಹುದೆಂದು ಶಂಕಿಸಿಲಾಯಿತು. ಅದನ್ನು ಸುಮಾರು ೧೯೫೭ ರಿಂದ ೬೩ರ ಸುಮಾರಿನಲ್ಲಿ ತಯಾರಿಸಿರಬೇಕೆಂದು ವಿದ್ವಾಂಸರು ನಿಶ್ಚಯಿಸಿದರು. ಕನ್ನಡ ನಾಡಿನ ಸಾವಿರಾರು ಶಾಸನಗಳನ್ನು ಪರಿಶೀಲಿಸಿದ ಬಿ.ಎಲ್. ರೈಸ್ ಸಾಹೇಬರ ಕೈಕೆಳಗೆ ಕೆಲಸ ಮಾಡುತ್ತಿದ್ದ ವ್ಯಕ್ತಿಯೊಬ್ಬ ಕೃತಕ ತಾಮ್ರ ಶಾಸನವನ್ನು ತಯಾರು ಮಾಡಿ ಅದನ್ನು ನೈಜಶಾಸನವೆಂಬಂತೆ ಶ್ರೀ ರೈಸ್ ಅವರನ್ನು ನಂಬಿಸುವ ಪ್ರಯತ್ನ ಮಾಡಿದ ಎಂದರೆ ನಮ್ಮವರು ಕೃತಕ ದಾಖಲೆಯನ್ನು ನಿರ್ಮಿಸುವಲ್ಲಿ ಎಂಥ ನಿಸ್ಸೀಮರು ಎಂಬುದು ವ್ಯಕ್ತವಾಗುವುದಿಲ್ಲವೆ?[೧೪]

ದಾನಶಾಸನಗಳು

ಶಾಸನಗಳ ಗುಂಪಿನಲ್ಲಿ ದಾನ ಶಾಸನಗಳೇ ಸುಮಾರು ಅರ್ಧಕ್ಕಿಂತ ಹೆಚ್ಚಾಗಿವೆ. ದೇವಾಲಯಗಳನ್ನು, ಬಸದಿಗಳನ್ನು ಹೊಸದಾಗಿ ಕಟ್ಟಿಸುವುದು, ಹಳೆಯದನ್ನು ಜೀರ್ಣೋದ್ಧಾರ ಮಾಡುವುದು, ಅವುಗಳನ್ನು ವಿಸ್ತರಿಸುವುದು, ಹೊಸ ಹೊಸದಾಗಿ ದೇವರುಗಳನ್ನು ಹಳೆಯ ದೇವಾಲಯಗಳನ್ನು ಪ್ರತಿಷ್ಠಾಪಿಸುವುದು. ಅಲ್ಲಿ ನಡೆಯಬೇಕಾದ ಪೂಜಾಕಾರ್ಯಗಳಿಗೆ ಭೂಮಿಕಾಣಿಕೆಗಳನ್ನು ದಾನವಾಗಿ ಕೊಡುವುದು. ದೇವರುಗಳಿಗೆ ಒಡವೆವಸ್ತ್ರಗಳನ್ನು ಸಮರ್ಪಿಸುವುದು ಕೆರೆಕಟ್ಟೆ, ಕಾಲುವೆ, ಕಲ್ಯಾಣಿ ಮುಂತಾದವುಗಳನ್ನು ನಿರ್ಮಿಸುವುದು ಅವುಗಳನ್ನು ನವೀಕರಿಸುವುದು ಮುಂತಾದ ಧರ್ಮಕಾರ್ಯಗಳನ್ನು ನಡೆಸಿದಾಗ ಅವುಗಳ ನೆನಪಿಗಾಗಿ ನೆಡಿಸಿದ ಶಾಸನಗಳೇ ದಾನ ಶಾಸನಗಳು.[೧೫]

ದಾನದ ವಿವರಣೆಯ ನಂತರ, ತಾನಿತ್ತ ದಾನವನ್ನು ಮುಂದಿನ ತಲೆಮಾರಿನವರು ಸೂರ್ಯಚಂದ್ರನು ಇರುವವರೆಗೂ ಕಾಪಾಡಿಕೊಂಡು ಹೋಗಬೇಕೆಂಬ ದಾನಿಯ ವಿನಯಪೂರ್ವಕ, ಕೆಲವೊಮ್ಮೆ ಅಗ್ರಹದ ಬೇಡಿಕೆ ಇರುತ್ತದೆ. ದಾನ ದತ್ತಿಗಳನ್ನು ಕಾಪಾಡಿಕೊಂಡವರಿಗೆ, ಅದನ್ನು ಅಪಹರಿಸಿದಾಗ ಪ್ರಾಪ್ತವಾಗುವ ಪುಣ್ಯ-ಪಾಪಗಳ ಪ್ರಸ್ತಾಪ ಬರುತ್ತದೆ. ಈ ವಿಷಯವನ್ನು ತಿಳಿಸುವ ಸಂಸ್ಕೃತ ಶ್ಲೋಕಗಳನ್ನು ಅರ್ಥವನ್ನು ಬರೆದಿರುವುದುಂಟು. ಮತ್ತೆ ಕೆಲವೊಮ್ಮೆ ದೇಶೀಯ ಬೈಗುಳಗಳನ್ನೇ ಪ್ರಯೋಗಿಸಿರುವುದುಂಟು. ಈ ಭಾಗವನ್ನು '**ಶಾಪಾಶಯ**'ಗಳು ಎಂಬುದಾಗಿ ಕರೆಯುತ್ತಾರೆ.

ಪ್ರಾಚೀನ ಕನ್ನಡ ಶಿಲಾ ಮತ್ತು ತಾಮ್ರ ಶಾಸನಗಳಲ್ಲಿ ದಾನವನ್ನು ಅಪಹರಿಸುವವನು 'ಮಹಾಪಾತಕನು', 'ಏಳನೆಯ ನರಕದಲ್ಲಿ ಹುಳುವಾಗಿ ಜನ್ಮವೆತ್ತುತ್ತಾನೆ' 'ಇಂಥವನು ಬೆಳೆಯಿಟ್ಟರೆ ಅದು ಮಳೆಯಾಗದೆ ನಾಶವಾಗುತ್ತದೆ ಎಂಬ ಅರ್ಥ ಬರುವ ಮಾತುಗಳು ಇರುತ್ತವೆ. ತನ್ನ ದಾನ ದತ್ತಿಯನ್ನು ಕಾಪಾಡಿದವನು 'ಪರಮ ಕಲ್ಯಾಣ ಭಾಗಿಯಾಗುತ್ತಾನೆ' ಅವನಿರುವ ಪ್ರದೇಶದ ಜನರೂ ಸುಖ ಸಂತೃಪ್ತಿಗಳಿಂದ ಇರುತ್ತಾರೆ ಎಂಬ ಅರ್ಥ ಬರುವ ವಾಕ್ಯಗಳು ಇರುತ್ತವೆ.

ಕನ್ನಡ ಶಾಸನಗಳಲ್ಲಿ ಸಾಮಾನ್ಯವಾಗಿ ಉದ್ಧೃತವಾಗಿರುವ 'ಶಾಪಾಶಯ' ವಿಷಯವನ್ನು ತಿಳಿಸುವ ಸಂಸ್ಕೃತ ಶ್ಲೋಕಗಳು ಈ ರೀತಿ ಇವೆ.

ಸ್ವದತ್ತಾಂ ಪರದತ್ತಾಂ ವಾ ಯೋಹರೇತಿ ವಸುಂಧರಾಂ

ಷಷ್ಠಿರ್ವರ್ಷ ಸಹಸ್ರಾಣಿ ವಿಷ್ಠಾಯಾಂ ಜಾಯತೇ ಕ್ರಿಮಿಃ

ಅಂದರೆ, ತಾನು ಕೊಟ್ಟ ಅಥವಾ ಬೇರೆಯವರೇ ಕೊಟ್ಟ ದತ್ತಿ, ದಾನಗಳನ್ನು ಯಾವನು ಅಪಹರಿಸುತ್ತಾನೆಯೋ ಅವನು ಅರವತ್ತು ಸಾವಿರ ವರ್ಷಗಳ ಕಾಲ ಕ್ರಿಮಿಯಾಗಿ ಜೀವಿಸುತ್ತಾನೆ. ಇದಕ್ಕಿಂತಲೂ ಉಗ್ರವಾಗಿ ಹೇಳುವ ಮತ್ತೊಂದು ಶ್ಲೋಕ ಈ ರೀತಿ ಇದೆ.

ವಿಷಂನವಿಷಮಿತ್ಯಾಹುಃ ದೇವಸ್ವಂ ವಿಷಮುಚ್ಯತೇ

ವಿಷಂ ಏಕಾಕಿನಂ ಹಂತಿ ದೇವಸ್ವಂ ಪುತ್ರಪೌತ್ರಕಂ

ವಿಷವು ವಿಷವೇ ಅಲ್ಲ. ಏಕೆಂದರೆ ಅದನ್ನು ಸೇವಿಸಿದವನು ಮಾತ್ರ ಸಾಯುತ್ತಾನೆ. ದೇವರಿಗೆ ಬಿಟ್ಟ ದತ್ತಿಯು ವಿಷಕ್ಕಿಂತಲೂ ಹೆಚ್ಚು ಅಪಾಯಕಾರಿಯಾದುದು. ಈ ದೇವರ ಸ್ವತ್ತು ಎಂಬುದೂ ವಿಷ. ಎಂದರೆ ಅದನ್ನು ಅಪಹರಿಸಿದವನನ್ನು ಮಾತ್ರವಲ್ಲದೆ. ಅವನ ಸಂತತಿಯವರನ್ನೂ ಅದು ಹಾಳು ಮಾಡುತ್ತದೆ.[೧೬]

ಮೇಲಿನ ಎರಡೂ ಶ್ಲೋಕಗಳು ದಾನದತ್ತಿಗಳು ಅಪಹರಿಸಿದವರಿಗೆ ಒದಗಿಸುವ ಸ್ಥಿತಿಯ ಬಗ್ಗೆ ಹೇಳುವಂತೆ, ದಾನವನ್ನು ಕಾಪಾಡಿದವನಿಗೆ ಒದಗುವ ಶ್ರೇಯಸ್ಸನ್ನು ಕುರಿತೂ ಹೇಳುವ ಶ್ಲೋಕಗಳು ದೊರೆಯುತ್ತವೆ. ಅವುಗಳಲ್ಲಿ ಒಂದನ್ನು ಪರಿಶೀಲಿಸಬಹುದು.

ದಾನಂವಾಪಾಲನಂವಾಪಿದಾನಾತ್ಶ್ರೇಯೋನುಪಾಲನಂ

ದಾನಾತ್ಸ್ವರ್ಗವಾಪ್ನೋತಿಪಾಲನಾದಚ್ಯುತಂಪದಂ

ಅಂದರೆ, ದಾನವನ್ನು, ದತ್ತಿಯನ್ನು ನೀಡುವುದಕ್ಕಿಂತಲೂ, ಬೇರೆಯವರು ಕೊಟ್ಟಿರುವ ದಾನ ದತ್ತಿಗಳನ್ನು ಕಾಪಾಡಿಕೊಂಡು ಬರುವುದು ಶ್ರೇಯಸ್ಕರವಾದುದು. ದಾನದಿಂದ ಸ್ವರ್ಗವು ಲಭಿಸಿದರೆ, ದಾನದ ಪಾಲನೆಯಿಂದ ಅಚ್ಯುತ (ಚ್ಯುತಿ ಬಾರದ) ಪದವಿಯೂ ಲಭಿಸುತ್ತದೆ.

ಈ ಹಿಂದೆ ತಿಳಿಸದಂತೆ ಈ ಶ್ಲೋಕಗಳ ಜೊತೆಗೆ ಕನ್ನಡದಲ್ಲಿಯೂ ಇದೇ ಭಾವವನ್ನು ಪ್ರಕಟಿಸುವ ಮಾತುಗಳು ದೊರೆಯುತ್ತವೆ. ಅವುಗಳಲ್ಲಿ ಒಂದೆರಡು ನಿದರ್ಶನಗಳನ್ನು ಪರಿಶೀಸುವುದು ಸೂಕ್ತವೆಂದು ತೋರುತ್ತದೆ. ಸಾಮಾನ್ಯವಾಗಿ ಶಾಸನಗಳಲ್ಲಿ "ಈ ಧರ್ಮಮಂ ಪ್ರತಿ ಪಾಲಿಸಿದವರ್ಗ್ಗೆ ವಾರಣಾಸಿ ಕುರುಕ್ಷೇತ್ರದೊಳು ಸಾಸಿರ ಕವಿಲೆಯುಮಂ ಸಾಸಿರ್ವ ಬ್ರಾಹ್ಮಣರ್ಗ್ಗೆ ಉಭಯಮುಖಿಗೊಟ್ಟ ಫಲಮಕ್ಕುಂ" ಎಂಬ ಮಾತುಗಳು, ಹಾಳು ಮಾಡಿದವರಿಗೆ ಮೇಲೆ ಹೇಳಿದ ಪುಣ್ಯ ಕ್ಷೇತ್ರಗಳಲ್ಲಿ ಹಸು ಮತ್ತು ಬ್ರಾಹ್ಮಣರನ್ನು ಕೊಂದ ಪಾಪವು ಲಭಿಸುತ್ತದೆ ಎಂಬ ಅರ್ಥ ಬರುವ ಮಾತುಗಳೂ ದೊರೆಯುತ್ತವೆ. ಕ್ರಿ.ಶ. ೧೩೮೦ರ ಒಂದು ಶಾಸನದಲ್ಲಿ ಇದೇ ಭಾವವನ್ನು ಪ್ರಕಟಿಸುವ ಒಂದು ಪದ್ಯ ತುಂಬಾ ಸ್ವಾರಸ್ಯವಾಗಿದೆ.

"ಇದನಾವಂ ನೋಡಿ ಸಂತೋಷದೆ ನಡಿಸಿದ ಭೂಪಾಲ ವಕ್ಷಸ್ಥಳಾವಾ

ಸದೊಳಿರ್ಪ್ಪೆಂ ನಾಂ ಸಮಂತಲ್ಲದೆ ಯಿದಕುರೆಕಾಯ್ದಿರ್ದ್ದನಾವಾ

ಸದೊಳ್ಮಾಣದೆ ನಿಲ್ವಳ್ತಾನದೆನ್ನಗ್ರಜೆಯೆನುತ ರಮಾದೇವಿ ಕೀರ್ತ್ತ್ಯಂಗನಾಹ

ಸ್ತದೆ ದಿಕ್ಪಾಲ ಬ್ರಜಾಧ್ಯಕ್ಷ ದೊಳನವರತಂ ಡಂಗುರಂ ಪೊಯ್ಯುತ್ತಿರ್ಪ್ಪಳು

ಅಂದರೆ, ಈ ದಾನವನ್ನು ಗಮನಿಸಿದ ಯಾವ ಅರಸನು, ಸಂತೋಷದಿಂದ ಇದನ್ನು ಪಾಲಿಸುತ್ತಾನೆಯೋ ಅವನ ವಕ್ಷಸ್ಥಲದಲ್ಲಿ ನಾನು ಸದಾ ಕಾಲ ನೆಲಸಿರುತ್ತೇನೆ. ಹಾಗಲ್ಲದೆ ಇದನ್ನು ಅಸಡ್ಡೆಯಿಂದ ಹಾಳು ಮಾಡಿದವನ ಮನೆಯಲ್ಲಿ ನನ್ನ ಸೋದರಿಯಾದ ದರಿದ್ರ ದೇವತೆಯು ನೆಲೆಯೂರಿ ನಿಲ್ಲುತ್ತಾಳೆ. ಎಂಬುದಾಗಿ ಸಾಕ್ಷಾತ್ ಲಕ್ಷ್ಮೀದೇವಿಯೇ ದಿಕ್ಪಾಲಕರ ಸಮೂಹದಲ್ಲಿ ಡಂಗುರವನ್ನು ಸಾರುತ್ತಿದ್ದಾಳಂತೆ. ಶಾಸನಗಳನ್ನು ಓದುತ್ತಾ ಹೋದಂತೆ ಇನ್ನೂ ಸ್ವಾರಸ್ಯವಾದ ಮಾತುಗಳು ದೊರೆಯುತ್ತವೆ.

ವಿಜಯನಗರದ ಕಾಲದ ಮತ್ತು ಅನಂತರದ ಕಾಲದ ಶಾಸನಗಳಲ್ಲಿ ಈ ಭಾಗವು ಅಶ್ಲೀಲವಾದ ಬೈಗುಳಗಳಿಂದ ಕೂಡಿರುತ್ತದೆ. ಅವುಗಳಲ್ಲಿ ಬಹುಪಾಲು ನಿದರ್ಶನಗಳನ್ನು ಇಲ್ಲಿ ಉದ್ಧೃತ ಮಾಡುವ ಅವಶ್ಯಕತೆಯಿಲ್ಲ. ಅಶ್ಲೀಲವಾದ ಭಾವವನ್ನೇ ಕೆಲಮೊಮ್ಮೆ ಗಂಭೀರವಾದ ಮಾತುಗಳಲ್ಲಿ ಹೇಳಿರುವ ನಿದರ್ಶನಗಳೂ ಉಂಟು. ಉದಾಹರಣೆಗೆ " ಈ ದತ್ತಿಯನ್ನು ಅಪಹರಿಸಿದವರು ಮಾತೃಗಮನ ಮಾಡಿದವರು" ಎಂದೋ "ಕತ್ತೆಯ ಪ್ರಜಾಪತಿಯನ್ನು ಸುರೆಯಲ್ಲಿ ಮಿದ್ದ ತಿಂದವರು" ಎಂದೋ ಅಥವಾ "ಈ ದತ್ತಿಗೆ ಆಸೆ ಪಡುವವನು ಹೆಣದ ಬಾಯಲ್ಲಿನ ಅಕ್ಕಿಕಾಳಿಗೆ ಆಸೆ ಬಿದ್ದವನು, ನಾಯಿ ಮಾಂಸ ತಿಂದವನು" ಎಂದೋ ಇರುತ್ತದೆ.

ದೇವಾಲಯ, ಬಸದಿಗಳು ಹೊಸದಾಗಿ ನಿರ್ಮಾಣವಾದ ವಿಚಾರವನ್ನು ನೋಡೋಣ ಬಮ್ಮವ್ವೆ ನಾಯಕತಿಯು ಕೃಷ್ಣರಾಜಪೇಟೆ ತಾಲ್ಲೂಕು, ಕಿಕ್ಕೇರಿಯ ಬ್ರಹ್ಮೇಶ್ವರ ದೇವಾಲಯವನ್ನು ನಿರ್ಮಿಸಿದಳೆಂದು ಕ್ರಿ.ಶ.೧೧೭೧ರ ಶಾಸನ (ಕೃಪೇ ೨೭) ಹೇಳುತ್ತದೆ. ಸುಮಾರು ಅದೇ ಕಾಲಕ್ಕೆ ಸೇರಬಹುದಾದ ಬಸ್ತಿಯ ಶಾಸನದಲ್ಲಿ (ಕೃಪೇ ೧೦೭) ಹೊಯ್ಸಳ ವಿಷ್ಣುವರ್ಧನನ ದಂಡನಾಯಕನಾದ ಪುಣಿಸಮಯ್ಯನು ಅಲ್ಲಿ ಬಸಿದಿಯೊಂದನ್ನು ಮಾಡಿಸಿ, ಅದಕ್ಕೆ ಮಾಣಿಕದೊಡಲೂರು ಮತ್ತು ಮಾವಿನಕೆರೆ ಗ್ರಾಮಗಳನ್ನು ದತ್ತಿಯಾಗಿ ನೀಡಿದೆನೆಂದು ಹೇಳಿದೆ "ದಣ್ಣನಾಯಕ(ಪು) ಣಿಸಮಯ್ಯ ಬಸದಿಯಂ ಮಾಡಿಸಿ ನಾಡ ಮಾಣಿಕ ದೂಡಲೊರಮಂ ಮಾವಿನಕೆರೆಯಮಂ ಸರ್ವ್ವಬಾದೆ ಪರಿಹರಮಾಗಿಯುಂ" ಎಂದು ಮುಂತಾಗಿ ಅಲ್ಲಿ ಬರೆದಿದೆ. ಇಮ್ಮಡಿ ನರಸಿಂಹನ ಪ್ರಧಾನಿಯಾದ ತೆನದಂಕವಂಶದ ಹರಿಹರ ದಂಡನಾಯಕನು ತನ್ನ ತಮ್ಮಂದಿರಾದ ಸಿಂಗೆಯನಾಯಕ ಮತ್ತು ಮಾರೆಯ ನಾಯಕರೊಡಗೂಡಿ, ತಂದೆಯ ಹೆಸರಿನಲ್ಲಿ ಮಲ್ಲಿಕಾರ್ಜುನ ದೇವಾಲಯವನ್ನು ಎತ್ತಿಸಿ, ತಾಯಿಯ ಹೆಸರಿನಲ್ಲಿ ಕೆರೆಯನ್ನು ನಿರ್ಮಿಸಿ ರಾಜನಿಂದ ಭೂಮಿಯನ್ನು ಪಡೆದು ದತ್ತಿಯಾಗಿ ಬಿಟ್ಟನೆಂದು ಕ್ರಿ.ಶ.೧೨೩೪ ಮಂಡ್ಯ ತಾಲ್ಲೂಕು ಬಸರಾಳು ಶಾಸನವು (ಮಂ ೨೯) ತಿಳಿಸುತ್ತದೆ. ಅವರು ತಮ್ಮ ಸೇವಾಕಾರ್ಯದ ಮೂಲಕ ಕೃತಾರ್ಥರಾದರೆಂದು ಆ ಶಾಸನ ಬಣ್ಣಿಸುತ್ತದೆ.

ಜನನಿಯ ಹೆಸರಿಂದಂ ಕೆರೆ
ಜನಕನ ಹೆಸರಿಂದೆ ದೇವತಾಗೃಹವೆಸದಿ
ರ್ಪ್ಪಿನೆಗಂ ಮಾಡಿಸಿದರ್ನ್ನಿಜ
ತನಯರ್ಮ್ಮೂ ವರುಮಿದೇಂ ಕೃತಾರ್ತ್ಥರೊ ಜಗದೊಳ್

ಮುಳುಗಿಹೋದ ಕನ್ನಂಬಾಡಿಯಲ್ಲಿ ನಂಜಯ್ಯನೆಂಬ ಭಕ್ತನು ಕ್ರಿ.ಶ.೧೮೧೮ರಲ್ಲಿ ನೂತನ ದೇವಾಲಯವೊಂದನ್ನು ನಿರ್ಮಿಸಿ ಅಲ್ಲಿ ಮಹಾಕಾಳಿ, ಮಹಾಲಕ್ಷ್ಮಿ ಮತ್ತು ಮಹಾಸರಸ್ವತಿಯರ ವಿಗ್ರಹಗಳನ್ನು ಪ್ರತಿಷ್ಠಾಪಿಸಿದನೆಂದು ಅಲ್ಲಿನ ಶಾಸನ (ಪಾಂಡವಪುರದ ಶಾಸನ ೨೪) ಹೇಳುತ್ತದೆ.

*** ಸ್ವಸ್ತಿ ಶ್ರೀ ವಿಜಯಾಭ್ಯುದಯ್ಯ ಶಾಲಿವಾಹನ ಶಖ ವರುಷಂಗಳು**

*** ೭೭೩ನೆ ಸಂದ ವರ್ತಮಾನವಾದ ಶಿದಾರ್ತಿನಾಮ ಸಂವತ್ಸರದ ವೈಶಾ**

*** ಖ ಶುಧ ೧೦ ಗುರುವಾರದಲ್ಲು ಮಹಾಲಕ್ಷ್ಮೀ ಮಹಾಕಾಳಿ ಅಂಮನರುಗಳಿ**

*** ಗೆ ಕಣ್ವಪುರ ಕ್ಷೇತ್ರದಲ್ಲಿ ಯಿದಂತಾ ನಾಲ್ಕನೇವರ್ನದಲ್ಲಿ ಗಂಗಡಿಕಾರರಲ್ಲಿ**

*** ಜನಿಸಿದ ಭೋಗಗಲುಡ ಪೌತ್ರನಾದ ಮರಿನಂಜೇಗಲುಡನ ಪುತ್ರನಾದಾ**

*** ಭೋಗೆಗಲುಡನ ಪತ್ನಿ ತಿಂಮಂಮನ ಪುತ್ರಿಯಾದ ಹೆಸರುಳ್ಳ ಮಹಾಲ**

*** ಕ್ಷ್ಮಿ ಮಹಾಕಾಳಿ ಅಂಮನವರ ಅವೇಶದಂಮನವರಿಂದ ಮಾಡಿಸಲ್ಪ**

*** ಟ್ಟ ಹೊಸ ಬೊಂಬೆರಥದ ಸೇವಾರ್ಥ॥ ಧರ್ಮಲಿಂಗಚರಿ ನಿರ್ಮಿತ॥**

(ಪಾಂಪು ೨೪)

ಈ ದೇವಾಲಯದ ನಿರ್ಮಾಣದ ಹಿನ್ನಲೆಯಲ್ಲಿ ಸ್ವಾರಸ್ಯಕರವಾದ ಸಂಗತಿಯೊಂದಿದೆ. ಆಗಿನ ಕಾಲದಲ್ಲಿ ಮಹೇಶ್ವರಿಯ ಉಪದ್ರವದಿಂದ ವಾಂತಿ ಭ್ರಾಂತಿಗಳು ಉಂಟಾಗಿ ಜನರು ಮೃತರಾಗತೊಡಗಿದರು. ಆಗ ಅಲ್ಲಿನ ಗಂಗಡಿಕಾರ ಒಕ್ಕಲಿಗ ಕುಟುಂಬಕ್ಕೆ ಸೇರಿದ ತಿಮ್ಮಮ್ಮ ಮತ್ತು ಬೋಗೇಗೌಡರೆಂಬ ದಂಪತಿಗಳ ಮಗಳಾದ ನಂಜಮ್ಮ ಎಂಬ ಕನ್ನಿಕೆಯ ಮೇಲೆ ಕೊಲ್ಲಾಪುರದ ಮಹಾಲಕ್ಷ್ಮಿ ಮತ್ತು ಉಜ್ಜಯನಿಯ ಮಹಾಕಾಳಿಯರು ಅವಿರ್ಭವಿಸಿದರು. ಆಕೆಯ ಕೃಪೆಯಿಂದಾಗಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬೀ ನಾಲ್ಕು ವರ್ಣದ ಪ್ರಜೆಗಳ ಮನಸಾಭಿಷ್ಟಗಳು ನೇರವೇರಿ ರೋಗಾದಿ ಉಪದ್ರವಗಳು ಪರಿಹಾರವಾದವು. ಆ ಹೊತ್ತಿನಲ್ಲಿ ವಿವಿಧ ಸೀಮೆಗಳ ಕಡೆಯಿಂದ ಬಂದ ಕಾಣಿಕೆಗಳ ಬಲದಿಂದ ನಂಜಯ್ಯನು ಗ್ರಾಮದ ಮಧ್ಯದಲ್ಲಿ ಈ ದೇವಾಲಯವನ್ನು ಕಟ್ಟಿಸಿದನೆಂದು ವಿವರಿಸಿದೆ.[೧೨]

ತಮ್ಮ ಹಿರಿಯರು ತೀರಿಹೋದ ಸಂದರ್ಭಗಳಲ್ಲಿ ಅವರ ನೆನಪಿಗಾಗಿ ದೇವಾಲಯಗಳನ್ನು ಮಾಡಿಸುತ್ತಿದ್ದ ಉದಾಹರಣೆಗಳೂ ಜಿಲ್ಲೆಯ ಶಾಸನಗಳಲ್ಲಿ ಲಭ್ಯವಾಗಿವೆ. ಮುದುಗೆರೆಯನ್ನಾಳುತ್ತಿದ್ದ ಗಾರಂದರ ಕುಲದ ಬಿಣ್ಣಾಂಡಿ ಎಂಬಾತನು ತನ್ನ ಮುತ್ತಯ್ಯ ಮುತ್ತಬ್ಬೆ ಮತ್ತು ತಾಯಿ ಚಾನವ್ವೆಯರುಸ ಸ್ವರ್ಗಸ್ಥರಾದಾಗ ಅವರ ನೆನಪಿಗಾಗಿ ಲಿಂಗ ಪ್ರತಿಷ್ಠೆ ಮಾಡಿಸಿ, ಆ ದೇವರಿಗೆ ಗರಂಜೇಶ್ವರ ಎಂದು ಹೆಸರಿಟ್ಟನೆಂದು ನಾಗಮಂಗಲ ತಾಲ್ಲೂಕು ಕ್ರಿ.ಶ. ೧೧೪೦ (ನಾಮಂ ೯೮)

ತಿಳಿಸುತ್ತದೆ. ಇಲ್ಲಿ ಅವರೇ ದೇವರನ್ನು ಪ್ರತಿಷ್ಠಾಪಿಸಿ ಅದಕ್ಕೆ ಅವರೇ ಹೆಸರನ್ನು ಇಡುವ ಒಂದು ಪದ್ಧತಿ ಇದೆ. ಇಲ್ಲಿ ಮರಗಳನ್ನು ದಾನವಾಗಿ ಕೊಡುತ್ತಿದ್ದರು, ಎಂದು ಹೇಳಲಾಗಿದೆ ಆದರೆ ಮರಗಳನ್ನು ಕುರಿತ ಯಾವ ಶಾಸನವೂ ಉಲ್ಲೇಖವಾಗಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ದೇವರನ್ನು ಕೆತ್ತುವಾಗ ಅದು ಇಂತಹದ್ದೇದೇವರು ಎಂದು ಒಂದು ಆಕೃತಿಯನ್ನು ಮಾಡಿಸಲಾಗುತ್ತದೆ.

ಹೊಸ ದೇವಾಲಯಗಳ ನಿರ್ಮಾಣವಲ್ಲದೆ ಹಳೆಯದನ್ನು ಜೀರ್ಣೋದ್ದಾರ ಮಾಡುವ ಸತ್ಕಾರ್ಯವನ್ನು ಭಕ್ತರು ಕಾಲಕಾಲಕ್ಕೆ ಕೈಗೊಂಡು ಆಸ್ತಿಕ್ಯದ ರಕ್ಷಣೆ ಮಾಡಿದ್ದಾರೆ. ಹಾಗೆ ಮಾಡಿದುದರ ಕುರುಹಾಗಿ ಶಾಸನಗಳನ್ನು ಬರೆಸಿದ್ದಾರೆ. ವಿಷ್ಣುವರ್ಧನನ ಮಹಾರಾಣಿಯಾದ ಬಮ್ಮಲದೇವಿಯು ನಾಗಮಂಗಲದ ಶಂಕರನಾರಾಯಣ ದೇವಾಲಯವನ್ನು ಜೀರ್ಣೋದ್ಧಾರ ಮಾಡಿಸಿದಳೆಂದು ಕ್ರಿ.ಶ.೧೧೩೪ರ ಶಾಸನ (ನಾಮಂ೭) ತಿಳಿಸುತ್ತದೆ. "ಯದುರಾಜ ರಾಜಹಂಸಾನನ್ದಕರ ಲಾವಣ್ಯ ಸಿಂಧುವುಂ_ಸಕಳ ಸಮಯಬಂಧುಮೆನಿಸಿದ ಶ್ರೀ ಮತ್ಪಿರಿಯರಸಿ ಪಟ್ಟಮಹಾದೇವಿ ವಿಷ್ಣುವರ್ಧನ ದೇವರ ಕಾರುಣ್ಯದಿಂ_ಕಲ್ಕುಣಿನಾಡೊಳಗಣ ನಾಗಮಂಗಲದ ಶಂಕರನಾರಾಯಣದೇವರ ದೇಗುಲಮಂ ಬಮ್ಮಲ ದೇವಿಯರು ಜೀರ್ಣೋದ್ದಾರಂ ಮಾಡಿಸಿ" ಎಂದು ಶಾಸನದಲ್ಲಿ ಹೇಳಿದೆ.

ಮಳವಳ್ಳಿಯ ಮಹಾಜನರು ತಮ್ಮೂರಿನ ಅರ್ಕನಾಥ ದೇವಾಲಯದ ಗರ್ಭಗುಡಿ ಸುಕನಾಸಿ ಮಂಟಪ ಶಿಖರ ಮುಂತಾದುವನ್ನು ಚಪ್ಪಡಿ ಸಹಿತ ಕಿತ್ತು ಜೀರ್ಣೋದ್ಧಾರ ಮಾಡಿದರೆಂದು ಅಲ್ಲಿನ ಕ್ರಿ.ಶ.೧೪೬೫ರ ಶಾಸನ (ಮ.ವ.೩) ಹೇಳುತ್ತದೆ. ಹಾಗೆಯೇ ಕ್ರಿ.ಶ.೧೧೬೮ರಲ್ಲಿ ಕಂಬದಹಳ್ಳಿಯ ಪಾರ್ಶ್ವನಾಥ ಬಸದಿಯನ್ನು ಪುಣ್ಯ ಪುಂಜನಾದ ಪಾಶ್ವದೇವ ಪ್ರಭುವು ಜೀರ್ಣೋದ್ಧಾರ ಮಾಡಿಸಿ ಸುಣ್ಣ ಬಣ್ಣದ ಕಾರ್ಯದಿಂದ ಶೋಭಾಯಮಾನವಾಗುವಂತೆ ಮಾಡಿದನೆಂದು ಕಂಬದಹಳ್ಳಿಯ ಶಾಸನ (ನಾಮಂ ೨೬) ಕೊಂಡಾಡುತ್ತದೆ.

ನಮ್ಮ ಪೂರ್ವಿಕರು ಹೊಸದಾಗಿ ದೇವಾಗಾರಗಳನ್ನು ನಿರ್ಮಿಸಿದಾಗ ಅವುಗಳಿಗೆ ಹೊಲಗದ್ದೆ ತೋಟ ತುಡಿಕೆಗಳನ್ನು ದತ್ತಿಯಾಗಿ ಒಪ್ಪಿಸುತ್ತಿದ್ದುದು ಸರಿಯಷ್ಟೇ ಅದರ ಜೊತೆಗೆ ಶಿಥಿಲಗೊಂಡಿದ್ದ ದೇವಾಲಯಗಳನ್ನು ದುರಸ್ತಿಪಡಿಸಿದಾಗಲೂ ಹಾಗೆಯೇ ದಾನಧರ್ಮಗಳನ್ನು ನೇರವೇರಿಸುತ್ತಿದ್ದರು, ಹಾಗಲ್ಲದೆ ಸುಸ್ಥಿತಿಯಲ್ಲಿರುವ ಅಥವಾ ಹೆಚ್ಚಿನ ಉತ್ಪನ್ನವಿಲ್ಲದ ದೇವಾಲಯಗಳಿಗೂ ದಾನಧರ್ಮಗಳನ್ನು ನೀಡಿ ಅಲ್ಲಿನ ಪೂಜಾಕಾರ್ಯಗಳು, ಉತ್ಸವಾದಿಗಳು, ಜಾತ್ರೆ, ರಥೋತ್ಸವಗಳು ವೈಭವೋಪೇತವಾಗಿ ನಡೆಯುವಂತೆ ನೋಡಿಕೊಳ್ಳುತ್ತಿದ್ದರು. ಇಂತಹ

ಸಂಗತಿಗಳನ್ನು ತಿಳಿಸುವ ಹಲವು ಶಾಸನಗಳು ಮಂಡ್ಯ ಜಿಲ್ಲೆಯಲ್ಲಿವೆ. ಕಂಬದಹಳ್ಳಿಯ ಶಾಂತೀಶ್ವರ ಬಸದಿಗೆ ಶಾಂತಿನಾಥದೇವರ ಪೂಜೆಗಾಗಿ ಸಾಮಂತ ಭರತೆಯನಾಯಕನು ಹಿರಿಯಕೆರೆಯ ತೆಂಕಣ ತೂಬಿನ ಮೊದಲೇರಿಯಲ್ಲಿ ಖಂಡುಗ ಗದ್ದೆಯನ್ನು ಧಾರಾಪೂರ್ವಕವಾಗಿ ದತ್ತಿಯಾಗಿ ಬಿಟ್ಟ ವಿಚಾರವನ್ನು ಅಲ್ಲಿನ ಕ್ರಿ.ಶ.೧೧೭೪ರ ಶಾಸನವು (ನಾಮಂ ೨೯) ತಿಳಿಸುತ್ತದೆ. ಆ ಘಟನೆ ಜಯ ಸಂವತ್ಸರದ ಉತ್ತರಾಯಣ ಸಂಕ್ರಾಂತಿಯೆಂದು ನಡೆಯಿತೆಂದು ಅದು ಹೇಳುತ್ತದೆ.

ಯಾದವನಾರಾಯಣ ಚತುರ್ವೇದಿಮಂಗಲವೆನಿಸಿದ ತೊಣ್ಣೂರಿನ ಲಕ್ಷ್ಮೀನಾರಾಯಣ ದೇವರಿಗೆ ಹೆಗ್ಗಡೆ ಮಾಚಯ್ಯನು ಒಂದೆತ್ತಿನ ಗಾಣದ ಸುಂಕದ ತೆರಿಗೆಯನ್ನು ಎಣ್ಣೆಯನ್ನೂ ತಿರುವರಂಗ ದಾಸರ ವಶದಲ್ಲಿ ದತ್ತಿಯಾಗಿ ಬಿಟ್ಟನೆಂದು ಅಲ್ಲಿನ ಕ್ರಿ.ಶ.೧೧೭೪ರ ಶಾಸನ (ಪಾಂಪು ೬೩) ಹೇಳುತ್ತದೆ. **"ಗುರುವಿಗೆ ತಪ್ಪಿದವರು ಗೋಮಾಂಶಕ್ಕೆ ಎರಗಿದವರು"** ಎಂದು ಪ್ರಾರಂಭವಾಗುತ್ತದೆ ಕ್ರಿ.ಶ.೧೪೦೨ರ ಪುರದ ಶಾಸನ (ಪಾಂಪು ೨೬೦) ಅದರಲ್ಲಿ ಪುರ ಮತ್ತು ಮಾರಮನಹಳ್ಳಿಗಳ ಮಗ್ಗದಸುಂಕ, ಮದುವೆ ಸುಂಕ, ಆಡುಗಳ ಸುಂಕ ಈ ಮುಂತಾದುವು ಪುರದ ವೀರಭದ್ರದೇವರಿಗೆ ಸಲ್ಲಬೇಕೆಂದು ಹೇಳಿದೆ. ಸಿಂಗಯ್ಯ ಎಂಬಾತನು ಕಂಭದ ತಿರುಮಲೆದೇವರ ರಥೋತ್ಸವಕ್ಕೆ ಅನುಕೂಲವಾಗುವಂತೆ ಬೆಟ್ಟದ ಬಳಿ ಇರುವ ನಾಲ್ಕು ದಿಕ್ಕಿನ ಶಂಖ ಚಕ್ರದಲ್ಲೇ ಮೇರೆಯಾಗಿ ಇರುವ ಭೂಮಿಯನ್ನು ದಾನಮಾಡಿದ ಸಂಗತಿ ಕ್ರಿ.ಶ.೧೫–೧೬ನೆಯ ಶತಮಾನದ್ದೆನ್ನಬಹುದಾದ ಸಾತನೂರು ಶಾಸನದಲ್ಲಿ (ಮಂ ೪೭) ಉಲ್ಲೇಖನಗೊಂಡಿದೆ.[೧೪]

ತೊಣ್ಣೂರಿನ ನಿಲಾಮಶೂದ ಖಾದರ್ರಿ ದರ್ಗಾದಲ್ಲಿ ನಡೆಸುವ ದರಿದ್ರರ ಧರ್ಮಕ್ಕೆ ಹೈದರಾಲಿಖಾನನು ಚಟಮಗೆರೆ ಗ್ರಾಮವನ್ನು ದಾನವಾಗಿ ಕೊಟ್ಟನೆಂದು ಕ್ರಿ.ಶ.೧೭೫೯ರ ಚಟ್ಟಂಗೆರೆ ಶಾಸನ (ಕೃಪೇ ೧೦೨) ತಿಳಿಸುತ್ತದೆ. ಹೈದರಾಲಿಯು ಇಮ್ಮಡಿಕೃಷ್ಣರಾಜ ಒಡೆಯರಿಂದ, ಚಟಮಗೆರೆ ಗ್ರಾಮದ ಕಂದಾಯದ ಬೆಲೆಯನ್ನು ಭಂಡಾರಕ್ಕೆ ಒಪ್ಪಿಸಿ, ಅದನ್ನು ಪಡೆದುಕೊಂಡು ದರ್ಗಾಕ್ಕೆ ನೀಡಿದನೆಂಬ ವಿವರವು ಅಲ್ಲಿದೆ. ಈ ಧರ್ಮವನ್ನು ಆಳಿದವರು ಬಹುಶಃ ಹಿಂದೂಗಳು, ಗೋಹತ್ಯಾದಿ ಮಹಾಪಾಪಕ್ಕೆ ಹೋಗಲಿ ಎಂಬ ಶಾಪವಾಕ್ಯವಲ್ಲದೆ ಮುಸಲ್ಮಾನರಾದವರು ಯಾರಾದರೂ ಈ ಧರ್ಮಕ್ಕೆ ಅಡ್ಡಿ ನಡೆಸಿದರೆ ಅವರು ಮೆಕ್ಕಾದಲ್ಲಿ ಹಂದಿಯನ್ನು ತಿಂದ ದೋಷಕ್ಕೆ ಗುರಿಯಾಗಲಿ ಎಂದೂ ಶಾಪಹಾಕಿರುವುದು ಗಮನಾರ್ಹವಾದ ಸಂಗತಿ. ಹಂದಿಭಕ್ಷಣೆಯು ಪಾಪ ಕೃತ್ಯವೆಂಬುದು ಮುಸಲ್ಮಾನರ ನಂಬಿಕೆ.

ದೇವಾಲಯಗಳಿಗೆ ಮಾಡುತ್ತಿದ್ದ ದಾನಧರ್ಮಗಳಿಗೆ ಪುಣ್ಯ ಸಂಪಾದನೆಯೇ ಪ್ರಮುಖ ಗುರಿಯಾಗಿತ್ತು. ಉತ್ತರಾಯಣ ಪುಣ್ಯ ಕಾಲ, ಸೂರ್ಯಗ್ರಹಣ, ಚಂದ್ರಗ್ರಹಣ ಮುಂತಾದ ವಿಶಿಷ್ಟ ಪರ್ವಕಾಲಗಳಲ್ಲಿ ಅಂತಹ ಸತ್ಕಾರ್ಯಗಳನ್ನು ನೇರವೇರಿಸುತ್ತಿದ್ದರು. ಕ್ರಿ.ಶ.೧೬೨೦ರ ಅನವಾಳು ಶಾಸನದಲ್ಲಿ (ಪಾಂಪು ೨೫೦) ಆ ಗ್ರಾಮವನ್ನು ಚಾಮರಾಜ ಒಡೆಯರ ದಳವಾಯಿ ಚಾಮಪ್ಪನು ಮೈಸೂರು ಚಾಮುಂಡಿಬೆಟ್ಟದ ಮೇಲಣ ಮಹಾಬಲೇಶ್ವರ ದೇವರಿಗೆ ದಾನಮಾಡಿದ ವಿಚಾರ ಬರುತ್ತದೆ. **"ಚಾಮರಾಜೊಡೆಯರಿಗೆ ಪುಣ್ಯವಾಗಬೇಕೆಂದು ಶ್ರೀಮನ್ಮಹಾದೇವದೇವೋತ್ತಮ ಮೈಸೂರು ಬೆಟ್ಟದ ಶ್ರೀ ಮಹಾಬಲೇಶ್ವರ ದೇವರಿಗೆ ಅನೆವಾಳ ಗ್ರಾಮದವನು ಚಂದ್ರಗ್ರಹಣ ಪುಣ್ಯ ಕಾಲದಲ್ಲಿ ಧಾರೆಯರರೆದನೆಂದು ಕೊಟ್ಟ ಶಿಲಾಶಾಸನ ಶ್ರೀ"** ಎಂದು ಅಲ್ಲಿ ಬರೆದಿದೆ. ತಾನು ಮಾಡಿದ ಸತ್ಕರ್ಮದ ಪುಣ್ಯವು ತನ್ನ ಪ್ರಭುವಿಗೆ ಸೇರುವಂತಾಗಲೆಂದು ದಳವಾಯಿ ಚಾಮಯ್ಯನು ಪ್ರಾರ್ಥಿಸಿಕೊಂಡಿರುವುದು ಗಮನಿಸಬೇಕಾದ ಸಂಗತಿಯಾಗಿದೆ.

ಹೊಸ ದೇವಾಲಯಗಳ ನಿರ್ಮಿತಿ, ಹಳೆಯ ದೇವಾಲಯಗಳ ದುರಸ್ತಿ ಹಾಗೂ ಜೀರ್ಣೋದ್ಧಾರದ ಕಾರ್ಯಗಳಲ್ಲದೇ, ಈಗಾಗಲೇ ಅಸ್ತಿತ್ವದಲ್ಲಿರುವ ದೇವಾಲಯಾದಿಗಳನ್ನು ವಿಸ್ತರಿಸುವ ಪುಣ್ಯೋದಯ ಕಾರ್ಯಗಳಲ್ಲೂ ನಮ್ಮವರು ಭಾಗಿಗಳಾಗುತ್ತಿದ್ದರು. ಶ್ರೀರಂಗಪಟ್ಟಣದ ರಂಗನಾಥಸ್ವಾಮಿ, ನಾಗಮಂಗಲದ ಸೌಮ್ಯಕೇಶವಸ್ವಾಮಿ, ಉದಾ:- ನಾಗಮಂಗಲದ ಸೌಮ್ಯಕೇಶವ ದೇವಾಲಯದ ಗರ್ಭಗುಡಿ, ಸುಖನಾಶಿ ಮಂಟಪ ಮತ್ತು ನವರಂಗವು ಹೊಯ್ಸಳರ ಕಾಲದ ರಚನೆಯಾಗಿದೆ. ಇದನ್ನು ನಕ್ಷತ್ರಾಕಾರದ ವೇದಿಕೆಯ ನಿರ್ಮಿಸಿರುತ್ತಾರೆ. ಇದರ ನಂತರ ವಿಜಯನಗರದ ಕಾಲದಲ್ಲಿ ಮುಖಮಂಟಪ ಅದರ ಮೇಲಿನ ಬೃಹದಾಕಾರದ ರಾಯಗೋಪುರ ಪ್ರದಕ್ಷಿಣಾ ಪತಗಳಲ್ಲಿ ವಿವಿಧ ಮಂಟಪಗಳು ಹಾಗೂ ಅಂತರಾಳಗಳನ್ನು ನಿರ್ಮಿಸಲಾಗಿದೆ. ದೇವಾಲಯದ ಎದುರಿಗೆ ಸುಮಾರು ೫೦ ಅಡಿ ಎತ್ತರದ ಗರುಡ ಗಂಭವಿದೆ. ಮೇಲುಕೋಟೆಯ ಚಲುವನಾರಾಯಣಸ್ವಾಮಿ ಮುಂತಾದ ದೇವಾಲಯಗಳು ಮೂಲತಃ ಚಿಕ್ಕ ದೇವಾಲಯಗಳಾಗಿದ್ದು, ಬೇರೆ ಬೇರೆ ಶತಮಾನಗಳಲ್ಲಿ ಕೆಲವು ಹೊಸ ರಚನೆಗಳು ಸೇರಿಸಲ್ಪಟ್ಟು ವಿಸ್ತಾರಗೊಂಡಿರುವುದನ್ನು ನಾವು ಕಾಣುತ್ತೇವೆ. ತೊಣ್ಣೂರಿನ ಲಕ್ಷ್ಮೀನಾರಾಯಣ ದೇವಾಲಯದ ಶಾಸನದಲ್ಲಿ (ಪಾಂಪು ೭೩) ಹೆಗ್ಗಡೆ ಸುರಿಗೆಯ ನಾಗಯ್ಯನು ಅಲ್ಲಿಗೆ ಓಲಗಶಾಲೆಯನ್ನು ಮಾಡಿಸಿದನೆಂದು ಹೇಳಿದ **"ಸ್ವಸ್ತಿಶ್ರೀ ವಿಷ್ಣುವರ್ಧನ ಪ್ರತಾಪ ಹೊಯ್ಸಳ ದೇವರು ಬೆಸದಿಂದೀಯೋಲಗ ಸಾಲೆಯಂ ಶ್ರೀಮನ್ಮಹಾಪ್ರಧಾನ ತಂತ್ರಾದಿಷ್ಟಾಯಕ ಮಹಾಪಸಾಯಿತ ಹೆಗ್ಗಡೆ ಸುರಿಗೆಯ ನಾಗಯ್ಯ ಮಾಡಿಸಿದ ಧರ್ಮ"** ಎಂಬುದು ಆ ಶಾಸನದ ಪೂರ್ಣಪಾಠ ಆ ಪುಣ್ಯಕಾರ್ಯವು ಕ್ರಿ.ಶ.ಸು.೧೧೭೦ರಲ್ಲಿ ನಡೆದಿರಬಹುದು.

ದೇವಲಾಪುರದ ಲಕ್ಷ್ಮೀಕಾಂತದೇವರ ಸನ್ನಿಧಿಗೆ ದೀಪಮಾಲೆಯ ಕಂಬ ಮತ್ತು ಬಾಗಿಲುವಾಡವನ್ನು ಚಿಕ್ಕಅಲ್ಲಪ್ಪನಾಯ್ಕನು ನಿಲ್ಲಿಸಿ ಕೊಟ್ಟನೆಂದು ಕ್ರಿ.ಶ.೧೪೭೨ರ ಶಾಸನ (ನಾಮಂ ೧೫೮) ಹೇಳುತ್ತದೆ. ಹೀಗೆಯೇ ಬೆಳ್ಳೂರಿನ ಪ್ರಸನ್ನ ಮಾಧವದೇವರ ಮುಂದೆ ಹರಿದಾಸರಾವುತನು ಉತ್ಸವ ಮಂಟಪ, ದೀಪಮಾಲೆಯ ಕಂಭ ಮತ್ತು ಬಲಿಪೀಠಾದಿಗಳನ್ನು ನಿಲ್ಲಿಸಿದನೆಂಬ ವಿಚಾರ ಅಲ್ಲಿನ ಕ್ರಿ.ಶ.೧೫೧೮ರ ಶಾಸನದಲ್ಲಿ (ನಾಮಂ ೯೧) ಹೇಳಲಾಗಿದೆ.

ಶ್ರೀ ಮದನಾದಿ ಅಗ್ರಹಾರ ಶ್ರೀ ವೀರಬಲ್ಲಾಳ ಚತುರ್ವೇದಿ ಭಟ್ಟರತ್ನಾಕರವೆನಿಸಿದ ನಾಗಮಂಗಲದ ವೀರಭದ್ರ ದೇವಾಲಯದ ರಂಗಮಂಟಪದ ಮುಂಭಾಗದಲ್ಲಿ ಹೊನ್ನಿ ಸೆಟ್ಟಿ ಎಂಬಾತನು_ಗಂಧಗೋಡಿ ಮಂಟಪದ ನಿರ್ಮಾಣ ಕಾರ್ಯವನ್ನು ನೆರವೇರಿಸಿಕೊಟ್ಟನೆಂದು ಅಲ್ಲಿನ ಕ್ರಿ.ಶ.೧೫೧೧ರ ಶಾಸನ (ನಾಮಂ ೮) ತಿಳಿಸಿಕೊಡುತ್ತದೆ. ಈಗಾಗಲೇ ನಿರ್ಮಾಣಗೊಂಡಿರುವ ದೇವಾಲಯಗಳಲ್ಲಿ ಹೊಸ ವಿಗ್ರಹಗಳನ್ನು ಸ್ಥಾಪಿಸಿರುವ ಉದಾಹರಣೆಗಳೂ ಉಂಟು ಬನ್ನೂರು ಮಲುಭಾರತ್ತಿಯ ಮಗ ಭಾರತಿ ಎಂಬಾತನು ಮಾರಹಳ್ಳಿ ಲಕ್ಷ್ಮೀನರಸಿಂಹದೇವರ ದ್ವಾರಪಾಲಕರ ಪ್ರತಿಷ್ಠೆ ಮಾಡಿಸಿದನೆಂದು ಕ್ರಿ.ಶ.೧೭೯೧ರ ಮಾರೇಹಳ್ಳಿ ಶಾಸನವು (ಮವ .೬೭) ಹೇಳುತ್ತದೆ.

ದೇವಾಲಯದ ಸಂಪತ್ತನ್ನು ಹೆಚ್ಚಿಸುವುದಕ್ಕಾಗಿ, ಉತ್ಸವಮೂರ್ತಿಗಳ ಅಲಂಕಾರಣಾರ್ಥವಾಗಿ ಅಭರಣಾಧಿಗಳನ್ನು ದಾನಮಾಡಿರುವ ಅನೇಕ ಶಾಸನಗಳು ಮಂಡ್ಯ ಜಿಲ್ಲೆಯಲ್ಲಿ ಲಭಿಸಿವೆ. ನಾವು ಅಲಂಕರಿಸಿಕೊಳ್ಳುವಂತ ರಥೋತ್ಸವವೇ ಮುಂತಾದ ವಿಶೇಷ ಪರ್ವಗಳಲ್ಲಿ ದೇವರುಗಳನ್ನು ಅಲಂಕರಿಸಿ ಕಣ್ತುಂಬ ನೋಡುವುದು ಆಸ್ತಿಕ ಸಂಸ್ಕೃತಿಯ ಒಂದಂಗ. ಕ್ರಿ.ಶ.೧೪೦೬ರ ಮಾರೇಹಳ್ಳಿ ಶಾಸನದಲ್ಲಿ (ಮವ ೭೧) ಅತ್ರೇಯ ಗೋತ್ರದ ಹೆಗ್ಗೆಪ್ಪ ಮತ್ತು ಮಲ್ಲರಸರು ಹೊನ್ನ ಕಳಸವನ್ನು ನರಸಿಂಹದೇವರಿಗೆ ನೀಡಿದರೆಂದು ಹೇಳಿದೆ. ಹೀಗೆಯೇ ನಾಗಮಂಗಲದ ಚಿಕ್ಕಣ್ಣಯ್ಯ ಮತ್ತು ಜಕ್ಕಣ್ಣಯ್ಯನವರು ಮಕ್ಕಳು ಅಲ್ಲಿನ ದೇವಾಲಯವೊಂದಕ್ಕೆ ಮಾಡಿದ ಸೇವೆಯ ವಿವರಗಳು ಕ್ರಿ.ಶ.೧೮೪೫ ರ ಶಾಸನದಲ್ಲಿವೆ. (ನಾಮಂ ೧೩) "ಶ್ರೀಯರಿಗೆ ಸಮರ್ಪಕವಾ ಮಾಡಿದಂತ್ತ ಶೇವಾರ್ತ್ತಗೋಪುರ ಮುಂತಾದ ವಿಮಾನಗಳು ಜೀರ್ಣೋದ್ದಾರವಾಗಿ ಮುಂತಾಗಿ ವುತ್ಸವರು ಪ್ರಭಾವಳೆಗಳು ಬಾಗಿಲುವಾಡಗಳು ಚಿನ್ನ. ಬೆಳ್ಳಿ ಆಭರಣಗಳು ಬೇರೆ ಸಾಮಾನು ಎಂದು ಮುಂತಾಗಿ ಅಲ್ಲಿ ಬರೆದಿದೆ. ದೇವಾಲಯದ ಜೀರ್ಣೋದ್ಧಾರ ಕಾರ್ಯವನ್ನು ನಡೆಸಿಕೊಟ್ಟು ಅದರೊಂದಿಗೆ ಆಭರಣಗಳನ್ನು ಅರ್ಪಿಸಿರಬೇಕೆಂದು ತೋರುತ್ತದೆ.[೧೯]

ಕ್ರಿ.ಶ.೧೮೯೭ರ ಶಾಸನದಲ್ಲಿ (ನಾಮ ೧೧೫) ಶ್ರೀ ಮದಾದಿ ಚುಂಚನಗಿರಿ ನಿಲಯ ಕ್ಷೇತ್ರಪಾಲ ಶ್ರೀ ಗಂಗಾಧರೇಶ್ವರ ಮಹಾಸ್ವಾಮಿದೇವಸ್ಥಾನದ ಮಹಾದ್ವಾರದ ಬಾಗಿಲಿಗೆ ಅಲಂಕಾರಾರ್ಥವಾಗಿ ಹಿತ್ತಾಳೆಯ ತಗಡು ಹೊದಿಸಿಕೊಡುವ ಸೇವೆಯನ್ನು ಕರೀಗೌಡರೆಂಬ ಭಕ್ತರು ನಡೆಸಿದರೆಂದು ಹೇಳಿದ ಅವರ ಸತ್ಕಾರ್ಯದಲ್ಲಿ ಪರದೇಶಿಗೌಡರು ಮತ್ತು ಅನ್ನದಾನಿ ಗೌಡರು ಸಹಕರಿಸಿದರು ಎಂದು ಅಲ್ಲಿ ಹೇಳಿದ ಪರದೇಶಿಗೌಡ ಎಂಬ ವ್ಯಕ್ತಿ ನಾಮ ಇಲ್ಲಿ ಗಮನಾರ್ಹವಾದುದು ಪರದೇಶಿಗೌಡ ಎಂಬ ವ್ಯಕ್ತಿನಾಮ ಇಲ್ಲಿ ಚರ್ಚೆಗೆ ಒಳಪಡುವಂತದು ಇವರ ಜೊತೆಯಲ್ಲಿಯೇ ಅನ್ನದಾನಿಗೌಡರು ಸಹಕರಿಸಿದರು ಎಂದು ಹೇಳಲಾಗಿದೆ ಅದರೆ ಅವರ ಹೆಸರು ಹೇಳದೆ ಪರದೇಶಿಗೌಡನ ಹೆಸರನ್ನು ಮಾತ್ರ ಹೇಳಬೇಕಾದರೆ ಬಹುಶಃ ಈ ವ್ಯಕ್ತಿ ಬೇರೆ ಕಡೆಯಿಂದ ಬಂದ ವ್ಯಕ್ತಿಯಾಗಿರಬಹುದು ಎಂಬುದನ್ನು ಸೂಚಿಸುತ್ತದೆ.

ಕೆರೆಗಳನ್ನು ಕಟ್ಟಿಸುವುದು, ಬಾವಿಗಳನ್ನು ತೆಗೆಸುವುದು ಕಾಲುವೆಗಳನ್ನು ತೋಡಿಸುವುದು ಪುಷ್ಕರಿಣಿಗಳನ್ನು ನಿರ್ಮಿಸುವುದು ಮುಂತಾದ ಪುಣ್ಯಕಾರ್ಯಗಳನ್ನು ನಮ್ಮ ಪ್ರಾಚೀನರು ದೇವಸೇವೆಯ ಅಂಗವಾಗಿಯೋ ಗ್ರಾಮಸೇವೆಯ ಅಂಗವಾಗಿಯೋ ಕೈಗೊಳ್ಳುತ್ತಿದ್ದರು. ಕ್ರಿ.ಶ.೧೫೩೧ರ ಶಿವನಹಳ್ಳಿಯ ಶಾಸನದಲ್ಲಿ (ನಾಮಂ.೨೧) ಬಳಗುಂದಿಯ ತಿಪ್ಪಯ್ಯನ ಮಗ ಕದರೆನಾಯಕನು ಕೆರೆಯೊಂದನ್ನು ಕಟ್ಟಿಸಿದನೆಂದಿದೆ. ಕ್ರಿ.ಶ. ೧೭-೧೮ನೆಯ ಶತಮಾನಕ್ಕೆ ಸೇರಿದ ಕಂಬದಹಳ್ಳಿ ಶಾಸನದಲ್ಲಿ (ನಾಮಂ ૩૮) ಭಕ್ತನೊಬ್ಬನು ಚಂದ್ರಪ್ರಭಸ್ವಾಮಿಯ ಅರ್ಚನೆಗೆ ಕೋಮಲಕಟ್ಟೆ ಎಂಬ ಹೆಸರಿನ ಜಲಾಶಯವೊಂದನ್ನು ನಿರ್ಮಿಸಿದನೆಂದು ತಿಳಿಸಿದೆ. ಕ್ರಿ.ಶ.೧೮೦೦ರ ಶ್ರೀರಂಗಪಟ್ಟಣದ ಶಾಸನದ (ಶ್ರೀ ಪ ೧೯) ನಲ್ಲತಂಬಿ ಮೊದಲಿಯು ವೇದಪುಷ್ಕರಿಣಿಯನ್ನು ನಿರ್ಮಿಸಿದ ವಿವರವಿದೆ. "ವೇಲಾಯುಧ ಮೊದಲಿ ಪುತ್ರನಾದ ನಲ್ಲತಂಬಿ ಮೊದಲಿಯು ಶ್ರೀ ಪಶ್ಚಿಮರಂಗನಾಥ ಸ್ವಾಮಿಯವರ ಸನ್ನಿಧಿಗೆ ಈಶಾನ್ಯ ಭಾಗದಲ್ಲಿ ಸ್ವಾಮಿಯವರ ನಿತ್ಯಗಟ್ಲೆ ತಿರುಮಂಜನ ಕೈಂಕರ್ಯಾಗಳಿಗೂ ಸಕಲ ಬ್ರಾಹ್ಮಣರುಗಳ ಸ್ನಾನಪಾನಾದಿಗಳಿಗೂ ಉಪಯುಕ್ತವಾಗಿ ವೇದಪುಷ್ಕರ್ಣಿಯನ್ನು ನಿರ್ಮಾಣವಂ ಮಾಡಿ ಶ್ರೀರಂಗನಾಥಸ್ವಾಮಿಯವರ ಚರಣಾರ ವಿಂದಂಗಳಿಗೆ ಸಮರ್ಪಿಸ್ತನು" ಎಂದು ಅದರಲ್ಲಿ ಹೇಳಿದೆ.

ತಮಗಿಂತ ಹಿಂದೆ ಪುಣ್ಯವಂತರು ನಿರ್ಮಿಸಿದ್ದ ಜಲಾಶಯಗಳನ್ನು ತರುವಾಯದವರು ಜೀರ್ಣೋದ್ಧಾರ ಮಾಡಿರುವ ಅನೇಕ ಉದಾಹರಣೆಗಳು ಮಂಡ್ಯ ಜಿಲ್ಲೆಯಲ್ಲಿವೆ ಸಿರಿಯ ಕಲಸತ್ತೆಪಾಡಿ ಎಂಬ ಗ್ರಾಮದ ಜಲಾಶಯವೊಂದು ಸುಮಾರು ೨೦೦ ವರ್ಷಗಳಿಂದ ಯಾವ ದುರಸ್ತಿಯೂ ಕಾಣದೆ ಹಾಳು ಬಿದ್ದಿತ್ತು. ಅದನ್ನು ಕುಲೋತ್ತುಂಗ ಚೋಳನ ಮಂಡಲಿಕನಾದ

"ಪೋಮನ್ ಇರಾಮನ್" ಎಂಬಾತನು ಕಂಡು ಶುದ್ಧ ಪಡಿಸಿದನೆಂದು ಕ್ರಿ.ಶ.೧೧೧೨ರ ಮೊಮ್ಮೂರು ಅಗ್ರಹಾರದ ಶಾಸನ (ಶ್ರೀ ಪ ೬೭) ತಿಳಿಸುತ್ತದೆ. ಹೊಸಕೆರೆ ಎಂಬ ಹೆಸರಿನ ಕರೆಯೊಂದು ಪುರದಲ್ಲಿತ್ತು. ಅದು ಒಡೆದು ಖಿಲವಾಗಿ ಹೋಗಿತ್ತು. ಆ ಗ್ರಾಮವು ಮೇಲುಕೋಟೆಯ ಚಿಲ್ಲಪಿಳ್ಳೆರಾಯನ ದೇವಾಲಯಕ್ಕೆ ಸೇರಿದ್ದಾಗಿತ್ತು ಆ ಹೊತ್ತಿನಲ್ಲಿ ಲಕ್ಷ್ಮೀಪತಿಸೆಟ್ಟಿಯು ೩೦೦ ಗದ್ಯಾಣಗಳನ್ನು ಖರ್ಚುಮಾಡಿ ಆ ಕೆರೆಯನ್ನು ಪುನರ್ನಿರ್ಮಿಸಿದನು. ತೂಬು ನಿಲ್ಲಿಸಿ ಕೋಡಿಯ ಕಡುವನ್ನು ತೆಗೆಸಿದನು ಎಂದು ಕ್ರಿ.ಶ. ೧೫೯೯ರ ಮೇಲುಕೋಟೆ ಶಾಸನ (ಪಾಂಪು ೧೩೫) ವಿವರಿಸುತ್ತವೆ. ದಾನಧರ್ಮದ ಕಾರ್ಯಗಳಲ್ಲಿ ರಾಜಮಹಾರಾಜರು ಮಂಡಲಿ ಪ್ರಧಾನರು, ದಂಡನಾಯಕರು ಭಾಗವಹಿಸುತ್ತಿದ್ದರು. ಅವರ ಜೊತೆ ಸ್ಥಳವಂದಿಗರಾದ ಸಿರಿವಂತರೂ, ತ್ಯಾಗಶೀಲರು ಕೂಡಿಕೊಳ್ಳುತ್ತಿದ್ದರು. ತ್ಯಾಗ ಪರೋಪಕಾರ, ದೈವಭಕ್ತಿ ನಮ್ಮ ಪೂರ್ವಿಕರ ಅತಿಶಯವಾದ ಮಹತ್ವ ನೀಡುತ್ತಿದ್ದರು.

ವೀರಗಲ್ಲುಗಳು:–

ವೀರಗಲ್ಲುಗಳು, ಮಾಸ್ತಿಕಲ್ಲುಗಳು, ನಿಷಿದಿಕಲ್ಲುಗಳು ಎಂದು ವೀರಶಾಸನಗಳನ್ನು ಮೂರು ಬಗೆಯಾಗಿ ವಿಂಗಂಡಿಸಬಹುದು. ಬಗೆಬಗೆಯ ಕಾರಣಗಳಿಗಾಗಿ ತಮ್ಮ ಪ್ರಾಣಗಳೆನ್ನರ್ಪಿಸಿದ ವೀರರ ನೆನಪಿಗಾಗಿ ನೆಟ್ಟಕಲ್ಲುಗಳೇ **ವೀರಗಲ್ಲುಗಳು**. ವೀರರು ಮಡಿದಾಗ ಅವರ ಮಡದಿಯು ತಾವು ಅಗ್ನಿ ಪ್ರವೇಶ ಮಾಡಿಯೋ ತಲೆಕಡಿದುಕೊಂಡು ಪ್ರಾಣವನ್ನೊಪ್ಪಿಸುತ್ತಿದ್ದರು. ಅವರೇ ಮಹಾಸತಿಯರು ಅಥವಾ ಮಾಸ್ತಿಯರು ಅವರ ಸ್ಮಾರಕವಾಗಿ ನೆಟ್ಟ ಕಲ್ಲುಗಳೇ **ಮಾಸ್ತಿಕಲ್ಲುಗಳು**. ಅಂತಹ ವೀರವನಿತೆಯರು ನಮ್ಮ ಗ್ರಾಮಸ್ಥರು ಇಂದಿಗೂ ಪೂಜಿಸಿಕೊಂಡು ಬರುತ್ತಿದ್ದಾರೆ. ಕೆಲವೆಡೆ ಅವರಿಗಾಗಿ ಗುಡಿಗಳನ್ನು ಕಟ್ಟಿದ್ದಾರೆ. ಗುಡಿಗಳೆಂದರೆ ಅವು ಅತ್ಯಂತ ಕಿರಿದಾದ, ಮೂರು ದಿಕ್ಕಿಗೆ ಮೂರು ಚಪ್ಪಡಿ ಮೇಲ್ಭಾವಣಿಗೊಂದು ಚಪ್ಪಡಿ, ಎಂಬಂತೆ ಅತ್ಯಂತ ಸರಳವಾದ ರಚನೆಗಳು ಮಂಡ್ಯ ತಾಲ್ಲೂಕಿನ ಪುರ, ಮದ್ದೂರು ತಾಲ್ಲೂಕಿನ ಮಾರಗಾನಹಳ್ಳಿ, ಪಾಂಡವಪುರ ತಾಲ್ಲೂಕಿನ ದೇವರಾಯಪಟ್ಟಣಗಳಲ್ಲಿ ವೀರರ ಗುಡಿ ಮಾಸ್ತಿಗುಡಿಗಳಿವೆ. ವೀರಗಲ್ಲು ಮಾಸ್ತಿಕಲ್ಲುಗಳೆಂಬ ಸ್ಮಾರಕಶಿಲೆಗಳ ಮೇಲೆ ಚಿತ್ರ ಪಟ್ಟಿಕೆಗಳಿಂತೆ ಕೇವಲ ಸಾಲು ಸಾಲಾಗಿ ಕೊರೆದ ಚಿತ್ರಗಳು ಮಾತ್ರವೇ ಇರಬಹುದು. ಜೊತೆಗೆ ಕಾಲದೇಶ ನಾಮರೂಪಾದಿ ವಿವರಗಳನ್ನು ತಿಳಿಸುವ ಬರಹವೂ ಇರಬಹುದು ಚಿತ್ರಗಳಿಲ್ಲದ ಕೆಲವು ಸ್ಮಾರಕಗಳಲ್ಲಿ ಕೇವಲ ಬರಹ ಮಾತ್ರವೇ ಇರಬಹುದು.

ಸಾವಿನ ಭೀತಿಯ ಅಭಿವ್ಯಕ್ತಿ:-

ಮಾನವನಿಗೆ ಒದಗುವ ಎಲ್ಲಾ ಸಂಕಷ್ಟಗಳಿಗಿಂತಲೂ ಸಾವಿನ ಭಯ ಎಂಬುದು ಅವನ ಜೀವನದಲ್ಲಿ ಅಲ್ಲೋಲ ಕಲ್ಲೋಲವನ್ನುಂಟು ಮಾಡುವ ಒಂದು ಸ್ಥಿತಿ. ಸಾವಂತೂ ಅವನನ್ನು ಒಂದು ನಿಮಿಷದಲ್ಲಿ ಇಲ್ಲ ಗೈಯುವ ಇನ್ನೊಂದು ಭಯಂಕರ ಸ್ಥಿತಿ ಇದು ಒಮ್ಮೆಲೆ ಅವನಲ್ಲಿ ಪ್ರೀತಿ-ಭಯ-ವಿಶ್ವಾಸ-ಕ್ರೋಧ-ಅಕರ್ಷಣೆ-ವಿಕರ್ಷಣೆ ಭೀತಿ ಕುತೂಹಲಗಳನ್ನು ಹೊರ ಹೊಮ್ಮಿಸುವ ಸಂಕೀರ್ಣ ಘಟಕವಾಗಿದೆ. ಸತ್ತ ಆತ್ಮದ ಬಗ್ಗೆ ಪ್ರೀತಿ ಅಂದರೆ ಕಳೇ ಬರಹ ಬಗ್ಗೆ ಭೀತಿ ಅವನಲ್ಲುಂಟಾಗುತ್ತದೆ. ಪರಸ್ಪರ ವಿರುದ್ಧವಾದ ಅವನ ಈ ಭಾವನೆಗಳು ಅವನು ಶವಗಳನ್ನು ರಕ್ಷಿಸಿಟ್ಟ ವಿವಿಧ ರೀತಿಗಳು-ಸಮಾಧಿ ಮಾಡುವುದು, ಸುಡುವುದು ಮುಂತಾದ ಸಂಪೂರ್ಣ ನಿರ್ನಾಮ ಮಾಡುವ ರೀತಿಗಳಲ್ಲಿ ಸುವ್ಯಕ್ತವಾಗಿದೆ. ಪ್ರಾಚೀನ ಪ್ರಪಂಚದಲ್ಲಿ ಪ್ರಚಲಿತವಿದ್ದ ಶವ ಸಂಸ್ಕಾರಗಳನ್ನು ಕಾಲಾನುಕ್ರಮದಲ್ಲಿ ಸಮೀಕ್ಷೆ ಮಾಡಿದಾಗ, ಶವಸಂಸ್ಕಾರ ಮಾಡುವ ವಿಧಾನ, ಸಮಾಧಿ ವಿಧಾನ, ಸಮಾಧಿಗಳ ಮುಂದೆ ನೀಡುವ ಬಲಿ, ಕಾಣಿಕೆಗಳು ಸತ್ತವರ ಗೌರವಾರ್ಥವಾಗಿ ನಿಲ್ಲಿಸಿರುವ ಸ್ಮಾರಕಗಳು ಈ ಎಲ್ಲದರ ನಡುವೆ ಒಂದು ಐಕ್ಯತೆ ಸೌಮ್ಯತೆ ಕಂಡುಬರುತ್ತದೆ. ಇದಕ್ಕೆ ಮುಖ್ಯ ಕಾರಣವೆಂದರೆ ಸಾವು ಎಂಬುದು ಸಾರ್ವತ್ರಿಕವಾಗಿ ಪ್ರಪಂಚದ ಎಲ್ಲ ಸಮಾಜಗಳಲ್ಲಿಯೂ ತನ್ನ ಕಾರ್ಯರೂಪವನ್ನು ತೋರಿಸುತ್ತದೆ. ಎಂಬುದು ಸಾವಿನ ಬಗ್ಗೆ ಮಾನವನ ಮೂಲಭೂತ ಭಾವನೆಗಳು ಒಂದೇ ಆಗಿರುವುದರಿಂದ ಅವನು ಅದರ ಬಗ್ಗೆ ತನಗಿರುವ ಭೀತಿಯ ಅಭಿವ್ಯಕ್ತಿಯಲ್ಲಿಯೂ ಸೌಮ್ಯವನ್ನು ತೋರಿಸಿದ್ದಾನೆ.[೨೦]

ವೀರಗಲ್ಲುಗಳು ಅದರಲ್ಲಿ ಕೆತ್ತಿರುವ ಪಾಠ ಮತ್ತು ಶಿಲ್ಪವನ್ನು ಅವಲಂಬಿಸಿರುತ್ತವೆ. ಹೀಗೆ ಮಾಡುವುದಕ್ಕೆ ಕಾರಣವನ್ನು ಸಂಕ್ಷಿಪ್ತವಾಗಿ ವಿವರಿಸಿ ಮುಂದುವರಿಯುವುದು ಉಚಿತ ವೀರಗಲ್ಲುಗಳು ಸಾಮಾನ್ಯವಾಗಿ ಪಾಠವನ್ನು ಮತ್ತು ಶಿಲ್ಪವನ್ನು ಹೊಂದಿರುತ್ತವೆ. ಕೆಲವೊಮ್ಮೆ ಪಾಠ ಇಲ್ಲದಿರುವ ವೀರಗಲ್ಲುಗಳು ಅನೇಕ ಸಂಖ್ಯೆಯಲ್ಲಿ ದೊರೆಯುತ್ತವೆ. ಅದರೆ ಶಿಲ್ಪವಿಲ್ಲದ ವೀರಗಲ್ಲುಗಳು ವಿರಳವೆಂದೇ ಹೇಳಬೇಕು ವೀರನ ಪರಾಕ್ರಮವನ್ನು ಅವನು ಮಾಡಿದ ತ್ಯಾಗವನ್ನು ಲೋಕಕ್ಕೆ ತಿಳಿಯುವಂತೆ ಮಾಡುವಲ್ಲಿ ಶಾಸನಕಾರ ಮತ್ತು ಶಿಲ್ಪಿ ಇವರಿಬ್ಬರ ಪಾತ್ರವೂ ಇರುತ್ತದೆ.

ಇಂದು ಜನ ವೀರಗಲ್ಲಿನ ಶಿಲ್ಪದ ಅಧಾರದ ಮೇಲೆ ಎಂಥದೇ ಕಥೆಯನ್ನು ಹೇಳಲಿ ಅದನ್ನು ನಿರ್ಮಾಣ ಮಾಡಿದ ಕಾಲಕ್ಕೆ ಜನತೆ ಆ ಶಿಲ್ಪದ ಅರ್ಥವಂತಿಕೆಯನ್ನು ಕಂಡುಕೊಂಡಿದ್ದರೆಂದು ತೋರುತ್ತದೆ. ವಿದ್ಯಾವಂತ ಜನರಿಗೆ ಶಾಸನದ ಪಾಠ ವೀರನ

[illegible]

ಪರಾಕ್ರಮವನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗಿತ್ತು. ಏಕೆಂದರೆ ಶಿಲ್ಪದ ವಿವರಗಳನ್ನು ಚಿತ್ರವು ಹಾಗೆ ಬಿಡಿಸಿರುವುದರಿಂದ ಜನಗಳ ಕುತೂಹಲ ಕೆರಳಿಸಿ ಅವರಲ್ಲಿ ಗುಪ್ತವಾಗಿದ್ದ ಅರ್ಥಜ್ಞಾನವನ್ನರಳಿಸುತ್ತಿತ್ತು. ಬಹುಶಃ ಈ ಕಾರಣದಿಂದಾಗಿಯೇ ವೀರನ ಪರಾಕ್ರಮದ ನಿರೂಪಣೆ ಮಾಡುವಾಗ ಶಿಲ್ಪಿಯಾದವನು ವೀರನು ಮಾಡಿದ ಹೋರಾಟದ ಚಿತ್ರವನ್ನು ತಾನು ತನ್ನ ಕಾಲದಲ್ಲಿ ಕಂಡಿರಬಹುದಾದ ಹೋರಾಟಗಳನ್ನೂ ಗಮನದಲ್ಲಿಟ್ಟುಕೊಂಡು ಚಿತ್ರಿಸಿರಬೇಕು ಹೀಗೆ ಮಾಡುವಾಗ ಸಹಜವಾಗಿಯೋ ಶಿಲ್ಪಿಯಾದವನು ತನ್ನ ಸಮಕಾಲಿನ ಆಯುಧಗಳನ್ನು ವೀರರ ಉಡುಪುಗಳನ್ನು ಅವರು ಬಳಸುತ್ತಿದ್ದವಾಹನಗಳನ್ನು ನಿರೂಪಿಸಿರುತ್ತಾನೆ.

ಯುದ್ಧಗಳ ಹಿನ್ನಲೆ:–

ಯುದ್ಧಗಳ ವಿವರವಾದ ಸ್ವರೂಪವನ್ನು ತಿಳಿಯುವ ಮುನ್ನ ಅವುಗಳ ಹಿನ್ನಲೆಯನ್ನು ಕುರಿತು ಸ್ವಲ್ಪಮಟ್ಟಿಗೆ ವಿಚಾರ ಮಾಡುವುದು ಸೂಕ್ತವೆಂದು ತೋರುತ್ತದೆ. ಈ ಯುದ್ಧಗಳು ಏಕೆ ಅದವು ಅವುಗಳನ್ನು ನಡೆಸುತ್ತದ್ದವರ ಮನೋಧರ್ಮ ಎಂತಹುದಿತ್ತು ಎಂಬ ಪ್ರಶ್ನೆಗಳು ಪರಿಶೀಲನಾರ್ಹ. ಯುದ್ಧ ಎಂಬುದು ಮನುಷ್ಯ ಸ್ವಭಾವಕ್ಕೆ ಅಂಟಿ ಬಂದ ಹುಟ್ಟುಗುಣ, ಭಾರತೀಯ ವೇದ, ಪುರಾಣ, ಸಾಹಿತ್ಯ ಕೃತಿಗಳಲ್ಲಿ ಯುದ್ಧದ ಪರಿಣಾಮಗಳು ಯುದ್ಧದಿಂದಾಗಿ ಒಬ್ಬ ಅರಸನ ರಾಜ್ಯದ ಏಳಿಗೆ ಮತ್ತು ನಾಶ ಆಗಿರುವುದರ ಚಿತ್ರಗಳು ಬರುತ್ತವೆ.

ಯುದ್ಧದಿಂದಲೇ ತನ್ನ ಏಳಿಗೆ ತನ್ನ ಶತ್ರುಗಳ ನಾಶ ಎಂಬುದಾಗಿ ಭಾರತದಲ್ಲಿ ಆಳಿದ ಎಲ್ಲ ಅರಸರು ಭಾವಿಸಿದ್ದಂತೆ ತೋರುತ್ತದೆ. ಈ ಅಂಶ ಅವರು ಮಾಡಿದ ಯುದ್ಧಗಳಿಂದಲೂ ಮತ್ತು ಅವರು ಹೊಂದಿದ್ದ ಬಿರುದು ಪ್ರಶಸ್ತಿಗಳಿಂದಲೂ ವ್ಯಕ್ತವಾಗುತ್ತದೆ. ಭಾರತದ ಅರಸರ ಅತ್ಯುನ್ನತವಾದ ಒಂದು ಅಕಾಂಕ್ಷೆ ಎಂದರೆ ರಾಜಾಧಿರಾಜನಾಗುವುದು ಅಖಂಡ ಭೂವನಿತೆಗೆ ತಾನೊಬ್ಬನ ಒಡೆಯನಾಗುವುದು.

ವೀರಗಲ್ಲುಗಳ ಶಿಲ್ಪ ತನ್ನ ಸಮಕಾಲಿನ ಶಿಲ್ಪದೊಡನೆ ಬೆಳೆದು ಉನ್ನತ ಸ್ಥಿತಿಯನ್ನು ಮುಟ್ಟಿ ಮತ್ತೊಂದು ಕಾಲಕ್ಕೆ ಕೇವಲ ಪಡಿಯಚ್ಚಾಗಿ, ಅನಂತರ ಅವನತಿಯನ್ನು ಪಡೆದಂತೆಯೇ ವೀರಗಲ್ಲುಗಳ ಪಾಠವು ತನ್ನ ಸಮಕಾಲಿನ ಸಾಹಿತ್ಯದ ಪ್ರಭಾವವನ್ನು ಪಡೆದು ಬೆಳೆಯಿತು ಕೆಲವಾರು ಕಡೆಗಳಲ್ಲಿ ಅವು ಉತ್ತಮ ಸಾಹಿತ್ಯವಾಗಿರುವುದನ್ನು ಗಮನಿಸಬಹುದು ಮತ್ತೆ ಕೆಲವು ಕಡೆ ಕೇವಲ ಪಡಿಯಚ್ಚುಗಳಾಗಿ ಏಕತಾನತೆಯ ದೋಷದಿಂದ ನರಳುತ್ತವೆ. ವೀರಗಲ್ಲುಗಳ ಶಿಲ್ಪದಲ್ಲಿ ಅಲ್ಲಲ್ಲಿ ಶಿಲ್ಪಿಯ ಪ್ರತಿಭೆಯನ್ನು ಗುರುತಿಸಲು ಬರುವಂತೆಯೇ ಶಾಸನ ಕಾರನ ಪ್ರತಿಭೆಯನ್ನು ಅಲ್ಲಲ್ಲಿ ಗಮನಿಸಬಹುದು.[೨೧]

ವೀರಗಲ್ಲುಗಳ ಪಾಠವನ್ನು ಇತರ ದಾನಶಾಸನಗಳೊಂದಿಗೆ ಹೋಲಿಸಿ ನೋಡಿದಾಗ ಮುಖ್ಯವಾಗಿ ಎದ್ದುಕಾಣುವ ವ್ಯತ್ಯಾಸವೆಂದರೆ ವೀರಗಲ್ಲುಗಳ 'ವಸ್ತು' ಮತ್ತು 'ನಿರೂಪಣಾ' ವಿಧಾನಗಳು. ವೀರಗಲ್ಲುಗಳು ಮುಖ್ಯವಾಗಿ ಮಡಿದ ವೀರರ ಪರಾಕ್ರಮಗಳನ್ನು ಕೀರ್ತಿಸುವ ಸ್ಮಾರಕ ಶಿಲೆಗಳು. ಅದ್ದರಿಂದ ಪಾಠದ ಬಹುಬಾಗ ವೀರನ ಹೋಗಳಿಕೆಗಾಗಿ ಮೀಸಲಾಗಿರುತ್ತದೆ. ನಂತರ ಇದಕ್ಕೆ ಹೊಂದಿಕೊಂಡಂತೆ ಅರಸನ, ದತ್ತಿಯ ವಿವರಗಳು ಪ್ರಸ್ತಾಪ ಸಂಗ್ರಹವಾಗಿಯಾದರೂ ಸಮರ್ಪಕವಾಗಿ ಬರುತ್ತವೆ. ಇಲ್ಲಿ ದಾನವನ್ನೂ ದತ್ತಿಯನ್ನೋ ಬಿಟ್ಟ ಅರಸನ ಅಥವಾ ಒಡೆಯನ ಹೊಗಳಿಕೆಗಾಗಿ ಅಷ್ಟು ಪ್ರಾಶಸ್ತ್ಯವಿಲ್ಲ. ಗತಿಸಿದ ವೀರನ ಕೀರ್ತಿ ಪ್ರತಾಪಗಳಿಗೆ ಪ್ರಾಶಸ್ತ್ಯ ನೀಡಲಾಗಿರುತ್ತದೆ. ಈ ದೃಷ್ಠಿಯಿಂದ ದಾನಶಾಸನಗಳ ಪಾಠಕ್ಕಿಂತ ವೀರಗಲ್ಲುಗಳ ಪಾಠ ಭಿನ್ನವಾಗಿವೆ.

ದಾನಶಾಸನಗಳಲ್ಲಿ ಹಾಗೆ ಕೆಲವು ವೀರಗಲ್ಲುಗಳ ಪಾಠದಲ್ಲಿಯೇ ದೇಶ ಅರಸ ಅವನ ಮುಂತಾದವುಗಳ ವರ್ಣನೆಗಳು ಬರುತ್ತವೆ. ಇಲ್ಲಿ ಅವೆಲ್ಲವೂ ಮಿತವಾಗಿಯೇ ಬಂದಿರುತ್ತವೆ. ಎಂಬುದನ್ನು ಮರೆಯಬಾರದು. ಇಂತಹ ವೀರಗಲ್ಲುಗಳಲ್ಲಿ ವೀರನು ಮಡಿದ ಹೋರಾಟ ಅದರ ಸ್ವರೂಪ, ಅದಕ್ಕೆ ಕಾರಣಗಳು, ಆ ಹೋರಾಟದಲ್ಲಿ ವೀರನ ಪಾತ್ರ ಮುಂತಾದ ವಿಷಯಗಳು ವಿವರವಾಗಿ ಬರುತ್ತವೆ. ಎಂಬುದು ಮುಖ್ಯ.

ವೀರಗಲ್ಲುಗಳ ವಿಷಯ ನಿರೂಪಣಾ ಅನುಕ್ರಮಣಿಕೆ ಸಾಮಾನ್ಯವಾಗಿ ಇತರ ದಾನ ಶಾಸನಗಳಂತಯೇ ಪ್ರಾರ್ಥನಾ ಶ್ಲೋಕ, ಶಾಪಾಶಯ ಶಾಸನಕಾರ ವೀರಗಲ್ಲಿನ ಶಿಲ್ಪಿ ಮತ್ತು ರೂವಾರಿ ಇತ್ಯಾದಿಯನ್ನೊಳಗೊಂಡು ಕ್ರಮವಾಗಿ ಬಂದಿರುತ್ತದೆ. ಈ ನಡುವೆ ವೀರನ ಪರಾಕ್ರಮದ ಪ್ರಸ್ತಾಪ ಬರುತ್ತದೆ. ಎಲ್ಲಾ ವೀರಗಲ್ಲುಗಳು ಮಡಿದ ವೀರನಿಗೆ ದತ್ತಿ ಬಿಟ್ಟ ವಿಷಯವನ್ನು ತಿಳಿಸುವುದಿಲ್ಲ. ಕೆಲವು ವೀರಗಲ್ಲು ಕೇವಲ ವೀರನ ಪರಾಕ್ರಮವನ್ನು ಕೀರ್ತಿಸುವ ಸಲುವಾಗಿ ನಿರ್ಮಿತವಾಗಿರುವ ನಿದೇರ್ಶನಗಳು ಉಂಟು.

ವೀರಗಲ್ಲುಗಳ ಪಾಠವನ್ನು ಸಾಹಿತ್ಯದ ದೃಷ್ಠಿಯಿಂದ ಗಮನಿಸುವುದಕ್ಕಿಂತಲೂ ಮೊದಲು ಶಾಸನ ಸಾಹಿತ್ಯಕ್ಕಿರುವ ಇತಿ–ಮಿತಿಗಳನ್ನು ಗುರುತಿಸಬೇಕು. ಈ ಹಿನ್ನಲೆಯಲ್ಲಿ ವೀರಗಲ್ಲುಗಳ ಪಾಠ ಎಷ್ಟರ ಮಟ್ಟಿಗೆ ಸಾಹಿತ್ಯವೆಂದು ಅನಿಸಿಕೊಳ್ಳಲು ಯೋಗ್ಯವಾಗಿದೆ ಎಂಬುದನ್ನು ಪರಿಶೀಲಿಸುವುದು ಉಚಿತ.

ಇತರ ಶಾಸನ ಫಲಕಗಳನ್ನು ಗಮನಿಸಿದಾಗ, ವೀರಗಲ್ಲುಗಳನ್ನು ಬರೆದ ಶಾಸನಕಾರರಿಗಿಂತಲೂ ಹೆಚ್ಚಿನ ಅವಕಾಶ ಸಹಜವಾಗಿ ಇತರೇ ಶಾಸನ ಕವಿಗಳಿಗಿದ್ದಂತೆ ತೋರುತ್ತದೆ. ವೀರಗಲ್ಲಿನ ಪಾಠವನ್ನು ವೀರಗಲ್ಲಿನ ಮೇಲೆ ಶಿಲ್ಪದ ನಡುವೆ ಇರುವ ಪಟ್ಟಿಕೆಗಳಲ್ಲಿ ಕೆತ್ತಲಾಗುತ್ತಿತ್ತು. ಕೆಲವೊಮ್ಮೆ ಸ್ಥಳಾವಕಾಶ ಇರುವಡೆಗಳಲ್ಲಿ ಕೆತ್ತಿರುವ ನಿದರ್ಶನಗಳುಂಟು. ಈ ಸ್ಥಳವಕಾಶಕ್ಕೆ ತಕ್ಕಂತೆ ಶಾಸನಕಾರ ಪಾಠವನ್ನು ಸಿದ್ಧಮಾಡಬೇಕಿತ್ತು ಬಹುಶಃ ಈ ಕಾರಣದಿಂದಾಗಿ ವೀರಗಲ್ಲುಗಳ ಪಾಠ ಸಹಜವಾಗಿ ಇತರ ಶಾಸನಗಳ ಪಾಠಕ್ಕಿಂತಲೂ ಕಿರಿದಾಯಿತೆಂದು ತೋರುತ್ತದೆ.

ವೀರಗಲ್ಲು ಮುಖ್ಯವಾಗಿ ವೀರನ ಪರಾಕ್ರಮವನ್ನು ಎತ್ತಿರುವ ಸ್ಮಾರಕ. ಅದುದರಿಂದ ಇಲ್ಲಿ ವೀರನಿಗೆ ಪ್ರಾಮುಖ್ಯ. ಇತರ ದಾನಶಾಸನಗಳಲ್ಲಿ ಸಾಮಾನ್ಯವಾಗಿ ದೊರೆಯುವ ಅರಸನ ವಂಶಾವಳಿ, ನಾಡು, ದೇಶ ಮುಂತಾದವುಗಳ ಅನವಶ್ಯಕ ವರ್ಣನೆ ಇಲ್ಲಿ ಕಂಡು ಬರುವುದಿಲ್ಲ. ವೀರಗಲ್ಲುಗಳು, ವೀರನು ಯಾವ ಯುದ್ಧದಲ್ಲಿ ಯಾರ ಪರವಾಗಿ, ಹೇಗೆ ಹೋರಾಡಿ ಮಡಿದ ಎಂಬ ಅಂಶವನ್ನು ಮಾತ್ರ ಕಾವ್ಯಮಯವಾಗಿ ತಿಳಿಸುತ್ತದೆ. ಆ ನಂತರ ವೀರನ ಮನೆಯವರಿಗೆ ಬಿಟ್ಟ ದತ್ತಿಯ ಪ್ರಸ್ತಾಪ ಬರುತ್ತದೆ. ಇದಾದನಂತರ ಇತರೇ ದಾನಶಾಸನಗಳಂತೆ ಇಲ್ಲಿಯೂ ಶಾಪಾಶಯಗಳು ಇರುತ್ತವೆಯಾದರೂ ಅಲ್ಲಿನ ಹಾಗೆ ಸುದೀರ್ಘವಾಗಿ ಬರುವುದಿಲ್ಲ. ಒಂದೋ, ಎರಡೋ ವಾಕ್ಯಗಳಲ್ಲಿ ಅಥವಾ ಒಂದು ಶ್ಲೋಕದ ಉಲ್ಲೇಖದಲ್ಲಿ ಈ ಭಾಗವು ಪೂರ್ಣವಾಗುತ್ತದೆ. ಆನಂತರ ಬಹು ವಿವರವಾಗಿ ಶಾಸನಕಾರನ ಶಿಲ್ಪಿಯ ಹೆಸರು ಇರುತ್ತವೆ.

ವೀರಗಲ್ಲುಗಳ ಶಿಲ್ಪಿಗಳು ವಿಷಯ ನಿರೂಪಣೆಗೆ ಮೂರು ಹಂತಗಳ ಒಂದು ಸೂತ್ರವನ್ನು ಅನುಸರಿಸಿದಂತೆಯೇ ವೀರಗಲ್ಲುಗಳ ಶಾಸನಕಾರರೂ ಎರಡು ವಿಭಾಗಗಳನ್ನು ಮಾಡಿಕೊಂಡರು ಮೊದಲು ಭಾಗದಲ್ಲಿ ವೀರನು ಯಾವ ಯುದ್ಧದಲ್ಲಿ, ಏಕೆ, ಯಾರ ಪರ, ಹೇಗೆ, ಹೋರಾಡಿ ಮಡಿದ ಎಂಬುದೂ, ಪರಾಕ್ರಮದಿಂದ ಹೋರಾಡಿ ಮಡಿದ ವೀರನನ್ನು ಅಪ್ಸರೆಯರು ಹೇಗೆ ಸ್ವರ್ಗಕ್ಕೆ ಕೊಂಡೊಯ್ದರು ಎಂಬ ನಿರೂಪಣೆಯೂ ಇರುತ್ತದೆ. ಎರಡನೆಯ ಭಾಗದಲ್ಲಿ ವೀರನಿಗೆ ಬಿಟ್ಟ ದತ್ತಿಯ ವಿಷಯ ವೀರಗಲ್ಲನು ನಿಲ್ಲಿಸಿದವರ ಪ್ರಸ್ತಾಪ ಇರುತ್ತದೆ. ಮೊದಲನೆಯ ಭಾಗದಲ್ಲಿ ಮಾತ್ರ ವೀರಗಲ್ಲಿನ ಶಾಸನ ಕಾರನಿಗೆ ತನ್ನ ಪ್ರತಿಭೆಯನ್ನು ತೋರಿಸುವುದಕ್ಕೆ ಅವಕಾಶ ಅದ್ದರಿಂದ ಈ ಭಾಗ ಸಾಮಾನ್ಯವಾಗಿ ಪದ್ಯಮಯವಾಗಿರುತ್ತದೆ. ನಮ್ಮ ಈ ಅಭಿಪ್ರಾಯವನ್ನು ಚಂಪೂ ಶೈಲಿಯಲ್ಲಿರುವ ವೀರಗಲ್ಲುಗಳ ಪಾಠವನ್ನು ಉದ್ದೇಶಿಸಿ ಹೇಳುತ್ತಿದ್ದೇವೆ. ಎಲ್ಲಕಾಲದ ಎಲ್ಲಾ ವೀರಗಲ್ಲುಗಳ ಪಾಠವನ್ನು ನಿರ್ದೇಶಿಸಿದಾಗ ಈ ಅಭಿಪ್ರಾಯ ಸಮಂಜಸವಲ್ಲ ಎಂಬ ಅಂಶವನ್ನು ಮರೆಯಬಾರದು.

ವೀರಗಲ್ಲುಗಳ ಪಾಠವನ್ನು ಗಮನಿಸಿದಾಗ ಮುಖ್ಯವಾಗಿ ಕಂಡುಬರುವ ಅಂಶವೆಂದರೆ ವೀರರ ಸ್ವಾಮಿ ನಿಷ್ಠೆ ಅಥವಾ ವೀರರ ಪರೋಪಕಾರ ಮನೋಧರ್ಮ. ಈ ಒಂದು ಅಂಶಕ್ಕೆ ಪೂರಕವಾಗಿ ವೀರನ ಪರಾಕ್ರಮದ ವರ್ಣನೆ ಬರುತ್ತದೆ. ವೀರನ ಪರಾಕ್ರಮವನ್ನು ಪರಿಣಾಮಕಾರಿಯಾದ ರೀತಿಯಲ್ಲಿ ಅಭಿವ್ಯಕ್ತ ಮಾಡುವುದರ ಸಲುವಾಗಿ ಶಾಸನಕಾರರು ಹಲವಾರು ತಂತ್ರಗಳನ್ನು ಬಳಸಿರುವುದುಂಟು. ವೀರನು ಮಾಡಿದ ಹೋರಾಟದ ನೇರವಾದ ಚಿತ್ರಣ ವೀರನು ಮಾಡಿದ ಹೋರಾಟದ ಫಲವಾಗಿ ಯುದ್ಧರಂಗದಲ್ಲಿನ ಧಾರುಣಸ್ಥಿತಿಯ ಚಿತ್ರಣ ಶತ್ರುಪಕ್ಷದವರ ಆಸಹಾಯಕ ಸ್ಥಿತಿಯ ಚಿತ್ರಗಳು ಇತ್ಯಾದಿಗಳ ಮೂಲಕ ವೀರನ ಪರಾಕ್ರಮದ ಪರಿಣಾಮಕಾರಿಯಾದ ಚಿತ್ರಣವನ್ನು ನೀಡಿರುತ್ತಾರೆ. ಇದೇ ರೀತಿಯ ತಂತ್ರವಾದ ಮತ್ತೊಂದು ರೀತಿಯ ತಂತ್ರ, ವೀರನ ಪರಾಕ್ರಮವನ್ನು ಸಾರುವ ಆತನ ಬಿರುದಾವಳಿಗಳ ಸರವನ್ನೇ ಪೋಣಿಸುವುದು. ಸಿಂಹಾವಲೋಕನ ಕ್ರಮದಲ್ಲಿ ಮಡಿದ ವೀರನು ಹಿಂದಿನ ಹೋರಾಟಗಳಲ್ಲಿ ತೋರಿದ ಪರಾಕ್ರಮವನ್ನು ವರ್ಣಿಸುವುದು. ವೀರತ್ವ, ಸ್ವಾಭಿಮಾನಗಳನ್ನು ಎತ್ತಿಹಿಡಿಯುವ ಸಂಸ್ಕೃತ ಶ್ಲೋಕಗಳನ್ನು ಉದ್ದರಿಸಿ ಅವು ಮಡಿದ ವೀರನ ಅದರ್ಶವಾಗಿತ್ತು ಎಂಬಂತೆ ವರ್ಣಿಸುವುದು. ಈ ಮೂಲಕ ವೀರನ ವೀರತ್ವಕ್ಕೆ ಅದರ್ಶದ ಮೆರುಗೆನ್ನೀಯುವ ಪ್ರಯತ್ನವನ್ನು ಕವಿಗಳು ಮಾಡಿದ್ದಾರೆ.

ಸ್ವಾಮಿನಿಷ್ಠೆ ಪ್ರಾಚೀನ ಕರ್ನಾಟಕದ ಜನರ ಜೀವನದ ಮೌಲ್ಯಗಳಲ್ಲಿ ಒಂದಾಗಿತ್ತು. ಯಾವುದೇ ದೇಶದ ಸಾಮ್ರಾಜ್ಯಶಾಹಿ ಆಡಳಿತ ವ್ಯವಸ್ಥೆಯಲ್ಲಿ ಸ್ವಾಮಿನಿಷ್ಠೆ ಜೀವನದ ಒಂದು ಮೌಲ್ಯವಾಗಿ ಪರಿಗಣಿತವಾಗುವುದು. ಸಾಮಾನ್ಯ ಅಂಶ, ಪ್ರಾಚೀನ ಕರ್ನಾಟಕದ ವೀರರ ಸ್ವಾಮಿ ನಿಷ್ಠೆಯನ್ನು ಪಂಪನು ತನ್ನ ವಿಕ್ರಮಾರ್ಜುನವಿಜಯದಲ್ಲಿ ಬಹುಸಮರ್ಥವಾಗಿ ನಿರೂಪಿಸಿದ್ದಾನೆ. ಅದು ಮಹಾಭಾರತದ ಕಥೆಯ ಅಂಶವಾಗಿ ಅಲ್ಲಿ ವರ್ಣಿತವಾಗಿದ್ದರೂ ಅದು ವಾಸ್ತವವಾಗಿ ಕರ್ನಾಟಕದ ಯೋಧರ ಒಂದು ಚಿತ್ರಣವೇ ಆಗಿದೆ. ಎಂಬ ಅಂಶ ವೀರಗಲ್ಲುಗಳ ಪಾಠವನ್ನು ಗಮನಿಸಿದಾಗ ವೇದವಾಗುತ್ತದೆ. ತಮ್ಮನ್ನು ಸಾಕಿಸಲುಹಿದ ಅರಸರಿಗೆ ತಮ್ಮ ಜೀವನವನ್ನೇ ಮುಡುಪಾಗಿಟ್ಟು ಮಡಿದ ವೀರರ ವಾಸ್ತವ ಚಿತ್ರಣ ವೀರಗಲ್ಲುಗಳಿಂದ ಅಸಂಖ್ಯಾತವಾಗಿ ದೊರೆಯುತ್ತವೆ. ವೀರಗಲ್ಲಿನ ಪಾಠ ಎಷ್ಟೇ ಚಿಕ್ಕದಾಗಿರಲಿ ದೊಡ್ಡದಾಗಿರಲಿ ಗದ್ಯಾಮಯವಾಗಿರಲಿ ಪದ್ಯಮಯವಾಗಿರಲಿ ಈ ಅಂಶವನ್ನು ಹೇಳದೆ ಒಪ್ಪಿರುವುದು ಅಪರೂಪದ ಸಂಗತಿ.[೨೨]

ವೀರನ ಪರಾಕ್ರಮವನ್ನು ನಮ್ಮ ಮನಸ್ಸಿನಲ್ಲಿ ಅಚ್ಚಳಿಯದಂತೆ ನಿಲ್ಲುವಂತೆ ಮಾಡಲು, ವೀರನ ಸಾವಿನಲ್ಲಿ ಒಂದು ಅರ್ಥವನ್ನು ಕಾಣುವುದಕ್ಕೆ ಸಹಾಯವಾಗಲು, ಕೆಲವಾರು ವೀರಗಲ್ಲುಗಳ ಶಾಸನಕಾರರು ವೀರರ ಜೀವನವನ್ನು ಸೊಗಸಾದ ರೀತಿಯಲ್ಲಿ ವ್ಯಾಖ್ಯಾನಮಾಡಿದ್ದಾರೆ. ಅಂದಿನ

ವೀರರ ಸಾವಿಗೆ ಅರ್ಥವಂತಿಕೆಯನ್ನು ಕೊಡುತ್ತಿದ್ದ ಒಂದು ರೀತಿ ಹೀಗೆದೆ "ಧರೆಯಾಳು ಮಾರೂಂತದವಟಯಿರುಳಹಗಲರಿಸಿ ತೊಳಲ್ದು ಕಾಣದೆ ಸೋಯಂ ಸುರಲೋಕದೊಳಗೆ ಕಲಿಗಳನರಸುವ ತೆರದಿಂದ ಯಿಂದ್ರಪುರಮಂ ಪೊಕ್ಕ" ಈ ರೀತಿಯ ವರ್ಣನೆಯನ್ನು ಕಾವ್ಯಗಳಲ್ಲಿ ಗಮನಿಸಬಹುದು.

ವೀರರು ಪ್ರಾಣ ತೊರೆಯುವ ಸನ್ನಿವೇಶಗಳು ಅನೇಕ ಮುಖ್ಯವಾಗಿ ಒದಗುತ್ತಿದ್ದವು. ಮಂಡ್ಯ ಜಿಲ್ಲೆಯ ಶಾಸನಗಳನ್ನು ಪರಿಶೀಲಿಸಿದಾಗ ಪ್ರಾಣಾರ್ಪಣೆಯ ಏಳು ಪ್ರಮುಖ ಸಂಧರ್ಭಗಳು ನಮಗೆ ಗೋಚರಿಸುತ್ತವೆ.

* **ದೊರೆಯ ಪರವಾಗಿ ರಣರಂಗದಲ್ಲಿ ಕಾದುವುದು**
* **ತನ್ನ ಆಶ್ರಯದಾತನಿಗಾಗಿ ಸ್ವಯಂ ಪ್ರೇರಣೆಯಿಂದ ಪ್ರಣಾರ್ಪಣೆ ಮಾಡುವುದು**
* **ಗ್ರಾಮದ ದನಕರುಗಳು ರಕ್ಷಿಸಿಕೊಳ್ಳುವುದು**
* **ಪರವೂರಿನವರು ಏನೋ ಕಾರಣದಿಂದ ತಮ್ಮ ಊರ ಮೇಲೆ ದಾಳಿ ನಡೆಸಿದಾಗ ಒಟ್ಟಾಗಿ ಗ್ರಾಮ ರಕ್ಷಣೆಗೆ ಮುಂದಾಗುವುದು.**
* **ಕ್ರೂರ ಮೃಗಗಳೊಂದಿಗೆ ಕಾದಾಡುವುದು**
* **ಕಳ್ಳರೊಡನೆ ಹೋರಾಡುವುದು**
* **ಗ್ರಾಮದ ಸ್ತ್ರೀಯರ ಅಪಹರಣ ಅಥವಾ ಮಾನಾಪಹರಣವಾಗುವುದನ್ನು ತಪ್ಪಿಸುವುದು**

ಅಲೇನಹಳ್ಳಿಯ ಕ್ರಿ.ಶ.೯ನೇ ಶತಮಾನದ ಶಾಸನದಲ್ಲಿ (ಕೃಪೆ ೧೯) ನೀತಿವಾಕ್ಯ ಪೆರ್ಮ್ಮಾನಡಿಯು ನಡೆಸಿದ ಕಲವೂರ ಕಾಳಗದಲ್ಲಿ ಬಮ್ಮನು ಪ್ರಾಣಕೊಟ್ಟನೆಂದಿದೆ. ಹಳ್ಳಿಯ ನಾಯಕನ ಕ್ರಿ.ಶ.೧೨ನೆಯ ಶತಮಾನದ ಶಾಸನದಲ್ಲಿ (ಕೃಪೇ ೬೭) ಗುಳೆಯ ನಾಯಕನ ಆಳು, ಕುರುಳೆಯ ನಾಯಕನ ಮಗ ಮಚನ ಎಂಬಾತನು ಸಿಂಗ ಕಟ್ಟಕದ ಬವರದಲ್ಲಿ ಬಿದ್ದನೆಂದಿದೆ. ಅದೇ ಕಾಲದ ಹೊನ್ನೇನಹಳ್ಳಿಯ ಶಾಸನದಲ್ಲಿ (ನಾ.ಮ.೧೦೫) ಹಾಡವಾಳ ಮಸಣಯ್ಯನು ಸತ್ತ ವೃತ್ತಾಂತವಿದೆ. ಹೊಯ್ಸಳ ದೇವನು_ದಂಡನಾಯಕ ಮಸಣಯ್ಯನ ಮೇಲೆ ದಂಡೆತ್ತಿ ಹೋಗಿ ಕಪಿಲಾನದಿಯ ತೀರದಲ್ಲಿ ಯುದ್ಧ ಮಾಡಿದನು ಆಗ ಹಾಡವಾಳ ಮಸಣಯ್ಯನು ದೊರೆಯ ಪರವಾಗಿ ಕಾದಾಡಿ, ಹಲವರನ್ನು ಇಂದು ಸುರಲೋಕಪ್ರಾಪ್ತನಾದನು ಎಂದು ಅಲ್ಲಿ ಬರೆದಿದೆ.[೨೫]

ಕೆಲವು ವೀರಶಾಸನಗಳಲ್ಲಿ ಸತ್ತವೀರನ ಗುಣಗಾನ ನಡೆದಿರುವುದೂ ಉಂಟೂ. ತೆಂಗಿನಘಟ್ಟದ ಸಾವಂತ ಕಾಳಯ್ಯನಿಗಾಗಿ ನೆಟ್ಟ ವೀರಗಲ್ಲಿನಲ್ಲಿ (ಕೃಪೇ ೪೩ ಕ್ರಿ.ಶ. ೧೧೧೭) ಅವನನ್ನು ಸಂಗ್ರಾಮ ಸಹಸ್ರಬಾಹು, ಕದನತ್ರಿಣೇತ್ರ, ಕರೆದೀವದಾನಿ, ಸುಭಟರಾದಿತ್ಯ, ಕಲಿಯುಗ

ಮಾರ್ತಾಂಡ, ಪರನಾರಿದೂರ, ರಣರಂಗಧೀರ, ಸತ್ಯರಾಧೇಯ ಎಂದು ಕೊಂಡಾಡಲಾಗಿದೆ. ಅಗ್ರಹಾರ ಬಾಚಹಳ್ಳಿಯ ಕ್ರಿ.ಶ. ೧೧೭೯ರ ಹೊಯ್ಸಳ ವೀರ ಬಲ್ಲಾಳನ ಆಳ್ವಿಕೆಯ ವೀರಗಲ್ಲೊಂದರಲ್ಲಿ (ಕೃಪೇ ೧೭೭) ಸಾಮಂತ ಬಬ್ಬೆಯ ನಾಯಕನು ರಾಜನ ಪರವಾಗಿ ಕಾದಾಡಿ ಪ್ರಾಣತೆತ್ತ ವೃತ್ತಾಂತವಿದೆ ಬಲ್ಲಾಳ ದೇವನು ದೋರಸಮುದ್ರದಲ್ಲಿನ ಬೀಡಿನಲ್ಲಿದ್ದು, ಬಬ್ಬೆಯ ನಾಯಕನನ್ನು ಕರೆದು ಸಂಕಮದೇವನ ಸೈನ್ಯದೊಂದಿಗೆ ಕಾದಾಡಬೇಕು, ಎಂದು ಆಜ್ಞೆಮಾಡಿ ವೀಳೆಯವನ್ನು ಕೊಟ್ಟು ಬೀಳ್ಕೊಟ್ಟನು. ಅವನಾದರೂ **'ಮಹಾಪ್ರಸಾದ'** ಎಂದು ನಡೆದು ರಣರಂಗದಲ್ಲಿ ವೀರಭಟರನ್ನು ನವಖಂಡವಾಗುವಂತೆ ತರಿದನು. ಅವರ ಮುಂಡಗಳು ಕುಣಿದಾಡಿದೆವು. ರಕ್ತದ ಕಡಲು ಹರಿಯಿತು. ಆಗ ಬೇರೊಂದು ಶಸ್ತ್ರವು ಎದೆಗೆ ಬಂದು ತಾಗಲಾಗಿ, ಬಬ್ಬೆಯ ನಾಯಕನು ವೀರಸ್ವರ್ಗವನ್ನು ಸಾಧಿಸಿ ದೇವಸುಂದಯರಿಗೆ ಗಂಡನಾಗಿ ದೇವಲೋಕವನ್ನು ಸೇರಿದನು ಎಂದು ಅಲ್ಲಿ ವಿವರಿಸಿದೆ. ಇಲ್ಲಿ ಕೆಲವೇ ವಾಕ್ಯಗಳಲ್ಲಿ ಬಬ್ಬೆಯ ನಾಯಕನು ಮೆರದ ಶೌರ್ಯದ ಉದಾತ್ತ ಚಿತ್ರ ನಮ್ಮ ಕಣ್ಣ ಮುಂದೆ ಕಟ್ಟುತ್ತದೆ.

ಚುಂಚನಹಳ್ಳಿಯ ಕ್ರಿ.ಶ.೧೨೦೫ರ ಶಾಸನದಲ್ಲಿ (ನಾ.ಮಾ ೧೧೧) ರಾಮೆಯ ನಾಯಕನ ವೀರಸಿರಿಯ ಬಣ್ಣನೆಯಿದೆ. ಆತನು ಎಡವಾರದ ರಾಚಿನಾಯ್ಕನೊಡನೆ ಬೆಲುಹೊರ ಎಂಬಲ್ಲಿ ಕಾದಿಸತ್ತನು ಎಂದು ಅಲ್ಲಿ ಬರೆದಿದೆ. ಕಸಲಗೆರೆಯ ಕ್ರಿ.ಶ. ೧೨೬೦ರ ಶಾಸನದಲ್ಲಿ (ನಾಮಂ ೧೭೨) ಗುಜ್ಜಯ ನಾಯ್ಕನೆಂಬಾತನು ರಣರರಗಧೀರನಾಗಿ ಕಾದಿ ಮಡಿದ ವೃತ್ತಾಂತವಿದೆ. ಅದರಲ್ಲಿ ಆತನ ತಂದೆ ಸಾಮಂತ ಮಾಚಿದೇವ ಮತ್ತು ತಾಯಿ ಕೇತಲದೇವಿಯರ ಗುಣಗಾನವೂ ಕಾವ್ಯತ್ಮಕವಾಗಿ ಕೂಡಿಕೊಂಡಿದೆ. ಗುಜ್ಜಯನಾಯ್ಕನ ಸಾಹಸ ವರ್ಣನೆಯಂತೂ ಬಹು ಮನೋಹರಿಯಾಗಿದೆ. ಶತ್ರಾಸಮುದಾಯವೆಂಬ ಕತ್ತಲೆಗೆ ಅವನು ಚಂದ್ರನಂತೆ ಮದ್ದಾನೆಗಳಿಗೆ ಅವಳು ಸಿಂಹದಂತೆ ಶತ್ರು ಪರ್ವತಗಳಿಗೆ ಅವನು ವಜ್ರಾಯುಧದಂತೆ ಇದ್ದನಂತೆ.

ಅರಿಕುಲತಿಮಿರಸಶಾಂಕಂ

ಅರಿಮದಕರಿಹರಿಯೆನಿಪ್ಪಸಿತಗರಗಂಡಂ

ಅರಿಗಿರಿವಜ್ರಂ ಗುಜ್ಜಂ

ಗರಿಗಳು ಖಳವಳ್ಸಿದಿಹರೆ ವಸುಧಾಥಳದೊಳು॥

ಚಿಟ್ಟನಹಳ್ಳಿಯ ಕ್ರಿ.ಶ. ೧೩೦೩ರ ಶಾಸನದಲ್ಲಿ ಹಡಪದ ಸಾಯಣ್ಣನು ಮಡಿದ ವೃತ್ತಾಂತವಿದೆ. ಬೆಮತೂರಕಲ್ಲಿನ ಸೋಮೆಯದಣ್ಣಾಯಕನು ಹೊಳಲಕೆರೆಯಲ್ಲಿ ಕೆಂಪಲನ ಮೇಲೆ ಯುದ್ದಕ್ಕೆ ಹೋದನು. ಆ ಹೊತ್ತಿನಲ್ಲಿ ಹಡಪದ ಸಾಯಣ್ಣನು ಕೆಂಪಲನ ಕೂಡ ಕಾದಿ ರಣದೊಳು

ಬಿದ್ದನು ಎಂದು ಅಲ್ಲಿ ಹೇಳಿದೆ. ಹೀಗೆ ರಣರಂಗದಲ್ಲಿ ಪ್ರಾಣದ ಹಂಗು ತೊರೆದು ಕಾದಿಬಿದ್ದ ಅನೇಕ ವೀರರ ವಿಷಯಗಳು ಮಂಡ್ಯ ಜಿಲ್ಲೆಯ ಶಾಸನಗಳಲ್ಲಿ ಕೂಡಿಕೊಂಡಿವೆ.

ಸ್ವಯಂ ಪ್ರೇರಣೆಯಿಂದ ತಮ್ಮ ದೊರೆಗಳಿಗಾಗಿ ಅತ್ಮಹತ್ಯೆ ಮಾಡಿಕೊಳ್ಳುತ್ತಿದ್ದ ವೀರರ ವಿಚಾರ ರೋಮಾಂಚನಕಾರಿಯಾದುದು. ಅಂಥವರನ್ನು ವೇಳೆವಾಳಿ. ಗರುಡ ಎಂದು ಕರೆಯಲಾಗಿದೆ. ತಮ್ಮ ಒಡೆಯರು ಮಡಿದರೆ ಈ ಗರುಡರು ತಮ್ಮ ಪರಿವಾರ ಸಹಿತ ಅಥವಾ ತಾವೊಬ್ಬರು ಪ್ರಾಣವನ್ನು ಒಪ್ಪಿಸುವ ಪ್ರತಿಜ್ಞೆಯನ್ನು ಮೊದಲೇ ಕೈಗೊಂಡಿರುತ್ತಿದ್ದು, ತರುವಾಯದಲ್ಲಿ ಅದನ್ನ ಪೂರೈಸುತ್ತಿದ್ದರು. ಈ ಪರಮಾದ್ಭುತವಾದ ಸ್ವಾಮಿ ಭಕ್ತಿಗೆ ಅಗ್ರಹಾರ ಬಾಚಹಳ್ಳಿಯ ಕ್ರಿ.ಶ.೧೨೫೭ರ ಸ್ಮಾರಕಗಳು (ಕೃಪೇ ೮೨) ಸಾಕ್ಷಿಯನ್ನೊದಗಿಸುತ್ತವೆ. ಅಲ್ಲಿನ ಹುಣಸೇಶ್ವರ ದೇವಾಲಯದ ಹೊರೆಗೆ ಎತ್ತರವಾದ ಮೂರು ಗರುಡಗಲ್ಲುಗಳಿವೆ. ಅವುಗಳ ತುದಿಯಲ್ಲಿ ನಿಂತ ಭಂಗಿಯ ಆನೆಗಳಿವೆ. ಆ ಪೈಕಿ ಮಧ್ಯದ ಕಂಬ ಆನೆಯ ಮೇಲೆ ಒಬ್ಬ ವೀರನ ಹಿಂದೆ ಒಬ್ಬ ಮಹಾಸತಿ ಕುಳಿತಿದ್ದಾಳೆ. ಉಳಿದೆರಡರ ಮೇಲೆ ಒಬ್ಬರ ಹಿಂದೊಬ್ಬರಂತೆ ಮೂವರು ವೀರರಿದ್ದಾರೆ ಮೂರರಲ್ಲೂ ಮೊದಲಿಗ ಕುಳಿತ ವೀರನು ಅಯಾ ಆನೆಯ ಕುಂಭಸ್ಥಳದ ಮೇಲೆ ಕುಳಿತಿರುವ ಗರುಡನೊಂದಿಗೆ ಕಾದಾಡುತ್ತಿರುವಂತಿದೆ. ಆ ಕಂಬದ ಬುಡದಲ್ಲಿ ವಿವರಗಳಿವೆ.

ಸಿವನೆಯನಾಯಕ, ಲಖ್ಖೆಯನಾಯಕ, ಕಂನೆಯ ನಾಯಕ, ಸಿಂಗಯನಾಯಕ ಎಂಬ ವೀರರು ಬೇರೆ ಬೇರೆ ಕಾಲಗಳಲ್ಲಿ ಆಳಿದ ತಮ್ಮ ಆಶ್ರಯದಾತ ಹೊಯ್ಸಳ ದೊರೆಗಳಿಗಾಗಿ ಪರಿವಾರ ಸಮೇತ ಪ್ರಾಣತೆತ್ತ ಘಟನೆ ಅಲ್ಲಿದೆ. ಆ ವೀರರು ವಂಶ ಪಾರಂಪರ್ಯವಾಗಿ ದೊರೆಗಳ ಸೇವೆಯಲ್ಲಿದ್ದಿರಬಹುದು. ಸೋಮೇಶ್ವರ ದೇವನೊಡನೆ ಕಂನೆಯನಾಯಕನು ಉಮ್ಮವ್ವೆ, ಜವನವ್ವೆ, ಕಲ್ಲವ್ವೆಯರೆಂಬ ಮೂವರು ಮಡದಿಯರು ಇಪ್ಪತ್ತೊಂದು ಲೆಂಕರು, ಹತ್ತು ಲೆಂಕತಿಯರೊಡಗೂಡಿ ಗಜಮಸ್ತಕದಲ್ಲಿ ಆರು ಬಾರಿ ಗರುಡನನಪ್ಪಿ ಭಾಷೆಯನ್ನು ಹೇಗೆ ಪೂರೈಸಿದೆನು ಎಂಬುದನ್ನು ನೋಡಿ; ತನ್ನೊಡೆಯನು ಕಾಲವಾದೊಡೆನೆ ಕಂನೆಯನು ದೊರೆಯ ಲೆಂಕನಾದ 'ನಾನಿನ್ನು ಬದುಕಿ ಏನು ಬಂತು' ಎಂದು ಭಾವಿಸಿ ಅವಿಚಲನಾಗಿ ತನ್ನ ತಲೆಯನ್ನು ಕಡಿದುಕೊಂಡನು. ಎಡಗಾಲಿಗೆ ತೊಟ್ಟ ಹೊನ್ನಿನ ತೊಡವು ಹೊಳೆಯುತ್ತಿರುವಲ್ಲಿ ಅವನು ಬೊಂಬೆಯಂತೆ ಚಲಿಸದೆ ತಪೋಮಗ್ನನಾಗಿದ್ದನೋ ಎಂಬಂತೆ ನಿಂತೇ ಇದ್ದನು. ಅವನ ಸ್ಥೈರ್ಯವನ್ನು ಎಲ್ಲರೂ ಕೊಂಡಾಡಿದರು. ಅವನ ಮಡದಿಯರು ಆರತಿ ಬೆಳಗಿದರೋ ಎಂಬಂತೆ ತಮ್ಮ ಪಂದಲೆಗಳನ್ನು ಒಪ್ಪಿಸಿದರು ಎಂದು ಅಲ್ಲಿ ಹೇಳಿದ. ಈ ವಿವರಣೆಗಳು ಮೈನವಿರೇಳಿಸುತ್ತವೆ. ಸ್ವಾಮಿ ಭಕ್ತಿಯಲ್ಲಿ ಈ ಗರುಡರು ಮಹಾವಿಷ್ಣುವಿನ ವಾಹನವಾದ ಗರುಡನಿಗೆ ಯಾವ ಮಟ್ಟಿಗೂ ಕಡಿಮೆಯಿಲ್ಲ

ಎಂಬುದನ್ನು ಸೂಚಿಸಲು ಅವರು ಗರುಡನೊಂದಿಗೆ ಹೋರಾಡುತ್ತಿರುವಂತೆ ಕಂಡರಿಸಿರಬೇಕು ಎಂದು ವಿದ್ವಾಂಸರು ಹೇಳಿದ್ದಾರೆ. ಆ ಗರುಡಗಂಬಗಳು **ವೀರಗಲ್ಲು, ಮಾಸ್ತಿಕಲ್ಲು** ಎರಡಕ್ಕೂ ಸಂಕೇತವಾಗಿ ನಿಲ್ಲುತ್ತವೆಂದು ಹೇಳಬಹುದು.

ಇಂತಹ ಇನ್ನೂ ಕೆಲವು ಉದಾಹರಣೆಗಳು ಈ ಜಿಲ್ಲೆಯಲ್ಲಿ ದೊರೆಯುತ್ತವೆ. ಕ್ರಿ.ಶ.೯ನೆಯ ಶತಮಾನಕ್ಕೆ ಸೇರಿದ್ದೆನ್ನಬಹುದಾದ ಬೇವಿನಕುಪ್ಪೆಯ ವೀರಗಲ್ಲಿನ ವಿಷಯ (ಪಾಂಪು ೨೫೩) ಉಲ್ಲೇಖನೀಯ. ಪೃಥ್ವೀಗಂಗನಿಗೆ ಬೀರಕ್ಕನೆಂಬ ಸೂಳೆಯಿದ್ದಳು. ಅವಳ ಮಗ ಎರೆಕಳಿಂಗ, ಆದರೆ ಶೌರ್ಯಕ್ಕೇನೂ ಊನವಿರಲಿಲ್ಲ. ಅವನು ದೊರೆಯ ಮುಂದೆ ತಲೆಕಡಿದುಕೊಂಡು ಸತ್ತ ಸಂಗತಿ ಅಲ್ಲಿದೆ. "ಶ್ರೀ ಪೃಥುವೀ ಗಂಗನ ಸೂಳೆ ಬೀರಕ್ಕನ ಮಗಂ ಎರೆಕಾಳಿಂಗಂ ಪ್ರಥುವಿಗಂಗ ಮೊಗವಟ್ಟೈ ದೊಳೆ ತಲೆಗಳಿಯಿಸಿ ಸತ್ತಂ" ಎಂಬುದು ಆ ಶಾಸನದ ಪೂರ್ಣಪಾಠ ಹೆಚ್ಚಿನ ವಿವರಗಳಿಲ್ಲ. ಕಲ್ಲುಣಿಯ ಕ್ರಿ.ಶ.೧೦ನೇ ಶತಮಾನದ ವೀರಗಲ್ಲಿನಲ್ಲಿ (ಮವ ೧೪೬) ಎಮ್ಮೆ ಬಸವನೆಂಬುವನು ತನ್ನ ಒಡೆಯನಾದ ಎರೆಯಂಗಣ ಯುದ್ಧದಲ್ಲಿ ಸತ್ತಾಗ ತನ್ನ ಪ್ರತಿಜ್ಞೆಯ ಪೂರೈಕೆಗಾಗಿ ತಾನೆ ತಲೆಕಡಿದುಕೊಂಡನೆಂಬ ಸಂಗತಿಯಿದೆ.

ಸೂಳೆ ಎಂಬ ಪದವನ್ನು ಹಿಂದೆ ಯಾವುದೇ ಸಂಕೋಚವಿಲ್ಲದೆ ಬಳಸುತ್ತಿದ್ದರು. ಅದರೆ ಈಗ ಆ ಪದವನ್ನು ಬಳಸಲು ಸಾಧ್ಯವಾಗುತ್ತಿಲ್ಲ ಉದಾಹರಣೆಗೆ ಮಂಡ್ಯ ಜಿಲ್ಲೆಯ "ಕನ್ನಲಿ" ಎಂಬ ಊರಲ್ಲಿ ಒಂದು ಕೆರೆ ಇದೆ ಅದಕ್ಕೆ ಸೂಳೆಕೆರೆ ಎಂದು ಕರೆಯಲಾಗುತ್ತದೆ. ಅಂದರೆ ಒಬ್ಬ ಸೂಳೆಯಿಂದ ನಿರ್ಮಾಣಗೊಂಡಿದೆ. ಮಳವಳ್ಳಿ ಹಾಗೂ ನಾಗಮಂಗಲ ತಾಲ್ಲೂಕುಗಳಲ್ಲೂ ಸೂಳೆ ಕೆರೆಗಳಿವೆ.

ಗ್ರಾಮದ ದನಕರುಗಳನ್ನು ಕಳ್ಳರು ಒಗ್ಗೂಡಿಸಿ ಅಪಹರಿಸಿಕೊಂಡು ಹೋಗುತ್ತಿದ್ದರು. ಹಾಗಲ್ಲದೆ ಬೇರೊಂದು ನಾಡಿನವರು ಸೈನ್ಯ ಸಮೇತರಾಗಿಯೆ ಬಂದು ಗೋಗ್ರಹಣ ನಡೆಸುತ್ತಿದ್ದರು. ಇಂತಹ ಪ್ರಸಂಗಗಳು ಮಹಾಭಾರತದಲ್ಲಿ ದುರ್ಯೋಧನನು ವಿರಾಟನಗರಿಯಲ್ಲಿ ನಡೆಸಿದ ಗೋಗ್ರಹಣವನ್ನು ನೆನಪಿಗೆ ತರುತ್ತವೆ. ಗ್ರಾಮಗಳಲ್ಲಿ ನಡೆಯುತ್ತಿದ್ದ ಇಂತಹ ಅಪಹರಣ ಕಾರ್ಯಕ್ಕೆ **"ತುರುಗೋಳು"** ಎಂದು ಹೆಸರು. ಅಂತಹ ಹೊತ್ತಿನಲ್ಲಿ ವೀರರು ಕಳ್ಳರನ್ನು ಬೆನ್ನಟ್ಟಿ ಹೋಗಿಯೋ, ಸೈನ್ಯವಿದ್ದರೆ ಅದಕ್ಕೆ ರಾಯರಾಗಿ ವೀರಾವೇಶದಿಂದ ನಿಂತೋಹೋರಾಡಿ ತಮ್ಮ ತರುಗಳನ್ನು ಹಿಮ್ಮೆಟ್ಟಿಸುತ್ತಿದ್ದರು. ಕೆಲವರ ಪ್ರಾಣವೂ ಆಗ ಹೋಗುತ್ತಿತ್ತು. ಅಂತಹವರಿಗಾಗಿ ನೆಟ್ಟ ವೀರಶಾಸನಗಳು ಮಂಡ್ಯ ಜಿಲ್ಲೆಯ ಎಲ್ಲ ಭಾಗಗಳಲ್ಲೂ ಇವೆ. ಕ್ರಿ.ಶ.೯೬೩ರ ನಾಗಮಂಗಲದ ಶಾಸನದಲ್ಲಿ (ನಾಮಂ ೧೨೮) ರಾಜಯ್ಯನ ಮರಣವೃತ್ತಾಂತವಿದೆ. "ಸ್ವಸ್ತಿ ಶ್ರೀ ಮತೇ

ಗಂಗಿಗವುಣ್ಣನ ಮಗ ರಜಯ್ಯ ತುರುವನ್ನಕ್ಕಿಸಿ ಸತ್ತಂ" ಎಂದಷ್ಟೇ ಬರೆದಿದೆ. ಕ್ರಿ.ಶ.೧೧ನೆಯ ಶತಮಾನದ ಶಾಸನದಲ್ಲಿ (ಕೃಪೆ ೧೭) ಮಡಿವಳ್ಳನಾಗಿಯಣ್ಣನು ಕಳ್ಳರನ್ನು ಕೊಂದು ತುರುಗಳನ್ನು ಮಗುಳ್ಚಿ ಸ್ವರ್ಗಸ್ಥನಾದನು ಎಂದಿದೆ.

ಮೆಳ್ಳಹಳ್ಳಿಯ ಕ್ರಿ.ಶ. ೧೧೧೪ರ ವೀರಶಾಸನದಲ್ಲಿ (ಕೃಪೇ. ೧೧೪) ಮಳೆಯೂರ ತುರುಗಳನ್ನು ಬಡಿವರಸನು ಕೊಳ್ಳಲು ಬಿಟ್ಟಯ ಮಾರಯ್ಯನ ಮಗ ಸಟ್ಟಿಯಣ್ಣನು ತುರುಗಳನ್ನು ಮಗುಳ್ಚಿ ಹಲವರನ್ನು ಇರಿದು ಸತ್ತನು ಎಂದು ಹೇಳಿದೆ. ಕ್ರಿ.ಶ.೧೧೮೦ರ ಹೊನ್ನೇನಹಳ್ಳಿ ಶಾಸನದಲ್ಲಿ (ನಾಮಂ. ೧೦೦) ಹಡವಳ ಹೊನ್ನಯ್ಯ ಮತ್ತು ದೇಗುಲಗೌಂಡಿಯರ ಮಗ ಹೊನ್ನೇಗೌಡ ತುರುಗೋಳಿನಲ್ಲಿ ಪ್ರಾಣ ಬಿಟ್ಟ ಸಂಗತಿ ಬಂದಿದೆ. "ಹಲಬರನಿರೆದು ತುರವ ಮಗುಚಿ ಹಡವಳ ಮಗ ಹೋನ್ನೇಗೌಡ ಸುರಲೋಕ ಪ್ರಾಪ್ತನಾದನು" ಎಂದು ಅಲ್ಲಿ ಬರೆದಿದೆ. ಮಡುವಿನ ಕೋಡಿಯ ಕ್ರಿ.ಶ.೧೨೦೦ರ ಶಾಸನದಲ್ಲಿ (ಕೃಪೇ. ೧೧೧) ಮಹಾಪ್ರಭುಮಲ್ಲಿಯಣ್ಣ ಮತ್ತು ಅವರ ತಮ್ಮ ಬೀರವನ್ನು ಕೈಗೊಂಡು ಒಂದೇ ದಿನ ತುರುಗೋಳಿನಲ್ಲಿ ಕೈಲಾಸ ಪ್ರಾಪ್ತರಾದ ವಿಚಾರವಿದೆ.

ಹೀಗೆಯೇ ಕ್ರಿ.ಶ. ಸುಮಾರು ೧೧-೧೨ನೇ ಶತಮಾನದ ಬೇಗಮಂಗಲದ ಶಾಸನದಲ್ಲಿ (ನಾಮಂ ೧೩೭) ಎರೆಯಮ್ಮನೆಂಬಾತನು ಸತ್ತ ವಿಚಾರವಿದೆ. ಬಂಡೂರಿನ ಕ್ರಿ.ಶ.೧೨೧೪ರ ವೀರಗಲ್ಲಿನಲ್ಲಿ (ಮವ ೮) ಶಿವರಾಚಯ್ಯನೆಂಬಾತನು ಕಾದಿಬಿದ್ದ ಸಂಗತಿಯಿದೆ. ಆ ಹೊತ್ತಿನಲ್ಲಿ ಅವನ ಮೇಲೆ ಬಿದ್ದು ಕಾದಾಡಿದ ಅಂಕಣ, ಬೋರಣ, ಕಪಂಣ ಎಂಬ ಎದುರಾಳಿಗಳ ಹೆಸರೂ ಅಲ್ಲಿರುವುದು ಗಮನಾರ್ಹ. ಕ್ರಿ.ಶ.೧೩೧೪ರ ತಿಬ್ಬನಹಳ್ಳಿಯ ಶಾಸನಗಳಲ್ಲಿ (ನಾಮಂ ೧೬೧ ಮತ್ತು ೧೬೨) ಸ್ವಲ್ಪ ಹೆಚ್ಚಿನ_ವಿವರಗಳನ್ನು ಕಾಣಬಹುದಾಗಿದೆ. ಹೊಯ್ಸಳ ಚಕ್ರವರ್ತಿಯಾದ ವೀರಬಲ್ಲಾಳ ದೇವನು ಸಮುದ್ರವೇ ಮೇರೆಯಾಗುಳ್ಳ ಈ ಭೂಮಿಯನ್ನು ದೋರ ಸಮುದ್ರದ ಬೀಡಿನಲ್ಲಿದ್ದುಕೊಂಡು ಅಳುತ್ತಾ ಸುಖ ಸಂಕಥಾ ವಿನೋದದಲ್ಲಿದ್ದನು. ಹಾಗಿರುವಲ್ಲಿ ಆನಂದ ಸಂವತ್ಸರದ ಆಷಾಡ ಮಾಸದ ಶುದ್ಧಸಪ್ತಮಿ ಶುಕ್ರವಾರವು ಕಾಲಿಟ್ಟಿತು. ಅ ದಿನ ಬಿಮತೊರಿನ ನಾರಸಿಂಗನು ತಮ್ಮ ಸಮಸ್ತ ಸೈನ್ಯೆದೊಡಗೂಡಿ ಮೇಲೇರಿ ಬಂದು, ಹಬ್ಬದಿರಮಡೆಯ ತಿಬ್ಬನ ಹಳ್ಳಿಯ ತುರುಗಳನ್ನು ಮುತ್ತಿದನು. ಆಗ ಗೌಡಯ್ಯ ಎಂಬ ವೀರನು ಕುರಕಿಮಾಳೆಯರ ಕಾಲಕ್ಕೆ ತಿಲಕ ಪ್ರಾಯನಾಗಿದ್ದು, ದಡಿಗನಕೆರೆಯ ಮಾಣಲವಾಡಿಯ ಪ್ರಮುಖನಾಗಿದ್ದನು. ಅವನು ಹರಹಗೌಡನ ತಮ್ಮನೂ ಗಹರಗೌಡನ ಸುಪುತ್ರನೋ ಆಗಿದ್ದನು. ಶತ್ರುಗಳನ್ನು ಎದುರಿಸಿ ಕಾದಾಟಮಾಡಿ, ಹಲವರನ್ನು ಕೊಂದು ತನ್ನ ಶೌರ್ಯವನ್ನು ಮೆರೆದನು. ಹಸುಗಳನ್ನು ಹಿಂದಕ್ಕೆ

ಪಡೆದು ತರುವಾಯ ಸುರಲೋಕವನ್ನು ಸೇರಿದನು ಮುಂದಿನ ೧೬೨ನೆಯ ಶಾಸನದಲ್ಲಿ ಬಿಸುಗೂರಿನವರು ತುರುಗಳನ್ನು ಹಿಡಿದಾಗ ರಾಮೆಯನು ಕಾದಿಮಡಿದ ಸಂಗತಿಯಿದೆ. ತೇದಿಯಿಲ್ಲದೆ ಹಾಗಲಹಳ್ಳಿ ಶಾಸನದಲ್ಲಿ (ಮ ೧೦೩) ಆದಿತ್ಯಗೌಡ ನೆಂಬುವನು ಬೊಪ್ಪಸಮುದ್ರದ ತುರುಗೋಳಿನಲ್ಲಿ ಪ್ರಾಣಬಿಟ್ಟ ಸಮಾಚಾರವಿದೆ. ಅಲ್ಲಿ ಕಳ್ಳರು ಹಸುಗಳನ್ನು ಕದ್ದೊಯ್ಯುತ್ತಿರಲಾಗಿ ಅದಿತ್ಯಗೌಡನು ಅವರನ್ನು ಕೊಂದು ತಾನು ಸ್ವರ್ಗಸ್ಥನಾದನೆಂದು ಹೇಳಿದೆ.

ಇನ್ನು ಸ್ತ್ರೀಯರ ಮಾನರಕ್ಷಣೆಗಾಗಿ ಕಾದಿ ದಿವಂಗತರಾಗುತ್ತಿದ್ದ ವೀರರ ಗಾಥೆಯನ್ನು ನೋಡೋಣ ಸ್ತ್ರೀಯರ ಅಪಹರಣ, ಅಪಹೃತರ ಆರ್ತನಾದ, ಅದರ ಅಂಗವಾಗಿ ನಡೆಯುತ್ತಿದ್ದ ಕಾಳಗ ಎಂಬೀ ಘಟನೆಗಳನ್ನು ಒಟ್ಟಾರೆ **'ಪೆಣ್ಬುಯ್ಯಲ್'** ಎಂದು ಕರೆದಿದ್ದಾರೆ. ಕ್ರಿ.ಶ.೯೭೮ರ ಕಂಬದ ಹಳ್ಳಿ ವೀರಗಲ್ಲಿನಲ್ಲಿ (ನಾಮಂ ೩೪) ಇಂತಹ ಪೆಣ್ಬುಯ್ಯಲಿನ ವೃತ್ತಾಂತವಿದೆ. ಬೇಡರ ಪಡೆಯೊಂದು ಬಂಡಿಗನವಿಲೆಯನ್ನು ಮುತ್ತಿ ಸ್ತ್ರೀಯರನ್ನು ಅಪಹರಿಸಿದಾಗ ಗವರೆಸೆಟ್ಟಿಯು ಹೋರಾಡಿ ಪಂಚತ್ವನ್ನೈದಿದನು. ಸಿಡಿಲಿನಂತೆ ಎರಗಿದ ಬೇಡರ ಪಡೆಗೆ ಅಂಜದೆ ಕಾದಿದ ಆ ವೀರನ ಶೌರ್ಯ ಹೀಗಿ ವರ್ಣಿತವಾಗಿದೆ.

ಸಿಡಿಲವೊಲೆರಗಿದ ಬೇಡರಾ
ಪಡೆಗೊಗೆಯದೆ ತಾಗಿ ಪಂಡಿರುದೆರಳೆರ
ಕಡುಮುಳಿದು ನೋಡಿದಾಗಂ
ಮಡಿದುದಳಿಗವರೆ ಸೆಟ್ಟಿಗೇನೊಪ್ಪಿ ದರೋ॥

ಕ್ರಿ.ಶ.೧೨೨೪ರ ಆಗ್ರಹಾರ ಬಾಚಹಳ್ಳಿಯ ವೀರಗಲ್ಲಿನಲ್ಲಿ (ಕೃಪೇ ೭೮) ಕೇತಣನೆಂಬುವನ್ನು ಹೆಣ್ಣುಗಳನ್ನು ಸೆರೆಯಿಂದ ಬಿಡಿಸುವುದಕ್ಕೂ, ಹಸುಗಳನ್ನು, ಎಮ್ಮೆಗಳನ್ನೂ ಹಿಂದಕ್ಕಟ್ಟಿಕೊಂಡು ಬರುವುದಕ್ಕೂ ಹೋಗಿ ಸುಭಟರನ್ನು ಕೊಂದು ಪ್ರಾಣನೀಗಿದನು ಎಂದು ಬರೆದಿದೆ. ಕ್ರಿ.ಶ.೧೪-೧೫ನೆಯ ಶತಮಾನಕ್ಕೆ ಸೇರಿದ ತಿಪ್ಪೂರು ಶಾಸನದಲ್ಲಿ (ಮ ೫೧) ಊರ ಒಡೆಯನಾದ ಸಿರಂಗನು ಸ್ತ್ರೀಯರ ರಕ್ಷಣೆಗಾಗಿ ಜೀವತೆತ್ತನೆಂದಿದೆ.[೨೪]

ಊರಳಿವು:-

ಎರಡು ಗ್ರಾಮಗಳ ನಡುವೆ ಹೋರಾಟ ನಡೆದು ಸಾವನ್ನಪ್ಪಿದ ವೀರರನ್ನೀಗ ನೆನಯಬೇಕು ಕ್ರಿ.ಶ. ೯ನೆಯ ಶತಮಾನದ ಇಂಗಲಗುಪ್ಪೆ ಶಾಸನದಲ್ಲಿ (ಪಾಂಪು ೨೪೭) ಫಣ್ಣಮ್ಮ ಎಂಬಾತನು ಊರಳಿವಳ್ಳಿ ಬಂಕೆಯನೊಡನೆ ಕಾದಿ ಸತ್ತನು ಎಂದಿದೆ. ಗ್ರಾಮಗಳ ನಡುವಣ ಈ ಬಗೆಯ

ಹೋರಾಟಕ್ಕೆ ಊರಳಿವು_ಎಂದು ಹೆಸರು. ಊರಳಿವಿಗೆ ಇಂಥದೇ ಕಾರಣ ಸರಿ ಎಂದು ಹೇಳಲು ಬರುವುದಿಲ್ಲ. ಎರಡು ಗ್ರಾಮಗಳ ನಡುವೆ ಸೀಮಾ ಸಂಬಂಧದ ವಿವಾದವಿರಬಹುದು ಹಳೆಯದ್ವೇಷವಿರಬಹುದು ತಮ್ಮ ಪೌರುಷವನ್ನು ಮೆರೆಯುವ 'ಕಲಿತನದುರ್ಕು ಜವ್ವನದ ಸೊರ್ಕ್ಕು' ಇರಬಹುದು ಅಂತೂ ವೀರರು ಗ್ರಾಮಾಭಿಮಾನವನ್ನು ಕಾಯ್ದುಕೊಳ್ಳಲು ಹೋರಾಡಿ ಮಡಿಯುತ್ತಿದ್ದರು. ಕ್ರಿ.ಶ. ಸು ೧೨ನೆಯ ಶತಮಾನದ ಬೇಗಮಂಗಲದ ಶಾಸನದಲ್ಲಿ (೧೩೬) ಬಾಚಗೌಡನು ಊರಳಿವಿನಲ್ಲಿ ಆಳಿದನೆಂದು ಹೇಳಿದ. ಕ್ರಿ.ಶ. ೧೨೧೯ರ ಹುಲ್ಲೇಗಾಲದ ಶಾಸನದಲ್ಲಿ (ಮವ ೩೬) ಬೋಕ ಎಂಬಾತನು ಹುಲ್ಲವಂಗಲವನ್ನು ಮನ್ನೆಯ ಮಾರಸಿಂಗ ದೇವರು ಮುತ್ತಿದಾಗ ಕಾದಿ ಬಿದ್ದನು ಎಂದು ಹೇಳಿದೆ. ಕ್ರಿ.ಶ ೧೨೪೨ರ ವೀರಗಲ್ಲೊಂದು (ಮಂ ೨೩) ಬಸರಾಳು ಮತ್ತು ಕರೆಗೋಡು ಗ್ರಾಮಗಳ ಮಧ್ಯೆ ಕದನವಾದಾಗ ರಂಗಗೌಡನು ಕಾದಿಸತ್ತನೆಂಬ ಸಂಗತಿಯನ್ನು ತಿಳಿಸುತ್ತದೆ.

ಈ ಬಗೆಯ ಊರಳಿವಿನ ಉದಾಹರಣೆಗಳು ಮಂಡ್ಯ ಜಿಲ್ಲೆಯಲ್ಲಿ ತಕ್ಕಷ್ಟು ಸಂಖ್ಯೆಯಲ್ಲಿವೆ. ಕ್ರಿ.ಶ. ೧೨೧೮ರ ಮಾರಗಾನಹಳ್ಳಿಯಲ್ಲಿ ಶಿಥಿಲವಾಗಿರುವ ಶಾಸನವೊಂದರಲ್ಲಿ (ಮ ೧೪೨) ವೀರನೊಬ್ಬನು ಮೊಮ್ಮನಹಳ್ಳಿಯನ್ನು ರಕ್ಷಿಸಿಕೊಳ್ಳಲು ಕಾದಿ ಮಡಿದ ವಿಚಾರವಿದೆ. ಕ್ರಿ.ಶ. ೧೨೮೫ರ ಕಿರಗಸೂರಿನ ಶಾಸನದಲ್ಲಿ (ಮವ ೧೦೧) ಮಾರಪ್ಪನು ತೆಂಗಣಹಳ್ಳಿಯನ್ನು ರಕ್ಷಿಸಿಕೊಳ್ಳಲು ಕಾದಾಡಿ ದಿವಂಗತನಾದ ವೃತ್ತಾಂತವಿದೆ. "ಸ್ವಸ್ತಿಶ್ರೀ ಪ್ರತಾಪ ಚಕ್ರವರ್ತಿ ಹೊಯ್ಸಳ ಶ್ರೀ ವೀರನರಸಿಂಹ್ವ ದೇವರಸರು ಪೃಥ್ವೀ ರಾಜ್ಯಂ ಮಾಡಲು ಸಕವರ್ಷ ೧೨೦೭ನೆಯ ಪಾರ್ತ್ಥಿವಸಂತ್ಸರದ ಚೈತ್ರ ಬ. ೧೦ ಸೋದುಕಿರುಗತೂರ ಹೆಗ್ಡೆಯರ ಪೆರುಮಗವುಂಡನ ಮಗ ಮಾರಪ್ಪನೂ ಅಳಿಯ ಮಾದೆಯು ಎಡಗೈ ಬಲಗೈಯಾಗಿ ತೆಂಗಣಹಳ್ಳಿಯ ವೊರಳಿವಲ್ಲಿ ಕಾದಿಬಿದ್ದ ವೀರಗಲ್ಲು" ಎಂಬುದು ಆ ಶಾಸನದ ಪೂರ್ಣಪಾಠ. ಕ್ರಿ.ಶ. ೧೩೪೬ರ ಮಡುವಿನಕೋಡಿ ಶಾಸನದಲ್ಲಿ (ಕೃಪೆ ೧೧೦) ಕರುಣೆಯನ ಹಳ್ಳಿಯನ್ನು ದಳದುಳವಾಗಿ ಮುತ್ತಿದಾಗ ಸಳಿಗವುಡನು ತಾಗಿ ತಳ್ತಿರಿದು ವೀರಸ್ವರ್ಗವನ್ನು ಪಡೆದನೆಂದಿದೆ. ಮದ್ದೂರು ತಾಲ್ಲೂಕಿಗೆ ಸೇರಿದ ಅರುವನಹಳ್ಳಿ ಮತ್ತು ಆಲೂರುಗಳ ನಡುವೆ ಹುಯ್ಯಲಾದಾಗ ಸತ್ತ ವೀರ ಸಭೆಯೋ ಜನಿಗೆ ಅರುವನಹಳ್ಳಿಲ್ಲಿ ವೀರಗಲ್ಲು (ಮ ೯೨) ನೆಟ್ಟಿದ್ದಾರೆ. ಅದರೆ ಕಾಲ ಕ್ರಿ.ಶ.೧೩೮೦.

ಕಾಡು ಮೃಗಗಳೊಂದಿಗೆ ಕಾದಾಡಿ ಸ್ವರ್ಗಸೇರಿದ ವೃತ್ತಾಂತಗಳು ಮಂಡ್ಯ ಜಿಲ್ಲೆಯ ಒಂದೆರಡು ಶಾಸನಗಳಲ್ಲಿ ವರ್ಣಿಸಲ್ಪಟ್ಟಿವೆ. ಕ್ರಿ.ಶ. ೧೨೬೪ರ ಬೆಲ್ಲೂರಿನ ಸ್ಮಾರಕದಲ್ಲಿ (ಮ ೯೭) ಕಾಳೇಗೌಡನ ಮಗ ಬೀರಗೌಡನ ಹಳ್ಳಿಯ ಅಸಗರ ಗೊರವನು ಹಂದಿಯನ್ನು ಇರಿದು

ಸ್ವರ್ಗಸ್ಥನಾದುದಕ್ಕಾಗಿ ಮಾಡಿಸಿದ ವೀರಗಲ್ಲು ಎಂದು ಹೇಳಿದೆ. "ಸ್ವಸ್ತಿಶ್ರೀ ನಾರಸಿಂಹದೇವರು ಪ್ರೀತಿ ವೀರಾಜ್ಯಂಗೆಯುತ್ತ ವೀರರು ರಕ್ತ ಕೇಸ್ವವತ್ಸರ ಪುಬೃಹಸ್ಪತಿವಾರದಂದು ಬೆಲ್ಲೂರ ಬಾರಮದರ ಕಾಳೇಗೌಡನ ಮಗ ಭೂಮಿಕಾರ ಬೀರಗೌಡನ ಹಳ್ಳಿಯ ಅಸಗರ ಹೊರವನು ಹಂದಿಯ ನಿರಿದು ಸ್ವರ್ಗಸ್ಥನಾದನು. ಆ ಇರುಗರ ಮಾಡಿಸಿದ ಬೀರಗಲ್ಲು" ಎಂಬುದು ಶಾಸನದ ಪೂರ್ಣಪಾಠ. ಆನೆಯೊಡನೆ ಕಾದಾಡಿ ಗೆದ್ದು ಸನ್ಮಾನಿತನಾದ ವೀರನೊಬ್ಬನ ವೃತ್ತಾಂತ ಕ್ರಿ.ಶ.೧೧೪೨ರ ಕಸಲಗೆರೆ ಶಾಸನದಲ್ಲಿ (ನಾಮಂ ೧೬೯) ಉಲ್ಲೇಖಗೊಂಡಿರುವುದು ಕುತೂಹಲಕಾರಿಯಾದ ಸಂಗತಿ. ವೀರಗಂಗ ಪೆರ್ಮಾಡಿಯು ಚೋಳರ ಮೇಲೆ ದಂಡೆತ್ತಿ ಹೋಗುವಾಗ ಹೃದುವಿನಕೆರೆ ಎಂಬಲ್ಲಿ ಬೀಡುಬಿಟ್ಟನು. ಆಗ ಇದ್ದಕ್ಕಿದಂತಯೇ ಮದಿಸಿದ ಕಾಡಾನೆಯೊಂದು ಬೀಡಿನ ಮೇಲೆ ನುಗ್ಗಿತು ಆಗ ಆಯ್ಕಣನೆಂಬುವನು ಒಡನೆಯೆ ಆನೆಯನ್ನು ಬಾಣದಿಂದ ಹೊಡಿದುರುಳಿಸಿದನು ಇದರಿಂದ ಆ ವೀರನಿಗೆ ಕರಿಯಯ್ಕಣ ಎಂಬ ಬಿರುದೂ ಕಲುಕಣಿ ನಾಡಿನ ಒಡೆತನವೂ ಲಭಿಸಿದುವು.

ಕಳ್ಳರೊಡನೆ ಕಾದಾಡಿ ಸತ್ತ ಒಂದು ಉದಾಹರಣೆ ಸುಂಕಾ ತೊಂಡನೊರಿನ ಕ್ರಿ.ಶ. ೧೨-೧೩ನೆಯ ಶತಮಾನದ ವೀರಗಲ್ಲೊಂದರಲ್ಲಿದೆ (ಪಾಂಪು. ೨೩೮) ಆ ಊರಿನ ರಾಕಸಮ್ಮನ ಗುಡಿಯ ಸುತ್ತಮುತ್ತ ನೂರಕ್ಕೇನು ಕಡಿಮೆಯಿಲ್ಲದಷ್ಟು ವೀರಗಲ್ಲುಗಳಿವೆ. ಅವುಗಳಲ್ಲಿ ಕೆಲವು ಮಾತ್ರ ಬರಹವನ್ನು ಒಳಗೊಂಡಿವೆ. ಹೋಲೋಜ ಎಂಬಾತನು ಕಳ್ಳರೊಂದಿಗೆ ಹೋರಾಡಿ ಮಡಿದನು. ಅವನ ಮದುವಳಿಗೆ ಸೋಮವ್ವೆ ಈ ವೀರಗಲ್ಲನ್ನು ನಿಲ್ಲಿಸಿದಳು ಎಂದು ಆ ಶಾಸನದ ಮೂಲಕ ತಿಳಿದು ಬರುತ್ತದೆ. ಅವರು ಬಹುಶಃ ತುರುಗಳನ್ನು ಕದಿಯಲು ಬಂದ ಕಳ್ಳರಲ್ಲದಿರಬಹುದು ನಗನಾಣ್ಯಗಳಿಗಾಗಿ ಬಂದವರೋ ಏನೋ?

ಹೀಗೆ ಬಗೆಬಗೆಯ ಕಾರಣಗಳಿಗಾಗಿ ಸ್ವರ್ಗಸೇರಿದ ವೀರರ ನೆನಪಿಗಾಗಿ ಭೂಮಿಯನ್ನು ದತ್ತಿಯಾಗಿ ಬಿಟ್ಟು ಅವರ ಶೌರ್ಯವು ಸಮಾಜಕ್ಕೆ ಅನುಕರಣೀಯವಾಗುವಂತೆ ಮಾಡುತ್ತಿದ್ದರು. ಅಂತಹ ದತ್ತಿಯನ್ನು ಬಾಳ್ಗಚ್ಚು, ನೆತ್ತರ ಕೊಡುಗೆ, ರಕ್ತಾ ಕೊಡಗಿ ಎಂದು ಮುಂತಾಗಿ ಕರೆಯಲಾಗಿದೆ. ಹೊನ್ನೇನಹಳ್ಳಿಯ ಕ್ರಿ.ಶ. ೯ನೆಯ ಶತಮಾನದ ಶಾಸನದ (ಕೃಪೇ. ೨೦) ವಿವರಗಳು ಅಳಿಸಿ ಹೋಗಿವೆ. **'ಬಾಳಿಚ್ಚು ಗೊಟ್ಟೊರ್'** ಎಂದಷ್ಟೇ ಅಲ್ಲಿ ಉಳಿದುಕೊಂಡಿದೆ. ತಿಬ್ಬನ ಹಳ್ಳಿಯ ಕ್ರಿ.ಶ.೧೬ನೆ ಶತಮಾನದ ಶಾಸನದಲ್ಲಿ (ನಾಮಂ. ೧೬೩) ನೆತ್ತರ ಕೊಡುಗೆ ನೀಡಿರುವ ವಿಚಾರ ಸ್ವಾರಸ್ಯಕರವಾಗಿದೆ. "ಸ್ವಸ್ತಿಶ್ರೀ ಮಹಾನಾಯಕರ್ಯ್ಯ ಬಯಲಹುಲಿ ಕದಿರೆ ನಾಯಕನ ಮಕ್ಕಳು ಪನಿನಾಯಕರೂ ಪೂಜಾರಿ ಲಕುಮನ ಮಕ್ಕಳಿಗೆ ಕೊಟ್ಟ ನೆತ್ತರು ಕೊಡುಗೆ ಸೀಮಾ ಸಂಬಂಧಿ ಶಾಸನವು ಇದಕ್ಕೆ ಅಕ್ಷೇಪಿಸಿದವ ಆತನ ಮಗನಾಗಿ ಹುಟ್ಟುವನು" ಎಂಬುದು ಆ

ಶಾಸನದ ಪೂರ್ಣಪಾಠ. ಕೊನೆಯಲ್ಲಿ ಬಂದಿರುವ ಶಾಪವಾಕ್ಯವೇ ಇಲ್ಲಿ ಕುತೂಹಲಕಾರಿ ಮೈಸೂರು ದೊರೆಗಳು ಹೊಸಕೋಟೆ ಜಗಳದಲ್ಲಿ ಸತ್ತ ತಿಮ್ಮನಿಗೆ ರಕ್ತಾ ಕೊಡಗಿ ಕೊಟ್ಟರೆಂದು ಕ್ರಿ.ಶ. ೧೭೬೩ರ ಅಂಕನಹಳ್ಳಿ ಶಾಸನದಲ್ಲಿ (ನಾಮಂ. ೧೩೮) ಹೇಳಿದೆ.

ಒಂದು ನಾಯಿಗಾಗಿ ವೀರಗಲ್ಲೊಂದನ್ನು ನಿಲ್ಲಿಸಿರುವುದು ಮಂಡ್ಯ ಜಿಲ್ಲೆಯಲ್ಲಿ ದೊರೆತಿದ್ದು. ಕನ್ನಡ ನಾಡಿನ ಶಾಸನ ಸಂಪದದ ಕ್ಷೇತ್ರದಲ್ಲಿ ಅಪೂರ್ವವಾದ ವಿಚಾರ ಮದ್ದೂರು ತಾಲ್ಲೂಕಿನ **ಆತಗೂರು ಶಾಸನ** (ಮ. ४೨) ಅಂತಹ ವಿಲಕ್ಷಣ ಸ್ಮಾರಕ ಕ್ರಿ.ಶ ೯೪೯–೫೦ ಅದರ ಕಾಲ, ರಾಷ್ಟ್ರಕೂಟ ದೊರೆ ಕಚ್ಚಿಗ ಕೃಷ್ಣರಾಜನು ಒಮ್ಮೆ ಚೋಳರ ಮೇಲೆ ಯುದ್ದ ಮಾಡಿದನು. ಆ ಹೊತ್ತಿನಲ್ಲಿ ಗಂಗದೊರೆ ಇಮ್ಮಡಿಬೂತುಗನ ಕೈಕೆಳಗೆ ಅಧಿಕಾರಿಯಾಗಿದ್ದ ಮಣಲೆರ ಎಂಬಾತನು ಕೃಷ್ಣರಾಜನ ಪರವಾಗಿ ಶೌರ್ಯದಿಂದ ಹೋರಾಡಿದನು. ಆಗ ಕೃಷ್ಣರಾಜನು. ಅವನ ಸಾಹಸವನ್ನು ಮೆಚ್ಚಿ ಏನು ಬೇಕಾದರೂ ಕೇಳಿಕೊ ಎಂದನು. ಆಗ ಮಣಲೆರನು ದೊರೆಯ ಬಳಿಯಲ್ಲಿದ್ದ ಕಾಳಿಯೆಂಬ ನಾಯಿಯನ್ನು ಕೇಳಿ ಪಡೆದನು. ಒಮ್ಮೆ ಅದನ್ನು ಬೆಳತೂರಿಗೆ ಸಮೀಪದ ಗುಡ್ಡದ ಬಳಿ ದೊಡ್ಡ ಹಂದಿಯೊಂದರ ಮೇಲೆ ಕಾಳಗಕ್ಕೆ ಬಿಟ್ಟನು. ಆ ಹೋರಾಟದಲ್ಲಿ ಹಂದಿ ನಾಯಿಗಳೆರಡೂ ಒಟ್ಟಿಗೆ ಸತ್ತುವು ತಾನು ಪ್ರೀತಿಸಿದ ನಾಯಿ ನೆನಪಿಗಾಗಿ ಮಣಲೆರನು ಆತಗೂರಿನ ಚಲ್ಲೇಶ್ವರ ದೇವಾಲಯದ ಮುಂದೆ ವೀರಗಲ್ಲೊಂದನ್ನು ನೆಡಿಸಿ ಅದಕ್ಕೆ ಭೂದಾನ ಮಾಡಿದನು. ಆ ದಾನವನ್ನು ಯಾರದರೂ ಕೆಡಿಸಿದರೆ ಅಂತಹವರು ಆ ನಾಯಿ ಮಾಡಿದ ಪಾಪವನ್ನು ಕೊಂಡವರಾಗಲಿ, ಆ ಕಲ್ಲನ್ನು ಪ್ರತಿನಿತ್ಯವು ಆ ದೇವಾಲಯದ ಗೊರವನು ಪೂಜಿಸಬೇಕು. ಹಾಗೆ ಪೂಜಿಸದೆ ಉಂಡ ಪಕ್ಷದಲ್ಲಿ ನಾಯಿ ಮಾಡಿರಬಹುದಾದ ಪಾಪಗಳು ಆ ಗೊರವನಿಗೆ ಬರಲಿ ಎಂದು ಮುಂತಾದ ವಿವರಗಳನ್ನು ಆ ಶಾಸನವು ಗದ್ಯರೂಪದಲ್ಲಿ ರಚನೆಯಾಗಿದೆ. ಮೇಲೆ ಹೇಳಿದ ವಿವರಗಳಲ್ಲದೆ ನಾಯಿ ಹಂದಿಗಳ ಕಾಳಗದ ದೃಶ್ಯವನ್ನು ಕಂಡರಿಸಲಾಗಿರುವ ಆ ಸುಂದರ ಶಾಸನ ಈಗ ಬೆಂಗಳೂರಿನ ಸರ್ಕಾರಿ ಮ್ಯೂಸಿಯಂನಲ್ಲಿದೆ. ಈ ಶಾಸನದ ಮೂಲಕ ಮಣಲೆರನಿಗೆ ತನ್ನ ನಾಯಿ ಮೇಲಿದ್ದ ಅಪಾರ ಪ್ರೇಮ ಪ್ರಕಟವಾಗುತ್ತದೆ. ಕಾಳಗದಲ್ಲಿ ಮಡಿದ ಯಾವ ವೀರರಿಗೂ ಈ ನಾಯಿ ಕಡಿಮೆಯಿಲ್ಲ ಎಂಬ ಭಾವ ಅದರ ಸ್ಥಾಪನೆಯ ಹಿನ್ನೆಲೆಯಲ್ಲಿದೆ ಆ ಕಲ್ಲನ್ನು ಪೂಜಿಸಲು ಮಾಡಿರುವ ವ್ಯವಸ್ಥೆ ಹಾಕಿರುವ ಶಾಪ ವಾಕ್ಯಗಳೂ ಕುತೂಹಲಕಾರಿಯಾಗಿವೆ.

ಗತಿಸಿದ ವ್ಯಕ್ತಿಯ ಪಾದಗಳ ಗುರುತುಗಳನ್ನೂ, ಆತನು ಮೆಟ್ಟಿದ ಪಾದರಕ್ಷೆಗಳನ್ನೂ ಜನ ಹಿಂದಿನಿಂದ ಇಂದಿನವರೆಗೂ ರಕ್ಷಿಸಿಕೊಂಡು ಬಂದು ಆರಾಧಿಸುವುದು ರೂಢಿಯಲ್ಲಿದೆ. ಪಾದುಕೆಗಳು ಅಥವಾ ಪಾದಗಳ ಗುರುತುಗಳು ಯಾವ ವ್ಯಕ್ತಿಯದಾಗಿರುತ್ತದೆಯೋ, ಅದು

[illegible]

ಅವನನ್ನು ಸಂಕೇತಿಸುತ್ತದೆಂಬುದು ಇದರಿಂದ ತಿಳಿಯುತ್ತದೆ. ಇಂದಿಗೂ ಭಾರತದ ಅನೇಕ ಕಡೆಗಳಲ್ಲಿ ರಾಮನಪಾದ, ಸೀತೆಯ ಪಾದ, ಪಾರ್ವತಿ ಪಾದ, ಮುಂತಾದ ಪೌರಾಣಿಕ ವ್ಯಕ್ತಿಗಳ ಪಾದಗಳ ಗುರುತು ಇರುವುದನ್ನೂ ಜನ ಅವುಗಳನ್ನು ಆರಾಧಿಸುವುದನ್ನೂ ಗಮನಿಸಬಹುದು. ಮತ್ತೆ ಕೆಲವು ಕಡೆ ಜೈನ ಬೌದ್ಧ ಮತ್ತು ವೈದಿಕ ಧರ್ಮ ಪ್ರವಾದಿಗಳ ಪಾದುಕೆಗಳನ್ನು ಅವರ ಪಾದದ ಗುರುತುಗಳನ್ನೂ ಆರಾಧಿಸುವುದನ್ನು ಗಮನಿಸಬಹುದು.

ಅಂದರೆ ಸತ್ತ ವ್ಯಕ್ತಿಯನ್ನು ಪ್ರತಿನಿಧಿಸಲು ಅವನ ಹೆಸರಿನಲ್ಲಿ ನಿಲ್ಲಿಸಿದ ಸ್ಮಾರಕ ಮಾತ್ರ ಸ್ಮಾರಕ ವಾಗಬೇಕೆಂದಿಲ್ಲ. ಅವನು ನೆಡೆದಾಡಿದ ಸ್ಥಳಗಳು ಅವನು ಇದ್ದ ಜಾಗ ಅವನು ಉಪಯೋಗಿಸುತ್ತಿದ್ದ ಆಯುಧಗಳು ಅವನದೆಂದು ಭಾವಿಸಿದ ಪಳೆಯುಳಿಕೆಗಳೂ ಅವನ ಸ್ಮಾರಕಗಳಾಗಬಲ್ಲವು.

ವೀರಮಾಸ್ತಿಗಲ್ಲು:–

ಶಾಸನಗಳು ಸಾಮಾನ್ಯವಾಗಿ ದೇವತಾ ಪ್ರಾರ್ಥನೆಯೊಡನೆ ಪ್ರಾರಂಭವಾಗುತ್ತದೆ. ನಂತರ ದೊರೆಯ ಗುಣಗಾನ ಅವನ ಬಿರುದು, ಬಾವಲಿಗಳು, ಅವನ ರಾಜ್ಯದ ವಿಸ್ತಾರ, ಅವನ ವಂಶಾವಳಿ ವಿರಗಳಿರುತ್ತವೆ. ಅದರ ನಂತರ ರಾಜನು ಕೊಟ್ಟ ದತ್ತಿ, ಕಟ್ಟಿಸಿದ ಕೆರೆ, ನಿರ್ಮಿಸಿದ ದೇವಾಲಯ ಹೀಗೆ ದಾನದತ್ತಿಗಳ ವಿವರ ಇರುತ್ತದೆ. ಅದರ ನಂತರ ಬರುವುದೇ ಶಾಪಾಶಯ ಅಂದರೆ ದೊರೆ ನೀಡಿದ ದತ್ತಿಯು ಆಚಂದ್ರಾರ್ಕವಾಗಿ ಇರಬೇಕೆಂದು ಅದನ್ನು ಹಾಳುಮಾಡಿದವರು ಶಾಪಕ್ಕೆ ಗುರಿಯಾಗುವವರೆಂದು ತಿಳಿಸಿರುತ್ತಾರೆ.

ಕೆಲವು ಸ್ಮಾರಕಶಿಲೆಗಳ ಪಾಠವನ್ನಾಗಲೀ ಶಿಲ್ಪವನ್ನಾಗಲೀ ಗಮನಿಸಿದಾಗ ಅವುಗಳನ್ನು ವೀರಗಲ್ಲು ಎಂಬುದಾಗಿ ಗುರುತಿಸಬೇಕೆ ಅಥವಾಗ೧೦ **"ಮಹಾಸತಿ ಕಲ್ಲು"** ಎಂಬುದಾಗಿ ಗುರುತಿಸಬೇಕೆ ಅಥವಾ ವೀರನಿಗೂ, ಮಹಾಸತಿಗೂ ಇಬ್ಬರಿಗೂ ಸ್ಮಾರಕವಾಗಿದೆಯೇ ಎಂಬ ಸಂಶಯ ತೊಡಕುಗಳು ಉಂಟಾಗುತ್ತವೆ. ಇಂಥ ಕಡೆಗಳಲ್ಲಿ ಮೊದಲಿಗೆ ಆ ಸ್ಮಾರಕ ಶಿಲೆಗಳ ಪಾಠವನ್ನೇ ಮೊರೆ ಹೋಗಬೇಕಾಗುತ್ತದೆ. ಅದ್ದರಿಂದ ಶಾಸನಗಳಿಂದ ದೊರೆಯುವ ಮಾಹಿತಿಯನ್ನು ವಿಂಗಡಿಸಿಕೊಳ್ಳುವು ಉಚಿತವಾದುದು.

ವೀರರು ಯುದ್ಧದಲ್ಲಿ ಹೋರಾಡಿ ಸತ್ತು ಸ್ವರ್ಗ ಸೇರಿದ ಕಥೆಯನ್ನು ವೀರಗಲ್ಲು ಹೇಳಿದರೆ ಗಂಡ ಸತ್ತ ಮೇಲೆ ಅವನ ಜೊತೆ ಅಥವಾ ನಂತರ ಅಗ್ನಿಪ್ರವೇಶ ಮಾಡಿದ ಸ್ತ್ರೀಯರು ಸತಿಯಾದ ವಿಷಯವನ್ನು **"ಮಾಸ್ತಿಕಲ್ಲು"** ಸಾರುತ್ತದೆ. ಅಂದು ಈ ಎರಡು ಬಗೆಯ ಕಲ್ಲುಗಳು ಆದರ್ಶ

ಪ್ರಾಯವಾಗಿದ್ದು. ಇಂದು ಸ್ಮಾರಕಗಳಾಗಿ ಮಂಡ್ಯ ಜಿಲ್ಲೆಯಲ್ಲಿ ವ್ಯಾಪಕವಾಗಿ ಕಾಣಸಿಗುತ್ತವೆ. ಸಾಮಾನ್ಯವಾಗಿ ವೀರಗಲ್ಲುಗಳ ಮೇಲೆ ಮೂರು ಹಂತದ ಚಿತ್ರಗಳಿರುತ್ತವೆ. ಕೆಳಗಿನ ಹಂತದಲ್ಲಿ ವೀರನೊಬ್ಬನು ಶತ್ರುಗಳೊಡನೆ ಹೋರಾಡುತ್ತಿರುವಂತೆಯೋ, ಮದ್ಯದ ಹಂತದಲ್ಲಿ ಯುದ್ದದಲ್ಲಿ ಸತ್ತ ಅವನನ್ನು ದೇವತಾ ಸ್ತ್ರೀಯರು, ಸ್ವರ್ಗಕ್ಕೆ ಕೊಂಡೊಯುತ್ತಿರುವಂತೆಯು, ಮೇಲಿನ ಹಂತದಲ್ಲಿ ವೀರನು ಭಗವಂತನ ಸಾನ್ನಿಧ್ಯದಲ್ಲಿ ಸೇರಿಕೊಂಡಿರುವಂತೆಯೂ ಕೆತ್ತಲಾಗಿರುತ್ತದೆ. ಕುದುರೆ ಸವಾರಿ ಮಾಡುತ್ತಿರುವ ಅಥವಾ ಯುದ್ದ ಮಾಡುತ್ತಿರುವ ಅಥವಾ ಬಿಲ್ಲನ್ನೋ, ಖಡ್ಗವನ್ನೋ ಹಿಡಿದು ನಿಂತಿರುವ ವೀರನ ಚಿತ್ರಣದ ಕೆತ್ತನೆ ಎರುವ ಹಲವು ಕಲ್ಲುಗಳು ವೀರಗಲ್ಲಿನ ಗುಂಪಿಗೆ ಸೇರುತ್ತವೆ.[೨೫]

ಮಡಿದ ಗಂಡನೊಂದಿಗೆ, ಚಿತೆಯನ್ನು ಪ್ರವೇಶ ಮಾಡುವುದರ ಮೂಲಕ ಸಾಯುವ ವಿಧಿಯನ್ನು ಸಹಗಮನ ಎಂದು 'ಸತಿ' ಹೋಗುವುದು ಎಂಬುದಾಗಿಯೂ ಈ ರೀತಿ ಅಗ್ನಿ ಪ್ರವೇಶವನ್ನು ಮಾಡಿ ಮಡಿದ ಮಹಿಳೆಯರ ಸ್ಮಾರಕಗಳೇ ಮಹಾಸತಿಗಲ್ಲುಗಳು ಇವುಗಳನ್ನು ಮಾಸ್ತಿಗಲ್ಲು, ಮಾಸ್ತಮ್ಮ, ವ್ಯಾಸನ ತೋಳು ಎಂಬುದಾಗಿ ಕರೆಯುತ್ತಾರೆ. ಪತ್ನಿಯು ಸಹಗಮನ ಮಾಡಲು ಗಂಡನು ಇಂತದ್ದೇ ಕಾರಣಕ್ಕಾಗಿ ಮಾಡಿದಿರಬೇಕೆಂಬ ಯಾವುದೇ ನಿಯಮವಿದ್ದಂತೆ ಕಾಣದು ಗಂಡನು ಯುದ್ಧದಲ್ಲಿಯೋ, ಆತ್ಮಬಲಿ ಮಾಡಿಕೊಂಡೋ ಅಥವಾ ಸಹಜವಾದ ಮರಣವನ್ನು ಪಡೆದಿರಬಹುದು. ಗಂಡನಾದವನು ಯಾವ ಕಾರಣಕ್ಕಾಗಿ ಸತ್ತ ಎಂಬುದು ಆ ಸ್ಮಾರಕ ಶಿಲೆಯ ಪ್ರಕಾರವನ್ನು ಮತ್ತು ಶಿಲ್ಪವನ್ನೂ ನಿರ್ಣಯಿಸುವಲ್ಲಿ ಬಹು ಮುಖ್ಯ ಅಂಶವಾಗುತ್ತದೆ.

ಸಹಜ ಮರಣವನ್ನೂ, ದುರ್ಮರಣವನ್ನೂ ಪಡೆದ ವ್ಯಕ್ತಿಯ ಹೆಂಡತಿ ಸಹಗಮನ ಮಾಡಿದರೆ ಆಗ ಆಕೆಯ ಸಹಗಮನದ ವಿಷಯವೇ ಪ್ರಧಾನವಾಗುತ್ತದೆ. ಆಗ ಆ ಸ್ಮಾರಕ ಶಿಲೆಯ ಶಿಲ್ಪವು ಆಕೆಯ ಸಹಗಮನದ ಪಾತಿವ್ರತ್ಯವನ್ನು ಕೀರ್ತಿಸುವ ಸಂಕೇತಗಳನ್ನು ಪಡೆಯುತ್ತದೆ.

ಈ ಮಾತನ್ನು ಇವುಗಳ ಪಾಠದ ಬಗ್ಗೆಯೂ ಹೇಳಬಹುದು ವೀರಗಲ್ಲುಗಳಲ್ಲಿ ವೀರ ಚಿತ್ರಣಕ್ಕೆ ಪ್ರಧಾನ ಪಾತ್ರ ದೊರೆತಿದ್ದು, ಸಹಗಮನ ನಿರೂಪಣೆಗೆ ಎರಡನೆಯ ಸ್ಥಾನ ದೊರೆಯುವಂತೆಯೇ ಮಾಸ್ತಿಗಲ್ಲುಗಳಲ್ಲಿ ಮಹಾಸತಿಯಾದವಳ ಚಿತ್ರಣಕ್ಕೆ ಪ್ರಧಾನ ಸ್ಥಾನ ಲಭಿಸಿ, ಆಕೆಯ ಗಂಡನಾದವನಿಗೆ ಎರಡನೆಯ ಸ್ಥಾನ ದೊರೆಯುತ್ತದೆ. ಕೆಲವೊಮ್ಮೆ ಆತನ ಪ್ರಸ್ತಾಪವೇ ಶಿಲ್ಪದಲ್ಲಿ ಬರುವುದಿಲ್ಲ ಮೇಲಿನ ಅಭಿಪ್ರಾಯ ಮಹಾಸತಿಯರ ಸ್ಮಾರಕ ಶಿಲೆಗಳ ಮೇಲೆ ಇರುವ ಶಾಸನಪಾಠವನ್ನು ಗಮನಿಸಿದಾಗ ಇನ್ನಷ್ಟು ದೃಢವಾಗುತ್ತದೆ.

ಈ ಒಂದು ಹಿನ್ನಲೆಯಲ್ಲಿ ಕರ್ನಾಟಕದ ಕೆಲವು ವೀರಗಲ್ಲು ಮತ್ತು ಮಹಾಸತಿಕಲ್ಲುಗಳ ವಿವರಗಳನ್ನು ನೋಡಬಹುದು.

ದಕ್ಷಿಣ ಭಾರತದಲ್ಲಿ ಕ್ರಿ.ಶ.೧೦ನೆಯ ಶತಮಾನದವರೆಗೆ ಸಹಗಮನ ಪದ್ಧತಿಯು ಪ್ರಚಾರಕ್ಕೆ ಬರಲಿಲ್ಲ. ಹತ್ತನೆಯ ಶತಮಾನದ ಆರಂಭದಲ್ಲಿ ಪಶ್ಚಿಮ ಕರಾವಳಿಯಲ್ಲಿ ಪ್ರವಾಸ ಮಾಡಿದ ಅರಬ್ಬಿ ವರ್ತಕ ಸಾಲೆಮಾನನು ಹೇಳುವಂತೆ ಎಲ್ಲೋ ವಿರಳವಾಗಿ ಮಾತ್ರ ರಾಣಿಯರು ತಮ್ಮ ಗಂಡಂದಿರ ಚಿತೆಗಳನ್ನೇರುತ್ತಿದ್ದರು. ಅಲ್ಲಿ ಬಲವಂತವಿರುತ್ತಿರಲಿಲ್ಲ. ಏರುವುದು, ಬಿಡುವುದು ಅವರಿಷ್ಟವಾಗಿರುತ್ತಿತ್ತು. ಸುಮಾರು ಕ್ರಿ.ಶ.೯೦೦ರ ವರೆಗಿನ ಪಲ್ಲವ, ಚೋಳ, ಪಾಂಡ್ಯರಲ್ಲಿಯಾ ಈ ಸಂಪ್ರದಾಯದ ಚಿಹ್ನೆಗಳು ಕಂಡು ಬಂದಿವೆ.

ಆರನೆಯ ಶತಮಾನದಿಂದ ಹನ್ನೆರಡನೇ ಶತಮಾನದ ಮಧ್ಯಬಾಗದವರೆಗೆ ಸಹಗಮನ ಸುಮಾರು ಹತ್ತು ನಿದರ್ಶನಗಳು ದೊರಕುತ್ತವೆ. ಮುಂದೆ ಇವುಗಳ ಸಂಖ್ಯೆಯು ಹೆಚ್ಚುತ್ತಾ ಹೋಗುತ್ತದೆ. ಕರ್ನಾಟಕದಲ್ಲಿ ವೀರಯುಗದೊಡನೆ (೯. ೧೦ನೆ ಶತಮಾನ) ಪ್ರಬಲಗೊಂಡ ಸಹಗಮನ ಪದ್ಧತಿಯು ಹೊಯ್ಸಳ ವಿಜಯನಗರ ಸಾಮ್ರಾಜ್ಯಗಳ ಕಾಲದಲ್ಲಿ ತನ್ನ ತುದಿಯನ್ನು ಮುಟ್ಟಿತು. ಒಬ್ಬ ರಾಜನು ಮಡಿದ ತಕ್ಷಣ ಅಥವಾ ಅವನು ಮಡಿಯುವ ಸೂಚನೆಯು ದೊರಕಿದರೂ ಸಾಕು, ಸಾಯಲು ಸಿದ್ದರಾಗುತ್ತಿದ್ದ ರಾಣಿಯರ ವಿಷಯವನ್ನು "ಜನ್ನನ ಅನಂತನಾಥಪುರಣ" ಎಂಬ ಮೇಲಿನ ಅಭಿಪ್ರಾಯಗಳಿಗೆ ವೀರಗಲ್ಲುಗಳ ಶಿಲ್ಪದಿಂದಲೂ ಬೆಂಬಲ ದೊರೆಯುತ್ತದೆ.

ಹಾಗೆಯೇ ಮಾಸ್ತಿ ಕಲ್ಲುಗಳನ್ನು ಗುರುತಿಸುವ ಮೂರ್ನಾಲ್ಕು ಕ್ರಮಗಳಿವೆ, ಒಂದು ರೀತಿಯ ಕಲ್ಲುಗಳ ಮೇಲೆ ಶಸ್ತ್ರಧಾರಿಯಾದ ಪುರುಷ ಮತ್ತು ಅವನ ಸಂಗಡ ಸ್ತ್ರೀಯ ಚಿತ್ರವಿದ್ದರೆ, ಇನ್ನೊಂದು ರೀತಿಯ ಕಲ್ಲುಗಳ ಮೇಲೆ ಸ್ತ್ರೀಯ ವಿಗ್ರಹ ಮಾತ್ರ ಇದ್ದು ಅಲ್ಲಿಯೇ ಒಂದು ಮೂಲೆಯಲ್ಲಿ ಪುರುಷನ ಚಿತ್ರವು ಕಾಣುತ್ತದೆ, ಮಾಸ್ತಿ (ಮಹಾಸತಿ) ಕಲ್ಲಿನಲ್ಲಿ ಕಾಣಬರುವ ಪುರುಷ ಸತಿಯಾದವಳ ಪತಿ ಆಗಿರುತ್ತಾನೆ. ಮಂಡ್ಯ ಜಿಲ್ಲೆಯಲ್ಲಿ ವಿಶೇಷವಾಗಿ ಮಾಸ್ತಿ ಕಲ್ಲುಗಳಲ್ಲಿ ಒಂದು ಕಂಬ ಮತ್ತು ಅದರ ಬಲಭಾಗದಿಂದ ಹೊರಚಾಚಿದಂತೆ ಒಂದು ಕೈ ಕಾಣುತ್ತದೆ. ಇದನ್ನು ಹಳ್ಳಿಗರು ಒಂಟಿ ಕೈ ಮಾಸ್ತಿ ಕಲ್ಲಮ್ಮ ಎಂದು ಕರೆಯುತ್ತಾರೆ. ಕೆಲವು ಕಲ್ಲುಗಳ ಮೇಲೆ ಬಲಗೈಯನ್ನುಮೇಲಕ್ಕೆ ಚಾಚಿ ಎಡಗೈಯಲ್ಲಿ ಒಂದು ಕಲಶ ಅಥವಾ ಕನ್ನಡಿ ಹಿಡಿದಂತಿದ್ದು, ಬಲಗೈ ಹೆಬ್ಬೆರಳು ಮತ್ತು ತೋರು ಬೆರಳುಗಳ ನಡುವೆ ನಿಂಬೆ ಹಣ್ಣನ್ನು ಕೆತ್ತಲಾಗಿರುತ್ತದೆ. ಈ ವಸ್ತುಗಳು ಶುಭದ ಸಂಕೇತವಾಗಿದ್ದು ಇಂಥ ಹಲವು ಶುಭದ ಸಾಮಾನುಗಳನ್ನು ಹಿಡಿದು ಸ್ತ್ರೀಯು

ಸತಿಯಾದ ಕಥೆಗಳಿವೆ, ದಾಖಲೆಗಳಿವೆ. ಕೆಲವೆಡೆ ಇಂತ ಮಾಸ್ತಿ ಕಲ್ಲುಗಳನ್ನು ಚಿಕ್ಕ ಗುಡಿಗಳನ್ನು ಕಟ್ಟಿ ಮಾಸ್ತಿ ಗುಡಿ ಎಂದು ಕರೆದು ಪೂಜಿಸುವುದು ಜಿಲ್ಲೆಯಲ್ಲಿ ಕಾಣಬರುತ್ತದೆ. ಇಲ್ಲೂ ಕಲ್ಲುಗಳ ಮೇಲೆ ಈಶ್ವರ ಲಿಂಗವನ್ನು ಕೆತ್ತಿದ್ದು ಸತಿಯಾದವರು ಭಗವಂತನ ಸಾನ್ನಿದ್ಯಕ್ಕೆ ಸೇರಿಕೊಂಡವರೆಂದು ಸೂಚಿಸುತ್ತದೆ. ಇಂಥ ಒಂದು ಉದಾಹರಣೆಯೂ ನಾಗಮಂಗಲ ತಾಲ್ಲೋಕಿನ ಕಸಲಿಗೆರೆಯ ಮಾಸ್ತಿ ಕಲ್ಲೊಂದು ಮಹಾದೇವಿ ಎನ್ನುವಳು. ತಾನೇ ಪತಿ ಮಾರದೇವನೊಂದಿಗೆ ಸತಿಯಾದ ಸಂಗತಿಯನ್ನು ತಿಳಿಸುತ್ತದೆ. ಇದೇ ತಾಲ್ಲೋಕಿನ ಅಂಕನಹಳ್ಳಿಯ ಕ್ರಿ.ಶ. ೧೭೬೩ರ ಶಾಸನವು ತಿರುಮಲಗಿರಿಯ ಮಗನಾದ ತಿಮ್ಮನೆಂಬ ವೀರನು ಹೋಸಕೋಟೆ ಎಂಬಲ್ಲಿ ನಡೆದ ಯುದ್ದದಲ್ಲಿ ಮಡಿದ ಸ್ಮಾರಕವಾಗಿ ಮೈಸೂರು ಅರಸು ಇಮ್ಮಡಿ ಕೃಷ್ಣರಾಜ ಒಡೆಯರ ಅವರು 'ರಕ್ತ ಕೊಡುಗೆ' (ಭೂಮಿ ದಾನ) ನೀಡಿದ ವಿಚಾರವನ್ನು ಉಲ್ಲೇಖಿಸಲಾಗಿದೆ.

ಶಾಪಾಶಯಗಳು

ಶಾಸನಗಳೆಂದರೆ ಹೆಚ್ಚಾಗಿ ದಾನಶಾಸನಗಳೇ. ಬ್ರಾಹ್ಮಣರಿಗೆ, ವೀರರಿಗೆ, ಅಧಿಕಾರಿಗಳಿಗೆ, ಅನೇಕ ವೃತ್ತಿಗಳನ್ನು ಮಾಡುವವರಿಗೆ, ಭೂಮಿಯನ್ನು ದಾನವಾಗಿ ನೀಡಲಾಗುತ್ತಿತ್ತು ಅಥವಾ ದತ್ತಿಯನ್ನು ಬಿಡಲಾಗುತ್ತಿತ್ತು. ದೇವಾಲಯಗಳನ್ನು ನಿರ್ಮಿಸಿ, ದೇವರ ಪೂಜೆ ಪುನಸ್ಕಾರಗಳಿಗೂ ಕೂಡಾ ಸಾಕಷ್ಟು ಭೂಮಿಯನ್ನು ತೆರಿಗೆ ಸುಂಕಗಳನ್ನು ದತ್ತಿಯಾಗಿ ಬಿಡಲಾಗುತ್ತಿತ್ತು. ಕೆರೆಗಳನ್ನು ಕಟ್ಟಿಸಿ ಅದರ ನಿರ್ವಹಣೆಗೆ ಬಿತ್ತುವಾಟವನ್ನು ಹಾಗೂ ಸುಂಕಗಳನ್ನು ದತ್ತಿಯಾಗಿ ಬಿಡಲಾಗುತ್ತಿತ್ತು. ಇಲ್ಲಿ ಎಲ್ಲ ವರ್ಗದವರಿಗೂ ಭೂಮಿಯನ್ನು ನೀಡಲಾಗುತ್ತಿತ್ತು.

ಈ ರೀತಿ ಬಿಟ್ಟ ದತ್ತಿಗಳನ್ನು ಕಾಲಾನುಕ್ರಮದಲ್ಲಿ ಉದ್ದೇಶಪೂರ್ವಕವಾಗಿ ಕೆಲವರು ಅಪಹರಿಸುತ್ತಿದ್ದರು. ಇನ್ನು ಕೆಲವು ವೇಳೆ ದತ್ತಿ ನೀಡಿದ ವಿಚಾರ ತಿಳಿಯದೇ ಕೆಲವರು ಅದನ್ನು ಅತಿಕ್ರಮಣ ಮಾಡಿಕೊಳ್ಳುತ್ತಿದ್ದರು. ಇದನ್ನು ತಡೆಯಲು ಶಾಸನಗಳನ್ನು ಹಾಕಿಸಿ, ದತ್ತಿಯ ವಿವರಗಳನ್ನು ಉಲ್ಲೇಖಿಸಿ, ಇದನ್ನು ಅಪಹರಿಸಿದವರಿಗೆ ಕೆಡುಕಾಗುತ್ತದೆಂದು ಎಚ್ಚರಿಸಲು ಶಾಪಗಳನ್ನು ಈ ದತ್ತಿಗಳನ್ನು ಕಾಪಾಡಿದವರಿಗೆ ಒಳ್ಳೆಯದಾಗುತ್ತದೆ ಎಂಬುದನ್ನು ತಿಳಿಸಲು ಆಶಯಗಳನ್ನೂ ಶಾಸನಗಳ ಕೊನೆಯಲ್ಲಿ ಉಲ್ಲೇಖಿಸಲು ಆರಂಭಿಸಲಾಯಿತು. ಇದನ್ನು ಶಾಪಾಶಯಗಳು ಎಂದು ಹೇಳಲಾಗುತ್ತದೆ. ಇದನ್ನು 'ಫಲಶ್ರುತಿಗಳು' ಎಂದು ಚಿದಾನಂದಮೂರ್ತಿಯವರು ಹೇಳಿದ್ದಾರೆ. ಸಾಮಾನ್ಯವಾಗಿ ದಾನಶಾಸನಗಳಲ್ಲಿ ಮಾತ್ರ ಈ ಶಾಪಾಶಯಗಳು ಕಂಡು ಬರುತ್ತವೆ. ದಾನದ ಪ್ರಸಕ್ತಿ ಇಲ್ಲದೆ ಕೇವಲ ವೀರನ ಮರಣವನ್ನು ಉಲ್ಲೇಖಿಸುವ ಬರಹವಿರುವ ವೀರಗಲ್ಲುಗಳಲ್ಲಿ, ಜೈನರ ನಿಸಿಧಿ ಶಾಸನಗಳಲ್ಲಿ, ಪ್ರಶಸ್ತಿ ಶಾಸನಗಳಲ್ಲಿ

[illegible]

ಈ ಶಾಪಾಶಯಗಳು ಇರುವುದಿಲ್ಲ. ಜೈನರು ಅಹಿಂಸೆಯನ್ನು ಪಾಲಿಸುವುದರಿಂದ ಅವರು ಹಿಂಸೆಯನ್ನು ಮಾಡುವುದಿಲ್ಲ ಆದುದರಿಂದ ಜೈನರ ಶಾಸನಗಳಲ್ಲಿ ಶಾಪಾಶಯಗಳು ಕಂಡುಬರುವುದಿಲ್ಲ.

ತಾಮ್ರ ಶಾಸನಗಳಲ್ಲಿ ಶಾಪಾಶಯಗಳ ಉಲ್ಲೇಖ ಬಹಳ ದೀರ್ಘವಾಗಿರುತ್ತವೆ. 'ತಾಮ್ರ ಶಾಸನಗಳು ಬ್ರಾಹ್ಮಣರ ವೈಯಕ್ತಿಕ ದಾಖಲೆಗಳಾಗಿದ್ದು, ಈ ಶಾಸನಗಳ ಮೂಲಕ ಅವರಿಗೆ ಬಂದಿರುವ ದಾನವನ್ನು ಯಾವುದೇ ಕಾರಣದಿಂದ ಯಾರೂ ಅಪಹರಿಸಬಾರದು, ಅಪಹರಿಸಿದವರಿಗೆ ಘೋರಶಿಕ್ಷೆ ಎಂದು ಎಚ್ಚರಿಸಲು, ಮೇಲ್ಕಂಡ ನಾನಾ ಪುರಾಣ ಗ್ರಂಥಗಳಿಂದ, ಮತ್ತು ಸ್ವರಚಿತವಾದ ಅನೇಕ ಶಾಪಾಶಯಗಳನ್ನು ತಾಮ್ರ ಶಾಸನಗಳಲ್ಲಿ ಬಹಳ ದೀರ್ಘವಾಗಿಯೇ ನೀಡಲಾಗಿರುತ್ತದೆ. 'ತಾನು ಮಾಡಿದ ದಾನ ದುರ್ವ್ಯಯವಾಗಬಾರದೆಂದು' ದುರ್ವ್ಯಯವನ್ನು ತಡೆಯಲು ಅಪಹರಿಸಿದವನಿಗೆ ಆಗುವ ಹಾನಿಯನ್ನೂ ರಕ್ಷಿಸಿದವನಿಗೆ ಆಗುವ ಒಳಿತನ್ನೂ, ಶಾಸನಗಳಲ್ಲಿ ಎಚ್ಚರಿಕೆಗಳಂತೆ ಮೊದಲ ಕಾಲದಲ್ಲಿ ಸೇರಿಸತೊಡಗಿದಂತೆ ಕಾಣುತ್ತದೆ. ಕ್ರಮೇಣ ಅದು ಒಂದು ಸಂಪ್ರದಾಯವಾಗಿ ದಾನಶಾಸನದ ಅವಿಭಾಜ್ಯ ಅಂಗದಂತೆ ಸೇರ್ಪಡೆಯಾಗತೊಡಗಿತು, ದಾನವನ್ನು ಅಪಹರಿಸಿದವರಿಗೆ ಆಗುವ ಹಾನಿಯನ್ನು ಹೇಳುವ ಮಾತುಗಳನ್ನು ಶಾಪಾಶಯಗಳೆಂದೂ ರಕ್ಷಿಸದವನಿಗೆ ಆಗುವ ಒಳಿತನ್ನು ಹೇಳುವ ಭಾಗಗಳನ್ನು ಪುಣ್ಯಾಶಯಗಳೆಂದು ನಿರ್ದೇಶನ ಮಾಡಬಹುದು. 'ಭಾರತದ ಮೊಟ್ಟಮೊದಲ ಶಾಸನಗಳಾದ ಅಶೋಕನ ಶಾಸನಗಳಲ್ಲಿ ಶಾಪಾಶಯಗಳಿಲ್ಲ. ಕ್ರಿ.ಶ. ಎರಡನೆಯ ಶತಮಾನದಿಂದ ಸಂಸ್ಕೃತ–ಪಾಕೃತ ಮಿಶ್ರ ಶಾಸನಗಳ ರಚನೆ ಆರಂಭವಾದ ಮೇಲೆ ಈ ಶಾಪಾಶಯ ಪದ್ಯಗಳು ಆರಂಭವಾಗುತ್ತವೆ. ಮನು, ಗೀತಾ, ಶ್ಲೋಕ ಎಂದು ಈ ಶಾಪಾಶಯಗಳನ್ನು ಪ್ರಾರಂಭಿಸಿದ್ದರೂ, ವಾಸ್ತವವಾಗಿ ಅವುಗಳನ್ನು ಪದ್ಮಪುರಾಣ, ವಿಷ್ಣುಧರ್ಮೋತ್ತರಪುರಾಣ, ಪದ್ಮಪುರಾಣ, ಭವಿಷ್ಯಪುರಾಣ ಇವುಗಳಿಂದ ಆರಿಸಿಕೊಳ್ಳಲಾಗಿದೆ' ಎಂಬುದನ್ನು ವಿದ್ವಾಂಸರು ತೋರಿಸಿಕೊಟ್ಟಿದ್ದಾರೆ. ಬ್ರಾಹ್ಮಣರು ತುಂಬಾ ಜಿಪುಣರು ಅವರು ಯಜ್ಞ ಯಾಗಾದಿಗಳನ್ನು ಮಾಡಿ ಅವರ ಜೀವನವನ್ನು ಸಾಗಿಸುತ್ತಾರೆ. ಶಾಸನಗಳು ಬ್ರಾಹ್ಮಣರ ವೈಯಕ್ತಿಕ ದಾಖಲೆಗಳಾಗಿದ್ದು, ಅವರಿಗೆ ಬಂದಿರುವ ದಾನಗಳನ್ನು ಯಾರು ಅಪಹರಿಸಬಾರದು. ಅವರು ಶಾಪ ಹಾಕಿದರೆ ಒಳ್ಳೆಯದಾಗುವುದಿಲ್ಲ ಎನ್ನುವುದು ನಂಬಿಕೆ, ಸತ್ಯ ಕೂಡ.

ದೇವರಕೊಂಡಾರೆಡ್ಡಿಯವರು, 'ಕರ್ನಾಟಕ ಶಾಸನಗಳಲ್ಲಿ ಶಾಪಾಶಯಗಳು' ಎಂಬ ಕೃತಿಯಲ್ಲಿ ಶಾಪಾಶಯಗಳನ್ನು ಮತಧರ್ಮ, ಸಂಬಂಧಸೂಚಕ, ಉಕ್ತಿಗಳ ಮೇಲೆ ಪ್ರಧಾನವಾಗಿ

ಅಧ್ಯಯನ ಮಾಡಿದ್ದಾರೆ. ಮತಧರ್ಮದಲ್ಲಿ ಆಯಾ ಮತಧರ್ಮದವರ ಕ್ಷೇತ್ರಗಳು, ದೇವರುಗಳು, ಗುರುಗಳು, ಉಲ್ಲೇಖಿತರಾಗಿರುತ್ತಾರೆ. ಸಂಬಂಧಸೂಚಕದಲ್ಲಿ ಮುಖ್ಯವಾಗಿ ತಂದೆ, ತಾಯಿ, ಸಹೋದರಿಯರು ಇರುತ್ತಾರೆ. ಜೊತೆಗೆ ಪ್ರಾಣಿಗಳ ಉಲ್ಲೇಖವೂ ಕೂಡಾ ಈ ಶಾಪಾಶಯಗಳಲ್ಲಿರುತ್ತದೆ.

ದೇವಾಲಯ, ಬಸದಿ, ಮಂಟಪಗಳ ನಿರ್ಮಾಣ, ದೇವಾಲಯಗಳಿಗೆ ಮಾಡಿಸಿಕೊಟ್ಟ ಬಾಗಿಲುವಾಡ, ಘಂಟೆ, ದೀಪಮಾಲೆಕಂಬ, ಪ್ರಭಾವಳಿ, ಪಾತ್ರೆ ಪದಾರ್ಥಗಳನ್ನು ದೇವತಾ ವಿಗ್ರಹಗಳನ್ನು ಮಾಡಿಸಿಕೊಟ್ಟ ಘಟನೆಗಳನ್ನು ಹೇಳುವ ಶಾಸನಗಳಲ್ಲಿ ಶಾಪಾಶಯವಿರುವುದಿಲ್ಲ. ಜಿಲ್ಲೆಯ ಮೇಲುಕೋಟೆ, ತೊಣ್ಣೂರು, ಶ್ರೀರಂಗಪಟ್ಟಣ, ಕಿಕ್ಕೇರಿ, ಕಂಬದಹಳ್ಳಿ, ಹೊನ್ನಾವರ, ಸುಬ್ಬರಾಯನ ಕೊಪ್ಪಲು, ಬಿಂಡಿಗನವಿಲೆ, ಬೆಳ್ಳೂರು, ಆರಣಿ, ಚಬ್ಬನಹಳ್ಳಿ, ಆದಿಚುಂಚನಗಿರಿ, ಇರಬನಹಳ್ಳಿ, ದೇವರಹಳ್ಳಿ, ದೇವಲಾಪುರ, ಕೆರಗೋಡು, ಮದ್ದೂರು, ಮಾರೇಹಳ್ಳಿ ಮುಂತಾದ ಅನೇಕ ಕಡೆಗಳಲ್ಲಿರುವ ಚಿಕ್ಕಶಾಸನಗಳಲ್ಲಿ ಶಾಪಾಶಯಗಳಿರುವುದಿಲ್ಲ. ಕೆರೆಕಟ್ಟೆಗಳನ್ನು ಕಟ್ಟಿಸಿದ್ದನ್ನು ಹೇಳುವ ಶಾಸನಗಳಲ್ಲೂ ಶಾಪಾಶಯಗಳಿರುವುದಿಲ್ಲ. ರಾಮಚಂದ್ರಾಪುರ, ಕಂಬದಹಳ್ಳಿ, ಶಿವನಹಳ್ಳಿ, ದಡಗ, ಮುಂತಾದ ಕಡೆಗಳಲ್ಲಿ ಇಂತಹ ಶಾಸನಗಳು ಕಂಡುಬರುತ್ತವೆ. ದತ್ತಿ ನೀಡಿದ್ದರೂ ಕೂಡಾ ಕೆಲವು ಶಾಸನಗಳಲ್ಲಿ ಶಾಪಾಶಯಗಳನ್ನು ಹೇಳದೇ ಇರುವುದು ಕಂಡು ಬರುತ್ತದೆ. ಶಾಸನಗಳು ಚಿಕ್ಕದಾಗಿದ್ದಷ್ಟೂ ಶಾಪಾಶಯಗಳ ಪ್ರಸಕ್ತಿ ಇರುವುದಿಲ್ಲ. ಇದ್ದರೂ ಬಹಳ ಕಡಿಮೆ. ಕೆಲವೊಮ್ಮೆ ಶಾಸನಗಳಲ್ಲಿರುವ ವಿಷಯಕ್ಕಿಂತ ಶಾಪಾಶಯಗಳೇ ದೊಡ್ಡದಾಗಿರುವ ಉದಾಹರಣೆಗಳೂ ಇವೆ. ದೊಡ್ಡ ದೊಡ್ಡ ಶಿಲಾಶಾಸನಗಳಲ್ಲಿ ಕಾವ್ಯಮಯವಾದ ಕನ್ನಡ ಭಾಷೆಯ ಶಾಪಾಶಯಗಳನ್ನು ಕಾಣಬಹುದು. ಕರ್ನಾಟಕದ ಕನ್ನಡ ಮತ್ತು ಸಂಸ್ಕೃತ ಶಾಸನಗಳಲ್ಲಿ ಕಂಡು ಬರುವ ಶಾಪಾಶಯಗಳ ಸಾಮಾನ್ಯ ಸ್ವರೂಪವೇ ಮಂಡ್ಯ ಜಿಲ್ಲೆಯ ಶಾಸನಗಳಲ್ಲಿ ಕಂಡು ಬಂದರೂ. ಕೆಲವು ವಿಶೇಷ ರೀತಿಯ ಶಾಪಾಶಯಗಳು ಜಿಲ್ಲೆಯ ಶಾಸನಗಳಲ್ಲಿ ಉಲ್ಲೇಖಿತವಾಗಿವೆ. ಈ ಶಾಪಾಶಯಗಳನ್ನು ತಾಮ್ರಶಾಸನದ ಶಾಪಾಶಯಗಳು ಮತ್ತು ಶಿಲಾಶಾಸನದ ಶಾಪಾಶಯಗಳು ಎಂದು ಎರಡು ರೀತಿ ವಿಂಗಡಿಸಬಹುದು. ತಾಮ್ರಶಾಸನಗಳಲ್ಲಿ ಸಾಮಾನ್ಯವಾಗಿ ದೀರ್ಘವಾದ ಸಿದ್ಧಮಾದರಿಯ ಶ್ಲೋಕಗಳಿಂದ ಕೂಡಿದ ಶಾಪಾಶಯಗಳಿದ್ದರೆ, ಶಿಲಾ ಶಾಸನಗಳಲ್ಲಿ ಸಾಮಾನ್ಯವಾಗಿ ಶಾಪಾಶಯಗಳು ಕನ್ನಡ ಭಾಷೆಯಲ್ಲಿದ್ದು ಚಿಕ್ಕದಾಗಿರುತ್ತವೆ ಮತ್ತು ಸ್ಥಳೀಯ ಭಾಷೆಯ ಸೊಗಡನ್ನು ಉಳಿಸಿಕೊಂಡಿರುತ್ತವೆ. ಶಾಸನವನ್ನು ಅಥವಾ ಶಿಲ್ಪವನ್ನೊಳಗೊಂಡ ಶಾಸನವನ್ನು ಬರೆದಿರುವ ಶಿಲೆಯ ಉದ್ದಗಲದ ಮೇಲೆಯೂ ಈ ಶಾಪಾಶಯಗಳ ಪ್ರಮಾಣ ನಿರ್ಧಾರಿತವಾದಂತೆ ತೋರುತ್ತದೆ. ೭ ರಿಂದ ೧೦ನೇ ಶತಮಾನದವರೆಗಿನ ಕೆಲವು

[illegible]

ಶಿಲಾಶಾಸನಗಳಲ್ಲಿ ಶಾಪಾಶಯಗಳು ಕಂಡು ಬರುವುದಿಲ್ಲ. ಇದ್ದರೂ ಅವು ಬಹಳ ಚಿಕ್ಕದಾಗಿರುತ್ತವೆ. ಗಂಗರ ಕಾಲದ ಶಿಲಾ ಶಾಸನಗಳಲ್ಲಿ, ಅದರಲ್ಲೂ ಮುಖ್ಯವಾಗಿ ವೀರಗಲ್ಲುಗಳಲ್ಲಿ ಶಾಪಾಶಯಗಳು ಕಂಡು ಬರುವುದಿಲ್ಲ. ಕೆಲವು ಶಾಸನಗಲ ಅಂತ್ಯದಲ್ಲಿ ಕೇವಲ ಮಂಗಳ ಸೂಚನೆಯ ಉಲ್ಲೇಖವಿದೆ.

ಮಂಚಿಬೀಡು ಕೃಷ್ಣರಾಜಪೇಟೆ, ಚಿಕನಕುರಳಿ, ಸುಂಕಾತೊಂಡನೂರು, ಇಂಗಲಗುಪ್ಪೆ ಹೊನ್ನೇನಹಳ್ಳಿ, ಚುಂಚನಹಳ್ಳಿ ಮಾವಿನಕೆರೆ, ಕಸಲಗೆರೆ, ಮಡಕೆಹೊಸೂರು, ಮಂಡ್ಯ, ಬೀಚೇನಹಳ್ಳಿ ಇನ್ನೂ ಮುಂತಾದ ವೀರಗಲ್ಲುಗಳಲ್ಲಿ ವೀರರು ಸತ್ತ ಘಟನೆಗಳನ್ನು ನಿರೂಪಿಸಿದ್ದು, ಶಾಪಾಶಯದ ಪ್ರಸಕ್ತಿಯೇ ಬರುವುದಿಲ್ಲ. ವೀರರು ಯುದ್ಧದಲ್ಲಿ ಮಡಿದ ಘಟನೆಯನ್ನು ನಾಲ್ಕು ಚಿಕ್ಕ ಸಾಲುಗಳಲ್ಲಿ ನಿರೂಪಿಸಿದೆ. ಅದೇ ರೀತಿ ನಿಸಿದಿ ಶಾಸನಗಳಲ್ಲೂ ಘಟನೆಗಳ ನಿರೂಪಣೆ ಮಾಡಿದ್ದು ಅವುಗಳಲ್ಲೂ ಶಾಪಾಶಯಗಳ ಪ್ರಸಕ್ತಿ ಬರುವುದಿಲ್ಲ. ಮಾಸ್ತಿಕಲ್ಲುಗಳಲ್ಲಿಯೂ ಕೂಡಾ ಕೊಡುಗೆಯ ವಿಚಾರವಿಲ್ಲದಿದ್ದರೆ ಶಾಪಾಶಯಗಳಿರುವುದಿಲ್ಲ. ಆದರೆ ಕರತಾಳ, ಆಲೇನಹಳ್ಳಿ ಇನ್ನೂ ಮುಂತಾದ ಅನೇಕ ವೀರಗಲ್ಲುಗಳಲ್ಲಿ ಘಟನೆಯನ್ನು ಚಿಕ್ಕದಾಗಿ ನಿರೂಪಿಸಿ ವೀರರಿಗೆ ಕೊಡುಗೆಯನ್ನು ನೀಡಿದ ವಿಚಾರವನ್ನು ಹೇಳಿದ ನಂತರವೂ ಅಂತ್ಯದಲ್ಲಿ 'ಮಂಗಳ ಮಹಾಶ್ರೀ' ಎಂದು ಮಾತ್ರ ಹೇಳಿದೆಯೇ ಹೊರತು ಶಾಪಾಶಯದ ವಿಚಾರವಿಲ್ಲ. ಈ ಶಾಸನಗಳು ಚಿಕ್ಕದಾಗಿರುವುದೂ ಕೂಡಾ ಶಾಪಾಶಯಗಳನ್ನು ಬರೆಯದೇ ಇರಲು ಕಾರಣವಿರಬಹುದು ಅಥವಾ ವೀರನ ಕುಟುಂಬದವರಿಗೆ ನೀಡಿದ ದತ್ತಿಗಳನ್ನು ಯಾರೂ ಅಪಹರಿಸುವುದಿಲ್ಲ ಎಂಬ ನಂಬಿಕೆಯೂ ಇರಬಹುದು.

ಅನೇಕ ಶಾಸನಗಳಲ್ಲಿ ದೇವಾಲಯ, ಬಸದಿಗಳಿಗೆ ದತ್ತಿ ನೀಡಿದ್ದರೂ ಶಾಪಾಶಯಗಳನ್ನು ಹೇಳಿರುವುದಿಲ್ಲ. ಗಂಗರ ಕಾಲದ ಒಂದು ಬಸದಿಯ ದತ್ತಿ ಶಾಸನದಲ್ಲಿ ಶಾಪಾಶಯವಿಲ್ಲ, ಬದಲಿಗೆ 'ಎಲ್ಲಾ ಕಾಲಕ್ಕಂ ಎಲ್ಲಿಳ್ದುಳಲುಂ ಸಲ್ಗುಂ' ಅಂದರೆ ಈ ದತ್ತಿಯು ಎಲ್ಲರಿಗೂ ಎಲ್ಲಕಾಲದಲ್ಲೂ ಸಲ್ಲುತ್ತವೆ ಎಂದು ಹೇಳಿದೆ. ಕಂಬದಹಳ್ಳಿಯ ಜೈನ ಬಸದಿಯ ದತ್ತಿಶಾಸನಗಳಲ್ಲೂ ಶಾಪಾಶಯವಿಲ್ಲ. ಈ ಬಸದಿಗಳಿಗೆ ರಾಜಾಶ್ರಯ ಇದ್ದುದರಿಂದ ದತ್ತಿಯ ಅಪಹರಣವಾಗದೆಂಬ ನಂಬಿಕೆಯೇ ಶಾಪಾಶಯಗಳನ್ನು ಹಾಕದಿರಲು ಕಾರಣವೆಂದು ಹೇಳಬಹುದು. ಅದೇ ರೀತಿಯಲ್ಲಿ ಅನೇಕ ದೇವಾಲಯಗಳಿಗೆ ದತ್ತಿ ಬಿಟ್ಟ ಶಾಸನದಲ್ಲೂ ಶಾಪಾಶಯಗಳು ಕಂಡು ಬರುವುದಿಲ್ಲ. ಬೆಳ್ಳೂರು, ದಡಗ, ಮಾದಿಹಳ್ಳಿ, ತಿಬ್ಬನಹಳ್ಳಿ, ದೇವರಹಳ್ಳಿ, ಹಾಲ್ತಿ, ಮುಂತಾದ ದೇವಾಲಯದ ದತ್ತಿ ಶಾಸನಗಳಲ್ಲೂ ಶಾಪಾಶಯ ಇಲ್ಲದಿರುವ ಉದಾಹರಣೆಗಳಿವೆ. ಅಗ್ರಹಾರವನ್ನು ನಿರ್ಮಿಸಿ, ಕೆರೆ ಮತ್ತು ದೇವಾಲಯಗಳನ್ನು ಕಟ್ಟಿಸಿದ ಕೆಳಗೆರೆ ಶಾಸನದಲ್ಲಿ 'ಮಾಡಿದ ಸೇವೆ ಶ್ರೀ ಮಲ್ಲಿಕಾರ್ಜುನ ದೇವರ ಶ್ರೀಪದಕೆ ಸಮರ್ಪಯಾಮಿ ಮಂಗಳ ಮಹಾಶ್ರೀಶ್ರೀಶ್ರೀ ಎಂದು ಹೇಳಿದೆ.

ತಾಮ್ರಶಾಸನಗಳ ಶಾಪಾಶಯಗಳು

ತಾಮ್ರಶಾಸನಗಳು ಖಾಸಗಿ ದಾಖಲೆಗಳಾಗಿದ್ದು, ಅದರ ಮೂಲಕ ದತ್ತಿಯಾಗಿ ನೀಡಿರುವ ಕೊಡುಗೆಗಳನ್ನು ಇತರರು ಅಪಹರಿಸುವ ಸಂಭವ ಇರುವುದರಿಂದ ಶಾಪಾಶಯಗಳನ್ನು ದೊಡ್ಡದಾಗಿಯೇ ನೀಡಲಾಗಿರುತ್ತದೆ. ಜಿಲ್ಲೆಯಲ್ಲಿ ಗಂಗರಿಂದ ಹಿಡಿದು ಮೈಸೂರು ಅರಸರವರೆಗೂ ಅನೇಕ ತಾಮ್ರ ಶಾಸನಗಳು ಸಿಕ್ಕಿವೆ. ಇವುಗಳಲ್ಲಿ ಲಿಖಿತವಾಗಿರುವ ಶಾಪಾಶಯಗಳು ಒಂದೊಂದು ರಾಜಮನೆತನಕ್ಕೂ ಸಾಧಾರಣವಾಗಿ ಒಂದೇ ನಮೂನೆಯದಾಗಿರುತ್ತವೆ. ಕಾರಣ ಈ ತಾಮ್ರ ಶಾಸನಗಳನ್ನು ರಾಜಾಸ್ಥಾನದಲ್ಲಿ ಪರಂಪರಾಗತವಾಗಿ ಇರುತ್ತಿದ್ದ ಶಾಸನಲೇಖಕರು ಬರೆಯುತ್ತಿದ್ದುದೇ ಆಗಿದೆ. ಒಂದೊಂದು ರಾಜಮನೆತನದ ಒಂದೊಂದು ತಾಮ್ರಶಾಸನದ ಶಾಪಾಶಯಗಳನ್ನು ಉದಾಹರಣೆಗಾಗಿ ಗಮನಿಸಬಹುದು. [೨೬]

ಜಿಲ್ಲೆಯಲ್ಲಿ ದೊರಕಿರುವ ಗಂಗರ ಅತ್ಯಂತ ಪ್ರಾಚೀನ ತಾಮ್ರಪಟವಾದ ಶಿವಮಾರನ ಹಳ್ಳಿಗೆರೆ ತಾಮ್ರಪಟದಲ್ಲಿರುವ ಶಾಪಾಶಯಗಳು, ಸಾಮಾನ್ಯವಾಗಿ ಇತರ ಗಂಗರ ಶಾಸನಗಳ ಮಾದರಿಯಂತೆಯೇ ಇದೆ.

'ಸರ್ವ್ವಾನಿತ್ಥಮಾಜ್ಞಾಪಯತಿ ರಾಜಾ ಶಿಷ್ಟಪ್ರಿಯಃ ವಿದಿತಮಸ್ತು ಭವದ್ಭಿರಿದನ್ದಾನಂ ಸರ್ವ್ವಪರಿಹಾರಾಯುಕ್ತಂ, ಸ್ವದತ್ತ ನಿರ್ವ್ವಿಶೇಷಂ ಪರಿಪಾಲನೀಯಂ ಯೋ ರಕ್ಷತಿ ಸ ಪುಣ್ಯ ಭಾಗ್ಭವತಿ ಯೋಸ್ಯ ಗ್ರಾಮಸ್ಯ ಸಿದ್ಧಾಯಮಪಹರೆಲ್ಲೋಬಾದ್ಬಾದೇತ ವಾ ಸ ಪಜ್ಚಭಿರ್ಮ್ಮಹದ್ಭಿರ್ಪ್ಪಾತಕೈಸ್ಸಂಯುಕ್ತೋ ಭವತಿ

ಅಪಿ ಚಾತ್ರ ಮನುಗೀತಾ ಶ್ಲೋಕಾ:

ಸ್ವನ್ದಾತುಂ ಸುಮಹಚ್ಛಕ್ಕಂ ದುಃಖಮನ್ಯಸ್ಯ ಪಾಲನಂ ದಾನಂ ವಾ ಪಾಲನಂ ವೇತಿ ದಾನಾಚ್ಛ್ರೇಯನುಪಾಲನಂ
ಸ್ವದತ್ತಾಂ ಪರದತ್ತಾಂ ವಾ ಯೋ ಹರೇತ ವಸುಂಧರಾ ಷಷ್ಟಿಂವರ್ಷ ಸಹಸ್ರಾಣಿ ವಿಷ್ಠಾಯಾಂ ಜಾಯತೆ ಕ್ರಿಮಿಃ
ಬ್ರಹ್ಮಸ್ವನ್ತು ವಿಷಂ ಘೋರಂ ನಂ ವಿಷಂ ವಿಷಮುಚ್ಯತೇ ವಿಷಮೇಕಾಕಿನಂ ಹನ್ತಿ ಬ್ರಹ್ಮಸ್ವಂ ಪುತ್ರ ಪೌತ್ರಿಕಂ

ವಾಲ್ಮೀಕೇರಪಿ ಶ್ಲೋಕಾ:

ಸರ್ವ್ವಾಮೇವ ಪ್ರಾರ್ಥಯತ್ಯೇಷ ರಾಮೋ ಭೂಯೋಭೂಯೋ ಭಾವಿನರ್ಪ್ಪಾರ್ಥಿವೇನ್ದ್ರಾನ್
ಸಾಮಾನ್ಯೋದಯಂ ಧರ್ಮಸೇತು ನುಪಾಣಾಂ ಕಾಲೇ ಕಾಲೇ ರಕ್ಷಣೀಯಂ ಕ್ರಮೇಣ'
ವಿಶ್ವಕರ್ಮಾಚಾರ್ಯನು ಈ ಶಾಸನವನ್ನು ಬರೆದಿದ್ದಾನೆ. ಹುಳ್ಳೇನಹಳ್ಳಿ,
ದೇವರಹಳ್ಳಿ ತಾಮ್ರಪಟಗಳಲ್ಲಿ 'ಬಹುಭಿರ್ವ್ವಸುದಾ ಭುಕ್ತಂ
ರಾಜಾಭಿಸ್ಸಗರಾದಿಭಿ ಯಸ್ಯಯಸ್ಯ ಯದಾಭೂಮಿ ತಸ್ಯ ತಸ್ಯ ತದಾ ಫಲಂ'
'ತದಪಿ ಬ್ರಹ್ಮದೇಯಮಿವ ರಕ್ಷಣೀಯಂ' ಎಂಬ ಹೆಚ್ಚುವರಿ ಶ್ಲೋಕ ಮತ್ತು ಬರಹಗಳಿವೆ.

ಹೊಯ್ಸಳರ ಸಂಸ್ಕೃತ ಶಾಸನಗಳಾವುವು ಜಿಲ್ಲೆಯಲ್ಲಿ ದೊರಕಿರುವುದಿಲ್ಲ. ಹೊಯ್ಸಳರ ದೀರ್ಘವಾದ ಕನ್ನಡ ಶಾಸನಗಳು ಜಿಲ್ಲೆಯಲ್ಲಿ ದೊರಕಿದ್ದು, ಇವುಗಳಲ್ಲಿ ಎರಡು ಮೂರು ಕನ್ನಡದ ವಾಕ್ಯಗಳು, ಎರಡು ಮೂರು ಸಂಸ್ಕೃತದ ಶ್ಲೋಕಗಳು ಎರಡನ್ನೂ ಬಳಸಿಕೊಂಡು ತಾಮ್ರಶಾಸನಗಳಲ್ಲಿ ಇರುವಷ್ಟೇ ದೊಡ್ಡದಾಗಿ ಶಾಪಾಶಯವನ್ನು ಹೇಳಿದೆ.

ವಿಜಯನಗರದ ಸಂಸ್ಕೃತ ಶಾಸನಗಳೂ ಕೂಡಾ ಆಸ್ಥಾನ ಶಾಸನ ಲೇಖಕರಿಂದ ರಚಿತವಾಗುತ್ತಿದ್ದವು. ಆದ ಕಾರಣ ಈ ತಾಮ್ರಶಾಸನಗಳಲ್ಲಿ ಹೆಚ್ಚುಕಡಿಮೆ ಒಂದೇ ಮಾದರಿಯ ಸಂಸ್ಕೃತ ಶ್ಲೋಕಗಳನ್ನು ಶಾಪಾಶಯದಲ್ಲಿ ಬಳಕೆ ಮಾಡಲಾಗಿದೆ. ಜಿಲ್ಲೆಯಲ್ಲಿ ದೊರಕಿರುವ ವಿಜಯನಗರ ಕಾಲದ ಮೊದಲನೇ ತಾಮ್ರಶಾಸನವಾದ ಪ್ರೌಢದೇವರಾಯನ ಶ್ರೀರಂಗಪಟ್ಟಣ ತಾಮ್ರಶಾಸನದಲ್ಲಿ 'ಏಕೈವ ಭಗಿನೀ ಲೋಕೇ ಸರ್ವೇಷಾಮೇವ ಭೂಭುಜಾಂ ಣ ಭೋಗ್ಯಾನ ಕರಗ್ರಾಹ್ಯಾ ಪಿತೃದತ್ತಾ ವಸುಂಧರಾ। ಸ್ವದತ್ತಾ ದ್ವಿಗುಣಂ ಪುಣ್ಯಂ ಪರದತ್ತಾನುಪಾಲನಂ। ಪರದತ್ತಾಪಹಾರೇಣ ಸ್ವದತ್ತಂ ನಿಷ್ಫಲಂ ಭವೇತ್। ದಾನಪಾಲನಯೋರ್ಮಧ್ಯೇ ದಾನಾತ್ಶ್ರೇಯೋನುಪಾಲನಂ। ದಾನಾತ್ಸ್ವರ್ಗವಾಪ್ನೋತಿ ಪಾಲನಾದಚ್ಯುತಂ ಪದಂ।' ಎಂಬ ಮೂರು ಸಂಸ್ಕೃತ ಶ್ಲೋಕಗಳು ಬಳಕೆಯಾಗಿವೆ. ಮಲ್ಲಿಕಾರ್ಜುನನ ಶ್ರೀರಂಗಪಟ್ಟಣ ತಾಮ್ರಶಾಸನದಲ್ಲಿ ಮೊದಲಿಗೆ 'ಈ ಧರ್ಮಕ್ಕೆ ತಪ್ಪಿದವರು ಸಹಸ್ರ ಕಪಿಲೆಯನೂ ಸಹಸ್ರ ಬ್ರಹ್ಮವನೂ ಶ್ರೀಕಾಶೀಕ್ಷೇತ್ರದಲ್ಲಿ ಮಣಿಕರ್ಣಿಕಾತೀರದಲ್ಲಿ ತಂಮ ಕೈಯ್ಯಾರ ವಧಿಸಿದ ದೋಷಕ್ಕೆ ಹೋಹರು' ಕನ್ನಡ ಶಾಪಾಶಯವನ್ನು ಹೇಳಿ, ನಂತರ 'ಗಣ್ಯಂತೇ ಪಾಂಸುವೋ ಭೂಮೌ ಗಣ್ಯಂತೇ ವೃಷ್ಟಿ ಬಿಂದವಃ।ನ ಗಣ್ಯಂತೇ ವಿಧಾತ್ರಾಪಿ ಬ್ರಂಹ್ಮ ಸಂಸ್ಥಾನಫಲಂ' ಎಂಬ ಅಪರೂಪದ ಸಂಸ್ಕೃತ ಶ್ಲೋಕವಿದೆ. ನಂತರ 'ಸ್ವದತ್ತಾಂ ದ್ವಿಗುಣಂ ಪುಣ್ಯಂ' ಮೊದಲಾದ ಶ್ಲೋಕಗಳನ್ನು ಹೇಳಿದೆ. ವೀರನರಸಿಂಹನ ಕೈಗೋನಹಳ್ಳಿ ತಾಮ್ರ ಶಾಸನದಲ್ಲಿ 'ಮದ್ವಂಶಜಾ ವರಮಹೀಪತಿವಂಶಜಾವಾಯೆನ್ಯೇನೃಪಾಃ ಸತತಮುಜ್ಜಲಧರ್ಮಚಿತ್ತಾಃ ಮದ್ಧರ್ಮಮೇವ ಸತತಂ ಪರಿಪಾಲಯಂತಿ ತತ್ಪಾದುಕದ್ವಯಮಹಂ ಶಿರಸಾವಹಾಮಿ' ಎಂಬ ಹೊಸ ಶ್ಲೋಕವಿದೆ. ಕೃಷ್ಣದೇವರಾಯನ ಶ್ರೀರಂಗಪಟ್ಟಣ ತಾಮ್ರಶಾಸನದಲ್ಲಿ ಇದರ ಜೊತೆಗೆ ಪ್ರಸಿದ್ಧ ಶ್ಲೋಕವಾದ 'ಸ್ವದತ್ತಾಂ ಪರದತ್ತಾಂ ವಾ...' ಮತ್ತು 'ಸಾಮಾನ್ಯೇಯಂ ಧರ್ಮಸೇತುಂ ನೃಪಾಣಾಂ ಕಾಲೇ ಕಾಲೇ ಪಾಲನೀಯೋ ಭವದ್ಭಿ।ಸರ್ವಾನೇತಾನ್ ಭಾವಿನಃ ಪಾರ್ಥಿವೇಂದ್ರಾನ್ ಭೂಯೋ ಭೂಯೋ ಯಾಚತೇ ರಾಮಚಂದ್ರಃ।' ಎಂಬ ಎರಡು ಶ್ಲೋಕಗಳನ್ನು ಹೊಸದಾಗಿ ಸೇರಿಸಿದೆ. ಜಿಲ್ಲೆಯಲ್ಲಿ ದೊರೆಯುವ ವಿಜಯನಗರ ಎಲ್ಲ ತಾಮ್ರಶಾಸನಗಳಲ್ಲಿ ಈ ನಾಲ್ಕಾರು ಸಂಸ್ಕೃತ ಶ್ಲೋಕಗಳನ್ನೇ ಶಾಪಾಶಯದಲ್ಲಿ ಬಳಸಲಾಗಿದೆ. ಕನ್ನಡ ಶಾಪಾಶಯದ ಬಳಕೆ ಕಂಡುಬರುವುದಿಲ್ಲ.

ಮೈಸೂರು ಒಡೆಯರ ಕಾಲದ ಸಂಸ್ಕೃತ ಶಾಸನಗಳಲ್ಲಿ ಶಾಪಾಶಯಗಳ ಪ್ರಸಕ್ತಿ ಇನ್ನೂ ದೀರ್ಘವಾಗಿದೆ. ಆದರೆ ಸಂಸ್ಕೃತ ಶ್ಲೋಕಗಳ ಜೊತೆಗೆ ಕನ್ನಡ ಶಾಪಾಶಯವನ್ನೂ ಬಳಸಿರುವುದು ವಿಶೇಷ. ಹೊನ್ನಲಗೆರೆಯ ಕ್ರಿ.ಶ.೧೬೨೩ರ ಮೂರು ಹಲಗೆಯ ತಾಮ್ರಶಾಸನವೇ ಜಿಲ್ಲೆಯಲ್ಲಿ ದೊರಕಿರುವ ಒಡೆಯರ ಅತ್ಯಂತ ಪ್ರಾಚೀನ ತಾಮ್ರಶಾಸನ. ಈ ಶಾಸನದಲ್ಲಿ ೭೨ ಸಾಲುಗಳಿದ್ದು, ಅದರಲ್ಲಿ ೯ ಸಾಲುಗಳ ಶಾಪಾಶಯ ಇದೆ. ಇದನ್ನು 'ಫಲಗ್ರಂಥ' ಎಂದು ಹೇಳಿದೆ. 'ಸ್ವದತ್ತಾ ದ್ವಿಗುಣಂ ಪುಣ್ಯಂ ಪರದತ್ತಾನುಪಾಲನಂ।ಪರದತ್ತಾಪಹಾರೇಣ ಸ್ವದತ್ತಂ ನಿಷ್ಪಲಂ ಭವೇತ್। ದಾನಪಾಲನೆಯೋರ್ಮಧ್ಯೇ ದಾನಾಚ್ಛ್ರೇಯೋನುಪಾಲನಂ। ದಾನಾತ್ ಸ್ವರ್ಗಮವಾಪ್ನೋತಿ ಪಾಲನಾದಚ್ಯುತಂ ಪದಂ। ಏಕೈವ ಭಗಿನೀಲೋಕೆ ಸರ್ವೇಷಾಮೇವ ಭೂಭುಜಾಂ। ನಭೋಜ್ಯಾ ನಕರಗ್ರಾಹ್ಯಾ ವಿಪ್ರದತ್ತಾ ವಸುಂಧರಾ। ಸ್ವದತ್ತಾಂ ಪರ ವಾ ಯೋಹರೇತ ವಸುಂಧರಾ। ಷಷ್ಟಿರ್ವರ್ಷ ಸಹಸ್ರಾಣಿ ವಿಷ್ಟಾಯಾಂ ಜಾಯತೇ ಕ್ರಿಮಿಃ। ಸಾಮಾನ್ಯೋದಯಂ ಧರ್ಮಸೇತುರ್ನೃಪಾಣಾಂ ಕಾಲೇ ಕಾಲೇ ಪಾಲನೀಯೋ ಮಹದ್ಭಿಃ। ಸರ್ವಾನೇತಾನ್ಭಾವಿನಃ ಪಾರ್ಥಿವೇಂದ್ರಾನ್ ಭೂಯೋ ಭೂಯೋ ಯಾಚತೇ ರಾಮಚಂದ್ರಃ। ಸವೇಷಾಂ ಛರ್ದಿತಂ ಭುಂಜ್ತೇ ಶ್ವಾಪಿ ಸ್ವಚ್ಛರ್ದಿತಂ ನ ತು। ತತಃ ಕಷ್ಟತರೋ ನೀಚಃ ಸ್ವಯಂ ದತ್ತಾಪಹಾರಕಃ।' ಹೀಗೆ ಆರು ಶ್ಲೋಕಗಳನ್ನು ಹೇಳಿದೆ.

ದೇವರಾಜ ಒಡೆಯರ ಶ್ರೀರಂಗಪಟ್ಟಣ ತಾಮ್ರಶಾಸನದಲ್ಲಿ ಸಂಸ್ಕೃತ ಶಾಪಾಶಯಗಳ ನಂತರ, 'ನಾವು ಮಾಡಿದ ಸೇವೆಲೂ। ಆವದಾನೊಬ್ಬನು ಕಪಟವ ಯೆಣಿಸಿದವನು ಕಾಶಿಗಂಗಾಕ್ಷೇತ್ರದಲ್ಲಿ ಕಪಿಲೆಯ ಕೊಂದ ಪಾಪಕ್ಕೆ ಹೋಹರು। ಶ್ರೀರಂಗನಾಥ ಸ್ವಾಮಿಯವರ ಹರಿವಾಣಕ್ಕೆ ವಿಷವನಿಕ್ಕಿದವರು। ಯೀ ಧರ್ಮ್ಮವ ಅಳುಪಿದವರು ನರಕದ ಹುಳುವಾಗಿ ಹುಟ್ಟುವರು' ಎಂಬ ಕನ್ನಡ ಶಾಪಾಶಯವನ್ನು ಸೇರಿಸಿದೆ. ಚಿಕ್ಕದೇವರಾಜ ಒಡೆಯರ ಶಾಸನದಲ್ಲಿ 'ದಾನಪಾಲನಯೋರ್ಮಧ್ಯೇ... ಎಂಬ ಒಂದೇ ಶ್ಲೋಕವನ್ನು ಹಾಕಿ 'ಮಂಗಲ ಮಹಶ್ರೀ' ಎಂದು ಹೇಳಿದೆ. ಹದಿನೈದು ಹಲಗೆಗಳ ತೊಣ್ಣೂರು ತಾಮ್ರಶಾಸನದಲ್ಲೂ ಸುಮಾರು ೧೬ ಸಾಲುಗಳ ಶಾಪಾಶಯವಿದ್ದು, ಇನ್ನೂ ಕೆಲವು ಘೋರವಾದ ಶಾಪಗಳನ್ನು ಸೇರಿಸಿದೆ. 'ಯಿಂದ್ರಪೃಚ್ಛತಿ ಚಂಡಾಲೀಂ ಕಿಮಿದಂ ಪಚ್ಚ್ಯತೇ ಶುಭೇ। ಶ್ವಮಾಂಸಂ ಸುಯಾಸಿಕ್ತಂ ಕಪಾಲೇನ ಚಿತಾಗ್ನಿನಾ। ಕಿಮರ್ತ್ಥಂ ವದ ಕಲ್ಯಾಣಿ ಚರ್ಮ್ಮಣಾ ಪಿಹಿತಂ ತ್ವಯಾ। ಬ್ರಹ್ಮಸ್ವಂ ಬ್ರಾಹ್ಮಣ ಕ್ಷೇತ್ರಂ ಹಾರಯಂತಿ ಹರಂತಿಯೇ। ತೇಷಾಂ ಪದರಚೋಭಿತ್ಯಾ ಚರ್ಮ್ಮಣಾ ಪಿಹಿತಂ ಮಯಾ। ಯಿಮಂ ಧರ್ಮ್ಮಂಚ ಯೇ ಘ್ನನ್ತಿಯೇ ಚ ತತ್ಸ ಹರಿಕಾರಿಣಃ। ಕಿರಾತಂ ಮ್ಲೇಚ್ಛ ಚಂಡಾಲ ಚಮ್ಮಕಾರಾತ್ಮಜಾಸ್ತುತೇ।'

ಜಿಲ್ಲೆಯಲ್ಲಿರುವ ಬಹುತೇಕ ಗಂಗರ ಶಿಲಾ ಶಾಸನಗಳಲ್ಲಿ ವಾರಣಾಸಿ, ಪಾರ್ವ್ವರು, ಕವಿಲೆ ಇವುಗಳನ್ನು ಬಳಸಿಕೊಂಡು ಕೇವಲ ಕನ್ನಡ ಭಾಷೆಯ ಶಾಪಾಶಯನ್ನು, 'ಸ್ವದತ್ತಂ ಪರದತ್ತಂ ವಾ...' ಅಥವಾ ಬೇರೆಯಾದ ಸಂಸ್ಕೃತ ಶ್ಲೋಕವನ್ನು, ಅಥವಾ ಕನ್ನಡ ಮತ್ತು ಸಂಸ್ಕೃತ ಶ್ಲೋಕ ಇವೆರಡನ್ನೂ ಸೇರಿಸಿಕೊಂಡು, ಮೂರು ರೀತಿಯಲ್ಲಿ ಶಾಪಾಶಯವನ್ನು ಬಳಸುವುದು ರೂಢಿಗೆ ಬಂದಿತೆಂದು ಹೇಳಬಹುದು. ಜಿಲ್ಲೆಯ ಶಾಸನಗಳ ಶಾಪಾಶಯದಲ್ಲಿ ಈ ಮೂರು ಮಾದರಿಗಳೇ ಕಂಡು ಬರುತ್ತವೆ. ಗಂಗರ ಕಾಲದ ಪ್ರಾಚೀನ ಶಿಲಾಶಾಸನವಾದ ಪೂರಿಗಾಲಿಯ ಶಿವಮಾರನ ಚಿಕ್ಕ ಶಿಲಾಶಾಸನದಲ್ಲಿ 'ಈ ಧರ್ಮ್ಮಮಾನ್‌ನಚಿತ್ತೋನ್ ವಾರಣಾಸಿಯಂ ಕವಿಲೆಯುಂ ಪಾರ್ವ್ವರುಮಾನ್ ಕೊನ್ದ ಪಾಪಮಕ್ಕೆ ಇದಾನ್ ಕೆಡವೇಚ್ಚೆನ್ದುಗ್ಗಮೀ ಪಾಪಮಕ್ಕೆ ಅದೋ ಅದೋ ನಡವನ್' ಎಂದು ಕೇವಲ ಕನ್ನಡ ಭಾಷೆಯ ಶಾಪಾಶಯವನ್ನು ಬಳಸಿದೆ. 'ಅದೋ ಅದೋ ನಡವನ್' ಎಂಬುದು ಅವನು ನರಕಕ್ಕೆ ಹೋಗುತ್ತಿದ್ದಾನೆ ಎಂದು ಹೇಳುವ ಪರಿಣಾಮಕಾರಿಯಾದ ಉಕ್ತಿಯಾಗಿದೆ. ಇದೇ ಕಾಲದ ಬಸದಿಯ ದತ್ತಿ ಶಾಸನದಲ್ಲಿ ಇದನಳಿದನಾ ಕೆರೆಯು ಅರವೆಯುಮಂ ಕವಿಲೆಯುಮನಳಿದೋಂ ಮತ್ತಂ ಪಂಚಮಾಪಾತಕನ್ ಸನ್ದ ಲೋಕಕ್ಕೆ ಹೋಹಾನ್' ಎಂದು ಕನ್ನಡ ಶಾಪಾಶಯವನ್ನು ಮಾತ್ರ ಬಳಸಿದೆ. ಚೋಳರ ಕಾಲದ ಬಲಮುರಿ ದತ್ತಿ ಶಾಸನದಲ್ಲಿ ವಾರಣಾಸಿಯುಮನಳಿದಂ' ಎಂಬ ಸರಳವಾದ ಶಾಪಾಶಯವಿದೆ. ಕ್ರಿ.ಶ.೮೭೦ರ ತಾಯಲೂರು ಶಾಸನದಲ್ಲಿ 'ಸ್ವದತ್ತಂ ಪರದತ್ತಂ ವಾ.....' ಸಂಸ್ಕೃತ ಶ್ಲೋಕವನ್ನು ಮಾತ್ರ ಉಪಯೋಗಿಸಲಾಗಿದ್ದು, 'ಅಯ್ದುವರಿಸಕ್ಕೊಮ್ಮೆ ಶೋತೆ ಇಕ್ಕದೆ ಸ್ಥಾನಮನಾಳ್ದೋರ್ ಅಳಿಸಿದ ನಾಲ್ವದಿಮ್ಬರು ಪಞ್ಚಮಹಾಪಾತಕರಪ್ಪೋರ್' ಎಂದು ಹೇಳಿದೆ. ಕ್ರಿ.ಶ.೯೧೬ರ ಕೂಲಿಗೆರೆ ಶಾಸನದಲ್ಲಿ 'ಇದನಚಿದೊಂ ಕೆಚಿಯುಮಾರಮೆಯುಮನಚಿದುಕೊಣ್ಡೊಮ್ಮಹಾಪಾತಕನ್। ಸ್ವದತ್ತಂ ಪರದತ್ತಂ ವಾ ಯೋಹರೇತಿ ವಸುನ್ಧರಾಂ ಷಷ್ಟಿವರಿಷ ಸಹಸ್ರಣಿ ವೃಷ್ಟಾಯಾಂ ಜಾಯತೇ ಕ್ರಿಮಿಃ' ಎಂದು ಒಂದು ಅಚ್ಚಕನ್ನಡದ ಪಡೆನುಡಿಯ ವಾಕ್ಯವನ್ನೂ ಒಂದು ಸಂಸ್ಕೃತದ ಶ್ಲೋಕವನ್ನೂ ಬೆರೆಸಿ ಹೊಸರೀತಿಯ ಒಂದು ಶಾಪಾಶಯವನ್ನು ಉಪಯೋಗಿಸಲಾಗಿದೆ.

ಕನ್ನಡ ಶಾಪಾಶಯಗಳು ಬಹಳ ಸರಳವಾಗಿ ಸ್ಥಳೀಯ ಜನರಿಗೆ ಅರ್ಥವಾಗುವಂತೆಯೂ, ಪರಿಣಾಮಕಾರಿಯಾಗಿಯೂ ಇರುತ್ತವೆ. ಗೋವುಗಳು ಪೂಜನೀಯವಾದವು. ದತ್ತಿಯನ್ನು ಕೆಡಿಸಿದವನಿಗೆ ಗೋವುಗಳನ್ನು ಕೊಂದ ಪಾಪ ಎಂದು ಕೆಲವು ಶಾಸನಗಳು ಹೇಳುತ್ತವೆ. 'ಇದ ಕೊಡದವರು ಕವಿಲೆಯ ಕೊಂದ ಪಾಪಕೆ ಹೋಹರು' ಎಂದು ಹೇಳಿದೆ. 'ಬೇಡವೆನ್ದೋನು

[illegible]

ವಾರಣಾಸಿಯಮೆಯ್ದಿ ಸಹಸ್ರ ಕವಿಲೆಯನರಿದ ಪಾಪಕ್ಕೆ ಸಲ್ವನ್ ಶ್ರೀಮಂಗಳ' ಇಲ್ಲಿ ದತ್ತಿಯನ್ನು ಕೆಡಿಸಿದವನು ಉದ್ದೇಶಪೂರ್ವಕವಾಗಿ ವಾರಣಾಸಿಗೆ ಹೋಗಿ ಗೋವುಗಳನ್ನು ಕೊಂದವನಿಗೆ ಬರುವ ಪಾಪ ಎಂದು ಪರಿಣಾಮಕಾರಿಯಾಗಿ ಹೇಳಿರುವುದನ್ನು ನೋಡಬಹುದು. 'ಈ ಧರ್ಮವನಳಿದವ ಗಂಗೆಯ ತಡಿಯ ಹದಿನೆಂಟು ಸಾಸಿರ ಕವಿಲೆ ಕೊನ್ದ ದೋಸದಲು ಹೋದ, 'ಇನಿಸುವಂ ಅಳಿದಂದು ಕವಿಲೆಯ ಕೊಂದ ಪಾಪ' 'ಯಿದಂನಾವನೊಬನೂ ಅಳಿದಡೆ ಗಂಗೆಯ ತಡಿಯಲು ಕವಿಲೆಯ ಕೊಂದ ದ್ರೋಹದಲ್ಲಿ ಹೋಹನು' 'ಯೀ ಧರ್ಮವ ಅರೊಬರು ಅಳುಪಿದರೆ ಗಂಗೆಯ ತಡಿಯಲಿ ಕಪಿಲೆಯ ಕೊಂದ ಪಾಪಕೆ ಹೋಹರು' 'ಯೀ ಧರ್ಮವ ಅವನೊಬ್ಬ ಅಳುಪಿದವರು ಗಂಗೆಯ ತೀರದಲ್ಲಿ ಕಪುಲೆಯ ಕೊಂದ ಪಾಪಕ್ಕೆ ಹೋಹರೂ' 'ಆವನೊಬ್ಬ ಅಳಹಿದವನು ಗಂಗೆಯ ತಡಿಯ ಕವಿಲೆಯ ಕೊಂದ ಪಾಪದಲಿ ಹೋಹನು' ಎನ್ನುವ ಶಾಪಾಶಯಗಳನ್ನು, ನಡಗಲ್‌ಪುರ, ಮಾರೇಹಳ್ಳಿ, ಇರುಬನಹಳ್ಳಿ ಇನ್ನು ಮುಂತಾದ ಅನೇಕ ಶಾಸನಗಳಲ್ಲಿ ಬಳಸಿದ್ದು ದತ್ತಿಯನ್ನು ಕೆಡಿಸಿದವರು ಕೇವಲ ಗೋವುಗಳನ್ನು ವಧಿಸಿದ ಪಾಪಕ್ಕೆ ಗುರಿಯಾಗುವರೆಂದು ಹೇಳಿವೆ.

ಶಾಂತಿನಾಥ ಕವಿಯು ರಚಿಸಿರುವ ಲಾಳನಕೆರೆ ಕನ್ನಡ ಶಾಪಾಶಯವು ಕಾವ್ಯಮಯವಾಗಿದೆ. 'ಇದನಾ ನಿಜಕಾಲದೊಳು ಸುವಿಧಿಯಿಂ ಪಾಳಿಪ್ಪ ಲೋಕೋತ್ತಮಂ ವಿಧಿತಂ ನಿರ್ಮ್ಮಳ ಪುಣ್ಯ ಕೀರ್ತ್ತಿಯುಗಮಂ ತಾನೆಯ್ದುವಂ ಮತ್ತವಿಂತಿದನಾವಂ ಕಿಡಿಪೊಂದು ಕೆಟ್ಟಬಗೆಯಿಂ ತಂದಾತನಾಳ್ದುಂ ಗಭೀರದುರಂತೋತ್ಕಟದುಕ್ಕದೊಳು ನರಕದೊಳು ದುಃಕ್ಕೀರ್ತ್ತಿ ಪಂಕಾಕುಳಂ' (ಮತ್ತೇಭ),

ಇನ್ನು ಕೆಲವು ಶಾಸನಗಳು ಗೋವುಗಳನ್ನು ವಧಿಸಿದ ಶಾಪದ ಜೊತೆಗೆ ಕಾಪಾಡಿದವನಿಗೆ ಗೋವುಗಳನ್ನು ದಾನಮಾಡಿದ ಫಲ ಎಂಬ ಆಶಯವನ್ನೂ ಹೇಳುತ್ತವೆ. 'ಈ ಧರ್ಮ್ಮಮನಾರಾನುಳಿದರಪ್ಪಡೆ ಗಂಗಾತೀರದಲು ಅನಂತ ಕವಿಲೆಯ ಕೊಂದ ಪಾಪ ಯೀ ಧರ್ಮವನಾರಾನುಂ ನಡೆಸಿದರಾದಡೆ ಯನಂತ ಕವಿಲೆಯಂ ವತ್ಸ ಸಹಿತ ಕೋಡುವಂ ಕೊಳಗುವಂ ಸುವರ್ಣ್ನದಲು ಕಟ್ಟಿಸಿ ವೇದೋತ್ತಮರಪ್ಪ ಬ್ರಾಹ್ಮಣರಿಗೆ ವಾರಣಾಸಿಯಲು ದಾನ ಮಾಡಿದ ಫಲ' 'ಯಿ ಧರ್ಮವ ಅವನಾಗಿ ಪ್ರತಿಪಳಿಸಿದವ ಗಂಗೆಯ ತಡಿಯಲು ಸಾಯಿರ ಕವಿಲೆಯ ದನಮಾಡಿದ ಪಲ ಇ ದರ್ಮ್ಮವ ಅಳಿಪಿದವ ಗಂಗೆಯ ತಡಿಯಲು ಸಾಇರ ಕವಿಲೆಯ ಕೊಂದ ಪಾಪ' ಎಂಬುದಾಗಿ ಹೇಳುತ್ತವೆ. ಗೋವುಗಳನ್ನು ಬಿಟ್ಟರೆ ಮಾತಾಪಿತರುಗಳು ಪೂಜ್ಯರು. ದಾನವನ್ನು ಕೆಡಿಸಿದವನು ತಂದೆ ತಾಯಿಗಳನ್ನು ಕೊಂದಹಾಗೆ ಎಂದು ಹೇಳುವ ಅನೇಕ

ಶಾಪಗಳಿವೆ. ಆದರೆ ತಂದೆ ತಾಯಿಗಳನ್ನು ಸಲಹಿದ ಫಲ ಎಂಬ ಆಶಯವನ್ನು ಎಲ್ಲೂ ನೇರವಾಗಿ ಹೇಳಿರುವುದು ಕಂಡು ಬರುವುದಿಲ್ಲ. 'ಯಿ ಧರ್ಮವನು ಅಳುಪಿದವರು ವಾರಣಾಸಿಯ ತಡಿಯಲು ತಮ್ಮ ತಾಯನು...' 'ಆವನಾನೊಬ ಅಳುಪಿದರೆ ತಂದೆ ತಾಯಿ ಆರಾಣಸಿಲಿ ಕೊಂದ' 'ಯಿದಕೆ ಆರೊಬ್ಬರು ತಪ್ಪಿದವರು ತಾಯಿಗೆ ತಪ್ಪಿದವರು' 'ಇದಕೆ ಅಳುಪಿದವ ತಂದೆ ತಾಯಿಗೆ ತಪ್ಪಿದಹಾಗೆ'

ಇನ್ನು ಕೆಲವು ಶಾಸನಗಳಲ್ಲಿ ದತ್ತಿಯನ್ನು ಹಾಳುಮಾಡಿದವನಿಗೆ ಗೋವು, ತಂದೆ, ತಾಯಿ, ಗ್ರಾಹ್ಮಣರು ಎಲ್ಲರನ್ನೂ ವಧಿಸಿದ ಪಾಪ ಎಂದು ಹೇಳುತ್ತವೆ. 'ಬಿತ್ತುವಟ್ಟಕೆ ತಪ್ಪಿದವನೀ ಕವಿಲೆಯುಮಂ ವಾರಣಾಸಿಯುಮನ ಚಿದೋನೇಚಿನೆಯ ಪಾತಕನಿಲ್ಲಿ ಕೊಡಂಗೆಯನಳ್ದಿಟ್ಟ ಕ(ಪೊ)ಲ್ಲ ಇದಚಿಚವ ಕಣ್ಡಚ್ದಿಪ್ಪಡೆ ಕವಿಲೆಯನಿಚಿದನ್' ಎಂದು ಹೇಳಿದೆ. ಇದರಲ್ಲಿ ಕವಿಲೆ, ವಾರಣಾಸಿಯನಳಿದ ಏಳನೆಯ ಪಾತಕ ಎಂದು ಹೇಳಿದೆ. ಜೊತೆಗೆ ಈ ಕೊಡುಗೆಯನ್ನು ಅಳೆದು ನೆಟ್ಟಿರುವ ಕಲ್ಲನ್ನು ಕಿತ್ತವನು, ಇದನ್ನು ಕಂಡೂ ಸುಮ್ಮನಿದ್ದವನು ಕವಿಲೆಯನ್ನು ವಧಿಸಿದ ಪಾಪಿ ಎಂದು ಹೇಳಿದೆ. 'ಈದನರದೊಮ್ಬಾಣರಾಸಿಯುಮ ಕೊರೆಯುಮ ಕವಿಲೆಯುಮನಚಿದುಹ್ದೋ ಪಞ್ಚಮಹರ್ಪಥಖ' 'ಇದನಚಿದೊಮ್ಬಾವಿರ ಕವಿಲೆಯುಮ್ಬಾರಣಾಶಿಯುಮನಚಿದ ಪಞ್ಚಮಹಾಪತಕನಪ್ಪೊ' 'ಇನ್ತಪ್ಪುದನಳಿದ ವಾರಣಾಸಿಯ ಕವಿಲೆಯಂ ಬ್ರಾಹ್ಮಣರಂ ವದೆಗೆಯ್ದ ಪಞ್ಚಮಹಾಪಾತಕರ್' ಈ ಶಾಪಾಶಯವು ಎಷ್ಟೊಂದು ಬಳಕೆಯಲ್ಲಿತ್ತು ಎಂದರೆ, ಪಾರ್ಶ್ವಜಿನಾಲಯವನ್ನು ಕಟ್ಟಿಸಿ ದತ್ತಿ ಬಿಟ್ಟ ಶಾಸನದಲ್ಲೂ 'ಈ ಧರ್ಮ್ಮಮಂ ಪ್ರತಿಪಾಳಿಸಿದವರು ದೇವದ್ವಿಜಗುರುಪೂಜೆಯ ಫಲಮುಂ ವಾರಣಾಸಿಯಲುಂ ಗೋಹಿರಣ್ಯಭೂದಾನದ ಫಲವಂ ಪಡೆದವರು ಈ ಧಮ್ಮ್ವ ಕಿಡಿಸಿದವರಿಗೆ ಬ್ರಹ್ಮರ್ಷಿಗೋವಧೆಯ ಬ್ರಹ್ಮಹತ್ತಿಯು ಸಪ್ತಮನರಕವ ಬ್ರಪಿಸುವ, ಸ್ವದತ್ತಂ....' ಎಂಬ ಶಾಪಾಶಯವಿದೆ. ಇನ್ನೂ ಮುಂತಾದ ಕೆಲವು ಶಾಸನಗಳಲ್ಲಿ ದಾನವನ್ನು ಕೆಡಿಸಿದವನು ವಾರಣಾಸಿಯನಳಿದು, ಅಲ್ಲಿ ಕವಿಲೆಯನ್ನು ಕೊಂದ ಪಂಚಮಹಾಪಾತಕ ಎಂದು ಹೇಳಿದೆ. 'ಯಿದಕೆ ಗುತಕೆಗಳವ ಎಣಿಸುದು ಎಣಿಸಿದವ ಕುಲಕೆ ತಪ್ಪಿದಾಯಿದಕೆ ಅನ್ಯಾಯದ ಎಣಿಸಿದವಾ ಗಂಗೆಯ ತಡಿಯಲಿ ತಂಗೇಳು ಕವುಲೆಯ ಕೊಂದ ಪಾಪಕೆ ಹೋಹ, ಯಿಪ್ಪತ್ತೊಂದು ಮಾತಾಪಿತರು ನಾರಕದಲಿ ಬೀಳುವರು' ಎಂದು ಹೇಳಿದೆ.

ಹೊಯ್ಸಳರ ದೊಡ್ಡ ದೊಡ್ಡ ಶಿಲಾಶಾಸನಗಳಲ್ಲಿ ಕನ್ನಡಭಾಷೆಯಲ್ಲಿಯೇ ಶಾಪಾಶಯಗಳನ್ನು ದೀರ್ಘವಾಗಿಯೇ ನೀಡಿರುವುದು ಕಂಡು ಬರುತ್ತದೆ. 'ಇಂತೀ ಧರ್ಮ್ಮಮಂ ಪ್ರತಿಪಾಳ್ಸಿದವರು ಗಂಗೆ ವಾರಣಾಸಿ ಕುರುಕ್ಷೇತ್ರದೊಳು ಸಹಸ್ರ ಕವಿಲೆಯ ಕೋಡುಂ ಕೊಳಗುಮಂ ಹೊಂನಲು ಕಟ್ಟಿಸಿ ಸಹಸ್ರ ಬ್ರಾಹ್ಮಣರಿಗೆ ಕೊಟ್ಟ ಫಲಮಕ್ಕು, ಇಂತೀ ಧರ್ಮ್ಮಮಂ ಕಿಡಿಸಿದವರು

ಗಂಗೆ ವಾರಣಾಸಿ ಕುರುಕ್ಷೇತ್ರದೊಳು ಸಹಸ್ರ ಕವಿಲೆಯುಂ ಸಹಸ್ರ ಬ್ರಾಹ್ಮಣರುಮನಳಿದ ನರಕಕ್ಕಿಳಿವರು'

ಇದನಾವಂ ನಿಜಕಾಲದೊಳುಸುವಿಧಿಯಿಂ ಪಾಳಿಪ್ಪ ಲೋಕೋತ್ತಮಂ
ವಿಧಿತ ನಿರ್ಮ್ಮಳ ಪುಣ್ಯ ಕೀರ್ತ್ತಿಯುಗಮಂ ತಾನೆಯ್ದುವಂ ಮತ್ತಂವಿಂ
ತಿದಿನಾವಂ ಕಿಡಿಪೊಂದು ಕೆಟ್ಟ ಬಗೆಯಿಂ ತಂದಾತನಾಳ್ಗುಂ ಗಭೀ
ರದುರಂತೋತ್ಕಟ ದುಃಕ್ಕರದೊಳು ನರಕದೊಳು ದುಃಕ್ಕೀರ್ತ್ತಿಪಂಕಾಕುಳಂ

'ಯೀ ಧರ್ಮ್ಮಕ್ಕೆ ಆರು ಆಳುಪಿದವರು ತಂಮ ತಂದೆ ತಾಯಿ ಗೋವು ಬ್ರಾಹ್ಮಣರನು ವಾರಣಸಿಲಿ ಕೊಂದ ಪಾಪಕ್ಕೆ ಹೋಗುತ್ತಾರೆ. ಎಂದು ಕೊಟ್ಟ ಶಿಲಾಸಾಸನ' 'ಯಿದಕ್ಕೆ ಅವನೊರ್ಬ್ಬ ತಪ್ಪಿದರು ಗಂಗೆಯ ತಡಿಯಲಿ ಕಪಿಲೆಯ ಕೊಂದ ಪಾಪಕೆ ಹೋಹರು ತಂಮ ತಂದೆತಾಯಿ ಗೋಉ ಬ್ರಾಂಮ್ಮರ ವಾರಣಾಸಿಯಲಿ ಕೊಂದ ಪಾಪಕ್ಕೆ ಹೋಹರು ತಂಮ ಗುರುವಿಗೆ ತಪ್ಪಿದವರು' 'ಇದಂ ಕೆಡಿಸಿದವಂ ಕವಿಲೆ ಬ್ರಾಹ್ಮಣನುವ ಕೊನ್ದ ಬ್ರಹ್ಮೇತಿಯನೆಯ್ದುಗು' 'ಮರಿಯಾದೆ ಬ್ರಾಂಹ್ಮರ ಕೊಂದ ಪಾಪಕ್ಕೆ ಹೋಹರು ಗೋವಕೊಂದ ಪಾಪಕ್ಕೆ ಹೋಹರು ತಂಮ ತಂದೆ ತಾಯಿನು ವಾರಣಾಸಿಯ ಗಂಗಾತೀರದಲ್ಲಿ ದಹಿಸಿದ ಪಾಪಕ್ಕೆ ಹೋಹರೂ, ಯಿದನರಿತು ಸರ್ವಮಾನ್ಯವಾಗಿ ನಡೆಸೋದೂ' 'ಸರ್ವಮಾನ್ಯ ನಡೆಸಿಕೊಡದೆ ಆರೊಬರು ತಪಿದರೆಯ ಅಪಿದರೆಉ ನಂಮ ನಂಮ ಯಾವ ಜಲ್ಮ ಮಾಡಿದಂಥ ಪಾಪಗಳನು ಕೊಟ್ಟವರು ವಾರಣಾಸಿಯಲು ಕಪಿಲೆಯನು ಕೊಂದವರು ಮಾತಾಪಿತ್ರುಗಳನು ವಧಿಸಿದವರು' ಎಂದು ಎಲ್ಲವನ್ನೂ ಸೇರಿಸಿಕೊಂಡು ಸ್ಥಳಿಯ ಜನಬಳಕೆಯ ಶೈಲಿಯಲ್ಲಿ ಹೇಳಿದೆ. ವೊಡೇರಿ, ದೇವಲಾಪುರ, ಮೇಲುಕೋಟೆ, ಢಣಾಯಕನಪುರ, ಸಂತೇಬಾಚಹಳ್ಳಿ, ಕುಡುಗುಬಾಳು ಮೊದಲಾದ ಅನೇಕ ಶಾಸನಗಳಲ್ಲಿ ಬ್ರಾಹ್ಮಣರು, ಗೋವು, ವಾರಣಾಸಿ, ತಂದೆ ತಾಯಿ, ಗುರು ಇವರನ್ನೆಲ್ಲಾ ಶಾಪಾಶಯದಲ್ಲಿ ಸೇರಿಸಿ ಹೇಳಿದೆ. ಕೆಲವು ಶಾಸನಗಳು ಕೇವಲ ಕ್ಷೇತ್ರವನ್ನು ನಾಸಮಾಡಿದಹಾಗೆ ಎಂದು ಹೇಳುತ್ತವೆ. ಇವುಗಳಲ್ಲಿ ಕವಿಲೆ, ಬ್ರಾಹ್ಮಣ ಇತ್ಯಾದಿ ಉಲ್ಲೇಖಗಳಿರುವುದಿಲ್ಲ. ಶಾಸನದ ಕಲ್ಲಿನ ಅಗಲ ಹಾಗೂ ಬರವಣಿಗೆಯ ಕಷ್ಟ ಇದಕ್ಕೆ ಕಾರಣವೆಂದು ಊಹಿಸಬಹುದು. 'ಇದಾನಚಿದ ವಾರನಸಿಯನಚಿದ' 'ಯಿದ ಆರಾದೂ ಅಳಿದರೆ ವಾರಣಾಸಿಯ ಅಳುಪಿದಹಾಗೆ' ಎಂದಷ್ಟೇ ಹೇಳಿದೆ. ಇನ್ನೊಂದು ಶಾಸನವು 'ಈ ಧರ್ಮ್ಮಕ್ಕೆ ರಕ್ಷಕರಾದವರು ಹಿಮಸೇತುಪರಿಯಂತದಲು ಮಾಡಿದ ಧರ್ಮಕ್ಕೆ ಪೋಪರು' ಎಂದು ಒಳ್ಳೆಯದಾಗುವುದನ್ನು ಮಾತ್ರ ಹೇಳಿದೆ.

ಕೆಲವೆಡೆ ವೀರಗಲ್ಲುಗಳಿಗೂ ಪೂಜೆ ನಡೆಸುತ್ತಿದ್ದುದ್ದನ್ನು ಕಾಣಬಹುದು. ಮದ್ದೂರು ತಾಲ್ಲೂಕು, ತೈಲೂರು ಗ್ರಾಮದಲ್ಲಿ ಒಂದು ವೀರಗಲ್ಲು ಗೌರಿ ಹಬ್ಬದಲ್ಲಿ ಎಣ್ಣೆ ಹೊತ್ತಿ(ಮಜ್ಜನ) ಪೂಜಿಸುತ್ತಾರೆ. ಇದನ್ನು ಪೂಜಿಸುವ ಜನಾಂಗದವರು ಬೆಸ್ತರಾಗಿದ್ದು, ಅವರು ಹಾಡುವ ಒಂದು ಜನಪದ ಹಾಡಿನಲ್ಲಿ ವೀರನ ಹೆಸರು, 'ರಾಮ'ನೆಂದೂ ಆತ ಮೈಸೂರು ಅರಸು ಚಿಕ್ಕದೇವರಾಯರ ಕಾಲದಲ್ಲಿ ಸೈನ್ಯದಲ್ಲಿದ್ದವನೆಂದೂ ಒಂದು ಯುದ್ಧದಲ್ಲಿ ಆತ ಸತ್ತು ವೀರ ಸ್ವರ್ಗ ಗೈದನೆಂದು ಕೇಳಿ ಬರುತ್ತದೆ. ಈ ವೀರಗಲ್ಲಿಗೆ 'ವೀರ ಬೋಯಿ' ಎಂದು ಕರೆಯುತ್ತಾರೆ. ಬೋಯಿ ಎಂದರೆ ಬೆಸ್ತ ಎಂದೂ ಸಹ ಆಗುತ್ತದೆ. **'ಮಾಸ್ತಿ'** ಎಂಬುದು ಮಹಾಸತಿಯ ತದ್ಭವ, ಗಂಡಾಸತ್ತಾಗ ಅವನೊಡನೆ ಚಿತೆಯೇರುತ್ತಿದ್ದವಳು ಸತಿಯಾಗುತ್ತಿದ್ದಳು ಅವಳನ್ನೇ ಮಹಾಸತಿ ಎಂದು ಕರೆಯುತ್ತಿದ್ದರು. ಈ ಮಹಾಸತಿಯು ಜನರ ಬಾಯಲ್ಲಿ ಮಾಸ್ತಿಯಾಗಿದೆ. ಹಿಂದೆ ಗಂಡ ಸತ್ತಾಗ ಸಹಗಮನ ಮಾಡುವುದು ಪತ್ನಿಯ ಆದರ್ಶವಾಗಿದ್ದಿತು. ಸತಿಯಾಗುವುದರಲ್ಲಿ ಎರಡು ವಿಧ ಇದೆ. ಗಂಡನ ಕಳೇ ಬರದೊಡನೆ ಚಿತೆಯೇರುವುದು **ಸಹಗಮನ** ಗಂಡ ಎಲ್ಲೋ ಸತ್ತ ಸುದ್ದಿಯನ್ನು ಕೇಳಿ ಚಿತೆಯನ್ನು ನಿರ್ಮಿಸಿ ಅದನ್ನು ಏರುವುದು **ಅನುಗಮನ** ಮೊದಲನೆಯದರಲ್ಲಿ ಗಂಡನ ಜೊತೆಗೆ ಹೋಗುತ್ತಾ ಇದ್ದಾಳೆ ಎಂಬ ಅರ್ಥ ಒಂದರ ಎರಡನೆಯದರಲ್ಲಿ ಗಂಡನನ್ನು ಹಿಂಬಾಲಿಸುತ್ತಾಳೆ ಎಂಬ ಅರ್ಥ ಬರುತ್ತದೆ. ಹೀಗೆ ಮಾಸ್ತಿ ಆದವರ ನೆನಪಿಗಾಗಿ ನಿಲ್ಲಿಸಿದ ಕಲ್ಲುಗಳೇ ಮಾಸ್ತಿಕಲ್ಲುಗಳು. ಮಾಸ್ತಿಗಲ್ಲುಗಳನ್ನು "ಸಹಾನುಭೂತಿ ಕಲ್ಲು" 'ಮದವಳಿಗೆ ಕಲ್ಲು' ತೋಳಕೈಗಲ್ಲು' ವ್ಯಾಸನತೋಳು' ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಮಾಸ್ತಿ ಕಲ್ಲುಗಳಲ್ಲಿ ಕೆಲವು ವೇಳೆ ಪೂರ್ಣ ಹೆಂಗಸಿನ ಚಿತ್ರವಿರುತ್ತದೆ. ಆಕೆ ತನ್ನ ಬಲಗೈಯನ್ನು ಮೇಲಕ್ಕೆ ಎತ್ತಿರುತ್ತಾಳೆ ಅಂಗೈ ಸ್ಪಷ್ಟವಾಗಿ ಕಾಣುವಂತೆ ಬೆರಳುಗಳು ಬಿಡಿ ಬಿಡಿಯಾಗಿರುತ್ತವೆ. ಕೆಲವು ಮಾಸ್ತಿ ಕಲ್ಲುಗಳಲ್ಲಿ ಸ್ತ್ರೀ ಚಿತ್ರದ ಹಿಂದೆ ಜ್ವಾಲೆಗಳಿರುವಂತೆ ಕೆತ್ತನೆ ಇರುತ್ತದೆ. ಅದು ಅವಳು ಕಿಚ್ಚನ್ನು ಹೊಕ್ಕುದನ್ನು ಸೂಚಿಸುತ್ತದೆ. ಭಾರತದ ಇತರ ಕಡೆಗಳಲ್ಲಿ ಸಹಗಮನ ಮಾಡುವಂತೆ ಸ್ತ್ರೀಯರ ಮೇಲೆ ಒತ್ತಾಯವನ್ನು ತರಲಾಗುತ್ತಿದ್ದರೂ ಕರ್ನಾಟಕದಲ್ಲಿ ಅಂತಹ ಉದಾಹರಣೆಗಳಿಲ್ಲ. ಸತಿಯಾದವಳನ್ನು ದೇವತೆಗೆ ಸಮಾನವೆಂದು ಪರಿಗಣಿಸಿ ಆಕೆಗೆ ಪೂಜೆ ಪುನಸ್ಕಾರಗಳು ನಡೆಯುತ್ತಿದ್ದುವು. ಮಾಸ್ತಿ ಕಲ್ಲಿನಲ್ಲಿ ಕಂಡು ಬರುವ ತೋಳು ಸತಿಯಾದವಳ ತೋಳಿನ ಪ್ರತಿಯೇ ಇರಬಹುದುದೆಂದು ವಿದ್ವಾಂಸರು ಊಹಿಸುತ್ತಾರೆ. ಸಾಮಾನ್ಯವಾಗಿ ಮಾಸ್ತಿ ಕಲ್ಲುಗಳಲ್ಲಿ ಲಿಪಿಯಿರುವುದಿಲ್ಲ ಅದರೆ ಲಿಪಿಯಿರುವ ಶಾಸನಗಳೂ ಸಿಕ್ಕಿವೆ. ಕರ್ನಾಟಕದಲ್ಲಿ ದೇಕಬ್ಬೆಯ ಶಾಸನ ಮಾಸ್ತಿ ಕಲ್ಲುಗಳಲ್ಲಿ ತುಂಬ ಪ್ರಸಿದ್ಧವಾದುದು. ಒಳ್ಳೆಯ ಕೆಲಸಗಳನ್ನು ಮಾಡಿದರೆ ಒಳ್ಳೆಯವಾಗುತ್ತದೆ. ಕೆಟ್ಟ ಕೆಲಸಗಳನ್ನು ಮಾಡಿದಾಗ ಪಾಪಕ್ಕೆ ಗುರಿಯಾಗುತ್ತವೆ. ಎನ್ನುವ ಆಶಯವನ್ನು ಈ ಶಾಸನ ತಿಳಿಸುತ್ತದೆ. ವಾಡಿಕೆಯಂತೆ ಶಾಸನವು

ಶಾಪದೊಡನೆ ಮುಕ್ತಾಯವಾಗುತ್ತದೆ. ಪಾಪದ ಕೆಲಸ ಮಾಡಿದರೆ ಅರವತ್ತು ಸಾವಿರ ವರ್ಷ ಹುಳುಗಳಾಗಿ ಹುಟ್ಟುತ್ತಾರೆ ಎಂಬ ಎಚ್ಚರಿಕೆಯನ್ನು ಈ ಶಾಸನ ನೀಡುತ್ತದೆ.

ಅರುವನಹಳ್ಳಿ, ಮದ್ದೂರು ತಾಲ್ಲೂಕು:–

ಕೀರ್ತಿ ಅರಸನ ಮತ್ತು ನಾಗರಸ ಮರಣ ಹೊಂದಲು ಆತನೊಡನೆ ಸಹಗಮನ ಹೊಂದಿದ ಆತನ ಪತ್ನಿಯರಾದ ಬಯಿಚಕ್ಕ, ಬಾಯಿದೇವಿ, ಮಾದರಗೌಡಿ ಶಾಸನ ಸಂ.೮೫ ಅರುವನಹಳ್ಳಿ ಅದೇ ಸ್ಥಳದಲ್ಲಿರುವ ಇನ್ನೊಂದು ವೀರಗಲ್ಲು ಕಾಲ.ಕ್ರಿ.ಶ.೧೩೬೨ ಅರುವನಹಳ್ಳಿಯ ಪ್ರಮುಖನಾದ ಕೀರ್ತಿಯರಸನ ಮಗನಾದ ಬಾಚಪ್ಪ ಎಂಬಾತ, ನಿಧನ ಹೊಂದಿದ ತನ್ನ ತಮ್ಮ ದೇವಪ್ಪ ಮತ್ತು ಆತನ ಪತ್ನಿ ಬೈಚಕ್ಕಳ ನೆನಪಿಗಾಗಿ ನೆಟ್ಟು ವೀರಗಲ್ಲು.

ಶಾಸನ ಸಂಖ್ಯೆ.೮೬ ಅರುವನಹಳ್ಳಿ ಅದೇ ಅಂಗಳದ ದಕ್ಷಿಣ ವೀರಕಲ್ಲುಗುಡಿಯಲ್ಲಿ ಉತ್ತರಕ್ಕೆ ಕಾಲ ಕ್ರಿ.ಶ.೧೩೪೧ ಅದೇ ಗುಡಿಯ ಎಡಪಾರ್ಶ್ವದಲ್ಲಿ ಕಾಲ ಕ್ರಿ.ಶ.೧೩೮೧ ವಿಜಯನಗರದ ಬುಕ್ಕರಾಯನ ಮಗ ಬಡವಾರ ಕುಲದ ಕೀರ್ತಿದೇವನ ಮಗನಾದ ಚಾಚಿಯಪ್ಪ (ಬಾಚಿರಾಜ) ನಿಧನ ಹೊಂದಿದ ಬಗ್ಗೆ ಆತನಮಗ ಬುಕ್ಕಣ ತನ್ನ ತಂದೆಯ ಅಂತ್ಯಕ್ರಿಯಾಕರ್ಮಗಳನ್ನು ಹಂಪಿಯ ವಿರೂಪಾಕ್ಷನ ಸನ್ನಿಧಿಯಲ್ಲಿ ತುಂಗಭದ್ರಾ ತೀರದಲ್ಲಿ ನೆರವೇರಿಸಿದ ಬಗ್ಗೆ ಉಲ್ಲೇಖ ಹಾಗೂ ಬಾಚಿಯಪ್ಪನ ಆಸ್ತಿಯನ್ನು ವಾರಣಾಸಿಗೆ ಕಳುಹಿಸುತ್ತಾನೆ.

ನಿಧನಹೊಂದಿದ ಬಾಚಿಯಪ್ಪ. ಬುಕ್ಕರಾಯ ಸಮುದ್ರ, ಕೀರ್ತಿಸಮುದ್ರ, ಮಾಳವ್ವನಕೆರೆ, ನಾಗವ್ವೆಯಕೆರೆ, ಬಾಚಪ್ಪನಕೆರೆ, ಚವಡಪ್ಪನ ಕಾಲುವೆ, ಬಾಚಪ್ಪಟ್ಟಣದ ಅಡಕೆಯ ತೋಟ, ಕಂಪಂಣನ ಅಡಕೆಯತೋಟ ಇತ್ಯಾದಿಗಳನ್ನು ಮಾಡಿಸಿರುತ್ತಾನೆ. ಬಾಚಿಪಟ್ಟಣದಲ್ಲಿ ಮಲ್ಲಿಕಾರ್ಜುನ ದೇವರ ಪ್ರತಿಷ್ಠಾಪನೆ ಮಾಡಿಸಿರುತ್ತಾನೆ.

ಈ ಶಾಸನ ಮತ್ತು ಶಾಸನ ೮೫ಕ್ಕೂ ಸಂಬಂಧವಿದೆ. ಹೇಗೆಂದರೆ ಕ್ರಿ.ಶ.೧೩೬೨ರಲ್ಲಿ ಕೀರ್ತಿದೇವನ ಕಿರಿಯಮಗ ದೇವಪ್ಪ ಮತ್ತು ಆತನ ಪತ್ನಿ ಬೈಚಕ್ಕ ನಿಧನ ಹೊಂದಿದಾಗ ದೇವಪ್ಪನ ಅಣ್ಣ ಬಾಚಿಯಪ್ಪ ತನ್ನ ತಮ್ಮನ ನೆನಪಿಗೆ ಶಾಸನ ಪ್ರತಿಷ್ಠಾಪಿಸುತ್ತಾನೆ. ಆದರೆ ಈ ಮೇಲಿನ ಶಾಸನದಂತೆ ಕ್ರಿ.ಶ.೧೩೮೧ ರಲ್ಲಿ ಸ್ವತಃ ಬಾಚಿಯಪ್ಪ ನಿಧನ ಹೊಂದುತ್ತಾನೆ.

ಅರುವನಹಳ್ಳಿ ಮತ್ತು ಆಲೂರು ಗ್ರಾಮಗಳ ನಡುವೆ ನಡೆದ ಕಾದಾಟದಲ್ಲಿ ಕುಂದೂರಿಗೆ ಸಿಬಿಯೊಜನೆ ಮಗ ಸಬೀಯ ಎಂಬಾತ ಹತನಾದ ಬಗ್ಗೆ.

ಕಂಪಣ್ಣ ಒಡೆಯ ಮತ್ತು ಎಲ್ಲ ಪ್ರಮುಖರು ಅರುವನ ಹಳ್ಳಿಯಲ್ಲಿ ಇದ್ದಾಗ, ಸಬೀಯ ಕಂಪಣ್ಣನ ರಕ್ಷಣೆಯಲ್ಲಿರುತ್ತಾನೆ ಮತ್ತು ಈ ಸೆಣಸಾಟದಲ್ಲಿ ಪ್ರಮುಖ ಪಾತ್ರ ವಹಿಸಿರುತ್ತಾನೆ. ಆಲೂರಿನ ಸೇನೆ ದಾಳಿಮಾಡುತ್ತದೆ.

ವಿಶೇಷತೆಯ ವೀರಗಲ್ಲು:-

ಮಳವಳ್ಳಿ ತಾಲ್ಲೂಕಿನ, ಗ್ರಾಮಯೊಂದರಲ್ಲಿ ವೀರಗಲ್ಲು ತುಂಬಾ ವಿಶಿಷ್ಟವಾಗಿದೆ. ವೀರಗಲ್ಲಿನಲ್ಲಿ ಮೂರು ಪಟ್ಟಿಕೆಗಳಿದ್ದು, ಕೆಳಪಟ್ಟಿಕೆಯಲ್ಲಿ ವೀರನೊಬ್ಬ ಹುಲಿಯೊಡನೆ ಕಾದಾಡುತ್ತಿದ್ದಾನೆ. ವೀರನು ತನ್ನಷ್ಟೆ ಎತ್ತರದ ಬಿಲ್ಲನ್ನು ಎಡಗೈಯಲ್ಲಿ ಹಿಡಿದಿದ್ದು ಬಾಣವು ಹುಲಿಯ ಎದೆಗೆ ನಾಟಿದೆ. ವೀರನ ಸೊಂಟದಲ್ಲಿ ಹಿರಿದಾದ ಬಾಕು ಇದೆ. ಅದನ್ನು ವೀರನು ತನ್ನ ಬಲಗೈಯಲ್ಲಿ ಹಿಡಿದಿದ್ದಾನೆ. ಕೂದಲನು ಹಿಂದಕ್ಕೆ ಗಂಟು ಹಾಕಿದ್ದಾನೆ. ಕರ್ಣಾಭರಣವನ್ನು ಧರಿಸಿದ್ದಾನೆ. ತಲೆಯನ್ನು ವಸ್ತ್ರದಿಂದ ಕಟ್ಟಿದ್ದಾನೆ. ಅವನು ಧರಿಸಿರುವ ಅಂಗಿಯ ಕೊರಳು ಪಟ್ಟಿಯಲ್ಲಿ ಆಕರ್ಷಕ ಕೆತ್ತನೆ ಇದೆ. ಮಧ್ಯದ ಪಟ್ಟಿಕೆಯಲ್ಲಿ ವೀರನು ಮಂಟಪದಲ್ಲಿ ಕುಳಿತಿದ್ದಾನೆ. ಇಕ್ಕೆಲಗಳಲ್ಲಿರುವ ಅಪ್ಸರೆಯರು ತಮ್ಮ ಕೈಯಲ್ಲಿ ಚೌರಿಗಳನ್ನು ಹಿಡಿದಿದ್ದಾರೆ. ಅವರ ಉಡುಪು ಸುಂದರವಾಗಿದೆ. ಕಿವಿಗಳಲ್ಲಿ ಆಭರಣವನ್ನು ಹೊಂದಿದ್ದು. ಅಪ್ಸರೆಯರನ್ನು ತುಂಬಾ ಸೊಗಸಾಗಿ ಕೆತ್ತಲಾಗಿದೆ. ಮೇಲಿನ ಪಟ್ಟಿಕೆಯಲ್ಲಿ ಒಂದು ಮಂಟಪವಿದ್ದು, ಮಂಟಪದಲ್ಲಿ ಶಿವಲಿಂಗವಿದೆ. ಮಂಟಪದ ಬಲಭಾಗದಲ್ಲಿ ಸತ್ತ ವೀರನು ಕೈ ಜೋಡಿಸಿಕೊಂಡು ಕುಳಿತಿದ್ದಾನೆ. ಮಂಟಪದ ಎಡಭಾಗದಲ್ಲಿ ಕೈ ಜೋಡಿಸಿಕೊಂಡು ನಿಂತಿದ್ದಾನೆ.

ಮಂಡ್ಯ ನಗರದ ಹಳೇ ಪಟ್ಟಣ ಭಾಗದಲ್ಲಿ ಸಕಲೇಶ್ವರ ದೇವಸ್ಥಾನದ ಎದುರಿನ ಎಡಭಾಗದಲ್ಲಿ ಹಾಗೂ ಕೆರೆಯ ದಕ್ಷಿಣ ದಿಕ್ಕಿನ ಕೋಡಿಗೆ ಸಮೀಪವಾಗಿ ಕಾಣಸಿಗುವ ಮೇಲ್ಬಾವಣಿ ಇಲ್ಲದ ಎರಡು ವೀರಗಲ್ಲುಗಳಲ್ಲಿ ಒಂದತ್ತೂ ವಿಶಿಷ್ಟ ಬಗೆಯ ಕೆತ್ತನೆಯಿಂದ ಕೂಡಿದೆ. ಇವು ಕ್ರಿ.ಶ.೧೨೦೪ರ ಕಾಲಕ್ಕೆ ಸೇರಿದ್ದಾಗಿದೆ. ರಕ್ತಾಕ್ಷಿ ಸಂವತ್ಸರದಲ್ಲಿ ಚೈತ್ರ ಶುದ್ಧ ೧೦ ರಂದು ಸೀತೋಜನ ಮಗ ಅರುಳಿಯೋಜನಿಗೆ ದುಡೋಜನು ನಿಲ್ಲಿಸಿದ ವೀರಗಲ್ಲು ಎಂದು ತಿಳಿದು ಬರುತ್ತದೆ. ಇದರಲ್ಲಿ ನೋಡುಗರ ಎಡಭಾಗಕ್ಕೆ ಕಾಣಬಹುದು ಒಂದು ವೀರಗಲ್ಲು ಇನ್ನಿತರ ಸಾಮಾನ್ಯ ವೀರಗಲ್ಲಿನ ಮಾದರಿಯಲ್ಲಿಯೇ ಇದೆ. ಸುಮಾರು ೪ ೧/೨ ಅಡಿ ಎತ್ತರ ಮತ್ತು ೩ ೧/೨ ಅಡಿ ಅಗಲವಿರುವ ವೀರಗಲ್ಲಿನಲ್ಲಿ ಕೆಳಗಿನ ಹಂತದಲ್ಲಿ ಯುದ್ಧದ ದೃಶ್ಯ ಎದುರುಬದುರಾಗಿ ಇಬ್ಬಬ್ಬರು ಹೋರಾಡುವ ವೀರರು, ಆಯುಧವಾಗಿ ಭರ್ಜಿ ಪ್ರಮುಖವಾಗಿದೆ. ಎರಡನೇ ಹಂತದಲ್ಲಿ ಮರಣಗೈದ ವೀರ ಪಲ್ಲಕ್ಕಿಯಲ್ಲಿ ಕುಳಿತು ಏರುವ ದೃಶ್ಯ ಪಲ್ಲಕ್ಕಿಯ ಎರಡೂ ಕಡೆ ಗರುಡ ಪಕ್ಷಿಗಳು

ಮೂರನೇ ಹಂತದಲ್ಲಿ ಕೈಲಾಸದಲ್ಲಿ ವೀರ, ಕೈಲಾಸದ ಸಂಕೇತವಾಗಿ ಈಶ್ವರಲಿಂಗ, ನಂದಿಯ ಚಿತ್ರಣವಿದೆ. ಎಂದಿನಂತೆ ಮೇಲ್ಭಾಗದಲ್ಲಿ ಸೂರ್ಯ, ಚಂದ್ರರ ಸಾಕ್ಷಿ ಅಥವಾ ಆ ಚಂದ್ರಾರ್ಕವಾಗಿ ಎಂಬ ನಂಬಿಕೆಯ ಸೂರ್ಯ – ಚಂದ್ರರ ಕೆತ್ತನೆ.[೨೨]

ನೋಡುಗರ ಬಲಭಾಗಕ್ಕೆ ಕಾಣುವ ವೀರಗಲ್ಲು ಬಹಳ ವಿಶಿಷ್ಟವಾಗಿದೆ. ಮೇಲಿನ ಶಾಸನದಲ್ಲಿ ವೀರನು ಕೈಲಾಸಕ್ಕೆ ಸೇರುವ ದೃಶ್ಯವನ್ನು ತೋರಿದರೆ, ಇಲ್ಲಿ ವೈಷ್ಣವ ಮತ್ತು ಶೈವ ಸಂಪ್ರದಾಯದ ಸೌಮ್ಯವಿದೆ, ಸುಮಾರು ೪ ೧/೨ ಅಡಿ ಎತ್ತರ ಮತ್ತು ೪ ಅಡಿ ಅಗಲವಿರುವ ವೀರಗಲ್ಲಿನಲ್ಲಿ ಕೆಳಗಿನ ಹಂತದಲ್ಲಿ ಎಂದಿನಂತೆ ಯುದ್ಧದ ದೃಶ್ಯ, ಪ್ರಮುಖವಾಗಿ ಕಟಾರಿ ಹಿಡಿದು ಹೋರಾಡುವ ವೀರರು ಒಬ್ಬ ವೀರನ ಕಡೆ ಕತ್ತಿ ಹಿಡಿದ ಇಬ್ಬರು ಕುದುರೆ ಸವಾರರು ಮತ್ತೊಬ್ಬ ವೀರನ ಕಡೆ ಬರ್ಜಿ ಹಿಡಿದ ಇಬ್ಬರು ಕುದುರೆಸವಾರರು, ಎರಡನೇಯ ಹಂತದಲ್ಲಿ ಪಲ್ಲಕ್ಕಿಯಲ್ಲಿ ಕುಳಿತ ಮರಣ ಗೈದ ವೀರ ಅಕ್ಕ ಪಕ್ಕ ಚಾಮರ ಸೇವೆ ಎಡ ಮತ್ತು ಬಲಭಾಗದಲ್ಲಿ ಐರಾವತ ಆನೆ ಮೇಲೆ ಕುಳಿತ ವಜ್ರಾಯುಧನಾದ ಇಂದ್ರ, ಮೂರನೇ ಹಂತದಲ್ಲಿ ವೈಕುಂಠಕ್ಕೆ ಸ್ವಾಗತಿಸುತ್ತಿರುವ ಕೈ ಮುಗಿದು ಕುಳಿತ ಗರುಡ ಅದರ ಎಡ ಮತ್ತು ಬಲಭಾಗಕ್ಕೆ ಸಂಗೀತ ನೃತ್ಯಗಳ ಸಾಲು, ನೃತ್ಯದೊಂದಿಗೆ ನಾದಸ್ವರ, ಮೃದಂಗ, ತಾಳ ಇತ್ಯಾದಿ ವಾದ್ಯ ವಿಶೇಷಗಳನ್ನು ಕೆತ್ತಲಾಗಿದೆ. ಇನ್ನು ಕಡೆಯ ಮತ್ತು ನಾಲ್ಕನೇಯ ಹಂತದಲ್ಲಿ ವೈಷ್ಣವ ಮತ್ತು ಶೈವದ ಸಮಾಗಮ. ಕಲ್ಲಿನ ಒಂದು ಪಾರ್ಶ್ವದ ಹೆಚ್ಚಿನ ಭಾಗದಲ್ಲಿ ಕೊಳಲನೂದುವ ಶ್ರೀಕೃಷ್ಣ ಅಕ್ಕ ಪಕ್ಕ ಹೆಂಡತಿಯರು, ಕೃಷ್ಣನ ಬಲಕ್ಕೆ ಚಕ್ರ–ಎಡಕ್ಕೆ ಶಂಕು, ಚಕ್ರದ ಬಲತುದಿಯಲ್ಲಿ ಕುಳಿತ ವೀರರ ಪಕ್ಕದಲ್ಲಿ ಒಂದು ಸ್ತ್ರೀ (ಹೆಂಡತಿ) ಕೆತ್ತನೆ ಅಕ್ಕ ಪಕ್ಕ ಸಖಿಯರು ಇದು ವೈಕುಂಠದ ದೃಶ್ಯವಾದರೆ, ಅದೇ ಹಂತದಲ್ಲಿ ಎಡಕ್ಕೆ ಕೈಲಾಸ ದೃಶ್ಯ, ಶಿವನಿಗೆ ನಂದಿಗೆ ಪೂಜೆ ಸಲ್ಲಿಸುತ್ತಿರುವ ವ್ಯಕ್ತಿ ಈ ವಿಶೇಷವಾದ ವೀರಗಲ್ಲಿನಲ್ಲಿ ಹುತಾತ್ಮನಾದ ವೀರನು ವೈಕುಂಠ ಮತ್ತು ಕೈಲಾಸ ಎರಡರ ಪ್ರವೇಶಕ್ಕೂ ಅರ್ಹನಾದವನು ಎಂಬ ಅರ್ಥಕೊಡುತ್ತದೆ. ಎಂದಿನಂತೆ ಕಲ್ಲಿನ ಮೇಲ್ಭಾಗದ ಅಕ್ಕ ಪಕ್ಕದ ತುದಿಗಳಲ್ಲಿ ಸೂರ್ಯ, ಚಂದ್ರರ ಕೆತ್ತನೆಯಿದ್ದು, ವೀರಗಲ್ಲಿನ ಸುತ್ತಲು ನಾಜೂಕಾದ ಹಂಸಬಳ್ಳಿಯನ್ನು ಬಿಡಿಸಲಾಗಿದೆ.

ಮಂಡ್ಯಕ್ಕೆ ಸಮೀಪದ ಸಂತೆಕಸಲಗೆರೆ, ಮುದಗಂದೂರು ಇಂಥ ಕಡೆಗಳಲ್ಲಿ ಅಸಂಖ್ಯಾತ ವೀರಗಲ್ಲುಗಳ ಸಾಮೂಹಿಕ ಪ್ರತಿಷ್ಠಾಪನೆಯೇ ಆಗಿದೆ. ಕಾರಣ ಈ ಭಾಗದಲ್ಲಿ ಮಹತ್ವ ಪಡೆದ ಯುದ್ಧಗಳು ಸಂಭವಿಸಿರುವುದನ್ನು ಚರಿತ್ರೆಯಲ್ಲಿ ನೋಡಬಹುದಾಗಿದೆ. ಒಟ್ಟಾರೆ ವೀರಗಲ್ಲು ಮತ್ತು ಮಾಸ್ತಿಕಲ್ಲುಗಳ ಮೇಲೆ ಸೂರ್ಯ ಮತ್ತು ಚಂದ್ರರ ಚಿತ್ರಗಳಿದ್ದು, ಇಂಥ ಸ್ಮಾರಕಗಳು ಚಿರಕಾಲ ಉಳಿಯಲಿ ಎಂದು ಸೂಚಿಸಿದ್ದರೂ ಅನೇಕ ಕಡೆ ಅವು ಇರುವ ಸ್ಥಿತಿಗತಿ ಶೋಚನೀಯವಾಗಿದೆ. ಇವಿಷ್ಟು ಜನಜೀವನದ ವಿವಿಧ ಸಂಸ್ಕೃತಿಯ ಬಗ್ಗೆ ನೀಡಿದ ಕೆಲವೇ ಶಾಸನಗಳ ಮಾದರಿಯಷ್ಟೇ.

ಅಡಿಟಿಪ್ಪಣಿಗಳು:–

೧. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ: ಡಾ॥ ಎಂ.ಚಿದಾನಂದಮೂರ್ತಿ. ಸ್ವಪ್ನ ಬುಕ್ ಹೌಸ್ –ಬೆಂಗಳೂರು. ಪು. ೩೧.

೨. ಮಂಡ್ಯ ಜಿಲ್ಲಾ (ಪರಿಷ್ಕೃತ) ಗ್ಯಾಸೆಟಿಯರ್ ಮುಖ್ಯ ಸಂ ಶ್ರೀ. ಓ. ಎ. ಪಾರ್ಥಸಾರಥಿ. ಪು.೪೦

೩. ಅದೇ, ಪು. ೪೧

೪. ಶಾಸನ ಮತ್ತು ಗದ್ಯ:– ಹು. ಕಾ. ಜಯದೇವ್. ಸ್ವಪ್ನ ಬುಕ್ ಹೌಸ್ ಮೂರನೇ ಮುಖ್ಯ ರಸ್ತೆ, ಗಾಂಧಿನಗರ–ಬೆಂಗಳೂರು. ಪು. ೩೨

೫. ಅದೇ, ಪು. ೩೫

೬. ಅದೇ, ಪು. ೩೬

೭. ಕನ್ನಡ ಶಾಸನಗಳು:– ಬಾ,ರಾ, ಗೋಪಾಲ್– ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು. ಪು. ೬.

೮. ಅದೇ, ಪು. ೬

೯. ಅದೇ ಪು ೭

೧೦. ಶಾಸನ ಪರಿಚಯ: ಆರ್. ಶೇಷಶಾಸ್ತ್ರಿ, ಪ್ರಸಾರಂಗ ಬೆಂಗಳೂರು. ಪು. ೬೨

೧೧. ಕರ್ನಾಟಕದ ವೀರಗಲ್ಲುಗಳು; ಡಾ॥ ಆರ್. ಶೇಷಶಾಸ್ತ್ರಿ, ಕನ್ನಡ ಸಾಹಿತ್ಯ ಪರಿಷತ್ತು ಪು. ೬೩

೧೨. ಅದೇ, ಪು. ೬೪

೧೩. ಅದೇ, ಪು. ೬೭

೧೪. ಸುವರ್ಣ ಮಂಡ್ಯ: (ಸಂ), ದೇ,ಜ,ಗೌ ಸ್ವಾಗತ ಸಮಿತಿ, ೬೩ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಮಂಡ್ಯ ಪು. ೮೬

೧೫. ಶಾಸನ ಪರಿಚಯ: ಆರ್. ಶೇಷಶಾಸ್ತ್ರಿ, ಪ್ರಸಾರಂಗ ಬೆಂಗಳೂರು. ಪು. ೧೪

೧೬. ಸುವರ್ಣ ಮಂಡ್ಯ: (ಸಂ), ದೇ,ಜ,ಗೌ ಸ್ವಾಗತ ಸಮಿತಿ, ೬೩ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಮಂಡ್ಯ ಪು. ೮೮

೧೭. ಅದೇ, ಪು. ೮೯

೧೮. ಅದೇ, ಪು. ೯೦

೧೯. ಕರ್ನಾಟಕದ ವೀರಗಲ್ಲುಗಳು; ಡಾ॥ ಆರ್. ಶೇಷಶಾಸ್ತ್ರಿ, ಕನ್ನಡ ಸಾಹಿತ್ಯ ಪರಿಷತ್ತು ಪಂಪ ಮಹಾಕವಿ ರಸ್ತೆ ಚಾಮರಾಜಪೇಟೆ ಪು. ೧೧

೨೦. ಅದೇ, ಪು. ೨೯೩

೨೧. ಅದೇ, ಪು. ೩೧೧

೨೨. ಸುವರ್ಣ ಮಂಡ್ಯ: (ಸಂ), ದೇ,ಜ,ಗೌ ಸ್ವಾಗತ ಸಮಿತಿ, ೬೩ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಮಂಡ್ಯ ಪು. ೯೩

೨೩. ಅದೇ, ಪು. ೯೭

೨೪. ಅದೇ, ಪು. ೧೦೦

೨೫. ಮಂಡ್ಯ, ಜಿಲ್ಲೆಯ ಸಾಂಸ್ಕೃತಿಕ ಪರಂಪರೆ ತೈಲೂರು ವೆಂಕಟಕೃಷ್ಣ. ಬಾನು ಪ್ರಕಾಶನ ಮಂಡ್ಯ ಪು. ೧೫

೨೬. ಮಂಡ್ಯ ಜಿಲ್ಲೆಯ ಶಾಸನಗಳು ನಂಜುಂಡಸ್ವಾಮಿ, ಕರ್ನಾಟಕ ಮುಕ್ತ ವಿಶ್ವವಿದ್ಯಾಲಯ, ಮೈಸೂರು.

೨೭. ಮಂಡ್ಯ, ಜಿಲ್ಲೆಯ ಸಾಂಸ್ಕೃತಿಕ ಪರಂಪರ? ತೈಲೂರು ವೆಂಕಟಕೃಷ್ಣ. ಬಾನು ಪ್ರಕಾಶನ ಮಂಡ್ಯ ಪು. ೧೬

ಅಧ್ಯಾಯ ೪

ಶಾಸನ ಕವಿಗಳು ಮತ್ತು ಶಾಸನೋಕ್ತ ಕವಿಗಳು

ಅಧ್ಯಾಯ ೫

ಜಿಲ್ಲೆಯ ಶಾಸನಗಳ ಸಾಹಿತ್ಯಿಕ ಅಧ್ಯಯನ

ಅಧ್ಯಾಯ ೪

ಶಾಸನ ಕವಿಗಳು ಮತ್ತು ಶಾಸನೋಕ್ತ ಕವಿಗಳು

ಮಂಡ್ಯ ಜಿಲ್ಲೆಯ ಪ್ರಾಚೀನ ಕಾಲದಿಂದಲೂ ತನ್ನದೇ ಆದ ಸಾಹಿತ್ಯಿಕ ಪರಂಪರೆಯನ್ನು ಹೊಂದಿದೆ. ಹಲವಾರು ಕವಿಗಳು ಇಲ್ಲಿ ಆಗಿಹೋಗಿದ್ದಾರೆ, ಇಂತಹವರಲ್ಲಿ ಶಾಸನಗಳಲ್ಲಿ ಉಲ್ಲೇಖಗೊಂಡಿರುವ ಕವಿಗಳನ್ನು ಗುರುತಿಸಿ, ಅದರ ಬಗೆಗೆ ಶಾಸನಗಳಲ್ಲಿರುವ ಮಾಹಿತಿಗಳನ್ನು ಗುರುತಿಸಿ ಅಧ್ಯಯನ ನಡೆಸುವುದಲ್ಲದೆ, ಶಾಸನ ರಚನೆ ಮಾಡಿದ ಕವಿಗಳನ್ನು ಇಲ್ಲಿ ಅಭ್ಯಾಸ ಮಾಡಲಾಗುತ್ತದೆ.

ಶಾಸನ ರಚನೆಗೆ ಸಂಬಂಧಿಸಿದಂತೆ ಮತ್ತು ೬ ಜನಕವಿಗಳ ಉಲ್ಲೇಖವಿದೆ, ಅವರಲ್ಲಿ ಕೃಷ್ಣದೇವರಾಯನ ಆಸ್ಥಾನ ಕವಿ ಸಭಾಪತಿಯು ಕೃಷ್ಣದೇವರಾಯನ ಮತ್ತು ನಂತರದ ಅರಸರ ಆಳ್ವಿಕೆಗೆ ಸೇರಿದ ಕೃಷ್ಣದೇವರಾಯನ ನಾಮಂ,೧೩, ಮಂ,೭, ಅಚ್ಯುತರಾಯನ ಮ, ೧೪೪ ಮತ್ತು ಸದಾಶಿವರಾಯನ ನಾಮಂ ೧೦೭-ನಾಲ್ಕು ತಾಮ್ರ ಶಾಸನಗಳ ಕರ್ತೃವಾಗಿದ್ದು ಈ ಶಾಸನಗಳನ್ನು ಕಾಲಕ್ರಮವಾಗಿ ಕ್ರಿ.ಶ.೧೫೧೨, ೧೫೧೬, ೧೫೫೩ ಮತ್ತು ೧೫೪೫ ಆಗಿವೆ.

ಶಾಸನಕವಿ:-

ಕ್ರಿ.ಶ. ೧೧೩೮ ರ ಹೊಯ್ಸಳ ವಿಷ್ಣುವರ್ಧನ ಆಳ್ವಿಕೆಯ ನಾಮಂ, ೬೧ನೇಯ ಶಾಸನದ ಕರ್ತೃ ಸೋವಿಯಕ್ಕನ ಮಗ ಸತ್ಕವಿ ಸಾಂತಮಹಂತ ದಕ್ಷಿಣ ಹೆಮ್ಮನ ಮೊಮ್ಮಗ ಶಾಂತಿನಾಥ ರಚಿಸಿರುವ ಇಮ್ಮಡಿ ವೀರಬಲ್ಲಾಳನ ಆಳ್ವಿಕೆಗೆ ಸೇರಿದ ನಾಮಂ ೬೩ನೇಯ ಶಾಸನದಲ್ಲಿ ಕವಿಗೆ ಕವಿಕುಳತಿಳಕ ಎಂಬ ಪ್ರಶಸ್ತಿ ಇದೆ. ಆತನನ್ನು ಲಕ್ಷಣಗವಿ ಎಂದೂ ವರ್ಣಿಸಿದೆ ಸೂಕ್ತಿ ಸುಧಾರ್ಣವದ ಕರ್ತೃಮಲ್ಲಿಕಾರ್ಜುನನೇ ಚಿದಾನಂದನೆಂದು ಗುರುತಿಸಲಾಗಿದೆ. (ಮೊದಲೇ ಇದನ್ನು ವಿವರವಾಗಿ ಚರ್ಚಿಸಿದ್ದೇವೆ) ೧೪ ನೇಯ ಶತಮಾನದಲ್ಲಿ ಕ್ರಿ.ಶ. ೧೩೮೧ ರ ಅರುವನಹಳ್ಳಿಯ (ಮ.೮೭) ಕನ್ನಡ ಶಾಸನವನ್ನು ರಚಿಸಿದ ಕವಿ ನರಸಿಂಹ, ವಿರೂಪಾಕ್ಷನ ಅಳ್ವಿಕೆಗೆ ಸೇರಿದ ಕ್ರಿ.ಶ ೧೪೭೩ ನೇ ವರ್ಷದ ಸುಜ್ಜಲೂರು ತಾಮ್ರಶಾಸನದ ಕರ್ತೃ ಮಾಧವಾರಾಧ್ಯನ ಮಗ ದುಗ್ಗಪ, ಕೃಷ್ಣದೇವರಾಯನಿಗೆ ಸೇರಿದ ಕೆಲವು ಶಾಸನಗಳಲ್ಲಿ ಮೂರು ಶಾಸನಗಳನ್ನು (ನಾ.ಮಂ.೧೩೪.೧೬೦ ಮತ್ತು ಮಂ ೭) ತಾಮ್ರದ ಹಲಗೆಗಳ ಮೇಲೆ ಕಂಡರಿಸಲಾಗಿದೆ. ಈ ಮೂರು ಶಾಸನಗಳೂ ಅರಸನು ಅತಿರಾತ್ರ, ಹೇಮಾಶ್ವ ಮತ್ತು ಘೃತ ಪರ್ವತದಾನ ಮೊದಲಾದ

ಯಾಗಗಳನ್ನು ಮಾಡಿದ ಸಂದರ್ಭದಲ್ಲಿ ಪಂಡಿತರಾದ ಬ್ರಾಹ್ಮಣರಿಗೆ ಅರಸನು ದಾನ ನೀಡಿದ ವಿಷಯವನ್ನು ದಾಖಲಿಸಿದೆ. ಮೊದಲ ಪ್ರತಿಗ್ರಹಿ ಶ್ರೀನಿವಾಸಾಧ್ವರಿಯು ಅತಿರಾತ್ರ ಯಾಗವನ್ನು ಮಾಡಿದ್ದು ಆ ಸಂದರ್ಭದಲ್ಲಿ ಆತ ಹೋಸಳ ದೇಶದ ವೆಲ್ಲೂರಸೀಮೆಗೆ ಸೇರಿದ ಹಿರೆಜೆಟ್ಟಿಗೆ ಗ್ರಾಮವನ್ನು ದಾನವಾಗಿ ಪಡೆದಿದ್ದ, ದೊರೆಯು ಹೇಮಾಶ್ವ ಮತ್ತು ಘೃತಪರ್ವತ ಯಾಗಗಳನ್ನು ಮಾಡಿದ ಸಂದರ್ಭದಲ್ಲಿ ಉಳಿದಿಬ್ಬರು ದಾನಗಳನ್ನು ಪಡೆದಿದ್ದರು. ಎರಡನೇಯ ಪ್ರತಿಗ್ರಹಿಯಾದ ದೇವಭಟ್ಟನು ಕೃಷ್ಣದೇವರಾಯಪುರವಾದ ಮದನಪುರ ಮತ್ತು ಮಲ್ಲಿಗೆರೆಗಳೆಂಬ ಎರಡು ಗ್ರಾಮಗಳನ್ನು ಪಡೆದಿದ್ದನು. ಮಂಥೆಯ (ಮಂಡ್ಯ) ಗ್ರಾಮವನ್ನು ಸ್ವೀಕರಿಸಿದ ಗೋವಿಂದರಾಜನು ಮೂರನೆಯ ಶಾಸನದಲ್ಲಿ ಉಕ್ತನಾಗಿದ್ದು ಈತನು ವೆಂಕಟೇಶ ದೇವರಿಂದ ಹೂಮಾಲೆಯ ಮೂಲಕ ಗೌರವಿಸಲ್ಪಟ್ಟಟ್ಟು ಮತ್ತು ಗುರುವೆಂದು ಕರೆದುಕೊಂಡಿರುವ ಆನಂತಾಚಾರ್ಯನ ವಂಶಕ್ಕೆ ಸೇರಿದವನೆಂದು ಹೇಳಲಾಗಿದೆ, ದಾನವಾಗಿ ನೀಡಿದ ಗ್ರಾಮವು ಹೊಯ್ಸಳ ದೇಶದ ಶ್ರೀರಂಗಪಟ್ಟಣ ಸೀಮೆಗೆ ಸೇರಿದುದಾಗಿದೆ.[೧]

ಮೇಲುಕೋಟೆಯಲ್ಲಿರುವ ಕೃಷ್ಣದೇವರಾಯನ ಶಾಸನಗಳು ೧೩೪ ನೆಯ ಶಾಸನದ ಕಾಲ ಕ್ರಿ.ಶ.೧೫೨೮. ದಂಡು ಅಲುಭಳದೇವರ ಮಗನಾದ ಕೃಷ್ಣರಾಯನಾಯಕನು ಅರಸನು ನಾಯಕತನಕ್ಕೆ ಪಾಲಿಸಿದ್ದ ಶ್ರೀರಂಗಪಟ್ಟಣಸಿಂದಗಟ್ಟ ಸೀಮೆಯೊಳಗೆ ಎರಡು ಗ್ರಾಮಗಳನ್ನು ಸಂತೆಯ ಆಯ ತಳವಾರೆಕೆ, ಹೊಗೆದೆರೆ ಮುಂತಾದವುಗಳಿಂದ ಬರುವ ಆದಾಯ ಭಾಗವನ್ನು, ಒಟ್ಟು ೨೫೪ ವರಹಗಳನ್ನು, ದೇವರಿಗೆ ದಾನ ಮಾಡಿದುದಾಗಿ ಶಾಸನದಲ್ಲಿ ಹೇಳಿದೆ, ಈ ಸಂದರ್ಭದಲ್ಲಿ "ಹಿಂದಕ್ಕೆ ದೇವಸ್ಥಾನದ ಸೀಮೆಯವರನೂ ವೊಕ್ಕೊಳಾರಿ ಹಿಡಿದುಕೊಂಡು ಹೋಗಿ ತೊಂಡನೂರ ಗೆದ್ದನು ವುಳಿಸುವ ಸುಮಂಥ ಅದನೂ ನಾವು ಕುಳವಕಡಿದು ಬಿಟ್ಟೆವು" ಎಂದು ಹೇಳಿದೆ. ಮೇಲುಕೋಟೆಯ ದೇವಸ್ಥಾನದ ಭೂಮಿಗಳನ್ನು ಉಳುತ್ತಿದ್ದೆ ಒಕ್ಕಲಿಗರನ್ನು ತೊಂಡನೂರಿನಲ್ಲಿ ದೇವಸ್ಥಾನಕ್ಕೆ ಸೇರದೇ ಇರುವ ಭೂಮಿಗಳನ್ನು ಉಳಲು ಬಲವಂತವಾಗಿ (?) ಕರೆದೊಯ್ಯುತ್ತಿದ್ದ ಕಾರಣ ಈಗ ತೊಂಡನೂರಿನ ಅ ಭೂಮಿಗಳನ್ನೂ ದೇವಸ್ಥಾನಕ್ಕೆ ನೀಡಿದುದಾಗಿ ಇದನ್ನು ಅರ್ಥೈಸಬಹುದು. ಇದರಿಂದ ಈ ಎಲ್ಲಾ ಭೂಮಿಗಳ ಒಡೆತನ ದೇವಸ್ಥಾನಕ್ಕೆ ಸೇರಿದ್ದು, ಅವುಗಳನ್ನು ಉಳಲು ಒಕ್ಕಲಿಗರನ್ನು ಸೂಕ್ತವಾಗಿ ನಿಯಮಿಸಿಕೊಳ್ಳುವ ಹೊಣೆ ಸಹ ದೇವಸ್ಥಾನದ್ದೇ. ಅದುದರಿಂದ ಒಕ್ಕಲುಗಳನ್ನು ಬಲವಂತದಿಂದ ಬೇರೆಡೆಗೆ ಕರೆದೊಯ್ಯುವ ಅಭ್ಯಾಸಕ್ಕೆ ಮುಕ್ತಾಯ ಹಾಕಿದಂತಾಯಿತೇನೋ.[೨]

ಕೊಡಗಹಳ್ಳಿಯ ಶಾಸನವು (ಮವ ೧೦೮) ತಳಕಾಡ ಕೀರ್ತಿನಾರಾಯಣದೇವರಿಗೆ ಚಂದ್ರಗ್ರಹಣದಂದು ದೊರೆ ಅಚ್ಯುತರಾಯರಿಗೆ ಧರ್ಮವಾಗಬೇಕೆಂದು ಮಾಯಣಪುರವೆಂಬ ಗ್ರಾಮವನ್ನು ದತ್ತಿ ನೀಡಿದ ವಿಷಯವನ್ನು ದಾಖಲಿಸಿದೆ, ಕೊಟ್ಟಿರುವ ತೇದಿ ವಿವರಗಳು. ಕ್ರಿ.ಶ.೧೫೩೦, ಆಕ್ಟೋಬರ್ ೬ಕ್ಕೆ ಸರಿಹೊಂದುತ್ತದೆ. ದಾನಿ ರಾಯಣನಾಯಕನನ್ನು ರಾಯರ ಮಕ್ಕಳೆಂದು ವರ್ಣಿಸಿದೆ. ಮವ ೭೮ ನೆಯ ಮಾರೆಹಳ್ಳಿಯ ಶಾಸನವು ಅದೇ ಗ್ರಾಮದ ಮೂಲಸ್ಥಾನದೇವರಿಗೆ ತಿಪಣನಾಯಕನ ಅನುಮತಿಯನ್ನು ಪಡೆದು ಹೊಯಿಸನಾಡಸೀಮೆಯ ಮಾರಹಳ್ಳಿಯಲ್ಲಿ ಭೂಮಿಯನ್ನು ಆದೇ ದೊರೆಯ ಶ್ರೇಯಕ್ಕಾಗಿ ದತ್ತಿ ಬಿಟ್ಟ ವಿಷಯವನ್ನು ನಿರೂಪಿಸಿದೆ. ಇಲ್ಲಿ ಉಕ್ತವಾಗಿರುವ ತೇದಿ ವಿವರಗಳು ಕ್ರಮ ಬದ್ಧವಾಗಿಲ್ಲ ಮತ್ತು ಆ ವಿವರಗಳು ಕ್ರಿ.ಶ ೧೫೨೧ ಕ್ಕೆ ಹೊಂದುತ್ತವೆ. ಆಗ ಕೃಷ್ಣದೇವರಾಯನು ಆಳ್ವಿಕೆಯನ್ನು ನೆಡೆಸುತ್ತಿದ್ದು, ದಾನವನ್ನು ಅಶ್ವಯುಜಮಾಸದ ಚಂದ್ರಗ್ರಹಣದಂದು ನೀಡಲಾಗಿದೆ. ಈ ಚಂದ್ರಗ್ರಹಣವು ಅಚ್ಯುತರಾಯನ ಅಳ್ವಿಕೆಯ ಕಾಲದಲ್ಲಿ ಕ್ರಿ.ಶ.೧೫೩೦ ಅಕ್ಟೋಬರ್ ೬ರಂದು ಮಾತ್ರ ಬಂದಿದ್ದು. ಈ ತೇದಿ ವಿವರಗಳು ಮೇಲೆ ಹೇಳಿರುವ ಮವ ೧೦೮ನೆಯ ಶಾಸನದ ತೇದಿ ವಿವರವೇ ಆಗಿವೆ. ಪ್ರಾಯಶಃ ಇದೆ ಪ್ರಸ್ತುತ ಶಾಸನದ ತೇದಿಯಾಗಿದ್ದಿರಬಹುದು.

ಜಿಲ್ಲೆಯ ಅನೇಕ ಶಾಸನಗಳನ್ನು ಕವಿಗಳು ಬರೆದಿದ್ದಾರೆ. ಅವರಲ್ಲಿ ಬಿಂಡಯ್ಯ, ಚಿದಾನಂದ ಮಲ್ಲಿಕಾರ್ಜುನ, ಮತ್ತು ಸಾಂತಮಹಂತ, ಶಾಂತಿನಾಥ, ನೃಸಿಂಹಸೂರಿ ಮೊದಲಾದವರು ಖ್ಯಾತ ಕವಿಗಳಾಗಿದ್ದಂತೆ ತೋರುತ್ತದೆ. ಚಿದಾನಂದ ಮಲ್ಲಿಕಾರ್ಜುನನ 'ಸೂಕ್ತಿ ಸುಧಾರ್ಣವ'ವನ್ನು ಬಿಟ್ಟರೆ ಬೇರೆಯವರ ಯಾವುದೇ ಕೃತಿಗಳೂ ದೊರಕಿರುವುದಿಲ್ಲ.

ಬಿಂಡಯ್ಯ (೧೦ನೇ ಶ.)

ಗಂಗರ ಕಾಲದ ಅಥವಾ ಹೊಯ್ಸಳರ ಆರಂಭ ಕಾಲದ ಎಲೆಕೊಪ್ಪ ಬಂಡೆ ಶಾಸನವನ್ನು 'ಶ್ರೀಮದೇಳಾಚಾರ್ಯ್ಯರ ವರಗುಡ್ಡ ಬಿಣ್ಣಯ್ಯ ಬರೆದಂ, ಮಂಗಳಂ'[೩] ಎಂದು ಹೇಳಿದೆ. ಬಿಂಡಯ್ಯನು ಕವಿಯಾಗಿರಬಹುದೆಂದು ಹೇಳಲಾಗಿದೆ.[೪] ಈತನು ರಚಿಸಿರುವ ಮೂರು ಕಂದ ಪದ್ಯಗಳು ಕವಿತಾ ಗುಣವನ್ನು ಹೊಂದಿವೆ. ಮೇವುಂಡಿಯವರು ಇವನ ಹೆಸರನ್ನು 'ಬಿಂದಯ್ಯ' ಎಂದು ಹೇಳಿದ್ದಾರೆ, ಆದರೆ ಶಾಸನದಲ್ಲಿ ಬಿಂಡಯ್ಯ ಎಂದೇ ಇದೆ. ಬಿಂಡಯ್ಯ ಎಂಬ ಹೆಸರು ಆಂಡಯ್ಯನೆಂಬ ಜೈನಕವಿಯ ನೆನಪನ್ನು ತರುತ್ತದೆ. ಅದರ ಒಂದು ಪದ್ಯ. ಶ್ರವಣಬೆಳಗೊಳದ ಬಳಿ ಬಿಂಡೇನಹಳ್ಳಿ ಎಂಬ ಊರೂ ಇದೆ. ಇದು ಬಿಂಡಯ್ಯನಹಳ್ಳಿ ಆಗಿರಬಹುದು.

ನರಸಿಂಹಮೂರ್ತಿಯವರು ಬಿಂಡಯ್ಯನನ್ನು ಕವಿ ಎಂದು ಹೇಳದೆ ಕೇವಲ ಶಾಸನ ಲೇಖಕನೆಂದು ಹೇಳಿದ್ದಾರೆ.

ತಳವಳಗನಾಗಿ ಪುಲಿಗಳ
ಗಳಗರ್ಜ್ಜನೆಗಾದಮಳ್ಕಿ ಗುಹೆಯಿಂದಮಣಂ
ತಳರದೆ ನೆಲೆಸಿಪ್ಪ ಮನೋ
ಬಳಮುರ್ಬ್ಬಿಗಗುರ್ವ್ವು ಗೊಹೆಯ ಭಟ್ಟಾರಕನ್

ಸಾಂತಮಹಂತ:–

ಈತನು ನಾಗಮಂಗಲ ತಾಲ್ಲೂಕು ಲಾಳನಕೆರೆಯ ಶಾಸನವನ್ನು ಬರೆದಿರುತ್ತಾನೆ. ಈ ಶಾಸನದಲ್ಲಿ ೧೩ ಕಂದಪದ್ಯಗಳೂ. ೭ ವೃತ್ತಗಳೂ ಇವೆ. ಶಾಸನದ ಕೊನೆಯ ಕಂದಪದ್ಯದಲ್ಲಿ ತನ್ನ ವಿವರವನ್ನು ನೀಡಿರುವುದನ್ನು ಬಿಟ್ಟರೆ ಹೆಚ್ಚಿನ ವಿವರಗಳೇನಿಲ್ಲ. ಈತನು ಅರಸೀಕೆರೆ ತಾಲ್ಲೂಕು ಕೆಲ್ಲಂಗೆರೆಯ ಶಾಸನವನ್ನೂ ಬರೆದಿದ್ದಾನೆ. ಅದರಲ್ಲೂ ಈ ಕೆಳಗಿನ ಪದ್ಯ ಒಂದನ್ನು ಬಿಟ್ಟರೆ ಬೇರೆ ವಿವರಗಳಿಲ್ಲ.

ಕ್ಷಿತಿವಿನುತೆ ಸರ್ಬ್ಬದೇವ
ನುತೆ ಸಂನುತೆ ಸೋಮಿಯಕ್ಕನಣುಗಿನ ಪುತ್ರಂ
ಸತುಕವಿ ಸಾಂತಮಹಂತಂ
ಸ್ತಿತಿಸಾರಂ ಪೇಳ್ದನಚಿಯಿಂ ಸಾಶನಮಂ

ಸೋಮಿಯಕ್ಕ (ಸೋವಿಯಕ್ಕ)ನ ಕಿರಿಯಮಗನಾದ ಇವನು ತನ್ನ ತಾಯಿಯನ್ನು ಬಹಳವಾಗಿ ಹೊಗಳಿ ತಾನು ಆಕೆಯ ಪ್ರೀತಿಯ ಪುತ್ರನೆಂದು ಹೇಳಿದ್ದಾನೆ. ಅವನು ರಚಿಸಿರುವ ಕೆಲವು ಉನ್ನತಮಟ್ಟದ ಪದ್ಯಗಳನ್ನು ಗುರುತಿಸಬಹುದು.

ವಿಷ್ಣುವರ್ಧನ ಕಾಲದ ಶಾಸನಗಳು:–

ಕೊಂಡಂ ತಳಕಾಡಂ ಕೈ
ಕೊಂಡಂ ಮೇಲೆತ್ತಿ ಕೊಂಗನವೆಯವದಿಂದಂ
ಕೊಂಡಂ ವಿಷ್ಣುವೇ ಚೋಳನ
ಮಂಡಳೀಕರ ಮುಡೆಗೊಂಡು ತನುಮಂಡಳಮಂ

ಯೇಚಿರಾಜ ದಂಡಾಧೀಶ:

ಅಂಡಲೆದರಿನರಪಾಳರ
ಹಿಂಡಂ ಬೆಂಕೊಂಡು ಪರಮಂಡಳಮಂ
ದಂಡೇಷನೇಚಿರಾಜಂ
ಗಂಡರಗಂಡಂ ಧರಿತ್ತಿಯೊಳುಪೆಸರ್ವ್ವಡೆದಂ

ಬಿಟ್ಟದೇವ ದಂಡಾಧೀಶ:

ನುಡಿದ ನುಡಿ ತಾಂಬ್ರಶಾಸನ
ಪಡೆದ ಧನಂ ಸದುಬುಧರ್ಗ್ಗಮಾತ್ಯರೊಳಧಿಕಂ
ಪೊಡವಿಯೊಳೆ ತೋರ್ಪ್ಪಸುರತರು
ಪಡೆ ಮಾತೇಂ ಬಿಟ್ಟಿದೇವ ದಂಡಾಧೀಶಂ

ಮಂತ್ರಿ ಬೋಕಂಣ:

ಬೀರಂ ಬಿಂಕಮದೇವುದೊ
ಹಾರುವ ನಿನಗೆಂದು ನುಡಿವ ಗಳಹನ ಬಾಯೊಳು
ಕೂಲಗನೆಯ್ದೆ ಕುತ್ತುವ
ವೀರಾಗ್ರಣಿ ಮಂತ್ರಿ ಬೋಕಣಂ ವಸುಮತಿಯೊಳು

ಕವಿಕುಳತಿಳಕ ಶಾಂತಿನಾಥ (೧೧೬೫):–

ನಾಗಮಂಗಲ ತಾಲ್ಲೂಕು, ಲಾಳನಕೆರೆಯ ಮಧುಸೂದನ ದಂಡನಾಯಕನ ೫೭ ಸಾಲುಗಳ ದೊಡ್ಡ ಶಾಸನವನ್ನು ಶಾಂತಿನಾಥನೆಂಬ ಕವಿ ರಚಿಸಿದ್ದಾನೆ.

ದಕ್ಷಿಣ ಹೆಂಮನ ಮಂಮಂ
ಲಾಕ್ಷಣಗವಿ ಶಾಂತಿನಾಥ ಕವಿಕುಳತಿಳಕಂ
ದಾಕ್ಷಿಂಣ್ಯನಿಧಿ ಗುಣೋತ್ಕರ
ಸೀಕ್ಷಾಗುರು ಹೇಳ್ದನರ್ತಿಯಿಂ ಸಾಶನಮಂ

ಎಂದು ಶಾಸನದಲ್ಲಿ ಹೇಳಿರುವುದನ್ನು ಬಿಟ್ಟರೆ ಬೇರೆ ವಿವರಗಳೇನೂ ಇಲ್ಲ. ಈತನು ದಕ್ಷಿಣದಲ್ಲಿ ಪ್ರಸಿದ್ಧನಾಗಿದ್ದ ಹೆಂಮನೆಂಬುವವನ ಮೊಮ್ಮಗನೆಂದೂ, ಲಾಕ್ಷಣ ಕವಿ ಎಂದರೆ ಅಲಂಕಾರ, ವ್ಯಾಕರಣ ಮುಂತಾದವುಗಳನ್ನು ಬರೆದಿರುವನೆಂದೂ, (ಕವಿಗಳಿಗೆ)

ಗುರುವಾಗಿದ್ದನೆಂದೂ ಹೇಳಬಹದು. ಮೇವುಂಡಿ 'ಈತನು ಅರಸೀಕೆರೆಯ ೪೮ನೆಯ ಶಾಸನವನ್ನು ಬರೆದಿರುತ್ತಾನೆಂದೂ ಹೇಳಿದ್ದಾರೆ. ಈತನು ಬ್ರಾಹ್ಮಣ ಕವಿಯಿಂದು ತೋರುತ್ತದೆಂದೂ, ಶಾಂತಿನಾಥನು ಪ್ರೌಢಕವಿಯೆಂದೂ' ಈ ಎರಡೂ ಶಾಸನಗಳಿಂದ ಕೆಲವು ಪದ್ಯಗಳನ್ನು ಕವಿಚರಿತೆಕಾರರು ಸಂಗ್ರಹಿಸಿಕೊಟ್ಟಿದ್ದಾರೆ. ಮೇವುಂಡಿ ಮಲ್ಲಾರಿಯವರು ಶಾಂತಿನಾಥನು ಹೊಯ್ಸಳ ರಾಜ್ಯದ ದಕ್ಷಿಣ ಭಾಗದವನಾಗಿದ್ದು, ಲಾಳನಕೆರೆಯವನೋ, ನೆರೆಹೊರೆಯ ಪ್ರದೇಶದವನೋ ಆಗಿರಬೇಕೆಂದೂ, ಅರಸೀಕೆರೆ ತಾಲ್ಲೂಕು ಕಣಕಟ್ಟೆ ಶಾಸನವು ಕವಿ ಶಾಂತಿನಾಥನ ಅಜ್ಜನ ಹೆಸರಿನ ಬಗ್ಗೆ ವಾದವನ್ನೆಬ್ಬಿಸುತ್ತದೆಂದೂ, ಆದರೂ ಇವರಿಬ್ಬರೂ ಅಭಿನ್ನರೆಂದು ಹೇಳಿದ್ದಾರೆ. ಲಾಳನಕೆರೆ ಶಾಸನವನ್ನು ಬರೆದ ೪೨ ವರ್ಷಗಳ ತರುವಾಯ ಕಣಕಟ್ಟೆ ಶಾಸನವನ್ನು ಇವನು ಬರೆದನೆಂದು ಹೇಳಬಹುದೆಂದೂ ಹೇಳಿದ್ದಾರೆ. ಕಣಕಟ್ಟೆ ಶಾಸನದ ಪದ್ಯ ಹೀಗಿದೆ.

ದಕ್ಷಿಣ ಸೋಮನ ಮಮ್ಮಂ
ಲೊಕ್ಕಣಕವಿ ಶಾಂತಿನಾಥ ಕವಿಕುಳತಿಳಕಂ
ದಾಕ್ಷಿಂಣ್ಯನಿಧ ಗುಣಾಕಾರ
ಸಿಕ್ಷಾಗುರು ಹೇಳಿದರ್ತಿಯಿಂ ಸಾಸನಮಂ

ಕಣಕಟ್ಟೆ ಶಾಸನದಲ್ಲಿ ಸುಮಾರು ೧೨ ಕಂದಪದ್ಯಗಳೂ, ೮ ವೃತ್ತಗಳೂ ಇದ್ದರೆ, ಲಾಳನಕೆರೆ ಶಾಸನದಲ್ಲಿ ಸುಮಾರು ೧೧ ಕಂದ ಪದ್ಯಗಳೂ, ೧೩ ವೃತ್ತಗಳೂ ಇವೆ. ಲಾಳನಕೆರೆ ಶಾಸನದ ಪದ್ಯಗಳು ಕಾವ್ಯಮಯವಾಗಿವೆ.

ಸಂಧಿವಿಗ್ರಹಿ ಪಾರ್ಶ್ವನಾಥನ ತನಯ ಶಾಂತಿನಾಥ' ಎಂಬುವವನು ಚೆಬ್ರೋಲು ಶಾಸನವನ್ನು ಬರೆದಿರುತ್ತಾನೆಂದು ತಿಳಿದುಬರುತ್ತದೆ. 'ಸುಕುಮಾರ ಚರಿತೆ' ಎಂಬ ಚಂಪೂಕಾವ್ಯವನ್ನು ಬರೆದಿರುವವ ಶಾಂತಿನಾಥ ಕವಿಯೂ ಶಿಕಾರಿಪುರದ ಎರಡು ಶಾಸನಗಳನ್ನು ಬರೆದಿದ್ದಾನೆ. ಈತನು ಗೋವಿಂದರಾಜನ ಮಗ. ಆದುದರಿಂದ ಮೇಲ್ಕಂಡ ಶಾಂತಿನಾಥರಿಬ್ಬರೂ ಲಾಳನಕೆರೆ ಶಾಸನದ ಶಾಂತಿನಾಥನಿಂದ ಭಿನ್ನರು.

<u>ನರಸಿಂಹ:-</u>

ಈತನು ಮದ್ದೂರು ತಾಲ್ಲೂಕು ಅರುವನಹಳ್ಳಿಯ ಭಟ್ಟರ ಬಾಚಿಯಪ್ಪನ ಮರಣವನ್ನು ತಿಳಿಸುವ ಶಾಸನವನ್ನು ಬರೆದಿದ್ದಾನೆ. ಈ ಶಾಸನದ ಪದ್ಯಗಳು ಚರಮ ಗೀತೆಯಂತಿದ್ದು ಉತ್ತಮ ಕವಿತಾ ಗುಣವನ್ನು ಹೊಂದಿವೆ.

ಶೂರತೆಯಂ ಮ್ರಿಗಾಧಿಪನೊಳಾ ಕ್ಷಮೆಯಂ ಕ್ಷಿತಿಯೊಳ್ಗಭೀರಮಂ
ವಾರಿಧಿಯೊಳ್ಮನೋರತೆಯಂ ಮಕರಧ್ವಜನೊಳ್ಸುಶಾಂತಿಯಂ
ವಾರಿಜವೈರಿಯೊಳ್ಪಡದು ಪದ್ಮಜ ನಿರ್ಮ್ಮಿಸಿದಂತಿರಂಜಿತಂ
ಚಾರುಚರಿತ್ರ ಕೀರ್ತಿಯ ತನೂಭವ ಬಾಚನುದಾರನುರ್ವಿನೊಳು

ಈ ಪದ್ಯವು ರನ್ನ ಮಹಾಕವಿಯು ಸಾಹಸಭೀಮ ವಿಜಯದಲ್ಲಿ ಬರುವ 'ಶರಸಂದೋಹಮನನ್ಯಸೈನ್ಯದೊಡಲೊಳ್ ಬಿಲ್ಬಲ್ಮೆಯಂ ತನ್ನ ಶಿಷ್ಯರಮಯ್ಯೊಳ್ ನಿಜಕೀರ್ತಿಯಂ ನಿಖಿಳ ದಿಕ್ಚಕ್ರಂಗಳೊಳ್' ಪದ್ಯದ ಛಾಯೆಯನ್ನು ಹೋಲುತ್ತದೆಂದು ಹೇಳಬಹುದು.

ಪದ್ಯದ ವಿರಚಿಸಿದಂ ನಿರ
ವದ್ಯಂ ಸುಕವೀಂದ್ರಲಪವನ ಮಣಿಮಯಮುಕುರಂ
ಮಾದ್ಯತ್ ಕಂಠೀರವ ರವ
ಮಾದ್ಯತ್ತು ಹಿನಾಂಶು ಕಿರಣ ಕೀರ್ತಿ ನೃಸಿಂಹಂ.

ಎಂದು ಕವಿ ತನ್ನನ್ನು ಹೊಗಳಿಕೊಂಡಿದ್ದಾನೆ. ಕಂಠೀರವರವ ಎಂಬುದು ರನ್ನನ 'ಆ ರವಮಂ, ನಿರ್ಜಿತ ಕಂಠೀರವಮಮ್' ಎಂಬುದರ ಅನುಕರಣೆಯಾಗಿದೆ ಎಂದು ಹೇಳಬಹುದು.

<u>ತಿರುಮಲಾರ್ಯ:-</u>

ಚಿಕ್ಕದೇವರಾಜ ಒಡೆಯರ ಮಂತ್ರಿಯೂ, ಸ್ನೇಹಿತನೂ, ಪ್ರಸಿದ್ಧ ಕವಿಯೂ ಆಗಿದ್ದನು. ಬೇರೆ ಈತನೂ ಕೂಡಾ ತಿರುಮಕೂಡಲು ನರಸೀಪುರ. ಚಾಮರಾಜನಗರ ಶಾಸನಗಳನ್ನು ಬರೆದಿದ್ದಾನೆ. ಶ್ರೀರಂಗಪಟ್ಟಣದ ಕ್ರಿ.ಶ.೧೬೮೬ರ ತಾಮ್ರಶಾಸನವನ್ನೂ ಕೂಡಾ ಈ ತಿರುಮಲಾರ್ಯನೇ ಬರೆದಿದ್ದಾನೆಂದು ವಿದ್ವಾಂಸರು ಊಹಿಸಿದ್ದಾರೆ. ಆದರೆ ಈ ಶಾಸನದ ಕರ್ತೃ ರಾಮಾಯಣಂ ತಿರುಮಲಾರ್ಯನೆಂದು ಶ್ರೀ ಹಯವದನರಾಯರು ಹೇಳಿದ್ದಾರೆ.

<u>ರಾಮಾಯಣಂ ತಿರುಮಲಾರ್ಯ (೧೭೨೨):-</u>

ತೊಣ್ಣೂರಿನ ಒಂದು ದೊಡ್ಡ ತಾಮ್ರಶಾಸನವನ್ನು ಮತ್ತು ಮೇಲುಕೋಟೆಯ ಎರಡು ತಾಮ್ರಶಾಸನಗಳನ್ನು, ರಾಮಾಯಣ ಮಹಾಭಾರತ ಪಾರಾಯಣ ಮತ್ತು ಕೃತಿರಚನೆಯನ್ನೇ ವೃತ್ತಿಯನ್ನಾಗಿ ಮಾಡಿಕೊಂಡಿದ್ದ, ಕವಿ ತಿರುವಲೆಯಾರ್ಯನು ಬರೆದಿರುತ್ತಾನೆ. ತೊಣ್ಣೂರಿನ ದೊಡ್ಡ ತಾಮ್ರಶಾಸನದಲ್ಲಿ ಬಂದಿರುವ ಈ ಕೆಳಕಂಡ ವರ್ಣನೆಯನ್ನು ನೋಡಿದರೆ ತಿರುಮಲಾರ್ಯನು

ಸಂಸ್ಕೃತ, ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಮತ್ತು ಸಂಗೀತದಲ್ಲಿ ಪರಿಣತನಾಗಿದ್ದುದರ ಜೊತೆಗೆ, ಉಭಯ ಭಾಷೆಯ ಕವಿಯಾಗಿದ್ದನೆಂದು ಊಹಿಸಬಹುದು.

'ಕರ್ನ್ನಾಟಾಂಧ್ರ ಸುಸಂಸ್ಕೃತ ಕವಿತಾ ಗಾಂಧರ್ವ್ವಕೇಷು ಯಃಕ್ಕುಶಲ:।
ತೇನೇಮ ರಾಮಾಯಣ ತಿರುಮಲೆಯಾಚಾರ್ಯ ಸೂರಿಣಾ ಫಣಿತಾ:।
ಗ್ರಂಥಾಸ್ಸಂತೋಷೌಯಪ್ರಭವಂತ್ವಿಹ ತಾಂಬ್ರಶಾಸನೇ ಲಿಖಿತಾ:।
ಸಂಪತ್ಸಾರಸ್ವತ ಬಹುಸಂತಾನಕ್ಷೇಮಸರ್ವ್ವ ಸೌಖ್ಯಾಯ।
ಕಲ್ಯಾಣಾಯ ಯಥೇಷ್ಟಕಂ ಕಲಿತ ಸಮಪಸ್ತೇಪ್ಸಿತಾರ್ತ್ಥಲಾಭಾಯ।
ಶ್ರೀರಾಮಾಯಣ ಭಾರತ ಪಾರಾಯಣ ನಿಹಿತಾ ವೃತ್ತಿನಾ ಕೃತಿನಾ।
ಕವಿನಾ ತಿರುಮಲೆಯಾಚಾರ್ಯ್ಯೇಣೇಮ ತಾಂಬ್ರಶಾಸನಂ ಲಿಖಿತಂ।'

ಶ್ರೀ ರಾಮಾಯಣ ಭಾರತ ಪಾರಾಯಣ ವಿಹಿತ ವೃತ್ತಿನಾ ಕೃತಿನಾ।ಕವಿನಾ ತಿರುಮಲೆಯಾಚಾರ್ಯಣೇದನ್ತಾಮ್ರ ಶಾಸನಂ ಲಿಖಿತಂ। ಶ್ರೀ ರಾಮಾಯಣ ಭಾರತ ಪಾರಾಯಣ ವಿಹಿತಿ ವೃತ್ತಿನಾ ಕೃತಿನಾ।ಕವಿನಾ ತಿರುಮಲೆಯಾಚಾರ್ಯಣದಂ ತಾಮ್ರಶಾಸನಂ ಲಿಖಿತಂ। ಎಂದು ಮೇಲುಕೋಟೆಯ ತಾಮ್ರಶಾಸನಗಳಲ್ಲಿ ರಾಮಾಯಣಂ ತಿರುಮಲಾರ್ಯನ ಹೆಸರು ಉಲ್ಲೇಖವಾಗಿದೆ. 'ಕೌಂಡಿಣ್ಯ ಗೋತ್ರದ ಅಮಳವೂರ್ ಮನೀಷಿ ಶಠಕೋಪಾರ್ಯನ ಪೌತ್ರ, ಶ್ರೀ ರಾಮಾಯಣಂ ಶಿಂಗಾರಾರ್ಯನ ತನೂಜ ರಾಮಾಯಣಂ ತಿರುಮಳಾಚಾರ್ಯ' ಎಂದು ತೊಣ್ಣೂರು ಶಾಸನದಲ್ಲಿ ಹೇಳಿದೆ. ರಾಮಾಯಣಂ ತಿರುಮಲೆಯಾಚಾರ್ಯನು ಚಿಕ್ಕದೇವರಾಯನ ಆಸ್ಥಾನದಲ್ಲಿದ್ದನೆಂದು ಶ್ರೀ ಹಯವದನರಾಯರೂ, ಈತನು ಕೃಷ್ಣರಾಜನ ಆಸ್ಥಾನದಲ್ಲಿದ್ದನೆಂದು ಕವಿಚರಿತೆಕಾರರೂ ಹೇಳಿದ್ದಾರೆ. ಆದರೆ ರಾಮಾಯಣಂ ತಿರುಮಲೆಯಾರ್ಯನು ಚಿಕದೇವರಾಜನ ಆಸ್ಥಾನ ಕವಿಯಾಗಿರಲಿಲ್ಲವೆಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ ಮತ್ತು ಈತನು ಶಾಸನ ರಚನೆಯಲ್ಲಿ ತಿರುಮಲಾರ್ಯನನ್ನು ಅನುಸರಿಸಿದ್ದು ತಿರುಮಲಾರ್ಯನು ರಚಿಸಿರುವ ಶಾಸನ ಹಾಗೂ ಕೃತಿಗಳಿಂದ ಕೆಲವು ಪದ್ಯಗಳನ್ನು ತೆಗೆದುಕೊಂಡಿರುವುದು ಕಂಡುಬರುತ್ತದೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

ನೃಸಿಂಹಸೂರಿ:-

ಕಂಠೀರವ ನರಸರಾಜ ಒಡೆಯರ ಕಾಲದ ಮೇಲುಕೋಟೆ ತಾಮ್ರ ಶಾಸನವನ್ನು ಕೌಶಿಕ ವಂಶದ ವೇದವಿದ್ವಾಂಸನಾದ ಶ್ರೀನಿವಾಸನ ಪುತ್ರ ನರಸಿಂಹಸೂರಿಯು ಬರೆದಿರುತ್ತಾನೆ. ಈತನೂ ಕೂಡಾ ಶಾಸನ ಒಡೆಯರ ಆಸ್ಥಾನದ ಶಾಸನ ಬರಹಗಾರನಾಗಿದ್ದನೆಂದು ಹೇಳಬಹುದು. ಈತನು

ಶ್ರೀಭಾಷ್ಯಕ್ಕೆ 'ಬ್ರಹ್ಮವಿದ್ಯಾಕೌಮುದಿ' ಎಂಬ ಟಿಪ್ಪಣಿಯನ್ನು ಬರೆದಿರುವ ಮೇಲುಕೋಟೆಯ ಶ್ರೀನಿವಾಸನ ಪುತ್ರನಾಗಿರಬಹುದು.

ನಾಗಮಂಗಲ ೧೦೭ನೇ ಸಂಸ್ಕೃತ ಶಾಸನವು ನಾಗರ ಲಿಪಿಯಲ್ಲಿದ್ದು ಅದನ್ನು ಐದು ತಾಮ್ರದ ಹಲಗೆಗಳ ಮೇಲೆ ಕಂಡರಿಸಲಾಗಿದೆ. ಅದು ರಂಗ ಮತ್ತು ತಿಮ್ಮಾಂಬೆಯರ ಮಗ ಸದಾಶಿವರಾಯನ ಆಳ್ವಿಕೆಯನ್ನು ಉಲ್ಲೇಖಿಸುತ್ತದೆ ಮತ್ತು ಅಚ್ಯುತರಾಯನ ನಂತರ ಆತನ ಮಗ ವೆಂಕಟದೇವರಾಯ ಅಲ್ಪಕಾಲ ಆಳಿ ದುರದೃಷ್ಟವಶಾತ್ ಮೃತ ಹೊಂದಿದ ನಂತರ ಸದಾಶಿವರಾಯನ ತನ್ನ ಸಹೋದರಿಯ ಪತಿ ರಾಮನಿಂದ ಪಟ್ಟಾಭಿಷೇಕವಾಗಿ ಸಿಂಹಾಸನವನ್ನೇರಿದ ಕುತೂಹಲಕರವಾದ ಸಂಗತಿಯನ್ನು ತಿಳಿಸುತ್ತದೆ. ಈ ರಾಮ ಕೃಷ್ಣದೇವರಾಯನ ಅಳಿಯನಾದ ಅಳಿಯ ರಾಮರಾಯನೇ ಅಲ್ಲಿದೆ ಸದಾಶಿವರಾಯನ ಸೋದರ ಸಂಬಂಧಿ ತಿರುಮಲಾಂಬೆಯ ಪತಿ ರಾಮರಾಯನು ಸದಾಶಿವನ ಪಕ್ಷ ವಹಿಸಿದನೆಂಬ ವಿಷಯವೂ ವೆಂಕಟದೇವರಾಯನು ಕೇವಲ ಕೆಲವು ದಿನಗಳು ಮಾತ್ರ ಆಳಿದನೆಂಬ ಸಂಗತಿಯೂ ಬೇರೆ ಮೂಲಗಳಿಂದ ತಿಳಿದಿದೆ. ಮುಂದೆ ಶಾಸನವು ಸುರಗಿರಿಯ ಶತ್ರುಗಳನ್ನು ಸದಾಶಿವರಾಯನು ನಿಗ್ರಹಿಸಿದ ವಿಷಯವನ್ನು ಉಲ್ಲೇಖಿಸಿದೆ. ಹೊಯ್ಸಳನಾದ ಬೆಳ್ಳೂರು ಸೀಮೆಯೊಳಗಣ ವೆಂಕಟಾದ್ರಿ ಸಮುದ್ರವೆನಿಸಿದ ಹೊನ್ನೇನಹಳ್ಳಿಯನ್ನು ದಾನವಾಗಿ ನೀಡಿದ ವಿಷಯವನ್ನು ಉಲ್ಲೇಖಿಸುವುದೇ ಶಾಸನದ ಉದ್ದೇಶ. ಹೊಯ್ಸಣನಾಡು ಪೆನುಗೊಂಡೆ ರಾಜ್ಯಕ್ಕೆ ಸೇರಿತ್ತೆಂದು ಹೇಳಲಾಗಿರುವುದು ಆಶ್ಚರ್ಯಕರ ಏಕೆಂದರೆ ಈ ವೇಳೆಗೆ ಇನ್ನೂ ಹಂಪೆಯ ರಾಜಧಾನಿಯಾಗಿ ಮುಂದುವರೆದಿತ್ತು. ಬಹುಶಃ ಸದಾಶಿವನು ಪೆನುಗೊಂಡೆಗೆ ಬದಲಾಯಿಸಿದ್ದು ಅಲ್ಲಿಂದಲೇ ತಾತ್ವಿಕವಾಗಿ ಆತ ತನ್ನ ಅಧಿಕಾರವನ್ನು ಚಲಾಯಿಸುತ್ತಿದ್ದಿರಬಹುದು. ಪ್ರತಿಗ್ರಹಿಯಾದ ಚವರಂ ವೆಂಕಟಾದ್ರಿ ನಾಯಕನ ಭಿನ್ನಹದ ಮೇರೆಗೆ ದತ್ತಿಯನ್ನು ನೀಡಲಾಯಿತು. [೫]

ನಾಗಮಂಗಲ ತಾಲ್ಲೂಕಿನ ಪಟೇಲ್ ಸುಬ್ಬನವರ ವಶದಲ್ಲಿದ್ದ ತಾಮ್ರಶಾಸನವು ವಿಜಯನಗರದ ಶ್ರೀ ಕೃಷ್ಣದೇವರಾಯನ ಆಳ್ವಿಕೆಯ ಕಾಲದ ಶಾಸನವಾಗಿದೆ.೨ ಕಾಲ ಕ್ರಿ.ಶ೧೫೧೨ ಈ ಶಾಸನದಲ್ಲಿ ವಿಜಯನಗರದ ದೊರೆ ಶ್ರೀಕೃಷ್ಣದೇವರಾಯನ ಹೊಯ್ಸಳ ನಾಡಿನ ವೆಲ್ಲೂರು ಸೀಮೆಯ (ಬೆಳ್ಳೂರು ಸೀಮೆಯ) ಹಿರಿಜಟ್ಟಿಗೆ ಗ್ರಾಮವನ್ನು ಶಾಸ್ತ್ರ ಕಾವ್ಯ, ಪುರಾಣಗಳಲ್ಲಿ ಅಪ್ರತಿಮ ಪಂಡಿತನಾದ ಶ್ರೀನಿವಾಸ ಧವರಿ ಎಂಬುವವನಿಗೆ ದತ್ತಿ ನೀಡಿದ ವಿಷಯದ ಉಲ್ಲೇಖ ಇದರಲ್ಲಿದೆ, ಹಿರಿ ಜಟ್ಟಿಗ ಗ್ರಾಮವಲ್ಲದೇ, ಕುಪ್ಪೆಮಂಚನಹಳ್ಳಿ, ಚಿಕ್ಕಜಿಟ್ಟಿಗಹಳ್ಳಿ, ವೆಂಕಟನಾಥಪುರ ಮತ್ತು ಕಾಡಂಕಪುರ ಗ್ರಾಮಗಳು ಈ ದತ್ತಿಯಲ್ಲಿ ಸೇರ್ಪಡೆಯಾಗಿವೆ ಹಾಗೂ ದೊರೆಯು ಹಿರಿಯ ಜಟ್ಟಿಗೆ

ಗ್ರಾಮವನ್ನು ಚಿನ್ನದೇವಿಪುರ ಎಂದು ನಾಮಕರಣ ಮಾಡುತ್ತಾನೆ. ದತ್ತಿ ಸ್ವೀಕರಿಸಿದ ಶ್ರೀನಿವಾಸದವರಿಯು ದತ್ತಿಯ ಸ್ವಲ್ಪ ಭಾಗ ತನ್ನಲ್ಲಿ ಇಟ್ಟುಕೊಂಡು, ಉಳಿಕೆ ಭಾಗವನ್ನು ಈ ಎಲ್ಲಾ ಬ್ರಾಹ್ಮಣರಿಗೆ ನೀಡುತ್ತಾರೆ, ಬ್ರಾಹ್ಮಣರ ಹೆಸರೂ ಸಹ ಈ ಶಾಸನದಲ್ಲಿ ದೊರೆಯುತ್ತದೆ. ಇದೊಂದು ಸಂಸ್ಕೃತ ಭಾಷೆಯಲ್ಲಿರುವ ಶಾಸನವಾಗಿದೆ. ಈ ಶಾಸನದಿಂದ ತಿಳಿಯುವ ಅಂಶವೆಂದರೆ ಈಗಿನ ದೊಡ್ಡ ದೊಡ್ಡಜಟಕ, ಚಿಕ್ಕಜಟಕ ಗ್ರಾಮಗಳು ಹಿಂದೆ ಹಿರಿಯ ಜಟ್ಟಿಗ, ಚಿಕ್ಕ ಜಟ್ಟಿಗ ಗ್ರಾಮಗಳಾಗಿದ್ದು, ಕಾಲಾನುಕ್ರಮದಲ್ಲಿ ಈಗ ಚಾಲ್ತಿಯಲ್ಲಿರುವ ಹೆಸರನ್ನು ಪಡೆದುಕೊಂಡಿವೆ ದೊಡ್ಡ ಜಟಕ ಗ್ರಾಮವನ್ನು ದೊರೆ ಚಿನ್ನಾದೇವಿಪುರ ಎಂದು ನಾಮಕರಣ ಮಾಡಿದ್ದರೂ ಸಹ ಜನ ಹಿಂದಿನಿಂದ ರೂಢಿಯಲ್ಲಿದ್ದ ಹೆಸರನ್ನು ಬಿಡದೇ ಮುಂದುವರಿಸಿಕೊಂಡು ಹೋಗಿರುವ ೧೨ ನೇ ಶತಮಾನದ ಶಾಸನದಲ್ಲಿ ಊರಿನ ಹೆಸರು ಹಿರಿಯ ಜಟ್ಟಿಗ ಎಂದೇ ಇದೆ.

ಮಂಡ್ಯ ಜಿಲ್ಲೆಯ ಶಾಸನಗಳನ್ನು ರಚಿಸಿರುವವರಲ್ಲಿ ಪ್ರಮುಖವಾಗಿ ಗುರುತಿಸ ಬೇಕಾದವರೆಂದರೆ.

* **(ಕವಿ ಕಂದರ್ಪನ ಶಿಷ್ಯ) ಬಾಳಚಂದ್ರ**
* **ಚಿದಾನಂದ ಕವಿ.**
* **ಸಭಾಪತಿ, ಮತ್ತು**
* **ರಾಮಾಯಣಂ ತಿರುಮಲಾಚಾರ್ಯ.**

ಹೊಯ್ಸಳ ಚಕ್ರವರ್ತಿ ಇಮ್ಮಡಿ ವೀರಬಲ್ಲಾಳನ ಕಾಲದ ಕವಿ ಬಾಳಚಂದ್ರ. ಈತ ತಿಪ್ಪೂರಿನ ಒಂದು ಶಾಸನ (ಮದ್ದೂರು ಸಂ ೫೩) ವನ್ನು ರಚಿಸಿದ್ದಾನೆ, ಇದೊಂದು ನಾಲ್ಕು ಸಾಲಿನ ಪುಟ್ಟಶಾಸನ ಇದರಲ್ಲಿ ತನ್ನ ಶಕ್ತಿಯನ್ನು ಬಿಂಬಿಸುವ ಯಾವ ಅವಕಾಶವೂ ಈ ಕವಿಗಿಲ್ಲ, ಅದರೆ ಇಲ್ಲಿರುವ ವಕ್ಕಣೆ ಬಹಳ ಮುಖ್ಯವಾದುದು.

* **ಸ್ವಸ್ತಿ ವುಭಯ ಭಾಷಾ ಕವಿ ಚಕ್ರವರ್ತಿಕಂದರ್ಪ ದೇವರ ಮದೇವ(*)ಳಿಗೆ**
* **ಸೊಂನಾದೇವಿಯರ ಮಗ ಕಾಣೂರ್ಗ್ಗಣ ತಿಳಕನು ಮಪ್ಪ**
* **ಬಾಳಚಂದ್ರ ದೇವರುಂ ತಂಮ ಗುರುಗಳಿಗೆ ಪರೋಕ್ಷವಾಗಿ ಮಾಡಿದ.**
* **ಪ್ರತಿಷ್ಠೆ (*)**

ಇಲ್ಲಿ ತಿಳಿದು ಬರುವುದೇನೆಂದರೆ ಉಭಯ ಭಾಷಾಕವಿ ಚರ್ಕವರ್ತಿಯಾಗಿದ್ದ ಕಂದರ್ಪ ದೇವನ ಪತ್ನಿ ಹೊಂನಾದೇವಿಯಲ್ಲಿ ಹುಟ್ಟಿದ ಮಗ ಕಾಣೂರ್ಗ್ಗಣ ತಿಳಕನಂತಿದ್ದ ಬಾಳಚಂದ್ರ ದೇವರು ತಮ್ಮ ಗುರುಗಳಿಗೆ ಪರೋಕ್ಷ ವಿನಯವಾಗಿ ಇದನ್ನು (ಈ ಸ್ಮಾರಕವನ್ನು) ಪ್ರತಿಷ್ಠಾಪಿಸಿದ.

ಬಾಳಚಂದ್ರ ಕವಿ ಕಂದರ್ಪನ ಮಗ ಎಂಬ ಸ್ಪಷ್ಟ ಚಿತ್ರಣ ಇಲ್ಲಿದೆ. ಆದರೆ ಶಾಸನ ಸಂಪುಟ ೭ ರ ಪ್ರಸ್ತಾವನೆಯಲ್ಲಿ ಬಾಳಚಂದ್ರ ಕವಿಕಂದರ್ಪನ ಶಿಷ್ಯ ಎಂದು ಹೇಳಲಾಗಿದೆ. ಬೆಳಗಾಂನ ಎರಡು ಶಾಸನಗಳನ್ನು ಬಾಳಚಂದ್ರರ ರಚಿಸಿದ್ದಾನೆ. ಎಂಬ ಅಭಿಪ್ರಾಯವೂ ಇಲ್ಲಿ ವ್ಯಕ್ತವಾಗಿದೆ ತಿರುಗಾಟ ಮತ್ತು ವಲಸೆ ಪ್ರವೃತ್ತಿ ಕೆಲವು ಜನರಿಗಿತ್ತು. ಕವಿಗಳೂ ಆದರಿಂದ ಹೊರತಾಗಿರಲಿಲ್ಲ ಎಂಬುದನ್ನು ಮೇಲಿನ ಅಭಿಪ್ರಾಯ ವ್ಯಕ್ತ ಪಡಿಸುತ್ತದೆ, ಅದರೆ ಈ ಇಬ್ಬರು ಕವಿಗಳ ವಿದ್ವತ್ಪರಿಚಯ ಮಾಡಬಲ್ಲಂತಹ ಶಾಸನಗಳಾವುವೂ ಈ ಜಿಲ್ಲೆಯಲ್ಲಿ ಇದುವರೆಗೂ ದೊರೆಯದಿರುವುದು ಒಂದು ಸೋಜಿಗ.[೬]

ಮೇಲೆ ಉದಾಹರಿಸಿರುವ ಶಾಸನ ದೊರೆತಿರುವುದು ಮದ್ದೂರು ತಾಲ್ಲೂಕಿನ ತಿಪ್ಪೂರಿನಲ್ಲಿ ಇದೊಂದು ಜೈನ ಕ್ಷೇತ್ರ ಕವಿ ಕಂದರ್ಪ ತನ್ನ ಕೊನೆಯ ದಿನಗಳನ್ನು ಇಲ್ಲಿ ಕಳೆದನೆಂದು ಕಾಣಸಿಗುತ್ತದೆ. ಶಾಸನ ಹೊಯ್ಸಳ ಇಮ್ಮಡಿ ವೀರಬಲ್ಲಾಳನ ಕಾಲದ್ದಾದರೂ ತೇದಿ ವಿವರ ಇಲ್ಲದಿರುವುದು ದುರದೃಷ್ಟಕರವಾದುದು.

ಚಿದಾನಂದ (ಮಲ್ಲಿಕಾರ್ಜುನ) (೧೨೩೦):-

ಬಸರಾಳಿನ ಮಲ್ಲಿಕಾರ್ಜುನ ದೇವಾಲಯದ ಪ್ರವೇಶದ್ವಾರದಲ್ಲಿಟ್ಟಿರುವ ಒಂದೇ ದೊಡ್ಡ ಶಾಸನಶಿಲೆಯಲ್ಲಿರುವ ಎರಡು ಶಾಸನಗಳನ್ನು ಮಲ್ಲಿಕಾರ್ಜುನನೆಂಬ ಕವಿಯು ಬರೆದಿದ್ದಾನೆ. ಈತನು ತನ್ನನ್ನು ಸತ್ಕವೀಶ್ವರನೆಂದು ಎರಡು ಶಾಸನಗಳನ್ನು ಮಲ್ಲಿಕಾರ್ಜುನನೆಂಬ ಕವಿಯು ಬರೆದಿದ್ದಾನೆ. ಈತನು ತನ್ನನ್ನು ಸತ್ಕವೀಶ್ವರನೆಂದು ಹೇಳಿಕೊಂಡಿದ್ದಾನೆ. ಇದರ ಜೊತೆಗೆ ಬಸರಾಳಿಗೆ ಸಮೀಪದಲ್ಲಿರುವ ಭೀಮನಹಳ್ಳಿ ಶಾಸನವನ್ನೂ ಕೂಡಾ ಈತನೇ ಬರೆದಿರುವಂತೆ ತೋರುತ್ತದೆ. ಕಾರಣ ಈ ಮೂರೂ ಶಾಸನಗಳಲ್ಲಿನ ಅನೇಕ ಪದ್ಯಗಳು ಪುನರಾವರ್ತನೆಯಾಗಿರುವುದರಿಂದ, ಈ ಶಾಸನಗಳ ಕವಿ ಚಿದಾನಂದ ಮಲ್ಲಿಕಾರ್ಜುನನೆಂದು ಹೇಳಬಹುದು.

ಕವಿಚರಿತ್ರೆಕಾರರು ಈತನು ಪರಮಪ್ರಕಾಶಯೋಗೀಶ್ವರನ ಮಗನೆಂದು ಹೇಳಿದ್ದಾರೆ. ಈ ಶಾಸನದ ಏಳು ವೃತ್ತಗಳನ್ನು ಇವರು ಸಂಗ್ರಹಿಸಿಕೊಟ್ಟಿದ್ದಾರೆ. ಸೂಕ್ತಿಸುಧಾರ್ಣದ ಗ್ರಂಥದ ಲೇಖಕ ಮಲ್ಲಿಕಾರ್ಜುನ ಅಥವಾ ಚಿದಾನಂದ ಮಲ್ಲಿಕಾರ್ಜುನನು ಜೈನಕವಿಯೆಂದೂ, ಈತನು ಕೇಶಿರಾಜನ ತಂದೆಯೆಂದೂ, ಜನ್ನನ ಸೋದರಿಯ ಗಂಡನೆಂದೂ 'ಯೋಗಿಪ್ರವರ ಚಿದಾನಂದ ಮಲ್ಲಿಕಾರ್ಜುನ ಎಂಬುದರಿಂದ ಈತನು ಮುನಿಶ್ರೇಷ್ಠನೆಂದು ತಿಳಿಯುತ್ತದೆಂದು' ಹೇಳಿದ್ದಾರೆ. ಕವಿಚರಿತೆಕಾರರು ಈ ಇಬ್ಬರೂ ಬೇರೆ ಬೇರೆ ಎಂದು ಹೇಳಿದ್ದಾರೆ. ಪರಮಪ್ರಕಾಶ ಯೋಗೀಶ್ವರತನಯ ಚಿದಾನಂದ

ಮತ್ತು ಮಲ್ಲಿಕಾರ್ಜುನ ಈ ಎರಡು ಒಬ್ಬನೇ ಕವಿಯ ಹೆಸರೆಂದು, ಈತನು 'ಸೂಕ್ತಿಸುಧಾರ್ಣವ' ಎಂಬ ಪ್ರಾಚೀನ ಕನ್ನಡ ಕಾವ್ಯ ಸಂಕಲನ ಗ್ರಂಥವನ್ನು, ಬಸರಾಳು ಶಾಸನಗಳನ್ನೂ ರಚಿಸಿದ್ದಾನೆಂದೂ, ಶಬ್ದಮಣಿದರ್ಪಣದ ಕರ್ತೃ ಕೇಶಿರಾಜನು ಈತನ ಮಗನೆಂದೂ ಟಿ.ವಿ. ವೆಂಕಟಾಚಲಶಾಸ್ತ್ರಿಗಳ ವಿವರವಾದ ವಿಶ್ಲೇಷಣೆಯಿಂದ ತಿಳಿದು ಬರುತ್ತದೆ. ಬಸರಾಳು ಶಾಸನವನ್ನೂ ಶಾಸ್ತ್ರಿಗಳು ವಿವರವಾಗಿ ವಿಶ್ಲೇಷಣೆ ಮಾಡಿದ್ದಾರೆ. ಈ ಮೂರೂ ಶಾಸನಗಳಲ್ಲಿ ಕಾವ್ಯಸೌಂದರ್ಯದಿಂದ ಕೂಡಿರುವ ಅನೇಕ ಕಂದಪದ್ಯಗಳು, ಖ್ಯಾತಕರ್ನಾಟಕದ ವೃತ್ತಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ರಾಜರು ಮತ್ತು ಅಧಿಕಾರಿಗಳ ವ್ಯಕ್ತಿತ್ವ ವರ್ಣನೆಯೇ ಪ್ರಧಾನವಾಗಿದ್ದು ಅನೇಕ ಐತಿಹಾಸಿಕ ಅಂಶಗಳಿಂದ ಕೂಡಿವೆ. ಬಸರಾಳು ದೇವಾಲಯದ ವರ್ಣನೆ ವಿಶಿಷ್ಟವಾಗಿ ಮೂಡಿಬಂದಿದೆ.

ಎರಡನೆಯ ಪ್ರಮುಖ ಕವಿ ಚಿದಾನಂದ ಈತ ಬಸರಾಳಿನ (ಮಂ,೩೦) ಶಾಸನವನ್ನು ರಚಿಸಿದ್ದಾನೆ. ಹೊಯ್ಸಳ ಇಮ್ಮಡಿ ವೀರ ನರಸಿಂಹನ ಕಾಲದ ಇದು ಕ್ರಿ.ಶ ೧೨೩೭ ಅಕ್ಟೋಬರ್ ೨೨ ರ ತೇದಿ ವಿವರ ಹೊಂದಿದೆ. ಶಾಸನದಲ್ಲಿ ತನ್ನ ಬಗೆಗಿನ ಮಾಹಿತಿ ನೀಡುವ ಒಂದು ಪದ್ಯವನ್ನು ಈ ಕವಿ ರಚಿಸಿದ್ದಾನೆ.

"ಧರೆ ಪೊಗಳೆ ಚಿದಾನನ್ದಂ ವಿರಚಿಸಿದಂ
ಸತ್ಕವೀಶ್ವರಂ ಶಾಸನವಂ (*)
ಪರಮ ಪ್ರಕಾಶಯೋಗಿಶ್ವರ ತನೆಯಂ
ಬ್ರಹ್ಮ ವಿದ್ಯೆ ಗಾಸ್ಪದದ ರೂಪಂ!! "

ಧರಯೇ ಹೊಗಳುತ್ತದೆ. ಸತ್ಕವಿ ಆದರಲ್ಲೂ ಹಿರಿಮೆ ಅಂತಹ ಚಿದಾನಂದ ಇದನ್ನ ರಚಿಸಿದ ತನ್ನ ತಂದೆಯ ಬಗ್ಗೆ ಸಹ ಬಹಳ ಸೂಚ್ಯವಾಗಿ ಹೇಳಿದ್ದಾನೆ **" ಪರಮ ಪ್ರಕಾಶ ಯೋಗೀಶ್ವರ ತನಯಂ:"** ಎಂದು ಅಂದರೆ ಆತ ಪೂರ್ಣ ಮಟ್ಟದ ಜ್ಞಾನಿ ಮತ್ತು ತನ್ಮೂಲಕ ಯೋಗಿಯಾಗಿ ಪ್ರಕಾಶಿಸಿದ್ದ. ಚಿದಾನಂದ ತನ್ನ ತಂದೆಯ ಹೆಸರನ್ನು ಸೂಚಿಸಿದ್ದರೆ ಒಳ್ಳೆಯದಿತ್ತು. ತಂದೆ ಮತ್ತು ಮಗನ ಈ ಜ್ಞಾನ 'ಪರಿಚಯ ಆದಾಗ ಪ್ರಾಯಶಃ ವಂಶಪಾರಂಪರ್ಯವಾಗಿ ಈ ಮನೆತನ ಅಧ್ಯಯನ ಶೀಲತೆಯನ್ನು ಮೈಗೂಡಿಸಿಕೊಂಡು, ಜ್ಞಾನ ಪ್ರಸಾರಕ್ಕೆ ಸಹಕರಿಸಿ ಅಪಾರ ಜನಮನ್ನಣೆಗೆ ಪಾತ್ರವಾಗಿದ್ದ ವಿಷಯ ತಿಳಿಯುತ್ತಿತ್ತು. ಇವರು ಯಾವ ಯಾವ ಶಾಸನಗಳನ್ನು ರಚಿಸಿದ್ದರು ಎಂಬ ಪ್ರಶ್ನೆ ಅಪ್ರಸ್ತುತ. ಕಾರಣ ಕಾವ್ಯ ರಚನಾ ಶಕ್ತಿ ಇದ್ದವರಿಗೆ ಶಾಸನ ರಚನೆ ಒಂದು ಸಾಮಾನ್ಯ ಕ್ರಿಯೆ. ಚಿದಾನಂದನ ಸಂತತಿಯನ್ನು ತೆಗೆದುಕೊಂಡರೆ "ಈತ ಸೂಕ್ತಿ

ಸುಧಾರ್ಣವ" ಎಂಬ ಕಾವ್ಯವನ್ನು ರಚಿಸಿದ್ದಾನೆ. ಪುಸ್ತಕದ ಒಂದು ಶಾಸನದಲ್ಲಿ ಮಾತ್ರ ತನ್ನ ಹೆಸರನ್ನು ದಾಖಲಿಸಿ ಕೊಂಡಿದ್ದಾನೆ. ಈ ಶಾಸನದಲ್ಲಿ ಕಂದ,ವೃತ್ತಗಳ ಬಳಕೆ ಅಪಾರವಾಗಿದೆ. ಅದರಲ್ಲೂ ಮುಖ್ಯವಾಗಿ ಮಹಾಸ್ರಗ್ದರೆ, ಶಾರ್ದೂಲವಿಕ್ರೀಡಿತ ಮತ್ತೇಭವಿಕ್ರೀಡಿತ ವೃತ್ತಗಳು ಬಹಳವಾಗಿ ಬಳಕೆಯಾಗಿವೆ.

ಒಂದು ಸೋಜಿಗವೇಂದರೆ ಬಸರಾಳಿನ ಈ ಶಾಸನವನ್ನು (ಮ,೩೦) ಕೆತ್ತಿರುವುದು ಶಾಸನ ಸಂಖ್ಯೆ ಮಂ,೨೯ ರ ಕಲ್ಲಿನ ಹಿಂಭಾಗದಲ್ಲಿ ಈ ಶಾಸನದ ಕಾಲ ಕ್ರಿ.ಶ ೧೨೩೪ ಎಪ್ರಿಲ್ ೩ ಎರಡೂ ಶಾಸನಗಳಿಗಿರುವ ಕಾಲವ್ಯತ್ಯಾಸ ಕೇವಲ ಮೂರು ವರ್ಷಗಳು, ಸಂ ೨೯ ಶಾಸನದಲ್ಲಿ ಹೊಯ್ಸಳ ಇಮ್ಮಡಿ ನರಸಿಂಹನ ವಂಶಾವಳಿಯ ಸುಂದರ ವರ್ಣನೆ ಇದೆ. ಹರಿಹರ ದಂಡನಾಯಕನು ಬಸರಾಳಿನಲ್ಲಿ ತನ್ನ ತಂದೆಯ ಹೆಸರಿನಲ್ಲಿ ಕಟ್ಟಿಸಿದ ಮಲ್ಲಿಕಾರ್ಜುನ ದೇವಾಲಯ ಅಲ್ಲಿಯ ಪೂಜಾಕಾರ್ಯಗಳಿಗಾಗಿ ಮಾಡಿದ ಭೂದಾನ ಮತ್ತು ತನ್ನ ತಾಯಿಯ ಹೆಸರಿನಲ್ಲಿ ಕಟ್ಟಿಸಿದ ಕೆರೆ ಬಗ್ಗೆ ಸುಂದರ ವಿವರಣೆ ಈ ಶಾಸನದಲ್ಲಿದೆ.

ಐವತ್ತು ಸಾಲುಗಳಲ್ಲಿರುವ ಈ ಕನ್ನಡ ಭಾಷೆಯ ಶಾಸನ ಒಂದು ಪುಟ್ಟ ಮತ್ತು ಸುಂದರಕಾವ್ಯದಂತಿದೆ. ಇಲ್ಲಿ ಬಳಕೆಯಾಗಿರುವ ಛಂದಸ್ಸು ಶ್ಲೋಕ, ಉತ್ಪಲಮಾಲೆ, ಮತ್ತೇಭವಿಕ್ರೀಡತ ವೃತ್ತ, ಮಹಾಸ್ರಗ್ಧರೆ, ಶಾರ್ದೂಲ ವಿಕ್ರೀಡಿತ ವೃತ್ತ, ಚಂಪಕಮಾಲೆ ಮತ್ತು ಅವುಗಳೆಡೆಯಲ್ಲಿ ಕಂದಗಳು, ಪುಟ್ಟ ಕಾವ್ಯಕ್ಕಿರಬೇಕಾದ ಎಲ್ಲ ಗೌರವಾಲಂಕಾರಗಳನ್ನು ಇದು ಹೊಂದಿದೆ. ಆದರೆ ಇದರಲ್ಲಿ ಕವಿಯ ಹೆಸರಿಲ್ಲ ಎರಡು ಶಾಸನಗಳ ಕಾವ್ಯ ಗುಣಮಟ್ಟವನ್ನು ಕಂಡಾಗ ಒಂದಕ್ಕೊಂದು ಪೂರಕವಾಗಿ ಸೌಮ್ಯ ಸ್ವರೂಪ ಹೊಂದಿರುವುದು ಕಾಣುತ್ತದೆ. ಎರಡನೆಯದನ್ನು ಚಿದಾನಂದನೇ ಬರೆದಿರುವಾಗ ಮೊದಲನೆಯದನ್ನು ಆತನೇ ಬರೆದಿರಬೇಕು.ತನ್ನ ಹೆಸರನ್ನು ಏಕೆ ದಾಖಲಿಸಲಿಲ್ಲ .ಅನ್ನುವುದು ಪ್ರಶ್ನೆಯಾದರೂ ಆವನ ಮಟ್ಟಿಗೆ ಅದು ಗೌಣವಾಗಿರಬೇಕು. ಒಟ್ಟಿನಲ್ಲಿ ಚಿದಾನಂದನ ಈ ಕಾರ್ಯದಿಂದ ಹರಿಹರ ದಂಡನಾಯಕನು ಚಿರಾಯುವಾಗಿದ್ದಾನೆ.[೭]

ಸಾಮಾನ್ಯರು ಇವನ ಬರಹಗಳಿಂದ ದೂರವಿದ್ದರು. ವಿದ್ವಾಂಸರು ಪ್ರಾಯಶಃ ಈ ಬಗ್ಗೆ ವಿಮರ್ಶೆ ಅನವಶ್ಯಕ ಎಂಬ ಅಭಿಪ್ರಾಯ ತಳೆದಿದ್ದರಬಹುದು. ಅಲ್ಲದೇ ಆಗಿನ ಕಾಲದಲ್ಲಿ (ಮತ್ತು ಯಾವಾಗಲೂ) ತಾಮ್ರಶಾಸನಗಳು ದಾನ ಪಡೆದವರ ಸ್ವತ್ತು ಅಗಿರುತ್ತಿತ್ತೇ ವಿನಃ ಶಿಲಾಶಾಸನದಂತೆ ಸಾರ್ವಜನಿಕರಿಗೆ ತೆರೆದಿಟ್ಟ ಪುಸ್ತಕವಾಗಿರಲಿಲ್ಲ. ಈತನಿಗೆ ಕನ್ನಡದ ಜ್ಞಾನ ಇದ್ದಿರಬಹುದು. ಆದರೆ ಆ ಭಾಷೆಯ ಈತನ ರಚನೆಗಳಾವುವೂ ಈವರೆಗೆ ಲಭ್ಯವಿಲ್ಲ.

ಎಲ್ಲ ಕಾಲದಲ್ಲೂ ಶಾಸನಗಳಲ್ಲಿರುವ ತಪ್ಪುಗಳಿಗೆ ರಚನೆಕಾರನೇ ಹೊಣೆಗಾರ ಎನ್ನುವುದು ಸರಿಯಾಗುವುದಿಲ್ಲ. ಆತ ರಚಿಸಿದ್ದನ್ನು ತಾಮ್ರದ ಹಲಗೆಗಳ ಮೇಲೆ ಬರೆದು ಕೊಟ್ಟಾತ ತಪ್ಪು ಮಾಡುವ ಸಾಧ್ಯತೆಗಳಿವೆ. ಅಂತೇಯೇ ಕೆತ್ತುವಾತನ ಅಜಾಗರೂಕತೆ ಮತ್ತು ಭಾಷಾ ಅಜ್ಞಾನಗಳೂ ತಪ್ಪುಗಳು ನುಸುಳುವುದಕ್ಕೆ ಕಾರಣಗಳಾಗುತ್ತವೆ. ಈ ಆಧಾರದಲ್ಲಿ ಸಭಾಪತಿಯ ಶಾಸನಗಳಲ್ಲಿರುವ ಕೆಲವಾದರೂ ತಪ್ಪುಗಳು ಅವನಿಂದ ಆದುದಲ್ಲವೆಂಬ ಊಹೆ ಮಾಡಬಹುದು.

ನಂತರ ನಮಗೆ ಪ್ರಮುಖವಾಗಿ ಕಾಣಸಿಗುವ ಶಾಸನಕವಿ ರಾಮಾಯಣಮ್ ತಿರುಮಲಾಚಾರ್ಯ. ಈತ ಸಹ ಸಂಸ್ಕೃತ ಕವಿ ಮತ್ತು ಶ್ರೀ ವೈಷ್ಣವ ಮತಸ್ಥ. ಈತ ರಚಿಸಿದ ಮೂರುಶಾಸನಗಳು ಲಭ್ಯ ಇವೆ. ಅವುಗಳೆಂದರೆ ತೊಣ್ಣೂರು (ಪಾ.ಪು.೯೯) ಮತ್ತು ಮೇಲುಕೋಟೆ (ಪಾಂ,ಪು, ೨೧೫ ಮತ್ತು ೨೧೬) ಇವುಗಳ ಕಾಲಕ್ರಮವಾಗಿ (೧) ಕ್ರಿ.ಶ.೧೭೨೨ ಡಿಸೆಂಬರ್ ೧೧,(೨) ಕ್ರಿ.ಶ.೧೭೨೪ ಡಿಸೆಂಬರ ೩೦, ಮತ್ತು (೩) ಕ್ರಿ.ಶ.೧೭೨೫ ಅಕ್ಟೋಬರ ೧೦, ಇವುಗಳಲ್ಲಿ ಉಪಯೋಗಿಸಿರುವ ಭಾಷೆ-ಸಂಸ್ಕೃತ ಮತ್ತು ಕನ್ನಡ ತೊಣ್ಣೂರು ತಾಮ್ರಪತ್ರದ ಲಿಪಿ, ಕನ್ನಡ, ಉಳಿದೆರೆಡರ ಲಿಪಿ ಯಾವುದೆಂದು ದಾಖಲಾಗಿಲ್ಲ (ಎಫಿಗ್ರಾಫಿಯ ಕರ್ನಾಟಕ ಆರಂಭಿಕ ಆವೃತ್ತಿಗಳಲ್ಲಿ ಇಂತಹ ಹಾಗೂ ಹಲವಾರು ರೀತಿಯ ತಪ್ಪುಗಳನ್ನು ಕಾಣುತ್ತೇವೆ, ಅವು ಮುಂದಿನ ಆವೃತ್ತಿಗಳಲ್ಲೂ ಫಲಿತವಾಗಿವೆ, ಅದರಲ್ಲಿ ಇದೂ ಒಂದು)

ನಮಗೆ ದೊರೆಯುವ ಶಾಸನಕವಿ ಸಭಾಪತಿ, ಈತ ವಿಜಯನಗರ ಕಾಲದ ಮೂರು ತಲೆಮಾರಿನ ರಾಜರುಗಳ ಕಾಲದಲ್ಲಿ ಶಾಸನ ಕವಿಯಾಗಿದ್ದ ಎಂದು ಕಾಣುತ್ತದೆ. ಅವರುಗಳೆಂದರೆ ಕೃಷ್ಣರಾಯ ಮಹಾರಾಯ, ಅಚ್ಯುತರಾಯ ಮತ್ತು ಸದಾಶಿವರಾಯ. ಇದಕ್ಕೆ ಉದಾಹರಣೆಯಾಗಿ ಇವರು ರಚಿಸಿದ ಮೂರು ತಾಮ್ರಶಾಸನಗಳು ಮಂಡ್ಯ ಜಿಲ್ಲೆಯಲ್ಲಿ ದೊರೆತಿವೆ ಅವುಗಳೆಂದರೆ ೧)ಕೃಷ್ಣರಾಯನ ದೊಡ್ಡಜಟಕ ತಾಮ್ರಶಾಸನ (ನಾಮಂ, ೧೩೪), ೨)ಅಚ್ಯುತರಾಯನ ಬ್ಯಾಲದಕೆರೆ ತಾಮ್ರಶಾಸನ(ಕೃಪೇ ೯೯) ಮತ್ತು ೩)ಸದಾಶಿವರಾಯನ ಹೊನೇನಹಳ್ಳಿ ತಾಮ್ರಶಾಸನ (ನಾ,ಮಂ, ೧೦೭) ಇವುಗಳ ಕಾಲ ಕ್ರಮವಾಗಿ (೧) ಕ್ರಿ.ಶ ೧೫೧೨ ಸೆಪ್ಟೆಂಬರ್ ೧೨, (೨) ಕ್ರಿ.ಶ ೧೫೩೨ ಫೆಬ್ರವರಿ ೪ ಮತ್ತು (೩) ಕ್ರಿ.ಶ ೧೫೪೫ ಜೂನ್ ೨೪, ಇದರಲ್ಲಿ ಮೊದಲ ಶಾಸನವನ್ನು ಕೆತ್ತಿದಾತ ಮಲ್ಲಣಾಚಾರ್ಯ ಉಳಿದೆರಡನ್ನು ಕೆತ್ತಿದವ ಮಲ್ಲಣಾಚಾರ್ಯನ ಮಗ ವೀರಣಾಚಾರ್ಯ.

ಸ್ವಲ್ಪ ಸೂಕ್ಷ್ಮವಾಗಿ ಅವಲೋಕಿಸಿದರೆ ತಿಳಿಯುತ್ತದೆ, ಪ್ರಾಯಶಃ ಸಭಾಪತಿಯ ಮನೆತನ ಪರಂಪರಾಗತವಾಗಿ ಶಾಸನ ರಚಿಸುವ ವೃತ್ತಿಯನ್ನು ಅವಲಂಬಿಸಿತ್ತು ಎನ್ನುವುದು, ಈ ಮನೆಯೊಂದಿಗೆ ನಿಕಟ ಸಂಪರ್ಕ ಹೊಂದಿದ್ದು, ಓಜರೆಂದರೆ ಮಲ್ಲಣರ ಮನೆ. ಇವರದೂ ಪರಂಪರಾಗತ ವೃತ್ತಿ ಎಂದು ಕಾಣುತ್ತದೆ.

ಸಭಾಪತಿ ಒಬ್ಬ ಸಂಸ್ಕೃತ ಕವಿ, ನಾಗರಿಲಿಪಿ ಮತ್ತು ಸಂಸ್ಕೃತ ಭಾಷೆಯಲ್ಲಿವೆ ಈತನ ರಚನೆಗಳು. ಈತ ಮೊದಲ ಶಾಸನದಲ್ಲಿ ಪ್ರಯೋಗಿಸಿರುವ ಛಂದಸ್ಸು, ಶ್ಲೋಕ, ಶಾರ್ದೂಲವಿಕ್ರೀಡಿತ ವೃತ್ತ, ಸ್ರಗ್ಧರೆಧೋದಕ, ಗೀತಿ ಮತ್ತು ಶಾಲಿನಿ ಇಲ್ಲಿ ಬಳಕೆಯಾಗಿರುವ ಹಲವು ಅಶುದ್ಧ ಅಪವಾದ ಮತ್ತು ಅಸಮಗ್ರಗಳಿವೆ. ಅಂತಯೇ ಸ್ರಗ್ಧರೆ ಮತ್ತು ಗೀತಿಗಳಲ್ಲೂ ಅಶುದ್ಧ ಪ್ರಯೋಗಗಳಿವೆ. ಎರಡು ತಾಮ್ರಶಾಸನಗಳನ್ನು ನೋಡಿದರೆ ಈತ ತನ್ನ ಪಾಂಡಿತ್ಯ ಪ್ರದರ್ಶನಕ್ಕೆ ಹೆಚ್ಚು ಮಹತ್ವ ನೀಡಿದ್ದ ಎಂದು ಕಾಣುತ್ತದೆ. ಆದರೆ ತಾನು ಮಾಡುತ್ತಿದ್ದ. ತಪ್ಪುಗಳು ಅಶುದ್ಧ ಛಂದಸ್ ಪ್ರಯೋಗ ಇತ್ಯಾದಿ ಯವುದೂ ಇವನ ಗಮನಕ್ಕೆ ಬಂದಂತೆ ಕಾಣುವುದಿಲ್ಲ. ತೊಣ್ಣೂರಿನ ನಾರಾಯಣಸ್ವಾಮಿ ದೇವಾಸ್ಥಾನದಲ್ಲಿರುವ ತಾಮ್ರಶಾಸನ ಬಹಳ ದೀರ್ಘವಾದುದು. ಹದಿನೈದು ತಾಮ್ರಪಟಗಳನ್ನು ಹೊಂದಿರುವ ಇದು ಪ್ರಥಮ ಪಟದ ಹಿಂಭಾಗ ಮತ್ತು ಉಳಿದ ಹದಿನಾಲ್ಕು ಪಟಗಳ ಎರಡು ಬದಿಗಳಲ್ಲಿ ಬರಹ ಹೊಂದಿದೆ. ಇದರ ಒಟ್ಟು ಬರಹ ೭೩೩ ಸಾಲುಗಳು, ಸಂಸ್ಕೃತ – ಕನ್ನಡ ಭಾಷೆಗಳನ್ನು ಮೇಳೈಸಿಕೊಂಡಿರುವ ಇದೊಂದು ಸೊಗಸಾದ ಕಾವ್ಯ.

ಶಾಸನದ ಮೂಲ ಉದ್ದೇಶ ಮೈಸೂರು ಅರಸರಾದ ಇಮ್ಮಡಿ ಕೃಷ್ಣರಾಜ ವೊಡೆಯರು ತೊಂಡನೂರು ಮತ್ತು ಅತ್ತಿಕುಪ್ಪೆ ಗ್ರಾಮಗಳನ್ನು ಅಗ್ರಹಾರಗಳನ್ನಾಗಿ ಮಾಡಿ ದಾನ ಮಾಡಿ ತನ್ಮೂಲಕ ಲಕ್ಷ್ಮೀನಾರಾಯಣ ಮತ್ತು ಯಾದವ ನಾರಾಯಣ ದೇವಾಲಯಗಳಲ್ಲಿ ಪೂಜಾದಿ ಕಾರ್ಯಗಳು ಅತಂಕವಿಲ್ಲದೆ ನಡೆಯುವಂತೆ ಮಾಡಿದ್ದನ್ನು ದಾಖಲಿಸುವುದು. ಕವಿ ಅರಸರ ವಂಶಾವಳಿಯನ್ನು ಚಿತ್ರಿಸಿದ್ದಾನೆ. ನಂತರ ಅಗ್ರಹಾರಗಳಲ್ಲಿ ೧೧೨ ವೃತ್ತಿಗಳ ವಿಂಗಡಣೆ, ವಿತರಣೆ ಇತ್ಯಾದಿಯಾಗಿ ಎಲ್ಲ ವಿವರಗಳನ್ನು ಕೊಟ್ಟಿದ್ದಾನೆ. ಕವಿ ತನ್ನ ಚಾತುರ್ಯ ಪ್ರದರ್ಶನವನ್ನು ಬಹಳ ಒಳ್ಳೆಯ ರೀತಿಯಲ್ಲೇ ಮಾಡಿದ್ದಾನೆ. ಇಲ್ಲಿ ಬಳಸಿರುವ ಛಂಧಸ್ಸಿನ ವೈವಿಧ್ಯತೆಯನ್ನು ಕಂಡರೆ ಈತ ಒಬ್ಬ ಉನ್ನತ ಮಟ್ಟದ ಗಮಕಿಯೂ ಆಗಿದ್ದು ಅದಕ್ಕಾಗಿ ವಿಶೇಷವಾಗಿ ಪುರಸ್ಕೃತನಾಗಿದ್ದ ಎಂದು ಕಾಣುತ್ತದೆ.

ಶಾಸನದಲ್ಲಿ ಬಳಕೆಯಾಗಿರುವ ಛಂಧಸ್ಸಿನ ವಿವರ ಇಂತಿದೆ ಶಾರ್ದೂಲವಿಕ್ರೀಡೀತ ವೃತ್ತ, ಮತ್ತೇಭವಿಕ್ರೀಡಿತ ವೃತ್ತ, ಮಾಲಿನಿ, ಗೀತಿ, ಅರ್ಯೆ, ಚಂಪಕಮಾಲೆ, ಉತ್ಪಲ್ತಮಾಲೆ, ವಸಂತ ತಿಲಕ, ದ್ರುತವಿಲಂಬಿತ, ಶಾಲಿನಿ, ಇಂದ್ರ ವಜ್ರ, ಉಪಜಾತಿ, ಅಖ್ಯಾಯಿಕೆ, ಲಯಾಗ್ರಾಹಿ, ಪರಚಾಮೇರ, ಖಿಲರಣಿ ಸ್ರಗ್ಧರೆ, ಭುಗಂಗ ಪ್ರಯಾತ, ಸಂಕೀರ್ಣ ಸ್ಕಂದಕ ಶ್ಲೋಕ ಇತ್ಯಾದಿ.

ಈ ಶಾಸನ ಬರೆದ ಎರಡು ವರ್ಷಗಳ ನಂತರ ಮೇಲುಕೋಟೆಯ ಕಂಚಿ ಮಠದ ತಾಮ್ರಶಾಸವನ್ನು ಕವಿ ತಿರುಮಲಾಚಾರ್ಯ ರಚಿಸಿದ. ಆದರೆ ಇದು ಕೇವಲ ಐದು ಹಲಗೆಗಳ

೨೦೨ ಸಾಲು ಬರಹ ಹೊಂದಿದ ಶಾಸನ. ಮೇಲಿನದಕ್ಕೆ ಹೋಲಿಸಿದಾಗ ಇದು ಒಂದು ಪುಟ್ಟ ಶಾಸನ. ಇದು ಕಂಚಿಯ ವರದರಾಜ ದೇವಾಲಯದಲ್ಲಿ ಪೂಜಾದಿ ಕಾರ್ಯಗಳನ್ನು ನಡೆಸುವುದಕ್ಕಾಗಿ ಮೈಸೂರು ಅರಸು ಮನೆತನವು ಈ ಹಿಂದೆ ಮಾಡಿದ್ದ ದಾನಗಳನ್ನು ಪುನರುಜ್ಜೀರಿಸಿ ಅವುಗಳನ್ನು ಇಮ್ಮಡಿ ಕೃಷ್ಣರಾಜ ವೊಡೆಯರು, ಮುಂದುವರೆಸುವ ಸಲುವಾಗಿ ೫೦೦ (ಐದುನೂರು) ಕಂಠಿರಾಯ ವರಹ ಮತ್ತು ೧೨ ಗ್ರಾಮಗಳನ್ನು ದಾನಮಾಡಿದ ವಿಚಾರವನ್ನು ದಾಖಲಿಸಿದೆ. ಇಲ್ಲಿಯೂ ಕವಿ ತನ್ನ ಚಾತುರ್ಯತೆಯನ್ನು ಛಂದಸ್ಸು ಪ್ರಯೋಗದಲ್ಲಿ ತೋರಿಸಿದ್ದಾನೆ. ಶಾರ್ದೂಲವಿಕ್ರೀಡಿತ ವೃತ್ತ, ಗೀತಿ, ಮಾಲಿನಿ, ಅರ್ಯ, ಉಪಜಾತಿ, ವಸಂತ ತಿಲಕ, ಸಂಕೀರ್ಣ, ಸ್ಕಂದಕ, ದ್ರುತವಿಲಂಬಿತ, ಇಂದ್ರ ವಜ್ರ ಸ್ರಗ್ಧರೆ, ಶ್ಲೋಕ ಇತ್ಯಾದಿಗಳು ಇಲ್ಲಿ ಪ್ರಯೋಗವಾಗಿವೆ.

ಇದಾದ ಹತ್ತು ತಿಂಗಳಲ್ಲಿ ಮೇಲುಕೋಟೆಯ ಇನ್ನೊಂದು ತಾಮ್ರಶಾಸನವನ್ನು (ಪಾಂಪು ೨೧೬) ಈತರ ರಚಿಸಿದ ಮೈಸೂರು ರಾಜ ಕೃಷ್ಣರಾಜ ಒಡೆಯರು ಆಳಘಯ ಸಿಂಘನ ಮಗನಾದ ಸಿಂಗ ಪೆರುಮಾಳನಿಗೆ ನಾಗಮಂಗಲದ ಸ್ಥಳದ ಹುಲ್ಲೇನಹಳ್ಳಿ ಗ್ರಾಮ ಮತ್ತು ಅದಕ್ಕೆ ಸೇರಿದ್ದ ನಾಲ್ಕು ಉಪಗ್ರಾಮಗಳನ್ನು ದಾನ ಮಾಡಿದ ವಿಚಾರವನ್ನು ಇದು ದಾಖಲಿಸಿದೆ.

ಮೇಲಿನೆರಡು ಶಾಸನಗಳಿಗಿಂತ ಇದು ಚಿಕ್ಕದು. ನಾಲ್ಕು ತಾಮ್ರಪಟಗಳಲ್ಲಿ ಒಟ್ಟು ೧೭೨ ಸಾಲು ಬರಹವನ್ನು ಇದು ಹೊಂದಿದೆ. ಶಾಸನ ಚಿಕ್ಕದಾದರೂ ಕಾವ್ಯದ ಘನತೆಗೇನೂ ಕುಂದಿಲ್ಲ ಇದರಲ್ಲಿನ ಛಂಧಸ್ಸು ವೈವಿಧ್ಯಮಯವಾಗೇ ಇದೆ. ಶಾರ್ದೂಲವಿಕ್ರೀಡಿತವೃತ್ತ, ಮತ್ತೇಭವಿಕ್ರೀಡಿತ ವೃತ್ತ, ಚಂಪಕಮಾಲೆ, ವಸಂತ, ತಿಲಕ, ಪಂಚಚಾಮೆ, ಶಿಖರಿಣಿ, ಸ್ರಗ್ಧರೆ, ಆರ್ಯೆ ಆರ್ಯಾಗೀತಿ, ಸಂಕೀರ್ಣ, ಸ್ಕಂದಕ, ಅಖ್ಯಾನ, ಉಪಜಾತಿ, ಗೀತಿ, ಮಾಲಿನಿ. ಶಾಲಿನಿ, ಇಂದ್ರವಜ್ರ, ದ್ರುತಿ, ವಿಲಂಕೆತ, ಶ್ಲೋಕ–ಕಂದ ಇತ್ಯಾದಿ ಪ್ರಯೋಗಗಳನ್ನು ಇಲ್ಲಿ ಕಾಣಬಹುದು. ಕಂದ ಪದ್ಯವೊಂದನ್ನುಳಿದು ಉಳಿದೆವು ಹಿಂದಿನ ಶಾಸನಗಳಲ್ಲಿ ಬಳಕೆಯಾಗಿವೆ. ಎಲ್ಲಾ ಕಡೆಗಳಲ್ಲೂ ಶ್ಲೋಕ ಮತ್ತು ಗೀತೆಗಳು ಹೇರಳವಾಗಿ ದೊರೆಯುವಾಗ ಇಲ್ಲಿ ಮಾತ್ರ ಕಂದ ಕಾಣುವುದು ಅಶ್ಚರ್ಯವೇ ಸರಿ.

ಇದರಿಂದ ವ್ಯಕ್ತವಾಗುವುದೇನೆಂದರೆ ಈತ ಕನ್ನಡ, ತೆಲುಗು ಮತ್ತು ಸಂಸ್ಕೃತ – ತ್ರಿಭಾಷಾ ಪಂಡಿತ, ಕವಿ ಮತ್ತು ಕಾವ್ಯರಚನೆಗಾರ: ವೃತ್ತಿನಿರತ, ಪಾರಾಯಣಕಾರ. ಪ್ರಾಯಶಃ ದೇವಾಲಯಗಳಲ್ಲಿ ರಾಮಾಯಣ ಮತ್ತು ಮಹಾಭಾರತ ಕಥಾನಕಗಳನ್ನು ವಾಚಿಸುತ್ತಿದ್ದವ, ಗಮಕ ಕಲೆ ಇವನಿಗೆ ಸಿದ್ದಿಸಿತ್ತು. ಪ್ರಾಯಶಃ ಗ್ರಂಥಗಳ ವೀಕ್ಷಣೆ ಇಲ್ಲದೆಯೇ ಪಾರಾಯಣ ಮಾಡುವ

ಮತ್ತು ಅರ್ಥವ್ಯಾಖ್ಯಾನ ಮಾಡುವ ಜ್ಞಾನ ಪಡೆದಿದ್ದ ತ್ರಿಭಾಷಾ ಜ್ಞಾನ ಈ ನಿಟ್ಟಿನಲ್ಲಿ ಇವನಿಗೆ ಸಹಕಾರಿಯಾಗಿತ್ತು. ಇವನ ಕಂಠವೂ ಸುಶ್ರಾವ್ಯವಾಗಿದ್ದಿರಬೇಕು. ಇವನ ವಾಕ್ಪಟುತ್ವ ಮತ್ತು ಜ್ಞಾಪಕ ಶಕ್ತಿಯಿಂದ ಜನ ಮಾರುಹೋಗಿ ರಾಮಾಯಣ, ಮಹಾಭಾರತಗಳ ಬಗ್ಗೆ ಕೇಳಬೇಕಾದರೆ ತಿರುಮಲೆ ಆಚಾರ್ಯರೇ ಬೇಕು, ಅನ್ಯಥಾ ಇಲ್ಲ ಎಂಬೊಂದು ಭಾವನೆ ಸುತ್ತಮುತ್ತೆಲ್ಲಾ ಹರಡಿದ್ದಿರಬಹುದು. ಈ ಕಾರಣದಿಂದ ತಿರುಮಲೆಯಾಚಾರ್ಯ **'ರಾಮಾಯಣಮ್ ತಿರುಮಲೆಯಾಚಾರ್ಯ'**ನಾಗಿ ಪ್ರಸಿದ್ಧಿ ಪಡೆದ.

ಜನ ಸಾಮಾನ್ಯರಿಗೆ ಇದರಿಂದಾದ ಪ್ರಯೋಜನ ಅಪಾರವಾದುದು ನಿರಕ್ಷರಕುಕ್ಷಿಗಳೂ ಸಹ ತಿರುಮಲೆಯಾಚಾರ್ಯರ ಭೋಧನೆಯಿಂದ ನಿಜದ ಅರ್ಥದಲ್ಲಿ ಜ್ಞಾನ ಪಡೆದು ತಮ್ಮ ಜೀವನವನ್ನು ಹಸನಗೊಳಿಸುವ ಮಾರ್ಗ ಕಂಡುಕೊಳ್ಳುವ ಶಕ್ತಿ ಪಡೆದರು. ಸಾಮಾಜಿಕ ಜ್ಞಾನ ವೃದ್ಧಿಯಾಯಿತು ಸಂಸ್ಕೃತ, ಕನ್ನಡ ಮತ್ತು ತೆಲುಗು ಈ ಮೂರು ಭಾಷೆಗಳಲ್ಲಿ **"ಕವಿತಾಗಂಧರ್ವ"ವೆಂದು** ಹೊಗಳಲ್ಪಟ್ಟಿರುವ ತಿರುಮಲೆಯಾಚಾರ್ಯ ನಿಜಕ್ಕೂ ಹದಿನೆಂಟನೆಯ ಶತಮಾನ ಪ್ರಥಮಾರ್ಧದ ಬಬ್ಬ ಮಹಾನ್‌ಕವಿ, ಗಮಿಕ ಅಂತಯೇ ಗಾಯಕ.

ಮೇಲುಕೋಟೆಯ ಇನ್ನೊಂದು ತಾಮ್ರಶಾಸನ (ಪಾಂ.ಪು. ೨೧೪)ವನ್ನು ಇಲ್ಲಿ ಉದಾಹರಿಸಬೇಕು, ಇದು ಕ್ರಿ.ಶ. ೧೬೪೭ ಏಪ್ರಿಲ್ ೨೭ಕ್ಕೆ ಸೇರಿದ್ದು ಮೈಸೂರು ಅರಸು ಕಂಠೀರವನರಸರಾಜ ವೊಡೆಯನು ಏಳು ಉಪಗ್ರಾಮಗಳ ಸಹಿತವಾದ ಸುಕ ದೊರೆ ಗ್ರಾಮವನ್ನು ಅಗ್ರಹಾರವನ್ನಾಗಿ ಮಾಡಿ ನಾನಾ ಗೋತ್ರದ ಶ್ರೀ ವೈಷ್ಣವ ಸಮುದಾಯಕ್ಕೆ ದಾನ ಮಾಡಿದ್ದನ್ನು ಈ ಶಾಸನ ದಾಖಲಿಸಿದೆ. ಈ ಶಾಸನವನ್ನು ರಚಿಸಿದಾತ ಕೌಶಿಕ ವಂಶದ ಶ್ರೀನಿವಾಸನ ಮಗ ನರಸಿಂಹ ಸೂರಿ. ಐದು ತಾಮ್ರದ ಹಲಗೆಗಳ ಮೇಲೆ ೧೬೭ ಸಾಲುಗಳ ಬರಹ ಇರುವ ಇದರ ಲಿಪಿ, ನಾಗರಿ, ಭಾಷೆ, ಸಂಸ್ಕೃತ ಇದರ ಮೇಲೆ ವಿಶ್ಲೇಷಿಸಿರುವ ಗಾನ ಗಂಧರ್ವ ರಾಮಾಯಣಮ್ ತಿರುಮಲೆಯಾಚಾರ್ಯನ ಶಾಸನಗಳಿಗಿಂತ ಪ್ರಾಚೀನವಾದುದು.

ಈ ದಾನ ಶಾಸನ ಒಂದು ಪುಟ್ಟ ಕಾವ್ಯವು ಹೌದು, ಇಲ್ಲಿ ಬಳಕೆಯಾಗಿರುವ ಛಂದಸ್ಸು- ಶ್ಲೋಕ, ಶಾರ್ದೂಲ ವಿಕ್ರೀಡಿತ ವೃತ್ತ ಉಪಜಾತಿ, ಮಾಲಿನಿ, ಸ್ರಗ್ಧರೆ, ವಸಂತ ತಿಲಕ, ಇಂದ್ರವಜ್ರ, ಸ್ವಾಗತ ಇತ್ಯಾದಿ, ರಾಜ ಕಂಠೀರವ ನರಸರಾಜನ ಅಣತಿ ಮೇರೆಗೆ ಇದನ್ನು ಬರೆದ ಎಂದು ಕವಿ ಹೇಳಿದ್ದಾನೆ. ಈ ಶಾಸನದ ಕರ್ತೃ ಸಹ ಕವಿ ಮತ್ತು ಗಮಕಿ. ಈ ಈರ್ವರ ವಂಶಗಳು ಮೈಸೂರು ಅರಸ ವಿಶೇಷ ಸಂಗೀತ ಕೃಪೆಗೆ ಪಾತ್ರರಾಗಿದ್ದಿರಬೇಕು, ಮೈಸೂರು ರಾಜಸ್ಥಾನವು ಪ್ರಾರಂಭದ ದಿನಗಳಿಂದಲೂ ಕಲೆ, ಸಾಹಿತ್ಯ, ಸಂಗಿತ ಇತ್ಯಾದಿಗಳಿಗೆ ವಿಶೇಷ ಪ್ರೋತ್ಸಾಹ ನೀಡಿ ದೂರ,

ದೂರದ ಊರು,ರಾಜ್ಯಗಳಿಂದ ಪಂಡಿತರು, ವಿದ್ವಾಂಸರು, ಕಲಾಕಾರರುಗಳನ್ನು ಆಕರ್ಷಿಸಿ ಅವರಿಗೆ ಆಶ್ರಯ ನೀಡಿತು.

ಮೇಲುಕೋಟೆ ಒಂದು ಶ್ರೀ ವೈಷ್ಣವ ಪುಣ್ಯ ಕ್ಷೇತ್ರ ವಿದ್ಯೆ ಮತ್ತು ಜ್ಞಾನ ಪ್ರಸರಣಕ್ಕೂ ಪ್ರಮುಖವಾಗಿದ್ದ ಸ್ಥಳ ಇದು ಇಲ್ಲಿ ದೊರೆಯುವ ಶಾಸನಗಳ ಸಂಖ್ಯೆ ೯೩ (ಪಾಂಪು ೧೨೪-೨೧೬) ಅದರೆ ಕಾವ್ಯಗುಣದ ಮಟ್ಟವನ್ನು ಕಾಪಾಡಿಕೊಂಡಿರುವುದು ಮೇಲಿನ ಮೂರು ತಾಮ್ರಶಾಸನಗಳು ಮಾತ್ರ ಉಳಿದವೆಲ್ಲವೂ ಕೇವಲ ವ್ಯವಹಾರಿಕ ರೀತಿಯವು. ಇದು ಮಾತ್ರ ಮೇಲುಕೋಟೆಯಂತಹ ಕ್ಷೇತ್ರಕ್ಕೇ ಶೋಭಿಸುವ ಸಂಖ್ಯೆಯಿಲ್ಲ.

ಶ್ರೀರಂಗಪಟ್ಟಣದ ಶಾಸನ (ಶ್ರೀ ಪ ೫) ದಲ್ಲಿ ಅಚ್ಯುತರಾಯನ ಆಳ್ವಿಕೆಯ ಉಲ್ಲೇಖವಿದೆ. ಅದರೆ ಶಾಸನದಲ್ಲಿ ಕೊಟ್ಟಿರುವ ತೇದಿಯ ವಿವರಗಳು ತಪ್ಪಾಗಿವೆ. ಶಾಸನದ ಕಾಲ ಶಕವರ್ಷ ೧೪೬೪ನೆಯ ರಕ್ತಾಕ್ತಿ ಸಂವತ್ಸರದ ಅಷಾಡ ಶುದ್ಧ ೧೨ ಎಂದಿದೆ. ರಕ್ತಾಕ್ಷಿ ಸಂವತ್ಸರಕ್ಕೆ ಸಮನಾದ ಶಕ ಸಂವತ್ಸರ ೧೪೮೬ ಆ ವೇಳೆಗೆ (ಕ್ರಿ.ಶ. ೧೫೬೪) ಅಚ್ಯುತರಾಯನ ಆಳ್ವಿಕೆಯ ಕೊನೆಯ ವರ್ಷವಾಗುತ್ತದೆ. ಅದು ಶುಭಕೃತ ಸಂವತ್ಸರವಾಗಿತ್ತು. ಶಾಸನ ಬಹುಶಃ ಆ ವರ್ಷದಲ್ಲಿ ಹುಟ್ಟಿರಬಹುದು. ಶಾಸನದಲ್ಲಿ ಕುತೂಹಲಕರವಾದ ಅಂಶವೊಂದನ್ನು ಪ್ರಸ್ತಾಪಿಸಲಾಗಿದೆ. ಶ್ರೀರಂಗಪಟ್ಟಣದ ಸೀಮೆಯನ್ನು ಅಮರಮಾಗಣಿಯಾಗಿ ರಾಮಾಭಟ್ಟಯ್ಯನಿಂದ ಅಪ್ಪಾಜಿಯ ಮಗನಾದ ಪೆದ್ದಿರಾಜನು ಪಡೆದಿರುತ್ತಾನೆ. "ಈ ಸೀಮೆಯ ದಳವಾಳಿ ಅಗ್ರಹಾರಗಳು, ಮಾನ್ಯಗ್ರಾಮಗಳು, ಕೆರೆ ಗ್ರಾಮಗಳಲ್ಲಿದ್ದ ಮಾನ್ಯಗಳು ಹಾಗೂ ಸತ್ರ, ದೇವಸ್ಥಾನಗಳಿಂದ ಸುಂಕವನ್ನು ಪಾರುಪತ್ಯ ಮಾಡುತ್ತಿದ್ದ ಕಾಮಪ್ಪ ನಾಯಕನು ವಸೂಲು ಮಾಡಿರುತ್ತಾನೆ" ಹೀಗೆ ವಸೂಲು ಮಾಡಿದ ಒಟ್ಟು ಹಣ ೩೦೦ ಗದ್ಯಾಣಗಳು, ಅದರೆ ಇದು ಈ ಪೂರ್ವದಲ್ಲಿ ಇರಲಿಲ್ಲ. ಆದ್ದರಿಂದ ಅನುಚಿತವಾಗಿ ಬಂದ ಈ ಹಣವನ್ನು ಪೆದ್ದಿರಾಜನು ಶ್ರೀರಂಗಪಟ್ಟಣದ ದೇವರಿಗೆ ರಾಯರಿಗೆ ರಾಮಾಭಟ್ಟಯ್ಯನಿಗೂ ಪುಣ್ಯವಾಗಬೇಕೆಂದು ದಾನಮಾಡಿದನು. ಅಲ್ಲದೆ ಇನ್ನು ಮುಂದೆ ಇಂತಹ ಸುಂಕವನ್ನು ಪ್ರಜೆಗಳು ಕೊಡಬಾರದೆಂದು ಮೊದಲಿದ್ದಂತೆ ಅಡಕೆಯನ್ನು ವರ್ತಕ (ಬಣಜಿಗ)ರಿಗೆ ಮಾರಿದ ಮಹಾಜನರ ೩ ಹಣವನ್ನು ವೊಳವಾರು ಸುಂಕವಾಗಿ ಕೊಡುವುದನ್ನು ಹೊರತುಪಡಿಸಿ ಬೇರಾವ ಸುಂಕವನ್ನು ನೀಡಬಾರದೆಂದು ನಿರೂಪ ನೀಡಿದನೆಂದು ಶಾಸನ ತಿಳಿಸುತ್ತದೆ. ಇದರಿಂದ ಅಡಕೆಯ ಸುಂಕವನ್ನು ಮಹಾಜನರು ತೆರುತ್ತಿದ್ದರೆಂದು ತಿಳಿದುಬರುತ್ತದೆ.

ಮೇಲುಕೋಟೆಯ ಶಾಸನಗಳು ಅಚ್ಯುತದೇವರಾಯನ ಕಾಲದವು ಪಾಂಪು ೧೩೮ನೆಯ ಶಾಸನದ ಕಾಲ ಕ್ರಿ.ಶ. ೧೫೩೪ರ ಫೆಬ್ರವರಿ ೮ ಹರಿಗಿಲ ಅಬ್ಬರಾಜನ ಮಗ ಪೆರಿರಾಜನು

ಮೇಲುಕೋಟೆಯ ದೇವಸ್ಥಾನಕ್ಕೆ ಸೇರಿದ ಕದಳಗೆರೆ ಗ್ರಾಮದ ಹೊಸಕೆರೆ ಮತ್ತು ಕೃಷ್ಣದೇವ ಒಡೆಯರ ಕೆರೆಗಳು ಖಿಲವಾಗಿರಲಾಗಿ ೧೫೦ ಗದ್ಯಾಣಗಳ ವೆಚ್ಚದಲ್ಲಿ ಅವುಗಳನ್ನು ಜೀರ್ಣೋದ್ಧಾರ ಮಾಡಿಸಿದನು. ಆದ್ದರಿಂದ ದೇವಸ್ಥಾನದ ಐವತ್ತಿಬ್ಬರು ಅಯ್ಯಗಳು ಆತನ ಹೆಸರಿನಲ್ಲಿ ದೇವರಿಗೆ ನೈವೇದ್ಯಕ್ಕೆ ಏರ್ಪಾಟನ್ನು ಮಾಡಿ ನೈವೇದ್ಯದ ನಾಲ್ಕರಲ್ಲಿ ಒಂದು ಭಾಗವನ್ನು ಪರಿರಾಜ ಅಥವಾ ಆತನು ಕಟ್ಟುಮಾಡಿಕೊಟ್ಟ ಬೇರೆ ಯಾರಿಗಾದರೂ ನೀಡುವುದಾಗಿ ತಿಳಿಸಿ ಶಾಸನ ಹಾಕಿಸಿದರು. ಒಂದು ವೇಳೆ ಅ ಕೆರೆಗಳ ಅನುಭೋಗ ತಪ್ಪಿದ್ದರೂ ಈ ಮರ್ಯಾದೆ ತಪ್ಪುವುದಿಲ್ಲ. ಎಂದು ಅಶ್ವಾಸನೆಯನ್ನು ಸಹ ನೀಡಿದರು.

ಅದೇ ವರ್ಷದಲ್ಲಿ ಬಹುಶಃ ಅದೇ ಹರಿಗಲ ಅಬ್ಬರಾಜನ ಇನ್ನೊಬ್ಬ ಮಗ ತಿರುಮಲರಾಜಯ್ಯನು ಅಲ್ಲಿನ ಐವತ್ತಿಬ್ಬರಿಗೆ ಗ್ರಾಮವೊಂದನ್ನು ದಾನ ಮಾಡಿದನೆಂದು ಪಾಂಪು ೧೨೭ರಲ್ಲಿ ಹೇಳಿದೆ. ಇತರ ವಿವರಗಳು ಲಭ್ಯವಾಗಿಲ್ಲ. ಇದೇ ತಿರುಮಲರಾಜನು ನಾಗಮಂಗಲದೊಳಗಣ ಸಟಿಪುರ; ಮಾಲನಹಳ್ಳಿ ಹಾಗೂ ಅದಕ್ಕೆ ಸಲ್ಲುವ ಕಾಲುವಳಿಗಳಾದ ನಿಲೆಮಂಗಲ, ಹೊಳವಳ್ಳಿ ಕರನಾರಹಳ್ಳಿಗಳನ್ನು ಮೇಲುಕೋಟೆಯ ಚಲಪಿಳೆರಾಯದೇವರಿಗೆ ಮರುವರ್ಷ (ಕ್ರಿ.ಶ.೧೫೩೫) ದಾನ ಮಾಡಿದನು. (ಪಾಂಪು ೧೨೫). ಈ ಗ್ರಾಮಗಳು ನಾಗಮಂಗಲ(ಸ್ಥಳ?)ಕ್ಕೆ ಸೇರಿದವುಗಳಾಗಿದ್ದ ಪೂರ್ವದಲ್ಲಿ ಅರಸನು ಅದನ್ನು ರಾಮಾಭಟ್ಟಯ್ಯನವರಿಗೆ ಪಾಲಿಸಿದ್ದೆನೆಂದೂ ತಿರುಮಲರಾಜನೂ ಈಗ ಅದನ್ನು ರಾಮಭಟ್ಟರ ಕೈಯಿಂದ ಬಿಡಿಸಿಕೊಂಡು ತಾನು ತನ್ನ ಧರ್ಮವಾಗಿ ಬಿಟ್ಟು ಕೊಟ್ಟನೆಂದೂ ಪ್ರಸ್ತುತ ಶಾಸನದಲ್ಲಿ ಹೇಳಿದೆ. ತಿರುಮಲರಾಜನನ್ನು ಸಿಂಧುಗೋವಿಂದ, ಸಿತಕರಗಂಡ, ಮಣಿನಾಗ ಪುರಾದೀಶ್ವರನೆಂದೆಲ್ಲಾ ವರ್ಣಿಸಿದೆ. ಈ ಬಿರುದನ್ನು ಬೇಲೂರಿನ ನಾಯಕರು ಧರಿಸಿದ್ದರು. ಆದರೆ ಈ ಪಾಳೆಯಗಾರ ಮನೆತನದ ಮೂಲಪುರುಷ ಕೃಷ್ಣಪ್ಪ ನಾಯಕ ಅವರೆಲ್ಲ 'ನಾಯಕ' ಎಂಬ ಉಪನಾಮವನ್ನು ಧರಿಸಿದ್ದರು. ಅದನ್ನು ಗಮನಿಸಿದ ಈ ತಿರುಮಲರಾಜ ಬಹುಶ ಈ ಮನೆತನಕ್ಕೆ ಸೇರಿರಲಾರ ಎನಿಸುತ್ತದೆ.[೮]

ನಾಗರಲಿಪಿ ಮತ್ತು ಸಂಸ್ಕೃತ ಭಾಷೆಯಲ್ಲಿರುವ ಮೂರು ಹಲಗೆಗಳ ಶಾಸನದಲ್ಲಿ ತುಳುವ ನರಸನಾಯಕನ ಮಗ ವೀರನರಸಿಂಹನು ಆಳುತ್ತಿರುವಾಗ ಸಪ್ತ ಸಾಗರ ಮಹಾದಾನದ ಸಂದರ್ಭದಲ್ಲಿ ಅರಸು ಅತ್ತಿಗೋತ್ರದ ನಂಜೆಹೆಬಾರುವನಿಗೆ ಸಿಂಧಘಟ್ಟದ ಸೀಮೆಯ ಕೈಗೊಂಡನಹಳ್ಳಿಗೆ ಪ್ರತಿನಾಮದ ವೀರನರಸಿಂಹ ಪುರವನ್ನು ದಾನ ಮಾಡಿದುದದಾಗಿ ಹೇಳಿದೆ. ಶಾಸನದ ಕಾಲ ಶಕವರ್ಷ ೧೩೮೩ನೇಯ ಚಿತ್ರ ಭಾನು ಸಂವತ್ಸರದ ಮಾಘ ಬಹುಳ ೧೪

ಭಾನುವಾರ ಶ್ರಾವಣ ನಕ್ಷತ್ರ, ಅದು ಈ ವಿವರಗಳು ಸರಿಹೊಂದುವುದಿಲ್ಲ, ಕ್ರಿ.ಶ.೧೪೬೨ನೇಯ ಜನವರಿ ೨೯ ಅಥವಾ ಕ್ರಿ.ಶ. ೧೪೬ನೆಯ ಫೆಬ್ರವರಿ ೧೭ಕ್ಕೆ ಮೇಲಿನ ವಿವರಗಳನ್ನು ಸರಿಹೊಂದಿಸಬಹುದಾದರೂ ಈ ವರ್ಷದಲ್ಲಿ ತುಳುವ ವೀರನರಸಿಂಹ ಆಳುತ್ತಲೇ ಇರಲಿಲ್ಲ. ಎಂಬುದು ಗಮನಾರ್ಹ ಆತನು ಸುಮಾರು ಕ್ರಿ.ಶ. ೧೫೦೫ ರಿಂದ ೧೫೦೯ ರವರೆಗೆ ಆಳಿದನು. ಆದ್ದರಿಂದ ಶಾಸನ ಆತನ ಆಳ್ವಿಕೆಯ ಸುಮಾರು ೪೨–೪೩ ವರ್ಷಗಳಿಗೂ ಹಿಂದೆಯೇ ಹುಟ್ಟಿದೆ ಎಂದಾಗುತ್ತದೆ. ದಾನ ನೀಡಿದ ಉಲ್ಲೇಖ ಬರುವ ಮೊದಲು ಒಮಲ್ಲೇ ಸ್ಕಂದನ ಬ್ರಾತೃವಾದ ಗಜಾನನನ ಶ್ಲೋಕ ಕಾಣಿಸಿಕೊಂಡಿರುವುದು ಇದರಲ್ಲಿನ ವೈಶಿಷ್ಟ್ಯ ಇದನ್ನು ಹೊರತು ಪಡಿಸಿದರೆ ಶಾಸನ ಕೂಟವಾದುದನ್ನೆಲು ಬೇರಾವ ಆಧಾರಗಳು ಇಲ್ಲ. ಬಹುಶಃ ಶಾಸನದಲ್ಲಿ ಕಾಲವನ್ನು ತಪ್ಪಾಗಿ ಉಲ್ಲೇಖಿಸಲಾಗಿದೆ. ಎಂದಷ್ಟೆ ನಾವು ಊಹಿಸಬಹುದು.

ಕ್ರಿ.ಶ. ೧೫೪೫ರ ಒಂದು ಶಾಸನದಲ್ಲಿ (ನಾಮಂ ೧೦೭) ಚಾರಿತ್ರಿಕ ಅಂಶಗಳು ಉಲ್ಲೇಖಿತವಾಗಿವೆ. ಪ್ರಸ್ತುತ ಶಾಸನವು ರಂಗ ಮತ್ತು ತಿಮ್ಮಾಂಬೆಯರ ಮಗ ಸದಾಶಿವರಾಯನ ಆಳ್ವಿಕೆಗೆ ಸಂಬಂಧಿಸಿದೆ ಅಚ್ಯುತರಾಯನ ನಂತರ ಆತನ ಮಗ ವೆಂಕಟದೇವರಾಯ ಅಲ್ಪಕಾಲ ಆಳಿ ದುರದೃಷ್ಟಾವಶಾತ್ ಮೃತ ಹೊಂದಿದ ಮೇಲೆ ಸದಾಶಿವರಾಯ ತನ್ನ ಸಹೋದರಿಯ ಪತಿ ರಾಮನಿಂದ ಪಟ್ಟಾಭಿಷಿಕ್ತನಾಗಿ ಸಿಂಹಾಸನವನ್ನೇರಿದ ಕುತೂಹಲಕರ ಸಂಗತಿ "ಸ್ವಭಗನೀ ಭತ್ರಾ ತತ್ರಾಯಿನಾರಾಮಕ್ಷ್ಮಾ ಪತಿನಾಪ್ಯ ತಿಲಕೈಕ್ಲ್ ಪ್ತಾಭಿಷೇಕೋತ್ಸವ" ಎಂಬ ಮಾತುಗಳಿಂದ ತಿಳಿದು ಬರುತ್ತದೆ. ಇಲ್ಲಿ ಉಕ್ತನಾಗಿರುವ 'ರಾಮ' ಕೃಷ್ಣದೇವರಾಯನ ಅಳಿಯನಾದ ಅಳಿಯರಾಮ ರಾಯನೇ ಆಗಿರುವುದಲ್ಲದೆ ಸದಾಶಿವರಾಯನ ಸೋದರಿ ಸಂಬಂಧಿ ತಿರುಮಲಾಂಬೆಯ ಪತಿಯೂ ಹೌದು ಹೀಗೆ ರಾಮರಾಯನಿಂದ ಸಿಂಹಾಸನವನ್ನೇರಿದ ಸದಾಶಿವ ಸುರಗಿರಿಯ ಶತ್ರುಗಳನ್ನು ನಿಗ್ರಹಿಸಿದ ವಿಷಯ "ಸುರಗಿಶೌಸಂಹೃತ್ಯ ವಿದ್ವೇಷಿಣಃ" ಎಂಬ ಮಾತುಗಳಲ್ಲಿ ವ್ಯಕ್ತವಾಗಿದೆ. ಮುಂದೆ ಇದೇ ಶಾಸನದಲ್ಲಿ ಹೊಯ್ಸಳನಾಡು ಪೆನುಗೊಂಡೆ ರಾಜ್ಯಕ್ಕೆ ಸೇರಿತ್ತೆಂದು ಹೇಳಿದೆ. ತುಳುವ ನರಸನಾಯಕನು ಕ್ರಿ.ಶ. ೧೫೦೩ರ ವೇಳೆಗೆ ಮರಣ ಹೊಂದಿದ್ದ ವಿಚಾರ ಸಂತೇಬಾಚಿಹಳ್ಳಿಯ (ಕೃಪೇ ೬೩) ಶಾಸನ ತಿಳಿಸಿದೆ.

ಪಾಂಪು ೧೩೨ನೆಯ ಶಾಸನದ ಕಾಲ ಶಕವರ್ಷ ೧೪೯೨ನೆಯ ಪ್ರಮೋದೂತ ಸಂವತ್ಸರದ ಚೈತ್ರ ಶುದ್ಧ ೨ಕ್ಕೆ ಸಮನಾದ ಕ್ರಿ.ಶ. ೧೫೭೦ನೆಯ ಮಾರ್ಚ್ ೮ ಈ ಶಾಸನದಲ್ಲಿ ಸದಾಶಿವದೇವ ಮಹಾರಾಯನು ಆಳುತ್ತಿದ್ದಂತೆ ಹೇಳಿದೆ. ಆದರೆ ಈ ವೇಳೆಗೆ ತಾಳೀಕೋಟೆ ಕದನ ಮುಗಿದಿದ್ದು ಸದಾಶಿವರಾಯರು ಪೆನುಗೊಂಡೆಗೆ ಓಡಿಹೋಗಿ ಅಲ್ಲಿ ಅರವೀಡು ಶ್ರೀರಂಗ ಮತ್ತು

ತಿರುಮಲರ ಅಧೀನದಲ್ಲಿದ್ದನು ಅದರೂ ಶಾಸನದಲ್ಲಿ ಈತನನ್ನು ಹೆಸರಿಸಿರುವುದು ಗಮನಾರ್ಹ ಸದಾಶಿವನು ಆತನಕ ಬದುಕಿದ್ದನೆಂದು ಊಹಿಸಬಹುದು. ಶಾಸನದಲ್ಲಿ ಪ್ರಸ್ತಾಪಿಸಿರುವ ವಿಷಯ ಸ್ವಾರಸ್ಯವಾಗಿದೆ. ಹಿಂದೆ ವೆಲುಗೋಡು ಮನೆತನದ ವಸಂತರಾಯನು ಮೈಲನಹಳ್ಳಿ ಮತ್ತು ಇನ್ನೊಂದು ಗ್ರಾಮವನ್ನು ದೇವಾಲಯದ ಶ್ರೀ ಭಂಡಾರದಿಂದ ಕ್ರಯಕ್ಕೆ ಪಡೆದು ಅದರಿಂದ ಬಂದ ಉತ್ಪನ್ನವನ್ನು ದೇವರಿಗೆ ದಾನವಾಗಿ ನೀಡಿದುದಲ್ಲದೆ ಆ ಧರ್ಮ ಸರಿಯಾಗಿ ನಡೆಯಲೆಂದು ಅನಂತಯ್ಯನೆಂಬ ಒಬ್ಬ ಧರ್ಮಕರ್ತೃನನ್ನು ಸಹ ನೇಮಿಸಿದನು. ಆದರೆ ಕೆಲಕಾಲಾನಂತರ ಆ ಧರ್ಮವು ಲುಪ್ತವಾದ ಕಾರಣ ವೆಲುಗೋಡ ಚಿತ್ರ ಕೊಂಡಮನಾಯಕನ ಮಗ ರಾಯಪನಾಯಕನು ಜಿಲೆಳೆ ರಂಗಪತಿರಾಜಯ್ಯನವರಿಗೆ ಹೇಳಿ ಪೂರ್ವದ ದಾನವನ್ನು ನವೀಕರಿಸಿದನು. ಈ ಬಾರಿ ಅನಂತಯ್ಯನ ಮೂಮ್ಮಗನಾದ ಆಳ್ವಾರು ಸಿಂಗಯ್ಯನು ಧರ್ಮಕರ್ತನಾಗಿ ನಿಯಮಿಸಲ್ಪಟ್ಟನು.

೧೬ನೆಯ ಶತಮಾನದ ಶ್ರೀರಂಗಪಟ್ಟಣ ೬ ನೆಯ ಶಾಸನದಲ್ಲಿ ಕೊಟ್ಟಿರುವ ತೇದಿಯ ವಿವರಗಳು (ಪ್ರಜೋತ್ಪತ್ತಿ ಸಂವತ್ಸರ ಕಾರ್ತೀಕ ಶು.೧) ತಾಳೆನೋಡಲು ಸಾಲದಾದರೂ ಅಂದಿನ ತಿಥಿಯು ಕ್ರಿ.ಶ. ೧೫೭೧ನೆಯ ವರ್ಷಕ್ಕೆ ಸರಿಹೊಂದುತ್ತದೆ. ಶಾಸನದಲ್ಲಿ ತಿರುಮಲದೇವ ಮಹಾರಾಯ ಮಗ ರಾಮರಾಜರಸನು ಗ್ರಾಮವೊಂದನ್ನು ಕಾಣಾಚಿಯಾಗಿ ದಾನ ಮಾಡಿದುದರ ಪ್ರಸ್ತಾಪವಿದೆ. ಶಾಸನ ಕಾಲದಂದು ಅಳಿಯ ರಾಮರಾಯನ ಸೋದರ ತಿರುಮಲನು ಆಳುತ್ತಿದ್ದರೂ ಆತನ ಮಗ ರಾಮ(ರಾಮರಾಜ)ನು ಮೈಸೂರಿನ ಸುತ್ತಲಿನ ಪ್ರದೇಶದ ಅಧಿಕಾರಿಯಾಗಿದ್ದನೆಂಬುದು ಇತರ ಆಧಾರಗಳಿಂದ ತಿಳಿದಿದೆಯಾಗಿ ಶಾಸನೋಕ್ತ ರಾಮರಾಜ ಈ ರಾಮನೇ ಆಗಿರಬೇಕು.

ವಿಷ್ಣುವರ್ಧನನ ಹದಿನೇಳು ಶಾಸನಗಳಲ್ಲಿ ಕೃಪೇ ೧೧೪ನೆಯ ಶಾಸನ ಕ್ರಿ.ಶ. ೧೧೧೪–೧೫ ನೆಯ ವರ್ಷದ ಈ ಶಾಸನದಲ್ಲಿ ಅರಸನನ್ನು ಮಹಾಮಂಡಲೇಶ್ವರ ಬಿಟ್ಟ ಹೊಯ್ಸಳದೇವನೆಂದು ೧೧೧೮ನೆಯ ವರ್ಷದ ಶಾಸನದಲ್ಲಿ (ಪಾಂಪು ೪೧) ಲಿಂಗಪಯ್ಯನೆಂಬಾತನು ಈತನ ಮಹಾಪ್ರಧಾನ ಮತ್ತು ದಂಡನಾಯಕ ನಾಗಿದ್ದನೆಂದಿದೆ. ಅಂದು ವಿಷ್ಣುವರ್ಧನನು ತಳಕಾಡಿನ ನೆಲೆವೀಡಿನಲ್ಲಿದ್ದ (ಕೃಷ್ಣರಾಜಪೇಟೆ ೭೨ನೆಯ ಶಾಸನದಿಂದ) ಮಹಾಸಾಮಂತ ಮಾಚಯನಾಯಕನು ಕ್ರಿ.ಶ. ೧೧೪೦ರಲ್ಲಿ ಮಾಳಿಗೆಯೂರನ್ನಾಳುತ್ತಿದ್ದನೆಂದು ತಿಳಿದಿದೆ. ಆದರೆ ಕ್ರಿ.ಶ. ೧೧೧೭ರಲ್ಲಿ ಅದೇ ಮಾಳಿಗೆಯೂರನ್ನು ಬಲ್ಲೆಯನಾಯಕನು ಆಳುತ್ತಿದ್ದ ಈತನು ಪಿರಿಯರಸಿ ಪಟ್ಟಮಹಾದೇವಿ ಶಾಂತಲದೇವಿಯರ ಮಯ್ದುನ ಎಂದು ಶಾಸನದಲ್ಲಿ

ಹೇಳಿದೆ. ಮಯ್ದುನ ಎಂಬ ಪದಕ್ಕೆ ಗಂಡನ ತಮ್ಮ ಎಂಬ ಸಾಮಾನ್ಯವಾಗಿ ಬಳಕೆಯಲ್ಲಿರುವ ಅರ್ಥವನ್ನು ಅನ್ವಯಿಸಿದರೆ ಬಲ್ಲೆಯನಾಯಕ ವಿಷ್ಣುವರ್ಧನನ ತಮ್ಮನೆಂದಾಗುತ್ತದೆ. ವಾಸ್ತವಿಕವಾಗಿ ವಿಷ್ಣುವರ್ಧನನಿಗೆ ಆ ಹೆಸರಿನ ತಮ್ಮನೇ ಇರಲಿಲ್ಲ. ತಂಗಿಯ ಗಂಡ ಎಂಬ ಇನ್ನೊಂದು ಅರ್ಥವೂ ಅಪದಕ್ಕೆ ಇದೆ. ಅದರಂತೆ ಅರ್ಥೈಸಿ ಬಲ್ಲೆಯನಾಯಕನು ಶಾಂತಲೆಯ ತಂಗಿಯ ಗಂಡನೆನ್ನಾಬೇಕಾಗುತ್ತದೆ. ಅದರೆ ಶಾಂತಲೆಗೆ ಸೋದರಿಯರಿದ್ದರೆಂಬುದು ತಿಳಿದಿಲ್ಲ.

ಕಿಕ್ಕೇರಿ–೧೨ ಎಂಬ ಸಣ್ಣ ವಿಭಾಗವನ್ನು ಚಿಣ್ಣ ಎಂಬ ಅಧಿಕಾರಿ ಆಳುತ್ತಿದ್ದ ಇದುವರೆಗೂ ಅಪ್ರಕಟಿತವಾಗಿದ್ದ ಹಿರಿಕಳಲೆಯ ಈ ಶಾಸನ (ಕೃಪೇ ೭೩)ದಲ್ಲಿ ಆತನ ಗುಣಗಳ ವರ್ಣನೆಯಿದೆ. ಶಾಸನದ ಕಲ್ಲಿನ ಕೆಳಭಾಗ ಒಡೆದಿದೆ. ಕಾಲನಿರ್ದೇಶವಿಲ್ಲ. ಪುರಾತತ್ವ ಇಲಾಖೆಯ ವಾರ್ಷಿಕ ವರದಿಯಲ್ಲಿ ಕಾಣಿಸಲಾಗಿರುವ ಹಿರಿಕಳಲೆಯ ಶಾಸನ ಇದೇ. ಅಲ್ಲಿ ಚಿಣ್ಣನು ಮಂಕಿಕೆ – ೧೨ ನ್ನು ಆಳುತ್ತಿದ್ದನೆಂದು ಹೇಳಿದ ಅದರೆ ಅದು ತಪ್ಪು ಕಿಕ್ಕೇರಿ–೧೨ ಎಂಬುದು ಸರಿಯಾದ ಶಾಸನ ಪಾಠ. ಈ ಶಾಸನದ ಕಲ್ಲಿನ ದಕ್ಷಿಣ ಮುಖದಲ್ಲಿರುವ ಮತ್ತೊಂದು ಶಾಸನ (ಕೃಪೇ ೭೪)ದ ಕಾಲ ೧೧೧೩ ಇದು ವಿಷ್ಣವರ್ಧನನ ಆಳ್ವಿಕೆಯ ಕಾಲಕ್ಕೆ ಸೇರಿದುದಾದ ಕಾರಣ ಮೇಲಿನ ಶಾಸನ ಸುಮಾರು ಅದೇ ಕಾಲಕ್ಕೆ ಸೇರಿದ್ದತೆಂದು ಊಹಿಸಬಹುದು. ಹಾಗಿದ್ದಲ್ಲಿ ಇದು ಪ್ರಸ್ತುತ ಸಂಪುಟದಲ್ಲಿನ ವಿಷ್ಣುವರ್ಧನನ ಶಾಸನಗಳಲ್ಲಿ ಮೊದಲನೆಯದಾಗುತ್ತದೆ.

ರಾಜಕೀಯ ಮಹತ್ವದ ದೃಷ್ಟಿಯಿಂದ ವಿಷ್ಣುವರ್ಧನನ ಶಾಸನಗಳು ಗಮನಾರ್ಹವಾದವು ತಳೆಕಾಡುಗೋಣ್ಡ ಮತ್ತು ನಂಗಲಯ ಗೆಲದ ಈತ ಗಂಗವಾಡಿ ಪ್ರದೇಶವನ್ನು ಸುಖದಿನರಸುಗೆಯುತ್ತ ಇದ್ದ. ಸಂಗತಿ ತಿಳಿದು ಬರುತ್ತದೆ. ಜೊತೆಗೆ ನೊಳಂಬವಾಡಿ ಬನವಾಸಿ ಹಲಸಿಗೆ ಮುಂತಾದ ಪ್ರದೇಶಗಳೂ ಈತನ ಆಡಳಿತಕ್ಕೊಳಪಟ್ಟಿದ್ದವು ಅಂಗವಾಡಿಯನ್ನು ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿದವನು ಹಿರಿಯ ದಂಡನಾಯಕ ಗಂಗರಾಜ ಸಾಮಂತ ಅದಿಯಮ ಚೋಳ ಕೊಟ್ಟ ನಾಡನ್ನು ಬಿಡದೇ ಕಾದಿ ತೆಗೆದುಕೊಳ್ಳೆಂದು ಹೇಳಲು ಗಂಗರಾಜ ಅವರು ಯುದ್ಧ ಸನ್ನದ್ದನಾಗಿ ಅದಿಯಮ ನರಸಿಂಹವರ್ಮ ಮುಂತಾದ ಚೋಳ ಸಾಮಂತರನ್ನು ಜಯಿಸಿದ ತಳಕಾಡಿನ ದಿಗ್ವಿಜಯ ಹೊಯ್ಸಳ ಇತಿಹಾಸದಲ್ಲಿ ಒಂದು ಮೈಲಿಗಲ್ಲು ಶಾಸನಗಳಲ್ಲಿ ಹಾಗೂ ನಾಣ್ಯಗಳಲ್ಲಿ ತಳಕಾಡು ಗೊಂಡ ಎಂಬ ಬಿರುದು ಕಂಡುಬರುತ್ತದೆ.

ವಿಷ್ಣುವರ್ಧನ ಮೊದಲು ಜೈನನಾಗಿದ್ದ, ಬಿಟ್ಟಿಗ ಎಂಬ ಹೆಸರಿದ್ದ ವ್ಯಕ್ತಿ ರಾಮಾನುಜಾಚಾರ್ಯರ ಪ್ರಭಾವದಿಂದ ವೈಷ್ಣವ ಮತ ಸ್ವೀಕರಿಸಿ ವಿಷ್ಣುವರ್ಧನನಾಗಿ ಪರಿವರ್ತಿತನಾದ ಎಂಬ ಪ್ರತೀತಿ ಇದೆ. ಅದರೆ ಇದಕ್ಕೆ ಆಧಾರವಿಲ್ಲ. **ಬಿಟ್ಟಿಗ** ಎಂಬ ಹೆಸರು ಈ

ಪ್ರತೀತಿಗೆ ಸ್ವಲ್ಪಮಟ್ಟಿಗೆ ಕಾರಣವಾಗಿದ್ದಿರಬಹುದೇನೋ ಆದರೆ ಬಿಟ್ಟಿಗ ಎಂಬುದು ವಿಷ್ಣು ಎಂಬುದರ ತದ್ಭವ ರೂಪ ವಿಷ್ಣುವರ್ಧನ ಹಾಗೂ ಬಿಟ್ಟಿಗ ಎಂಬ ನಾಮ ರೂಪಗಳೆರಡು ಶಾಸನಗಳಲ್ಲಿ ಸರಿಸಮನಾಗಿಯೇ ಕಂಡುಬರುತ್ತವೆ. ಈ ಕಾಲದಲ್ಲಿ ಮೇಲುಕೋಟೆ, ತೊಣ್ಣೂರು ಮುಂತಾದವು ವೈಷ್ಣವ ಕ್ಷೇತ್ರಗಳಾಗಿ ಹೆಸರುಗಳಿಸಿದ್ದು ದಿಟ.

ಚಾಳುಕ್ಯಾಭರಣನ ಪಾದಪದ್ಮೋಪ ಜೀವಿಯಾಗಿದ್ದರೂ ವಿಷ್ಣುವರ್ಧನ ಒಬ್ಬ ಸಮರ್ಥ ದೊರೆ ಹೊಯ್ಸಳ ರಾಜ್ಯವನ್ನು ವಿಸ್ತರಿಸಿದ ಧೀರ, ನಂಗಲಿ, ಕೊಂಗು, ಸಿಂಗಮಲೆ, ರಾಯಪುರ, ತಳಕಾಡು ರೊದ್ದ, ಬೆಂಗೆರಿ ಚಕ್ರಗೊಟ್ಟ ಉಚ್ಚಂಗಿ ವಿರಾಟನಪೊಳಲು ಅಥವಾ ಹಾನುಗಲ್ಲು, ಬಂಕಾಪುರ, ಬನವಸೆ, ಕೋಯತೊರು, ನೀಳಾದ್ರಿ, ಪಡಿಯಘಟ್ಟ, ಏಳುಮಲೆ ಅಥವಾ ತಿರುಪತಿ ಕಂಚಿ, ತುಳುದೇಶ, ರಾಜೇಂದ್ರಪುರ, ಕೋಳಾಲ, ಬಯಲ್ನಾಡು, ಹಲಿಸಿಗ, ಬಳುವಲ, ಹುಲಿಗೆರೆ, ಲೊಕ್ಕಿಗುಂಡಿ, ಮತ್ತು ಕೃಷ್ಣನದಿಯವರೆಗಿನ ಪ್ರದೇಶಗಳನ್ನು ವಿಷ್ಣುವರ್ಧನ ಜಯಿಸಿದ ಹಾಗೇಯೇ ಬಳ್ಳಾರಿ ವೆಲ್ಲೂರು, ಇರಂಗೋಳನ ಕೋಟೆ, ಕಾರುಕನ ಕೊಳ್ಳ, ಕುಮ್ಮಟ ಚಿಂಚಿಲೂರು, ರಾಚವೂರು, ಮುಂತಾದ ದುರ್ಗಗಳು ಕೂಡ ಈತನ ವಶವಾದವು. ಈತ ತನ್ನ ಅಣ್ಣನಾದ ಒಂದನೇಯ ಬಲ್ಲಾಳ ಬದುಕಿದ್ದಾಗಲೇ ಅರಸನಾಗಿ ರಾಜ್ಯವಾಳುತ್ತಿದ್ದನೆಂಬ ಸಂಗತಿ ಗಮನಿಸಬೇಕಾದುದು. ತಾಯಿ ತುಳುವಲದೇವಿ ಮತ್ತು ಅತ್ಯಾಗ್ರಜ ನ್ರಿಪಭೂಪ (ಬಲ್ಲು)ರ ಉಪಸ್ಥಿತಿಯಲ್ಲಿ ಅರಸ ದಾನ ನೀಡಿದ್ದುಂಟು.

ವಿಷ್ಣುವರ್ಧನನ ಅರಸಿಯರಲ್ಲಿ ನಾಲ್ವರನ್ನು ಮಂಡ್ಯ ಜಿಲ್ಲೆಯ ಶಾಸನಗಳು ಉಲ್ಲೇಖಿಸುತ್ತವೆ. ಪಿರಿಯರಸಿ ಪಟ್ಟಮಹಾದೇವಿ ಶಾಂತಲದೇವಿ ಪಟ್ಟ ಮಹಿಷಿ ಲಕ್ಷ್ಮಾದೇವಿ ಪಲ್ಲವ ರಾಜಪುತ್ರಿ ಒಮ್ಮಲದೇವಿ. ಹಾಗೂ ಕೊಂಗಾಳ್ವ ರಾಜಪುತ್ರಿ ಚಂದದೇವಿ ಈತನ ಅನೇಕ ಬಿರುದುಗಳನ್ನು ಶಾಸನಗಳು ಉಲ್ಲೇಖಿಸುತ್ತವೆ.

ಲಾಲನಕೆರೆಯ (ನಾಗಮಂಗಲ ತಾ.) ಈಶ್ವರ ಗುಡಿಯ ಒಳ ಮತ್ತು ಹೊರಗಿರುವ ಮೂರು ಶಾಸನಗಳು ಬಹಳ ದೀರ್ಘ ಲಿಪಿಶಾಸನಗಳಾಗಿವೆ. ಈ ಮೂರು ಸಹ ಹೊಯ್ಸಳ ಕಾಲಕ್ಕೆ ಸೇರಿದ್ದಾಗಿವೆ. ಸಾಹಿತ್ಯ ಬಹಳ ಲಾಲಿತ್ಯಪೂರ್ಣವಾಗಿವೆ. ಕಾರಣ ಇವನ್ನು ರಚಿಸಿದವರು ಕವಿಗಳಾಗಿದ್ದಾರೆ. ಗುಡಿಯ ಒಳಗಿರುವ ಕ್ರಿ.ಶ. ೧೧೩೮ರ ಶಾಸನವನ್ನು ಸತುಕವಿ ಸಾಂತಮಹತ ರಚಿಸಿದರೆ, ಗುಡಿಯ ಮುಂದಿರುವ ಕ್ರಿ.ಶ.೧೧೬೫ರ ಶಾಸನವನ್ನು ಲಾಕ್ಷಣಕವಿ ಶಾಂತಿನಾಥ ರಚಿಸಿದ್ದಾಗಿ ತಿಳಿದು ಬರುತ್ತದೆ. ಇನ್ನು ಗುಡಿಯ ಬಲಭಾಗದಲ್ಲಿರುವ ಕ್ರಿ.ಶ. ೧೨೧೮ರ ಶಾಸನದಲ್ಲಿ

ಲಿಪಿಕಾರ ಯಾರೆಂಬುದು ಅಸ್ಪಷ್ಟವಾಗಿದೆ. ಈ ಶಾಸನಗಳು ಸದ್ಯದ ಗುಡಿಯ ಈಶ್ವರ ಅಥವಾ ಮಾದೇಶ್ವರನ ಅಂಕಿತವಾದ ಮಧುಕೇಶ್ವರ, ಮಲ್ಲಿಕಾರ್ಜುನ ದೇವಾಲಯಗಳಿಗೆ ಸಂಬಂಧಪಟ್ಟ ದತ್ತಿ ಶಾಸನಗಳಾಗಿವೆ. ಎರಡು ಶಾಸನಗಳಲ್ಲಿ ಹೊಯ್ಸಳ ರಾಜರ ವಂಶಾವಳಿಯ ಸಾಹಸವನ್ನು ವರ್ಣಿಸಲಾಗಿದೆ. ಗುಡಿಯೊಳಗಿರುವ ಶಾಸನದಲ್ಲಿ ದಂಡನಾಯಕ ಏಚಿರಾಜನು ಲಾಲನಕೆರೆಯನ್ನು ಗೌಡಿಕೆಯ ಉಂಬಳಿಯಾಗಿ ಪಡೆದುದ್ದನ್ನು ತಿಳಿಸುತ್ತದೆ. ಈ ಶಾಸನಗಳಲ್ಲಿ ಲಾಲನಕೆರೆಯನ್ನು ನಾನಲಕೆರೆ ಎಂದು ಉಲ್ಲೇಖಿಸಿದೆ.

ಅದೇ ತಾಲ್ಲೂಕಿನಲ್ಲಿರುವ ದೊಡ್ಡ ಜಟಕ ಮತ್ತು ಚಿಕ್ಕ ಜಟಕ ಎಂಬ ಅಪರೂಪದ ಹೆಸರಿನ ಎರಡು ಗ್ರಾಮಗಳಿವೆ. ಕ್ರಿ.ಶ.೧೧೭೪ರ ಶಾಸನವೊಂದರಲ್ಲಿ ಜೆಟ್ಟಿಗ ಎಂಬ ಉಲ್ಲೇಖವಿದ್ದು ನಂತರದ ಶಾಸನಗಳಲ್ಲಿ ಹಿರೀಜಟ್ಟಿಗ ಮತ್ತು ಚಿಕ್ಕಜಟ್ಟಿಗ ಎಂಬ ಹೆಸರುಗಳಿವೆ. ಇವು ಕ್ರಮೇಣ ದೊಡ್ಡ ಜಟಕ ಮತ್ತು ಚಿಕ್ಕ ಜಟಕಗಳಾಗಿವೆ. ಇವು ಹಿಂದಿನ ಜಟ್ಟಿಗಳಾದ ಅಣ್ಣ, ತಮ್ಮಂದಿರ ಊರುಗಳು ಎನ್ನುತ್ತಾರೆ.[೧೦]

ನಾಗಮಂಗಲ ಪಟ್ಟಣದ ಕ್ರಿ.ಶ. ೧೧೩೪ರ ಶಾಸನದಲ್ಲಿ ಪಲ್ಲವ ವಂಶದ ಗೋವಿಂದರ ಮತ್ತು ಚಾವುಂಡಬ್ಬರಸಿಯ ಮಗಳಾದ ಹಾಗೂ ವಿಷ್ಣುವರ್ಧನನ ಪಟ್ಟದರಸಿಯಾದ ಒಮ್ಮಲದೇವಿಯನ್ನು ಉಲ್ಲೇಖಿಸುತ್ತದೆ. ಈಕೆ ಕಲ್ಕುಣಿ ನಾಡಿಗೆ ಸೇರಿದ ನಾಗಮಂಗಲದ ಶಂಕರನಾರಾಯಣ ದೇವಾಲಯವನ್ನು ಜೀರ್ಣೋದ್ಧಾರಗೊಳಿಸಿ ದೇವರ ಪೂಜೆ ನೈವೇದ್ಯಗಳಿಗೆ ಸೂರ್ಯ ಭರಣ ಪಂಡಿತ ಎಂಬುವವರಿಗೆ ಅರಿಕನಕಟ್ಟೆ ಗ್ರಾಮವನ್ನು ದಾನವಾಗಿ ಇತ್ತಳು ಎಂಬ ವಿಚಾರವನ್ನು ತಿಳಿಸುತ್ತದೆ. (ವಿಷ್ಣುವರ್ಧನನ ಮೊದಲ ಪಟ್ಟದರಸಿ ಶಾಂತಲೆಯು ಕ್ರಿ.ಶ. ೧೧೩೧ರಲ್ಲಿ ಮರಣದ ತರುವಾಯ ಅವಳ ಸ್ಥಾನಮಾನವು ಎರಡನೆಯ ಹೆಂಡತಿ ಒಮ್ಮಲದೇವಿಗೆ ದೊರೆಯಿತು. ಅಮೇಲೆ ವಿಷ್ಣುವರ್ಧನನು ಮೊದಲ ಹೆಂಡತಿ ಸತ್ತ ನಂತರ ಮತ್ತೊಬ್ಬಳನ್ನು ಮದುವೆಯಾದ ಎಂದು ಹೇಳಲಾಗಿದೆ. ಅದರೆ ಅವಳು ಸಾಯುವುದಕ್ಕೆ ಕಾರಣ ಇಲ್ಲ. ಎರಡನೆಯ ಹೆಂಡತಿಗೆ ಸ್ಥಾನಮಾನ ದೊರೆಯಿತು ಅಂದರೆ ಮೊದಲೇ ಇನ್ನೊಬ್ಬ ಹೆಂಡತಿ ಇದ್ದಳು ಎಂದು ತಿಳಿದು ಕೊಳ್ಳಬಹುದು.

ಒಂದನೇಯ ನರಸಿಂಹನ ತರುವಾರ ಪಟ್ಟಕ್ಕೆ ಬಂದವನು ಇಮ್ಮಡಿ ಬಲ್ಲಾಳ ಪಾಂಡ್ಯರಿಗೆ ಸೇರಿದ ಉಚ್ಚಂಗಿಯನ್ನು ಗದ್ದೆಬಾಚೆಯಹಳ್ಳಿಯ ಬಬ್ಬೆಯ ನಾಯಕನನ್ನು ಕರೆದು ಕಳಚುರಿ ವಂಶದ ಸಂಕಮದೇವನ ಕಟಕದಲ್ಲಿ ಕಾದುವುದೆಂದು ಬೆಸಸಿ: ಆತನಿಗೆ ಅರಸ ವೀಳೆಯವನ್ನು ನೀಡಿ ಬೀಳ್ಕೊಟ್ಟಾಗ ಅತ **'ಮಹಾಪ್ರಸಾದ'** ವೆಂದು ರಣರಂಗಕ್ಕೆ ತೆರಳಿ ಪರಾಕ್ರಮದಿಂದ ಹೋರಾಡಿ

ವೀರಸ್ವರ್ಗ ಪಡೆದ ಈತನ ಸಾಮಂತನೊಬ್ಬ ಹುಟ್ಟಗಾಳದಲ್ಲಿ ವಿಜಯಿಯಾದವನು ಬಲ್ಲಾಳ ಸುಮಾರು ೧೨೦೦ರ ಹೊತ್ತಿಗೆ ಹೆದ್ದೂರೆ ಎಂದರೆ ಕೃಷ್ಣಾನದಿಯವರೆಗಿನ ಪ್ರದೇಶವನ್ನು ಆಳುತ್ತಿದ್ದ ಪದ್ಮಲದೇವಿ ಈತನ ಪತ್ನಿ.

ನಾಮಂ ೧೩೦ ಮತ್ತು ೧೩೨ ಈ ಎರಡು ಕ್ರಿ.ಶ. ೧೧೭೯, ಮೇ ೧೩ಕ್ಕೆ ಸೇರಿದವು. ಮೊದಲನೆಯದನ್ನು ಈಶ್ವರ ದೇವಾಲಯದ ರಂಗಮಂಟಪದ ತೊಲೆಯ ಮೇಲೆ ಕೆತ್ತಿದ್ದು ಅದು ಹೆಮ್ಮಣ ಮತ್ತು ತಿರುವವ್ವೆಯರ ಮಗ ಮಹಾಸಾಮಂತ ಧುರ್ಮಣ ಅಥವಾ ದುಮ್ಮೆಯ ನಾಯಕನು ಆ ದೇವಾಲಯವನ್ನು ಕಟ್ಟಿಸಿ ದೇವರ ಪೂಜೆಮಾಡುವ ಬಾಚಜೀಯನಿಗೂ ಭೋಗದವರಿಗೂ ದೇವರಪೂಜೆ, ನೈವೇದ್ಯಗಳಿಗೂ ದತ್ತಿ ಬಿಟ್ಟುದನ್ನು ತಿಳಿಸುತ್ತದೆ. ಎರಡನೆಯ ಶಾಸನವು ಇಮ್ಮಡಿ ವೀರಬಲ್ಲಾಳನ ಮತ್ತು ದಾನಿಯ ವಂಶಾವಳಿಗಳನ್ನು ಕೊಡುತ್ತದೆ. ದಾನಿಯ ವಂಶಾವಳಿ ಇಂತಿದೆ[೧೧].

ಮಾರಸಿಂಗಾವುಂಡ

|

ಪುರುಷ ಮಾಣಿಕ್ಯ ಸೆಟ್ಟಿ

|

ಮಹಾಸಾಮಂತ ಹುಳ್ಳೆಯ ನಾಯಕ

|

ಮಹಾಸಾಮಂತ ಹೆಮ್ಮೆಯ ನಾಯಕ

|

ಮಹಾಸಾಮಂತ ದುರ್ಮಣ ಅಥವಾ ದುಮ್ಮಯ ನಾಯಕ

ಈ ವಂಶದ ಮೊದಲ ವ್ಯಕ್ತಿಗೆ ರಾಜಾಧಿರಾಜನೆಂಬ ಬಿರುದಿದ್ದು ಅದನು ತಳಕಾಡನ್ನಾಳುತಿದ್ದಂತೆ ತಿಳಿದು ಬರುತ್ತದೆ. ಆತನ ಮಗ ಪುರುಷ ಮಾಣಿಕ್ಯ ಸೆಟ್ಟಿಯನ್ನು ತಳಕಾಡ ಪಟ್ಟಣ ಸಮುದ್ಧರಣನೆಂದೆ ವರ್ಣಿಸಿದೆ. ಮೂರನೆಯವನಾದ ಹುಳ್ಳೆಯ ನಾಯಕನನ್ನು ಮಹಾಸಾಮಂತನ ಸ್ಥಾನಕ್ಕೇರಿಸಿದಂತೆ ಕಂಡುಬರುತ್ತದೆ. ಈ ಸ್ಥಾನವನ್ನು ಮುಂದಿನವರು ಉಳಿಸಿಕೊಂಡಿದ್ದಾರೆ. ಇವರಲ್ಲಿ ಹೆಮ್ಮೆಯ ನಾಯಕನು ಜೈನನಾಗಿದ್ದನೆಂಬುದು

ಜಿನಸಮಯಸಮುದ್ಧರಣ, ಪಾರಿಷದೇವಪಾದಾರಾಧಕ ಎಂಬ ಬಿರುದುಗಳಿಂದ ಸ್ಪಷ್ಟವಾಗುತ್ತದೆ. ಅವನಿಗೆ ಒಡಗೆರೆಮಲ್ಲ ಎಂಬ ಬಿರುದೂ ಇದೆ, ದಾನಿ ದುಮ್ಮೆಯ ತಂದೆಯ ಹೆಸರಿನಲ್ಲಿ ಹೆಮ್ಮೇಶ್ವರವೆಂಬ ಶಿವಾಲಯವನ್ನು ಕಟ್ಟಿಸಿದುದರಿಂದ ಆತನು ಶೈವಧರ್ಮೀಯನಾಗಿದ್ದನೆಂಬುದು ಸ್ಪಷ್ಟ ಆತನನ್ನು ಕನ್ನೆಗೆರೆ ಮಲ್ಲ ಎಂದು ವರ್ಣಿಸಿದೆ.

ಜಿಲ್ಲೆಯ ಹಲವೆಡೆಗಳಲ್ಲಿ ದೊರೆತಿರುವ ಶಾಸನಗಳು, ಇದೆತೆರನಾದ ಕಾವ್ಯಗುಣ ಹೊಂದಿರುವುದನ್ನು ಕಾಣುತ್ತೇವೆ. ಆದರೆ ಅಲ್ಲಿ ರಚಿಸಿದ ಕವಿಯಾಗಲೀ ಕೆತ್ತಿದ ಓಜರ ಹೆಸರಾಗಲಿ ಉಕ್ತವಾಗಿಲ್ಲ ಈಪರಿಸ್ಥಿತಿಯನ್ನು ಸಾಮಾನ್ಯವಾಗಿ ಎಲ್ಲ ಜಿಲ್ಲೆಗಳಲ್ಲೂ ಕಾಣುತ್ತೇವೆ, ಇದೊಂದು ದೊಡ್ಡ ಕೊರತೆ.

ಈ ಅಧ್ಯಯನದಿಂದ ಒಂದಂಶವನ್ನು ನಾವು ಮುಖ್ಯವಾಗಿ ಗಮನಿಸಬಹುದು. ಅಂದರೆ ಸಾಮಾನ್ಯ ಜ್ಞಾನ ಮತ್ತು ವಿದ್ಯೆ ಅಂದಿನ ಸಮಾಜದಲ್ಲಿ ಎಷ್ಟಿತ್ತು ಮತ್ತು ಅದು ಯಾವ ರೀತಿಯಲ್ಲಿ ಸಾಮಾಜಿಕ ಚಟುವಟಿಕೆಯ ಮೇಲೆ ಪ್ರಭಾವ ಬೀರಿತು ಎನ್ನುವುದು. ಇದಕ್ಕೆ ಪೂರಕವಾಗಿ ಅವಲೋಕಿಸಬೇಕಾದ ಇನ್ನೊಂದು ವಿಷಯವೆಂದರೆ ವಿದ್ಯಾ ಪ್ರಸಾರಕ್ಕೆ ಆಗಿದಾಗ್ಗೆ ಆಡಳಿತ ಕೈಗೊಂಡ ಕ್ರಮಗಳು ಸಾಮಾನ್ಯವಾಗಿ ಹಿಂದಿನ ಕಾಲದಲ್ಲಿ ಇದಕ್ಕಾಗಿ ಅಗ್ರಹಾರಗಳ ನಿರ್ಮಾಣ ದೇವಾಲಯಗಳಲ್ಲಿ ಅನುಕೂಲ ಕಲ್ಪಿಸುವುದು ಇಲ್ಲವೆ ಊರಿನ ವಿದ್ಯಾವಂತ ಗೃಹಸ್ಥನೋರ್ವನಿಗೆ ಉಪಾಧ್ಯಾಯ ಜವಾಬ್ದಾರಿಯನ್ನು ವಹಿಸಿ ಅವರಿಗೆ ಬೇಕಾದ ಸೌಲಭ್ಯಗಳನ್ನು ವೊದಗಿಸುವುದು. ಅನುಸರಿಸುವ ಕ್ರಮಗಳಾಗಿದ್ದವು. ಬೇರೆ ಬೇರೆ ಕಡೆಗಳಲ್ಲಿ ಇಂತಹ ಕಾರ್ಯ ನೆಡೆದಿರುವುದಕ್ಕೆ ಉದಾಹರಣೆಯಾಗಿ ಶಾಸನ ಮಾಹಿತಿ ಇದೆ. ವ್ಯವಸ್ಥೆಯನ್ನು ಕಾಣುತ್ತೇವೆಯೇ ಹೊರತು ವಿದ್ಯದಾನದ ವಿಚಾರ ಪ್ರಕಟಗೊಂಡಿಲ್ಲ. ಅಂದಮೇಲೆ ಕೇವಲ ವೈಯುಕ್ತಿಕ ನೆಲೆಯಲ್ಲಿ ವಿದ್ಯಾ ವ್ಯವಸ್ಥೆ ಇದ್ದೀರಬೇಕು. ಸಾವಿರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಶಾಸನಗಳು ದೊರೆತಿರುವ ಕಾರಣ ಸ್ವಲ್ಪ ಮಟ್ಟಿನ ಅಕ್ಷರ ಜ್ಞಾನ ಇದ್ದ ಜನ ಅಲ್ಲಿ ಇದ್ದರು ಎಂದು ಹೇಳಬಹುದು, ಇದು ಎಲ್ಲ ಜಾತಿ ವರ್ಗಗಳಿಗೂ ಅನ್ವಯವಾಗಿತ್ತು. ಇಲ್ಲಿ ಎಲ್ಲಾ ಜಾತಿಯ ವರ್ಗಗಳಿಗೂ ಅನ್ವಯವಾಗಿತ್ತು ಎಂಬುದನ್ನು ಒಪ್ಪಿಕೊಳ್ಳಲಾಗುವುದಿಲ್ಲ. ಏಕೆಂದರೆ ಕೀಳುಜಾತಿಯಲ್ಲಿ ಇದ್ದವರಿಗೆ ಅವರಿಗೆ ಊಟ, ಬಟ್ಟೆ, ವಸತಿ ಇವುಗಳನ್ನು ಪಡೆದುಕೊಳ್ಳವಷ್ಟು ಯೋಗ್ಯರಾಗಿರಲಿಲ್ಲ ಅಂದ ಮೇಲೆ ಇನ್ನು ಅಕ್ಷರದ ಜ್ಞಾನ ಅವರಿಗೆ ಎಲ್ಲಿಂದ ಬರಬೇಕು ಹಾಗೆ ಕಲಿಯಬೇಕು ಎಂದುಕೊಂಡಿದ್ದರು ಅದು ಸಾಧ್ಯವಾಗುತ್ತಿರಲಿಲ್ಲ.

ಪ್ರಾಚೀನ ಕಾಲದಲ್ಲಿ ಸಾಮಾನ್ಯವಾಗಿ ರಾಜ್ಯಾಸ್ಥಾನಗಳಲ್ಲಿ ಶಾಸನಕವಿಗಳೂ ಇರುತ್ತಿದ್ದರು. ಇವರು ಆಯಾ ರಾಜವಂಶಗಳ ಶಾಸನಗಳಿಗೆ ತಮ್ಮ ಕಾವ್ಯ ಪ್ರಯೋಗ ಪರಿಣತಿಯಿಂದ ಒಂದು ಚೌಕಟ್ಟನ್ನು ನಿರ್ಮಿಸಿ ಅವುಗಳಿಗೆ ಗೌರವ ಮತ್ತು ಗಾಂಭೀರ್ಯತೆಗಳನ್ನು ತಂದುಕೊಟ್ಟರು. ಆದರೆ ಇದರಲ್ಲಿ ತಾವು ಆಧರಿಸಿದ್ದ ರಾಜ ಇಲ್ಲವೇ ಅಧಿಕಾರಿ ವಂಶದ ವಿವರ ಇರುತ್ತಿತ್ತೇ ವಿನಃ ಸೇನಭೋವರ ತಖ್ತೆ ವಿವರ ಇರುತ್ತಿರಲಿಲ್ಲ. ಹಾಗಾಗಿ ರಚನಾ ಕೌಶಲ್ಯವೇನೇ ಇದ್ದರೂ ದಾನದ ಭೂ ಇತ್ಯಾದಿ ವಿವರಕ್ಕಾಗಿ ಸೇನಭೋವರನ್ನು ಆಶ್ರಯಸಿಬೇಕಿತ್ತು.

ಹೀಗೆ ಸಿದ್ದಗೊಂಡ ಶಾಸನವನ್ನು ಕಲ್ಲು ಇಲ್ಲವೇ ತಾಮ್ರದ ಹಲಗೆಯ ಮೇಲೆ ಬರೆವಾತ ಬೇರೆಯೇ ಇರುತ್ತಿದ್ದ ಈತ ತನ್ನ ಸುಂದರವಾದ ಬರಹದಿಂದ ಶಾಸನಕ್ಕೆ ಮೆರುಗು ನೀಡುತ್ತಿದ್ದ ಬರವಣಿಗೆಯ ಸೌಂದರ್ಯವನ್ನು ಇಲ್ಲಿ ಸುಲಭವಾಗಿ ಗುರುತಿಸಬಹುದು. ಶಾಸನ ವಿವರ ಕೆಲವೊಮ್ಮೆ ತಪ್ಪಾಗಿದ್ದರೂ ಲಿಪಿ ಮೋಹಕವಾಗಿರುವುದನ್ನು ಶಾಸನಗಳಲ್ಲಿ ಕಾಣಬಹುದು. ಮಂಡ್ಯ ಜಿಲ್ಲೆಯ ಹಲವು ಶಾಸನಗಳು ಅದರಲ್ಲೂ ಪ್ರಮುಖವಾಗಿ ಹೊಯ್ಸಳರ ಕಾಲದವುಗಳನ್ನು ಈ ವರ್ಗಕ್ಕೆ ಸೇರಿಸಬಹುದು. ನುರಿತ ಲಿಪಿಕಾರರಿಲ್ಲದಿದ್ದಾಗ ಸೇನಭೋವ ಅಥವಾ ಇತರರು ಲಿಪಿಕರಿಸಿದ ಶಾಸನಗಳು ಗುಣಮಟ್ಟದಲ್ಲಿ ಸಾಮಾನ್ಯವಾಗಿರುವುದನ್ನು ಕಾಣಬಹುದು.

ಮೂರನೆಯ ಮತ್ತು ಕೊನೆಯ ಹಂತದಲ್ಲಿ ಅಕ್ಷರವನ್ನು ಕೆತ್ತುವವನ ಪಾತ್ರ ಬರೆದು ಕೊಟ್ಟದ್ದನ್ನು ಪ್ರಾಮಾಣೀಕವಾಗಿ ಕಂಡಿರಿಸುವುದು. ಅವನ ಕರ್ತವ್ಯ ಈತ ಪರಿಣತ ಶಿಲ್ಪಿಯಾಗಿದ್ದರೆ ಮತ್ತು ಅಕ್ಷರ ಜ್ಞಾನವನ್ನು ಹೊಂದಿದವನಾಗಿದ್ದರೆ ಶಾಸನ ಪರಿಪೂರ್ಣವಾಗಿ ಕೆತ್ತಲ್ಪಡುತ್ತಿತ್ತು. ಅದಲ್ಲದೆ ಸಾಮಾನ್ಯ ಮಟ್ಟದವನಾದರೆ ಅಕ್ಷರಗಳು ತಪ್ಪುವುದು ಬದಲಾಗುವುದು ಇಲ್ಲವೆ ಬಿಟ್ಟೇ ಹೋಗುವುದು ಸಾಮಾನ್ಯ ದೃಶ್ಯ ಅದರ ಸೂಕ್ಷ್ಮಮತಿ ಶಾಸನತಜ್ಞರಿಗೆ ಇವುಗಳ ಸ್ಪಷ್ಟ ಅರಿವು ಆಗುತ್ತದೆ. ಈ ಸಂದರ್ಭದಲ್ಲಿ ಅವುಗಳ ಸರಿಯಾದ ಪಾಠ ಹೇಗಿದ್ದರಬಹುದೆಂಬುದರ ಪರಿಚಯ ಮಾಡಿಕೊಡುತ್ತಾರೆ. ಇಲ್ಲದಿದ್ದಲ್ಲಿ ಶಾಸನಗಳ ಅರ್ಥದ ಜಾಡು ಬದಲಾಗುತ್ತಾ ಹೋಗುತ್ತದೆ.

ಭಾಷೆ, ಸಾಹಿತ್ಯ, ಸಾಂಸ್ಕೃತಿಕ ಚರಿತ್ರೆಗಳ ಅರಿವು ಮತ್ತು ಅಧ್ಯಯನಕ್ಕೆ ಅಮೂಲ್ಯ ಆಧಾರಗಳಾಗಬಲ್ಲಂತಹ ಈ ಜಿಲ್ಲೆಯ ಶಾಸನಗಳಲ್ಲಿ ಕಂದಪದ್ಯ ಮತ್ತು ಶ್ಲೋಕಗಳು ಹೆಚ್ಚು ಬಳಕೆಯಾಗಿರುವುದು ಕಂಡುಬರುತ್ತದೆ. ಕೆಲವು ಶಾಸನಗಳಲ್ಲಿ ಶ್ಲೋಕಗಳನ್ನೇ ಹೆಚ್ಚಾಗಿ ಬಳಸಲಾಗಿದೆ. ನಾಗಮಂಗಲ ತಾಲ್ಲೂಕಿನ ಎಲೇಕೊಪ್ಪದ ಸುಮಾರು ೧೧-೧೨ ನೇ ಶತಮಾನದ ಜೈನ ಶಾಸನದಲ್ಲಿ ಲೇಖಕನ ಹೆಸರನ್ನು ಸೂಚಿಸುವ ಭಾಗ ಬಿಟ್ಟರೆ ಉಳಿದ ಭಾಗವು ಕಂದಪದ್ಯಗಳಲ್ಲಿಯೇ ರಚಿಸಲ್ಪಟ್ಟಿದೆ. ಮದ್ದೂರು ತಾಲ್ಲೂಕಿನ ಆತಗೂರಿನ ಚಲ್ಲೇಶ್ವರ ದೇವಸ್ಥಾನದ

ಮುಂದಿದ್ದ ಕ್ರಿ.ಶ. ೯೫೦ರ ವೀರಗಲ್ಲು ಶಾಸನದಲ್ಲಿ ಗಂಗವಂಶದ ಇಮ್ಮಡಿ ಬೂತುಗನ ಅಧೀನ ಅಧಿಕಾರಿಯಾದ, ಸಗರ ವಂಶದ ಮಣಲಾರ ಎಂಬಾತನು ರಾಷ್ಟ್ರಕೂಟ ಅರಸ ಮುಮ್ಮಡಿಕೃಷ್ಣನಿಂದ, ಕಾಳಿ ಎಂಬ ಹೆಸರಿನ ಬೇಟೆ ನಾಯಿಯೊಂದನ್ನು ಬೇಡಿ ಪಡೆದ ವಿಷಯವನ್ನು ಅತ್ಯಂತ ಲಾಲಿತ್ಯಪೂರ್ಣವಾಗಿ ವಿವರಿಸಲಾಗಿದೆ.

ಅಡಿಟಿಪ್ಪಣಿಗಳು:-

೧. ಎಫಿಗ್ರಾಫಿಯಾ, ಮೈಸೂರು ವಿಶ್ವವಿದ್ಯಾನಿಲಯ- ಸಂಪುಟ ೭ ಪು. ಪೀಠಿಕೆ lxx

೨. ಎಫಿಗ್ರಾಫಿಯಾ, ಮೈಸೂರು ವಿಶ್ವವಿದ್ಯಾನಿಲಯ- ಸಂಪುಟ ೬ ಪು. ಪೀಠಿಕೆ liii

೩. ಎಫಿಗ್ರಾಫಿಯಾ ಕರ್ನಾಟಕ ಸಂಪುಟ ೭ ನಾಗಮಂಗಲ ೧೨೨, ಎಲೆಕೊಪ್ಪ ೧೦-೧೧ನೇ ಶತಮಾನ

೪. ಮೇವುಂಡಿ ಮಲ್ಲಾರಿ, ಕನ್ನಡನಾಡಿನ ಶಾಸನ ಕವಿಗಳು, ಪು. ೧೪೨

೫. ಎಫಿಗ್ರಾಫಿಯಾ, ಮೈಸೂರು ವಿಶ್ವವಿದ್ಯಾನಿಲಯ- ಸಂಪುಟ ೭ ಪು. ಪೀಠಿಕೆ lxxii

೬. ಮಂಡ್ಯ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ಸಂಪಾದಕರು ಡಾ|| ಆರ್. ಗೋಪಾಲ್ ಪು. ೯೦

೭. ಅದೇ, ಪು. ೯೧

೮. ಎಫಿಗ್ರಾಫಿಯಾ, ಮೈಸೂರು ವಿಶ್ವವಿದ್ಯಾನಿಲಯ- ಸಂಪುಟ ೬ ಪು. ಪೀಠಿಕೆ liv

೯. ಮಂಡ್ಯ ಜಿಲ್ಲಾ ಸಾಂಸ್ಕೃತಿಕ ಪರಂಪರೆ; ತೈಲೂರು ವೆಂಕಟಕೃಷ್ಣ ಬಾನುಪ್ರಕಾಶನ ಮಂಡ್ಯ ಪು. ೧೦

೧೦. ಶಾಸನ ಪರಿಚಯ; ಆರ್.ಶೇಷಶಾಸ್ತ್ರಿ, ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ. ಪು.

ಅಧ್ಯಾಯ ೫

ಜಿಲ್ಲೆಯ ಶಾಸನಗಳ ಸಾಹಿತ್ಯಿಕ ಅಧ್ಯಯನ

ಅಧ್ಯಾಯ ೫

ಜಿಲ್ಲೆಯ ಶಾಸನಗಳ ಸಾಹಿತ್ಯಿಕ ಅಧ್ಯಯನ

ಜಿಲ್ಲೆಯ ಶಾಸನಗಳಲ್ಲಿ ನಾವು ಅನೇಕ ಸಾಹಿತ್ಯಿಕ ಅಂಶಗಳನ್ನು ಕಾಣಬಹುದು ವಿಷಯ ನಿರೂಪಣೆಯ ವಿಶಿಷ್ಟತೆ, ಕಥನಗುಣ, ವರ್ಣನೆ ಅಲಂಕಾರ, ಭಾಷಾ ಶೈಲಿ ಇತ್ಯಾದಿ ಅಂಶಗಳನ್ನು ಇಲ್ಲಿ ಕಾಣಬಹುದು.

ಒಂದು ಜನಾಂಗದಲ್ಲಿ ಸಾಹಿತ್ಯವೆಂಬುಂದು ಪ್ರಜ್ವಲಿಸುವ ಮುನ್ನ ಆ ಜನಾಂಗದ ಆಡುವ ಭಾಷೆ ಸರಿಯಾಗಿ ರೂಪುಗೊಂಡು ಒಂದು ಹದಕ್ಕೆ ಬಂದಿರಬೇಕಾಗುತ್ತದೆ. ಆ ಜನಾಂಗದಲ್ಲಿ ಧರ್ಮ ಮತ್ತು ಸಂಸ್ಕೃತಿ ಎಂಬುದು ಒಂದು ಹಂತವನ್ನು ಮುಟ್ಟಿರುಲೂಬೇಕಾಗುತ್ತದೆ. ಸಾಹಿತ್ಯವು ಸಮ್ಯಕ್ ಜೀವನಕ್ಕೆ ಸಂಬಂಧಿಸಿದುಧಾರೆ; ಮನುಷ್ಯನ ಭಾವನೆಯನ್ನು ಪವಿತ್ರವಾಗಿಸುವುದೇ ಧರ್ಮದ ಕೆಲಸ.

ಭಾರತೀಯ ಪ್ರಾಚೀನ ಸಾಹಿತ್ಯಗಳಲ್ಲಿ ಕನ್ನಡವೂ ಒಂದು ಅದಕ್ಕೆ ಅವಿಚ್ಚಿನ್ನವಾದ ೧೫೦೦ ವರ್ಷಗಳ ಚರಿತ್ರೆ ಇದೆ, ಕನ್ನಡ ಸಾಹಿತ್ಯದ ಬೆಳವಣಿಗೆಗೆ ರಾಜಾಶ್ರಯ ಬಹುಮಟ್ಟಿಗೆ ಸಹಾಯಕವಾಗಿದೆ, ಅರಸರಂತೆಯೇ ಅವರ ಅಧಿಕಾರಿಗಳು, ಮಾಂಡಲೀಕರು ಕೃತಿ ರಚನೆಗೆ ನೆರವೆನ್ನಿತ್ತಿದ್ದಾರೆ, ಸ್ವತಂತ್ರರಾದ ಅನೇಕ ಪಾಳೆಯಗಾರರು, ಘೋಷಣೆಯನ್ನು ನೀಡಿದ್ದಾರೆ. ಅನೇಕ ಸಂದರ್ಭಗಳಲ್ಲಿ ರಾಜಾಶ್ರಯವೇ ಕವಿತಾ ರಚನೆಗೆ ಮೂಲಕಾರಣವೂ ಆಗಿದೆ. ಪ್ರಧಾನ ಅಂಶಗಳವೆಂದರೆ ಧರ್ಮಕ್ಕೂ, ಸಾಹಿತ್ಯಕ್ಕೂ ನಿಕಟ ಸಂಬಂದವಿರುವುದು ಕನ್ನಡ ಸಾಹಿತ್ಯದ ಆದಿಕಾಲದಿಂದಲೂ ಕಂಡು ಬಂದಿದೆ. ಆಶ್ರಯದಾತನ ಅಥವಾ ಕೃತಿಕಾರನ ಧರ್ಮವು ಆ ವಿಷಯದ ಗ್ರಂಥದ ರಚನೆಗೆ ಕಾರಣವೂ ಆಗುತ್ತದೆ. ಒಟ್ಟಾರೆ ಪ್ರಾಚೀನ ಕಾಲದಲ್ಲಿ ಕನ್ನಡ ಸಾಹಿತ್ಯದ ಉಗಮ ಮತ್ತು ಬೆಳೆವಣಿಗೆಗೆ ಧರ್ಮವೇ ಪ್ರೇರಕಶಕ್ತಿ.[೧]

ಮಂಡ್ಯ ಜಿಲ್ಲೆಯಲ್ಲಿರುವ ಶ್ರೀರಂಗಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದ ಮೈಸೂರು ಅರಸರಲ್ಲಿ ಶ್ರೇಷ್ಠ ದೊರೆ ಎನಿಸಿದ ಚಿಕ್ಕದೇವರಾಜ ಒಡೆಯರ ಆಳ್ವಿಕೆಯಲ್ಲಿ ರಾಜರ ಗುರುವಾಗಿದ್ದ ಅಳಹಿಯ ಸಿಂಗರಾರ್ಯರೂ, ಆಸ್ಥಾನ ಕವಿ ಚಿಕ್ಕಪಾಧ್ಯಾಯರೂ; ವಿಶಿಷ್ಟಾದ್ವೈತಿಗಳಾಗಿ ಸ್ವತಃ ರಾಜರೂ ಸಹ ಸ್ವಧರ್ಮದ ಪ್ರಸಾರಣೆಗಾಗಿ ಆ ಧರ್ಮಕ್ಕೆ ಸಂಬಂಧಪಟ್ಟಂತೆ ಅನೇಕ ಗ್ರಂಥಗಳನ್ನು ರಚಿಸಿದ್ದಾರೆ. ದೊರೆ ಚಿಕ್ಕದೇವರಾಯರ ಕಾಲ

(ಕ್ರಿ.ಶ.೧೬೭೨-೧೭೦೪) ವೆಂದರೆ ಕನ್ನಡ ಸಾರಸತ್ವ ಲೋಕವೇ ಶ್ರೀರಂಗಪಟ್ಟಣದಲ್ಲಿ ನೆಲೆಯಾಗಿತ್ತು. ಚಿಕ್ಕಾಪಾಧ್ಯಾಯರು ದೊರೆಯ ಸಾಕ್ಷಾದ್ಗುರು. ಇವರ ಮೂಲ ಹೆಸರು ಲಕ್ಷ್ಮೀಪತಿ, ಊರು ತೆರಕಣಾಂಬಿಯಾದರೂ ಕಾವ್ಯ ರಚನಾ ಕ್ಷೇತ್ರ ಕಾವೇರಿ ತೀರದ ಸಂಪದ್ಭರಿತ ಪ್ರಕೃತಿಯ ಶ್ರೀರಂಗಪಟ್ಟಣವಾಯಿತು. ಜೊತೆಗೆ ರಾಜಾಶ್ರಯವೂ ಇವರಿಗೆ ಅಪಾರವಾಗಿತ್ತು. ಶ್ರೀ ವೈಷ್ಣವ ಬ್ರಾಹ್ಮಣರಾದ ಇವರು "ಕಮಲಾಚಲಮಹಾತ್ಮ" ಮೊದಲಾದ ಮೂವತ್ತಕ್ಕೂ ಮಿಗಿಲಾದ ಗ್ರಂಥಗಳನ್ನು ಕನ್ನಡದಲ್ಲಿ ರಚಿಸಿದ್ದಾರೆ. ವಾಸ್ತವವಾಗಿ ಈ ಕವಿಯು ಕನ್ನಡದಲ್ಲಿ ಚಂಪೂ ಕಾವ್ಯದ ಕೊನೆಯ ರಚನಾಕಾರ, ವಿಷ್ಣುಪುರಾಣ, 'ರುಕ್ಮಾಂಗದ ಚರಿತೆ', "ದಿವ್ಯಸೂರಿಚರಿತೆ, 'ಯಾದವಗಿರಿ ಮಹಾತ್ಮೆ', 'ಪಶ್ಚಿಮರಂಗಧಾಮ ಸಾಹಿತ್ಯ' ಮುಂತಾದವು ವಿಶಿಷ್ಟಾದ್ವೈತ ಮತ ಪ್ರಸಾರ ಅಥವಾ ವೈಷ್ಣವ ಪುರಾಣಗಳನ್ನು ಆಧರಿಸಿವೆ.

ದೊರೆಯ ಮಂತ್ರಿಯಾದ ತಿರುಮಲಾರ್ಯನು ಬಾಲ್ಯದಲ್ಲಿ ದೊರೆಯ ಸಹಪಾಠಿಯೂ ಸ್ನೇಹಿತನೂ ಆಗಿದ್ದರಿಂದ ದೊರೆಗಾಗಿ ಅನೇಕ ಗ್ರಂಥಗಳನ್ನು ರಚಿಸಿ ಅಂಕಿತ ಮಾಡಿದ್ದಾನೆ. ಈತನ ಗ್ರಂಥಗಳಲ್ಲಿ **"ಅಪ್ರತಿಮವೀರ ಚರಿತೆ"**ಯು ಒಂದು ಅಲಂಕಾರ ಗ್ರಂಥ, ಗ್ರಂಥದಲ್ಲಿ ಕವಿಯು ಸಂಸ್ಕೃತದ ಚಂದ್ರಾಲೋಕ, ವಾಮನವೃತ್ತಿ, ಕಾವ್ಯ ಪ್ರಕಾಶ ಮೊದಲಾದ ಗ್ರಂಥಗಳಿಂದ ಲಕ್ಷಣಗಳನ್ನು ತೆಗೆದುಕೊಂಡು ಅವುಗಳಿಗೆ ಕನ್ನಡದಲ್ಲಿ ಗದ್ಯರೂಪವಾದ ವೃತ್ತಿಯನ್ನು ಬರೆದು ಒಂದೊಂದಕ್ಕೂ ಸ್ವನಿರ್ಮಿತವಾದ ಪದ್ಯರೂಪವಾದ ಲಕ್ಷ್ಯಗಳನ್ನು ಕೊಟ್ಟು ಕನ್ನಡದಲ್ಲಿಯೇ **"ಲಕ್ಷಣ ಸಮನ್ವಯ"** ಮಾಡಿದ್ದು ಒಂದು ಶಾಸ್ತ್ರ ಗ್ರಂಥವೆನಿಸಿದೆ.

ಈತನ ಚಂಪೂ ಕಾವ್ಯ ಚಿಕ್ಕದೇವರಾಜ ವಿಜಯ ಗದ್ಯದಲ್ಲಿರುವ "ಚಿಕ್ಕದೇವರಾಜ ವಂಶಾವಳಿ" ವೃತ್ತದಲ್ಲಿ ರಚಿತವಾಗಿರುವ "ಚಿಕ್ಕದೇವರಾಜ ಶತಕ" ಇವು ಮೈಸೂರು ದೊರೆಗಳ ವೈಭವವನ್ನು ಕುರಿತದ್ದಾಗಿವೆ. ಈತ ಒಬ್ಬ ಅತ್ಯುತ್ತಮ ಅಸ್ಥಾನ ಗಮಕಿಯೂ ಆಗಿದ್ದನು. ಈತನ ಸಹೋದರನಾದ ಸಿಂಗರಾರ್ಯನು ಅದುವರೆಗೆ ಕನ್ನಡದಲ್ಲಿ ಅಭಾವವಾಗಿದ್ದ ನಾಟಕ ಪ್ರಕಾರದ ಗ್ರಂಥವಾದ **"ಮಿತ್ರವಿಂಧಾಗೋವಿಂದ"** ಎಂಬುದನ್ನು ರಚಿಸಿದನು. ಇದು ಶ್ರೀ ಹರ್ಷನ 'ರತ್ನಾವಳಿ' ನಾಟಕವನ್ನು ಆಧರಿಸಿದ್ದರೂ ಹಲವು ವಿಶಿಷ್ಟಗುಣಗಳಿಂದ ವ್ಯತ್ಯಾಸಗೊಂಡಿದೆ. ಮತ್ತೊಬ್ಬ ಆಸ್ಥಾನ ಕವಿ ತಿಮ್ಮ ಕವಿಯು ತನ್ನ 'ಯಾದವಗಿರಿ ಮಹಾತ್ಮೆ' ಯಲ್ಲಿ ಚಿಕ್ಕದೇವರಾಜರ ವೈಭವವನ್ನು ವಿಸ್ತಾರವಾಗಿ ವರ್ಣಿಸಿದ್ದಾನೆ. ಈ ಕವಿಯು ಕುಮಾರವ್ಯಾಸನು ಗದಾಪರ್ವಕ್ಕೆ ನಿಲ್ಲಿಸಿ ಬಿಟ್ಟಿದ್ದ ಭಾರತದ ಉಳಿದ ಎಂಟೂ (೮) ಪರ್ವಗಳನ್ನು ರಚಿಸಿದ್ದಾನೆ.

ಉಳಿದ ಶ್ರೇಷ್ಠ ಕವಿಗಳೆನಿಸಿದವರಲ್ಲಿ ಮಲ್ಲಿಕಾರ್ಜುನನು 'ಶ್ರೀರಂಗಮಹಾತ್ಮೆ'ಯನ್ನು ವೇಣುಗೋಪಾಲವರಪ್ರಸಾದನು 'ಚಿಕ್ಕದೇವರಾಜವಂಶಾವಳಿ'ಯನ್ನು, ಚಿದಾನಂದನು "ಮುನಿವಂಶಾಭ್ಯುದಯ"ವನ್ನು, ಮಲ್ಲರಸನು 'ದಶಾವತಾರಚರಿತೆ' ಯನ್ನು ರಚಿಸಿದ್ದಾರೆ. ಚಿಕ್ಕದೇವರಾಜರು ಸಾಹಿತ್ಯ ಮತ್ತು ಕಲೆಗಳಿಗೆ ತಮ್ಮ ಕೊಡುಗೆಯನ್ನು ನೀಡಿದ ವಿಶೇಷ ಪ್ರೋತ್ಸಾಹದಿಂದಾಗಿ ಸ್ತ್ರೀಯರೂ ಸಹ ಸಾಹಿತ್ಯ ಕ್ಷೇತ್ರಕ್ಕೆ ತಮ್ಮ ಕೊಡುಗೆಯನ್ನು ನೀಡಿದರು. ಅಂತಃ ಪುರದಲ್ಲಿ ಸಂಚಿಯ ಊಳಿಗದವಳಾಗಿದ್ದ ಹೊನ್ನಮ್ಮನು **"ಹದಿಬದೆಯ ಧರ್ಮವೆಂಬ"** ಸಾಂಗತ್ಯ ಗ್ರಂಥವನ್ನು ರಚಿಸಿದಳು. ಈ ಗ್ರಂಥದಲ್ಲಿ ದಾಂಪತ್ಯ ಮತ್ತು ಹೆಣ್ಣಿನ ಜೀವನವನ್ನು ಎಳೆ ಎಳೆಯಾಗಿ ಪವಿತ್ರ ಭಾವನೆಗಳೊಡನೆ ಪ್ರತಿ ಪಾದಿಸಿದ್ದಾಳೆ, ಮತ್ತೊಂಬ ಕವಿಯತ್ರಿ ಶೃಂಗಾರಮ್ಮಳು "ಪದ್ಮನಿ ಕಲ್ಯಾಣ" ವನ್ನು ರಚಿಸಿದ್ದಾಳೆ. "ಜೈಮಿನಿಭಾರತ" ವೆಂಬ ಲೋಕೋತ್ತರ ಕಾವ್ಯವನ್ನು ರಚಿಸಿರುವ ಲಕ್ಷ್ಮೀಶಕವಿಯು ಚಿಕ್ಕದೇವರಾಜರ ಅಸ್ಥಾನದಲ್ಲಿ ತನ್ನ ಕಾವ್ಯವನ್ನು ವಾಚಿಸುತ್ತಿದ್ದನೆಂಬ ಸಂಗತಿಯೂ ಇದೆ. ಇಂಥ ವಿಪುಲವಾದ ವೈವಿಧ್ಯಮಯ ಸಾಹಿತ್ಯ ಬೆಳವಣಿಗೆಗೆ ಆಸರೆಯಾದ ಚಿಕ್ಕದೇವರಾಜರಿಗೆ ಬಾಲ್ಯದಲ್ಲಿ ಶಿಕ್ಷಣವನ್ನು ನೀಡಿದ ಅಳಹಿಯ ಸಿಂಗಾಚಾರ್ಯರೂ, ಜೈನ ವಿದ್ವಾಂಸರಾದ ವಿಶಾಲಾಕ್ಷ ಪಂಡಿತರೂ, ಕವಿ ಚಿಕ್ಕುಪಾಧ್ಯಾಯರ ಪ್ರಭಾವದಿಂದಾಗಿ ದೊರೆಯು ಅನೇಕ ಗ್ರಂಥಗಳನ್ನು ರಚಿಸಿದ್ದಾರೆ. 'ಚಿಕ್ಕದೇವರಾಜಬಿನ್ನಪ' 'ಗೀತಗೋಪಾಲ' 'ಭಾಗವತ' 'ಶೇಷಧರ್ಮ ಭಾರತ' ಇವು ಚಿಕ್ಕದೇವರಾಜರ ಮುಖ್ಯ ಗ್ರಂಥಗಳು ಗೀತಗೋಪಾಲವು ಶ್ರೀ ಕೃಷ್ಣನ ಭಕ್ತಿಗೀತೆಯಾದರೆ, ಬಿನ್ನಪವು ಮೇಲುಕೋಟೆಯಲ್ಲಿನ ತನ್ನ ಆರಾಧ್ಯದೈವ ತಿರುನಾರಾಯಣ ಅಥವಾ ಚೆಲುವನಾರಾಯಣ ಸ್ವಾಮಿಯ ಮೇಲಿನ ಭಕ್ತಿ ಪೂರ್ವಕ ಪಾರ್ಥನೆ ಇದು ದೊರೆಯ ಆಧ್ಯಾತ್ಮಿಕ ಅಥವಾ ಸ್ವಧರ್ಮದ ಮೇಲಿನ ವಿಶ್ವಾಸವನ್ನು ವ್ಯಕ್ತಪಡಿಸುತ್ತದೆ.[೨]

ಚಿಕ್ಕದೇವರಾಜರ ಕಾಲದಲ್ಲಿಯೇ ಕರ್ನಾಟಕದಲ್ಲಿ ಪ್ರಸಿದ್ಧರಾಗಿದ್ದ ವೀರಶೈವ ಕವಿಯೆನಿಸಿದ ಷಡಕ್ಷರ ದೇವನ ಜನ್ಮ ಸ್ಥಳ ಮಳವಳ್ಳಿ ತಾಲ್ಲೂಕಿನ ಧನಗೂರು. ಈತ ಕೆಲಕಾಲ ಧನಗೂರು ಮಠದ ಸ್ವಾಮಿಯೂ ಆಗಿದ್ದು, ಮುಂದೆ ಯಳಂದೂರು ಮಠಕ್ಕೆ ಪೀಠಾಧ್ಯಕ್ಷನಾಗಿ ಅಲ್ಲಿಯೇ ಸಮಾದಿಯನ್ನು ಹೊಂದಿದನು. ಈತನು ಆಗಿಂದಾಗ್ಗೆ ಚಿಕ್ಕದೇವರಾಜರ ಆಸ್ಥಾನಕ್ಕೆ ಬರುತ್ತಿದ್ದನಂತೆ, ಮೇಲಾಗಿ ದೊರೆ ಚಿಕ್ಕದೇವರಾಜ, ತಿರುಮಲಾರ್ಯ, ವಿಶಾಲಾಕ್ಷ ಪಂಡಿತ ಇವರುಗಳು ಷಡಕ್ಷರ ದೇವನ ಸಹಪಾಠಿಗಳೂ ಆಗಿದ್ದರಂತೆ. **'ರಾಜಶೇಖರ ವಿಳಾಸ'** ಷಡಕ್ಷರ ದೇವನ ಚೊಚ್ಚಲ ಕೃತಿ. ಈ ಕೃತಿಗೆ ಗುಬ್ಬಿಯ ಮಲ್ಲಣಾರ್ಯನ 'ಭಾವಚಿಂತಾರತ್ನವು' ಆಕರವಾಗಿದೆ. ಇವನಿಗೆ 'ಉಭಯಕವಿತಾ ವಿಶಾರದ' ಎಂಬ ಬಿರುದಿದ್ದಂತೆ ತೋರುತ್ತದೆ. ಈತನು 'ವೃಷಬೇಂದ್ರ ವಿಜಯ' ಅಥವಾ

'ಬಸವರಾಜವಿಜಯ' 'ಶಬರಶಂಕರವಿಲಾಸ' ಎಂಬ ಗ್ರಂಥಗಳನ್ನು ರಚಿಸಿದ್ದಾನೆ. 'ವೀರಭದ್ರದಂಡಕ' ಎಂಬಕಾವ್ಯವನ್ನು ಬರೆದಿರುವಂತೆ ಪ್ರತೀತಿ ಇದೆ. ಒಟ್ಟಾರೆ ಈತನ ಕೃತಿಗಳಲ್ಲಿ ರಾಜಶೇಖರ ವಿಳಾಸವು ಮೇರು ಕೃತಿಯಾಗಿ ಈ ಕಾವ್ಯವು ವಸ್ತು ಅದರ ಉದಾತ್ತತೆ ಹಾಗೂ ಕವಿಯ ಪ್ರತಿಭೆ, ಶೈಲಿಯ ಔನ್ನತ್ಯ, ಮಾನವ ಜೀವನದ ಮೌಲ್ಯಗಳ ದರ್ಶನ ಸೌಂದರ್ಯ ಪ್ರಜ್ಞೆ ಮತ್ತು ಪಾಂಡಿತ್ಯಕ್ಕೆ ನಿದರ್ಶನವಾಗಿದೆ.[೩]

ಪುರಾಣಗಳಲ್ಲಿ ಉಕ್ತವಾಗಿರುವಂತೆ ಮಂಡ್ಯ ಜಿಲ್ಲೆಯು ದಂಡಕಾರಣ್ಯ ಪ್ರದೇಶವೆಂದು ಗುರುತಿಸಲ್ಪಟ್ಟಿದೆ, ಮಾಂಡವ್ಯ, ಮೈತ್ರೇಯ, ಕದಂಬ ಕೌಂಡಿಲ್ಯ, ಕಣ್ವ, ಅಗಸ್ತ್ಯ, ಗೌತಮ ಮುಂತಾದ ಮಹರ್ಷಿಗಳು ತಪಸ್ಸು ಮಾಡುತ್ತಿದ್ದರೆನ್ನಲಾದ ಈ ಪ್ರದೇಶದಲ್ಲಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಂಪರೆಯು ಅನೂಚಾನವಾಗಿ ಹರಿದು ಬಂದಿದೆ.

ಜಿಲ್ಲೆಯ ಕುಂತಿಬೆಟ್ಟ, ಕರಿಘಟ್ಟ, ನಾರಾಯಣದುರ್ಗ ಗಜರಾಜಗಿರಿ, ಆದಿಚುಂಚನಗಿರಿ, ಮುಂತಾದ ಬೆಟ್ಟಗಳು ಕಾವೇರಿ, ಹೇಮಾವತಿ, ಲೋಕಪಾವನಿ, ಶಿಂಷಾ, ಮತ್ತು ವೀರ ವೈಷ್ಣವಿ ನದಿಗಳು, ಗಗನಚುಕ್ಕಿ, ಭರಚುಕ್ಕಿ ಮತ್ತು ಶಿಂಷಾ ಜಲಪಾತಗಳು, ರಂಗನತಿಟ್ಟು, ಕೊಕ್ಕರೆಬೆಳ್ಳೂರು ಮತ್ತು ಗೆಂಡೆಹೊಸಳ್ಳಿ ಪಕ್ಷಿಧಾಮಗಳು ತುಂಬಾ ಸೊಗಸಾಗಿದ್ದು, ಈ ಜಿಲ್ಲೆಯ ಸಾಹಿತ್ಯ ಮತ್ತು ಸಂಸ್ಕೃತಿಯ ಬೆಳವಣಿಗೆಗೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಪ್ರೇರಣೆ ನೀಡಿವೆ. ಶ್ರೀರಂಗಪಟ್ಟಣ, ನಾಗಮಂಗಲ, ಮಳವಳ್ಳಿ, ಮೇಲುಕೋಟೆ, ಕಂಬದಹಳ್ಳಿ, ಬಿಂಡಿಗನವಿಲೆ, ಗೋವಿಂದನಹಳ್ಳಿ, ಬೆಳ್ಳೂರು, ಬೆಳಕವಾಡಿ, ಮದ್ದೂರು, ಅರೆತಿಪ್ಪೂರು, ವೈದ್ಯನಾಥಪುರ, ಅಗ್ರಹಾರ ಬಾಚಹಳ್ಳಿ, ವರಾಹನಾಥ ಕಲ್ಲಹಳ್ಳಿ ಆಘಲಯ, ಹೊಸಹೊಳಲು, ಕಿಕ್ಕೇರಿ, ಬಸರಾಳು, ಧನಗೂರು, ಹರವು, ಹೊಸಬೂದನೂರು, ಮಾರೇಹಳ್ಳಿ ಮುಂತಾದ ಊರುಗಳು, ಹಿಂದೆ ಸಾಂಸ್ಕೃತಿಕ ಹಾಗೂ ಕಲಾಭಿವೃದ್ಧಿ ಕೇಂದ್ರಗಳಾಗಿದ್ದು, ಕೆಲವೆಡೆ, ದೇವಾಲಯಗಳನ್ನು ಕಾರ್ಯಗಾರಗಳನ್ನಾಗಿ ಉಪಯೋಗಿಸಿಕೊಂಡು ಶಿಕ್ಷಣ ಕಲೆ ಮತ್ತು ಆಧ್ಯಾತ್ಮಿಕ ಜ್ಞಾನಗಳ ಪ್ರಚಾರ ಮತ್ತು ಪ್ರಸಾರ ಕಾರ್ಯವನ್ನು ನಡೆಸಲಾಗುತ್ತಿತ್ತು.

ವಿಶಿಷ್ಟಾದ್ವೈತ ಸಿದ್ಧಾಂತದ ಪ್ರವರ್ತಕ ರಾಮನುಜಾಚಾರ್ಯರ ಕಾರ್ಯಕ್ಷೇತ್ರವಾಗಿದ್ದ ತೊಣ್ಣೂರು ಹಾಗೂ ಮೇಲುಕೋಟೆ, ಜೈನ ಧರ್ಮದ ಕೇಂದ್ರಗಳಾದ ಅರೆತಿಪ್ಪೂರು, ಕಂಬದಹಳ್ಳಿ ಹಾಗೂ ಬಸ್ತಿ ಹೊಸಕೋಟೆ, ಶ್ರೀರಂಗಪಟ್ಟಣದ ಶ್ರೀರಂಗನಾಥ, ಗಂಗಾಧರನಾಥ, ತೊಣ್ಣೂರಿನ ನಂಬಿನಾರಾಯಣ, ಮೇಲುಕೋಟೆಯ ಚೆಲುವನಾರಾಯಣ, ನಾಗಮಂಗಲದ ಶ್ರೀಸೌಮ್ಯ ಕೇಶವ, ಕನ್ನಂಬಾಡಿಯ ಕನ್ನೇಶ್ವರ ಮತ್ತು ಗೋಪಾಲಕೃಷ್ಣ, ವೀರಭದ್ರಸ್ವಾಮಿ, ಗೋವಿಂದನಹಳ್ಳಿಯ

ಪಂಚಲಿಂಗೇಶ್ವರ, ವರಾಹನಾಥ ಕಲ್ಲಹಳ್ಳಿಯ ಲಕ್ಷ್ಮಿ ವರಾಹನಾಥ, ಬಸರಾಳಿನ ಮಲ್ಲಿಕಾರ್ಜುನ ಮದ್ದೂರಿನ ಉಗ್ರನರಸಿಂಹಸ್ವಾಮಿ, ಆದಿಚುಂಚನಗಿರಿಯ ಕಾಲಭೈರವೇಶ್ವರ ಮತ್ತು ಗಂಗಾದರೇಶ್ವರ ಸಿಂದಗಟ್ಟದ ಸಂಗಮೇಶ್ವರ ಮುಂತಾದ ಪ್ರಖ್ಯಾತ ದೇವಾಲಯಗಳು ಜಿಲ್ಲೆಯಲ್ಲಿರುವ ವಿಭಿನ್ನ ಸಂಸ್ಕೃತಿಗಳಿಗೆ ದ್ಯೋತಕವಾಗಿದೆ.

ಮಂಡ್ಯ ಜಿಲ್ಲೆಯನ್ನು ಅತ್ಯಂತ ಪ್ರಾಚೀನ ಕಾಲದಿಂದಲೂ ಗಂಗರು, ಹೊಯ್ಸಳರು ವಿಜಯನಗರದವರು ಮತ್ತು ಮೈಸೂರಿನ ಅರಸರು ತಮ್ಮ ಆಡಳಿತ ನೆಲೆಗಳಾಗಿ ಮಾಡಿಕೊಂಡಿದ್ದರು. ಗಂಗರ ಕಾಲದಲ್ಲಿ ಈಗ ಮಂಡ್ಯ ತಾಲ್ಲೂಕಿನಲ್ಲಿರುವ ಬಸರಾಳು ಹೋಬಳಿಯಲ್ಲಿರುವ ಚಿಕ್ಕಗಂಗವಾಡಿ ಒಂದು ಪ್ರಮುಖ ಆಡಳಿತ ಕೇಂದ್ರವಾಗಿತ್ತು. ಹೊಯ್ಸಳರ ಕಾಲದಲ್ಲಿ ಈಗ ಪಾಂಡವಪುರ ತಾಲ್ಲೂಕಿನಲ್ಲಿರುವ ತೊಣ್ಣೂರು ಪ್ರಮುಖ ಆಡಳಿತ ಕೇಂದ್ರವಾಗಿತ್ತು. ವಿಜಯನಗರದ ಅರಸರ ಕಾಲದಲ್ಲಿ ನಾಗಮಂಗಲದ ಪ್ರಮುಖ ಆಡಳಿತ ಕೇಂದ್ರವಾಗಿತ್ತು. ಮೈಸೂರು ಅರಸರು ೧೮೭೯ ರವರೆಗೆ ಶ್ರೀರಂಗಪಟ್ಟಣವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು. ಇವಲ್ಲದೆ ಕೆರಗೋಡು, ಮದ್ದೂರು, ಕಂಬದಹಳ್ಳಿ, ಜಾಂಗಿನಕೆರೆ, ಸಾಸಲು, ದೊಡ್ಡಅರಸಿನಕೆರೆ, ಮುಂತಾದವು ಅನೇಕಾನೇಕ ಸ್ಥಾನೀಕ ಪ್ರಭುಗಳ ಆಡಳಿತ ಕೇಂದ್ರವಾಗಿದ್ದವು. ಈ ಕಾರಣದಿಂದಾಗಿಯೇ ಈ ಸ್ಥಳಗಳಲ್ಲಿ ಕವಿಗಳು ಕಲಾವಿದರು, ರಾಜಕೀಯ ಧುರೀಣರು ಮುಂತಾದವರು ನೆಲೆಸುವಂತಾಯಿತು. ಇವರಿಗೆ ರಾಜಾಶ್ರಯ ದೊರೆಯಿತು. ಈ ಕಾರಣದಿಂದಾಗಿ ಮಂಡ್ಯ ಜಿಲ್ಲೆಯ ಪ್ರದೇಶದಲ್ಲಿ ಅನೇಕ ಪ್ರಾಚೀನ ಕವಿಗಳು ತಮ್ಮ ಕಾವ್ಯಗಳನ್ನು ರಚಿಸಿದ್ದಾರೆ. ಅವುಗಳು ಇಂದಿಗೂ ಉಳಿದುಕೊಂಡು ಬಂದಿರುವುದನ್ನು ಕಾಣಬಹುದಾಗಿದೆ.

ಕ್ರಿ.ಶ. ೫೪೦ ರಿಂದ ೬೦೦ ರವರಿಗೆ ಆಳಿದ ಗಂಗದೊರೆಯಾದ ದುರ್ವಿನೀತನೆ ಈ ಪ್ರದೇಶದ ಮೊದಲನೆಯ ಕವಿ ಹಾಗೂ ಕವಿ ಜನಾಶ್ರಿತನೆಂದು ಹೇಳುಬಹುದು. ಈತ ಗಂಗ ದೊರೆ ಅವನೀತನ ಮಗ ತನ್ನ ಯೌವನದ ದಿನಗಳಲ್ಲಿ ಈತ ಚಿಕ್ಕಗಂಗವಾಡಿಯಿಂದ ಆಡಳಿತ ನಡೆಸುತ್ತಿದ್ದ. ದುರ್ವಿನೀತನು ಮಂತ್ರಾಲೋಚನ ನಿಪುಣ ಕಾವ್ಯಾಲಾಪಚತುರ ಎಂದು ವರ್ಣಿತನಾಗಿದ್ದಾನೆ. ಕಿರಾತಾರ್ಜುನ ನೀರಿಮದ ಕವಿ ಬಾರವಿ, ಈತನ ಆಶ್ರಯದಲ್ಲಿದ್ದನೆಂದು ಆಧಾರಗಳಿಂದ ತಿಳಿದು ಬರುತ್ತದೆ. ದುರ್ವಿನೀತ ಶಬ್ದಾವತಾರ ಎಂಬ ವ್ಯಾಕರಣ ಗ್ರಂಥವನ್ನು ಬರೆದಿದ್ದಾನೆ. ಈತ ಕನ್ನಡ ಸಂಸ್ಕೃತ ಭಾಷೆಗೆ ಅನುವಾದಿಸಿದನೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ದುರ್ವಿನೀತನು ಅಸಮಾನ ಶೂರ ಮತ್ತು ಕಾವ್ಯ ರಚನಾಚತುರನೆಂದು ಹೆಸರು ಪಡೆದಿದ್ದಾನೆ.[೪]

ಮಂಡ್ಯ ಜಿಲ್ಲೆಯಲ್ಲಿ ದೊರೆಯುವ ಅನೇಕ ಶಾಸನಗಳನ್ನು ಬರೆದವರ, ಕೆತ್ತಿದವರ, ಕೆತ್ತಿಸಿದವರ ಹೆಸರುಗಳು ದೊರೆಯುತ್ತವೆ. ಉದಾಹರಣೆಗೆ ಜನ್ನ ಕವಿಯ ಹೆಂಡತಿ ಲಕುಮಾದೇವಿಗೆ ಗುರುವಾಗಿದ್ದ ಬಾಳಚಂದ್ರ ಕವಿಕಂದರ್ಪ ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕು ತಿಪ್ಪೂರಿನವನೆಂದು ಸಂಶೋಧನೆಗಳಿಂದ ತಿಳಿಯುತ್ತದೆ. ಇಂತಹ ಅನೇಕ ಶಾಸನ ಕವಿಗಳನ್ನು ಮಂಡ್ಯ ಜಿಲ್ಲೆಯಲ್ಲಿ ಕಾಣಬಹುದಾಗಿದೆ. ನಾಗಮಂಗಲ ತಾಲ್ಲೂಕು ಬಾಳನಕೆರೆಯ ಶಾಸನ ಬರೆದ ಸಾಂತ ಮಹಂತಶೈವ ಕವಿಯಾಗಿದ್ದ. ಈತ ಸೊವಿಯಕ್ಕನ ಮಗ ಸತ್ಕವಿ ಎಂದು ವರ್ಣಿತನಾಗಿದ್ದಾನೆ. ಇದೇ ತಾಲ್ಲೊಕಿನ ಎಲೆ ಕೊಪ್ಪದ ಶಾಸನ ಬಿಂಡಯ್ಯನೆಂಬ ಶಾಸನ ಕವಿಯನ್ನು ಉಲ್ಲೇಖಿಸುತ್ತದೆ. ಬಸರಾಳಿನ ಶಾಸನ ಬರೆದ ಕವಿ ಚಿದಾನಂದನು "ಸೂಕ್ತಿಸುಧಾರ್ಣವ" ರಚಿಸಿದ ಮಲ್ಲಿಕಾರ್ಜುನನ ಮಗನೆಂದು ಹೇಳಲಾಗಿದೆ. ಹೀಗೆಯೆ ಬ್ರಹ್ಮದೇವ, ಅಲ್ಲಾಳದೇವ ಹೀಗೆ ಹೆಸರುಗಳು ದೊರೆಯುತ್ತವೆ. ಈ ಕವಿಗಳು ರಚಿಸಿರುವ ಶಾಸನಗಳ ಬಂಧವನ್ನು ಗಮನಿಸಿದಾಗ ಇವರೆಲ್ಲ ಕನ್ನಡದಲ್ಲಿ ಉದ್ಧಾಮ–ಪಂಡಿತರಷ್ಟೇ ಅಲ್ಲ ಸಮರ್ಥ ಕಾವ್ಯ ರಚನಾ ಶಕ್ತಿಯನ್ನು ಹೊಂದಿದ್ದವರು ಎಂದು ತಿಳಿದುಬರುತ್ತದೆ.

ಸಾಹಿತ್ಯದ ಎಲ್ಲ ಪ್ರಕಾರಗಳ ಪುನರುಜ್ಜೀವನಕ್ಕೆ ಕಾರಣರೆನ್ನಬಹುದಾದ ಕವಿ ಮತ್ತು ಖ್ಯಾತ ಅರಸರಾದ ಚಿಕ್ಕದೇವರಾಜ ಒಡೆಯರು ಅವರ ಆಸ್ಥಾನದ ಗೋವಿಂದ, ವೈದ್ಯ, ಮಂತ್ರಿ ತಿರುಮಲಾರ್ಯ, ಚಿಕ್ಕುಪಾಧ್ಯಾಯ, ಭಾರತೀನಂಜ, ತಿಮ್ಮಕವಿ ಪಂಡಿತ, ಸಿಂಗರಾರ್ಯ, ಕವಯತ್ರಿಯರಾದ ಸಂಚಿಹೊನ್ನಮ್ಮ, ಶೃಂಗಾರಮ್ಮ ಕವಿಗಳಾದ ಷಡಕ್ಷರದೇವ, ಮಲ್ಲರಸ, 'ಬೇಹಾರಗಣಿತ' ರಚಿಸಿದ ಭಾಸ್ಕರ, ಗೋವಿನಹಾಡು, ರಚಿಸಿದ ಅಜ್ಞಾತಕವಿ,

ರಾಮಾನುಜಾಚಾರ್ಯರು ತೊಣ್ಣೂರು ಮೇಲುಕೋಟೆಗಳಲ್ಲಿ ಸುಮಾರು ಹನ್ನೆರಡು ವರ್ಷಗಳ ಕಾಲ ನೆಲೆಸಿದ್ದು, ವಿಶಿಷ್ಟಾದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದರು, ಪಾಂಡವಪುರ ತಾಲೂಕಿನ ತೊಣ್ಣೂರು ಗ್ರಾಮದಲ್ಲಿ ಅವರು ನೆಲೆಸಿದ್ದು ಇಲ್ಲಿಯೇ ಹೊಯ್ಸಳ ಮಹಾರಾಜ ಬಿಟ್ಟಿದೇವನನ್ನು ಜೈನಮತದಿಂದ ಶ್ರೀವೈಷ್ಣವ ಮತಕ್ಕೆ ಮತಾಂತರಗೊಳಿಸಿದರೆಂಬ ಅಭಿಪ್ರಾಯವಿದ್ದು, ಅನಂತರ ಆಚಾರ್ಯರು, ಮೇಲುಕೋಟೆಯಲ್ಲಿ ನೆಲೆಸಿದರು ಮಹತ್ವದ ಧಾರ್ಮಿಕ ಕೃತಿಗಳಾದ 'ವೇದಾಂತಸಾರ' ಮತ್ತು ವೇದಾಂತ ದೀಪಗಳನ್ನು ರಚಿಸಿ ಅದರಲ್ಲಿ ವಿಶಿಷ್ಟಾದ್ವೈತದ ತತ್ವಗಳನ್ನು ಸರಳ ಶೈಲಿಯಲ್ಲಿ ನಿರೂಪಿಸಿದ್ದಾರೆ, ಬಾದರಾಯಣನ 'ವೇದಾಂತ ಸೂತ್ರ' ದ ಮೇಲೆ ಟೀಕೆಗಳುಳ್ಳ 'ಶ್ರೀ ಭಾಷ್ಯ'ವನ್ನು ಬರೆದಿದ್ದಾರೆ, 'ಭಗವದ್ಗೀತೆ'ಯನ್ನು ಕುರಿತು ಅವರು ರಚಿಸಿರುವ 'ಗೀತಾಭಾಷ್ಯ' ಒಂದು ಮಹತ್ವದ ಕೃತಿಯಾಗಿದೆ ಶ್ರೀರಾಮಾನುಜರ ವಾಸ್ತವ್ಯ ಮತ್ತು ಪ್ರವಚನಗಳು,

ನಾಡಿನಾದ್ಯಂತಹ ಹರಡಿ, ಜಿಲ್ಲೆಯ ಸಾಹಿತ್ಯ ಪ್ರಗತಿಯ ಮೇಲೆ ಗಣನೀಯ ಪ್ರಮಾಣದಲ್ಲಿ ಪ್ರಭಾವಬೀರಿದೆ.

ಕನ್ನಡದಲ್ಲಿ ದೊರೆತ ಸಾಂಗತ್ಯ ಶೈಲಿಯ ಮೊದಲ ಉದಾಹರಣೆ ಎನ್ನಲಾದ 'ಸೊಬಗಿನ ಸೊನೆ' ಮತ್ತು ಅಮರುಕ (೧೪೧೦) ಗ್ರಂಥಗಳನ್ನು ರಚಿಸಿರುವ ದೇವರಾಜನೆಂಬ ಕವಿ ಮಂಡ್ಯ ಜಿಲ್ಲೆಯವನೆಂದು ವಿದ್ವಾಂಸರ ಇದನ್ನು ಸಂಸ್ಕೃತದ 'ಅಮರುಕ' ಗ್ರಂಥ ವಾರ್ಧಕ ಷಟ್ಪದಿಯಲ್ಲಿದ್ದ, ಇದನ್ನು ಸಂಸ್ಕೃತದ ಅಮರು ಶತಕದಿಂದ ಭಾಷಾಂತರಿಸಲಾಗಿದೆ.

ವಚನಕಾರ ಸ್ವತಂತ್ರ ಸಿದ್ದಲಿಂಗೇಶ್ವರ ಕೃಷ್ಣರಾಜಪೇಟೆ ತಾಲ್ಲೂಕಿನ ಹೊಸಹೊಳಲಿನ ಬಳಿಯ ಕಾಪನಹಳ್ಳಿಯವನಾಗಿದ್ದು ವಚನಗಳನ್ನು (೧೪೮೦) ಮುಕ್ತ್ಯಾಂಗನಾಕಂಠಮಾಲೆ, ಜಂಗಮ ರಗಳೆ ಎಂಬ ಗ್ರಂಥಗಳನ್ನು ರಚಿಸಿದ್ದಾನೆ.

ಕೃಷ್ಣರಾಜಪೇಟೆ ತಾಲ್ಲೂಕಿನ ಕಿಕ್ಕೇರಿಯವನಾದ ನಂಜುಂಡರಾಧ್ಯ, (ಸು. ಕ್ರಿ.ಶ. ೧೫೫೦) 'ಭೈರವೇಶ್ವರ' ಕಾವ್ಯ ಗ್ರಂಥವನ್ನು ರಚಿಸಿದ್ದಾನೆ. ಭೈರವ ರಾಜನ ಕಥೆಯನ್ನು ಪ್ರಧಾನವಾಗಿಟ್ಟುಕೊಂಡು ಅನೇಕ ಶಿವಶರಣರ ಕಥೆಗಳನ್ನು ಇದರಲ್ಲಿ ಹೇಳಲಾಗಿದೆ, ನಂಜುಂಡ ರಾಧ್ಯನ ಈ ಕಾವ್ಯದ ಆಧಾರದ ಮೇಲೆ, ಸಿದ್ದಲಿಂಗ ಶಿವಯೋಗಿಯ 'ಭೈರವೇಶ್ವರ ಪುರಾಣ' ಬಸವಲಿಂಗದೇವನ ಭೈರವೇಶ್ವರ ಪುರಾಣ ಕಥಾ ಸಾಗರ, ಚನ್ನಬಸವನ ಸಾಲೆಭೈರವೇಶ್ವರ ಚರಿತೆ, ಶಾಂತಲಿಂಗ ದೇಶಿಕನ ಭೈರವೇಶ್ವರ ಕಾವ್ಯ ಕಥಾಮಣಿ ಸೂತ್ರ ರತ್ನಾಕರ ಮೊದಲಾದ ಕೃತಿಗಳು ನಂತರದಲ್ಲಿ ಸೃಷ್ಠಿ ಗೊಂಡಿರಬೇಕೆಂದು ಕೆಲವು ವಿದ್ವಾಂಸರ ಅಭಿಪ್ರಾಯ 'ಕರಸ್ಥಲ ನಾಗಲಿಂಗನ ಚರಿತ್ರೆ'ಯನ್ನು ಕ್ರಿ.ಶ.೧೬೭೨ ರಲ್ಲಿ ಬರೆದಿರುವ ರುದ್ರಕವಿ, ಶ್ರೀರಂಗಪಟ್ಟಣದ ಸಮೀಪದ ಬೂಮ್ಮಾರಿನವನೆಂದು ಹೇಳಲಾಗಿದೆ ಆದರೆ ರುದ್ರಕವಿಯ ಕಾಲವನ್ನು ಆರ್.ನರಸಿಂಹಾಚಾರ್ಯರು, ಕ್ರಿ.ಶ.೧೬೫೦ ಎಂದು ನಮೂದಿಸಿದ್ದಾರೆ, ಈ ಕೃತಿಯು ಸಾಂಗತ್ಯ ಛಂದಸ್ಸಿನಲ್ಲಿದೆ. ಕಂಠೀರವ ನರಸರಾಜ ವಿಜಯ ಎಂಬ ಕೃತಿಯನ್ನು ಗೋವಿಂದ ವೈದ್ಯ ಬರೆದಿರುವನೆಂದು ಬಹುಪಾಲು ವಿದ್ವಾಂಸರು ಅಭಿಪ್ರಾಯಪಟ್ಟರೆ ಇತ್ತೀಚೀಗೆ ಕೆಲವರು ಭಾರತೀನಂಜ ಈ ಕೃತಿಯ ರಚನಾಕಾರನೆಂದು ವಾದಿಸುತ್ತಾರೆ, ಭಾರತೀನಂಜನು ಕಂಠೀರವ ನರಸರಾಜರ ಸಹಪಾಠಿಯಾಗಿದ್ದು, ನರಸರಾಜರು ಅಧಿಕಾರಕ್ಕೆ ಬಂದ ಮೇಲೆ, ತಮ್ಮ ಕೆಲವು ಸಹಪಾಠಿಗಳನ್ನು ವಿವಿಧ ಹುದ್ದೆಗಳಿಗೆ ನೇಮಿಸಿಕೊಂಡಾಗ ಭಾರತೀನಂಜನನ್ನೂ ಆಸ್ಥಾನ ಕವಿಯಾಗಿ ನೇಮಿಸಿಕೊಂಡರು, ಭಾರತೀನಂಜ ತಲಕಾಡಿನವನಾಗಿದ್ದು, ಕಾವ್ಯಗಳನ್ನು ಅದರಲ್ಲೂ ಭಾರತವನ್ನು ವಾಚನ ಮಾಡುವ ಸಂಪ್ರದಾಯವುಳ್ಳ ವಂಶದವನು, ಕಂಠೀರವನರಸರಾಜವಿಜಯ ಒಂದು ಸಾಂಗತ್ಯ ಗ್ರಂಥವಾಗಿದ್ದು

ಅರಸ ನರಸರಾಜರ ಚರಿತ್ರೆಯನ್ನು ವಸ್ತುವಾಗಿ ಹೊಂದಿರುವ ಕೃತಿ, ಶ್ರೀರಂಗಪಟ್ಟಣದ ಮೇಲೆರಣದುಲ್ಲಾಖಾನನು ಆಕ್ರಮಣ ಮಾಡಿದಾಗ ಅವನನ್ನು ನರಸರಾಜರು ಹಿಮ್ಮೆಟ್ಟಿಸಿದ ಸಂಗತಿ ಮತ್ತು ಬಿಜಾಪುರದ ಸುಲ್ತಾನನೊಡನೆ ಘರ್ಷಣೆಯಾದ ಸಂಗತಿಗಳನ್ನು ಈ ಕೃತಿ ಒಳಗೊಂಡಿದೆ ಇದೊಂದು ಚಾರಣ ಕಾವ್ಯವೆಂದೂ, ಯುದ್ಧಕಾವ್ಯ ಅಥವಾ ವೀರಕಾವ್ಯವೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.

ಶಾಸನಗಳನ್ನು ಸಾಹಿತ್ಯದ ದೃಷ್ಟಿಯಿಂದ ವಿಶ್ಲೇಷಿಸಿ ಪರಿಚಯಮಾಡಿ ಕೊಡುವಲ್ಲಿ ಮೂರು ನಾಲ್ಕು ಹಂತಗಳಲ್ಲಿ ಅವುಗಳನ್ನು ಪರಿಶೀಲಿಸುವುದು ಸೂಕ್ತವೆಂದು ತೋರುತ್ತದೆ.*

* **ಶಾಸನ ಪಾಠದ ಮೇಲೆ ಕಾವ್ಯ ಲಕ್ಷಣಗಳ ಪ್ರಭಾವ.**
* **ಶಾಸನ ಕವಿಗಳ ಮೇಲೆ ಸಮಾಕಾಲೀನ ಅಥವಾ ಹಿಂದಿನ ಕವಿಗಳ ಪ್ರಭಾವ.**
* **ಶಾಸನ ಕವಿಗಳು.**
* **ಶಾಸನಗಳ ಯಶಸ್ಸು.**

ಈ ಎಲ್ಲಾ ಅಂಶಗಳನ್ನು ಪರಿಶೀಲಿಸುವ ಮುನ್ನ ಶಾಸನಗಳ ಸೀಮಿತ ವ್ಯಾಪ್ತಿಯನ್ನು ಗಮನಿಸಬೇಕಾಗುತ್ತದೆ, ಈಗಾಗಲೇ ಗಮನಿಸಿರುವಂತೆ ಬಹುಪಾಲು ಶಾಸನಗಳು ಯಾವುದೇ ಒಂದು ನಿರ್ದಿಷ್ಟವಾದ ಉದ್ದೇಶವನ್ನಿಟ್ಟುಕೊಂಡು, ಆ ಉದ್ದೇಶವನ್ನು ಖಚಿತವಾಗಿ, ವ್ಯವಹಾರದ ದೃಷ್ಟಿಯಿಂದ ಸಮಂಜಸವಾಗಿರುವಂತೆ ರೂಪಿತವಾದವು, ಕೇವಲ ಸಾಹಿತ್ಯಿಕ ಉದ್ದೇಶದಿಂದ ರಚಿತವಾದ ಶಾಸನಗಳು ತೀರಾ ಕಡಿಮೆ ಇಲ್ಲವೆಂದರೂ ಅಡ್ಡಿಯಿಲ್ಲ ಅಂದರೆ ಸಾಹಿತ್ಯಿಕ ಮೌಲ್ಯವುಳ್ಳ ಶಾಸನಗಳು ಇಲ್ಲವೆಂದು ನಮ್ಮ ಅಭಿಪ್ರಾಯವಲ್ಲ ತಮ್ಮ ಸೀಮಿತ ವ್ಯಾಪ್ತಿಯಲ್ಲಿ ಅವುಗಳು ಸಾಹಿತ್ಯಾಂಶಗಳನ್ನು ಒಳಗೊಂಡಿವೆ ಶಾಸನಕಾರನ ವೈಯುಕ್ತಿಕ ಪ್ರತಿಭೆಯನನ್ನು ಅನುಸರಿಸಿ ಅವುಗಳ ಸಾಹಿತ್ಯಾಂಶಗಳನ್ನು ಒಳಗೊಂಡಿದೆ.[೬]

ತನಗೆ ನೀಡಲಾಗಿರುವ ಎಲ್ಲಾ ಮಾಹಿತಿಗಳನ್ನು ಖಚಿತವಾಗಿ ತಿಳಿಸಬೇಕು ಎಲ್ಲಿಯೂ ಉತ್ಪ್ರೇಕ್ಷೆ ಎಂಬುದು ವ್ಯಕ್ತಿಯ ಗುಣ, ಪರಾಕ್ರಮ, ನಾಡಿನ ವರ್ಣನೆ ಮುಂತಾದ ಅಂಶಗಳಿಗೆ ಸಂಬಂದಿಸಿದಂತೆ ಬರಬಹುದಿತ್ತು, ಇವುಗಳ ಸಂಪೂರ್ಣ ಉಪಯೋಗವನ್ನು ಪಡೆಯುವುದಕ್ಕೆ ಶಾಸನ ಫಲಕದ ವಿಸ್ತೀರ್ಣ, ತಾಮ್ರಶಾಸನದ ವಿಸ್ತೀರ್ಣ ಮುಂತಾದ ತಾಂತ್ರಿಕ ಅಂಶಗಳನ್ನು ಅವನು ಗಣನೆಗೆ ತೆಗೆದುಕೊಳ್ಳಲೇ ಬೇಕಿತ್ತು, ಆದ್ದರಿಂದ ಶಾಸನಗಳಿಂದ ಶ್ರೇಷ್ಠ ಮಟ್ಟದ ಕಾವ್ಯಗಳನ್ನು ನಿರೀಕ್ಷಿಸುವುದು ಸಮಂಜವಲ್ಲ.

ಕಾವ್ಯಗಳಿಗೆ ಲಾಕ್ಷಣಿಕರು ಹೇಗೆ ಒಂದು ಬಗೆಯ ಕಟ್ಟುಪಾಡುಗಳನ್ನು ಹಾಕಿದರೋ, ಅಥವಾ ಕವಿಗಳು ತಮ್ಮ ಕೃತಿಯ ಬಗ್ಗೆ ಹೇಳುವಾಗ ಉತ್ತಮ ಸಾಹಿತ್ಯ ಕೃತಿಯ ಲಕ್ಷಣಗಳನ್ನು ತಿಳಿಸಿದರೂ ಹಾಗೆಯೇ ಶಾಸನಕವಿಗಳೂ ಸಹ ಶಾಸನಗಳ ರಚನೆಯ ಬಗ್ಗೆ, ಅದರ ಶ್ರೇಷ್ಠತೆಯ ಬಗ್ಗೆ ಲಕ್ಷಣಗಳನ್ನು ಹೇಳಿದ್ದಾರೆ. ಕ್ರಿ.ಶ.೧೨೦೬ ರ ಒಂದು ಶಾಸನವನ್ನು ಬರೆದ ವಾಮಭಟ್ಟ ಎಂಬ ಶಾಸನಕವಿ.

ಶಾಸನಮಾಗಿರೆ ಪೇಳ್ವುದು ಶಾಸನವಂ ಬರೆವುದಂತೆ ಶಾಸನಮೊಗಲ್ ಲಿಖಿತಂಶಾಸನ ಕಾದಂಬರಿ ವಾಮನ ರಚಿತಂ ಶಾಸನ ಪದ್ಧತಿ ಎಂಬುದಾಗಿ ಹೇಳಿದ್ದಾನೆ.

ಇವನ ಪ್ರಕಾರ ಬರೆವಣಿಗೆಯ ಶೈಲಿಯೇ ಶಾಸನವಾಗುವಂತೆ ಇರಬೇಕು ಅಂದರೆ ಅದು ಜನರ ಮನಸ್ಸಿಗೆ ತಲುಪುವಂತಿರಬೇಕು ಮತ್ತು ಶಾಸನ ಪದ್ದತಿಯನ್ನು ಎಲ್ಲಿಯೂ ಉಲ್ಲಂಘನೆ ಮಾಡಬಾರದು 'ಪ್ರಭುಸಮ್ಮಿತ' ವಾದ ಆಜ್ಞೆಗಳನ್ನೂ 'ಕಾಂತಾಸಮ್ಮಿತಾ' ದಲ್ಲಿ ಹೇಳುವ ಪ್ರಯತ್ನವನ್ನು ಇವರು ಮಾಡಿದ್ದಾರೆ,

"ಉಚಿತ ಪದಾಳಂಕಾರಂ ಪ್ರಚುರ ರಸಂನೆಗಳಿಲಿನ್ತುಜಿನಶಾಸಮಂ
ರಚಿಯಿಸಿದಂ ಹರಹಾಸ ರಚಿತಯಶಂ ದೇವಭದ್ರ ಮುನಿವೋತ್ತಸಂ"

ಎಂಬುದಾಗಿ ಹೇಳಿಕೊಂಡಿದ್ದಾನೆ. ಶಾಸನದಲ್ಲಿ ಬಳಸಬೇಕಾದ ಅಲಂಕಾರಗಳು ಪ್ರತಿಪಾದಿಸಬೇಕಾದ ರಸಗಳು, ಶಾಸನಕ್ಕೆ ಉಚಿತವಾಗಿರಬೇಕಾದುದು ಎಂಬುದೇ ಇವನ ಅಭಿಪ್ರಾಯ ಶಾಸನ ಕವಿಗಳು ತಮ್ಮ ಶಾಸನದ ವಸ್ತುವಿಗೆ ತಕ್ಕ ಭಾಷೆ ಛಂದಸ್ಸು ಶೈಲಿಗಳನ್ನು ಯಶಸ್ವಿಯಾಗಿ ಬಳಸಿದ್ದಾರೆ ಕನ್ನಡ ಕಾವ್ಯಗಳು ಕಾಲಾನುಕ್ರಮದಲ್ಲಿ ತಮ್ಮ ಭಾಷೆ, ಛಂದಸ್ಸು ಮುಂತಾದ ಅಂಶಗಳಲ್ಲಿ ಬದಲಾವಣೆ ಹೊಂದುತ್ತಾಹೋದರೂ ಶಾಸನಗಳು ಮಾತ್ರ ತಮ್ಮ ಚಂಪೂ ಶೈಲಿಗೆ ಅಂಟಿಕೊಂಡವು ಸಂಸ್ಕೃತ ವೃತ್ತಗಳು ಮತ್ತು ಗದ್ಯ ಭಾಗಗಳು ಶಾಸನ ವಿಷಯವನ್ನು ಖಚಿತವಾಗಿ ತಿಳಿಸುವಲ್ಲಿ ಇವರಿಗೆ ನೆರವಾಗಿರಬಹುದು ಎಂಬ ಒಂದು ಕಾರಣವನ್ನು ಕೊಡಬಹುದು ಅಥವಾ ಶಾಸನಗಳ ಮಟ್ಟಿಗಾದರೂ ಚಂಪೂವಿನ ಪ್ರಭಾವ ಉಳಿದೇ ಇತ್ತು ಎಂಬುದಾಗಿ ಭಾವಿಸಬಹುದು. ಕೆಲವಾರು ಶಾಸನ ಕವಿಗಳು ದೇಶಿಯ ಛಂದಸ್ಸನ್ನು ಬಳಸಿದ್ದಾರೆ, ಬಳಸಲೇ ಇಲ್ಲ ಎಂದು ಹೇಳುವುದು ಸತ್ಯಕ್ಕೆ ದೂರವಾದ ಮಾತು.[೭]

ಸ್ಥಳ ಪುರಾಣಗಳನ್ನು ಹೇಳುವ ಮೂಲಕ ತಮ್ಮ ಕಾವ್ಯ ಶಕ್ತಿಗೆ ಅಭಿವ್ಯಕ್ತಿ ನೀಡಿರುವ ಹಲವಾರು ಕವಿಗಳ ನಿದರ್ಶನಗಳು ದೊರೆಯುತ್ತವೆ, ಸೊಗಲ ಕ್ಷೇತ್ರ ಪ್ರರಾಣವನ್ನು ನೀಡುವುದರ

ಮೂಲಕ ಆ ಕ್ಷೇತ್ರ ಮಹಿಮೆಯನ್ನು ತಿಳಿಸುತ್ತಾ ಒಂದು ಶಾಸನ ಅಲ್ಲಿನ ಪ್ರಶಾಂತ ವಾತಾವರಣವನ್ನು ಮನಮುಟ್ಟುವಂತೆ ತಿಳಿಸುತ್ತದೆ, ಸೊಗಲ ಕ್ಷೇತ್ರದಲ್ಲಿನ ವನಗಳಲ್ಲಿದ್ದ ಕೋಗಿಲೆಗಳು.

ಪಾಪಿಪುಗಲು, ಪುಗುಲುಗ್ರದ ಕೋಪಿಪುಗಲ ಶೇಷಧರ್ಮದ್ರೋಪುಗಲ

ವ್ಯಾಪಾರಿ ಪ್ರಗಲ್ದುಗಲೆನ್ದಾ ಪೋರ್ತ್ತುಂ ಕೋಕಿಲಗಳಂಗಳುಲಗುಂ ಬನದೊಳ

ಪಾಪಿಯಾದವನಿಗೆ, ಕೋಪಿಷ್ಟನಿಗೆ, ಧರ್ಮ ದ್ರೋಹಿಯಾದ ವ್ಯಾಪಾರಿಗಳಿಗೆ ಈ ವನದೊಳಕ್ಕೆ ಪ್ರವೇಶವಿಲ್ಲ ಎಂದು ಅವು ಸದಾ ಕಾಲವು ಕೂಗುತ್ತಿದ್ದವಂತೆ.

ಈ ರೀತಿ ಶಾಸನ ಕವಿಗಳು ತಮ್ಮ ಪರಿಮಿತಿಯಲ್ಲಿಯೇ ಔಚಿತ್ಯ ಪೂರ್ಣವಾದ ಮತ್ತು ಸಂದೊರ್ಭೋಚಿತವಾದ ವರ್ಣನೆಗಳಿಗೆ ಅವಕಾಶ ಮಾಡಿಕೊಂಡು ಕಾವ್ಯದಂತೆ ಹದಿನೆಂಟು, ವರ್ಣನೆಗಳನ್ನು ತರಬಯಸಿದರು. ಶಾಸನಗಳಲ್ಲಿ ಸಾಮಾನ್ಯವಾಗಿ ಬರುವ ಸ್ತುತಿ ಪದ್ಯಗಳ ನಂತರ ಸಮುದ್ರ ವರ್ಣನೆಯಿಂದಲೇ ಶಾಸನವನ್ನು ಆರಂಭಮಾಡಿ ಸಂಪ್ರದಾಯದಂತೆ ಭರತ ಕ್ಷೇತ್ರದ ವರ್ಣನೆಯನ್ನು ಮಾಡುತ್ತಿದ್ದರು. ಅನಂತರ ಭರತ ಕ್ಷೇತ್ರದ ದೇಶವನ್ನು ನಾಡನ್ನು ನಾಡಿನ ಊರುಗಳನ್ನು ವರ್ಣಿಸುವ ಪ್ರಯತ್ನ ಮಾಡಿದರು. ಕನ್ನಡ ನಾಡಿನ ಅನೇಕ ಶಾಸನಗಳು ಈ ನಾಡಿನ ನದಿ, ನದ(ಗಂಡು ನದಿ) ,ಕೆರೆ, ಕಾಲುವೆ, ಕುಂಟೆ, ಧಾನ್ಯ ಸಂಪತ್ತು ಹೊಲಗದ್ದೆಗಳನ್ನು ಮುಕ್ತ ಕಂಠದಿಂದ ವರ್ಣಿಸಿವೆ.

ಒಂದು ಶಾಸನ ಬಲ್ಲಕುಂದೆ ನಾಡಿನ ಧ್ಯಾನ್ಯ ಸಂಪತ್ತನನು ಈ ರೀತಿ ವರ್ಣಿಸುತ್ತದೆ:

ಬಳೆದು ಮಡಲ್ತು ಶಾಲಿವನದಿಂ ಬೆಳೆದಾ ಸಮನ್ತುದುಂ ಕುತುಂ

ಗಿಳಿಗಳ ಪಿಣ್ಡಿನಿನ್ದಿಸೆವೆ ಕೆಯ್ವಾಲದಿಂ ಮುಗಿಲುದ್ದವಾಗಿ ಮೂ

ವಳಿಸಿದ ಕೋಟೆಯಂ ಧನದ ಧಾನ್ಯದ ಸೊಮ್ಮಿನ ಸೊಕ್ಕಿನಿಂದಮಾ

ಗ್ಗಳ ದೊರೆ ನಮ್ಮೊಳೆಂಬ ಕುಡಿಯೊಕ್ಕಂಲ ಮಕ್ಕಳನೊರ್ಗ್ಗಳೊಪ್ಪುಗಂ

ಬೆಳೆದು ನಿಂತ ಭತ್ತದ ಗದ್ದೆಗಳಿಂದಲೂ ಹುಲುಸಾಗಿ ಬೆಳೆದು ಬೆಳೆಗಳಿಗೆ ಎರೆಗಿದ್ದ ಗಿಳಿ ಹಿಂಡುಗಳಿಂದ ಕಂಗೊಳಿಸುತ್ತಿರುವ ಹೊಲಗಳಿಂದಲೂ, ಮುಗಿಲೆತ್ತರದ ಭದ್ರವಾದ ಕೋಟೆಯಿಂದಲೂ ಶೋಭಿಸುತ್ತಿದ್ದ ಆ ಬಲ್ಲ ಕುಂದೆಯ ಒಕ್ಕಲು ಮಕ್ಕಳು ಧನ, ಧಾನ್ಯಗಳಿಂದ ಸಂಪದ್ಭರಿತರಾಗಿದ್ದು, ಸಂರಕ್ಷಣೆಗೆ ಭದ್ರವಾದ ಕೋಟೆಯನ್ನು ಹೊಂದಿದ್ದು ನಮಗಾರು ಸರಿ ಎಂದು ಬೀಗುತ್ತಿದ್ದರಂತೆ. ಇದೇ ಬಲ್ಲಕುಂದೆಯ ನಾಡಿನ ಧಾನ್ಯ ಸಂಪತ್ತನ್ನು ವರ್ಣಿಸುತ್ತಾ ಕ್ರಿ.ಶ.೧೧೪೭ ರ ಮತ್ತೊಂದು ಶಾಸನ ಅಲ್ಲಿನ ಜೋಳದ ಬೆಳೆಗಳನ್ನು ಕಾಯುತ್ತಿದ್ದ ಸುಂದರಿಯರ ಚಿತ್ರವನ್ನು

"ಬೆಳೆದು ಪಳಭರವಿನೆರಗಿರ್ದ್ದಳೆ ಜೋಳದ ಕೆಯ್ಗಳಂ ಮನೋಹರಿ ಕಾಂತಾ

ಕುಳಮೆಳಸುವ ಗಿಳಿಸೋವರ್ಬಳಲುಡಮುಡಿ ಬೆನ್ನನಲೆಯೆಥವಳೇ ಕ್ಷಣೆಯರ್"

ಎಂದು ನೀಡುತ್ತಾನೆ. ಬೆಳೆದು ನಿಂತು, ಇನ್ನೂ ಹಾಲು ತೆನೆಯನ್ನೇ ಹೊತ್ತಿರುವ ಜೋಳದ ಬೆಳಗಳಿಗೆ ಗಿಳಿಗಳು ಒಂದು ಎರಗಿದಾಗ ಅವುಗಳನ್ನು ಓಡಿಸಲು ಹೊಲಗಳಲ್ಲಿ ಕವಣೆ ಹಿಡಿದು ಸುಂದರಿಯರಾದ ಯುವತಿಯರು ಕಾಯುತ್ತಿದ್ದರಂತೆ. ಅಂಡಯ್ಯನ ಕಬ್ಬಿಗರ ಕಾವ್ಯದಲ್ಲಿಯೂ ಇದೇ ಬಗೆಯ ವರ್ಣನೆ ಬರುತ್ತದೆ.

ನಾಡಿನ ವರ್ಣನೆಯಾದ ನಂತರ ಆ ಊರಿನ ವರ್ಣನೆಯನ್ನು ಆರಂಭ ಮಾಡುತ್ತಾರೆ, ಆ ಊರಿನ ಎಲ್ಲಾ ಜಾತಿಯ, ಎಲ್ಲ ಧರ್ಮದವರ, ಎಲ್ಲ ವೃತ್ತಿಯವರ ಕೇರಿಗಳನ್ನು ವರ್ಣಿಸುತ್ತಾರೆ. ಒಂದೇ ಶಾಸನದಲ್ಲಿ ವರ್ಣನೆಯನ್ನು ಕಾಣಲಾಗುವುದಿಲ್ಲ. ಪ್ರತಿಯೊಂದು ಶಾಸನವೂ ತನ್ನ ಪರಿಮಿತಿಯಲ್ಲಿ ಆಯಾ ಧರ್ಮದ ವೃತ್ತಿಯ, ಜಾತಿಯ ಕೇರಿಗಳ ವರ್ಣನೆಯನ್ನು ತರುತ್ತದೆ. ಕ್ರಿ.ಶ.೧೧೭೭ ರ ಕೆರಗೋಡಿನ ಒಂದು ಶಾಸನ ಅಲ್ಲಿನ ವ್ಯಾಪಾರಿಗಳ, ಬ್ರಾಹ್ಮಣರ ಕೇರಿಯನ್ನು ವರ್ಣಿಸುವುದಲ್ಲದೆ, ಅಲ್ಲಿಯ ಸೂಳೆಗೇರಿಯ ವರ್ಣನೆಯನ್ನು ಹೊಂದಿದೆ ಈ ವರ್ಣನೆಗಳು ಶಾಸನ ವಿಷಯದ ಅಂಗವಾಗಿ ಬರೆದ ಸಾಹಿತ್ಯಿಕ ಅಂಶವಾಗಿ ಗಮನಿಸಬಹುದು. ಒಂದು ಹೆಣ್ಣನ್ನು ಸೂಳೆ ಎಂದು ಕರೆಯುತ್ತಾರೆ ಅಂದರೆ ಸೂಳಗೇರಿ ಎಂದರೆ ಅಲ್ಲಿ ಎಷ್ಟು ಜನ ಇದ್ದರು ಎಂದು ಅರ್ಥೈಸಿಕೊಳ್ಳಬಹುದು.

ಶಾಸನವನ್ನು ಬರೆಯುತ್ತಿದ್ದವರು ಸಾಹಿತ್ಯಾಭ್ಯಾಸಿಗಳೇ ಆಗಿರುತ್ತಿದ್ದರು. ತಾವು ತುಂಬಾ ಮೆಚ್ಚಿಕೊಂಡ ಕೆಲವು ಪದ್ಯಗಳನ್ನು ತಮ್ಮ ಶಾಸನಗಳಲ್ಲಿ ತರುವ ಪ್ರಯತ್ನ ಮಾಡುತ್ತಿದ್ದರು. ಕೆಲವೊಮ್ಮೆ ಕೆಲವು ಪದ್ಯಗಳಿಂದ ಪ್ರಭಾವಿತರಾಗಿ ಹಿಂದಿನ ಕವಿಗಳ ಪದ್ಯಗಳ ವೈಖರಿಯನ್ನು ಅನುಸರಿಸಿರುವುದೂ ಉಂಟು.

ಬೇರೆ ಬೇರೆಯ ಕಾವ್ಯಗಳಿಂದ ಪದ್ಯಗಳನ್ನು ಸ್ವೀಕರಿಸಿರುವ ಹಲವಾರು ನಿದರ್ಶನಗಳು ದೊರೆಯುತ್ತವೆ. ಶ್ರೀ ಎಂ.ಎಂ. ಕಲುಬುರ್ಗಿಯವರು ಬಳ್ಳಾರಿ ಜಿಲ್ಲೆಯ ಬೆಣ್ಣಕಲ್ಲು, ಮಗಲ, ಸೋಗಿ ಗ್ರಾಮಗಳ ಶಾಸನಗಳು ಮತ್ತು ಹಾಸನ ಜಿಲ್ಲೆಯ ಶಿವರದ ಗ್ರಾಮದ ಶಾಸನಗಳಲ್ಲಿ ಪಂಪಪೂರ್ವ ಯುಗದ ಕವಿಗಳಲ್ಲಿ ಒಬ್ಬನಾದ ಗುಣವರ್ಮನ ಪದ್ಯಗಳನ್ನು ಗುರುತಿಸಿದ್ದಾರೆ. ಶ್ರೀ ಪರಬ್ರಹ್ಮ ಶಾಸ್ತ್ರಿಗಳು ಮತ್ತು ಎಂ,ಎಂ, ಕಲುಬುರ್ಗಿಯವರು ಕರೀಂ ಪ್ರಥಮಾಶ್ವಾಸದ ಐದು ಕಂದ ಪದ್ಯಗಳನ್ನು ಗುರಿತಿಸಿದ್ದಾರೆ, ಆದಿಪುರಾಣದಿಂದ ತೆಗೆದುಕೊಂಡು ಬಳಸಿಕೊಂಡಿರುವ

ಶಾಸನವೊಂದು ಹಾಸನ ಜಿಲ್ಲೆಯಲ್ಲಿ ದೊರೆಯುತ್ತದೆ, ಹಾಗೆಯೇ ರನ್ನನ ಅಜಿತಪುರಣದ ಕೆಲವು ಪದ್ಯಗಳು ಲಕ್ಕುಂಡಿಯ ಶಾಸನವೊಂದರಲ್ಲಿ ದೊರೆಯುತ್ತದೆ. ಈ ಶಾಸನವನ್ನು ರನ್ನನ್ನೇ ಬರೆದಿರಬಹುದು ಎಂಬ ಸಂಶಯ ಹಲವಾರು ವಿದ್ವಾಂಸರಲ್ಲಿದೆ ಅದರೆ ಚರ್ಚೆ ಇಲ್ಲಿ ಅಪ್ರಸ್ತುತ. ಜೈನ ಸಂಪ್ರದಾಯದ ರಾಮಾಯಣವನ್ನು ಬರೆದ ನಾಗಚಂದ್ರನ ರಾಮಚಂದ್ರಚರಿತ ಪುರಾಣದಿಂದ ಆಯ್ಕೆ ಮಾಡಿಕೊಂಡ ಪದ್ಯಗಳನ್ನುಳ್ಳ ಶಾಸನಗಳು ವಿಜಾಪುರ ಮತ್ತು ಶ್ರವಣಬೆಳಗೊಳಗಳಲ್ಲಿ ನಮಗೆ ದೊರೆಯುತ್ತವೆ. ಯಾವುದೇ ಒಂದು ಕಾವ್ಯದಲ್ಲಿ ಒಬ್ಬ ಕವಿ ಯಾವುದಾದರೂ ಒಂದು ರಾಜ ವಂಶಾವಳಿಯನ್ನು ಸಮರ್ಥವಾಗಿ ನಿರೂಪಿಸಿದ್ದರೆ, ಅಥವಾ ಯಾವುದೇ ವ್ಯಕ್ತಿಯ ಸುಂದರ ವ್ಯಕ್ತಿ ಚಿತ್ರವನ್ನು ನೀಡಿದ್ದರೆ ಅಥವಾ ಮಹತ್ತರವಾದ ಭಾವನೆಯನ್ನು ಒಡಮೂಡಿಸಿದ್ದರೆ ಅದರ ಸಾಹಿತ್ಯಿಕ ಸೌಂದರ್ಯಕ್ಕೆ, ಸಂಕ್ಷಿಪ್ತತೆಗೆ ಮಾರುಹೋದ ಶಾಸನಕಾರರು ಆ ಪದ್ಯಗಳನ್ನು ಹಾಗೆಯೇ ತಮ್ಮ ಶಾಸನಗಳಲ್ಲಿ ಸೇರಿಸಿಕೊಳ್ಳುತ್ತಿದ್ದರು. ಈ ದಾಖಲೆಗಳು ನಮಗೆ ಕವಿಯ ಕಾಲವನ್ನು ನಿಷ್ಕರ್ಷೆ ಮಾಡುವಲ್ಲಿ ಕೆಲಮಟ್ಟಿಗೆ ಪಾಠವನ್ನು ತಿದ್ದುವಲ್ಲಿ ಸಹಾಯವಾಗುತ್ತದೆ, ಇದಕ್ಕಿಂತಲೂ ಮಿಗಿಲಾಗಿ ಕಾವ್ಯಗಳು ಎಷ್ಟರ ಮಟ್ಟಿಗೆ ತಮ್ಮ ಪ್ರಭಾವವನ್ನು ಬೀರಿದ್ದವು ಎಂಬ ಅಂಶವೂ ವ್ಯಕ್ತವಾಗುತ್ತದೆ.[೮]

ಚತುರನೆಂದು ಮಂಡ್ಯ ಜಿಲ್ಲೆಯಲ್ಲಿ ದೊರೆಯುವ ಅನೇಕ ಶಾಸನಗಳನ್ನು ಬರೆದವರ, ಕೆತ್ತಿದವರ, ಕೆತ್ತಿಸಿದವರ ಹೆಸರುಗಳು ದೊರೆಯುತ್ತವೆ. ಉದಾಹರಣೆಗೆ ಜನ್ನ ಕವಿಯ ಹೆಂಡತಿ ಲಕುಮಾದೇವಿಗೆ ಗುರುವಾಗಿದ್ದ. ಬಾಳಚಂದ್ರ ಕವಿಕಂದರ್ಪ ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕು ತಿಪ್ಪೂರಿನವರೆಂದು ಸಂಶೋದನೆಗಳಿಂದ ತಿಳಿಯುತ್ತದೆ. ಇಂತಹ ಅನೇಕ ಶಾಸನ ಕವಿಗಳನ್ನು ಮಂಡ್ಯ ಜಿಲ್ಲೆಯಲ್ಲಿ ಕಾಣಬಹುದಾಗಿದೆ, ನಾಗಮಂಗಲ ತಾಲ್ಲೂಕು ಬಾಳನ ಕೆರೆಯ ಶಾಸನ ಬರೆದ ಸಾಂತ ಮಹಂತ ಶೈವ ಕವಿಯಾಗಿದ್ದ, ಈತ ಸೋವಿಯಕ್ಕನ ಮಗಸತ್ಕವಿ ಎಂದು ವರ್ಣಿತನಾಗಿದ್ದಾನೆ, ಇದೇ ತಾಲ್ಲೂಕಿನ ಎಲೆಕೊಪ್ಪದ ಶಾಸನ ಬಿಂಡಯ್ಯನೆಂಬ ಶಾಸನ ಕವಿಯನ್ನು ಉಲ್ಲೇಖಿಸುತ್ತದೆ. ಬಸರಾಳಿನ ಶಾಸನ ಬರೆದ ಕವಿ ಚಿದಾನಂದನನು ಸೂಕ್ತಿ ಸುಧಾರ್ಣವ ರಚಿಸಿದ ಮಲ್ಲಿಕಾರ್ಜುನನ ಮಗನೆಂದು ಹೇಳಲಾಗಿದೆ. ಹೀಗೆಯೇ ಬ್ರಹ್ಮದೇವ, ಅಲ್ಲಾಳದೇವ ಹೀಗೆ ಹೆಸರುಗಳು ದೊರೆಯುತ್ತವೆ, ಈ ಕವಿಗಳು ರಚಿಸಿರುವ ಶಾಸನಗಳ ಬಂಧವನ್ನು ಗಮನಿಸಿದಾಗ ಇವರಲ್ಲಿ ಕನ್ನಡದಲ್ಲಿ ಉದ್ದಾಮ ಪಂಡಿತರಷ್ಟೆ ಅಲ್ಲ ಸಮರ್ಥಕಾವ್ಯ ರಚನಾ ಶಕ್ತಿಯನ್ನು ಹೊಂದಿದ್ದವರು ಎಂದು ತಿಳಿದು ಬರುತ್ತದೆ.

ಕೆಂಪಣ್ಣಗೌಡ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕು ಅಂದೇನಹಳ್ಳಿಯವನು. ಈತ ಮೂರು ಯಕ್ಷಗಾನ ಕಾವ್ಯಗಳನ್ನು ರಚಿಸಿದ್ದಾನೆ, ಕರಿರಾಯ ಚರಿತ್ರೆ, ನಳಚರಿತ್ರೆ ಶನಿಚರಿತ್ರೆ ಎಂಬೀ

ಮೂರು ಕಾವ್ಯಗಳು ಕನ್ನಡ ನಾಡಿನಲ್ಲಿ ಅತ್ಯಂತ ಜನಪ್ರಿಯ ಕಾವ್ಯಗಳಾಗಿರುವುದು ಕಂಡುಬರುತ್ತದೆ. ಈತ ತನ್ನ ತಂದೆ ತಾಯಿಯರ ಬಗ್ಗೆ ವಿವರವಾಗಿ ಕೆಳಗಿನ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ.

ಸವುಭಾಗ್ಯ ಸಕಲ ಗುಣ ಸಂಪನ್ನ
ಸಂವಿವೇಕಿ ಕೆಂಪಯ್ಯನಾತಾನರ್ಧಾಂಗಿ
ಲಲನಾರತನಮೆಂಬ ತಿಮ್ಮಮಾಂಬಿ
ಸಲೆಗಭಾಬ್ಧಿಚಂದ್ರನೆರೆಜಾಣ
ಸುವಿವೇಕಿ ಕೆಂಪಣ್ಣಗೌಡನೀಕತೆಂ
ಸವಿವರದೊಳಂ ಪೇಳಿದನು

ಕ್ರಿ.ಶ.೫೪೦ ರಿಂದ ೬೦೦ ರವರಿಗೆ ಆಳಿದ ಗಂಗದೊರೆಯಾದ ದುರ್ವಿನೀತನೆ ಈ ಪ್ರದೇಶದ ಮೊದಲನೆಯ ಕವಿ ಹಾಗೂ ಕವಿ ಜನಾಶ್ರಿತನೆಂದು ಹೇಳಬಹುದು. ಈತ ಗಂಗದೊರೆ ಅವನೀತನ ಮಗ ತನ್ನ ಯೌವನದ ದಿನಗಳಲ್ಲಿ ಈತ ಚಿಕ್ಕಗಂಗವಾಡಿಯಿಂದ ಆಡಳಿತ ನಡೆಸುತ್ತಿದ್ದ ದುರ್ವಿನೀತನು ಮಂತ್ರಾಲೋಚನ ನಿಪುಣ ಕಾವ್ಯಲಾಸಚತುರ ಎಂದು ವರ್ಣಿತನಾಗಿದ್ದಾನೆ, ಕಿರಾತಾರ್ಜುನ ನೀರಿಮದ ಕವಿ ಬಾರವಿ ಈತನ ಆಶ್ರಯದಲ್ಲಿದ್ದನೆಂದು ಆಧಾರಗಳಿಂದ ತಿಳಿದುಬರುತ್ತದೆ, ದುರ್ವಿನೀತ ಶಬ್ದಾವತಾರ ಎಂಬ ವ್ಯಾಕರಣ ಗ್ರಂಥವನ್ನು ಬರೆದಿದ್ದಾನೆ. ಈತ ಕನ್ನಡ ಸಂಸ್ಕೃತಗಳೆರಡರಲ್ಲೂ ಅಪಾರ ವಿದ್ವತ್ತನ್ನು ಸಂಪಾದಿಸಿದವನಾಗಿದ್ದು ಪೈಶಾಚಿ ಭಾಷೆಯ ಬೃಹತ್ಕತೆಯನ್ನು ಸಂಸ್ಕೃತಭಾಷೆಗೆ ಅನುವಾದಿಸಿದನೆಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ, ದುರ್ವಿನೀತನು ಅಸಮಾನಶೂರ ಮತ್ತು ಕಾವ್ಯ ರಚನಾಚತುರನೆಂದು ಹೆಸರು ಪಡೆದಿದ್ದಾನೆ.[೭]

ಈತನು ೧೫ ನೆಯ ಶತಮಾನಕ್ಕಿಂತಲೂ ಹಿಂದಿನವನೆಂದು ತಿಳಿದುಬರುತ್ತದೆ. ಈತನ ಕರಿರಾಯ ಚರಿತ್ರೆ ಕಾವ್ಯವನ್ನು ಪ್ರತಿಮಾಡಿದವನೊಬ್ಬ. ದುರ್ವತಿ ಸಂವತ್ಸರದ ಜೇಷ್ಠ ಬಹಳ ಬುಧವಾರದ ಮಧ್ಯಾಹ್ನದ ವೇಳೆಗೆ ಸಂಪೂರ್ಣ ಎಂದರೆ ಬರೆದು ಮುಗಿಯಿತು. ಎಂದು ಹೇಳಿದ್ದಾನೆ. ಇದು ೧೪೪೦ಕ್ಕೆ ಸರಿ ಹೊಂದುತ್ತದೆ. ಇದರಿಂದ ಕೆಂಪಣ್ಣಗೌಡ ೧೪೪೦ ರ ಹೊತ್ತಿಗೆ ತನ್ನ ಕಾವ್ಯಗಳಿಂದಾಗಿ ಪ್ರಸಿದ್ದನಾಗಿದ್ದ ಎನಿಸುತ್ತದೆ. ಆದರೆ ಎಷ್ಟು ಹಿಂದಿನವರು ಎಂದು ಹೇಳುವುದು ಕಷ್ಟ ಸಂಪೂರ್ಣ ಎಂಬುದು ಕಾವ್ಯ ಮುಗಿದ ಕಾಲದ ಸೂಚನೆ ಎಂಬ ಅಭಿಪ್ರಾಯವೂ ಇದೆ. ಕಾವ್ಯ ಮುಗಿದ ಕಾಲ ಎಂದು ಪರಿಗಣಿಸಿದರೆ ೧೪೪೦ ರ ಹಿಂದೆ ಈ ಕವಿ ಇದ್ದನೆಂದು ಹೇಳಬೇಕಾಗುತ್ತದೆ.

[illegible]

ಕರಿರಾಯಚರಿತ್ರೆ ಕೆಂಪಣ್ಣಗೌಡನ ಮೊದಲನೆಯ ಕಾವ್ಯ. ಇದು ಕನ್ನಡ ನಾಡಿನಲ್ಲಷ್ಟೇ ಅಲ್ಲ ತಮಿಳುನಾಡು, ಆಂಧ್ರಪ್ರದೇಶ, ಮಹಾರಾಷ್ಟ್ರ ಭಾಷೆಗಳಲ್ಲಿಯೂ ಕರಿಬಂಟನ ಕಾಳಗ ಯಕ್ಷಗಾನ ಪ್ರಸಂಗವಾಗಿ ಅಪಾರ ಜನಪ್ರಿಯತೆ ಪಡೆದುಕೊಂಡಿದೆ. ಈ ಎಲ್ಲಾ ಭಾಷೆಗಳಲ್ಲಿಯೂ ಕೆಂಪಣ್ಣಗೌಡನ ಮೂಲಕಾವ್ಯ ನಡೆಯುವ ಕ್ಷೇತ್ರಗಳಾದ ಗೌತಮಕ್ಷೇತ್ರ, ಧಾರಾಪುರ, ತೊಣ್ಣೂರುಗಳೇ ಇರುವುದು ಮುಖ್ಯ ವಿಷಯವಾಗಿದೆ.ಧಾರಾಪುರದ ರಾಜ ಕರಿರಾಯ ಹಳೆಯಬೀಡಿನ ಬಲ್ಲಾಳ ರಾಜನ ಮಗಳು ಧರಣಿ ಮೋಹಿನಿಯ ಸ್ವಯಂವರಕ್ಕೆ ಹೊರಟವನು.ಕಾವೇರಿ ಲೋಕಪಾವನಿ ನದಿಗಳ ಸಂಗಮ,ಗೌತಮ ಕ್ಷೇತ್ರದಲ್ಲಿ ತೊಣ್ಣೂರಿನ ಉದ್ದಂಡ ದಕ್ಕಸಿಯ ಮಗಳು ಪುಂಡರೀಕಾಕ್ಷಿಯನ್ನು ಕಂಡು ಪ್ರೇಮಿಸಿದ ಉದ್ದಂಡರಕ್ಕಸಿ ಆಕೆಯನ್ನು ತನ್ನ ತಮ್ಮನಿಗೆ ಕೊಟ್ಟು ಮದುವೆ ಮಾಡಿ ತನ್ನ ಉತ್ತರಾಧಿಕಾರಿಯಾಗಿ ಮಾಡಿಕೊಳ್ಳಲು ಉದ್ದೇಶಿಸಿದ್ದುದರಿಂದ ಈ ಪ್ರೇಮವನ್ನು ವಿರೋದಿಸಿದಳು. ಕರಿರಾಯಚರಿತ್ರೆ ಗಂಗವಂಶದಲ್ಲಿ ನಡೆದ ಒಂದು ದುರಂತ ಪ್ರಣಯ ಪ್ರಸಂಗ ಎಂಬ ಅಭಿಪ್ರಾಯವೂ ಇದೆ.ಕಡೆಗೆ ಈಶ್ವರ ಕೃಪೆಯಿಂದ ಕಥೆ ಸುಖಾಂತವಾಗಿ ಮುಕ್ತಾಯವಾಗುತ್ತದೆ.

ನಳ ಚರಿತ್ರೆಯ ಕಥೆ ಹಳೆಯದಾದರೂ ಕೆಂಪಣ್ಣಗೌಡ ಅನೇಕ ಬದಲಾವಣೆ ಮಾಡಿಕೊಂಡಿದ್ದಾನೆ.ಈ ವರೆಗೆ ವಿಕಾರ ಮನಸ್ಸು ಮತ್ತು ರೂಪಗಳಲ್ಲಿ ಚಿತ್ರಿತವಾಗುತ್ತಿದ್ದ ಕಲಿಪುರುಷನಿಗೆ ಹೊಸ ರೂಪ ಮತ್ತು ಶಕ್ತಿಯನ್ನಿತ್ತು. ಶನಿಮಹಾತ್ಮ ಎಂದು ಕರೆದ ಕೀರ್ತಿ ಕೆಂಪಣ್ಣಗೌಡನದು. ಅನೂಚಾನವಾಗಿ ಬಂದಿರುವ ನಳನ ಕಥೆಯನ್ನು ಒಂದು ವಿಚಾರಪರವೂ, ಜನಪರವೂ, ಆದ ಕಾವ್ಯವನ್ನಾಗಿ ಪರಿವರ್ತಿಸಲಾಗಿದೆ. ಭೀಮರಾಯ ಮಕ್ಕಳನ್ನು ಪಡೆಯಲು ತಪಸ್ಸು ಮಾಡುವ ಸಂಧರ್ಭವಾಗಲೀ, ದಮಯಂತಿ ನಳರ ನಡುವೆ ರಾಯಭಾರ ಮಾಡುವ ಹಂಸದ ಸಂದರ್ಭವಾಗಲಿ, ವಿಕಾರ ರೂಪಿನ ನಳನನ್ನು ಗುರುತಿಸುವ ಸಂದರ್ಭದಲ್ಲಾಗಲೀ ಕವಿ ಪವಾಡಗಳಿಗೆ ಮೊರೆಹೋಗದೆ, ವಾಸ್ತವತೆಯನ್ನು ಮೆರೆದಿದ್ದಾನೆ.

ತಾನೇ ಮೊದಲ ಬಾರಿಗೆ 'ಶನಿಮಹಾತ್ಮೆ' ಎಂದು ಕರೆದು ಪುನರ್ಜನ್ಮ ನೀಡಿದ್ದ ಕೆಂಪಣ್ಣಗೌಡ ಅದನ್ನು ಪುಷ್ಟೀಕರಿಸಲು ಶನಿಚರಿತ್ರೆಯನ್ನು ಬರೆದಿದ್ದಾನೆ.

ಹರನಕರುಣೆಯಿಂದ ಕರಿರಾಯಚರಿತೆಯನು
ಹರಿಯ ಭಕ್ತಿಗೆ ಸೋತು ನಳರಾಜನ ಕಥೆಯ
ಘನಮಹಿಮೆ ಶನಿರಾಜನ ಕಥೆಯ ಮೊರೆದನು.
ಮನುಜರು ತಾವು ಭಜಿಸಿ ಮುಕ್ತಿಪರೆಯಲೆನುತ

[illegible]

[illegible]

[illegible]

ಶನಿಯನ್ನು ಜನಪರವಾದ ಅದರಲ್ಲೂ ಜನಸಾಮಾನ್ಯರ ಪರವಾದ ದೇವತೆಯನ್ನಾಗಿ ಕವಿ ಕಂಡರಿಸಿದ್ದಾನೆ. ಶನಿಯ ಕೋಪಕ್ಕೆ ಒಳಗಾದ ಉಜ್ಜನಿಯ ವಿಕ್ರಮರಾಯ ತನ್ನ ಕೈಕಾಲು ಕಳೆದುಕೊಂಡು ಬವಣೆಪಟ್ಟು ಧೃತಿಗೆಡದೆ ಶನಿಯ ಕೃಪೆಗೆ ಪಾತ್ರವಾದುದು. ಈ ಕಾವ್ಯದ ಕಥಾ ವಸ್ತು ಕನ್ನಡದಲ್ಲಿ ಇದಕ್ಕಿಂತಲೂ ಹಿಂದೆ ಶನಿಯ ಬಗ್ಗೆ ಯಾವುದೇ ಕಾವ್ಯ ದೊರೆಯುವುದಿಲ್ಲವಾದ್ದುದರಿಂದ ಕೆಂಪಣ್ಣಗೌಡನ ಶನಿಕಥೆಯನ್ನು ಕಾವ್ಯವಾಗಿ ರಚಿಸಿದ ಮೊದಲ ಕವಿ ಎಂಬ ವಿದ್ವಾಂಸರ ಅಭಿಪ್ರಾಯ ಸರಿಯಾದ್ದುದಾಗಿದೆ. ವಿಕ್ರಮನ ಭಕ್ತಿಗೆ ಮೆಚ್ಚಿದ ಶನಿ ಏನು ಬೇಕಾದರೂ, ವರ ಕೇಳು, ಕೊಡುತ್ತೇನೆ ಎಂದಾಗಲೂ ವಿಕ್ರಮ ಕೇಳಿದ್ದು ಜನ ಸಾಮಾನ್ಯರಿಗೆ ನನಗೆ ಕೊಟ್ಟಂಥ ತೊಂದರೆ ಕೊಡಬೇಡ ಎಂದು ಕೆಂಪಣ್ಣಗೌಡ ಮಂಡ್ಯ ಜಿಲ್ಲೆಯ ಅತ್ಯಂತ ಪ್ರಾಚೀನನೂ, ಪ್ರಮುಖನೂ ಆದ ಕವಿ ಎಂಬುವುದರಲ್ಲಿ ಸಂಶಯವಿಲ್ಲ.

ಕಂಠೀರವ ನರಸರಾಜವಿಜಯವನ್ನು ಬರೆದ ಭಾರತೀನಂಜ ಮಂಡ್ಯ ಜಿಲ್ಲೆಯ ಮತ್ತೊಬ್ಬ ಪ್ರಾಚೀನಕವಿ.ಈತ ಕಂಠೀರವನರಸರಾಜನ ಆಸ್ಥಾನ ಕವಿಯಾಗಿದ್ದವನು. ರಣಧೀರಕಂಠೀರವನೆಂದು ಪ್ರಸಿದ್ದವಾದ ಈ ದೊರೆ ೧೬೩೮ ರಿಂದ ೧೬೫೯ ರವರೆಗೆ ಆಳಿದವನು.ತನ್ನ ತಾಯಿಯ ತಮ್ಮಂದಿರು ತನ್ನ ಸೋದರ ಮಾವಂದಿರೂ ಆದ ನಂಜರಾಜ. ಲಿಂಗರಾಜ ಅವರನ್ನೆಲ್ಲಾ ವಿವಿಧ ಹುದ್ದೆಗಳಿಗೆ ನೇಮಿಸಿಕೊಂಡನು. ನಂಜರಾಜ ದಳಪತಿಯಾಗಿಯೂ, ಲಿಂಗರಾಜನು ಅರಮನೆ ಅಧಿಕಾರಿಯಾಗಿಯೂ, ಲಿಂಗೇಗೌಡ ಪಟ್ಟಣದ ಅಧಿಕಾರಿಯಾಗಿಯೂ, ಭಾರತೀನಂಜ ಆಸ್ಥಾನ ಕವಿಯಾಗಿಯೂ, ನೇಮಕವಾದರು.

ಕಾವ್ಯ ಸಂಪ್ರದಾಯದಂತೆ ಕವಿ ತನ್ನ ಸ್ವವಿಷಯಗಳನ್ನು ಕಾವ್ಯದ ಪೀಠಿಕಾ ಸಂಧಿಯಲ್ಲಿ ಹೇಳಿಕೊಳ್ಳುತ್ತಾನೆ, ಕಂಠೀರವ ನರಸರಾಜ ವಿಜಯದಲ್ಲಿ.

ಪೊಡವಿಡನ ದಳಪತಿ ನಂಜರಾಜೇಂದ್ರತ
ನ್ನೊಡೆಯನ ಕಾರ್ಯದೇಳಿಗೆಯ
ಗಡಣವ ಚರಿತೆಯಾಗೊಲಿದು ಪೇಳಿಸಿದನು
ಕಡುಗಲಿಗಳು ಲಾಲಿಪುದ
ತರುಣ ಜನನೇತ್ರೂತ್ಪಲ ಚಂದ್ರನ
ಸರಸ ಕಾವ್ಯ ವಿಶಾರಾದನೆ
ದೊರೆರಾಯನರಸ ರಾಜೇಂದ್ರನ ಚರಿತೆಯ
ನೊರೆದ ಭಾರತೀನಂಜನೊಲಿದು

ಎಂದು ಕವಿ ಹೇಳಿಕೊಂಡಿದ್ದಾನೆ. ಇದರಿಂದ ದಳಪತಿ ನಂಜರಾಜನ ಅಪೇಕ್ಷೆಯಂತೆ ಆಸ್ಥಾನ ಕವಿ ಭಾರತೀನಂಜ ಈ ಕಾವ್ಯವನ್ನು ರಚಿಸಿದ್ದನೆಂಬುದು ಸ್ಪಷ್ಟವಾಗುತ್ತದೆ. ಇತ್ತೀಚಿನವರೆಗೆ ಈ ಕಾವ್ಯ ರಚಿಸಿದವನು ಗೋವಿಂದ ವೈದ್ಯನೆಂದು ತಪ್ಪು ತಿಳಿಯಲಾಗಿತ್ತು. ಈಗ ಗೋವಿಂದ ವೈದ್ಯ ಈ ಕಾವ್ಯವನ್ನು ಪ್ರತಿ ಮಾಡಿದ ಪ್ರತಿಕಾರನೆಂದು ಕಾವ್ಯದ ಕರ್ತೃ ಭಾರತೀನಂಜನೆಂಬುದು ನಿಸ್ಸಂಶಯವಾಗಿ ತೀರ್ಮಾನವಾಗಿದೆ.

ಭಾರತೀನಂಜನ ವಂಶದವರು ತಲಕಾಡಿನವರು ಅಲ್ಲಿನ ಅರಮನೆಯಲ್ಲಿ ಕಾವ್ಯ ವಾಚನ ವಿಶೇಷವಾಗಿ ಭಾರತವಾಚನಾ ಮಾಡುತ್ತಿದ್ದವರು ಮುಂದೆ ವಿಜಯನಗರ ಅರಸ ಕಾಲದಲ್ಲಿ ಶ್ರೀರಂಗಪಟ್ಟಣ ಆಡಳಿತ ಕೇಂದ್ರವಾಯಿತು. ತಲಕಾಡು ಮಹತ್ವ ಕಳೆದುಕೊಂಡಿತು. ಈ ಕಾರಣದಿಂದಾಗಿ ಭಾರತೀನಂಜನ ವಂಶದವರು ಶ್ರೀರಂಗಪಟ್ಟಣಕ್ಕೆ ಬಂದು ನೆಲೆಸಿದರು. ಈ ವಂಶದವರು ಈಗಲೂ ಇದ್ದು ಅವರು ಭಾರತ ಓದುವುದರಲ್ಲಿ ಪರಿಣಿತರಾಗಿದ್ದಾರೆ. ಎಂದು ಶ್ರೀ,ಹ,ಕ ರಾಜೇಗೌಡರು ಹೇಳಿದ್ದಾರೆ.ಏನೇ ಇರಲಿ ಭಾರತಿನಂಜ ಕಾವ್ಯ ರಚನೆ ವಾಚನಾ ಮತ್ತು ಸಂಗೀತದಲ್ಲಿ ಪರಿಣಿತನಾಗಿದ್ದನೆಂಬುದು ಕಂಠೀರವನರಸರಾಜವಿಜಯ ಓದಿದ ಯಾರಿಗಾದರೂ ಮನವರಿಕೆಯಾಗುತ್ತದೆ.

ಭೈರವೇಶ್ವರ ಕಾವ್ಯವನ್ನು ಬರೆದ ಕವಿ ನಂಜುಂಡ, ಮಂಡ್ಯಜಿಲ್ಲೆ ಕೃಷ್ಣರಾಜಪೇಟೆ, ತಾಲ್ಲೂಕು, ಕಿಕ್ಕೇರಿಯವನು. ಈತನ ಕಾಲ ಕ್ರಿ.ಶ ೧೫೫೦, ಎಂದು ಕವಿಚರಿತೆಕಾರರು ಅಭಿಪ್ರಾಯ ಪಟ್ಟಿದ್ದಾರೆ. ಈ ವಸ್ತುವನ್ನು ಇಟ್ಟುಕೊಂಡು ಉತ್ತರ ದೇಶದ ಬಸವಲಿಂಗನು ಭೈರವೇಶ್ವರ ಪುರಾಣದ ಕಥಾಸಾಗರ ಎಂಬ ಕಾವ್ಯವನ್ನು ಸಿದ್ದಲಿಂಗಶಿವಯೋಗಿಯ ಭೈರವೇಶ್ವರ ಪುರಾಣವನ್ನು ಶಾಂತಲಿಂಗದೇಶಿಕನು ಬೈರವೇಶ್ವರ ಕಾವ್ಯ ಕಥಾಮಣಿ ಸೂತ್ರರತ್ನಾಕರವನ್ನು ಬರೆದಿದ್ದಾರೆ. ಈ ಮೂರು ಕಾವ್ಯಗಳಿಗೆ ನಂಜುಂಡ ಕವಿಯ ಭೈರವೇಶ್ವರ ಕಾವ್ಯವೇ ಆಧಾರ ಮತ್ತು ಮೂಲ ಎಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ನಂಜುಂಡ ಕವಿಯ ತಂದೆ ತಾಯಿ ಬಂಧು ಬಳಗ, ಆಶ್ರಿತರು ಮುಂತಾದ ವಿವರಗಳು ದೊರೆಯುವುದಿಲ್ಲ ಈತ ಆರಾಧ್ಯನೆಂಬುದು ಮಾತ್ರ ತಿಳಿಯುತ್ತದೆ. "ಗುರುಸೋಮನಾಥ ಬಂದೊರೆದನೆನ್ನ ಸ್ವಪ್ನದೊಳ್", ಎಂದು ಹೇಳಿರುವುದರಿಂದ ಈತ ಸಾಸಲಿನ ಸೋಮೇಶ್ವರ ಭಕ್ತನೆಂದು ತೋರುತ್ತದೆ.

ನಂಜುಂಡ ಕವಿ ಮೇವೂರಿನ ದೊರೆ ಶಿವಭಕ್ತ ಭೈರವ ಜೀವನವನ್ನು ರಾಜನ ಜೀವನವನ್ನು ತನ್ನ ಕಾವ್ಯದ ವಸ್ತುವಾಗಿ ಮಾಡಿಕೊಂಡಿದ್ದಾನೆ. ಒಮ್ಮೆ ತನ್ನ ಆಸ್ಥಾನ ಪಂಡಿತನು ಕುರಿತು ದಾನ, ಶೀಲ ಮತ್ತು ಸತ್ಯದಿಂದ ಕೀರ್ತಿಗಳಿಸಿದ ದೊರೆಗಳು ಯಾರು ಎಂದು ಕೇಳಿದನು. ಪಂಡಿತರು

ಹರಿಶ್ಚಂದ್ರ ನಳಚಕ್ರವರ್ತಿ, ಕರ್ಣ ಮುಂತಾದವರ ಕಥೆಗಳನ್ನು ಹೇಳಿದರು. ಅನಂತರ ಶಿವಶರಣರ ಕಥೆಗಳನ್ನು ಹೇಳಿದರು. ಇದರಿಂದ ಭವದ ಬಗ್ಗದೆ ವಿರಕ್ತಿ ಹೊಂದಿದ ಭೈರವರಾಜ ಭಕ್ತನಾಗಲು ಹಂಬಲಿಸುತ್ತಿದ್ದನು. ಹೀಗಿರುವಲ್ಲಿ ಒಮ್ಮೆ ಅವನ ಆರಾಧ್ಯ ದೈವ ಸೋಮನಾಥ ಕನಸಿನಲ್ಲಿ ಬಂದು " ನೀನು ಮಲ್ಲ ಪಟ್ಟಣಕ್ಕೆ ಹೋಗು ಇದು ಗುರುಕೃಪೆಯೊದಗುವುದು ಅಲ್ಲಿಂದ ಸಾಸಲಿಗೆ ಬಾ ನಿನ್ನನ್ನು ಕೈಲಾಸಕ್ಕೆ ಕರೆದೊಯ್ಯುವನು"ಎಂದು ಹೇಳಿದ ಭೈರವರಾಜ ಅದರಂತಯೆ ನಡೆದುಕೊಂಡನು. ಸಾಸಲಿನಲ್ಲಿ ಜಕ್ಕಣಾಚಾರ್ಯನಿಂದ ಸೋಮೇಶ್ವರ ದೇವಾಲಯ ಮಾಡಿಸಿದನೆಂಬ ಅಭಿಪ್ರಾಯವೂ ಇದೆ. ಇಲ್ಲಿ ಅನೇಕ ಕಾಲ ದಾಸೋಹ ಮಾಡಿಕೊಂಡಿದ್ದನು. ಸೋಮೇಶ್ವರನು ಇವನನ್ನು ಪರೀಕ್ಷಿಸಲು ಅಭರಣಗಳೊಂದಿಗೆ ಸರ್ಪವನ್ನು ಕಳಿಸಿದನು. ಅದು ಇವನ ಬೆರಳನ್ನು ಕಚ್ಚಿತು. ಅದಕ್ಕೆ ಹಸಿವಾಗಿರಬಹುದು ರಕ್ತ ಕುಡಿಯಲಿ ಎಂದು ಭೈರವರಾಜ ಸುಮ್ಮನೆ ನಿಂತನು ಕಡೆಗೆ ಸರ್ಪಸತ್ತೇ ಹೋಯಿತು. ಅನಂತರ ಭೈರವನು ಅದರ ಮೈದಡವಿದ್ದಾಗ ಅದಕ್ಕೆ ಜೀವ ಬಂದಿತು ಅನೇಕ ರೀತಿಯ ಪರೀಕ್ಷಗೆ ಒಳಗಾದ ನಂತರ ಸೋಮೇಶ್ವರನು ಗಣಾಧೀಶ್ವರರೊಡನೆ ಪುಷ್ಪಕ ವಿಮಾನದಲ್ಲಿ ಕೈಲಾಸಕ್ಕೆ ಕರೆದೊಯ್ದನು.

ಭೈರವೇಶ್ವರ ಕಾವ್ಯ ಐದು ಸಂದಿಗಳ ಒಂದು ಚಿಕ್ಕ ಕಾವ್ಯ, ಈ ಕಾವ್ಯದ ಛಂದಸ್ಸನ್ನು ಕೆಲವರು ಸಾಂಗತ್ಯವೆಂದೂ ಕೆಲವರು ಕುಸುಮ ಅಥವಾ ಷಟ್ಪದಿಯಂದೂ ಅಭಿಪ್ರಾಯಪಟ್ಟಿದ್ದಾರೆ. ಕವಿಯ ಉದ್ದೇಶದಂತೂ ಭಕ್ತಿಯ ಮಹಿಮೆಯನ್ನು ತಿಳಿಸುವುದೇ ಅಗಿದೆ ಉದಾಹರಣೆಗೆ

ಭಕ್ತಿಯ ತಾಣಸ
ನ್ಮುನ್ಮಕ್ತಿಯ ಸದನವಿ
ಶಕ್ತಿಯ ಸೀಮೆ ಮೋಹನದಾ
ಸೂಕ್ತಿಯ ನೆಲೆಯಾಗಿ
ವ್ಯಕ್ತವಾಗಿಪ್ಪುದೀ ಕಾವ್ಯ

ಎಂಬ ಪದ್ಯವನ್ನು ನೋಡಬಹುದು. ಅನಾವಶ್ಯಕವಾದ ವರ್ಣನೆಗಳು ಈ ಕಾವ್ಯದಲ್ಲಿ ಕಾಣವುದಿಲ್ಲ, ಅನೇಕ ಶಿವಶರಣರ ಕಥೆಗಳು ಕಾವ್ಯದಲ್ಲಿ ಬರುತ್ತದೆ, ಒಂದೇ ಕಾವ್ಯವನ್ನು ರಚಿಸಿದರು ನಂಜುಂಡ ಕವಿ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ತನ್ನ ಹೆಸರನ್ನು ಉಳಿಸಿಕೂಳ್ಳಲು ಸಮರ್ಥನಾಗಿದ್ದಾನೆ.

ಚಿಕ್ಕದೇವರಾಜ ಮೈಸೂರು ದೊರೆಗಳಲ್ಲಿ ಪ್ರಖ್ಯಾತರಾದವರೂಲ್ಲೊಬ್ಬ. ಈತ ೧೬೭೩ ರಿಂದ ೧೭೦೪ ರವರೆಗೆ ಶ್ರೀರಂಗಪಟ್ಟಣದಿಂದ ಆಳಿದ, ಚಿಕ್ಕಂದಿನಲ್ಲಿ ಈತನೊಂದಿಗೆ ವಿಶಾಲಾಕ್ಷಪಂಡಿತ,

ಷಡಕ್ಷರ ದೇವ, ತಿರುಮಲಾರ್ಯ ಮುಂತಾದವರು ಶಿಕ್ಷಣ ಪಡೆದರೆಂದು ತಿಳಿದುಬರುತ್ತದೆ. ಈತ ಅಧಿಕಾರ ವಹಿಸಿಕೊಂಡಾಗ ಈ ಮೂವರು ಸಹಪಾಠಿಗಳನ್ನು ತನ್ನ ಮಂತ್ರಿಗಳನ್ನಾಗಿ ಮಾಡಿಕೊಂಡ. ಚಿಕ್ಕದೇವರಾಜನ ಆಸ್ಥಾನದಲ್ಲಿ ಅನೇಕ ಕವಿಗಳಿದ್ದರು. ರಾಜ ಸ್ವತಃ ಕವಿಯೂ ಆಗಿದ್ದೂ ಗೀತಗೋಪಾಲ, ಚಿಕ್ಕದೇವರಾಜ ಭಿನ್ನಪ, ಭಾಗವತ, ಭಾರತ ಮತ್ತು ಶೇಷಧರ್ಮ ಮುಂತಾದ ಕೃತಿಗಳನ್ನು ಬರೆದಿರುವುದಾಗಿ ತಿಳಿದು ಬರುತ್ತದೆ. ಕಡೆಯ ಮೂರು ಕೃತಿಗಳಿಗೆ ರಾಜ ತನ್ನ ಅಸ್ಥಾನ ವಿದ್ವಾಂಸರೊಂದಿಗೆ ಚರ್ಚಿಸಿ ಟೀಕೆ ಬರೆದನೆಂದು ಹೇಳುತ್ತಾರೆ. ಚಿಕ್ಕದೇವರಾಜನ ಆಸ್ಥಾನದಲ್ಲಿ ತಿರುಮಲಾರ್ಯ, ಷಡಕ್ಷರದೇವ, ಸಂಚಿಹೊನ್ನಮ್ಮ, ಚಿಕ್ಕುಪಾಧ್ಯಾಯ ಶೃಂಗಾರಮ್ಮ ಮುಂತಾಗಿ ಅನೇಕ ಕವಿಗಳಿದ್ದರು.

ಗೀತಗೋಪಾಲ ಮತ್ತು ಚಿಕ್ಕದೇವರಾಜ ಭಿನ್ನಪ ಕೃತಿಗಳು ಮುಖ್ಯವಾದುವು, ಗೀತಗೋಪಾಲ ಜಯದೇವ ಕವಿಯು ಗೀತಗೋವಿಂದದ ಮಾದರಿಯ ಕನ್ನಡ ಕೃಷ್ಣಸ್ತೋತ್ರದ ಹಾಡುಗಳು ಇದರಲ್ಲಿ ಪೂರ್ವಭಾಗ ಉತ್ತರಭಾಗ ಎಂದು ಎರಡು ಭಾಗಳಿವೆ.

ಪ್ರತಿಭಾಗದಲ್ಲಿ ಏಳು ಖಂಡಗಳೂ ಪ್ರತಿಖಂಡದಲ್ಲಿ ಏಳು ಹಾಡುಗಳಿವೆ. ಇವೆಲ್ಲ ಹಾಡುಗಬ್ಬಗಳು ಚಿಕ್ಕದೇವರಾಜ ಕಾವ್ಯ ಸಂಗೀತಗಳೆರಡರಲ್ಲಿಯೂ ಪರಿಣಿತನಾಗಿದ್ದನೆಂದು ಇದರಿಂದ ವ್ಯಕ್ತವಾಗುತ್ತದೆ. ಚಿಕ್ಕದೇವರಾಜ ಭಿನ್ನಪ ಮೇಲುಕೋಟೆಯ ಚೆಲುವನಾರಾಯಣನಿಗೆ ಕವಿ ಮಾಡಿಕೊಂಡ ಬಿನ್ನಪದ ಹಾಡುಗಳು, ಚಲುವನಾರಾಯಣನ ಸುತ್ತಿಯೊಂದಿಗೆ ಕೃತಿ ಆರಂಭವಾಗುತ್ತದೆ. ಇದು ಒಂದು ರೀತಿಯ ವಚನದಂತಹ ಗದ್ಯ ಕೃತಿ, ಕವಿಯ ಪರಾಕ್ರಮಾದಿಗಳ ವರ್ಣನೆಯಿದೆ. ಪ್ರತಿಯೊಂದು ಭಿನ್ನಪದ ಆದಿಯಲ್ಲಿ ಒಂದು ಕಂದಪದ್ಯವಿದೆ ಉಳಿದ ಭಾಗ ಗದ್ಯದಲ್ಲಿದೆ. ಗದ್ಯ ಹಳಗನ್ನಡ ಶೈಲಿಯಲ್ಲಿದ್ದು ಪ್ರೌಢವಾಗಿದೆ ಜನಸಾಮಾನ್ಯರಿಗೆ ಸಂಸ್ಕೃತದಲ್ಲಿರುವ ತತ್ವಜ್ಞಾನ ತಿಳಿಯುವುದು ಕಷ್ಟಸಾಧ್ಯ. ಅದುದರಿಂಧ ಕನ್ನಡದ ಮೆಲ್ನುಡಿಯಲ್ಲಿ ಹೇಳಿದ್ದೇನೆಂದು ಕವಿ ಕೇಳಿಕೊಂಡಿದ್ದಾನೆ. ಕನ್ನಡ ಗದ್ಯ ಸಾಹಿತ್ಯ ಬೆಳವಣಿಗೆಯಲ್ಲಿ ಈ ಕೃತಿಗೆ ತನ್ನದೇ ಆದ ವಿಶಿಷ್ಟ ಸ್ಥಾನವಿದೆ.

ಚಿಕ್ಕಪಾಧ್ಯಾಯ ಮೈಸೂರಿನ ದೊರೆ ಚಿಕ್ಕದೇವರಾಜನ ಅಸ್ಥಾನದಲ್ಲಿದ್ದ ಕವಿಗಳಲ್ಲಿ ಒಬ್ಬ ಪ್ರಮುಖ. ಇವನು ಒಟ್ಟು ಮುವತ್ತೇಳು ಕೃತಿಗಳನ್ನು ರಚಿಸಿರುವುದಾಗಿ ತಿಳಿದು ಬರುತ್ತದೆ. ಇವುಗಳಲ್ಲಿ ಹತ್ತು ಸಾಂಗತ್ಯ ಕೃತಿಗಳು ಹತ್ತು ಟೀಕಾ ಗ್ರಂಥಗಳು, ಏಳು ಚಂಪೂ ಕೃತಿಗಳು ಐದು ಗದ್ಯ ಕೃತಿಗಳು ಎರಡು ಹಾಡುಗಳು ಚಿಕ್ಕುಪಾಧ್ಯಾಯನ ಪೂರ್ವಿಕರು ಕಂಚಿಯಿಂದ ಮೈಸೂರು ಅರಸರ ಆಶ್ರಯಕ್ಕೆ ಬಂದವರು ಇವರ ವಂಶದ ಅಲ್ಲಾಳನಾಥ ಪ್ರಸಿದ್ದನಾದವನು ಇವನಿಗೆ

ವರದಾಚಾಯರನೆಂಬವನು ಮಗ ಇವನ ಹೆಂಡತಿ ನಾಚಾರಮ್ಮ ಈ ದಂಪತಿಗಳಿಗೆ ಲಕ್ಷೀಪತಿ ದೇವರಾಜ ಎಂಬ ಅವಳಿ ಮಕ್ಕಳು ಹಿರಿಯನಾದ ಲಕ್ಷ್ಮೀಪತಿಯೇ ಅರಮನೆಯಲ್ಲಿ ಉಪದ್ಯಾಯನಾಗಿದ್ದು ಚಿಕ್ಕಪಾಧ್ಯಾಯನೆಂದು ಹೆಸರಾದನು ಚಿಕ್ಕುಪಾಧ್ಯಾಯನ ಪೂರ್ವಿಕರು ಕಂಚಿಯಿಂದ ತೆರಕಣಾಂಬಿಗೆ ಬಂದು ಅಲ್ಲಿಂದ ಅರಮನೆಗೆ ಬಂದರೆಂಬ ಅಭಿಪ್ರಾಯವೂ ಇದೆ. ಕಾವ್ಯದಲ್ಲಿ ತನ್ನ ಸ್ವವಿಷಯಗಳನ್ನು ಕವಿ ವಿವರವಾಗಿ ಹೇಳಿಕೊಂಡಿದ್ದಾನೆ. ಕನ್ನಡ ಭಾಷೆಯ ಬಗ್ಗೆ ಚಿಕುಪಾಧ್ಯಾಯನಿಗೆ ಅಪಾರವಾದ ಕಳಕಳಿ ಇದೆ ಅರಮನೆಯಲ್ಲಿದ್ದ ಸಂಸ್ಕೃತ ಪಂಡಿತರು ಕನ್ನಡವನ್ನು ಏನು ಮಹಾ ಎಂದು ಅಣಕಿಸಿರ ಬೇಕು ಅದುದರಿಂದ ಕವಿ

ಇದು ಕನ್ನಡ ನುಡಿಯಿಂದಾ
ದಾದೆಂದು ಕಡೆಗಣಿಸದಿರುರ್ವುದೆಲೆವುಳ್ಳವರ್ ಸ
ಕ್ಯಾದದೊಳ್ ಕ್ಷೀರಕೆ ಪಡಿವಸ
ರುದಯಿಸಿ ಪಾಲೆಂದೂದಿಂಪು ತೋರದೆ ಧರೆಯೊಳ್
ಯಸ್ಮಾತ್ತ ಸ್ಮಾತೆಂ
ಕತ್ಮಲ ವಚನದ ರಚನೆ
ವಿಸ್ಮಯವೀವುದೆರಂಗ ಕನ್ನಡ ಕಲಾ
ರಶ್ಮಿಯ ರಚನೆಯ ಮುಂದೆ
ಕನ್ನಡ ಪೂಳುಗನ್ನಡ ಹಳಗನ್ನಡ
ನ್ನನ್ನಿಯ ತಿಳುಗನ್ನಡದೆ
ಚನ್ನನಿಪಚ್ಚಗನ್ನಡದೆ ದೇಶಿಯದ
ಕನ್ನಡ ಕೆಣೆಯುಂಟೆ ರಂಗ

ಮೇಲಿನ ಮೂರು ಪದ್ಯಗಳು ಚಿಕ್ಕಪಾಧ್ಯಾಯನಿಗೆ ಕನ್ನಡ ಭಾಷಾ ಸಾಹಿತ್ಯಗಳ ಬಗ್ಗೆ ಇದ್ದ ಅಪಾರವಾದ ಅಭಿಮಾನವನ್ನು ಸೂಚಿಸುತ್ತದೆ. ಈತನ ಕಾವ್ಯಗಳು ವೈವಿಧ್ಯದಿಂದ ಕೂಡಿವೆಯೆಂಬುದರಲ್ಲಿ ಎರಡನೆಯ ಮಾತಿಲ್ಲ.[೮]

ಷಡಕ್ಷದೇವ ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕಿನ ಧನಗೂರಿನವನು. ಈತ ಮೈಸೂರು ಅರಸ ಚಿಕ್ಕದೇವರಾಜನ ಸಹಪಾಠಿಯಾಗಿದ್ದು, ಅವನು ಅಧಿಕಾರಕ್ಕೆ ಬಂದಾಗ ಮಂತ್ರಿಯಾಗಿದ್ದನೆಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ತಿರುಮಲಾರ್ಯ, ವಿಶಾಲಪಂಡಿತ, ಷಡಕ್ಷರದೇವ, ಚಿಕ್ಕದೇವರಾಜ ಒಟ್ಟಿಗೆ ಓದಿದವರು. ಶಿವಚಾರದ ನಾಗಣ್ಣ ಎಂಬುವನು ವಿಶಾಲಾಕ್ಷ

[illegible]

ಪಂಡಿತನನ್ನು ಕೊಲೆ ಮಾಡಿದನು. ಇದರಿಂದ ಕೋಪಗೊಂಡ ಚಿಕ್ಕದೇವರಾಜ ವೀರಶೈವ ಮತಮಾನ್ಯಗಳನ್ನು ಮುಟ್ಟುಗೋಲು ಹಾಕಿಕೊಂಡು ಜಂಗಮರನ್ನೆಲ್ಲಾ ಹಿಡಿದು ಕೊಲ್ಲುವಂತೆ ಅಜ್ಞಾಪಿಸಿದನಂತೆ ಇದರಿಂದ ಬೇಸರಗೊಂಡ ಷಡಕ್ಷರದೇವ ತನ್ನ ಮಂತ್ರಿಪದವಿಯನ್ನು ತೊರೆದು ಯಳಂದೂರಿಗೆ ಹೊರಟುಹೋದನೆಂದು ದೇವಚಂದ್ರ ತನ್ನ ರಾಜಾವಳಿ ಕಥಾಸಾರ ಎಂಬ ಗ್ರಂಥದಲ್ಲಿ ಹೇಳಿದ್ದಾನೆ. ಈತ ಧಾಮಗೂರು ಮತ್ತು ಯಳಂದೂರು ಮಠಗಳ ಸ್ವಾಮಿಯಾಗಿದ್ದನೆಂದೂ ಚಿಕ್ಕದೇವರಾಜನ ಪತ್ನಿ ಯಳಂದೂರು ದೇವರಾಜಮ್ಮಣ್ಣಿ ಮತ್ತು ಸಂಚಿ ಹೊನ್ನಮ್ಮನಿಗೆ ಗುರುವಾಗಿದ್ದುದರಿಂದ ಮೈಸೂರು ರಾಜರ ಆಸ್ಥಾನದಲ್ಲಿ ಕೆಲವುಕಾಲ ಇದ್ದನೆಂಬ ಅಭಿಪ್ರಾಯವೂ ಇದೆ.

ಕನ್ನಡದಲ್ಲಿ ಹದಿನೇಳನೆಯ ಶತಮಾನದಲ್ಲಿ ಚಂಪೂಕಾವ್ಯ ಪರಂಪರೆಯನ್ನು ಪುನರುಜ್ಜೀವನಗೊಳಿಸಿದವನು ಷಡಕ್ಷರದೇವ, ಈತ ಕನ್ನಡ ಸಂಸ್ಕೃತಿಗಳೆರಡರಲ್ಲಿಯೂ ಉದ್ದಾಮ ಪಂಡಿತನಾಗಿದ್ದು, ರಾಜಶೇಖರವಿಲಾಸ, ಶಬರಶಂಕರ ವಿಲಾಸ ಮತ್ತು ಬಸವರಾಜ ವಿಜಯ ಎಂಬ ಮೂರು ಚಂಪೂಕಾವ್ಯಗಳನ್ನು ಕವಿಕರ್ಣರಸಾಯನವೆಂಬ ಸಂಸ್ಕೃತ ಗ್ರಂಥವನ್ನು ಈತ ರಚಿಸಿದ್ದಾನೆ. ಷಡಕ್ಷರದೇವನನ್ನು ಪಂಡಿತಕವಿ ಎಂದೇ ಕರೆಯುವುದುಂಟು ಒಂದು ಕಾಲದಲ್ಲಿ ಈತನ ರಾಜಶೇಖರ ವಿಲಾಸ ಕಾವ್ಯವನ್ನು ಓದಬಲ್ಲವನು ಮಹಾಪಂಡಿತ ಎಂಬ ನಂಬಿಕೆಯಿತ್ತು. ರಾಜಶೇಖರವಿಲಾಸ ಶಿವಭಕ್ತ ಕರಿಕಾಲಚೋಳನ ಕಥೆಯನ್ನು ವಸ್ತುವಾಗುಳ್ಳ ಕಾವ್ಯ ಕನ್ನಡ ಕಾವ್ಯ ಪ್ರಪಂಚದಲ್ಲಿ ತಾನೊಂದು ಹೊಸ ಸಂಪ್ರದಾಯವನ್ನು ಹೊಸಕಾವ್ಯ ಪದ್ಧತಿಯನ್ನು ಹುಟ್ಟ ಹಾಕಿರುವುದಾಗಿ ಕವಿ ಕೆಳಗಿನ ಪದ್ಯದಲ್ಲಿ ಹೇಳಿಕೊಂಡಿದ್ದಾನೆ.

ಇದು ಪೊಸತಿಂಪು ನೋಡಿದು ನವೀನ ಮನನ ಮೈದೊಕ್ತಿ ಭಾವಮಿಂ
ತಿದು ನವಮಿಂತಿದೆಲ್ತೆ ಸದಲಂಕೃತಿ ನವ್ಯ ಮುದಾತ್ತ ವೃತ್ತಿ
ತ್ತ ನಿದುಮಿಗೆ ನೊತ್ನ-ಮೆಂದಖಿಳ ಕಾಳಾವಿದ ರೊಲ್ದು ಕೇಳ್ದುಮೆ
ಚ್ಚದೇವಂತ ಗೆಯ್ಯ ದಿರ್ಪರೆ ಷಡಕ್ಷರದೇವ ಕೃತಂ ಪ್ರಬಂಧಮಂ

ಷಡಕ್ಷರದೇವ ಮಂಡ್ಯ ಜಿಲ್ಲೆಯ ಹೆಮ್ಮೆಯ ಕವಿಯೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಒಂಬತ್ತು ಹತ್ತನೆಯ ಶತಮಾನದ ಪಂಪರನ್ನಾದಿಗಳಿಂದ ಉತ್ತುಂಗಕ್ಕೇರಿ ಕಾಲಗರ್ಭ ಸೇರಿದ್ದ ಅತ್ಯಂತ ಮಹತ್ವದ ಹಾಗೂ ಪಾಂಡಿತ್ಯ ಪೂರ್ಣ ಕಾವ್ಯ ಪ್ರಕಾರವೊಂದನ್ನು ಪುನರುಜ್ಜೀವನಗೊಳಸಿದ ಕೀರ್ತಿ ಷಡಕ್ಷರ ದೇವನಿಗೆ ಸಲ್ಲುತ್ತದೆ.

ಸಂಚಿಯ ಹೊನ್ನಮ್ಮ ಕನ್ನಡದ ಮೊದಲ ಕವಿಯತ್ರಿ ಎಂದು ಹೇಳಿದರೆ ಅತಿಶಯೋಕ್ತಿಯಾಗುವುದಿಲ್ಲ. ಅಕ್ಕಮಹಾದೇವಿ, ನೀಲಮ್ಮ ಮುಂತಾದವರು ಇದ್ದರು ನಿಜ. ಆದರೆ ಅವರ್‍ಯಾರು ವ್ಯವಸ್ಥಿತವಾದ ಒಂದು ಕಾವ್ಯರಚನೆಗೆ ತೊಡಗಿದವರಲ್ಲ.ಈ ಹಿನ್ನಲೆಯಿಂದ ಸಂಚಿಹೊನ್ನಮ್ಮನನ್ನು ಕನ್ನಡದ ಮೊದಲ ಕವಿಯತ್ರಿ ಎಂದು ಉಲ್ಲೇಖಿಸಬಹುದು. ಈಕೆಯನ್ನು ಚಿಕ್ಕದೇವರಾಜನ ಆಸ್ಥಾನದಲ್ಲಿ ಸಂಚಿಯ ಊಳಿಗದಲ್ಲಿದ್ದಳೆಂದು ಇತ್ತೀಚಿನವರೆಗೆ ನಂಬಲಾಗಿತ್ತು. ಆದರೆ ಈಗ ಈಕೆ ಮಂಡ್ಯ ಜಿಲ್ಲೆಯ ಕೆರೆಗೋಡಿನಸ್ಥಾನಿಕ ಪ್ರಭುವಿನ ಮಗಳು ಮೈಸೂರಿನ ಅರಸ ಚಿಕ್ಕದೇವರಾಜ ಒಡೆಯನ ಪತ್ನಿಯರಲ್ಲೊಬ್ಬಳೆಂದು ಸಂಶೋಧಕರು ಗುರುತಿಸಿದ್ದಾರೆ. ಈ ಬಗ್ಗೆ ಆಕೆಯ ಕಾವ್ಯ ಹದಿಬದೆಯ ಧರ್ಮದಿಂದಲೇ ತೆಗೆದು ಕೊಟ್ಟಿರುವ ಉದಾಹರಣೆಗಳನ್ನು ಸಕಾರಣವಾಗಿ, ಸೋದಾಹರಣವಾಗಿ ತಿರಸ್ಕರಿಸಾಲಾಗುವುದಿಲ್ಲ. ಈ ಹಿನ್ನಲೆಯಲ್ಲಿ ಸಂಚಿ ಹೊನ್ನಮ್ಮನ ಇತಿವೃತ್ತಯನ್ನು ಇಲ್ಲಿ ಸಂಗ್ರಹವಾಗಿ ಸೂಚಿಸಲಾಗಿದೆ.

ಹೊಯ್ಸಳರ ಆಳ್ವಿಕೆಯ ಕೊನೆಗಾಲಕ್ಕೆ ಭಾಷೆಯ ಸೌಂದರ್ಯ, ನಿರೂಪಣೆಯ ಸೊಗಸು ಕುಂದಿತಾದರೂ ಒಟ್ಟಂದದಲ್ಲಿ ನೋಡಿದಾಗ ತುಂಬ ಸೊಗಸಾದ ಭಾಷೆಯ ಬಳಕೆಯನ್ನು ಗಮನಿಸಬಹುದು. ಕೆಲವು ಪದ್ಯಗಳಂತೂ ಕಾವ್ಯದ ತುಣುಕೆನ್ನಬಹುದು. ಕೆಲವು ಶಾಸನಕವಿಗಳ ಹೆಸರು ಕಾಣಸಿಗುತ್ತವಾದರೂ ಬಹುಪಾಲು ಶಾಸನ ರಚಕರು ಅನಾಮಧೇಯರಾಗಿದ್ದಾರೆ. ಈ ಶಿವಸ್ತುತಿ ಕಣ್ಣಿಗೆ ಕಟ್ಟುವ ಸುಂದರ ಚಿತ್ರವೊಂದನ್ನು ಒದಗಿಸುತ್ತದೆ:

ಪತ್ತಿರೆ ಗಂಗೆಯ ಹನಿಗಳು
ಮುತ್ತಿನ ಬಾಸಿಗಮಿದೆನಿಸಿ ವಾಸುಗಿ ಸುಖದಿಂ !
ಸುತ್ತಿರ್ದ್ದ ಜೂಟದಾದೇ
ವೋತ್ತಮ ನಮಗೊಸದು ಕೊಡುಗೆ ಸುಖಸಂಪದಮಂ ॥

ಹೊಯ್ಸಳ ಸೆಟ್ಟಿ ಎಂಬಾತನಿಗೆ ಶುಭಕೋರುತ್ತ, ಶಿವಪಾರ್ವತಿಯರ ಸುಂದರ ವರ್ಣನೆಯಿಂದ ನಮ್ಮ ಮನ ಸೆಳೆಯುತ್ತದೆ ಈ ಪದ್ಯ :

ಗಿರಿಜೆಯ ಕಣ್ಣಬೆಳುಪಿನೊಳಾತ್ಮ ಶರೀರದ ಬೆಳುಪು ಕುಂತಳೋ
ತ್ಕರದ ಕರ್ಪಿನೊಡನುಣ್ಣುವ ಕಂಠದ ಕಪ್ಪು ಪಲ್ಲವಾ
ಧರದ ಕೆಂಪಿನಳಪ್ಪುವ ಕೆಂಜೆಡೆದೊಂಗಲಕೆಂಪು ಕೂಡೆ
ತಳುತೆಸೆವೀಶ್ವರ ಕುಡುಗೆ ಹೊಯ್ಸಲಸೆಟ್ಟಿಗಭೀಷ್ಟ ಸಿದ್ಧಿಯ ।

ಇದರ ಛಂದಸ್ಸಿನಲ್ಲಿ ದೋಷವಿದೆಯಾದರೂ ಅದರಿಂದ ಪದ್ಯದ ಸೊಬಗಿಗೇನೂ ಬಾಧಕವಿಲ್ಲ. ಲಿಪಿಕಾರನ ದೋಷದಿಂದಲೋ ಏನೋ ಕೆಲವೊಮ್ಮೆ ಅಪಪಾಠಗಳು ಕಂಡುಬರುವುದುಂಟು.

ವಾಜಿಕುಳದ ಮಹಾಪ್ರಧಾನ ಕಂಟಿಮಯ್ಯನ ಮಕ್ಕಳಾದ ಶಿವದೇವ ಹಾಗೂ ಮದುಹಣ "ಬಟ್ಟಗೆಯೊಳು ಬರೆದಂತೆ" ಇದ್ದರಂತೆ! ಶಿವನನ್ನು ಕಪಾಳಧರ, ಕರೆಗೊರಳ ಹರೆನೊಸಲ, ತುರುಗಿದ ಕೆಂಜೆಡೆಯ ಇತ್ಯಾದಿ ವಿಶೇಷಣಗಳಿಂದ ವರ್ಣಿಸಿರುವುದನ್ನು ಕಾಣುತ್ತೇವೆ. ಸಳನಿಗೆದುರಾದ ಹುಲಿಯ ವರ್ಣನೆಯನ್ನು ಈಗಾಗಲೇ ಗಮನಿಸಿದ್ದೇವೆ.

ಲಾಲನಕೆರೆಯ ಶಾಸನವನ್ನು ಬರೆದವನು ಪ್ರಾಯಶಃ ಶೈವನಾದ ಶಾಂತಮಹಂತ. ಈತ ಸೋವಿಯಕ್ಕನ ಮಗ ಮತ್ತು ಸತ್ಕವಿ ಎಂದು ವರ್ಣಿತನಾದವನು. ಇತರ ವಿವರಗಳೇನೂ ದೊರೆಯುವುದಿಲ್ಲ. ಇದೇ ಗ್ರಾಮದ ಇನ್ನೊಂದು ಶಾಸನವನ್ನು ಶಾಂತಿನಾಥ ಎಂಬಾತ ರಚಿಸಿದ. ಈತನನ್ನು ಶಾಸನದಲ್ಲಿ ಹೀಗೆ ವರ್ಣಿಸಿದೆ :

ದಕ್ಷಿಣ ಹೆಂಮನ ಮಮಂ
ಲಾಕ್ಷಣಗವಿ ಶಾಂತಿನಾಥ ಕವಿಕುಳತಿಳಕಂ ।
ದಾಕ್ಷಿಂಣ್ಯನಿಧಿ ಗುಣೋತ್ಕರ
ಸಿಕ್ಷಾಗುರು ಹೇಳ್ದನರ್ತ್ಥಿಯಿಂ ಸಾಶನಮ ॥

ಎಲೆಕೊಪ್ಪದ ಶಾಸನವೊಂದು ತಪಸ್ವಿ ಗೊಹೆಯಭಟ್ಟಾರಕನನ್ನು ವರ್ಣಿಸುತ್ತದೆ. ಮೂರು ಕಂದಪದ್ಯಗಳಿಂದ ಕೂಡಿದ ಈ ಶಾಸನವನ್ನು ರಚಿಸಿದವನು ಏಳಾಚಾರ್ಯರ ಶಿಷ್ಯನಾದ ಬಿಂಡಯ್ಯ ಒಳ್ಳೆಯ ಕಾವ್ಯಮಯ ಭಾಷೆಯಲ್ಲಿ ಬಸರಾಳಿನ ಶಾಸನವನ್ನು ರಚಿಸಿದವನು ಸೂಕ್ತಿಸುಧಾರ್ಣವದ ಕರ್ತೃವಾದ ಮಲ್ಲಿಕಾರ್ಜುನನೆಂದು ಗುರುತಿಸಲಾಗಿರುವ, ಪರಮಯೋಗಿಶ್ವರನ ಮಗನಾದ ಕವಿ ಚಿದಾನಂದ. ಅಧ್ಯಾತ್ಮಿ ಬಾಳಚಂದ್ರ, ಕವಿಕಂದರ್ಪ ಮುಂತಾದವರು ಶಾಸನೋಕ್ತ ಕವಿಗಳು.

ನಾಗಮಂಗಲ ತಾಲ್ಲೂಕಿನ ಹೊನ್ನೇಹಳ್ಳಿಯ ಶಾಸನವನ್ನು ಬ್ರಹ್ಮದೇವ ಎಂಬಾತ ಬರೆದ ಹಾಗೂ ನಂಜೆಯಕೇತೋಜ ವೀರಗಲ್ಲನ್ನು ಸಿದ್ಧಪಡಿಸಿದ. ಬೆಳ್ಳೂರಿನ ಒಂದು ಶಾಸನವನ್ನು ಬರೆದಾತ ಸೇನಬೋವ ಅಲ್ಲಾಳದೇವ, ರಾಮೋಜನ ಜವನೋಜ ಸಿಂಧಘಟ್ಟದ ಶಾಸನವನ್ನು ಬರೆದ.

ಶಾಸನವನ್ನು ಕಂಡರಿಸಿದ ವ್ಯಕ್ತಿಗಳ ಹೆಸರೂ ನಮಗೆ ಕೆಲವೊಮ್ಮೆ ಲಭ್ಯವಾಗಿವೆ. ಪುರದಕಟ್ಟೆಯ ಶಾಸನವನ್ನು ರೂವಾರಿ ಬಮೋಜನ ಮಗ ಪುರದಾಚಾರಿ ಕಂಡರಿಸಿದ. ರೂವಾರಿ ಕಲ್ಕುಟಿಕ ಕೇತೋಜ ಮುದಿಗೆರೆಯ ಶಾಸನದ ಕಂಡರಣೆಕಾರ. ಕಡ್ಲವಾಗಿಲ ವೀರಗಲ್ಲಿನ 'ರೂಹಾರವನು' ಮಾಡಿದಾತ ಪುರದಾಚಾರಿಯ ಮಗ ಮಂಡಳಿಕಾಚಾರಿ. ಪರವಾದಿ ಮಲ್ಲೋಜ ಇನ್ನೊಬ್ಬ ಕಂಡರಣೆಕಾರ.

ಇದು ಮಂಡ್ಯ ಜಿಲ್ಲೆಯ ಹೊಯ್ಸಳ ಶಾಸನಗಳ ಒಂದು ಸಾಮಾನ್ಯ ಸಮೀಕ್ಷೆ ಮಾತ್ರ. ಈ ಶಾಸನಗಳು ಮಂಡ್ಯ ಜಿಲ್ಲೆಯ ಪ್ರಾದೇಶಿಕ ಇತಿಹಾಸವನ್ನು ರೂಪಿಸುವಲ್ಲಿ ಪ್ರಧಾನಪಾತ್ರ ವಹಿಸಿವೆ ಎಂಬುದನ್ನು ಸ್ಥೂಲವಾಗಿ ಪರಿಚಯಿಸುವ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಲಾಗಿದೆ.

ಕೆರಗೋಡಿನ ಸಾಮಂತನಿಗೂ ಮದ್ದೂರಿನ ಸಾಮಂತನಿಗೂ ಬದ್ಧ ವೈರ. ಈ ಇಬ್ಬರೂ ಒಬ್ಬರನ್ನೊಬ್ಬರು ಮುಗಿಸಲು ಅನೇಕ ಸಲ ಕತ್ತಿ ಹಿರಿದು ನಿಂತವರು. ಹೀಗೆ ನಡೆದ ಒಂದು ಯುದ್ಧದಲ್ಲಿ ಕೆರಗೋಡಿನ ಸಾಮಂತ ಅಸುನೀಗಿದುದರಿಂದ ಆ ರಾಜ್ಯ ಮದ್ದೂರಿನ ಅಧೀನವಾಯಿತು. ಕೆರೆಗೋಡಿನ ರಾಣಿ ಮತ್ತು ಎಳೆಯ ವಯಸ್ಸಿನ ರಾಜಕುಮಾರಿಯನ್ನು ಕಬ್ಬಾಳೂ ದುರ್ಗದಲ್ಲಿ ಬಂಧನದಲ್ಲಿಡಲಾಯಿತು. ಈ ರಾಣಿ ಯಳಂದೂರು ರಾಜಮನೆತನದ ಹೆಣ್ಣು ಮಗಳು ತನ್ನ ವಂಶದ ಹೆಣ್ಣುಮಗಳೊಬ್ಬಳನ್ನು ಸೆರೆಯಲ್ಲಿಟ್ಟು ಮದ್ದೂರಿನ ರಾಜನ ವಿರುದ್ಧ ಯಳಂದೂರಿನ ರಾಜ ಯುದ್ಧ ಹೂಡಿದ್ದ ಕಡೆಗೆ ಮದ್ದೂರಿನ ರಾಜ ಸೋತು ಪಲಾಯನ ಮಾಡಿದ. ಸೆರೆಯಲ್ಲಿದ್ದ ಕೆರಗೋಡಿನ ರಾಣಿ ಮತ್ತು ಆಕೆಯ ಮಗಳು ಬಂಧನ ಮುಕ್ತರಾದರು. ಆದರೆ ರಾಣಿ ಮರಣಾವಸ್ಥೆಯಲ್ಲಿದ್ದು ಅಲ್ಲಿಯೇ ಅಸುನೀಗಿದಳು, ಆಕೆಯ ಮಗಳನ್ನು ಯಳಂದೂರು ರಾಜ ಕರೆ ತಂದು ತನ್ನ ಮಗಳೊಂದಿಗೆ ಬೆಳೆಸಿದ. ಆ ಮಗಳು ಮೈಸೂರಿನ ಅರಸ ಚಿಕ್ಕಾದೇವರಾಜನ ಕೈಹಿಡಿದು ಶ್ರೀರಂಗಪಟ್ಟಣದ ಅರಮನೆ ಸೇರಿದಾಗ ಆಕೆಯೊಂದಿಗೆ ತಂಗಿಯೋಪಾದಿಯಲ್ಲಿ ಹೊಂದಿಕೊಂಡಿದ್ದ ಕೆರಗೋಡಿನ ರಾಣಿಯ ಮಗಳು ಶ್ರೀರಂಗಪಟ್ಟಣಕ್ಕೆ ಬಂದಳು. ಅಲ್ಲಿ ಷಡಕ್ಷದೇವ ಆ ನಂತರ ಚಿಕ್ಕುಪಾಧ್ಯಾಯರಿಂದ ಶಿಕ್ಷಣ ಕೊಡಿಸಲಾಯಿತು. ಮುಂದೆ ಅವಳು ಸರಸ ಸಾಹಿತ್ಯದ ಗಣಿಯಾಗಿ ಚಿಕ್ಕದೇವರಾಜನ ಪತ್ನಿಯರಲೊಬ್ಬಳಾದಳು. ಆಕೆಯ ಕೆರಗೋಡಿನ ರಾಜಕುಮಾರಿ ಸಂಚಿಹೊನ್ನಮ್ಮ.

ಹದಿಬದೆಯ ಧರ್ಮ ಜಾನಪದ ಧಾಟಿಯ ಒಂದು ಸಾಂಗತ್ಯ ಗ್ರಂಥ. ಇದು ಒಂದು ರೀತಿಯ ಹಾಡು ಗಬ್ಬದಂತೆ ರಚಿತವಾಗಿದೆ. ಪತಿವ್ರತೆಯರು ತಮ್ಮ ಸಂಸಾರದ ಬಗ್ಗೆ ತಳೆಯಬೇಕಾದ ನೇಮನಿಷ್ಠೆಗಳನ್ನು ಹೇಳುತ್ತದೆ. ಧರ್ಮಶಾಸ್ತ್ರ ಪುರಾಣ, ರಾಮಾಯಣ,

ಭಾರತಾದಿಕಾವ್ಯಗಳಲ್ಲಿ ಸ್ತ್ರೀಯರ ಬರುವ ನೀತಿಸೂತ್ರಗಳನ್ನು ಕನ್ನಡದಲ್ಲಿ ಸಾಮಾನ್ಯ ಸ್ತ್ರೀಯರನ್ನು ದೃಷ್ಟಿಯಲ್ಲಿಟ್ಟುಕೊಂಡು ಹೊನ್ನಮ್ಮ ತನ್ನ ಕಾವ್ಯ ರಚಿಸಿದ್ದಾಳೆ.

ಆದಿ ಕಾವ್ಯದೊಳೈದವೆಯ ವೇದದೊಳು ಮ
ಸ್ವಾರ್ಥಿಕ ಧರ್ಮಶಾಸ್ತ್ರದೊಳು
ಭೇದಿಸಿ ಹಿರಿಯರು ಪೇಳದುದನೆ ಕೃತಿ
ಗೈದಾನು ಕಿವಿಗೊಳಿಸಿದೆನು.

ಎಂಬ ಪದ್ಯ ಮೇಲಿನ ಅಭಿಪ್ರಾಯವನ್ನು ಶೃತಪಡಿಸುತ್ತದೆ. ಪಾತಿವ್ರತ್ಯದ ತತ್ವ ಮನುವಿನಂತಹ ಮುನಿಗಳಿಂದ ನಿರ್ಮಿತವಾದುದು. ಪುರಾಣ ಯುಗಗಳ ಶ್ರೇಷ್ಠ ಮಹಿಳೆಯರ ನಡತೆಯಲ್ಲಿ ಮೂಡಿದುದು. ಹೊನ್ನಮ್ಮ ಈ ಸೂತ್ರಗಳನ್ನು ಕಾವ್ಯಕ್ಕೆ ಅಳಪಡಿಸುವಲ್ಲಿ ಅತ್ಯಂತ ಎಚ್ಚರಿಕೆ ವಹಿಸಿದ್ದಾಳೆ. ಹೆಣ್ಣು ತಾಯಿಯಾಗಿ, ಪತ್ನಿಯಾಗಿ, ಮಗಳಾಗಿ ನಿರ್ವಹಿಸಬೇಕಾದ ಜವಾಬ್ದಾರಿಯನ್ನು ವಿವರಿಸುವುದರೊಂದಿಗೆ ಹೆಣ್ಣನ್ನು ಜರಿಯುವ ಗಾವಿಲರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ತಿರುಮಲಾರ್ಯ ಚಿಕ್ಕದೇವರಾಜನ ಮಂತ್ರಿ ಹಾಗೂ ಕವಿ ಈತ ಚಿಕ್ಕದೇವರಾಜನ ಸಹಪಾಠಿಯಾಗಿ ಚಿಕ್ಕಂದಿನಿಂದಲೂ ಚಿಕ್ಕದೇವರಾಜನ ಮೇಲೆ ಪ್ರಭಾವ ಬೀರಿದ್ದನು. ಇವನ ಇನ್ನಿಬ್ಬರು ಸಹಪಾಠಿಗಳಾದ ವಿಶಾಲಕ್ಷ ಪಂಡಿತ ಮತ್ತು ಷಡಕ್ಷರದೇವರುಗಳನ್ನು ಉಪಾಯವಾಗಿ ಶ್ರೀರಂಗಪಟ್ಟಣದಿಂದ ದೂರವಿರುವಂತೆ ಮಾಡಿ ತಾನು ಪ್ರಬಲವಾಗಿ ಪ್ರಧಾನಮಂತ್ರಿಯಾದನೆಂಬ ಕಥೆಯಲ್ಲಿ ಇದೆ. ಚಿಕ್ಕದೇವರಾಜನು ಶ್ರೀ ವೈಷ್ಣವ ಧರ್ಮ ಸ್ವೀಕಾರ ಮಾಡಲು ಈತನೆ ಕಾರಣನೆಂದು ಹೇಳುತ್ತಾರೆ. ಇವನ ತಂದೆ ಅಳಿಸಿಂಗಾರಾರ್ಯ, ತಾಯಿ ಸಿಂಗಾರಮ್ಮ "ಮಿತ್ರವಿಂದಾಗೋವಿಂದ ಕನ್ನಡದ ಮೊದಲ ನಾಟಕದ ಕರ್ತೃ ಸಿಂಗಾರಾಯರ" ಈತನ ಸಹೋದರ. ಈತನನ್ನು ವಿದ್ಯಾವಿಶಾರದನೆಂದೂ, ಕವಿ ಹಾಗೂ ಪಂಡಿತನೆಂದು ಹೊಗಳಲಾಗಿದೆ, ಇವನು ಅಪ್ರತಿಮವೀರಚರಿತೆ, ಚಿಕ್ಕದೇವರಾಜ ವಂಶಾವಳಿ, ಚಿಕ್ಕದೇವರಾಜವಿಜಯ, ಚಿಕ್ಕದೇವರಾಜ ಶತಕ ಮುಂತಾದ ಕೃತಿಗಳನ್ನು ರಚಿಸಿದ್ದಾನೆ, ಚಿಕ್ಕದೇವರಾಜ ಶತಕ ಈವರೆಗೆ ದೊರೆತಿಲ್ಲ ಈತ ಹುಟ್ಟಿದ್ದು ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದಲ್ಲಿ.

ಚಿಕ್ಕದೇವರಾಜ ವಂಶಾವಳಿ ಒಂದು ಚಾರಿತ್ರಿಕ ಗ್ರಂಥ, ಇದು ಹಳಗನ್ನಡದಲ್ಲಿದೆ. ಚಿಕ್ಕದೇವರಾಜನವರೆಗಿನ ಮೈಸೂರು ಅರಸರ ವಂಶಾವಳಿಯ ವಿವರ ಕೊಡುತ್ತದೆ, "ಕವಿಲ್ಲಿ ಕಲ್ಪನಾ ವಿಲಾಸವಿದೆಯೇ ಹೊರತು ಇತಿಹಾಸಕಾರನ ವಸ್ತುಸ್ಥಿತಿಯ ಖಚಿತೆಯಾಗಲಿ ಪ್ರಮಾಣ

ಜ್ಞಾನವಾಗಲಿ, ಐತಿಹಾಸಿಕ ಪ್ರಜ್ಞೆಯಾಗಲಿ ಇಲ್ಲ" ಎಂಬುದು ವಿಮರ್ಶಕರ ಅಭಿಪ್ರಾಯ. ಅಪೂರ್ವವಾದ ಗದ್ಯ ಶೈಲಿ ಈ ಕೃತಿಯ ಜೀವಾಳ ಹಳಗನ್ನಡ ಗದ್ಯ ಕೃತಿಗಳ ಸಾಲಿನಲ್ಲಿ ಈ ಕೃತಿಗೊಂದು ಸ್ಥಾನವಿದೆಯೆಂಬುದರಲ್ಲಿ ಅನುಮಾನವಿಲ್ಲ. ಚಿಕ್ಕದೇವರಾಜ ವಿಜಯ ಒಂದು ಚಂಪೂ ಕಾವ್ಯ ಇದರಲ್ಲಿ ಆರು ಆಶ್ವಾಸಗಳಿವೆ. ಮೈಸೂರು ಅರಸರ ಇತಿಹಾಸ ಕಾವ್ಯಮಯವಾಗಿ ವರ್ಣಿತವಾಗಿದೆ. ಚಿಕ್ಕದೇವರಾಜನ ಬಾಲ್ಯ ಶಿಕ್ಷಣ ಸಂಗೀತ ಜ್ಞಾನ ಇವೆಲ್ಲಾ ಹೃದಯಂಗಮವಾಗಿ ಮೂಡಿಬಂದಿವೆ. ಪ್ರಕೃತಿ ವರ್ಣನೆಯಲ್ಲಿ ನಾವೀನತೆ ಕಂಡುಬರುತ್ತದೆ. ಅಪ್ರತಿಮ ವೀರ ಚರಿತೆ ಒಂದು ಅಲಂಕಾರ ಗ್ರಂಥ. ಇದು ಪ್ರಾಚೀನ ಸಂಸ್ಕೃತ ಅಲಂಕಾರ ಗ್ರಂಥಗಳನ್ನು ವಿಶೇಷವಾಗಿ ಕುಮಲಯಾನಂದವನ್ನು ಅನುಸರಿಸಿ ರಚಿತವಾಗಿದೆ. ತಾನು ಈ ಗ್ರಂಥವನ್ನು ಚಿಕ್ಕದೇವರಾಜನ ಅಜ್ಞಾನುಸಾರ ಬರೆದನೆಂದು ತಿರುಮಲಾರ್ಯ ಹೇಳಿಕೊಂಡಿದ್ದಾನೆ. ಒಬ್ಬ ಆಡಳಿತಗಾರ ನಾಗಿದ್ದು ಕೊಂಡು ಕಾವ್ಯ ಪ್ರಪಂಚದಲ್ಲಿ ಕೆಲಸ ಮಾಡಿರುವ ತಿರುಮಲಾರ್ಯನ ಶಕ್ತಿ ಮೆಚ್ಚು ವಂಥದು. ಈತ ಶ್ರೀವೈಷ್ಣವ ಧರ್ಮ ಪ್ರಚಾರವನ್ನು ಅಪಾರವಾಗಿ ಮಾಡಿದ. ನಾಗಮಂಗಲ ತಾಲ್ಲೂಕಿನ ಕೋಟೆಬೆಟ್ಟದ ಮೇಲೆ ಒಂದು ವೆಂಕಟರಮಣ ಸ್ವಾಮಿ ದೇವಾಲಯ ಕಟ್ಟಿಸಿದ, ಕನ್ನಡ ಜನಪದ ಕಾವ್ಯ ಪ್ರಕಾರಗಳಲ್ಲೊಂದಾದ ಭಾಗವಂತಿಕೆ ಮೇಳ ಈತನ ಸೃಷ್ಟಿ ಎಂಬ ನಂಬಿಕೆಯಿದೆ. ಈ ಸಂಪ್ರದಾಯ ಈಗಲೂ ಪ್ರತಿ ಕಾರ್ತಿಕ ಮಾಸದಲ್ಲಿ ನಡೆದುಕೊಂಡು ಬರುತ್ತಿದೆ ಎಂದು ಹೇಳುತ್ತಾನೆ. ತಿರುಮಲಾರ್ಯ ತನ್ನ ಕೊನೆಯ ದಿನಗಳನ್ನು ಕೋಟೆ ಬೆಟ್ಟದಲ್ಲಿ ಕಳಿದನಂತೆ.

ಮಂಡ್ಯ ಜಿಲ್ಲೆ ಹಲವು ಕಾರಣಗಳಿಂದಾಗಿ ಕರ್ನಾಟಕ ಹಾಗೂ ಭಾರತದ ಗಮನವನ್ನು ಸೆಳೆದುಕೊಂಡ ಜಿಲ್ಲೆ. ಐತಿಹಾಸಿಕವಾಗಿ, ಪ್ರಾಕೃತಿಕವಾಗಿ, ಧಾರ್ಮಿಕವಾಗಿ ಅಷ್ಟೆ ಅಲ್ಲದೆ, ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ಸಾಹಿತ್ಯ. ಕಲೆ. ಮುಂತಾದ ಕ್ಷೇತ್ರಗಳಲ್ಲಿಯೂ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಶ್ರೀರಂಗಪಟ್ಟಣ, ಮೇಲುಕೋಟೆ, ನಾಗಮಂಗಲ ಈ ಜಿಲ್ಲೆಗೇ ಸೇರಿದವುಗಳು. ಇವುಗಳು ಇತಿಹಾಸ, ಧರ್ಮ ಹಾಗೂ ಕಲೆಯ ದೃಷ್ಟಿಯಿಂದಲೂ ಮಹತ್ವವನ್ನು ಪಡೆದುಕೊಂಡಿವೆ. ಇದೇ ಜಿಲ್ಲೆಗೆ ಸೇರಿದ ಶಿವನಸಮುದ್ರ ಪ್ರಸಿದ್ಧ ಜಲಪಾತವನ್ನು ಹೊಂದಿದ್ದು, ವಿದ್ಯುಚ್ಛಕ್ತಿ ಕೇಂದ್ರವಾಗಿಯೂ ಗಮನ ಸೆಳೆದಿದೆ. ಮುನ್ನೂರು ಅಡಿ ಎತ್ತರದಿಂದ ಕೆಳಕ್ಕೆ ಜಿಗಿಯುವ ಗಗನಚುಕ್ಕಿ, ಭರಚುಕ್ಕಿ, ಶಿವನಸಮುದ್ರ ಆಕರ್ಷಕ ಪ್ರಕೃತಿ ಸಂಪತ್ತಾಗಿದ್ದು ಪ್ರೇಕ್ಷಕರ ಕಣ್ಮನಗಳನ್ನು ತಣಿಸುವ ಸುಂದರ ತಾಣವಾಗಿದೆ. ಪ್ರಕೃತಿಯ ಶ್ರೀಮಂತಿಕೆಯನ್ನು ಮೆರೆದಿರುವ ಶ್ರೀ ಆದಿಚುಂಚನಗಿರಿ, ಮೇಲುಕೋಟೆ ಕ್ಷೇತ್ರಗಳು ಧಾರ್ಮಿಕವಾಗಿಯೂ ಆಕರ್ಷಣೀಯವಾದವುಗಳು. ಹಲವು ಕವಿಗಳಿಗೆ ಪ್ರೇರಣೆ ನೀಡಿ ಶ್ರೇಷ್ಠ ಸಾಹಿತ್ಯದ ಕೊಡುಗೆಗೆ ಕಾರಣವಾದ ಕ್ಷೇತ್ರಗಳು ಈ ಜಿಲ್ಲೆಗೇ ಸೇರಿದವುಗಳು. ಮಂಡ್ಯಜಿಲ್ಲೆಯ ಆರ್ಥಿಕ ಸಾಮಾಜಿಕ ಸ್ಥಿತಿಗತಿಗಳನ್ನು ಉತ್ತಮಗೊಳಿಸಲು

ಕಾರಣವಾದ ಕಾವೇರಿ ನದಿ ಈ ಜಿಲ್ಲೆಯ ಮೂಲಕವೇ ಹಾದು ಹೋಗಿದೆ.ಲೋಕಪಾವನಿ ಹಾಗೂ ಶಿಂಷಾ ನದಿಗಳು ಈ ಜಿಲ್ಲೆಯನ್ನು ಪಾವನಗೊಳಿಸಿವೆ.ಗಂಗರು ರಾಷ್ಟ್ರಕೂಟರು ಹೊಯ್ಸಳ ಮುಂತಾದ ರಾಜಮನೆತನಗಳು ರಾಜಕೀಯವಾಗಿ ಮೆರೆದುದರ ಬಗ್ಗೆ ದಾಖಲೆಗಳಿವೆ.ಹಾಗಾಗಿಯೆ ಆ ರಾಜಕೀಯ ಚಟುವಟಿಕೆಗಳ ನಂಟು ಗಂಟು ಇನ್ನೂ ನಸುಕಾಗಿಯೆ ನಳನಳಿಸುತ್ತಿದೆ. ಕರ್ನಾಟಕದ ಹಾಗೂ ಭಾರತದ ರಾಜಕೀಯ ಕ್ಷೇತ್ರಕ್ಕೆ ಹಲವು ಮಂದಿ ಶ್ರೇಷ್ಠ ರಾಜಕಾರಣಿಗಳನ್ನು ಕೊಟ್ಟ ಹೆಮ್ಮೆಯೂ ಈ ಜಿಲ್ಲೆಗೇ ಸೇರುತ್ತದೆ.

ಶಾಸನ ಸಂ.೮೯ ಅರುವನಹಳ್ಳಿಯ ಜಮೀನುಗಳನ್ನು ಹಂಚಿಕೆ ಮಾಡಿದ ಬಗ್ಗೆ ವಿವರ ಇರಬಹುದು. ಈ ಸಂಧರ್ಭದಲ್ಲಿ ಹಾಜರಿದ್ದ ಕೆಲವು ವ್ಯಕ್ತಿಗಳ ಹೆಸರುಗಳೂ ಈ ಶಾಸನದಲ್ಲಿ ಅಡಕವಾಗಿದೆ. ಉದಾ: ಕರಿಯಹಳ್ಳಿಯ ಬಿಳಿಯಮಾರಪ್ಪ, ಹುಸುಗೂರ ಮಂಚಿಗೌಡನಕಾಳಪ್ಪ, ಬನ್ನಹಳ್ಳಿಯ ಮಲ್ಲಪ್ಪ ಇತ್ಯಾದಿ ಈ ಶಾಸನವನ್ನು ಊರ ಸೇನೆಬೂವ ಚೌಡ ಬರೆದಿರುತ್ತಾನೆ.

ಕೀರ್ತಿದೇವರಸನ ಮಕ್ಕಳಾದ ದಯಣ್ಣ, ನಾಗಪ್ಪ, ಬಾಚಿಯಪ್ಪ ರವರು ತಮ್ಮ ಗೌಡನಾದ ಮುಸುಕು ಮಾದೇಗೌಡನ ಮಗ ಚೌಡೆಗೌಡನಿಗೆ ಕೊಟ್ಟ ಕೊಡುಗೆಯಾ ವಿವರ.

ಶಾಸನ ಸಂ.೯೬ ಅರುವನಹಳ್ಳಿ ಇನ್ನೊಂದು ಹೊಲದಲ್ಲಿರುವ ವೀರಗಲ್ಲು, ಕಾಲ.೧೩೬೯. ಕೀರ್ತಿ ಅರಸನ ಮಗನಾದ ನಾಗರಸನು ವೀರ ಮರಣ ಹೊಂದಲು ಆತನೊಡನೆ ಸಹಗಮನ ಹೊಂದಿದ ಆತನ ಪತ್ನಿಯರಾದ ಬಯಿಚಕ್ಕ, ಬಾಯಿದೇವಿ ಮತ್ತು ಮಾದರಗೌಡಿಯರ ವೀರಮಾಸ್ತಿಕಲ್ಲು.

ಸಿದ್ದೇದೇವರ ಗುಡಿಯ ಪೂರ್ವಕ್ಕೆ ಇರುವ ವೀರಗಲ್ಲು. ಇದೊಂದು ವೀರಗಲ್ಲು. ಶಾಸನದ ಕಾಲ ಕ್ರಿ.ಶ.೧೧೯೨ ಗೋವುಗಳನ್ನು ಅಪಹರಿಸಲು ಬಂದ ಪೋಲಗರ ವಿರುದ್ಧ ಹೋರಾಡಿ ಸತ್ತ ಪೆರುಮಾಳನಾಯಕನ ವಿವರವನ್ನು ಈ ಶಾಸನ ನೀಡುತ್ತದೆ. ಪೆರಮಾಳ ನಾಯಕನು ಚಟ್ಟಯ್ಯನಾಯಕನ ಮಗ. ಈತ ಬಡುಗುಡು ನಾಡಿನ ಕಡಲವಾಗಿಲದವನು ಮತ್ತು ಮುಗರನಾಡಿನ ಅಧಿಪತಿ

೧೧೯ ಕಡ್ಲವಾಗಿಲು ಅದೇ ಸ್ಥಳದಲ್ಲು ಇದೊಂದು ವೀರಗಲ್ಲು ಶಾಸನ ಸವೆದಿದೆ. ಈ ವೀರಗಲ್ಲನ್ನು ಸ್ಥಾಪಿಸಿದವನು ಕಡಿಲವಾಗಿಲಿನ ದಾಯೋಜನ ಮಗ ದಾಯೋಜ. ಸತ್ತ ವೀರನ ಹೆಸರು ಅಳಿಸಿಹೋಗಿದೆ. ಶಾಸನದ ಕಾಲ ಸುಮಾರು ೧೩ನೇ ಶತಮಾನ.

ಕಾಲ ೧೧೯೨ ದೊರೆ. ಹೊಯ್ಸಳ ೨ನೇ ವೀರಬಲ್ಲಾಳ ಇಂದೊಂದು ವೀರಗಲ್ಲು. ಗೋವುಗಳ ಸಂರಕ್ಷಣೆಯಲೂ ಸತ್ತ ಕಡಿಲವಾಗಿಲ ಕಾಮೇಯನಾಯಕ ನಿಧನ ಹೊಂದಿದ ವಿವರವನ್ನು ನೀಡುತ್ತವೆ. ಈ ವೀರಗಲ್ಲನ್ನು ಈತನ ಮಗ ತಲಗಾಳುಗೌಡ ಪ್ರತಿಷ್ಠಾಪಿಸುತ್ತಾನೆ. ಸತ್ತ ಕಾಮೇಯನಾಯಕ ಸೋಸಲೆನಾಡಿನ ಅಧಿಪತಿ ಚಿಕ್ಕೀಯ ನಾಯಕನಮಗ. ಈ ಶಾಸನವನ್ನು ಕಲ್ಲಿನಲ್ಲಿ ಕೆತ್ತಿದವನು ಪುರದಚಾರಿಯ ಮಗ ಮಾಂಡಲೀಕಾಚಾರಿ.

ಇಷ್ಟೆಲ್ಲಾ ಪ್ರಸಿದ್ಧಿಯ ನೆಲೆಯಾಗಿರುವ ಮಂಡ್ಯಜಿಲ್ಲೆ ಸಾಹಿತ್ಯಕವಾಗಿಯೂ ತನ್ನಬೆಲೆ ಏನೆಂಬುದನ್ನು ತೋರಿಸಿ ಕೊಟ್ಟಿದೆ. ಷಡಕ್ಷರದೇವ, ತಿರುಮಲಾರ್ಯ, ಸಿಂಗರಾರ್ಯ, ಚಿಕ್ಕುಪಾಧ್ಯಾಯ, ಚಿಕ್ಕದೇವರಾಜ ಒಡೆಯರು, ಕಿಕ್ಕೇರಿಯ ಆರಾಧ್ಯ ನಂಜುಂಡ, ಸಂಚಿಹೊನ್ನಮ್ಮ, ಶೃಂಗಾರಮ್ಮ, ಮೇಲುಕೋಟೆ ರಾಜಮ್ಮ ಮುಂತಾದವರು ತಮ್ಮ ವೈವಿಧ್ಯಪೂರ್ಣ ಸಾಹಿತ್ಯದ ಕೊಡುಗೆಯಿಂದ ಕನ್ನಡ ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸಿದ್ದಾರೆ. ಆ ಪರಂಪರೆಯೇನೂ ಅಷ್ಟಕ್ಕೇ ನಿಂತಿಲ್ಲ. ತನ್ನ ಭವ್ಯ ಪರಂಪರೆಯನ್ನು ಅಷ್ಟೇ ಅನುಪಮವಾಗಿ ಮುಂದುವರಿಸಿಕೊಂಡು ಬಂದಿದೆ. ಸಾಹಿತ್ಯರಂಗದ ಬಹುಮುಖ್ಯ ಪ್ರಕಾರಗಳಾದ ಕಾವ್ಯ, ಕತೆ, ನಾಟಕ, ಕಾದಂಬರಿ, ಪ್ರಬಂಧ ಪ್ರಕಾರಗಳೇ ಅಲ್ಲದೆ, ಭಾಷಾಂತರ, ರೂಪಾಂತರ, ವಿಮರ್ಶೆ ಮುಂತಾದ ಕ್ಷೇತ್ರಗಳಿಗೂ ವಿಶಿಷ್ಟ ಕೊಡುಗೆಯನ್ನು ಕೊಟ್ಟ ಹಲವುಮಂದಿ ಈ ಜಿಲ್ಲೆಗೆ ಸೇರಿದವರು. ನವೋದಯ ಸಾಹಿತ್ಯದ ನಾಂದಿಯನ್ನು ಹಾಡಿದ, ಆಧುನಿಕ ಕನ್ನಡ ಸಾಹಿತ್ಯಕ್ಕೆ ಅಪೂರ್ವಕೊಡುಗೆಯನ್ನು ಕೊಟ್ಟ ಈ ಜಿಲ್ಲೆಯ ಲೇಖಕರನ್ನು ಅವರ ಸಾಧನೆಗಳನ್ನು ಗುರುತಿಸುವುದು ಪ್ರಸ್ತುತ ಲೇಖನದ ಉದ್ದೇಶ.

ಈ ಲೇಖನ ಕೃತಿಕಾರರ ಸಾಧನೆಯ ಸಮೀಕ್ಷೆಗಷ್ಟೇ ಮೀಸಲಾದದ್ದೇ ಹೊರತು, ಅವರ ಕೃತಿ ವಿಮರ್ಶೆಗಲ್ಲ. ಲೇಖಕರ ಒಟ್ಟು ಕೊಡುಗೆಯನ್ನು ಇಲ್ಲಿ ಗಮನಿಸಲಾಗಿದೆ.

ಕನ್ನಡ ನವೋದಯ ಕಾಲದ ಸಾಹಿತ್ಯವನ್ನು ಶ್ರೀಮಂತಗೊಳಿಸಲು ಕಾರಣರಾದ ಮಹಾಪುರುಷರಲ್ಲಿ ಅನೇಕರು ಬಹುಮುಖ ಪ್ರತಿಭೆಯ ಧೀಮಂತ ವ್ಯಕ್ತಿಗಳು. ವೃತಿ ಬೇರೆ ಬೇರೆಯಾಗಿದ್ದರೂ ಪ್ರವೃತ್ತಿಯಲ್ಲಿ ಸಾಹಿತ್ಯ ಪ್ರೇಮಿಗಳಾಗಿ ಸಾಹಿತ್ಯ ರಚನೆ ಮಾಡಿದವರು, ಆದು ಅವರಿಗೊಂದು ಹವ್ಯಾಸವಾಗಿ ಬಂತು. ಕನ್ನಡ ಭಾಷೆ, ಸಾಹಿತ್ಯ ಹಾಗೂ ಸಂಸ್ಕೃತಿಗಳ ಮೇಲಿನ ಅಭಿಮಾನ, ಪ್ರೇಮ ಅವರುಗಳಿಂದ ಈ ಕೆಲಸವನ್ನು ಆಗುಮಾಡಿಕೊಟ್ಟಿತು. ಹಾಗಾಗಿ ಆಂದಿನಿಂದ ಇಂದಿನವರೆವಿಗೂ ಮಂಡ್ಯ ಜಿಲ್ಲೆ ಸಾಹಿತ್ಯ ಚಟುವಟಿಕೆಗಳ ಕೇಂದ್ರವಾಗಿ ತನ್ನ ಕೀರ್ತಿಯನ್ನು ಪಡೆದಿದೆ. ಹೊಸಗನ್ನಡ ಸಾಹಿತ್ಯ ಕ್ಷೇತ್ರಕ್ಕೆ ಕೃಷಿಮಾಡಿ ಒಳ್ಳೆಯನಾಂದಿಯನ್ನು ಹಾಡಿದ ಹಾಗೂ ಮುಂದಿನ ಪೀಳಿಗೆಗೆ ದಾರಿದೀಪವಾದ ಹಲವು ಮಹನೀಯರು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಭದ್ರವಾಗಿ ಸ್ಥಾನಪಡೆದಿರುವುದಷ್ಟೇ ಅಲ್ಲದೆ, ಕನ್ನಡ ಜನಮನದಲ್ಲಿ ಶಾಶ್ವತವಾಗಿ ನೆಲೆಯೂರಿದ್ದಾರೆ.

ನಮ್ಮ ರಾಜ್ಯದಲ್ಲಿ ಮೊಟ್ಟಮೊದಲು ಸ್ಥಾಪಿತವಾದ ಸಾಮ್ರಾಜ್ಯಗಳು ಎರಡು. ಕ್ರಿ.ಶ.೪ನೇ ಶತಮಾನದಲ್ಲಿ ಒಂದು, ಉತ್ತರ ಕನ್ನಡ ಜಿಲ್ಲೆಯ ಬನವಾಸಿಯಲ್ಲಿ ಸ್ಥಾಪಿತವಾದ ಕದಂಬ ರಾಜ್ಯ ಮತ್ತೊಂದು ಕೋಲಾರ ಹಾಗೂ ತಲಕಾಡನ್ನು ರಾಜಧಾನಿಯಾಗಿ ಮಾಡಿಕೊಂಡು ಆಳಿದ ಗಂಗರ ಸಾಮ್ರಾಜ್ಯ. ಗಂಗರು ಸುಮಾರು ೧೦ನೇಯ ಶತಮಾನದ ಕೊನೆಯವರೆಗೂ ಆಳಿದರು. ದುರ್ವಿನಿತ, ಶ್ರೀಪುರುಷ, ಇಮ್ಮಡಿಮಾರಸಿಂಹ (೯೬೩-೯೭೪) ಮುಂತಾದವರು. ಗಂಗರ ಪ್ರಖ್ಯಾತ ದೊರೆಗಳು ದಕ್ಷಿಣ ಕರ್ನಾಟಕದ ಎಲ್ಲಾ ಭಾಗಗಳಲ್ಲೂ ಅನೇಕ ಶತಮಾನಗಳವರೆಗೆ ಇವರ ಆಳ್ವಿಕೆಯಲ್ಲಿ ಸೇರಿದವು. ಬಹುಶಃ ಇವರಷ್ಟು ದೀರ್ಘ ಕಾಲ ರಾಜ್ಯಭಾರ ಮಾಡಿದ ಬೇರೆ ರಾಜವಂಶವೇ ಇಲ್ಲ ಎಂದು ಹೇಳಬಹುದು.

ಇವರು ಕಲೆಗೆ ಹೆಚ್ಚು ಪ್ರೋತ್ಸಾಹ ಕೊಟ್ಟರು. ಜೈನಧರ್ಮ ಮುಖ್ಯವಾಗಿದ್ದರು, ವೈದಿಕ ಧರ್ಮಕ್ಕೂ ಪ್ರೋತ್ಸಾಹ ನೀಡಿದರು. ಈ ಧರ್ಮಗಳಿಗೆ ಸೇರಿದ ಅನೇಕ ದೇವಾಲಯಗಳು ಇವರ ಕಾಲದಲ್ಲಿ ನಿರ್ಮಾಣಗೊಂಡವು. ವಿಶ್ವವಿಖ್ಯಾತ ಗೊಮ್ಮಟ ಇವರ ಕಾಲದ ರಚನೆ. ಕಂಬದಹಳ್ಳಿ, ಅರೆತಿಪ್ಪೂರು, ಶ್ರವಣಬೆಳಗೊಳ, ಪ್ರಸಿದ್ಧ ಜೈನ ಕೇಂದ್ರಗಳಾದರೆ ನರಸಿಂಹಮಂಗಲ (ಚನ್ನರಾಯಪಟ್ಟಣ ತಾ॥) ಸಿಂಧುಘಟ್ಟ (ಕೃಷ್ಣರಾಜಪೇಟೆ) ತಲಕಾಡು ಶೈವ ಕೇಂದ್ರಗಳು.

ಗಂಗರ ಕಾಲದಲ್ಲಿ ತಿಪ್ಪೂರು ಒಂದು ಸಮೃದ್ಧವಾದ ಹಾಗೂ ಅತ್ಯಂತ ವೈಭವದ ಕೇಂದ್ರವಾಗಿತ್ತು. ಈ ವಿಷಯ ಇಲ್ಲಿ ದೊರೆತ್ತಿರುವ ೬ ಶಾಸನಗಳಿಂದ ತಿಳಿಯುತ್ತದೆ. ಸಮೀಪದ ಕೂಲಿಗೆರೆಯಲ್ಲೂ ದೊರೆತ್ತಿರುವ ಶಾಸನದಿಂದ ಮಣೆಲೇರ ಎಂಬಾತ ಕನಕಗಿರಿಯಲ್ಲಿ ಜೈನ ಬಸದಿಯನ್ನು ನಿರ್ಮಿಸಿದ ಬಗ್ಗೆ ಉಲ್ಲೇಖವಿದೆ. ಕಾಲ ಕ್ರಿ.ಶ.೯೧೬-೯೧೭. ಎರಡನೇ ಶಾಸನ ತಿಪ್ಪೂರು ದಾಸನ ಮಗ ಊರ ಒಡೆಯ ಸಿರಂಗ ಎಂಬಾತ ಊರನ್ನು ಹಾಗೂ ಸ್ತ್ರೀಯರನ್ನು ರಕ್ಷಿಸುತ್ತಾ ಪ್ರಾಣಾರ್ಪಣೆ ಮಾಡಿದ ವೀರಗಲ್ಲಿದೆ. ಈ ಊರನ್ನು ೧೪-೧೫ನೇ ಶತಮಾನದಲ್ಲಿ ಮದ್ದೂರಿನ ರಾಮಚಂದ್ರ ದೇವರಿಗೆ ದತ್ತಿ ನೀಡಿದ ಉಲ್ಲೇಖ ಈ ಶಾಸನದಲ್ಲಿದೆ.

ಮದ್ದೂರು ತಾಲ್ಲೂಕು ಅರುವನಹಳ್ಳಿ ಗ್ರಾಮವು ಪ್ರಾಚೀನ ಇತಿಹಾಸದ ಪುಟಗಳಲ್ಲಿ ವಿಶಿಷ್ಟವಾದ ಸ್ಥಾನವನ್ನು ಹೊಂದಿದ್ದು, ಹೊಯ್ಸಳ ಮತ್ತು ವಿಜಯನಗರದ ಆಳ್ವಿಕೆಯ ಕಾಲದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದು, ಅದಕ್ಕೆ ಸಾಕ್ಷಿಯಾಗಿ ಹತ್ತಾರು ಸಾಕ್ಷಿಗಳನ್ನು ಬಿಟ್ಟುಹೋಗಿದೆ. ಈ ಗ್ರಾಮದಲ್ಲಿರುವ ವೀರಗಲ್ಲುಗಳು, ಮಾಸ್ತಿಗಲ್ಲುಗಳು ಈ ಮಣ್ಣಿನ ಪೌರುಷದ ಕಥೆಯನ್ನು ಸಾರುತ್ತವೆ. ತ್ಯಾಗ ಬಲಿದಾನದಕ್ಕೆ ಹೆಗ್ಗುರುತಾಗಿವೆ. ದತ್ತಿಶಾಸನಗಳು, ಕರೆಗಳ ನಿರ್ಮಾಣದ ಶಾಸನಗಳು ಈ ಸಾಮಂತರ ಹೃದಯ ವೈಶಾಲಿಯ ಹಾಗೂ ಕರ್ತವ್ಯ ಪ್ರಜ್ಞೆಗೆ ಸಾಕ್ಷಿಯಾಗಿವೆ.

ಪ್ರಸ್ತುತ ಸುಮಾರು ೨೦೦ ಮನೆಗಳಿರುವ ಈ ಪುಟ್ಟ ಗ್ರಾಮದ ಇತಿಹಾಸವನ್ನು ಶಾಸನಗಳ ಆಧಾರದಿಂದ ಕ್ರಿ.ಶ.೧೩೧೬ ರಿಂದ ಗುರುತಿಸಬಹುದು. ಇದು ಹೊಯ್ಸಳ ದೇವ ೩ನೇಯ ಬಲ್ಲಾಳನ ಕಾಲ. ಈತನ ಆಳ್ವಿಕೆಯ ಸಂದರ್ಭದಲ್ಲಿ ಅರುವನಹಳ್ಳಿ ಗ್ರಾಮವನ್ನು ಬಡವಾರ ವಂಶದ ಕೀರ್ತಿರಾಯ ಎಂಬಾತ ಆಳ್ವಿಕೆ ನಡೆಸುತ್ತಿದ್ದ. ಪರಾಕ್ರಮಿಯಾದ ಕೀರ್ತಿರಾಯನಿಗೆ ದೊರೆ ಬಲ್ಲಾಳನು ಅರುವನಹಳ್ಳಿ ಹಾಗೂ ಕೆಲವು ಉಪಗ್ರಾಮಗಳನ್ನು, ಕೆರೆ-ಕಾಲುವೆಗಳನ್ನು ಉಂಬಳಿಯಾಗಿ ನೀಡುತ್ತಾನೆ. ಇದು ಸೂರ್ಯ-ಚಂದ್ರ ಇರುವವರೆಗೂ ಮುಂದುವರಿಯಬೇಕೆಂದು ಹರಸುತ್ತಾನೆ. ಶಾಸನದ ಪ್ರಮುಖ ಭಾಗ ಸವೆದಿದೆ. ಈ ಶಾಸನದ ಆಧಾರದ ಮೇಲೆ ಬಹುಶಃ ಇದು ಅರುವನಹಳ್ಳಿ ದಣ್ಣಾಯಕರ ಪ್ರಾರಂಭದ ಸಂದರ್ಭ ಎಂದು ಊಹಿಸಬಹುದು. ಹಾಗಾಗಿ ಅರುವನಹಳ್ಳಿ ಮುಖ್ಯಸ್ಥರ ಇತಿಹಾಸವನ್ನು ಇಲ್ಲಿಗೆ ಸುಮಾರು ೭೦೦ ವರ್ಷಗಳಿಂದ ಗುರುತಿಸಬಹುದಾಗಿದೆ. ಈ ವಂಶದ ಆಳ್ವಿಕೆಯ ಅಂತಿಮ ಶಾಸನ ಕ್ರಿ.ಶ.೧೩೮೮ರ ಶಾಸನವಾಗಿದೆ. ಶಾಸನಗಳ ಆಧಾರದಿಂದ ಸುಮಾರು ೭೨ ವರ್ಷಗಳ ಇತಿಹಾಸ ನಮಗೆ ದೊರಕುತ್ತದೆ.

ಕಾಲಾನುಕ್ರಮವಾಗಿ ಅವಲೋಕಿಸಿದಾಗ ಅರುವನಹಳ್ಳಿ ಗ್ರಾಮದ ಹೊಲವೊಂದರಲ್ಲಿ ಪೂರ್ವಕ್ಕೆ ಬಿದ್ದಿರುವ ಕಲ್ಲು (ಶಾ.೯೫) ಕೀರ್ತಿದೇವನ ಮೂರು ಮಂದಿ ಮಕ್ಕಳ ಹೆಸರನ್ನು ಉಲ್ಲೇಖಿಸಲಾಗಿದೆ. ದಯಣ್ಣ, ನಾಗಪ್ಪ ಮತ್ತು ಬಾಚಿಯಪ್ಪ ಈ ಮೂರು ಮಂದಿ ಮುಸುಕು ಮಾದೇಗೌಡನ ಮಗ ಚೌಡೇಗೌಡನಿಗೆ ಜಮೀನನ್ನು ದತ್ತಿ ನೀಡಿದ ಉಲ್ಲೇಖ ಈ ಶಾಸನದಲ್ಲಿದೆ. ಹೀಗೆ ದತ್ತಿ ನೀಡಿದ ಜಮೀನು ಕಪ್ಪು ಮಣ್ಣಿನಿಂದ ಕೂಡಿತ್ತು ಎಂಬ ಉಲ್ಲೇಖ ಶಾಸನದಲ್ಲಿದೆ.

ಕ್ರಿ.ಶ.೧೩೫೮ರ ಶಾಸನವು ಒಂದು ಪ್ರಮುಖ ಶಾಸನವಾಗಿದ್ದು, ಇದು ಖಜಾನೆಯಪ್ಪ ನವರ ಮನೆಯ ಬಳಿ ಇದೆ. (ಮನೆಯೊಂದರ ಪೂರ್ವಕ್ಕೆ ಇರುವ ಕಲ್ಲು) ಈ ಶಾಸನದ ಸಂದರ್ಭದಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಬುಕ್ಕರಾಯ, ಮಹಾರಾಯನು ಆಳ್ವಿಕೆ ನಡೆಸುತ್ತಿರುತ್ತಾನೆ. ಈ ಸಂದರ್ಭದಲ್ಲಿ ಅರುವನಹಳ್ಳಿಯ ಕೀರ್ತಿದೇವನ ಮಗನಾದ ಬಾಚಿಯಪ್ಪ ಕೈಗೊಂಡ ಅಭಿವೃದ್ಧಿ ಕಾರ್ಯಗಳ ಬಗ್ಗೆ ಬೆಳಕು ಚೆಲ್ಲುತ್ತದೆ.

ಬಾಚಿಯಪ್ಪನು ಅರುವನಹಳ್ಳಿ ಗ್ರಾಮದಲ್ಲಿ ತಮ್ಮ ಒಡೆಯನ ಹೆಸರಿನಲ್ಲಿ

೧. ಬುಕ್ಕರಾಯ ಸಮುದ್ರ ಎಂಬ ಕೆರೆ.

೨. ತನ್ನ ತಂದೆಯ ಹೆಸರಿನಲ್ಲಿ ಕೀರ್ತಿಸಮುದ್ರ ಎಂಬ ಕೆರೆ.

೩. ತನ್ನ ಹೆಸರಿನಲ್ಲಿ ಬಾಚಪ್ಪ ಕರೆ, ಚೌಡಪ್ಪನ ಕೆರೆ.

೪. ತನ್ನ ತಾಯಿಯ ಹೆಸರಿನಲ್ಲಿ ಮಾಳವ್ವನಕೆರೆ

ಹೀಗೆ ನಾಲ್ಕು ಕೆರೆಗಳನ್ನು ಕಟ್ಟಿಸುತ್ತಾನೆ. ಈ ಕೆರೆಗಳ ಸುತ್ತ ತೆಂಗಿನ ಮರ ಮತ್ತು ಇತರೆ ಮರಗಳು, ಅರಳಿ ಮರಗಳು ಅದಕ್ಕೆ ಮುಂಜಿ, ಅಡಕೆ ತೋಟ, ಅಣ್ಣ-ತಮ್ಮಂದಿರಲ್ಲೂ ವಿಭಾಗ, ಕೀರ್ತಿ ಅರಸನ ಮಕ್ಕಳಾದ ಹಿರಿಯ ಬಾಚಿಯಪ್ಪ ಮತ್ತು ಕಿರಿಯ ಬಾಚಿಯಪ್ಪ ಎನ್ನುವವರು ಪಿತ್ರಾರ್ಜಿತ ಆಸ್ತಿಯನ್ನು, ಗ್ರಾಮ, ಕೆರೆ, ತೋಟ, ಗದ್ದೆ, ಹೊಲ, ವಸ್ತು, ವಾಹನ, ಬಂಗಾರ, ಬೆಳ್ಳಿ, ಕಂಚು, ಕಬ್ಬು, ಎಮ್ಮೆ, ದನ, ಆಳುಗಳು, ಧಾನ್ಯ, ಬೆಳೆ, ಹಣ, ಸಾಲ ಇತ್ಯಾದಿಗಳನ್ನು ಪಡೆಯುತ್ತಾನೆ.

ಸಾಕ್ಷಿಗಳು:- ಹಾದರವಾಗಿಲ ಸಾಯನಾಯಕನ ಮಗದೆಪ್ಪ ಮಡಿಯನ ಹಾಗೆಯ ಮಾಯಿಗೌಡನ ಮಗ ಸಾವಂತಗೌಡ ಹುಲಿಯ ಕೆರೆಯ ಜಗ್ಗಗೌಡನ ಮಗ ಮಂಚೇಗೌಡ, ಮಾಲಗಾರನಹಳ್ಳಿಯ ರಂಗೇಗೌಡನ ಮಗ ಚಾಡಿಗೌಡರು ಇರುತ್ತಾರೆ. ಈ ಶಾಸನವನ್ನು ಅರಸನ ಕೆರೆಯ ಪದುಮಣ್ಣನ ಮಗ ಇರುಗಣ್ಣ ಬರೆಯುತ್ತಾನೆ. ಶಾಸನವು ೭೦೦ ವರ್ಷಗಳಷ್ಟು ಪ್ರಾಚೀನವಾಗಿದರೂ ಅಂದಿನ ವ್ಯವಹಾರ ಕುಶಲತೆಯ ಮೇಲೆ ಬೆಳಕು ಚೆಲ್ಲುತ್ತದೆ.

ಲಾಳನಕೆರೆಯ ಮಾದೇಶ್ವರ ಗುಡಿಯ ಮುಂದೆ ಇರುವ ಶಾಸನ ೧೧೬೫ ೨ನೇ ಬಲ್ಲಾಳನು ದೇವಾಲಯಕ್ಕೆ ನಂದಾದೀಪವನ್ನು ನೀಡಿ ಒಂದು ಕಲ್ಲಿನ ಗಾಣವನ್ನು ನೀಡಿದ್ದಾನೆ. ಲಾಳನ ಕೆರೆಯಲ್ಲಿ ಹೊಯ್ಸಳರ ಆಳ್ವಿಕೆಯಲ್ಲಿ ಅನೇಕ ಮಂದಿ ಉನ್ನತ ಸ್ಥಾನದಲ್ಲಿ ಇದ್ದರು. ದೊಡ್ಡಜಟಕ ಈಶ್ವರ ದೇವಾಲಯದ ಎಡಗೋಡೆಯ ಮೇಲೆ ಗಡಿಯನ್ನು ಸೂಚಿಸುವ ಕಲ್ಲಾಗಿದ್ದು, ೫೦ಗೇಣು ಅಳತೆಯ ಕಲ್ಲಾಗಿದೆ. ಇದನ್ನು ಕಿತ್ತವರು ನರಕಕ್ಕೆ ಹೋಗುತ್ತಾರೆ ಅವನ ಸಂತಾನ ಕ್ಷಯವಾಗುತ್ತದೆ.

ನಾಮಮಂಗಲ ವೀರಭದ್ರಸ್ವಾಮಿ ದೇವಾಲಯದ ಶಾಸನ ಈ ಹಿಂದೆ ವಸೂಲಾದ ತೆರಿಗೆಯಲ್ಲಿ ೫ ಫಣವನ್ನು ದೇವಾಲಯಕ್ಕೆ ನೀಡುತ್ತಿದ್ದು ಇನ್ನು ಮುಂದೆ ವಸೂಲಾದ ಎಲ್ಲಾ ತೆರಿಗೆಯನ್ನು ದೇವಾಲಯಕ್ಕೆ ನೀಡಬೇಕೆಂದು ಮಹಾಜನರು ತೀರ್ಮಾನಿಸಲಾಗಿತ್ತು. ರಾಮಚಂದ್ರಪುರ ೧೬-೧೭ ರಾಮಚಂದ್ರ ಹೆಬ್ಬಾರುವ ಕೆರೆನಿರ್ಮಿಸಿದ ಕೆಳಗೆರೆ ಮಲ್ಲಿಕಾರ್ಜುನ ದೇವಾಲಯ.

ಕೆಳಗೆರೆಯ ಹಿರಿಯ ಹೊನ್ನೇಯ ನಾಯಕನ ಮಗ ವರದೆಯನಾಯಕ ಮಲ್ಲಿಕಾರ್ಜುನ ದೇವಾಲಯ ನಿರ್ಮಿಸಿ, ಇದ್ದ ಹಳೆಯಕೆರೆ ಜೀರ್ಣೋದ್ಧಾರ ಮಾಡಿಸಿ, ಒಂದು ಹೊಸಕೆರೆಯನ್ನು ನಿರ್ಮಿಸಿ ಗ್ರಾಮದಲ್ಲಿ ವೇದಾಧ್ಯಯನ ಶಾಲೆ ತೆರೆದು ಊರನ್ನು ಅಗ್ರಹಾರವನ್ನಾಗಿ ಮಾಡಿ, ಊರಿಗೆ ವರದರಾಜಪುರ ಎಂದು ಹೆಸರಿಡುತ್ತಾನೆ.

ಪಾಳೇಗೊಡೆಯ ಬಳಿ ನಿಂತಿರುವ ಕಲ್ಲು ಕಾಲ.ಕ್ರಿ.ಶ.೧೧೩೧ ದೊರೆ. ಹೊಯ್ಸಳ ವಿಷ್ಣುವರ್ಧನ ಈ ಶಾಸನ ಬಹುತೇಕ ಅಳಿಸಿ ಹೋಗಿದೆ. ದೊರೆಯುವ ವಿಷಯದಿಂದ ಈ ಕೆಳಗಿನ ಅಂಶಗಳು ಸ್ಪಷ್ಟವಾಗುತ್ತದೆ. ಇದೊಂದು ದತ್ತಿಶಾಸನ. ಪರಗಡೆ ಮಲ್ಲಿನಾಥ ಎಂಬಾತ ಬಸದಿಯೊಂದನ್ನು ನಿರ್ಮಿಸಿ ಅದಕ್ಕೆ ದತ್ತಿ ನೀಡಿದ ವಿಚಾರ ಈ ಶಾಸನದಲ್ಲಿ ಜೈನ ಮುನಿಗಳಾದ ನಯಕೀರ್ತಿ ಹಾಗೂ ಭಾನುಕೀರ್ತಿ ಎನ್ನುವವರ ಉಲ್ಲೇಖವಿದೆ.

ಕೌಡ್ಲೆ ಗ್ರಾಮದ ಹೆಬ್ಬಾಗಿಲ ಬಳಿ ಇರುವ ಕಲ್ಲು ಕಾಲ.ಕ್ರಿ.ಶ.೧೬೬೩. ದೊರೆ ಮೈಸೂರು ದೇವರಾಜ ಒಡೆಯ ದೇವರಾಜ ಒಡೆಯರು (ಚಾಮರಾಜ ಒಡೆಯರ ಮೊಮ್ಮಗ ದೇವರಾಜ ಒಡೆಯರ ಮಗ) ಕೌಡ್ಲೆ, ನಾಗನಹಳ್ಳಿ, ಕರಡಿಕೊಪ್ಪಲು, ಕೋಡಿನಕೊಪ್ಪ, ಕೀಲಾರ ಮತ್ತು ಉಮ್ಮಡಹಳ್ಳಿ, ಯಲ್ಲಾಪುರ ಗ್ರಾಮಗಳನ್ನು ದೇವರಾಜಪುರ ಎಂಬ ಅಗ್ರಹಾರವನ್ನಾಗಿ ಮಾಡಿ ಸಕಲಶಾಸ್ತ್ರ ಪ್ರವೀಣರಾದ ಬ್ರಾಹ್ಮಣರಿಗೆ ದತ್ತಿನೀಡಿದ ಬಗ್ಗೆ. ದತ್ತಿ ನೀಡಿದ ಮಹಾರಾಜರು ಕೌಡ್ಲೆ ಗ್ರಾಮಕ್ಕೆ "ದೇವರಾಜಪುರ ಅಗ್ರಹಾರ" ಎಂದು ನಾಮಕರಣ ಮಾಡುತ್ತಾರೆ. ಶಾಸನದಲ್ಲಿ ಕೌಡ್ಲೆ ಗ್ರಾಮಕ್ಕೆ 'ಕೌಡಲಿ' ಕೌಡಲೆ ಎಂಬ ಹೆಸರುಗಳಿವೆ.

ಶ್ರೀ ಮದ್ರಾಜಾಧಿರಾಜ ಪರಮೇಶ್ವರ ಪ್ರೌಢಪ್ರತಾಪ ಅಪ್ರತಿಮ ವೀರ ಶ್ರೀ ಕೃಷ್ಣರಾಜ ವೊಡೆಯರು ಮಹಿಶೂರನಗರದಲ್ಲಿ ರತ್ನಸಿಂಹಾಸನರೂಢನಾಗಿ ಸುಖದಿಂದ ಪೃಥ್ವಿ ಸಾಮ್ರಾಜ್ಯವನ್ನು ಆಳುತ್ತಿರಲು ಅಮರ ಎಂಬುವವನು ಮುಕ್ಯಪ್ಪ ಮಾದಲು ಪುತ್ರನಾದ ವೇಲಾಯುದ ಮೊದಲಿ ಪುತ್ರನಾದ ನಲ್ಲತಂಬಿ ಮೂದಲಿಯು ಶ್ರೀ ಪಶ್ಚಿಮ ರಂಗನಾಥಸ್ವಾಮಿಯ ಸನ್ನಿಧಿಗೆ ಈಶಾನ್ಯ ಭಾಗದಲಿ ಸ್ವಾಮಿಯವರ ಪ್ರತಿನಿತ್ಯ ತಿರುಮಜ್ಜನ ಕೈಂಕರ್ಯಗಳಿಗೂ ಸಕಲ ಬ್ರಾಹ್ಮಣರಗಳ ಸ್ನಾನಪಾನಾದಿಗಳಿಗೂ ಉಪಯುಕ್ತವಾಗಲೆಂದು ವೇದಪುಷ್ಕರ್ಣಿಯನ್ನು ನಿರ್ಮಾಣ ಮಾಡಿ ಶ್ರೀರಂಗನಾಥಸ್ವಾಮಿಯವರ ಚರಣಾರವಿಂದಗಳಿಗೆ ಸಮರ್ಪಿಸಿದನು.

ಕ್ರಿ.ಶ.೧೩೮೧ರ ಶಾಸನವು ಒಂದು ಪ್ರಮುಖ ಶಾಸನವಾಗಿದೆ. ಇದು ಕೀರ್ತಿರಾಯನ ಮಗನಾದ ಬಾಚಿಯಪ್ಪ ನಿಧನಹೊಂದಿದ ವಿಷಯವನ್ನು ತಿಳಿಸುತ್ತದೆ. ಆ ಸಂದರ್ಭದಲ್ಲಿ ಆತನ ಮಗ ಬುಕ್ಕಣ್ಣ ಈ ಶಾಸನವನ್ನು ಹಾಕಿಸುತ್ತಾನೆ. ಈ ಸಂದರ್ಭದಲ್ಲಿ ತನ್ನ ತಂದೆ ಮಾಡಿದ ಮಹಾಕಾರ್ಯಗಳ ಪ್ರಸ್ತಾಪ ಮಾಡುತ್ತಾನೆ. (ಕೆರೆ ಕಟ್ಟಿಸುವುದು, ಮರಗಳನ್ನು ನೆಡೆಸಿದ್ದು) ಈ ಸಂದರ್ಭದಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಬುಕ್ಕರಾಯನ ಮಗ ಹರಿಹರ ಆಳುತ್ತಿರುತ್ತಾನೆ.

ಕಾಳಮ್ಮ ದೇವಸ್ಥಾನದ ಉತ್ತರಕ್ಕಿರುವ ಕಲ್ಲು ಕ್ರಿ.ಶ.೧೩೮೮ ಶಾಸನದ ಪ್ರಮುಖ ಭಾಗ ಸವೆದಿದೆ. ಅರುವನಹಳ್ಳಿಯ ಜಮೀನು ಇತ್ಯಾದಿಯನ್ನು ಹಂಚಿಕೆ ಮಾಡಿದ ಬಗ್ಗೆ ಉಲ್ಲೇಖವಿದೆ. ಈ ಸಂದರ್ಭದಲ್ಲಿ ಹಾಜರಿದ್ದ ಪ್ರಮುಖರ ಹೆಸರು ಈ ಶಾಸನದಲ್ಲಿದೆ. ಈ ಸಂದರ್ಭದಲ್ಲಿ ಹರಿಹರ ಮಹಾರಾಯನ ಆಳ್ವಿಕೆ ಇರುತ್ತದೆ. (ವಿ.ಎನ್.) ಈ ಶಾಸನದಲ್ಲಿ (ಪರನಾರಿ ಸಹೋದರ ಕೀರ್ತಿರಾಯ)

ಜೈನ ಅನುವರ್ತಿ ಹಾಗೂ ಕವಿ ಬಾಲಚಂದ್ರದೇವ ಇಲ್ಲಿಯವನೆಂದು ಹೇಳಲಾದ ಸಾಕಷ್ಟು ಆಧಾರಗಳಿವೆ. ಆತ ತನ್ನ ಮಕ್ಕಳಿಗೆ ಆಸ್ತಿಯ ಹಕ್ಕನ್ನು ಹಂಚಿರುವ ವಿವರಣಾತ್ಮಕ ಲಿಪಿ ಶಾಸನ ಸಾಹಿತ್ಯ ದೃಷ್ಟಿಯಿಂದಲೂ ಮನೋಜ್ಞವಾಗಿದೆ. ಇನ್ನು ಹೊಯ್ಸಳ ಎರಡನೇ ವೀರಬಲ್ಲಾಳನ (ಕ್ರಿ.ಶ. ೧೨೨೦-೧೨೩೮) ಕಾಲದ್ದು. ಮತ್ತೊಂದು ಆಧಾರವೆಂದರೆ ಬಾಲಚಂದ್ರದೇವ ತನ್ನ ತಂದೆ ಹಾಗೂ ಗುರುವಾದ ಕಂದರ್ಪದೇವ ಮತ್ತು ತಾಯಿ ಸೊನ್ನದೇವಿಯವರ ಜ್ಞಾಪಕಾರ್ಥವಾಗಿ ನೆಡಿಸಿದ ಶಾಸನ ಕಲ್ಲೊಂದು ಇಲ್ಲಿನ ಗುಡ್ಡದ ಮೇಲೆ ಕಾಣಸಿಗುತ್ತದೆ. ಇದೇ ಬಾಲಚಂದ್ರದೇವ ರಚಿಸಿದ ಎರಡು ಗ್ರಂಥಗಳ ಬಗ್ಗೆ ಜನ್ನ ಕವಿಯ ಅನಂತನಾಥಪುರಾಣ ಹಾಗೂ ಪಾರ್ಶ್ವಪಂಡಿತನ ಪಾರ್ಶ್ವನಾಥ ಪುರಾಣದಲ್ಲಿ ಉಲ್ಲೇಖಿಸಲಾಗಿದೆ.

ತಿಪ್ಪೂರು ಎಂಬ ಜಿನ ಕ್ಷೇತ್ರವು ಕಾಲಾನಂತರ ೧೪-೧೫ ನೇ ಶತಮಾನದೊತ್ತಿಗೆ ಮದ್ದೂರು ಶ್ರೀ ರಾಮಚಂದ್ರ ದೇವರಿಗೆ ಉಂಬಳಿಯಾಗಿ ಬಿಟ್ಟಿರುವ ಶಾಸನ ಕಂಡು ಬರುತ್ತದೆ

ಮದ್ದೂರು ತಾಲ್ಲೂಕು, ತೈಲೂರು ಗ್ರಾಮದ ಒಳಗೆರೆಯಲ್ಲಿ ಬಿದ್ದಿರುವ ಹಾಗೂ ಉತ್ತರಕೋಡಿ ಬಳಿ ನೆಟ್ಟಿರುವ ಎರಡು ಶಾಸನಗಳು ಪೂರ್ವದ ಹಳಗನ್ನಡದ ಅಕ್ಷರಗಳಿಂದ ಶೋಭಿಸಿವೆ. ಕ್ರಿ.ಶ. ಒಂಬತ್ತನೆಯ ಶತಮಾನಕ್ಕೆ ಸಂಬಂಧಪಟ್ಟಂತೆ ಕನ್ನಡ ಗದ್ಯದ ಲಕ್ಷಣವನ್ನೆತ್ತಿ ತೋರಿಸುವ ಶಿಲಾಶಾಸನಗಳು ಕರ್ನಾಟಕದಲ್ಲಿ ಬಹಳ ಕಡಿಮೆ. ಮೊದಲನೆಯ ಶಾಸನದಲ್ಲಿ ದಾನ ನೀಡುವ ಬಗೆಯನ್ನು ಸ್ವಾರಸ್ಯ ಪೂರ್ಣವಾಗಿ ಹೇಳಿದೆ. ತೈಲೂರ ಕೆರೆಯನ್ನು ನಿರ್ಮಿಸಿದ ಶಿಲ್ಪಿ ಪೊಲ್ಲಾಳ ಸೆಟ್ಟಿಗೆ ೩೫ ಖಂಡುಗದ ಭೂಮಿಯನ್ನು ಆತ ಇಚ್ಛೆ ಪಟ್ಟ ಕಡೆ ದಾನ ಕೊಡುವುದೆಂದು ಸಮೀಪದ ಕದಲೂರು ಗ್ರಾಮಸ್ಥರು ತೀರ್ಮಾನ ಕೊಟ್ಟಿದ್ದಾರೆ. ಅದೇ ೩೫ ಖಂಡುಗದ ಭೂಮಿಯಲ್ಲಿ ೫ ಖಂಡುಗದ ಭೂಮಿಯನ್ನು ಆತ ಸ್ವತಃ ಇಟ್ಟುಕೊಳ್ಳಬೇಕೆಂದು, (ಎಲ್ಲಿ ಆತ ದಾನವಾಗಿ ಬಂದ ಭೂಮಿಯೆನ್ನೆಲ್ಲ ಇತರರಿಗೆ ಹಸ್ತಾಂತರ ಮಾಡಿಬಿಡುವನೋ ಎಂಬರ್ಥವಿರಬೇಕು) ಉಳಿಕೆ ೩೦ ಖಂಡುಗ ಭೂಮಿಯನ್ನು ಪಾಲುಗಾರಿಕೆಗೋ ಅಥವಾ ಹಳ್ಳಿಯ ವಿಸ್ತರಣೆಗೋ ಅವನಿಚ್ಛೆಯಂತೆ ಉಪಯೋಗಿಸಬಹುದೆಂದೂ: ಮತ್ತೆ ಪೊಲ್ಲಾಳ ಸೆಟ್ಟ ಇಚ್ಚೆಪಟ್ಟ

ಕಡೆ ಮೂರು ಖಂಡುಗ ಭೂಮಿಯನ್ನು ತೋಟಕ್ಕಾಗಿ ದಾನ ಕೊಟ್ಟು : ಆ ತೋಟವು ಕಂದಾಯರಹಿತವಾಗಿಯೂ, ವರ್ಷಕ್ಕೊಮ್ಮೆ ಆತನಿಗೆ ಹದಿನೈದು ಲೋಹ ದ್ರಮ್ಮ, (ಪಣ) ಹನ್ನೆರಡು ಕುಳ (ಅಳತೆಮಾನ) ಮೆಣಸು ಹಾಗೂ ಒಂದು ಕುಳ ತುಪ್ಪವನ್ನು ಕೊಡತಕ್ಕದ್ದು ಎಂದು ಹೇಳಲಾಗಿದೆ.

ಕೆರೆ ನಿರ್ಮಾಣವಾಗಿ ಹೊಸ ಊರನ್ನು ಕಟ್ಟಿಕೊಂಡ ಮೇಲೆ ಊರಿಗ ಉಸಿರಾಗಿರುವ ದೇವಾಲಯಗಳನ್ನು ಕಟ್ಟಬೇಡವೆ? ಊರಿನಲ್ಲಿ ದೇವಾಲಯಗಳನ್ನು ಕಟ್ಟಿಸಿ ಅವುಗಳ ಸೇವಾದ್ಯವರಸರಗಳಿಗೆ ಭೂಮಿಯನ್ನು ದತ್ತಿ ಬಿಟ್ಟಿರುವ ಮೂರು ಮುಖದ ಶಾಸನಕಲ್ಲು ಉತ್ತರಕೋಡಿ ಬಳಿ ಶೋಭಿಸಿದೆ. ಶಕ ೮೧೭ ನೇ ಸಂವತ್ಸರದಲ್ಲಿ (ಕ್ರಿ.ಶ. ೮೯೫) ತಲಕಾಡು ಗಂಗ ಸತ್ಯವಾಕ್ಯ ಪೆರ್ಮಾನಡಿಯ ಅಧೀನನಾದ ನೊಳಂಬಾಧಿ ರಾಜನ ಆಳ್ವಿಕೆಯ ಕಾಲದಲ್ಲಿ ಕೌನ್ಡಿಲ್ಯ ಗೋತ್ರದ ಗಾಮುಂಡ ಸ್ವಾಮಿಗಳ ಮಗ ನಾಗಮಯ್ಯನು ಈ ಪುಣ್ಯ ಕಾರ್ಯವನ್ನು ಕೈಗೊಂಡಿದ್ದಕ್ಕೆ ಸಾಕ್ಷೀಭೂತವಾಗಿದೆ. ಶಾಸನದ ಕಡೆಯಲ್ಲಿ ದತ್ತಿಯನ್ನು ಉಪಯೋಗಿಸಿಕೊಂಡು ದೇವಾಲಯವನ್ನು ಹಾಳುಗೆಡುವವರಿಗೆ ಉಂಟಾಗುವ ಪಾಪದ ಬಗ್ಗೆ ಒಂದು ಸಂಸ್ಕೃತ ಶ್ಲೋಕವಿದೆ.

ಕೃಷ್ಣರಾಜಪೇಟೆ ತಾಲ್ಲೂಕಿನ ಒಂದು ಶಾಸನ ಒಬ್ಬ ಸಾಮಾನ್ಯಗೌಡನ ಗುಣಾವಳಿಯನ್ನು ಪ್ರಶಂಶಿಸಿದೆ. ಕ್ರಿ.ಶ.೧೨೪೨ ರ ಸುಮಾರಿನಲ್ಲಿ ಕಲ್ಲಗೌಡ ಎಂಬ ಒಕ್ಕಲಿಗನು ಊರಿಗೇನು ಜಗತ್ತಿಗೇ ಆದರ್ಶಪುರುಷನಾಗಿದ್ದ. ಆತ ಶಿವಭಕ್ತ, ಕಲಿ, ಮೇಲಾಗಿ ದಾನಿಯೂ ಆಗಿದ್ದ. ಆತನ ಬದುಕು ಶುಭ್ರವಾಗಿದ್ದು ಜಗತ್ತಿಗೇ ಪೂಜಿತನಾಗಿದ್ದ, ಪುಣ್ಯ ಜೀವಿಯಾಗಿದ್ದ ಎಂದು ಶಾಸನದಲ್ಲಿ ಕೊಂಡಾಡಿದೆ. ಅದೇ ತಾಲ್ಲೂಕಿನ ಸಿಂಧಘಟ್ಟದ ಶಾಸನವೊಂದು ಊರಿನ ಒಗ್ಗಟ್ಟಿಗೆ ಸಾಕ್ಷೀಭೂತವಾಗಿದೆ. ಸಿಂಧಘಟ್ಟದ ಮಹಾಜನರು ಅಲ್ಲಿನ ಲಕ್ಷ್ಮೀನಾರಾಯಣ ದೇವಸ್ಥಾನಕ್ಕೆ ಸಲ್ಲುವ ಎರಡು ವೃತ್ತಿಗಳನ್ನು ಮಾದಣ್ಣ ಮತ್ತು ಬೊಮ್ಮಣ್ಣರಿಗೆ ೪೬ ವರಾಹ ಗದ್ಯಾಣವನ್ನು ಪಡೆದು ಮಾರಿದರು. ಅವರೀರ್ವರು ದೇವಸ್ಥಾನದ ಪೂಜೆಯ ಹಕ್ಕನ್ನು ಪಡೆದರು. ಆದರೆ ಊರಿನಿಂದ ಬರುವ ಸಿದ್ದಾಯವನ್ನು ಪಡೆಯುವ ಹಕ್ಕನ್ನು ಮಹಾಜನರು ತಾವೇ ಉಳಿಸಿಕೊಂಡರು. ಅದರ ಫಲವಾಗಿ ದೇವಸ್ಥಾನದ ಜೀರ್ಣೋದ್ಧಾರ ಸಹಿತ ಹಲವು ಜವಾಬ್ದಾರಿಗಳನ್ನು ಮಹಾಜನರೇ ಹೊರುವಂತಾಯಿತು.

ಇದೇ ತಾಲ್ಲೂಕಿನ ಕ್ರಿ.ಶ.೬೦ರ ಧನಗೂರು ಶಾಸನ ಗಂಗದೊರೆ ಇಮ್ಮಡಿ ಬೂತಗನ ಆಳ್ವಿಕೆಯ ಕಾಲಕ್ಕೆ ಸೇರುತ್ತದೆ. ಶಾಸನದಲ್ಲಿ ದನುರು (ಧನಗೂರು) ಗ್ರಾಮವನ್ನು 'ಕಲ್ನಾಡಾಗಿ' ದತ್ತಿ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಕಲ್ನಾಡೆಂದರೆ ಮರಣ ಹೊಂದಿದ ವೀರನೊಬ್ಬನ ಗೌರವಾರ್ಥ

ಹಾಕಿಸಿದ ನೆನಪಿನ ಕಲ್ಲು ಎಂದರ್ಥ. ಈ ಶಾಸನದಲ್ಲಿ ಗಂಗದೊರೆಯನ್ನು ಸತ್ಯವಾಕ್ಯ, ಗಂಗಗಾಂಗೇಯ, ಗಂಗನಾರಾಯಣ, ಜಯದೃತರಂಗ ಎಂಬ ಬಿರುದುಗಳನ್ನು ಉಲ್ಲೇಖಿಸಿದೆ. ಶಾಸನ ಪಾಠದ ಪೂರ್ವಾರ್ಧಪುಣಿಗದ ಮಾಚಯ್ಯ ಮತ್ತು ಇತರ ಕರಣಿಕರು ಅರಸನ ನಿರ್ದೇಶನದ ಮೇರೆಗೆ ಆಚಮನೆಂಬಾತನಿಗೆ ದಾನ ನೀಡಲಾಗಿದೆ ಎಂದಿವೆ. ಪುನಃ ಉತ್ತರಾರ್ಧದಲ್ಲಿ ಅದೇ ಧನುರ್ ಗ್ರಾಮವನ್ನು ಬಿಯಮ್ಮಳಿಗೆ ದತ್ತಿಯಾಗಿ ಬಿಟ್ಟ ವಿಷಯವನ್ನು ಹೇಳಿರುತ್ತದೆ. ಈಕೆಗೆ ದಾನ ನೀಡಿರುವನು ಒಬ್ಬ ಗಾವುಣ್ಣ. 'ಬಿಯಳಮ್ಮಂಗೆ ಮದುವೆಯೊಲೆ ಧಣುಗೂರಂ ಕಲ್ನಾಡಿಳಿಯೊಡ ತಪ್ಪದೆ.... ಇತ್ಯಾದಿ. ಒಟ್ಟಾರೆ ಶಾಸನದ ಮೊದಲ ಭಾಗದಲ್ಲಿ ದತ್ತಿ ಪಡೆದವರ ಹೆಸರನ್ನು ಅಚಮನೆಂದು, ನಂತರದಲ್ಲಿ ಬಿಯಳಮ್ಮನ ಹೆಸರನ್ನು ಉಲ್ಲೇಖಿಸಿದೆ. ವಿಶೇಷವೆಂದರೆ ಇಲ್ಲಿ ಬಳಕೆಯಾಗಿರುವ 'ಮದುವೆಯೋಲೆ' ಎಂಬ ಶಬ್ದ ಬಹಳ ಕುತೂಹಲಕಾರಿಯಾಗಿದೆ. ಇದೇನು ಬಿಯಳಮ್ಮನ ಮದುವೆಯಲ್ಲಿ ಕೊಟ್ಟಿರಬಹುದೇ? ಅಥವಾ ಮೊದಲು ದತ್ತಿ ಸ್ವೀಕರಿಸಿದ ಆಚಮನಿಗೂ, ಬಿಯಳಮ್ಮನಿಗೂ ಇರಬಹುದಾದ ಸಂಬಂಧವೇನು? ವೀರಮರಣಗೈದ ವ್ಯಕ್ತಿ ಯಾರು? ಎಂಬುದೆಲ್ಲ ಬಹಳ ಕುತೂಹಲಕಾರಿಯಾಗಿದೆ.

ಮುತ್ತತ್ತಿಯ ಕಾವೇರಿ ನದಿ ತೀರದಲ್ಲಿ ಮೊಸಳೆಯೊಂದಿಗೆ ಹೋರಾಡಿ ಪ್ರಾಣಬಿಟ್ಟ ಒಬ್ಬ ವೀರನ ಸ್ಮರಣೆಗಾಗಿ ನೆಡಿಸಿರುವ ವೀರಗಲ್ಲು ಎಂಥವರನ್ನೂ ಮನಸೆಳೆಯುತ್ತದೆ. ಕ್ರಿ.ಶ.೮ನೇ ಶತಮಾನದ ಗಂಗದೊರೆಗಳ ಕಾಲಕ್ಕೆ ಸೇರಿದ ಈ ವೀರಗಲ್ಲಿನಲ್ಲಿ ಐದು ಸಾಲು ಗ್ರಂಥಾಕ್ಷರ ಶಾಸನ ಹೊಂದಿದೆ. ಎರಡು ಹಂತಗಳ ಈ ವೀರಗಲ್ಲಿನಲ್ಲಿ ಇಬ್ಬರು ವ್ಯಕ್ತಿಗಳು ಬೇಟೆಗಾಗಿ ನಾಯಿಗಳ ಜೊತೆ ಕಾಡಿಗೆ ಬಂದು ನದಿಯ ನೀರಿನಲ್ಲಿ ಇಳಿದಾಗ ಮೊಸಳೆಯೊಂದು ಒಬ್ಬನ ಕಾಲನ್ನು ಹಿಡಿದು ಎಳೆಯುತ್ತಿದೆ. ಮತ್ತೊಬ್ಬ ಅವನನ್ನು ರಕ್ಷಿಸಲು ಕೈ ಹಿಡಿದು ಎಳೆಯುತ್ತಿದ್ದಾನೆ. ಈವರೆಗೆ ಹುಲಿಬೇಟೆ, ತುರುಕಾಳಗ, ಹಂದಿಬೇಟೆ, ಆನೆಬೇಟೆ, ವೀರಗಲ್ಲುಗಳು ದೊರೆತಿದ್ದವು. ಆದರೆ ಮೊಸಳೆ ಜೊತೆ ಹೋರಾಟ ಮಾಡಿರುವ ವೀರಗಲ್ಲು ಅಪರೂಪದ್ದಾಗಿದೆ.

ಮಳವಳ್ಳಿ ತಾಲ್ಲೂಕಿನ ವಿಶೇಷವೆಂದರೆ ಮಂಡ್ಯ ಜಿಲ್ಲೆಯ ಕೆಲಭಾಗವನ್ನು ೧೫-೧೬ನೇ ಶತಮಾನದಲ್ಲಿ ಆಳಿದ ಉಮ್ಮತ್ತೂರು ಪ್ರಭುಗಳಿಗೆ ಸಂಬಂಧಪಟ್ಟಂತೆ ಉಲ್ಲೇಖವಿರುವ ಶಾಸನಗಳೆಲ್ಲವೂ ಇದೇ ತಲ್ಲೂಕಿನಲ್ಲಿ ಸಿಗುತ್ತವೆ.

ಸೀತಾಪುರದ ಶಾಸನ (ನೀರಾವರಿಶಾಸನ):-

ಪಾಂಡವಪುರ ತಾಲ್ಲೂಕು ಸೀತಾಪುರದ ಕ್ರಿ.ಶ.೧೪೫೫ರ ಶಾಸನವೊಂದು ನೀರಾವರಿ ವ್ಯವಹಾರವೊಂದರ ಮೇಲೆ ಬೆಳಕು ಚೆಲ್ಲುತ್ತದೆ. ನಾಗಮಂಗಲದ ಸಿಂಗಣ್ಣವೊಡೆಯರ ಮಗ ದೇವರಾಜನು (ತಿಂಮಣ್ಣ ದಂಡನಾಯಕನ ತಮ್ಮ) ಕಾವೇರಿ ನದಿಗೆ ಹೊಸದಾಗಿ ಒಂದು ಕಾಲುವೆಯನ್ನು ತೋಡಿಸಲು ತೊಡಗಿದನು. ತುಸುದೂರದ ಹರವು ಗ್ರಾಮಸ್ಥರು ಕಾಲುವೆಯನ್ನು ತಮ್ಮ ಗ್ರಾಮದವರೆಗೂ ತೋಡಿಸಿಕೊಡಬೇಕೆಂದು ಅಪೇಕ್ಷಿಸಿದರು. ಆತ ಇದಕ್ಕೆ ಒಪ್ಪಿ ಕಾಲುವೆಯನ್ನು ತನ್ನ ವೆಚ್ಚದಲ್ಲಿಯೇ ತೋಡಿಸಿಕೊಟ್ಟನೆಂಬ ಸಂಗತಿಯನ್ನು ತಿಳಿಸುತ್ತದೆ. ಇದಕ್ಕಾಗಿ ಗ್ರಾಮಸ್ಥರು ಮತ್ತು ಆತನ ನಡುವೆ ಕೊಟ್ಟು-ತೆಗೆದುಕೊಳ್ಳುವ ವ್ಯವಹಾರವನ್ನು ಸ್ವಾರಸ್ಯಕರವಾಗಿ ವಿವರಿಸಿದೆ.

ಇಂಥ ಒಂದು ಪುಣ್ಯ ಕಾರ್ಯಕ್ಕೆ ಪ್ರತಿಯಾಗಿ ಹೊಸಹಳ್ಳಿ ಗ್ರಾಮವನ್ನು ಆ ಗ್ರಾಮದ ಹೆಬಾರುವನಾದ ಯದುವಣ್ಣನ ಯಜಮಾನ ಭಾಗವೆಂದು ಕೊಟ್ಟನು. ಶಾಸನದಲ್ಲಿ ಕುರುವಂಕನಾಡವೇಂಟೆಯದ ಹೊಸಹಳ್ಳಿ ಎಂದಿದೆ. ಇಲ್ಲಿ ಒಂದು ಆಶ್ಚರ್ಯವೆಂದರೆ ಕೆಲಕಾಲಾನಂತರ ಕ್ರಿ.ಶ.೧೪೬೭ ರಲ್ಲಿ ಅದೇ ಯದುವಣ್ಣನು ಚಿಕ್ಕಮಳಲಿ, ಹೊಸಹಳ್ಳಿ ಮತ್ತು ಕೆಂದನಹಾಳು ಗ್ರಾಮದ ಅರ್ಧಭಾಗವನ್ನು ಅದೇ ದೇವರಾಜನಿಗೆ ೪೦೦ ಹೊನ್ನುಗಳಿಗೆ ಮಾರಿದನು. ಹೀಗೆ ಕ್ರಯವಾಗಿ ಪಡೆದ ಹೊಸಹಳ್ಳಿ ಗ್ರಾಮವನ್ನು ದೇವರಾಜನು ೨೦೮ ವೃತ್ತಿಗಳಾಗಿ ವಿಂಗಡಿಸಿ ಅವುಗಳಲ್ಲಿ ೮ ವೃತ್ತಿಗಳನ್ನು ಗ್ರಾಮದ ಶ್ರೀರಾಮಚಂದ್ರ ದೇವಾಲಯಕ್ಕೂ ಉಳಿದ ೨೦೦ ವೃತ್ತಿಗಳನ್ನು ನಾನಾ ಗೋತ್ರ ಸೂತ್ರಗಳ ಬ್ರಾಹ್ಮಣರಿಗೆ ತನ್ನ ತಾಯಿ ಸೀತಾಯಮ್ಮಳ ಪುಣ್ಯಾರ್ಥವಾಗಿ ದಾನ ಮಾಡಿದನು. ಮೇಲಾಗಿ ಹೊಸಹಳ್ಳಿ ಗ್ರಾಮವನ್ನು ತಾಯಿಯ ಹೆಸರಿನಲ್ಲಿ ಶ್ರೀರಾಮಸೀತಾಪುರ ಎಂದು ಹೆಸರಿಸಲಾಯಿತು.

ಇಲ್ಲಿ ಗಮನಿಸಬಹುದಾದ ಒಂದು ಅಂಶವೆಂದರೆ ಕಾಲುವೆ ತೋಡಿಸಿಕೊಟ್ಟ ದೇವರಾಜನು ಹೊಸಹಳ್ಳಿ ಗ್ರಾಮವನ್ನು ಯಜಮಾನ ಭಾಗವಾಗಿ ಪಡೆದರೂ ಆ ಗ್ರಾಮದ ಮೇಲಿನ ಕ್ರಯ, ಭೋಗ್ಯ ಮುಂತಾದ ಹಕ್ಕುಗಳು ಹರವು ಗ್ರಾಮದ ಮಹಾಜನರಿಗೇ ಸೇರಿತ್ತೆಂದು, ಅನುಭವಿಸುವ ಹಕ್ಕು ಮಾತ್ರ ದೇವರಾಜನದಾಗಿತ್ತೆಂದು ತೋರುತ್ತದೆ. ನಂತರ ಅದೇ ಗ್ರಾಮವನ್ನು ಕ್ರಯವಾಗಿ ಪಡೆದ ಮೇಲೆ ಅದರ ಒಡೆತನಕ್ಕೆ ಪಾತ್ರನಾಗಿರುವುದು ಕಾಣಬರುತ್ತದೆ.

ಶ್ರೀರಂಗಪಟ್ಟಣದ ಪ್ರಾಚೀನ ಶಾಸನ ಕ್ರಿ.ಶ.೮೯೪ ಕ್ಕೆ ಒಯ್ಯುತ್ತದೆ. ಗಂಗರ ಸಾಮಂತನಾದ ತಿರುಮಲಯ್ಯ ಇಲ್ಲಿಯ ರಂಗನಾಥಸ್ವಾಮಿ ದೇವಾಲಯವನ್ನು ಕಟ್ಟಿಸಿ ಅದಕ್ಕೆ ಶ್ರೀರಂಗಪುರವೆಂದು ಹೆಸರಿಟ್ಟನೆಂದು ತಿಳಿದುಬರುತ್ತದೆ. ಹಲವು ಸಾಮಂತರ ಸಾಮ್ರಾಜ್ಯಗಳ ಕೈ ಬದಲಾಯಿಸಿ ಕ್ರಿ.ಶ. ೧೬೮೫ ರ ಚಿಕ್ಕದೇವರಾಜ ಒಡೆಯರ ಕಾಲದ ಒಂದು ಶಾಸನದಲ್ಲಿ ಶ್ರೀರಂಗಪಟ್ಟಣದ ಸಂಸ್ಕೃತಿ ಸಂಪದ್ಭರಿತವಾಗಿ ಕೂಡಿತ್ತು ಎಂದು ವರ್ಣಿಸಿದೆ. "ಕಾವೇರಿಯಿಂದ ಮಾಲಾಕಾರವಾಗಿ ಸುತ್ತುವರಿಯಲ್ಪಟ್ಟು, ಕವಿಗಳು, ಜ್ಞಾನಿಗಳು, ಶ್ರುತಿ, ಸ್ಮೃತಿ–ಧರ್ಮಗಳನ್ನರಿತ ಶಾಸ್ತ್ರಜ್ಞರು, ಗಗನಚುಂಬಿಗಳಾದ ತೆಂಗು, ಹಲಸು, ಮಾವು, ದ್ರಾಕ್ಷಿ, ಲಿಂಬೆ, ಕಿತ್ತಳೆ, ಅಂಜೂರ ಮುಂತಾದ ಫಲ–ವೃಕ್ಷಗಳು, ಬೆಟ್ಟದಂತಹ ಎತ್ತರವಾದ ಸೌಧಗಳು, ಸೊಗಸಾದ ಕೊಡವಾಲು ಕರೆವ ಕೆಚ್ಚಲಿನ ಹಸುಗಳು, ವೇದಾಂತ ಪಾರಂಗತರಾದ ವಿದ್ವಾಂಸರು, ದೇವಾಲಯಗಳ ಗೋಪುರಗಳು, ಮರಗಿಡಗಳು, ಐರಾವತದಂತಹ ಆನೆಗಳು, ಮೇಘಘರ್ಜನೆಯಂತೆ ಕೆನೆಯುವ ಅಶ್ವಗಳು, ಸೊಗಸಾದ ನಗರ ದ್ವಾರಗಳು, ಪುಷ್ಪೋದ್ಯಾನಗಳು, ಕಾರಂಜಿಗಳಿಂದ ರಂಜಿಸುವ ಭೂದೇವಿಯ ಆಭರಣದಂತಹ ಸುಂದರ ನಗರ" ಎಂಬ ವರ್ಣನೆಯಿದೆ.

ಧಾರ್ಮಿಕ ಹಾಗೂ ಸಾಂಸ್ಕೃತಿಕ ವೈಭವವನ್ನು ಪ್ರತಿಬಿಂಬಿಸುವ ವಿಪುಲವಾದ ಶಾಸನಗಳು ಮತ್ತಿತರ ಆಧಾರ, ಆಕರಗಳನ್ನು ಶ್ರೀರಂಗಪಟ್ಟಣ ಹಾಗೂ ಪಾಂಡವಪುರ ತಾಲ್ಲೂಕಿನ ತೊಂಡನೂರು ಅಥವಾ ತೊಣ್ಣೂರು ಮತ್ತು ಮೇಲುಕೋಟೆಗಳಲ್ಲಿ ಕಾಣಬಹುದಾಗಿದೆ. ಶ್ರೀ ವೈಷ್ಣವ ಸಂಪ್ರದಾಯದ ಆಚಾರವಿಚಾರಗಳು, ನಡಾನುಡಿಗಳನ್ನು ವಿಶೇಷವಾಗಿ ಉಲ್ಲೇಖಿಸಲಾಗಿದೆ. ಆಚಾರ್ಯ ಪುರುಷರೆನಿಸಿದ ಶ್ರೀರಾಮಾನುಜಾಚಾರ್ಯರಿಗೆ ಆಶ್ರಯ ನೀಡಿದ ತೊಂಡನೂರು ಮತ್ತು ಮುಂದೆ ಅವರ ಕಾರ್ಯಕ್ಷೇತ್ರವೆನಿಸಿದ ಮೇಲುಕೋಟೆಯಲ್ಲಿ ಅವರಿಗೆ ಹಾಗೂ ಅವರ ಅನುಯಾಯಿಗಳಿಗೆ ಮತ್ತು ಶ್ರೀ ವೈಷ್ಣವ ಧರ್ಮಕ್ಕೆ ಸಂಬಂಧಿಸಿದಂತೆ ಶಾಸನಗಳು ಮತ್ತು ತಾಡವಾಲೆಗಳ ಗ್ರಂಥ ಭಂಡಾರವೇ ತುಂಬಿದೆ. ವಿವಿಧ ಅರಸರ ಕಾಲಗಳಲ್ಲಿ ನೀಡಿದ ದಾನದತ್ತಿಯ ಶಾಸನಗಳು ಐತಿಹ್ಯವಾಗಿಯೂ ಉಪಯುಕ್ತವಾಗಿವೆ:

ಶ್ರೀರಂಗಪಟ್ಟಣ ತಾಲ್ಲೂಕು ಬೆಳಗೊಳದ ಕ್ರಿ.ಶ.೧೧೯೮ ರ ನವೆಂಬರ್ ೨೨ ರ ಒಂದು ಶಾಸನದಲ್ಲಿ ವಿಷ್ಣುವರ್ಧನನು ಈ ಹೊತ್ತಿಗಾಗಲೆ ಚೋಳರನ್ನು ಗೆದ್ದು 'ಕೊಂಗು ಕೊಂಡ' ಎಂಬ ಬಿರುದನ್ನು ಪಡೆದಿದ್ದನೆಂಬುದನ್ನು ಸ್ಪಷ್ಟವಾಗಿ ತಿಳಿಸಿದೆ. ಅಂತೆಯೇ ಮೇಲುಕೋಟೆಯಲ್ಲಿ ರಾಮಾನುಜಾಚಾರ್ಯರು ತಿರುನಾರಾಯಣದೇವರನ್ನು ಪ್ರತಿಷ್ಠಾಪಿಸಿದ (ಪುನಃ ಪ್ರತಿಷ್ಠಾಪನೆ ಆಯಿತೆಂಬ ನಂಬಿಕೆಯಿದೆ) ವರ್ಷವು ಕ್ರಿ.ಶ.೧೧೯೮ರ ಡಿಸೆಂಬರ್ ೧೬ ರಂದು ಎಂದು ವೈಷ್ಣವ

ಗುರುಪರಂಪರೆಯ ಆಧಾರ ಗ್ರಂಥಗಳಿಂದ ತಿಳಿಯಲ್ಪಡುತ್ತದೆ. ಇದರಿಂದಾಗಿ ಎರಡೂ ಶಾಸನಗಳ ಅಂತರ ಕೇವಲ ೨೪–೨೫ ದಿನಗಳು ಮಾತ್ರ. ಈ ಮೇಲಿನ ಆಧಾರಗಳಿಂದ ಮುಖ್ಯವಾಗಿ ತಿಳಿದುಬರುವ ಒಂದು ಸಂಗತಿಯೆಂದರೆ ಕ್ರಿ.ಶ. ೧೧೯೮ರ ಮುಂಚಿತವಾಗಿಯೇ ಜೈನಧರ್ಮದ ಬಿಟ್ಟಿದೇವನು ಶ್ರೀರಾಮಾನುಜರ ಪ್ರಭಾವದಿಂದಾಗಿ ವೈಷ್ಣವ ಧರ್ಮಕ್ಕೆ ತಲೆಬಾಗಿ ವಿಷ್ಣುವರ್ಧನನಾಗಿದ್ದನೆಂದು ಹೇಳಬಹುದಾಗಿದೆ. (ಕ್ರಿ.ಶ. ೧೧೧೬ರಲ್ಲಿ ರಾಮಾನುಜರ ದರ್ಶನ ವಿಷ್ಣುವರ್ಧನನಿಗೆ ಆಯಿತು ಎಂಬುದು ಒಂದು ಸಂಪ್ರದಾಯದ ನಂಬಿಕೆಯಷ್ಟೆ. ಈ ಪರಿವರ್ತನೆ ಕಾರ್ಯ ಅಂದಿನ ಹೊಯ್ಸಳ ಉಪರಾಜಧಾನಿಯಾಗಿದ್ದ ತೊಣ್ಣೂರಿನಲ್ಲಿಯೇ ನಡೆಯಿತೆಂಬ ಪ್ರತೀತಿಯೂ ಇದೆ.)

ಮೇಲುಕೋಟೆಯ ಮಣ್ಣನ್ನು ಪವಿತ್ರವಾದುದು (ತಿರುಮಣ್) ಎಂದು ರಾಮಾನುಜರು ಭಾವಿಸಿದ್ದುದರಿಂದ ಮುಂದೆ ಅದೇ ನಂಬಿಕೆಯಲ್ಲಿ ಆ ಭೂಮಿಯ ಸ್ವಾಮ್ಯವನ್ನು ಕ್ರಿ.ಶ. ೧೫೩೯ ರಲ್ಲಿ ಹೆಡತಲೆಯ ಮಾದಪ್ಪ ದಣ್ಣಾಯಕ ಎಂಬುವನು ತಿರುಮಣ್ ಪೆರುಮಾಳ್ ಎಂಬುವರಿಗೆ ದಾನ ನೀಡಿದ್ದಾನೆ. ಇಲ್ಲಿಯ ದೇವಾಲಯಗಳಿಗೆ ಅನೇಕ ರಾಜ ಮಹಾರಾಜರು ನೀಡಿದ ಉಂಬಳಿಗಳ ಸಾಲಿನಲ್ಲಿ ಟಿಪ್ಪುಸುಲ್ತಾನನು ಚೆಲುವನಾರಾಯಣ ದೇವಾಲಯಕ್ಕೆ ಕೆಲವು ಆನೆಗಳನ್ನು ಮತ್ತು ಆಭರಣಗಳನ್ನು ನೀಡಿರುವುದಲ್ಲದೆ: ಯೋಗಾನರಸಿಂಹ ದೇವಾಲಯಕ್ಕೆ ನಗಾರಿ ಮತ್ತಿತರ ಪರಿಕರಗಳನ್ನು ನೀಡಿರುವುದಕ್ಕೆ ಶಾಸನಾಧಾರವಿದೆ.

ಶಾಸನದ ಪರಂಪರೆಯ ಕೊನೆಯ ಘಟ್ಟವೆಂದು ಪರಿಗಣಿಸಿದ ಕಾಲದಲ್ಲಿ ಕ್ರಿ.ಶ.೧೮೧೮ ರಲ್ಲಿ ಮೈಲಿಬೇನೆ ಮತ್ತು ಕಾಲರ ಹರಡಿದಾಗ ನಂಜಮ್ಮ ಎಂಬ ಕನ್ಯೆಯ ಮೇಲೆ ಕೊಲ್ಲಾಪುರದ ಮಹಾಲಕ್ಷ್ಮಿ ಮತ್ತು ಉಜನಿಯ ಮಹಾಕಾಳಿಯರು ಅವಿರ್ಭವಿಸಿ ಹರಡಿದ ರೋಗವನ್ನು ಶಮನಮಾಡಿ ಸರ್ವರನ್ನೂ ಪರಿಹರಿಸಿದುದಾಗಿ ಕನ್ನಂಬಾಡಿಯ ಶಾಸನವೊಂದು ತಿಳಿಸುತ್ತದೆ. ಇದಕ್ಕೂ ಹಿಂದೆ ಕ್ರಿ.ಶ.೧೮೦೪ ರಲ್ಲಿ ಮುಮ್ಮಡಿಕೃಷ್ಣರಾಜರ ದಿವಾನರಾಗಿದ್ದ ಪೂರ್ಣಯ್ಯನವರು ತಮ್ಮ ಆಪ್ತಸ್ನೇಹಿತ ಹಾಗೂ ಸಹೃದಯಿ ಎನಿಸಿದ ಇಂಗ್ಲೀಷ್ ರೆಸಿಡೆಂಟ್ ಆಗಿದ್ದ ಜ್ಯೋಸ್‌ವೆಬ್ ಅವರ ನೆನಪಿಗಾಗಿ ಪಾಂಡವಪುರ ಸಮೀಪದಲ್ಲಿರುವ ಮಾಕನಕೊಪ್ಪಲು ಗ್ರಾಮದ ಎಲ್ಲೆಯ ಬೋರೆಯಲ್ಲಿ ಯೂರೋಪ್ ಶೈಲಿಯ ಮಾದರಿಯಲ್ಲಿ ಕೆತ್ತಿ ನಿಲ್ಲಿಸಿರುವ ಸುಮಾರು ೫೦ ಅಡಿ ಎತ್ತರದ ಕಲ್ಲುಕಂಬದ ಸ್ಮಾರಕ ಹಾಗೂ ಅದರ ತಳಭಾಗದಲ್ಲಿ ಜ್ಯೋಸ್‌ವೆಬ್‌ರ ಗುಣಗಾನದ ಆಂಗ್ಲಭಾಷೆಯ ಶಾಸನ ಮನಮೋಹಕವಾಗಿದೆ.

[illegible]

ಶ್ರೀರಂಗಪಟ್ಟಣ ದೇವಸ್ಥಾನದಲ್ಲಿ ತಾಂಡವೇಶ್ವರ ವಿಗ್ರಹದ ಪೀಠದ ಮೇಲೆ ಇರುವಂತಹ ಶಾಸನ ಸಂ.೩೦ ರಲ್ಲಿ ಶ್ರೀರಂಗಪಟ್ಟಣದ ಶ್ರೀಗಂಗಾಧರೇಶ್ವರಸ್ವಾಮಿ ದೇವಸ್ಥಾನಕ್ಕೆ ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರುಷ ೧೩೬೩ನೇ ಜೇಷ್ಠ ಶಂದ ೧೫ನೇಯ ಕಾಸ್ಯಪಗೊತ್ರದ ಅಪಸ್ತಭ ಸೂತ್ರರಾದ ಯಜು ಶಾಖಾಧ್ಯಾಯಿಗಳಾದ ಶಿವಭಟಾಧ್ಯಕ್ಷರಾದ ನಂಜುಂಡ ಭಟ್ಟರ ಪುತ್ರನಾದ ಶಿವರಾಮ ಪಂಡಿತ ಸೇವೆಯನ್ನು ಕಾಣಬಹುದು:

ಸ್ವಸ್ತಿ ವುಭಯಭಾಷಾ ಕವಿ ಚಕ್ರವರ್ತಿ ಕಂದರ್ಪದೇವರ ಮದವಳಿಗೆ

ಸೂಂನ್ನಾದೇವಿಯರ ಮಗ ಕಾಣೊರ್ಗ್ಗಣತಿಳಕನುಮಪ್ಪ

ಬಾಳಚಂದ್ರ ದೇವರುಂ ತಂಮ ಗುರುಗಳಿಗೆ ಪರೋಕ್ಷವಾಗಿ ಮಾಡಿದ

ಪ್ರತಿಷ್ಠೆ

ತಿಪ್ಪೂರು ಆಂಜನೇಯ ದೇವಸ್ಥಾನಕ್ಕೆ ಉತ್ತರದಲ್ಲಿರುವ ಕಲ್ಲು. ಕಾಲ. (೧೪-೧೫ನೇ ಶತಮಾನ) ಮದ್ದೂರಿನ ಶ್ರೀ ರಾಮಚಂದ್ರದೇವರಿಗೆ ತಿಪ್ಪೂರು ಗ್ರಾಮವನ್ನು ದತ್ತಿ ನೀಡಿದ ಬಗ್ಗೆ.

ತಿಪ್ಪೂರಿನ ಹೊಲವೊಂದರಲ್ಲಿ ಇರುವ ವೀರಗಲ್ಲು. ಕಾಲ.೧೪-೧೫ನೇ ಶತಮಾನ. ಬಸ್ತಿತಿಪ್ಪೂರ ಒಡೆಯನಾದ ದಾಸನಮಗ ಊರ ಒಡೆಯ ಸಿರಂಗ ಎಂಬಾತ ಊರು ಹಾಗು ಊರಿನ ಮಹಿಳೆಯರ ರಕ್ಷಣೆಯಲ್ಲೂ ಹೋರಾಡುತ್ತ ಸತ್ತ ಬಗ್ಗೆ.

ತಿಪ್ಪೂರು ಇನ್ನೊಂದು ಹೊಲದಲ್ಲಿರುವ ಕಲ್ಲು ಕಾಲ ದಿನಾಂಕ ನಮೂದಾಗಿಲ್ಲ ದೊರೆ. ಹೊಯ್ಸಳ ೨ನೇ ವೀರಬಲ್ಲಾಳ ಕವಿಕಂಡರ್ಪ ಮಗನಾದ ಬಾಲಚಂದ್ರದೇವನ ಮಕ್ಕಳು ತಿಪ್ಪೂರಿನ ಪಟ್ಟಣಸೆಟ್ಟಿಯಾದ ಪರದಿಸೆಟ್ಟಿ, ನಾಕರಸೆಟ್ಟಿ ಇತ್ಯಾದಿ ಸೆಟ್ಟಿಗಳಿಗೆ ಹೊರಡಿಸಿದ ಆದೇಶ ಈ ಶಾಸನ ಶಾಸನದ ಮುಖ್ಯ ಅಕ್ಷರಗಳು ಸವಿದಿದೆ. ಆದರೂ ಲಭ್ಯವಿರುವ ಪಾಠದಿಂದ ಮುಖ್ಯವಾದ ಸಂಗತಿಗಳು ದೊರಕುತ್ತವೆ.

ಮೊದಲನೆಯದಾಗಿ ಆಸ್ತಿಯ ವಿಷಯಕ್ಕೆ ಬಂದರು. ಆಸ್ತಿಯ ಉತ್ತರಾಧಿಕಾರಿಗಳ ಬಗ್ಗೆ ಈ ಶಾಸನ ವಿವರ ಕೊಡುತ್ತದೆ. ಅಣ್ಣನ ಒಡವೆ (ಆಸ್ತಿ) ತಮ್ಮನಿಗೆ, ತಮ್ಮನ ಒಡವೆ ಅಣ್ಣನಿಗೆ ಹಾಗೂ ಅಳಿಯನ ಒಡವೆ ಮಾವನಿಗೆ ಹಾಗೆಯೇ ಮಾನವ ಆಸ್ತಿ ಅಳಿಯನಿಗ ಎಂದು ಶಾಸನ ತಿಳಿಸುತ್ತದೆ. ಮಹಿಳೆಯೊಬ್ಬಳು ಗಂಡ ಬದುಕಿದ್ದು, ಆಕೆ ಸತ್ತರೆ ಆಕೆಯ ಹೆಣವನ್ನು ಸುಡಬೇಕು. ದಾಸಿಯೊಬ್ಬಳು ಸತ್ತರೆ ಆಕೆಯ ಹೆಣವನ್ನು ಎಳೆದು ಎಸೆಯಬೇಕು. (ಸುಡಲೂಬಾರದು, ಹೂಳಲೂಬಾರದು) ರೈತರ ತೆರಿಗೆಯ ಬಾಕಿಗೆ ದಂಡವಿಲ್ಲ. ಹಾದರಕ್ಕೆ ಯಾವುದೇ ರೀತಿಯ ದಂಡವಿಲ್ಲ ಎಂಬ

ನಿರೂಪವನ್ನು ಈ ಶಾಸನ ತಿಳಿಸುತ್ತದೆ. ರೈತರಿಗೆ ಮತ್ತು ಕೋಟೆಯನ್ನು ಕಾಯುವವರಿಗೆ (ಸೈನಿಕರಿಗೆ) ಮನೆ ಕಂದಾಯವಿಲ್ಲ.

ಜನಗುಡ್ಡದ ಮೇಲೆ ಹೊಂಡದ ಹತ್ತಿರ ಬಿದ್ದಿರುವ ಜನಬಿಂಬದ ಪೀಠದ ಮೇಲೆ ಕಾಲ ನಮೂದಾಗಿಲ್ಲ ದೊರೆ. ಉಲ್ಲೇಖವಿಲ್ಲ.

ಕಂದರ್ಪದೇವನ ಮಗ ಬಾಲಚಂದ್ರದೇವನು ಜಿನಬಿಂಬವನ್ನು ಕೆತ್ತಿಸಿರುವ ಬಗ್ಗೆ ಈ ಶಾಸನಕ್ಕೂ ಮತ್ತು ಮೇಲಿನ ಶಾಸನಕ್ಕೂ (ಶಾಸನ ೫೨) ಸಂಬಂಧವಿದೆ. ಹಾಗೂ ಎರಡೂ ಶಾಸನಗಳೂ ಉಕ್ತವಾಗಿರುವ ವ್ಯಕ್ತಿಗಳು ಒಬ್ಬರೆ ಬಾಲಚಂದ್ರದೇವನ ತಂದೆ ಕಂಡರ್ಪದೇವನಿಗೆ ಕವಿಕಂಡರ್ಪದೇವ ಎಂಬ ಹೆಸರಿದೆ. ಏಕೆಂದರೆ ಈತನಿಗೆ ಉಭಯಭಾಷಾ ಕವಿ ಚಕ್ರವರ್ತಿ ಎಂಬ ಹೆಸರಿತ್ತು. ಈತನ ಪತ್ನಿಯ ಹೆಸರು ಸೊಣ್ಣಾದೇವಿ ಈತ ಬಾಲಾಚಂದ್ರದೇವನ ತಂದೆಯಾ ವಿದ್ಯಾಗುರುವೂ ಆಗಿದ್ದ ಬಾಲಚಂದ್ರದೇವ ರಚಿಸಿದ ಎರಡು ಶಾಸನಗಳು ಬೆಳಗಾಂನಲ್ಲಿ ಪತ್ತೆ ಆಗಿವೆ ಮತ್ತು ಜನ್ನ ತನ್ನ ಕೃತಿಗಳಾದ ಅನಂತನಾಥಪುರಾಣ ಮತ್ತು ಪಾರ್ಶ್ವನಾಥ ಪುರಾಣಗಳಲ್ಲಿ ಬಾಲಚಂದ್ರ ದೇವನನ್ನು ಉಲ್ಲೇಖಿಸಿದ್ದಾನೆ.

ಹೊನ್ನಲಗೆರೆ ಗ್ರಾಮದಲ್ಲಿ ದೊರೆತ ತಾಮ್ರಶಾಸನ ಕಾಲ ಕ್ರಿ.ಶ.೧೬೨೩. ಮೈಸೂರು ಚಾಮರಾಜ ಒಡೆಯ. ಇದೊಂದು ತಾಮ್ರಶಾಸನವಾಗಿದ್ದು, ತಾಮ್ರದ ಮೂರು ಹಲಗೆಗಳ ಮೇಲೆ ಇದನ್ನು ಕೊರೆಯಲಾಗಿದೆ.

ಅರವೀಡು ವಂಶದ ವೀರರಾಮದೇವರಾಯರು ಪೆನುಗುಂಡದಿಂದ ರಾಜ್ಯಭಾರ ಮಾಡುತ್ತಿದ್ದ ಸಂದರ್ಭದಲ್ಲಿ ಮೈಸೂರು ರಾಜಭೂಪಾಲನ ಪುತ್ರರಾದ ನರಸರಾಜ ಮತ್ತು ಹೊನ್ನಾಂಬರ ಪುತ್ರನಾದ ಚಾಮರಾಜ ಒಡೆಯರ್ ರವರು ಮದ್ದೂರು ಸ್ಥಳದ ಹೊನ್ನಲಗೆರೆ, ಹಣೇಯ, ಹಾಗಲಹಳ್ಳಿ, ಭೀಮನಕೆರೆ ಮತ್ತು ಇವುಗಳ ಉಪಗ್ರಾಮಗಳಾದ ಕಬ್ಬೆಪುರ, ಬೊಮ್ಮನಹಳ್ಳಿ, ಹೊನ್ನಲಗೆರೆ, ಭೀಮನ ಕೆರೆಯ ಹಳ್ಳಿಕೆರೆ ಗ್ರಾಮಗಳನ್ನು ಕಶ್ಯಪಗೋತ್ರದ ಹಿರಿಯಣ್ಣ ಪಂಡಿತರ ಮಗ ಅಪ್ಪಾಜಿ ಪಂಡಿತರ ಮಕ್ಕಳಾದ ರಾಮಾಜಯ್ಯ ವಿರೂಪಾಕ್ಷಯ್ಯ ಮತ್ತು ಗೋವಿಂದಯ್ಯನವರಿಗೆ ದತ್ತಿ ನೀಡಿದ ಬಗ್ಗೆ.

ಈ ದಾನವನ್ನು ಶ್ರೀರಂಗಪಟ್ಟಣದ ಶ್ರೀರಂಗನಾಥನ ಸನ್ನಿಧಿಯಲ್ಲಿ ದಾನಿಗಳಾದ ಚಾಮರಾಜ ಒಡೆಯರು ತಮ್ಮ ತಂದೆತಾಯಿಗೆ ಪುಣ್ಯವಾಗಲಿ ಎಂದು ನೀಡುತ್ತಾರೆ.

ಸುಮಾರು ೭೨ ಸಾಲುಗಳುಳ್ಳ ಈ ತಾಮ್ರಶಾಸನದ ರಚನೆಯನ್ನು ನಂಜಿನಾಥನ ಶಿಷ್ಯನಾದ ನರಸಿಂಹ (ಗಜಾರಣ್ಯ ನರಸಿಂಹನಮಗ) ಮಾಡುತ್ತಾನೆ. ತಲಕಾಡಿನ ಸಿಂಗ್ರಿಯ ಮಗ ತಿಮ್ಮಣ್ಣ ಈ ಶಾಸನವನ್ನು ಕೆತ್ತುತ್ತಾನೆ.

ದಾನ ನೀಡಿದವರು ದಾನಕೊಟ್ಟ ಗ್ರಾಮಗಳಿಗೆ ತಮ್ಮ ಪ್ರಿಯ ಜನರ ಹೆಸರನ್ನು ಆ ಗ್ರಾಮಗಳಿಗೆ ಇಡುವ ರೂಢಿಯಿತ್ತು. ಆ ಪ್ರಕಾರ ಅನುಮಾನಿಸಿದರೆ ದಾನ ನೀಡಿದ ಚಾಮರಾಜ ಒಡೆಯರ್ ರವರ ತಾಯಿಯವರಾದ 'ಹೊನ್ನಾಂಬ' ಎಂಬ ಹೆಸರಿನಿಂದ ಸದರಿ ಗ್ರಾಮಕ್ಕೆ ಹೊನ್ನಲಗೆರೆ ಎಂಬ ಹೆಸರು ಬಂದಿರಬಹುದು. ಈ ಹಿಂದಿನ ಶಾಸನಗಳಲೂ ಸದರಿ ಗ್ರಾಮಕ್ಕೆ 'ಹೊನ್ನಲಗೆರೆ' ಎಂಬ ಹೆಸರು ಇದ್ದರೆ ಈ ಮೇಲಿನ ಅನುಮಾನ ತಪ್ಪಾಗುತ್ತದೆ.

ಲಾಳಾನಕೆರೆಯ ಮಾದೇಶ್ವರ ದೇವಾಲಯದ ಮುಂದಿರುವ ಶಾಸನ:– ಈ ಶಾಸನವು ಅತ್ಯಂತ ಸುಂದರವಾದ ಶಾಸನವಾಗಿದೆ. ಹೊಯ್ಸಳರ ಕಾಲದ ರಚನೆಯಾದ ಈ ಶಾಸನವು ಸಿಂಹಲಲಾಟವನ್ನು ಹೊಂದಿದೆ. ಪ್ರಭಾವಳಿಯಲ್ಲಿ ಹೂಬಳ್ಳಿಯ ಕೆತ್ತನೆಯಿದೆ. ಶಾಸನದ ಬಲಭಾಗದಲ್ಲಿ ಒಂದು ಹಸು ಮತ್ತು ಕರುವಿನ ಚಿತ್ರವಿದೆ. ಹಸುವಿನ ಕೊರಳಿನಲ್ಲಿ ಘಂಟೆ ಸರವಿದೆ. ಶಾಸನದ ಮಧ್ಯ ಭಾಗದಲ್ಲಿ ಶಿವಲಿಂಗವಿದ್ದು, ವ್ಯಕ್ತಿಯೊಬ್ಬ ಇದಕ್ಕೆ ಕೈಜೋಡಿಸಿ ನಿಂತಿದ್ದಾನೆ. ಶಿವಲಿಂಗದ ಎದುರಿಗೆ ನಂದಿಯೊಂದು ಕುಳಿತಿದೆ. ಈ ಶಾಸನದಲ್ಲಿ ವಾಡಿಕೆಯಂತೆ ಸೂರ್ಯಚಂದ್ರರರನ್ನು ಕೆತ್ತಲಾಗಿದೆ.

ಈ ಶಾಸನವು ಹೊಯ್ಸಳ ೩ನೇ ಬಲ್ಲಾಳನ ಕಾಲದ ಶಾಸನವಾಗಿದೆ. ಹೊಯ್ಸಳರ ಮಹಾಪ್ರಧಾನ ಹೆಗ್ಗಂತೆ ಕಾಂತಿಮಯ್ಯ ದೇವಾಲಯಕ್ಕೆ ಜಮೀನನ್ನು ದತ್ತಿ ನೀಡಿ ದೇವಾಲಯಕ್ಕೆ ನಂದಾದೀಪವನ್ನು ನೀಡಿ ಎಣ್ಣೆಗಾಗಿ ಕಲ್ಲಿನ ಗಾಣವೊಂದನ್ನು ಸಹ ನೀಡಿದ್ದಾನೆ. ಇ ಶಾಸನದಿಂದ ನಮಗೆ ಅಂದಿನ ಸಂಸ್ಕೃತಿಯ ಅರಿವಾಗುತ್ತದೆ. ದಾನಿಯು ಕೇವಲ ದೀಪಮಾಲೆಯ ಕಂಬವನ್ನು ನೀಡದೆ ಅದಕ್ಕೆ ಬೇಕಾದ ಎಣ್ಣೆಗಾಗಿ ಕಲ್ಲಿನ ಗಾಣವನ್ನು ನೀಡಿರುವುದು ಪ್ರಸಂಸೆಗೆ ಅರ್ಹವಾಗಿದೆ.

ವೈದ್ಯನಾಥಪುರ ದೇವಸ್ಥಾನದ ಪಾತಾಳಾಂಕಣದಲ್ಲಿ ಒಳಬಾಗಿರಿ ಎಡಗಡೆ ಅಂಕಣದ ಚಾವಣಿಗೆ ಹಾಕಿರುವ ಒಂದನೆಯ ಕಲ್ಲು. ಕಾಲ.ಕ್ರಿ.ಶ.೧೨೭೮ ಹೊಯ್ಸಳ ೩ನೇ ವೀರನರಸಿಂಹ ಶಾಸನದ ಪ್ರಮುಖಭಾಗ ಸವೆದಿದೆ. ಉಪಲಬ್ಧವಿರುವ .ಪಾಠದಿಂದ ತಿಳಿದು ಬರುವ ಅಂಶವೆಂದರೆ, ಗಂಗವಾಡಿ ನಾಡಿನ ನರಸಿಂಹ ಚತುರ್ವೇದಿಮಂಗಲದ ಭಕ್ತನೊಬ್ಬನಿಗೆ ದೇವರ ಅಲಂಕಾರಕ್ಕೆ ಹಾಗೂ ಅಮೃತಪಡಿಗೆ ಗ್ರಾಮದ ಮಗ್ಗಗಳ ಮೇಲಿನ ಸುಂಕವನ್ನು ನೀಡುವುದರ ಬಗ್ಗೆ.

ವೈದ್ಯನಾಥಪುರ ಅದೇ ದೇವಸ್ಥಾನದ ಗಂಗಮಂಟಪದ ದಕ್ಷಿಣಕ್ಕೆ ಸಲ್ಲಿಸಿರುವ ಒಂದನೆಯ ಕಲ್ಲು. ಕಾಲ ೧೧೩೨. ಹೊಯ್ಸಳ ವಿಷ್ಣುವರ್ಧನ ದೋರಸಮುದ್ರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಗಂಗವಾಡಿ ೯೬೦೦೦. ನೊಳಂಬವಾಡಿ ೩೨೦೦೦. ಬನವಾಸಿ ೧೨೦೦೦ ಮತ್ತು ಹಾನಂಗಲ್ ೫೦೦ ನ್ನು ಆಳುತ್ತಿದ್ದ ಹೊಯ್ಸಳ ದೊರೆ ವಿಷ್ಣುವರ್ಧನನು, ಗಂಗವಂಶದ ದೊರೆ ಶಿವಮಾರಸಿಂಹನು ನೀಡಿದ್ದ ದತ್ತಿಯನ್ನು ನವೀಕರಿಸುತ್ತಾನೆ. ಈ ದತ್ತಿಯಲ್ಲಿ ಕಳಲೆ ನಾಡಿನ ಹಲಗೂರನ್ನು ನರಸಿಂಹ ಚತುರ್ವೇದಿ ಮಂಗಲವಾದ ಮದ್ದೂರಿನ ಸ್ವಯಂಭು ವೈದನಾಥದೇವರಿಗೆ ನೀಡಿದ್ದ ಉಲ್ಲೇಖವಿದೆ. ಶಿವಬ್ರಹ್ಮ ಪರದೇಶಿಯ ಮಗ ಪಿಳ್ಳೈಆಂಡಾರ್ ದತ್ತಿಯನ್ನು ಸ್ವೀಕರಿಸುತ್ತಾನೆ. ಹಿಂದೆ ಗಂಗದೊರೆ ನೀಡಿದ್ದ ಸದರಿ ದತ್ತಿಯ ಸಂಗತಿಯನ್ನು ವಿಷ್ಣುವರ್ಧನನಿಗೆ ಹಲಗೂರಿನ ಅಡಪ್ಪ ಮತ್ತು ರಾಜಪ್ಪ ಮನವರಿಕೆಮಾಡಿ ದತ್ತಿಯನ್ನು ನವೀಕರಿಸುವಂತೆ ಮನವಿ ಮಾಡಿಕೊಳ್ಳುತ್ತಾರೆ. ಅಡಪ್ಪ ಮತ್ತು ರಾಜಪ್ಪರವರು ಈ ಶಾಸನದಲ್ಲಿ ಮದ್ದೂರನ್ನು ಕಳಲೆನಾಡಿನಲ್ಲಿರುವ ಪ್ರದೇಶ ಎಂದಿದೆ. ಈ ಹಿಂದೆ ಗಂಗದೊರೆ ನೀಡಿದ್ದ ತಾಮ್ರಶಾಸನವನ್ನು ವಿಷ್ಣುವರ್ಧನನಿಗೆ ತೋರಿಸಿ ದತ್ತಿ ನವೀಕರಿಸುವಂತೆ ಆಗ್ರಹಿಸುತ್ತಾರೆ.

ಅರುವನಹಳ್ಳಿ ಮನೆಯೊಂದರ ಪೂರ್ವಕ್ಕೆ ಇರುವ ಕಲ್ಲು ಕಾಲ ಕ್ರಿ.ಶ.೧೩೫೮ ಬುಕ್ಕರಾಯಮಹಾರಾಯ ಈ ಶಾಸನಕ್ಕೂ ಶಾಸನ ಸಂಖ್ಯಾ ೮೭ ಕ್ಕೂ ಸಂಬಂಧವಿದೆ. ಈ ಶಾಸನದಲೂ ಉಲ್ಲೇಖಿತನಾಗಿರುವ ಬಾಚಿಯಪ್ಪನ ಸಾಧನೆ ಮತ್ತು ಆತನ ನಿಧನದ ಬಗ್ಗೆ ಶಾಸನ ಸಂಖ್ಯೆ ೮೭ ರಲ್ಲಿ ದಾಖಲಾಗಿದೆ. ಈ ಶಾಸನ ಕಾಲ ಕ್ರಿ.ಶ.೧೩೮೧ ದೊರೆ ಬುಕ್ಕರಾಯನ ಮಗ ಹರಿಹರ.

ಪ್ರಸ್ತುತ ಶಾಸನ ೯೩, ಕ್ರಿ.ಶ. ೧೩೫೮ರ ಶಾಸನ ಅಂದರೆ ಬಾಚಿಯಪ್ಪನ ಜೀವಿತಾವಧಿಯಲ್ಲಿ ಪ್ರತಿಷ್ಠಾಪಿಸಲ್ಪಟ್ಟ ಶಾಸನ. ಈ ಶಾಸನದಲ್ಲಿ ಬಾಚಿಯಪ್ಪ ನಿರ್ಮಿಸಿದ ಕೆರೆಗಳು ಮತ್ತು ಅವುಗಳ ಸುತ್ತ ನಡೆಸಿದ್ದ ಮರಗಳ ವಿವರ ತಿಳಿಯುತ್ತದೆ.

ಬುಕ್ಕರಾಯಸಮುದ್ರ, ಬಾಚಿಯಪ್ಪ ತನ್ನ ಒಡೆಯನ ಹೆಸರಲ್ಲಿ ಕೀರ್ತಿಸಮುದ್ರ (ಬಾಚಪ್ಪನ ತಂದೆ ಕೀರ್ತಿದೇವ) ಬಾಚಪ್ಪನಕೆರೆ ಚೌಡಪ್ಪನ ಕಾಲುವೆ ಮತ್ತು ತನ್ನ ತಾಯಿಯ ಹೆಸರಲ್ಲೂ ಮಾಳವ್ವನ ಕೆರೆಗಳನ್ನು ಕಟ್ಟಿಸುತ್ತಾನೆ. ಈ ಕೆರೆಗಳ ಸುತ್ತ ತೆಂಗಿನಮರ ಮತ್ತು ಇತರೆ ಮರಗಳನ್ನು ನಡೆಸುತ್ತಾನೆ. ಅರಳಿಮರಗಳಿಗೆ ಮುಂಜಿಯನ್ನು ಮಾಡಿಸುತ್ತಾನೆ. ಶಾಸನ ೮೭ರ ಪ್ರಕಾರ ಅದೇ ಸ್ಥಳದಲ್ಲಿ ಅಡಕೆಯ ತೋಟವೂ ಇರುತ್ತದೆ.

ಈ ಶಾಸನದಲ್ಲೂ ಗಮನಿಸಬೇಕಾದ ಸಂಗತಿ ಎಂದರೆ ಕ್ರಿ.ಶ.೧೩೫೮ರಲ್ಲಿ ಬಾಚಿಯಪ್ಪ ತನ್ನ ಸಾಧನೆಗಳ ಬಗ್ಗೆ ಈ ಶಾಸನ ಹಾಕಿಸಿ ಕೊಂಡಿರುತ್ತಾನೆ. ಆಗ ದೊರೆ ಬುಕ್ಕರಾಯನಾಗಿರುತ್ತಾನೆ. ಕ್ರಿ.ಶ.೧೩೮೧ರಲ್ಲೂ ಸದರಿ ಬಾಚಿಯಪ್ಪ ನಿಧನ ಹೊಂದಿರಬಹುದು. ಆಗ ಆತನ ಮಗ ಬುಕ್ಕಣ್ಣ ಆ ಶಾಸನವನ್ನು ನಡೆಸಿರುತ್ತಾನೆ. ಆಗ ದೊರೆ ಬುಕ್ಕರಾಯನ ಮಗ ಹರಿಹರ ರಾಜ್ಯವಾಳುತ್ತಿರುತ್ತಾನೆ.

ಕ್ರಿ.ಶ. ೧೩೭೪ ರ ಶಾಸನವು ಕೀರ್ತಿರಾಯನ ಮಕ್ಕಳು ತಮ್ಮ ಪಿತ್ರಾರ್ಜಿತ ಆಸ್ತಿಯನ್ನು ಹಂಚಿಕೆ ಮಾಡಿಕೊಂಡ ವಿವರವನ್ನು ತಿಳಿಸುತ್ತದೆ. ಹೀಗೆ ಪಾಲು ಮಾಡಿಕೊಂಡ ಆಸ್ತಿಯಲ್ಲಿ ಭೂಮಿ, ದಾನ್ಯ, ದನಕರು, ಸಂಪತ್ತು, ಸಾಲ ಇತ್ಯಾದಿ ಒಳಗೊಂಡಿರುತ್ತದೆ. ಈ ಅಣ್ಣ ತಮ್ಮಂದಿರು ಪಾಲು ಮಾಡಿಕೊಂಡ ಸಂದರ್ಭದಲ್ಲಿ ಸುತ್ತಮುತ್ತಲ ಗ್ರಾಮದ ಪ್ರಮುಖರೂ ಸೇರಿಕೊಂಡಿರುತ್ತಾರೆ.

ಕ್ರಿ.ಶ.೧೩೮೦ ರಲ್ಲಿ ಅರುವನಹಳ್ಳಿಗೂ ಆಲೂರಿನ ನಡುವೆ ಕಾದಾಟವಾಗುತ್ತದೆ. ಈ ಕಾದಾಟದಲ್ಲಿ ಕುಂದೂರಿನ ಸಿಬಿಯೋಜನ ಮಗ ಸಬಿಯ ಎಂಬಾತ ಪ್ರಮುಖ ಪಾತ್ರವನ್ನು ವಹಿಸುತ್ತಾನೆ. ಈ ಕಾಳಗವನ್ನು ಸಬಿಯನನ್ನು ಮುಂದಿಟ್ಟುಕೊಂಡು ನಡೆಸಲಾಯಿತು ಎಂದು ಶಾಸನ ತಿಳಿಸುತ್ತದೆ. ಈತ ಅರುವನಹಳ್ಳಿಯ ಕೆಂಪಂಣ್ಣ ಒಡೆಯನ ಸಮೀಪದಲ್ಲಿ ಆತನ ಬೆಂಗಾವಲಿನಲ್ಲಿ ಇರುತ್ತಾನೆ. ಈ ಸಂದರ್ಭದಲ್ಲಿ ಸಬೀಯ ಹತನಾಗುತ್ತಾನೆ. ಆಗ ಆತನ ಮಾವ ಜಯಿಸೋಜ ಈ ವೀರಗಲ್ಲನ್ನು ಪ್ರತಿಷ್ಠಾಪಿಸುತ್ತಾನೆ. ಬೆಳತೂರಿನ ಮಾಲಿಯೋಜ ಈ ಶಾಸನವನ್ನು ರಚಿಸುತ್ತಾನೆ.

ತಿಪ್ಪೂರಿನ ಜಿನಗುಡ್ಡದ ಮೇಲೆ ಹೊಂಡದ ಹತ್ತಿರ ಬಿದ್ದಿರುವ ಜನ ಬಿಂಬದ ಪೀಠದ ಮೇಲಿದೆ. ಇದರಲ್ಲಿ ಕಂಡರ್ಪದೇವನ ಮಗ ಬಾಲಚಂದ್ರದೇವನು ಸದರಿ ಜೈನ ಬಿಂಬವನ್ನು ಕೆತ್ತಿಸಿರುವ ಬಗ್ಗೆ ಉಲ್ಲೇಖವಿದೆ. ಹಾಗೂ ಸದರಿ ಕಂಡರ್ಪದೇವ ಒಬ್ಬ ಖ್ಯಾತ ಕವಿಯಾಗಿದ್ದು, ಈತನಿಗೆ ಉಭಯ ಭಾಷಾಕವಿ ಚಕ್ರವರ್ತಿ ಎಂಬ ಬಿರುದಿತ್ತು. ಈತನ ಪತ್ನಿಯ ಹೆಸರು ಸೊಣ್ಣಾದೇವಿ ಈತನು ತನ್ನ ಮಗ ಬಾಲಚಂದ್ರದೇವನ ವಿದ್ಯಾ ಗುರುವೂ ಆಗಿದ್ದ, ಬಾಲಚಂದ್ರದೇವ ರಚಿಸಿದ ಎರಡು ಶಾಸನಗಳು ಬೆಳಗಾಂನಲ್ಲಿ ಪತ್ತೆ ಆಗಿವೆ. ಮತ್ತು ಕವಿ ಜನ್ನ ತನ್ನ ಕೃತಿಗಳಾದ ಅನಂತನಾಥಪುರಾಣ ಮತ್ತು ಪಾರ್ಶ್ವನಾಥಪುರಾಣಗಳಲ್ಲಿ ಬಾಲಚಂದ್ರದೇವನ ಹೆಸರನ್ನು ಉಲ್ಲೇಕಿಸಿದ್ದಾನೆ.

ಜಿನಗುಡ್ಡದ ಮೇಲಿದೆ. ಕಾಲ ಕ್ರಿ.ಶ.೧೧೧೭ ಹೊಯ್ಸಳ ದೊರೆ ವಿಷ್ಣುವರ್ಧನನ ಕಾಲದ ಶಾಸನ. ವಿಷ್ಣುವರ್ಧನನ ದಂಡನಾಯಕ ಗಂಗರಾಜ (ಏಚಿರಾಜ ಮತ್ತು ಪೋಚಿಕಬ್ಬೆಯ ಮಗ) ತಲಕಾಡನ್ನು ವಶಪಡಿಸಿಕೊಂಡ ವಿಷಯ ತಿಳಿಸುತ್ತದೆ. ಯುದ್ಧದ ಸಂದರ್ಭದಲ್ಲಿ ಗಂಗರಾಜ

ಚೋಳರ ಸಾಮಂತನಾದ ಅದಮನನ್ನು ಕಂಚಿಯವರೆಗೆ ಅಟ್ಟಿಸಿಕೊಂಡು ಹೋಗುತ್ತಾನೆ. ಈ ಸಂದರ್ಭದಲ್ಲಿ ವಿಷ್ಣುವರ್ಧನ ತನ್ನ ಸೇನಾಪತಿಗೆ ವೈಭವದ ತಿಪ್ಪೂರು ಪಟ್ಟಣವನ್ನು ಬಹುಮಾನವಾಗಿ ನೀಡುತ್ತಾನೆ. ಗಂಗರಾಜ ಈ ಪಟ್ಟಣವನ್ನು ತನ್ನ ಗುರುಗಳಾದ ಮೇಘಚಂದ್ರ ಸಿದ್ಧಾಂತದೇವನಿಗೆ ನೀಡುತ್ತಾನೆ.

ಹೀಗೆ ತಿಪ್ಪೂರು ಗ್ರಾಮವು ಗಂಗ, ಹೊಯ್ಸಳ ಹಾಗು ವಿಜಯನಗರದ ಆಳ್ವಿಕೆಯ ಸಂದರ್ಭದಲ್ಲಿ ಒಂದು ಪ್ರಮುಖ ಕೇಂದ್ರವಾಗಿತ್ತು. ಇದು ಶ್ರವಣಬೆಳಗೊಳದಷ್ಟೇ ಪ್ರಖ್ಯಾತಿಯನ್ನು ಹೊಂದಿದ್ದು, ಇಲ್ಲಿರುವ ಎರಡು ಬೆಟ್ಟಗಳಲ್ಲಿ ಒಂದು ಕನಕಗಿರಿ ಅಥವ ಜಿನಗುಡ್ಡ ಮತ್ತೊಂದು ಸವಣಪ್ಪನಗುಡ್ಡ. ಕನಕಗಿರಿಯಲ್ಲಿ ಇಟ್ಟಿಗೆಗಳಿಂದ ನಿರ್ಮಿತವಾಗಿದ್ದ ನಾಲ್ಕು ಬಸದಿಗಳ ಅವಶೇಷಗಳಿವೆ. ಇಲ್ಲಿರುವ ಕೊಳವನ್ನು ಕನಕ ತೀರ್ಥ ಎನ್ನುವರು. ಇಲ್ಲಿ ಅನೇಕ ಜಿನ ವಿಗ್ರಹಗಳು ಹಾಳಾಗಿ ಅಲ್ಲಲ್ಲಿ ಬಿದ್ದಿವೆ. ಸವಶಾಪ್ಪನ ಬೆಟ್ಟದ ಮೇಲೆ ಗೊಮ್ಮಟ ವಿಗ್ರಹವಿದೆ. ಇದು ಶ್ರವಣಬೆಳಗೊಳದ ಗೊಮ್ಮಟನಗಿಂತ ಪ್ರಾಚೀನವಾದ ರಚನೆ. (ಕ್ರಿ.ಶ.೯೧೮)

ಹೀಗೆ ಅರೆತಿಪ್ಪೂರು ಗ್ರಾಮವು ಇತಿಹಾಸದಲ್ಲೂ ವೈಭವದ ಖ್ಯಾತ ನಗರವಾಗಿದ್ದು ಇಂದು ತನ್ನ ಗತವೈಭವದ 'ಕುರುಹಾಗಿ' ಕೆಲವು ಭಗ್ನ ಅವಶೇಷಗಳನ್ನು ಹೊಂದಿದ ಕುಗ್ರಾಮವಾಗಿದೆ.

ಕೃಷ್ಣರಾಜಪೇಟೆ ತಾಲ್ಲೂಕಿನ ಕ್ರಿ.ಶ. ೧೦೧೬ರ ಮಾಳಗುಂದದ ಶಾಸನವು ಮನು, ಮಯ, ವಿಶ್ವಕರ್ಮದೊಂದಿಗೆ ತೋಟಕಾರ್ಚಾಯವನ್ನು ಉಲ್ಲೇಖಿಸಿದ್ದಾನೆ. ಮನು. ಮಯ, ವಿಶ್ವಕರ್ಮವು ಪೌರಾಣಿಕ ವಿದ್ವಾಂಸರು ಮಯನ ಹೆಸರು ಮಯಮತ ವಾಸ್ತು ಗ್ರಂಥದೊಂದಿಗೆ ಗುರುತಿಲ್ಪಟ್ಟಿದೆ. ವಿಶ್ವಕರ್ಮದ ಔತಾರ್ಯಯ ಗ್ರಂಥಗಳಲ್ಲಿ ಹಲವೆಡೆ ಪ್ರಸಾಪ್ತಗೊಂಡಿದೆ. ಔತಾರ್ಯಯ ಗ್ರಂಥಗಳನ್ನು ವಿಶ್ವಕರ್ಮ ಪ್ರಣೀತ ಗ್ರಂಥಗಳೆನ್ನುವುದು ಒಂದು ಸಂಪ್ರದಾಯ ಈ ಶಾಸನದಲ್ಲಿ ಉಲ್ಲೇಖಿಸಿರುವ ತೋಟಕಾಚಾರ್ಯನನ್ನು ೧೨ನೇ ಶತಮಾನದ ವಾಸ್ತು ವಿದ್ವಾಂಸ ಎನ್ನುವ ಅಭಿಪ್ರಾಯವಿದೆ.

ದೇವಾಲಾಪುರದ ನಂಜುಂಡಕವಿ ಇದ್ದು, ಜೊತೆಗೆ ಲಕ್ಷ್ಮೀಕಾಂತ ದೇವಾಲವಿದೆ. ಎಂದು ಊರಿನವರ ಪ್ರಕಾರ ನಮ್ಮ ಊರಿನವರೇ ಎಂದು ಹೇಳುತ್ತಾರೆ.

ಮರಡಿಪುರ ಬಸವಣ್ಣನವರ ಹಿಂದೆ ವಚನಸಾಹಿತ್ಯ ಇತ್ತು ಎನ್ನುವುದಕ್ಕೆ ಇಂದೊಂದು ಸಾಕ್ಷಿಯಾಗಿದೆ. ೧೩೦೫ ರಲ್ಲಿ ಸ್ಥಳೀಯವಾಗಿದ್ದಂತ ಶಿವಶರಣರು ಬಸವಣ್ಣನಗಿಂತ ಹಿಂದಿನಿಂದಲೂ ಹಾಗೂ ಕೆಲವು ಸಮಾಕಾಲೀನರು ಇದ್ದರೆಂದು ಹೇಳುತ್ತದೆ.

ಸ್ಥಳೀಯ ಹಾಗೂ ಊರಿನ ಶಿವಭಕ್ತರಾದ ನಾಗಯ್ಯ, ಬೊಮ್ಮಯ್ಯ, ಅಂಕಯ್ಯ, ಜಕ್ಕಯ್ಯ ಮುಂತಾದವರು ಬಸವಣ್ಣನವರ ವಚನ ಸಾಹಿತ್ಯವನ್ನು ನಮ್ಮ ಜಿಲ್ಲೆಯಲ್ಲಿ ಕಾಣಬಹುದಾಗಿದೆ.

ಶಾಸನಗಳಲ್ಲಿ ಐತಿಹಾಸಿಕ ಗುಣಲಕ್ಷಣಗಳ ಚಲನೆಯಲ್ಲಿ ಸಾಮಾಜಿಕ ಮತ್ತು ಧಾರ್ಮಿಕ ಚಿತ್ರಣಗಳನ್ನು ಸಮರ್ಥಗೊಳಿಸಲು ಇತಿಹಾಸಕಾರರಿಗೆ ಆಗಿದೆ. ಸಾಹಿತ್ಯ ಆಧಾರಗಳು ಸಮಕಾಲೀನ ಜನಜೀವನವನ್ನು ಪ್ರತಿಬಿಂಬಿಸುತ್ತದೆ. **"ಶಾಸನಗಳು ಹಾಗಾಗೇ ಸಂಕ್ಷಿಪ್ತ ಮಾಹಿತಿ"**ಯನ್ನು ಕೊಡುತ್ತವೆ ಸಾಹಿತ್ಯವು ಆರ್ಥಿಕ, ಸಾಮಾಜಿಕ, ಬೆಳಕು ಮತ್ತು ಸಾಂಸ್ಕೃತಿಕ ಅಲಂಕಾರಗಳ ಜೊತೆಯಲ್ಲಿ ಸಂಕ್ಷಿಪ್ತ ಮಾಹಿತಿಯನ್ನು ವಿಸ್ತಾರಗೊಳಿಸಲು ಸಹಾಯ ಮಾಡುತ್ತವೆ. ಹೀಗಾದರೂ ಸಾಹಿತ್ಯ ಆಧಾರಗಳು ಮುಖಮೌಲ್ಯಗಳನ್ನು ತೆಗೆದುಕೊಳ್ಳಲಾಗುವುದಿಲ್ಲ. ಮಂಡ್ಯ ಜಿಲ್ಲೆಯಲ್ಲಿ ಸಾಹಿತ್ಯ ಆಧಾರಗಳನ್ನು ನೇರವಾಗಿ ಶಾಸನಗಳಲ್ಲಿ ಕಾಣಲಾಗುವುದಿಲ್ಲ. ಇಷ್ಟಾದರೂ ಮದ್ದೂರು ತಾಲ್ಲೂಕು ಜೈನಧರ್ಮದ ಕೇಂದ್ರವಾಗಿದ್ದು, ಅರೆತಿಪ್ಪೂರಿನಲ್ಲಿರುವ ಶಾಸನವು ಕವಿ ಬಾಲಚಂದ್ರದೇವನು ತನ್ನ ಮಕ್ಕಳಿಗೆ ಆಸ್ತಿಯ ಹಕ್ಕನ್ನು ಹಂಚಿರುವ ವಿವರಣಾತ್ಮಕ ಲಿಪಿ ಶಾಸನ ಸಾಹಿತ್ಯದೃಷ್ಟಿಯಿಂದಲೂ ಮನೋಜ್ಞವಾಗಿದೆ.

ಮಂಡ್ಯ ಜಿಲ್ಲೆಯ ದೇವಾಲಯಗಳಲ್ಲಿ ಪುರುಷ ಮತ್ತು ಸ್ತ್ರೀ ನೃತ್ಯಕ್ಕೆ ಸಂಬಂಧಿಸಿದಂತೆ ಹಲವಾರು ಶಾಸನಗಳನ್ನು ಕಾಣಬಹುದು. ನಮ್ಮ ಪ್ರಾಚೀನ ದೇವಾಲಯಗಳು ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರಬಿಂದುವಾಗಿದ್ದವು. ಸ್ಥಳೀಯ ದೇವಾಲಯ ಅದು ದೊಡ್ಡದಾಗಿರಲ್ಲಿ, ಚಿಕ್ಕದಾಗಿರಲ್ಲಿ ಗ್ರಾಮದ ಜೀವನ ಅದರೊಂದಿಗೆ ಬೆರೆತುಕೊಂಡಿತ್ತು. ಅವು ಸಾಮಾಜಿಕ, ಸಾಂಸ್ಕೃತಿಕ ಕೇಂದ್ರಗಳಾಗಿದವು. ನೃತ್ಯ ಮತ್ತು ಸಂಗೀತಕ್ಕೆ ಪ್ರೋತ್ಸಾಹ ಕೊಡುತ್ತಿದ್ದ ದೇವಾಲಯಗಳು ಸಾಹಿತ್ಯಕ್ಕೂ ಪೂರಕವಾಗಿದ್ದವು. ಈ ನಿಟ್ಟಿನಲ್ಲಿ ಮಂಡ್ಯ ಜಿಲ್ಲೆಯ ಮೇಲುಕೋಟೆ, ಕಿಕ್ಕೇರಿ, ನಾಗಮಂಗಲ, ತೊಣ್ಣೂರು, ಮದ್ದೂರು ಇವುಗಳ ಶಾಸನಗಳು ಬಹಳ ಅತ್ಯಂತವಾಗಿ ಸೂಚಿಸುತ್ತವೆ. ಗಾಯನ ಮತ್ತು ನೃತ್ಯದವರೊಂದಿಗೆ ವೀಣೆ, ತಬಲ ನುಡಿಸುವವರು, ಕೊಳಲು ಊದುವವರು ಇತ್ಯಾದಿ ವಾದ್ಯ ಸಂಗೀತಗಳನ್ನು ದೇವಾಲಯಗಳೇ ಉದ್ಯೋಗವನ್ನು ನೀಡುತ್ತಿದ್ದವು.

ಇಂದಿನ ತಂತ್ರಜ್ಞಾನದ ವ್ಯವಸ್ಥೆ ಇಲ್ಲದ ಆ ಕಾಲದಲ್ಲಿ ಬಾಯಿಂದ ಬಾಯಿಗೆ ಹಾಡಬೇಕಾಗಿತ್ತು. ಹಾಗಿಯೇ ಬಾಯಿಂದ ಹಾಡುವ ಸೇವೆಯೇ ಆಗಿತ್ತು. ಇದು ಸಾಹಿತ್ಯವಲ್ಲದೆ ಈ ಚಟುವಟಿಕೆ ಆಗುತ್ತಿಲ್ಲ ಎನ್ನುವುದು ನನ್ನ ಅಭಿಪ್ರಾಯ.

ಕರ್ನಾಟಕದ ದೇವಾಲಯಗಳು ಅಷ್ಟೇ ಅಲ್ಲ. ಮಂಡ್ಯ ಜಿಲ್ಲೆಯಲ್ಲಿ ಲಭ್ಯವಿರುವ ಕುಮಾರ ವ್ಯಾಸ ಭಾರತ ಲಕ್ಷ್ಮೀಶ, ರಾಘವಾಂಕ, ಹರಿಶ್ಚಂದ್ರ ಕಾವ್ಯವನ್ನು ಇವರು ವಾಚಿಸುತ್ತಿದ್ದರು ಎಂಬುದು ತಿಳಿದು ಬಂದಿದೆ. ದೇವಾಲಯಗಳೇ ಹಿಂದಿನ ಶೈಕ್ಷಣಿಕ ಕೇಂದ್ರಗಳಾಗಿದ್ದವು ಎಂಬುದು ಮೇಲುಕೋಟೆಯ ಸಂಸ್ಕೃತ ಸಂಶೋಧನಾ ಕೇಂದ್ರದಲ್ಲಿ ಸುಮಾರು ೧೫ ಸಾವಿರಕ್ಕೂ ಮೇಲ್ಪಟ್ಟು ಮಿಕ್ಕಿದ ಪ್ರಾಚೀನ ಗ್ರಂಥಗಳ ಕಟ್ಟುಗಳಲ್ಲಿ ವಿವಿದ ಕಾಲದ ಮಜಲುಗಳಲ್ಲಿ ತುಂಬಿವೆ. ಮೇಲುಕೋಟೆಯ ತಮಿಳು ಪ್ರಬಂಧಗಳು, ಧಾರ್ಮಿಕ, ನೈತಿಕ ಉಲ್ಲೇಖಗಳನ್ನು ಒಳಗೊಂಡಿವೆ.

ಮಂಡ್ಯ ಜಿಲ್ಲೆಯಲ್ಲಿ ಹೆಚ್ಚಿನ ವಿಷಯ ಇವು ಶಾಸನಗಳಷ್ಟೇ ಪಾರಂಪರಿಕ ಕೈಗನ್ನಡಿಗಳಾಗಿ ಹಸ್ತಪ್ರತಿಗಳಾಗಿ ಕಾಣಬಹುದು.

ಅಡಿಟಿಪ್ಪಣಿಗಳು:–

೧. ಮಂಡ್ಯ ಜಿಲ್ಲೆಯ ಸಾಂಸ್ಕೃತಿಕ ಪರಂಪರೆ: ತೈಲೂರು ವೆಂಕಟಕೃಷ್ಣ, ಬಾನುಪ್ರಕಾಶನ ಮಂಡ್ಯ. ಪು. ೫೬

೨. ಅದೇ, ಪು. ೫೮

೩. ಸಿರಿಯೊಡಲು: ಪ್ರಧಾನ (ಸಂ) ದೇ,ಜೇ,ಗೌ(ಸಂ) ಹ.ಕ.ರಾಜೇಗೌಡ, ಪ್ರಕಾಶಕರು ಸ್ವಾಗತ ಸಮಿತಿ ೬೩ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ. ಪು. ೩೯

೪. ಶಾಸನ ಪರಿಚಯ ಆರ್. ಶೇಷಶಾಸ್ತ್ರಿ, ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ. ಪು. ೯೨

೫. ಅದೇ ಪು. ೯೩

೬. ಅದೇ, ಪು. ೯೬

೭. ಸಿರಿಯೊಡಲು ಪ್ರಧಾನ (ಸಂ) ದೇ,ಜೇ,ಗೌ(ಸಂ) ಹ,ಕ,ರಾಜೇಗೌಡ; ಪ್ರಕಾಶಕರು ಸ್ವಾಗತ ಸಮಿತಿ ೬೩ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ. ಪು. ೩೯

೮. ಅದೇ, ಪು. ೪೩

ಅಧ್ಯಾಯ ೬

ಜಿಲ್ಲೆಯ ಶಾಸನಗಳ ಸಾಂಸ್ಕೃತಿಕ ಅಧ್ಯಯನ

ಅಧ್ಯಾಯ ೬

ಶಾಸನಗಳ ಸಾಂಸ್ಕೃತಿಕ ಅಧ್ಯಯನ

ಶಾಸನಗಳನ್ನು ಸ್ಥಾಪಿಸುವ ಪದ್ಧತಿ ಮಾನವನ ಸಂಸ್ಕೃತಿಯ ನೆಲೆಯಲ್ಲಿಯೇ ಮೂಡಿ ಬಂದಿರುವುದರಿಂದ ಶಾಸನ ಪಠ್ಯದಲ್ಲಿ ಮತ್ತು ಶಾಸನಗಳಲ್ಲಿ ಅನೇಕ ರೀತಿಯ ಸಾಂಸ್ಕೃತಿಕ ವಿವರಗಳು ನಮಗೆ ಲಭ್ಯವಾಗುತ್ತದೆ. ಮಾನವನ ವೇಷ – ಭೂಷಣಗಳು ಬಳಸುವ ವಸ್ತುಗಳು ಜೀವನದಲ್ಲಿ ಹಾಸುಹೊಕ್ಕಾಗಿ ಬೆರುತು ಹೋದ ಅನೇಕ ರೀತಿಯ ವಿವರಗಳನ್ನು ಶಾಸನಗಳ ಸೆರೆಹಿಡಿದಿವೆ. ಪೂರ್ಣವಾಗಿ ವಿವರಗಳನ್ನು ಸೆರೆಹಿಡಿದಿವೆ ಎಂದು ಹೇಳಲಾಗದಿದ್ದರೂ ಸಾಕಷ್ಟು ಮಟ್ಟಿಗೆ ನಮಗೆ ವಿವರಗಳನ್ನು ಕಟ್ಟಿಕೊಡುವುದರಿಂದ ಶಾಸನಗಳ ಸಾಂಸ್ಕೃತಿಕ ಅಧ್ಯಯನ ವಿವರಗಳನ್ನು ಕಟ್ಟಿಕೊಡುವುದರಿಂದ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಅಗತ್ಯವಾಗಿದೆ.

ಸಂಸ್ಕೃತಿ ಬೆಳವಣಿಗೆ:–

ಸಂಸ್ಕೃತಿ ಎಂದರೆ ವ್ಯಕ್ತಿಯ ಬುದ್ಧಿ ವಿಕಾಸ ಹಾಗೂ ಮಾನಸಿಕ ಪಕ್ವತೆ. ಅದು ಹೃದಯವನ್ನು ಸಂಸ್ಕರಿಸುವ ಹೃದಯವನ್ನು ತಟ್ಟುವ ಹಾಗೂ ಮಹಾಸ್ಫೂರ್ತಿಯನ್ನು ನೀಡುವ ಶಕ್ತಿಯುಳ್ಳದ್ದು. ಜೀವನದ ಪ್ರತಿಯೊಂದು ಸನ್ನಿವೇಶದಲ್ಲಿಯೂ ಮನುಷ್ಯನ ಮನೋಭಾವವೂ, ವರ್ತನೆಯು ಔಚಿತ್ಯ ಪೂರ್ಣವಾಗುವಂತೆ ಮಾಡುವ ಪ್ರಯತ್ನವೇ ಸಂಸ್ಕೃತಿ. "ಸಂಸ್ಕೃತಿಯು ಮನಸ್ಸನ್ನು ತಿಕ್ಕಿತೊಳೆದು ಶುಚಿ ಮಾಡುವ ಕೆಲಸ" ಎನ್ನುತ್ತಾರೆ. ಕವಿ ಡಿ.ವಿ.ಜಿ. ಸಮಾಜ ವಿಜ್ಞಾನಿಗಳ ದೃಷ್ಟಿಯಲ್ಲಿ ಸಂಸ್ಕೃತಿಯು ಒಂದು ಪ್ರದೇಶದ ಜನರ ಮಾನಸಿಕ ಅಥವಾ ನಾಗರಿಕತೆಯ ಬೌದ್ಧಿಕ ಸಾಧನೆ. ಇದು ಒಂದು ಜನಾಂಗದ, ಪ್ರಾಂತ್ಯದ ಜನಜೀವನದ ಹೊರ ಲಕ್ಷಣಗಳನ್ನು ಸೂಚಿಸುತ್ತದೆ. ಅಂದರೆ ಜನರ ವೇಷ ಭೂಷಣಗಳು, ಹಬ್ಬ ಹರಿದಿನಗಳು, ಜಾತ್ರೆ, ಉತ್ಸವ, ಕಲೆ ಮುಂತಾದವುಗಳನ್ನು ಸೂಚಿಸುವ ರೂಪಗಳಾಗುತ್ತವೆ. ಇದು ಸಮಾಜವನ್ನು ಒಟ್ಟುಗೂಡಿಸುವ ಸಂಸ್ಕೃತಿ ಇದು ಕೆಲವು ಸಂದರ್ಭಗಳಲ್ಲಿ ತನ್ನ ಒಗ್ಗಟ್ಟನ್ನು ಕಾಪಾಡಿಕೊಳ್ಳಲು ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ. ಸಂಸ್ಕೃತಿಯ ಬಗ್ಗೆ ದಾರ್ಶನಿಕ ಮ್ಯಾಥ್ಯೂ ಅರ್ನಾಲ್ಡನ ಅಭಿಪ್ರಾಯ ಹೀಗಿದೆ– "ಬುದ್ಧಿಗೆ ತಿಳಿವಳಿಕೆಯನ್ನು ಸಂಪಾದಿಸಿ ಕೊಡಬೇಕೆಂಬ ಶುದ್ಧ ವಿಜ್ಞಾನಾಕಾಂಕ್ಷೆಯ ಬಲದಿಂದ ಮಾತ್ರವೇ ಅಲ್ಲದೆ ಜನಕ್ಕೆ ಒಳ್ಳೆಯದನ್ನು ಮಾಡಬೇಕೆಂಬ ಸಮಾಜ ಹಿತಾಕಾಂಕ್ಷೆಯ ಮತ್ತು ಧರ್ಮಾಕಾಂಕ್ಷೆಯ ಬಲದಿಂದಲೂ ಪ್ರೇರಿತವಾಗಿ ನಡೆಯುತಕ್ಕದ್ದು ಸಂಸ್ಕೃತಿ"[೧]

ಮಾನವ ಜಾತಿಗೆ ಬೇಕಾದ ಉನ್ನತ ಜೀವನ ಮೌಲ್ಯಗಳನ್ನು ಭಾರತೀಯ ಸಂಸ್ಕೃತಿಯು ಜಗತ್ತಿಗೆ ನೀಡಿದೆ. ನೀತಿ, ನಿಯಮ ಹಾಗೂ ಉನ್ನತ ಚಾರಿತ್ರ್ಯಗಳನ್ನು ಎತ್ತಿ ಹಿಡಿಯುವುದು ಭಾರತೀಯ ಸಂಸ್ಕೃತಿ. ದಿವ್ಯತ್ವಕ್ಕೂ, ಸಾಮಾನ್ಯ ಜೀವನಕ್ಕೂ ಸಾಮರಸ್ಯವನ್ನು ಬೆಳಸುವುದು ಇದರ ಗುಣ, ಭಾರತೀಯ ಸಂಸ್ಕೃತಿಯ ಪರಂಪರೆಯ ತಳಹದಿಯಾಗಿರುವ ತತ್ವಗಳು ಅನ್ವೇಷಣೆ ಅಧ್ಯಯನ ಮತ್ತು ಪ್ರಯೋಗಗಳ ಫಲವಾಗಿ ಅಂಕುರಗೊಂಡವು. ಇದರಿಂದ ಉತ್ಪತ್ತಿಯಾದ ಧರ್ಮವು ಒಂದು ವಿಜ್ಞಾನವಾಯಿತು. ಈ ವಿಜ್ಞಾನ ಮತ್ತು ಆತ್ಮ ವಿಜ್ಞಾನ ರಾಷ್ಟ್ರದ ಲಕ್ಷಣವಾಯಿತು. ಜನಾಂಗದ ಸತ್ವವಾಯಿತು. ಯಾವುದು ಪರಿವರ್ತನ ರಹಿತವೂ, ಯಾವುದನ್ನು ತಿಳಿಯುವುದರಿಂದ ಉಳಿದೆಲ್ಲವನ್ನು ತಿಳಿಯಬಹುದೋ ಅದನ್ನು ತಿಳಿಯುವಂತೆ ಮಾಡುವ ವಿಜ್ಞಾನವೇ ಅತ್ಯಂತ ಶ್ರೇಷ್ಠವಾದುದು ಎಂದು ನಮ್ಮ ಪ್ರಾಚೀನ ಉಪನಿಷತ್ತ್‌ಗಳು ಸಾರುತ್ತವೆ. ಈ ವಿಜ್ಞಾನವು ಚಿಂತನಾ ಜಗತ್ತು ಹಾಗೂ ಭೌತಿಕ ಜಗತ್ತುಗಳಲ್ಲಿ ಕಂಡು ಬರುವ ಅಸಂಖ್ಯಾ ವೈವಿಧ್ಯದ ತಳದಲ್ಲಿರುವ ಆಧ್ಯಾತ್ಮಿಕ ಏಕತೆಯ ತತ್ವವನ್ನು ಸ್ಥಾಪಿಸಿತು. ಇದು ಎಲ್ಲ ವಿವಾದಗಳು, ಭಿನ್ನಾಭಿಪ್ರಾಯಗಳನ್ನು ಪರಿಹರಿಸುವುದು ಮಾತ್ರವಲ್ಲ ಜೀವನಕ್ಕೆ ಅದರ ಎಲ್ಲ ಮುಖಗಳೊಂದಿಗೆ ಹೊಂದಿಕೊಂಡಿತು. ಅದರ ಆಧಾರದ ಮೇಲೆ ಸಾಮಾಜಿಕ ವ್ಯವಸ್ಥೆ ಸ್ಥಾಪಿತವಾಯಿತು.

ಇಂತಹ ಪರಂಪರೆಯಲ್ಲಿ ವಿಜೃಂಭಿಸಿದ ಕರ್ನಾಟಕದ ಹೆಸರು ನಮ್ಮ ಪ್ರಾಚೀನ ಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತದಲ್ಲಿ ಪ್ರಕಟಗೊಂಡಿದೆ. ರಾಮಾಯಣದ ಸುಂದರಕಾಂಡದಲ್ಲಿ ಹನುಮನ ಮತ್ತು ಸೀತೆಯ ನಡುವೆ ನಡೆಯುವ ಪ್ರಥಮ ಸಂವಾದದಲ್ಲಿ ಹನುಮನ ಮೂಲ ನೆಲೆ ಕರ್ನಾಟಕ ಎಂಬುದು ಸ್ಪಷ್ಟವಾಗಿ ತಿಳಿದು ಬರುತ್ತದೆ. ಕನ್ನಡ ಭಾಷೆಯ ಕೆಲವು ಪದಗಳು ವೇದಗಳಲ್ಲಿ ಹಾಗೂ ಕ್ರಿ.ಶ. ಎರಡನೆಯ ಶತಮಾನದ ಗ್ರೀಕ್ ನಾಟಕದಲ್ಲಿ ದೊರೆಯುತ್ತವೆ. ಕರುನಾಡು ಅಥವಾ ಎತ್ತರದ ಭೂಮಿಯಿರುವ ನಾಡು ಎಂಬುದೇ ಕರ್ನಾಟಕ ಎಂದು ಹೇಳುವವರಿದ್ದಾರೆ. ಕಮ್ಮಿತ್ತುನಾಡು ಎಂದರೆ ಶ್ರೀಗಂಧದ ಕಂಪನ್ನುಳ್ಳ ನಾಡು ಎಂಬುದೇ ಕರ್ನಾಟಕ ಎಂದು ಭಾವಿಸುವವರಿದ್ದಾರೆ. ಕರಿಯಮಣ್ಣಿನ ನಾಡು ಎಂಬರ್ಥದ ಪದಗಳು ಸೇರಿ ಕರ್ನಾಟಕ ಎಂದಾಗಿದೆ ಎಂದು ಕೆಲವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಲಾಟ ಕರ್ನಾಟಗಳನ್ನು ಸಂಯುಕ್ತ ದೇಶಗಳೆಂದು ಬೃಹತ್ಕಥೆಯಲ್ಲಿ ಉಲ್ಲೇಖಿಸಿದ್ದುಂಟು, ಬಂಗಾಳಿ ಭಾಷೆ, ಸಂಸ್ಕೃತಿಯಲ್ಲಿ ಕರ್ಣಾಟದ ಮುದ್ರೆಯು ಇದ್ದುದ್ದನ್ನು ಬಂಗಾಳಿ ವಿದ್ವಾಂಸರು ಖಚಿತಗೊಳಿಸಿದ್ದಾರೆ.

ಈ ನಿಬಂಧದ ಶೀರ್ಷಿಕೆಯಲ್ಲಿ ಬಂದಿರುವ **'ಸಾಂಸ್ಕೃತಿಕ'** ಎಂಬ ವಿಶೇಷಣಕ್ಕೆ ಸ್ವಲ್ಪ ವಿವರಣೆ ಅತ್ಯಗತ್ಯ, ಸಂಸ್ಕೃತಿ ಎಂಬ ಮಾತು ಬಹು ಇತ್ತೀಚಿನದು. ಆ ಪದವು ಇಂಗ್ಲೀಷಿನ

'culture' ಎಂಬ ಪದಕ್ಕೆ ಸಮಾರ್ಥಕವಾಗಿ ಹುಟ್ಟಿಕೊಂಡಿದೆ 'ಸಂಸ್ಕೃತಿ' ಎಂಬುದು 'culture' ಎಂಬ ಅರ್ಥದಲ್ಲಿ "ಹೆಚ್ಚಾಗಿ ಪ್ರಯೋಗವಾಗಿತ್ತಿರುವುದು ಸುಮಾರು ನೂರು ವರ್ಷದಿಂದೀಚೆಗೆ" 'culture' ಎಂಬ ಪದವು ಇಂಗ್ಲೀಷಿನಲ್ಲಿ ಎಷ್ಟರ ಮಟ್ಟಿನ ಬಳಕೆಯನ್ನು ಪಡೆದಿದೆಯೆಂದರೆ ಅದನ್ನು ತಪ್ಪುತಪ್ಪಾಗಿ ಭಿನ್ನಾರ್ಥಗಳಲ್ಲಿ ಬಳಸಲಾಗುತ್ತಿದೆ. ಕನ್ನಡದಲ್ಲೂ ಅಷ್ಟೇ: ಭಾಷಣಗಳಲ್ಲೂ ಗ್ರಂಥಗಳಲ್ಲೂ ಈ ಪದವು ಅದರ ಅರ್ಥವ್ಯಾಪ್ತಿಯ ಅರಿವಿಲ್ಲದೆ ಬಳಸಲಾಗುತ್ತಿದೆ. ಸಂಸ್ಕೃತಿಯೆಂದರೆ ಏನು ಎಂಬುದನ್ನು ಕುರಿತು ವಿದ್ವಾಂಸರ ಕೆಲವು ಅಭಿಪ್ರಾಯಗಳನ್ನು ಸಂಕ್ಷಿಪ್ತವಾಗಿ ನಿರೂಪಿಸಿ, ಆ ಪದವನ್ನು ನಾವು ಯಾವ ಅರ್ಥದಲ್ಲಿ ಬಳಸಿಕೊಂಡಿದ್ದೇವೆ. ಹಾಗೂ ಮನುಷ್ಯನು ಪ್ರಾಣಿಗಳಲ್ಲಿ ಒಬ್ಬನಾದರೂ, ತಾನು ಪ್ರಾಣಿಗಳಿಗಿಂತ ಭಿನ್ನ ಎಂದು ಹೇಳಿಕೊಳ್ಳುತ್ತಾನೆ. ಅವನು ಪ್ರಾಣಿಗಳಿಗಿಂತ ಬೇರೆ ಎಂದು ತೋರಿಸುವ ಅಂಶ ಯಾವುದು? ಪ್ರಾಣಿಗಳಿಗೆ ಬುದ್ಧಿಯಿಲ್ಲ. ಅವುಗಳಲ್ಲಿ ಸಾಮಾಜಿಕ ಒಕ್ಕೂಟವಿಲ್ಲ. ವಾಕ್‌ಶಕ್ತಿಯಿಲ್ಲ. ಇಷ್ಟೂ ಮನುಷ್ಯನಿಗೆ ಇದೆ ಎಂದು ಹೇಳಬಹುದಾದರೂ ಮನುಷ್ಯನನ್ನು ಪ್ರಾಣಿಗಳಿಂದ ಬೇರ್ಪಡಿಸಬಲ್ಲ ಅಂಶವನ್ನು ಒಂದು ಮಾತಿನಲ್ಲಿ ಹೇಳಬಹುದು ಅದೇ 'ಸಂಸ್ಕೃತ' ಮನುಷ್ಯನಿಗೆ ಸಂಸ್ಕೃತಿಯುಂಟು, ಪ್ರಾಣಿಗಳಿಗೆ ಸಂಸ್ಕೃತಿಯಿಲ್ಲ.[೨]

ಅತ್ಯುತ್ತಮ ಅಲೋಚನೆಗಳನ್ನೂ ಉಕ್ತಿಗಳನ್ನೂ ತಿಳಿಯುವುದು ಸಂಸ್ಕೃತಿಯೇ ಅದರೆ ಅಷ್ಟು ಸಾಲದು. ನಾವು ಎಷ್ಟೋ ಬಾರಿ ಯಾಂತ್ರಿಕವಾಗಿ ಕೆಲವು ಭಾವನೆಗಳನ್ನೂ ಪದ್ಧತಿಗಳನ್ನೂ ಅನುಸರಿಸುತ್ತಿರುತ್ತೇವೆ. ನಾವು ಅರಿತ ಅಲೋಚನೆಗಳೂ ಉಕ್ತಿಗಳೂ ನಮ್ಮ ಭಾವನೆ ಮತ್ತು ಪದ್ಧತಿಗಳ ಮೇಲೆ ಬೆಳಕು ಹೀಗೆ ನಮ್ಮನ್ನು ನಾವು ಉತ್ತಮಗೊಳಿಸಿಕೊಳ್ಳಲು ಮಾಡುವ ಪ್ರಯತ್ನವೇ ಸಂಸ್ಕೃತಿ, ಅದು ಹೆಚ್ಚು ಆನಂದ, ಹೆಚ್ಚು ಬೆಳಕು, ಹೆಚ್ಚು ಬಾಳು, ಹೆಚ್ಚು ಅನುಕಂಪ ಇವುಗಳನ್ನೇ ಪ್ರಧಾನ ಲಕ್ಷಣವಾಗಿ ಉಳ್ಳ ಅಂತರಂಗಿಕವಾದ, ಆತ್ಮಸಂಬಂಧಿಯಾದ ಕ್ರಿಯೆ ಅದನ್ನು ಹೃದಯದ ಒಲವು, ಬುದ್ಧಿಯ ಬೆಳಕು (sweetness and lignt) ಎಂಬ ಎರಡು ಮಾತುಗಳಿಂದ ನಿರ್ದೇಶಿಸಬಹುದು.

ಆರ್ನಾಲ್ಡನ 'ಸಂಸ್ಕೃತಿ' ಯು ಬಹುಮಟ್ಟಿಗೆ ವ್ಯಕ್ತಿಗತವಾಗಿದೆ. ವ್ಯಕ್ತಿಯ ವಿಕಾಸಕ್ಕೆ ಸಂಬಂದಿಸಿದೆ. ಎಮರ್ಸನ್ನನ ಅಭಿಪ್ರಾಯಗಳು ಬಹುಮಟ್ಟಿಗೆ ಇವನ ಅಭಿಪ್ರಾಯಗಳನ್ನೇ ಹೋಲುತ್ತವೆ. ಎಮರ್ಸನ್ನನು ತನ್ನ 'culture' ಎಂಬ ಪ್ರಬಂಧದಲ್ಲಿ ವ್ಯಕ್ತಿಯು ಸುಸಂಸ್ಕೃತನಾಗಬೇಕಾದರೆ ಅವನು ಯಾವ ಮಾರ್ಗಗಳನ್ನು ಅನುಸರಿಸಬೇಕು, ಸುಸಂಸ್ಕೃತನ ಲಕ್ಷಣಗಳೇನು ಎಂಬ ವಿಷಯಗಳನ್ನೇ ಉದ್ದಕ್ಕೂ ಪ್ರತಿಪಾದಿಸಿಕೊಂಡು ಹೋಗಿದ್ದಾನೆ.

ಸುಸಂಸ್ಕೃತನನ್ನು ಕುರಿತ ಇವನ ವಿವರಣೆಯು ನ್ಯೂಮನ್ನನ 'Gentleman' ವಿವರಣೆಯನ್ನು ಬಹುವಾಗಿ ಹೋಲುತ್ತದೆ. ರವೀಂದ್ರನಾಥ ಠಾಕೂರರ ಅಭಿಪ್ರಾಯಗಳೂ ಬಹುಮಟ್ಟಿಗೆ ಈ ಗುಂಪಿಗೆ ಸೇರುತ್ತವೆ. ಅವರು 'Civilization' ಎಂಬ ಪದವನ್ನು ಸಂಸ್ಕೃತಿ ಎಂಬ ಅರ್ಥದಲ್ಲಿ ಬಳಸಿದ್ದಾರೆ. ಸಂಸ್ಕೃತಿ ಎಂಬುದು ಒಂದು ಆಕಾರವನ್ನು ತಳೆದು ನಿಂತ ಆಕಸ್ಮಿಕ ಘಟನೆಗಳ ಮೊತ್ತವಲ್ಲ. ನಮ್ಮ ಪೂರ್ಣತೆಗಾಗಿ ರೂಪಿಸಿಕೊಂಡ ಯಾವುದೊ ದಿವ್ಯಾದರ್ಶದ ಅಭಿವ್ಯಕ್ತಿ. ಇದಕ್ಕೆ ಸಮಾನವಾದ ಭಾರತೀಯ ಪದ 'ಧರ್ಮ' ಮನುಷ್ಯ ನಿಜವಾಗಿ ಏನಾಗಿದ್ದಾನೆಯೋ ಅದರ ಅತ್ಯುತ್ತಮ 'ಅಭಿವ್ಯಕ್ತಿಯೇ ಧರ್ಮ' ಮನುಷ್ಯನ ಸಾಂಘಿಕ ಜೀವನದಲ್ಲಿ ಅಭಿವ್ಯಕ್ತಗೊಂಡ ಧರ್ಮವೇ ಸಂಸ್ಕೃತಿ. ಜೀವನಾದರ್ಶಗಳನ್ನೂ, ಮೌಲ್ಯಗಳನ್ನೂ ನಮ್ಮ ಮುಂದಿಡುವುದು ಸಂಸ್ಕೃತಿಯ ಘನೋದ್ದೇಶಗಳಲ್ಲೊಂದು ಎಲ್ಲಿ ಸರಳವಾದ ರೂಪದಲ್ಲಿ ಆಧ್ಯಾತ್ಮವು ಅಭಿವ್ಯಕ್ತವಾಗುವುದು ಅಲ್ಲಿ ಸಂಸ್ಕೃತಿಯು ಅತ್ಯುತ್ತಮ ರೂಪದಲ್ಲಿ ಸೃಷ್ಟಿಯಾಯಿತೆಂದು ಭಾವಿಸಬೇಕು. ಠಾಕೂರರೇ ಇನ್ನೊಂದೆಡೆ ಸಂಸ್ಕೃತಿಯನ್ನು ಮನೋವಿಜ್ಞಾನವೆಂದು ಕರೆದಿದ್ದಾನೆ.

ಟಿ.ಎಸ್. ಎಲಿಯಟ್ಟನವಾದವು ಸ್ವಲ್ಪ ಭಿನ್ನವಾದುದು ಅವನ ಪ್ರಕಾರ ಸಂಸ್ಕೃತಿ ಎಂಬುದು ಒಬ್ಬ ವ್ಯಕ್ತಿಯಲ್ಲಿ ಕಂಡು ಬರುವುದಕ್ಕಿಂತ ಹೆಚ್ಚಾಗಿ ಒಂದು ಸಮಾಜದ ಅಥವಾ ಗುಂಪಿನ 'ಜೀವನ ವಿಧಾನ'ದಲ್ಲಿ ಕಂಡುಬರುತ್ತದೆ. ಸಂಸ್ಕೃತಿ ಎಂಬುದು ಒಂದು ಜನಾಂಗದ ಸಮಸ್ತ ಕ್ರಿಯೆಗಳನ್ನೂ ಅಭಿರುಚಿಗಳನ್ನೂ ಒಳಗೊಳ್ಳುತ್ತದೆ. ವ್ಯಕ್ತಿಗಳು ಏನಿದ್ದರೂ ಈ ಸಂಸ್ಕೃತಿಯ ಪ್ರಗತಿಗೆ ಕಾರಣರಾಗುತ್ತಾರೆ. ಅವನ ವಾಕ್ಯಗಳು ಇವು "ಮೊದಲನೆಯದಾಗಿ ಮಾನವಶಾಸ್ತ್ರಜ್ಞರನ್ನು ಅನುಸರಿಸಿ ಹೀಗೆ ಹೇಳಬಹುದು ಒಂದು ಪ್ರದೇಶದಲ್ಲಿ ವಾಸಿಸುತ್ತಿರುವ ಒಂದು ಜನಾಂಗದ ಜೀವನ ವಿಧಾನವೇ ಸಂಸ್ಕೃತಿ ಈ ಸಂಸ್ಕೃತಿಯು ಅವರ ಕಲೆಗಳಲ್ಲಿ ಸಾಮಾಜಿಕ ವ್ಯವಸ್ಥೆಯಲ್ಲಿ, ಅವರ ಆಚಾರ ವ್ಯವಹಾರಗಳಲ್ಲಿ, ಧರ್ಮದಲ್ಲಿ ವ್ಯಕ್ತವಾಗುತ್ತದೆ. ಅದರೆ ಇವೆಲ್ಲವನ್ನು ಒಟ್ಟಿಗೆ ಸೇರಿಸಿದರೂ ಅದು ಸಂಸ್ಕೃತಿ ಆಗಲಾರದು. ಮನುಷ್ಯನ ದೇಹವನ್ನು ಹೇಗೋ ಹಾಗೆ ಸಂಸ್ಕೃತಿಯನ್ನು ಈ ವಿಭಾಗಗಳಾಗಿ ವಿಭಜಿಸಬಹುದು. ದೇಹದ ಅಂಗಗಳ ಮೊತ್ತವೇ ಹೇಗೆ ಮನುಷ್ಯ ಅಲ್ಲವೋ ಹಾಗೆ ಆ ಜನಾಂಗದ ಕಲೆಗಳ, ಸಂಪ್ರದಾಯಗಳ, ಧಾರ್ಮಿಕ ಶ್ರದ್ದೆಗಳ ಮೊತ್ತವೇ ಸಂಸ್ಕೃತಿ ಅಗಲಾರದು. ಇವು ಒಂದರ ಮೇಲೊಂದು ಪ್ರಭಾವವನ್ನು ಬೀರುತ್ತವೆ. ಒಂದನ್ನು ಅರಿಯಲು ಎಲ್ಲವನ್ನು ಅರಿಯಬೇಕು ಶ್ರೇಷ್ಠ ಸಂಸ್ಕೃತಿಗಳಿರುವಂತೆ ಶ್ರೇಷ್ಠವಲ್ಲದ ಸಂಸ್ಕೃತಿಗಳೂ ಉಂಟು. ಒಂದು ಸಮಾಜದಲ್ಲಿಯೇ ಶ್ರೇಷ್ಠ ಸಂಸ್ಕೃತಿಗೆ ಮತ್ತು ಶ್ರೇಷ್ಠವಲ್ಲದ ಸಂಸ್ಕೃತಿಗೆ ಸೇರಿದ ವರ್ಗಗಳನ್ನು ಗುರುತಿಸಬಹುದು. ಹಾಗೆಯೇ ಅತ್ಯಂತ ಸುಸಂಸ್ಕೃತರಾದ

ವ್ಯಕ್ತಿಗಳಿರುವರೆಂದೂ ಹೇಳಬಹುದು. ಒಬ್ಬ ಕಲಾವಿದನ ಅಥವಾ ತತ್ವಜ್ಞನ ಸಂಸ್ಕೃತಿಯು ಒಬ್ಬ ಗಣಿ ಕೆಲಸದವನ್ನೇ ಅಥವಾ ರೈತನ ಸಂಸ್ಕೃತಿಯಿಂದ ಸ್ವಲ್ಪ ಭಿನ್ನ ಅದರೆ ಒಂದು ಆರೋಗ್ಯಕರವಾದ ಸಮಾಜದಲ್ಲಿ ಇವೆಲ್ಲವೂ ಒಂದೇ ಸಂಸ್ಕೃತಿಯ ಅಂಗಗಳು. ಕಲಾವಿದ, ಕವಿ, ತತ್ವಜ್ಞಾನಿ, ರಾಜಕಾರಣಿ ಶ್ರಮಜೀವಿ. ಇವರೆಲ್ಲರಿಗೆ ಒಂದು ಸಮಾನವಾದ ಸಂಸ್ಕೃತಿ ಇರುತ್ತದೆ. ಬೇರೆ ದೇಶಗಳಲ್ಲಿ ಅದೇ ವೃತ್ತಿಗಳನ್ನು ಕೈಗೊಂಡಿರುವ ಜನರ ಸಂಸ್ಕೃತಿಯೂ ಈ ಸಂಸ್ಕೃತಿಯೂ ಒಂದೇ ಆಗಿರುವುದಿಲ್ಲ.[೩]

ಟಿ.ಎಸ್. ಎಲಿಯಟ್ಟನ ವಿವರಣೆಯು ಅವನೇ ಹೇಳಿಕೊಂಡಿರುವಂತೆ ಬಹುಮಟ್ಟಿಗೆ ಮಾನವಶಾಸ್ತ್ರಜ್ಞರನ್ನೂ ಸಮಾಜಶಾಸ್ತ್ರಜ್ಞರನ್ನೂ ಅನುಸರಿಸಿದೆ. ಮನುಷ್ಯನು ವಂಶಾನುಗತವಾದ ಕೆಲವು ಲಕ್ಷಣಗಳೊಡನೆ ಶಕ್ತಿಗಳೊಡನೆ ಹುಟ್ಟುತ್ತಾನೆ. ಇವುಗಳನ್ನು ಯಾರೂ ಅವನಿಗೆ ಕಲಿಸಿಕೊಡಬೇಕಾಗಿಲ್ಲ ಅದರೆ ಇನ್ನು ಕೆಲವನ್ನು ಅವನಿಗೆ ಕಲಿಸಿಕೊಡಬೇಕಾಗುತ್ತದೆ. ಅಥವಾ ತನ್ನ ಪರಿಸರದಿಂದ ಅವನೇ ಕಲಿತುಕೊಳ್ಳುತ್ತಾನೆ. ಉದಾಹರಣೆಗೆ:- ಭಾಷೆ ಮನೆಕಟ್ಟುವುದು, ವಸ್ತ್ರಗಳ ಉಪಯೋಗ, ವ್ಯವಸಾಯ, ಸಂಪ್ರದಾಯಗಳು ಇತ್ಯಾದಿಗಳು ಇವು ಹುಟ್ಟನೊಡನೆ ವ್ಯಕ್ತಿಯಿಂದ ವ್ಯಕ್ತಿಗೆ ಹರಿಯುವುದಿಲ್ಲ. ಮನೆ ಕಟ್ಟುವುದನ್ನು ತೆಗೆದುಕೊಂಡರೆ, ಪಕ್ಷಿಗಳಿಗೂ ಹುಟ್ಟಿನೊಡನೆ ಸ್ವಭಾವ ಸಿದ್ಧವಾಗಿ ಬರುತ್ತದೆ. ಒಂದು ಸಾವಿರ ವರ್ಷಗಳ ಹಿಂದೆ ಪಕ್ಷಿಗಳು ಹೇಗೆ ಗೂಡು ಕಟ್ಟುತ್ತಿದ್ದುವೋ ಹಾಗೆಯೇ ಈಗಲೂ ಗೂಡು ಕಟ್ಟುತ್ತವೆ. ಮನಷ್ಯನಲ್ಲಾದರೋ, ಅವನು ತನ್ನ ಪರಿಸರದಿಂದ ಅದನ್ನು ಕಲಿತುಕೊಳ್ಳುತ್ತಾನೆ. ಉತ್ತಮಗೊಳಿಸುತ್ತಾ ಹೋಗುತ್ತಾನೆ. ಸಂಸ್ಕೃತಿ ಎಂದರೆ ಒಂದು ಸಮಾಜದ ಜೀವನ ವಿಧಾನ, ಅದರ ಆಚಾರ ವ್ಯವಹಾರಗಳು ಅದರ ಸಂಸ್ಥೆಗಳು, ಅಲೋಚನಾ ವಿಧಾನಗಳು, ಪ್ರತಿಯೊಬ್ಬ ವ್ಯಕ್ತಿಯೂ ಪ್ರಪಂಚವನ್ನು ಸ್ವತಂತ್ರವಾಗಿ ನೋಡಲಾರ. ಅವನ ಸಮಾಜದ ಅಲೋಚನಾ ವಿಧಾನಗಳೂ ಆಚಾರ ವ್ಯವಹಾರಗಳೂ ಸಂಪ್ರದಾಯಗಳೂ ಅವನ ದೃಷ್ಟಿಯನ್ನು ನಿಯಂತ್ರಿಸುತ್ತವೆ. ಮಾರ್ಪಟಿಸುತ್ತವೆ. ಹೀಗೆ ಮನುಷ್ಯ ಬಹುಮಟ್ಟಿಗೆ ತಾನು ಹುಟ್ಟಿ ಬೆಳೆದ ಸಂಸ್ಕೃತಿಯ ಶಿಶುವೆಂದು ಹೇಳಬಹುದು.

ಯಾವುದೇ ಪ್ರದೇಶದ ಭಾಷೆ, ಸಾಹಿತ್ಯ, ಸಂಸ್ಕೃತಿ, ಇತಿಹಾಸಗಳ ಅಧ್ಯಯನಕ್ಕೆ ಶಾಸನಗಳು ಅಮೂಲ್ಯ ಆಕರಗಳು. ಶಾಸನ ಎಂದರೆ ಆಜ್ಞೆ ಮಾಡು, ಘೋಷಣೆ ಮಾಡು ಎನ್ನುವ ಅರ್ಥ ಬರುತ್ತದೆ. ಇವುಗಳ ಅಂತರಾರ್ಥದಲ್ಲಿ ಪೌರುಷ, ಪರಾಕ್ರಮ, ಅರ್ಪಣೆ, ತ್ಯಾಗ, ಸತ್ಯವೆಂಬ ಧರ್ಮ ಕಾಯುವ ವಿಶೇಷ ಗುಣಗಳು ಅಡಕವಾಗಿರುತ್ತವೆ. ಅಲ್ಲದೆ ಅಂದಿನ ಜೀವನ ಮತ್ತು ಸಂಸ್ಕೃತಿಗೆ ಕನ್ನಡಿಯಂತಿರುತ್ತವೆ. ಆದುದರಿಂದ ಶಾಸನಗಳನ್ನು **'ಇತಿಹಾಸದ ಕಣಜ'** ಎನ್ನುತ್ತಾರೆ. ಹಲವಾರು

ಲಿಪಿಯ ಶಾಸನಗಳ ಒಕ್ಕಣೆ ಬಹುಲಾಲಿತ್ಯ ಪೂರ್ಣವಾಗಿವೆ. ಆಯಾಕಾಲದ ಆಡಳಿತಕ್ಕೆ ಅನುಸಾರವಾಗಿ ಭಾಷೆಯ ಸಾಮರಸ್ಯವನ್ನು ಕಾಣಬಹುದಾಗಿದೆ. ದಕ್ಷಿಣ ಭಾರತದ ಪ್ರಾಗೈತಿಹಾಸಿಕ ಸಂಸ್ಕೃತಿಗಳ ಕಾಲ ಮತ್ತು ಅನುಕ್ರಮದ ಬಗ್ಗೆ ಸ್ಪಷ್ಟ ಚಿತ್ರಣ ಸಿಕ್ಕಿದ್ದು ಕರ್ನಾಟಕದ ಬ್ರಹ್ಮಗಿರಿ (ಚಿತ್ರದುರ್ಗ ಜಿಲ್ಲೆ) ಯಲ್ಲಿ ಸಿಕ್ಕಿದೆ. ಮೌರ್ಯ ವಂಶದ ಅಶೋಕನ ಒಂದು ಶಾಸನ (ಕ್ರಿ.ಪೂ.261—260) ಕಾಲ ಮತ್ತು ಧರ್ಮದ ದೃಷ್ಟಿಯಿಂದ ಮಹತ್ವಪೂರ್ಣವಾದದ್ದು. ಇಲ್ಲಿನ ಶಾಸನದಲ್ಲಿ ಉಲ್ಲೇಖಗೊಂಡಿರುವ **'ಇಸಿಲ'** ಎಂಬ ಪದವು ಶೋಧನೆಗೆ ಅನುವು ಮಾಡಿಕೊಟ್ಟಿತ್ತು. ಇಸಿಲ ಎನ್ನುವುದು ಬ್ರಹ್ಮಗಿರಿಯ ಸುತ್ತಲಿನಲ್ಲಿಯೇ ಒಂದು ಪಟ್ಟಣವಾಗಿರುತ್ತೆಂದು ತಿಳಿದುಬರುತ್ತದೆ. ಇತಿಹಾಸ ಪ್ರಾರಂಭ ಕಾಲದ ಜನವಸತಿಯ ಗುರುತುಗಳೇ ಇಸಿಲ ಪಟ್ಟಣದ್ದು ಎಂದು ಅಭಿಪ್ರಾಯವಿದೆ. ಇಲ್ಲಿ ಮುಖ್ಯವಾದ ಅಂಶವೆಂದರೆ ಇದರ ಹಿಂದೆಯೇ ಕರ್ನಾಟಕದ ಅಗಿನ ಕೆಲವು ಪಟ್ಟಣಗಳ ಹೆಸರು ಸಹ ಬೆಳಕು ಕಂಡಿವೆ ಇವು ಇಸಿಲ ಪಟ್ಟಣದಂತೆಯೇ ಇಟ್ಟಿಗೆ ಕಟ್ಟಡಗಳಿಂದೊಳಗೂಡಿ ವಿದೇಶಗಳೊಂದಿಗೂ ವ್ಯಾಪಾರ ಸಂಬಂದವಿರಿಸಿಕೊಂಡಿದ್ದವೆಂದು ತಿಳಿದುಬರುತ್ತದೆ. ಈ ನಿಟ್ಟಿನಲ್ಲಿ ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ತಿಪ್ಪೂರು (ಅರೆತಿಪ್ಪೂರು) ಶಾಸನವು ಸಹ ಒಂದೆಂದು ಗುರುತಿಸಲಾಗಿದೆ. ಹೀಗಾಗಿ ಪ್ರಸಿದ್ಧ ಇಸಿಲ ಮತ್ತು ತಿಪ್ಪೂರು ಪಟ್ಟಣಗಳು ಸಮಕಾಲೀನ ಪಟ್ಟಣವಾಗಿದ್ದು, ಕಾಲಕ್ರಮದಲ್ಲಿ ಅಶೋಕ ಚಕ್ರವರ್ತಿಯ ಅಳ್ವಿಕೆಗೂ ಒಳಪಟ್ಟು, ಬೌದ್ದ ಧರ್ಮದ ಪ್ರಚಾರ ಕೇಂದ್ರವಾಗಿರುವಲ್ಲಿ ಯಾವ ಸಂಶಯವೂ ಇಲ್ಲವಾಗಿದೆ. ತಿಪ್ಪೂರಿನ ಪ್ರಾಕೃತಿಕ ಸೊಬಗು 'ಬೌದ್ದ ಧರ್ಮದ ಸಂಘ' ಸ್ಥಾಪನೆಗೆ ಅನುವು ಮಾಡಿಕೊಟ್ಟಿರಲೂಬಹುದು. ಮುಂದೆ ಬೌದ್ದ ಧರ್ಮ ಈ ನೆಲದಲ್ಲಿ ಕ್ಷೀಣವಾದಂತೆ ತಿಪ್ಪೂರು ಮುಂದೆ ಜೈನ ಧರ್ಮದ ಬೀಡಾಗಿ ಪ್ರಕಾಶಗೊಂಡು ಮತ್ತೆ ಅವನತಿಗೊಂಡಿತು.[೪]

ಗಂಗರು:–

ಮಂಡ್ಯ ಜಿಲ್ಲೆಯಲ್ಲಿ ಕಾಣಬರುವ ಅಧಿಕೃತ ಶಾಸನಗಳಲ್ಲಿ ಅತಿ ಹಳೆಯದೆಂದರೆ ಶಕ, ೬೩೫ರ ಜೇಷ್ಠ ಪೂರ್ಣಿಮೆಯ ಅಂದರೆ ೧೩ನೇ ಜೂನ್ ೭೧೩ರ ಒಂದನೆಯ ಗಂಗ ರಾಜನ ಸಂತತಿಯ ಶಿವಮಾರನ ತಾಮ್ರಶಾಸನ ಇದು ಅವನ ಆಳ್ವಿಕೆಯ ೩೪ನೇಯ ವರ್ಷವೆಂದು ಸೂಚಿಸುತ್ತದೆ. ಮಂಡ್ಯ ತಾಲ್ಲೂಕು ಹಲ್ಲೆಗೆರೆಯಲ್ಲಿ ಕಂಡು ಬಂದ ಸಂಸ್ಕೃತ ಲಿಪಿಯ ಆನೆ ಚಿಹ್ನೆಯ ಶಾಸನದಲ್ಲಿ ಸಮೀಪದ ಕೆರಗೋಡು ಮತ್ತು ಕೆಲವು ಗ್ರಾಮಗಳನ್ನು ಹಲವರಿಗೆ ದಾನವಾಗಿತ್ತ ಸಂಗತಿಯನ್ನು ತಿಳಿಸುತ್ತದೆ. ಪಲ್ಲವ ಯುವ ರಾಜನ ಮಕ್ಕಳಾದ **ಜಯ** ಮತ್ತು **ವೃದ್ದಿ** ಎಂಬುವರ ಕೋರಿಕೆಯ ಮೇರೆಗೆ ಈ ದಾನವನ್ನು ನೀಡಲಾಯಿತೆಂದು ತಿಳಿಸಿದೆ.

ಮುಖ್ಯವಾಗಿ 'ಮಂಡೆಯ' ಎಂಬುದು ಮಂಡ್ಯದ ಹಿಂದಿನ ಹೆಸರಾಗಿತ್ತು. ಕ್ರಿ.ಶ.೧೨೭೮ರ ಸಮೀಪದ ಹೊಸ ಬೂದನೂರು ಗ್ರಾಮದ ಹೊಯ್ಸಳ ಮೂರನೇ ನರಸಿಂಹನ ಆಳ್ವಿಕೆಯ ದೇವದಾನದ ಶಾಸನವೊಂದರಲ್ಲಿ ಶ್ರೀಮದ್ ಅನಾದಿ ಅಗ್ರಹಾರಂ ಮಂಡಯದ ಮಹಾಜನಂಗಳು ಎಂಬ ಉಕ್ತಿಯನ್ನು ಉಲ್ಲೇಖಿಸಿದೆ. ಮಂಡ್ಯವು ಈ ಅವಧಿಯಲ್ಲಿ ಒಂದು ಅಗ್ರಹಾರ (ವಿದ್ಯಾಕೇಂದ್ರ) ವಾಗಿತ್ತೆಂಬ ವಿಷಯವನ್ನು ಹೊರಚೆಲ್ಲುತ್ತದೆ. ಈ ಶಾಸನದಲ್ಲಿ ಭೂಮಿಯನ್ನು ದೇವಾಲಯಕ್ಕೆ ದಾನವಾಗಿ ನೀಡುವುದರೊಂದಿಗೆ ರೈತರ ಹಿತಾಸಕ್ತಿಯನ್ನು ಕಾಪಾಡಿಕೊಂಡಿರುವುದಕ್ಕೆ ಸ್ಪಷ್ಟವಾದ ನಿದರ್ಶನವಿದೆ. ದೇವಾಲಯದ ಪೂಜೆ ಅಮೃತಪಡಿಗಳಿಗಾಗಿ ದಾನಿಯು ಕೆಲವರಿಂದ ಭೂಮಿಯನ್ನು ಕೊಂಡರೂ ಈ ವ್ಯವಹಾರದಲ್ಲಿ ಒಡೆತನ ಬದಲಾವಣೆಯಾಯಿತೇ ಹೊರತು: ಹಿಂದೆ ಮಾಡುತ್ತಿದ್ದ ಉಳುಮೆಯ ಒಕ್ಕಲುಗಳಲ್ಲಿ ಯಾವ ಬದಲಾವಣೆಯಾ ಆಗಿರಲಿಲ್ಲ. ಅದ್ದರಿಂದ ಬಂದ ಆದಾಯದಲ್ಲಿ ಮಹಾಜನಗಳು ಕೆರೆ ಕಟ್ಟೆಗಳನ್ನು ಕಟ್ಟಿಸಿಕೊಳ್ಳಬಹುದಾಗಿತ್ತು.

ವಿಜಯನಗರ ಕಾಲದ ಕ್ರಿ.ಶ.೧೫೧೬ರ ತಾಮ್ರಶಾಸನವೊಂದರಲ್ಲಿ ದೊರೆ ಶ್ರೀ ಕೃಷ್ಣದೇವರಾಯನು ಮಂಡ್ಯವನ್ನು ಅಚಾರ್ಯ ಪುರುಷರೆನಿಸಿ ರಾಮಾನುಜರ ಶಿಷ್ಯರಲ್ಲಿ ಪ್ರಸಿದ್ಧ ರೆನಿಸಿದ ಅನಂತಾಚಾರ್ಯರ ೧೨ನೇಯ ಸಂತತಿಯವರಾದ ಗೋವಿಂದರಾಜ ಎಂಬುವರಿಗೆ ದಾನ ಕೊಟ್ಟಿರುವ ವಿಷಯ ತಿಳಿದುಬರುತ್ತದೆ. ಇದರೊಂದಿಗೆ ಮಂಡ್ಯದ ನೆರೆಯಲ್ಲಿರುವ ಚಿಕ್ಕ ಮಂಡ್ಯ ಗ್ರಾಮವೂ ಒಳಗೊಂಡಿತ್ತು. ಈ ತಾಮ್ರ ಶಾಸನದಲ್ಲಿ ಮಂಡ್ಯಕ್ಕೆ 'ಮಂಠೆಯ' ಎಂದೂ ಚಿಕ್ಕ ಮಂಡ್ಯಕ್ಕೆ 'ಚಿಕ್ಕಮಂಠೆಯ' ಎಂದು ಉಲ್ಲೇಖಿಸಲಾಗಿದೆ. ಶ್ರೀ ಕೃಷ್ಣದೇವರಾಯನ ಹೆಸರಿನಲ್ಲಿ ಮಂಡ್ಯಕ್ಕೆ ಕೃಷ್ಣರಾಯಪುರ ಎಂಬ ಅಭಿಮಾನದ ಹೆಸರು ಸಹ ಇತ್ತೆಂದು ತಿಳಿದುಬರುತ್ತದೆ.*

ಹೊಯ್ಸಳರ ಕಾಲದ ಸಮಾಜದಲ್ಲಿ ವರ್ಣಾಶ್ರಮ ಪದ್ಧತಿ ಅಸ್ತಿತ್ವದಲ್ಲಿತ್ತು. ಆದರೆ ಜಾತಿ ಪದ್ಧತಿ ಕಟ್ಟುನಿಟ್ಟಿನದಾಗಿರಲಿಲ್ಲ. ಪತಿ ಪತ್ನಿಯರು ಬೇರೆ ಬೇರೆ ಧರ್ಮದ ಅಥವಾ ಬೇರೆ ಬೇರೆ ಜಾತಿಗೆ ಸೇರಿದವರಾಗಿ ಕೂಡ ಸಾಮರಸ್ಯದಿಂದ ಬಾಳಿದರು. ಪರಸ್ಪರ ಧಾರ್ಮಿಕ ಭಾವನೆಗಳನ್ನು ಹೇರುವ ಪ್ರವೃತ್ತಿ ಇರಲಿಲ್ಲ. ದಾಂಪತ್ಯ ಜೀವನಕ್ಕೆ ಧರ್ಮ ಅಡ್ಡಿಯಾಗಿರಲಿಲ್ಲ. ಒಂದು ಸಂಸ್ಕೃತಿಯ ಹಿರಿಮೆ ಅಡಗಿರುವುದು ಇಂಥ ವಿಷಯಗಳಲ್ಲಿಯೇ.

ಹೊಯ್ಸಳ ಅರಸರು ಧರ್ಮ ಸಹಿಷ್ಣುತೆಯ ನೀತಿಯನ್ನು ಪಾಲಿಸಿದರು. ವಾಸ್ತವವಾಗಿ ಧರ್ಮ ಮನುಷ್ಯರ ನಡುವಣ ಉಕ್ಕಿನ ತೆರೆಯೇನೂ ಆಗಿರಲಿಲ್ಲ. ಹೀಗಿದ್ದರೂ ಒಮ್ಮೊಮ್ಮೆ ಧಾರ್ಮಿಕ ಸಂಬಧದ ವಿವಾದಗಳು ಉದ್ಭವಿಸುತ್ತಿದ್ದವು. 'ದಿವ್ಯ' ಪದ್ಧತಿಯನುಸಾರ ಅವು ತೀರ್ಮಾನಿಸಲ್ಪಡುತ್ತಿದ್ದವು. ಇಂಥವು ಅತ್ಯಪರೂಪ. ಒಂದು ಧರ್ಮದವರನ್ನು ಹೊಗಳುವ ಭರದಲ್ಲಿ

ಇನ್ನೊಂದು ಧರ್ಮದವರನ್ನು ತೆಗಳಿದ ನಿದರ್ಶನಗಳೂ ವಿರಳವಾಗಿ ಕಂಡು ಬರುತ್ತದೆ ಎನ್ನುವುದಕ್ಕೆ ಸಂಸ್ಕೃತದಲ್ಲಿರುವ ಈ ಪದ್ಯವನ್ನು ಗಮನಿಸಬಹುದು:

ತಾರಾ ಯೇನ ವಿನಿರ್ಜ್ಜಿತಾ ಘಟಕುಟೀಗೂಢಾವತಾರಾ ಸಮಂ
ಬೌದ್ಧೈರ್ಯ್ಯೋಧೃತ ಪೀಡಪೀಡಿತ ಕದ್ರುಗ್ದೇವಾರ್ತ್ಥ ಸೇವಾಂಜಲಿ:
ಪ್ರಾಯಶ್ಚಿತ್ತಮವಾಂಘ್ರಿವಾರಿರಜ: ಸ್ನಾನಂ ಚ ಯಸ್ಯಾಚರ
ದ್ದೋಷಾಣಾಂ ಸುಗತಸ್ಸ ಕಸ್ಯ ವಿಷಯೋ ದೇವಾಕಳಂಕ: ಕೃತೀ ॥

ಹರಿಹರನನ್ನು ಸ್ತುತಿಸುವ ವಿಶಾಲಭಾವನೆ ಒಂದೆಡೆ ಕಂಡುಬಂದರೆ ತನ್ನ ಧರ್ಮವೇ ಶ್ರೇಷ್ಠ ಎಂದು ಪ್ರಶಂಸಿಸಿಕೊಳ್ಳುವುದರಲ್ಲಿ ತೃಪ್ತರಾಗದೆ ಪರಧರ್ಮ ಖಂಡಿಸುವ ರೀತಿ ನೀತಿ ಇನ್ನೊಂದೆಡೆ ಗೋಚರಿಸಿತ್ತದೆ. ಇದು ಬೌದ್ಧಿಕ ಸ್ತರಕ್ಕಷ್ಟೇ ಸೀಮಿತವಾಗಿತ್ತೆಂದು ತೋರುತ್ತದೆ.[೬]

ಹಳ್ಳಿಗಳ ನಡುವೆ ಎಲ್ಲೆಗಳಿಗೆ ಸಂಬಂದಿಸಿದಂತೆ ವಿವಾದಗಳು ಉದ್ಭವಿಸುತ್ತಿದ್ದವು. ಪರಿಣಾಮ ಉಂಟಾದ ಹೋರಾಟಗಳಲ್ಲಿ ಕೆಲವರು ಮೃತರಾದದ್ದೂ ಉಂಟು. ಬಸರಾಳು ಮತ್ತು ಕೆರೆಗೋಡುಗಳ ನಡುವೆ ಹಾಗೆಯೇ ತೊಣ್ಣೂರು-ಇಗ್ಗಲೂರುಗಳ ನಡುವೆ, ಭೂಸಂಬಂದದ ಹೋರಾಟ ನಡೆದವು. ಇನ್ನೂ ಕುತುಹಲಕರವಾದ ಘಟನೆಯೊಂದು ಶಾಸನವೊಂದರಲ್ಲಿ ನಿರೂಪಿತವಾಗಿದೆ. ಕಾಡುವಿಟ್ಟಿಯೊಡನೆ ಯುದ್ಧದಲ್ಲಿ ಹೋರಾಡಿದ ವೀರನೊಬ್ಬನಿಗೆ ಹೊಯ್ಸಳ ಅರಸ ಗರುಡನಹಳ್ಳಿಯಲ್ಲಿ ಭೂದಾನ ನೀಡಿದ. ಆದರೆ ಮರಡಿಪುರದ ಜನರು ತಾಮ್ರಶಾಸನವೊಂದನ್ನು ತೋರಿಸಿ ಆ ಭೂಮಿ ತಮಗೆ ಸೇರಿದೆಂದು ವಾದಿಸಿ, ಬಲತ್ಕಾರದಿಂದ ಎಲ್ಲೆ ಕಲ್ಲುಗಳನ್ನು ನೆಡಲಾಗಿದೆಯೆಂದು ದೂರಿತ್ತರು. ಆಗ ಗರುಡನ ಹಳ್ಳಿಯ ಕಂನೈಯನೆಂಬಾತ ಭೂಮಿ ತನಗೆ ಸೇರಿದುದೆಂದು ಹೇಳಿ ಈ ಭೂ ವಿಮಾನದ ಬಗ್ಗೆ 'ಸಿರಪತ್ರ' ವನ್ನು ಬರೆಸಿ ದೋರ ಸಮುದ್ರದ ಹೊಯ್ಸಳೇಶ್ವರ ಸನ್ನಿಧಿಯಲ್ಲಿ ದಿವ್ಯ ಹಿಡಿದು ಗೆದ್ದ.

ಹಸುಕರುಗಳನ್ನು ಅಪಹರಿಸಿದ ನಿದರ್ಶನಗಳುಂಟು. ಅಂಥ ಸಂದರ್ಭಗಳಲ್ಲಿ ಅವುಗಳ ರಕ್ಷಣೆಗಾಗಿ ಕಾದಿ ಮಡಿದ ಹಲವರನ್ನು ವೀರಗಲ್ಲು ಶಾಸನಗಳು ಹೆಸರಿಸುತ್ತವೆ. ಕಡಿಲವಾಗಿಲ ಭೂಮಿಕಾರ ಕಾಮಯನಾಯಕ ಮರಣಿಸಿದುದು ಇಂಥ ಒಂದು ತುರುಗಾಳೆಗದಲ್ಲಿ ಇಂಥ ಹೋರಾಟಗಳಲ್ಲಿ ಸೆಟ್ಟಿಯಣ, ಸಾಲಗವುಂಡ, ಮಲ್ಲಿಯಣ ಹಾಗೂ ಆತನ ತಮ್ಮ ಮುಂತಾದರು ಕಾದಿ ಮಡಿದರು. ಬೀರಗೌಡನಹಳ್ಳಿಯ ಅಗಸರ ಗೊರವ ಮೃತನಾದುದ್ದು ಹಂದಿಯೊಡನೆ ನಡೆದ ಹೋರಾಟದಲ್ಲಿ ಹಾಗೆಯೇ ಊರ ರಕ್ಷಣೆಯಲ್ಲಿ ನಿರತರಾಗಿ ಮಡಿದ ವೀರರೂ ಇದ್ದಾರೆ. ತನ್ನೂರ ಮೇಲೆ ದಾಳಿಯಾದಾಗ ಮನ್ನೆಯನಾರಸಿಂಗ ಹೋರಾಡಿ ಮೃತನಾದ ಅವನ ಕುಟುಂಬದವರಿಗೆ

ಭೂ ಪ್ರದೇಶ ನೆತ್ತರುಗೊಡಿಗೆಯಾಗಿ ಸಂದಿತು. ಹೊಯ್ಸಯನಾಯಕನ ದಾಳಿಯಲ್ಲಿ ಕೇತಣ, ಬೆಗೆವಡದ ಊರಳಿವಿನಲ್ಲಿ ಬಾಚಗವುಡ, ತೆಂಕನಹಳ್ಳಿಯ ಊರಳಿವಿನಲ್ಲಿ ಮಾರಪ್ಪ ಮತ್ತು ಮಾದೆಯ ಮುಂತಾದವರು ಮರಣಿಸಿದರು. ಆತ್ಮಾಹುತಿಯ ಇನ್ನೊಂದು ರೀತಿಯನ್ನು ರಾಯಸೆಟ್ಟಿಪುರದ ಶಾಸನದಲ್ಲಿ ಕಾಣಬಹುದು. ಕೆರೆಗೋಡನಾಡ ಬಿದಿರಕೋಟೆ ಗ್ರಾಮಕ್ಕೆ ಸಂಬಂದಿಸಿದಂತೆ ಬೇರೆ ಬೇರೆ ಕಾಲದಲ್ಲಿ ನೀಡಲಾದ ದಾನಗಳನ್ನು ಕುರಿತಾಗಿದೆ ಈ ಶಾಸನ. ಮೊದಲು ಬಲ್ಲಾಳನ ಕಾಲದಲ್ಲಿ ಮಲ್ಲೆಯ ನಾಯಕ ಮತ್ತು ಸೋಮೇಯನಾಯಕರು ಕೆಲವು ವೀರಶೈವರಿಗೆ ಬಿದಿರಕೋಟೆಯನ್ನು ಶಿವಪುರವನ್ನಾಗಿ ಮಾಡಿ ದತ್ತಿ ಬಿಟ್ಟರು. ಆದರೆ ಮುಂದೆ ಈ ಗ್ರಾಮವನ್ನು ಮಾದೆಯನಾಯಕ ಮುತ್ತಿ ವಶಪಡಿಸಿಕೊಂಡ ಅದನ್ನು ವೀರಶೈವರಿಗೆ ಬಿಟ್ಟುಕೊಡಲು ಒಪ್ಪಲಿಲ್ಲ. ಆಗ ವೀರಮಲ್ಲಯ್ಯ ಎಂಬಾತ–ಹೇಗೆಂದು ಸ್ಪಷ್ಟಪಡುವುದಿಲ್ಲವಾದರೂ–ಅದನ್ನು ಪಡೆದು ವೀರಶೈವರಿಗೆ ಸೋಮನಾಥಪುರದ ಹೆಸರಿನಲ್ಲಿ ದಾನವಿತ್ತ. ಆದರೆ ಆತ ಆತ್ಮಾಹುತಿಯಾಗಬೇಕಾಯಿತೆಂದು ತೋರುತ್ತದೆ.

ಇಂದಿಗೂ ಜ್ವಲಂತ ಸಮಸ್ಯೆಯಾಗಿರುವ ಸತಿ ಪದ್ಧತಿಯ ಅನುಸರಣೆಯ ಉದಾಹರಣೆಗಳನ್ನು ಕೆಲವು ಶಾಸನಗಳಲ್ಲಿ ಕಾಣಬಹುದು. ಸಾಮಂತ ಸೋಮನ ಮಗ ಮಾರದೇವ ಮೃತನಾದಾಗ ಆತನೊಡನೆ ಮಹಾದೇವಿ ಸಹಗಮನ ಮಾಡಿದಳು.

ಅಧಿಕಾರಿಗಳೂ ಪ್ರಜೆಗಳೂ ಅರಸನಿಗೆ ನಿಷ್ಠರಾಗಿದ್ದರು. ಅರಸನಿಗಾಗಿ, ರಾಜ್ಯಕ್ಕಾಗಿ ಪ್ರಾಣಾರ್ಪಣೆಗೆ ಹಿಂಜರಿಯುತ್ತಿರಲಿಲ್ಲ. ಗರುಡ ಪದ್ಧತಿಯಂತೂ ಸ್ವಾಮಿನಿಷ್ಠೆಯ ಪರಮಾವಧಿ. ಅಗ್ರಹಾರ ಬಾಚಹಳ್ಳಿಯ ಶಾಸನವೊಂದು ಹೊಯ್ಸಳ ಅರಸರೊಡನೆ ಗರುಡರಾದವರ ವಂಶಾವಳಿಯನ್ನೇ ನೀಡುತ್ತದೆ. ಹೊಯ್ಸಳ ಎರೆಯಂಗನಿಗೆ ಗರುಡರಾದವರು ಗಂಡನಾರಾಯಣಸೆಟ್ಟಿ ಮತ್ತು ಆತನ ಹೆಂಡತಿ ಮಾರವ್ವೆನಾಯಕಿತಿ ಬಿಟ್ಟಿದೇವ ಅಥವಾ ವಿಷ್ಣುವರ್ಧನನಿಗೆ ಹೊಯಿಸಳಸೆಟ್ಟಿ ಮತ್ತು ಮಾಚವ್ವೆನಾಯಕಿತಿ ಒಂದನೆಯ ನರಸಿಂಹನಿಗೆ ಕೂರೆಯನಾಯಕ, ಮಾರವ್ವೆ, ಚಿಕ್ಕಮಾದವ್ವೆ ಹಾಗೂ ಏಳು ಜನ ಲೆಂಕರು ಇಮ್ಮಡಿ ಬಲ್ಲಾಳನಿಗೆ ಸಿವನೆಯನಾಯಕ ಮತ್ತು ಐದು ಜನ ಲೆಂಕರು ಇಮ್ಮಡಿ ನರಸಿಂಹನಿಗೆ ಲಖ್ಖೆಯನಾಯಕ, ಗಂಗಾದೇವಿ ಹಾಗೂ ಮೂವರು ಲೆಂಕರು ಸೋಮೇಶ್ವರ ಮೃತನಾದಾಗ ಕಂನೆಯನಾಯಕ, ಉಮವ್ವೆ, ಕಲ್ಲವ್ವೆ, ಜವನವ್ವೆ, ಹತ್ತು ಮಂದಿ ಲೆಂಕಿತಿಯರು ಹಾಗೂ ಇಪ್ಪತ್ತೊಂದು ಮಂದಿ ಲೆಂಕರು "ಆರುಬಾರಿ ಬಾರಿ ಗರುಡನನಪ್ಪಿ" ಭಾಷೆಯನ್ನು ಪೂರೈಸಿದರು. ಹಾಗೆಯೇ ಮುಮ್ಮಡಿ ನರಸಿಂಹನೊಡನೆ ರಂಗೆಯನಾಯಕ, ಕೇತವ್ವೆ, ಹೊನ್ನವ್ವೆ, ಮಂಚವ್ವೆ, ಹತ್ತು ಜನ ಲೆಂಕಿತಿಯರು

ಮತ್ತು ಇಪ್ಪತ್ತೊಂದು ಮಂದಿ ಲೆಂಕರು ಗರುಡರಾಗಿ ವೀರಸ್ವರ್ಗಕ್ಕೈದಿದರೆಂದು ತಿಳಿದು ಬರುತ್ತದೆ. ಇದರಿಂದ ಅಂದಿನ ಜೀವನದಲ್ಲಿ ಗರುಡ ಸಂಪ್ರದಾಯ ಎಷ್ಟರಮಟ್ಟಿಗೆ ಹಾಸುಹೊಕ್ಕಿತ್ತೆಂಬುದು ವಿದಿತವಾಗುತ್ತದೆ. ಗರುಡ ಸಂಪ್ರದಾಯವಿದ್ದು, ಅಲ್ಲಿಗೆ ಮುಗಿದುಹೋಯಿತ? ಅದನ್ನ ಮುಂದಿನವರು ಮುಂದುವರಿಸಿಕೊಂಡು ಬಂದಿದ್ದಾರ ಅನ್ನುವುದು ವ್ಯಕ್ತವಾಗಲಿಲ್ಲ.

ಲಾಳಾನಕೆರೆಯ ಮಾದೇಶ್ವರ ದೇವಾಲಯದ ಮುಂದಿರುವ ಶಾಸನ:- ಈ ಶಾಸನವು ಅತ್ಯಂತ ಸುಂದರವಾದ ಶಾಸನವಾಗಿದೆ. ಹೊಯ್ಸಳರ ಕಾಲದ ರಚನೆಯಾದ ಈ ಶಾಸನವು ಸಿಂಹಲಲಾಟವನ್ನು ಹೊಂದಿದೆ. ಪ್ರಭಾವಳಿಯಲ್ಲಿ ಹೂಬಳ್ಳಿಯ ಕೆತ್ತನೆಯಿದೆ. ಶಾಸನದ ಬಲಭಾಗದಲ್ಲಿ ಒಂದು ಹಸು ಮತ್ತು ಕರುವಿನ ಚಿತ್ರವಿದೆ. ಹಸುವಿನ ಕೊರಳಿನಲ್ಲಿ ಘಂಟೆ ಸರವಿದೆ. ಶಾಸನದ ಮಧ್ಯ ಭಾಗದಲ್ಲಿ ಶಿವಲಿಂಗವಿದ್ದು, ವ್ಯಕ್ತಿಯೊಬ್ಬ ಇದಕ್ಕೆ ಕೈಜೋಡಿಸಿ ನಿಂತಿದ್ದಾನೆ. ಶಿವಲಿಂಗದ ಎದುರಿಗೆ ನಂದಿಯೊಂದು ಕುಳಿತಿದೆ. ಈ ಶಾಸನದಲ್ಲಿ ವಾಡಿಕೆಯಂತೆ ಸೂರ್ಯಚಂದ್ರರರನ್ನು ಕೆತ್ತಲಾಗಿದೆ.

ಮೃತರಾದ ವೀರರಿಗೆ ವೀರಗಲ್ಲನ್ನು ನೆಡಿಸುವುದು ಮತ್ತು ಆತನ ಕುಟುಂಬದವರಿಗೆ ದಾನವೀಯುವುದು ಸ್ವಾಭಾವಿಕ. ಭಗ್ನವಾದ ವೀರಗಲ್ಲೊಂದರ ದುರಸ್ತಿ ಕೆಲಸವನ್ನು ಒಂದು ಶಾಸನ ಉಲ್ಲೇಖಿಸಿರುವುದು ಕುತೂಹಲಕರ ಸಂಗತಿ. ಗುದಿಯರ ಕುಲದ ರಂಗಗೌಡ ತೀರಿಹೋದಾಗ ಕ್ರಿ.ಶ. ೧೨೨೧ ರಲ್ಲಿ ಆತನಿಗಾಗಿ ವೀರಗಲ್ಲನ್ನು ನಿಲ್ಲಿಸಲಾಯಿತು. ಆದರೆ. ಸ್ವಲ್ಪ ವರ್ಷಗಳಲ್ಲಿಯೇ ಈ ಕಲ್ಲಿನ ದೂಮರ ಮುರಿದು ಬಿದ್ದುದರಿಂದ ಕ್ರಿ.ಶ.೧೨೪೨ ರಲ್ಲಿ ಅದನ್ನು ಸರಿಪಡಿಸಿ ಮೇಲು ಮುಚ್ಚಳವನ್ನು ಹಾಕಿಸಲಾಯಿತು.

ಊರುಗಳನ್ನು ಸ್ಥಾಪಿಸುವುದು ಮತ್ತು ಹಳ್ಳಿಗಳನ್ನೇ ಪಟ್ಟಣಗಳನ್ನಾಗಿ ಪರಿವರ್ತಿಸುವುದು ಹೊಯ್ಸಳರ ಕಾಲದಲ್ಲಿ ನಡೆಯುತ್ತಿತ್ತೆಂದು ತಿಳಿದುಬರುತ್ತದೆ. ಇಮ್ಮಡಿ ಬಲ್ಲಾಳನ ಕಾಲದಲ್ಲಿ ಮಹಾಮಂಡಲೇಶ್ವರ ಕೊಯಳರಸ ಮತ್ತಿತರರು ಸೇರಿ ಪಟ್ಟಣವನ್ನು ರೂಪಿಸಿದರು. ಎಮ್ಮದೂರುಹಳ್ಳಿ, ಬಿರುಗಹಳ್ಳಿ ಮುಂತಾದ ಹಳ್ಳಿಗಳು ಪಟ್ಟಣಗಳಾಗಿ ಪರಿವರ್ತಿತವಾದವು.

ಅನೇಕ ಹಳ್ಳಿಗಳು ಹೊಸ ಹೆಸರು ಪಡೆದು ಅಗ್ರಹಾರಗಳಾದವು. ತೊಣ್ಣೂರು ಯಾದವ ನಾರಾಯಣ ಚತುರ್ವೇದಿ ಮಂಗಲವಾಯಿತು; ಅರಕೆರೆಗೆ ಸರ್ವನಮಸ್ಯದ ಪಟ್ಟದ ಮಹಾಗ್ರಹಾರ ಸರ್ವಜ್ಞ ಶ್ರೀ ವೀರನಾರಸಿಂಹಪುರ ಎಂಬ ಹೆಸರು ಬಂತು; ಬಾಳುಗೂರಿಗೆ ಉದ್ಭವ ವಿಶ್ವನಾಥಪುರ, ಮಾಚನಕಟ್ಟಕ್ಕೆ ಬಿಜ್ಜಲೇಶ್ವರಪುರ, ಹೊಸ ಹೊಳಲಿಗೆ ಅನಾದಿ ಅಗ್ರಹಾರ

ರಾಯಸಮುದ್ರ, ಮದ್ದೂರಿಗೆ ನರಸಿಂಹ ಚತುರ್ವೇದಿಮಂಗಲ, ನಾಗಮಂಗಲಕ್ಕೆ ವೀರಬಲ್ಲಾಳು ಚತುರ್ವೇದಿ ಭಟ್ಟರತ್ನಾಕರ ಅಗ್ರಹಾರ, ಬೆಳ್ಳೂರಿಗೆ ಸರ್ವನಮಸ್ಯ ಅಗ್ರಹಾರ ಉದ್ಭವನಾರಸಿಹಪುರ, ಗುತ್ತಲಿಗೆ ಮಲ್ಲಿಕಾರ್ಜುನಪುರ ಹಾಗೂ ಯಾದವ ನಾರಾಯಣಪುರ, ಬೆಳಗೊಳಕ್ಕೆ ವಿಷ್ಣುವರ್ಧನ ಪೊಯ್ಸಳದೇವ ಚತುರ್ವೇದಿ ಮಂಗಲ, ಶ್ರೀರಂಗಪಟ್ಟಣಕ್ಕೆ ತಿರುವನಾರಾಯಣ ಚತುರ್ವೇದಿ ಮಂಗಲ, ದೊಡ್ಡ ಅರಸಿನಕೆರೆಗೆ ಮುಮ್ಮಡಿ ಚತುರ್ವೇದಿ ಮಂಗಲ, ತುಗಿಲೂರ ಹಳ್ಳಿಗೆ ಮಾಧವ ಪಟ್ಟಣ ಇತ್ಯಾದಿ. ಹೀಗೆ ಹಲವು ಹಳ್ಳಿಗಳಿಗೆ ಹೊಸ ಹೆಸರು ಬಂದರೂ ಕೆಲವು ಕಾಲದಲ್ಲಿಯೇ ಅವು ತಮ್ಮ ಹಳೆಯ ಹೆಸರನ್ನೇ ಉಳಿಸಿ ಕೊಂಡದ್ದನ್ನು ಕಾಣುತ್ತೇವೆ. ಈಗಿನ ಮಂಡ್ಯ ಕೂಡ ಏಳು ಶತಮಾನಗಳಿಗೂ ಹೆಚ್ಚಿನ ಇತಿಹಾಸ ಹೊಂದಿರುವ ಸ್ಥಳ.೧೨೬೭ರಲ್ಲಿ ಅದು 'ಶ್ರೀಮದನಾದಿಯಗ್ರಹಾರಮಂಡೆಯ' ವಾಗಿದ್ದಿತು: ೧೨೬೭ರಲ್ಲಿಯೇ ಮಂಡ್ಯದ ಉಲ್ಲೇಖ ಕಾಣಿಸುತ್ತದೆ.

ಗಂಗರು:–

ಗಂಗರು ಈ ಪ್ರದೇಶದಲ್ಲಿ ಸುಮಾರು ಆರು ಶತಮಾನಗಳ ಕಾಲ ರಾಜ್ಯವಾಳಿದರೂ ಇಲ್ಲಿ ದೊರೆತಿರುವ ಅವರ ಶಾಸನಗಳ ಸಂಖ್ಯೆ ಅತಿ ಕಡಿಮೆ. ವಾಸ್ತವವಾಗಿ ಗಂಗರು ಶಾಸನಗಳನ್ನು ಹಾಕಿಸಿರುವುದೇ ಕಡಿಮೆ. ಈ ಮೊದಲು ಉಲ್ಲೇಖಿಸಿದ ಕ್ರಿ.ಶ.೭೧೩ರ ಹಳ್ಳೆಗೆರೆ ತಾಮ್ರಶಾಸನವೇ ಮಂಡ್ಯ ಜಿಲ್ಲೆಯ ಅತಿಪ್ರಾಚೀನ ಶಾಸನ. ಇದು ಒಂದನೆಯ ಶಿವಮಾರನ ೩೪ನೆಯ ಆಳ್ವಿಕೆಯ ವರ್ಷವನ್ನು ಉಲ್ಲೇಖಿಸುವುದರಿಂದ ಅರಸ ಕ್ರಿ.ಶ.೬೭೯ರಲ್ಲಿ ಅಧಿಕಾರಕ್ಕೆ ಬಂದನೆಂಬ ಅಂಶ ಸೂಚಿತವಾಗುತ್ತದೆ. ಕೊಂಗುಣಿವರ್ಮನಿಂದ ಶಿವಮಾರನವರೆಗಿನ ಸಾಂಪ್ರದಾಯಿಕ ಗಂಗವಂಶಾವಳಿಯನ್ನು ಇದರಲ್ಲಿ ಕೊಟ್ಟಿದೆ. ಕೊಂಗುಣಿವರ್ಮ–ಮಾಧವ–ಹರಿವರ್ಮ–ವಿಷ್ಣುಗೋಪ–ಇಮ್ಮಡಿ ಮಾಧವ–ಅವಿನೀತ–ದುರ್ವಿನೀತ–ಮುಷ್ಕರ–ಶ್ರೀವಿಕ್ರನು–ಭೂವಿಕ್ರಮ–ಶಿವಮಾರ. ಪಲ್ಲವ ಯುವರಾಜನ ಮಕ್ಕಳಾದ ಜಯ ಮತ್ತು ವೃದ್ಧಿ ಎನ್ನುವವರ ಬಿನ್ನಹದ ಮೇರೆಗೆ ಅರಸ ಭೂದಾನ ಮಾಡಿದುದು ಶಾಸನದ ವಸ್ತು. ಕ್ರಿ.ಶ.೭೭೬–೭೭ರ ಶ್ರೀಪುರುಷನ ದೇವರಹಳ್ಳಿ ತಾಮ್ರಶಾಸನದಿಂದ ಶ್ರೀಪುರುಷ ಶಿವಮಾರನ ಸೋದರ ನವಕಾಮನ ಮೊಮ್ಮಗನೆಂಬ ಸಂಗತಿ ತಿಳಿದುಬರುತ್ತದೆ. ಕುಂದಾಚ್ಚಿ ಎಂಬಾಕೆ ಕಟ್ಟಿಸಿದ ಶ್ರೀಪುರದ ಲೋಕತಿಲಕ ಬಸದಿಗೆ ಅರಸ ದಾನವಿತ್ತ ಸಂಗತಿ ಈ ಶಾಸನದಲ್ಲಿ ನಿರೂಪಿತವಾಗಿದೆ. ಈಕೆಯ ತಂದೆ ಸಗರವಂಶದ ಮರುವರ್ಮ, ತಾಯಿ ಪಲ್ಲವ ಅಧಿರಾಜನ ಮಗಳು. ಈಕೆಯ ಪತಿ ಪರಮಗೂಳ. ಈತ ಬಾಣವಂಶಜನೆಂದು ಭಾವಿಸಲಾಗಿತ್ತು. ಆದರೆ ಗಂಗವಂಶಜನೆಂಬುದು ಈಚೆಗೆ ಮಂಡಿಸಲಾದ

ಅಭಿಪ್ರಾಯ. ಶ್ರೀರಂಗಪಟ್ಟಣದ ಗಂಜಾಮಿನಲ್ಲಿ ದೊರೆತ ತಾಮ್ರಶಾಸನ ಸಾಂಪ್ರದಾಯಿಕವಲ್ಲದ ರೀತಿಯಲ್ಲಿ ಗಂಗ ವಂಶಾವಳಿಯನ್ನು ನೀಡುತ್ತದೆ. ಶ್ರೀವಿಕ್ರಮನ ತರುವಾಯ ಭೂವಿಕ್ರಮನ ಬದಲಾಗಿ ದುಗ್ಗಮಾರನನ್ನು ಹೆಸರಿಸುತ್ತದೆ. ಭೂವಿಕ್ರಮ-ದುಗ್ಗಮಾರ ಅಭಿನ್ನರೆಂದು ಅಭಿಪ್ರಾಯಪಡಲಾಗಿದೆ. ಲೋಕತ್ರಿಣೇತ್ರ ಎಂಬ ಬಿರುದುಳ್ಳ ಮಾರಸಿಂಗ ಎರೆಯಪ್ಪ ಯುವರಾಜನಾಗಿದ್ದಾಗ ಅವನ ಅನುಮತಿಯಿಂದ ನೊಳಂಬ ಸಾಮಂತ ಕೊಲ್ಲಿಯರಸ ಮತ್ತು ಆತನ ಮಗ ದಾನ ನೀಡಿದರು. ಗಂಗ ದೊರೆ ಶಿವಮಾರ ಈ ವೇಳೆಗೆ ರಾಷ್ಟ್ರಕೂಟರ ಸೆರೆಯಲ್ಲಿದ್ದುದರಿಂದ ಆತನ ಉಲ್ಲೇಖವಿಲ್ಲದಿರುವುದು ಗಮನಾರ್ಹ. ಕ್ರಿ.ಶ.೮ನೆಯ ಶತಮಾನದ ಪೂರ್ವಾರ್ಧಕ್ಕೆ ಸೇರುವ ಶ್ರೀಪುರುಷನ ಹುಳ್ಳೇನಹಳ್ಳಿಯ ತಾಮ್ರಶಾಸನ ಬಾಣಪ್ರಭು ದಿಂಡಿಗ ಕಳ್ಬಪ್ಪು-೧೧೦೦, ಎಂದರೆ ಈಗಿನ ಶ್ರವಣಬೆಳಗೊಳ, ಪ್ರದೇಶವನ್ನು ಆಳುತ್ತಿದ್ದ ವಿಷಯವನ್ನು ಸಾರುತ್ತದೆ.

ಗಂಗರು ಶಿಲಾಶಾಸನಗಳಲ್ಲಿ ಬಹುಪಾಲು ೯-೧೦ನೆಯ ಶತಮಾನಕ್ಕೆ ಸೇರಿದುವು ವೀರಗಲ್ಲುಗಳೇ ಬಹಳ. ಶ್ರೀಪುರುಷನ ಪುರಿಗಾಲಿ ಶಾಸನ ಸಿಂಗಡಿ ಅರಸನೆಂಬಾತ ಪುವಗಾಮದ ಆಡಳಿತಾಧಿಕಾರಿಯಾಗಿದ್ದನೆಂದು ತಿಳಿಸುತ್ತದೆ. ಈತ ಪ್ರಾಯಶಃ ಸೇಂದ್ರಕ ವಂಶಜ. ೮೯೫-೯೬ರ ತಾಯಲೂರು ಶಾಸನವು ನೊಳಂಬಾಧಿರಾಜನ ಆಳ್ವಿಕೆಯನ್ನು ಉಲ್ಲೇಖಿಸುತ್ತದೆ. ಒಂದನೆಯ ಶಿವಮಾರನಿಂದ ಸತ್ಯವಾಕ್ಯ ಗೋವಿಂದರನವರೆಗಿನ ಗಂಗರಸರ ಶಾಸನಗಳಿಂದ ನೊಳಂಬ, ಬಾಣ ಮತ್ತು ಸಗರಕುಲದ ಅಧಿಪರು ಅವರ ಅಧೀನ ಅರಸರಾಗಿದ್ದರೆಂದು ತಿಳಿದುಬರುತ್ತದೆ. ಕ್ಯಾತನಹಳ್ಳಿಯ ಶಾಸನವೊಂದರಲ್ಲಿ ಭದ್ರಬಾಹು-ಚಂದ್ರಗುಪ್ತರು ಉಲ್ಲೇಖವಿದೆ.[೨]

ಚೋಳರು:-

ಚೋಳರು ಗಂಗ-ರಾಷ್ಟ್ರಕೂಟರಿಗೆ ಸಮಾನ ಪ್ರತಿಸ್ಪರ್ಧಿಗಳಾಗಿದ್ದರು. ಗಂಗರಸ ಇಮ್ಮಡಿ ಬೂತುಗ (ಕ್ರಿ.ಶ.೯೩೬-೬೧) ರಾಷ್ಟ್ರಕೂಟ ಸೇವೆಯ ನೇತೃತ್ವವಹಿಸಿ ತಕ್ಕೋಲಂ ಕದನದಲ್ಲಿ ಭಾಗವಹಿಸಿ ಚೋಳ ರಾಜಾದಿತ್ಯನನ್ನು ಇರಿದು ಕೊಂದ. ಈ ವಿಷಯ ಹಲವು ಚೋಳ ಶಾಸನಗಳಲ್ಲಿಯೂ ಉಲ್ಲೇಖಿತವಾಗಿವೆ. ಮದ್ದೂರು ತಾಲ್ಲೂಕಿನ ಆತಕೂರಿನ ಒಂದು ಶಾಸನದಲ್ಲಿ ಈ ಘಟನೆ ವಿಶದವಾಗಿ ನಿರೂಪಿತವಾಗಿದೆ. ಈ ಕದನದಲ್ಲಿ ಸಗರವಂಶದ ಮಣಲೇರ ಭಾಗವಹಿಸಿ ಹೋರಾಡಿದ. ಈತ ಬೂತುಗನಂಕಕಾರ. ಬೂತುಗನ ಪರಾಕ್ರಮಕ್ಕೆ ಮೆಚ್ಚಿದ ರಾಷ್ಟ್ರಕೂಟ ಚಕ್ರವರ್ತಿ ಬನವಾಸಿ ಮುಂತಾದ ಹಲವು ಪ್ರದೇಶಗಳನ್ನು ನೀಡಿದ. ಹಾಗೆಯೇ ಚಕ್ರವರ್ತಿಯು ವಣಲೇರನಿಗೆ 'ಮೆಚ್ಚಿದೆ ಬೇಡಿಕೋ' ಎಂದಾಗ ಆತ ಬಯಸಿ ಪಡೆದಿದ್ದು ಕಾಳಿ ಎಂಬ ಹೆಸರಿನ

ಬೇಟೆನಾಯಿಯೊಂದನ್ನು ರಾಷ್ಟ್ರಕೂಟ ಚಕ್ರವರ್ತಿಯಲ್ಲಿ ಬೇಟೆನಾಯಿಗಳ ಒಂದು ಹಿಂಡೇ ಇತ್ತೆಂದು ನಾಗವರ್ಮನ 'ಕಾವ್ಯಾವಲೋಕನ'ದ ಪದ್ಯವೊಂದರ ಆಧಾರದಿಂದ ಶ್ರಿ ಎಸ್.ಎಸ್.ಜಾಗೀರ್‌ದಾರರು ಅಭಿಪ್ರಾಯಪಟ್ಟಿದ್ದಾರೆ. ಮಣಲೇರ ಪಡೆದ ನಾಯಿ ಬೆಳತೂರಿನ ಬಳಿಯಲ್ಲಿ ಒಂದು ಹಂದಿಯೊಡನೆ ಕಾದಾಡಿ ಸತ್ತಿತ್ತು. ಅದರ ಸ್ಮರನಾರ್ಥ ಹಾಕಿಸಿರುವ ಅಪೂರ್ವ ವೀರಗಲ್ಲು ಈ ಶಾಸನ. ನಾಯಿ–ಹಂದಿಗಳ ಹೋರಾಟದ ದೃಶ್ಯವನ್ನು ಶಾಸನಕಲ್ಲಿನ ಮೇಲೆ ಕೆತ್ತಿದೆ.

ಕ್ರಿ.ಶ. ೯೮೬–೮೭ರಲ್ಲಿ ಬಲ್ಲಪ್ಪ ಎಂಬಾತ ಗಂಗವಾಡಿಗೆ ಬಂದುದನ್ನು ಕಾಡಕೊತ್ತನಹಳ್ಳಿಯ ಶಾಸನ ಉಲ್ಲೇಖಿಸುತ್ತದೆ. ಈ ಬಲ್ಲಪ ರಾಷ್ಟ್ರಕೂಟ ದೊರೆ ಕರ್ಕನೆಂದು ಗುರುತಿಸಿದೆ. ಅಂತೆಯೇ ಕನ್ನಂಬಾಡಿಯ ಶಾಸನವೊಂದರಲ್ಲಿ ಉಕ್ತನಾದ ಕನ್ನರದೇವ ರಾಷ್ಟ್ರಕೂಟ ದೊರೆ ಮುಮ್ಮಡಿ ಕೃಷ್ಣನೆಂದು ಭಾವಿಸಲಾಗಿದೆ.

ರಾಜ್ಯವಿಸ್ತರಣೆಯಲ್ಲಿ ತೊಡಗಿದ ಚೋಳರಿಗೆ ಗಂಗವಾಡಿಯ ಬಹುಭಾಗ ಸ್ವಲ್ಪಕಾಲ ಅಧೀನವಾಗಬೇಕಾಯಿತು. ಚೋಳರ ಶಾಸನಗಳು ಈ ಜಿಲ್ಲೆಯ ಶ್ರೀರಂಗಪಟ್ಟಣ, ಪಾಂಡವಪುರ, ಮಂಡ್ಯ ಹಾಗೂ ಮದ್ದೂರು ತಾಲ್ಲೂಕುಗಳಿಗಷ್ಟೇ ಸೀಮಿತವಾಗಿವೆ. ಅಂತೆಯೇ ಒಂದನೆಯ ರಾಜರಾಜ, ಒಂದನೆಯ ರಾಜೇಂದ್ರ ಮತ್ತು ಕುಲೋತ್ತುಂಗರ ಆಳ್ವಿಕೆಗೆ ಸೇರಿದವು. ಚೋಳ ಶಾಸನಗಳಲ್ಲಿ ಅತಿಪ್ರಾಚೀನವೆನಿಸಿದ, ಕ್ರಿ ಶ. ೧೦೧೧ರ ಚಿನಕುರಳಿಯ ವೀರಗಲ್ಲು ಶಾಸನದಿಂದ ರಾಜರಾಜ ರಾಜ್ಯವಾಳುತ್ತಿದ್ದಾಗ ಚಿಕ್ಕವಂಗಲದ ಕಣ್ಣ ತುರುಗಾಳಗದಲ್ಲಿ ಕಾದಿ ಮಡಿದ ವಿಷಯ ತಿಳಿದುಬರುತ್ತದೆ. ಬಲಮುರಿಯ ಶಾಸನೋಕ್ತ ಪಂಚವನ್ ಮಾರಾಯ ಯುವರಾಜ ಒಂದನೆಯ ರಾಜೇಂದ್ರನೆಂದು ಗುರುತಿಸಿದೆ. ಚೋಳನ ಗಂಧವಾರಣವೆನಿಸಿದ ಈ ಪಂಚವನ್ ಮಾರಾಯ ವೆಂಗಿ ಮತ್ತು ಗಂಗಮಂಡಲಗಳಿಗೆ ಮಹಾದಂಡನಾಯಕನಾಗಿದ್ದ. ಗಂಗವಾಡಿ, ರಟ್ಟವಾಡಿ, ನೊಳಂಬ, ಕೊಂಗು, ಆಂಧ್ರ ಮುಂತಾದ ಹತ್ತಾರು ನಾಡುಗಳ ಅರಸರನ್ನು ಸಂಹರಿಸಿ ಅವನ್ನು ಕೈವಶಮಾಡಿಕೊಂಡಿದ್ದ. ಈತ ಹುಬ್ಬುಗಂಟಿಕ್ಕಿದರೆ ಸಾಕು ಶತ್ರುಸೈನ್ಯ ನಡುಗುತ್ತಿದ್ದಿತಂತೆ! ಹಳೇಬೂದನೂರಿನ ಒಂದು ಶಾಸನ ಮತ್ತು ವೈದ್ಯನಾಥಪುರದ ಒಂದು ಶಾಸನ ಇವನ ಸಾಧನೆಗಳನ್ನು ವರ್ಣಿಸುತ್ತವೆ. ಬೊಮ್ಮೂರು ಅಗ್ರಹಾರದ ಒಂದು ಶಾಸನ ಕುಲೋತ್ತುಂಗನ ಕಾಲದ್ದು. ಇದರ ಕಾಲ ಕ್ರಿ.ಶ.೧೧೦೨–೦೩. ಸಿರಿಯಕಲಸತ್ತಪಾಡಿಯಲ್ಲಿ ಎರಡು ಶತಮಾನಗಳಿಂದ ಹಾಳುಬಿದ್ದಿದ್ದ ಜಲಾಶಯವನ್ನು ಮಾಂಡಲಿಕ ಪೋಮನ್ ಇರಾಮನ್ ಆದ ವಿರುದರಾಯ ಬಯಂಕರಮಾರಾಯನ್ ಜೀರ್ಣೋದ್ಧಾರ ಮಾಡಿಸಿದುದು ಶಾಸನದ ವಸ್ತು.

ಗಂಗವಾಡಿಯಿಂದ ಚೋಳರನ್ನು ಹೊರದೂಡಿದ ಹೊಯ್ಸಳರು ಈ ಪ್ರದೇಶದಲ್ಲಿ ತಮ್ಮ ಆಧಿಪತ್ಯವನ್ನು ಸ್ಥಾಪಿಸಿದರು.

ಹೊಯ್ಸಳರು:-

ಕರ್ನಾಟಕದ ಇತಿಹಾಸದಲ್ಲಿ ಮಲೆನಾಡಿನ ಅಧಿಪರಾಗಿ ಕಾಣಿಸಿಕೊಂಡ ಹೊಯ್ಸಳರು ಕಲ್ಯಾಣದ ಚಾಲುಕ್ಯರ ಸಾಮಂತರಾಗಿ ತಮ್ಮ ರಾಜಕೀಯ ಪ್ರಗತಿಯ ಹಾದಿಯನ್ನು ರೂಪಿಸಿಕೊಂಡರು. ಗಂಗವಾಡಿಯನ್ನು ಚೋಳರಿಂದ ವಶಪಡಿಸಿಕೊಂಡು, ಚಾಲುಕ್ಯ ಸಾರ್ವಭೌಮತ್ವವನ್ನು ಒಪ್ಪಿಕೊಳ್ಳುತ್ತಲೇ ಕ್ರಮೇಣ ಸ್ವತಂತ್ರರಾಗಲು ಹವಣಿಸಿ ಸಫಲರಾದರು. ಕ್ರಿ.ಶ. ೧೧ನೆಯ ಶತಮಾನದ ಆದಿಭಾಗದಿಂದ ಕ್ರಿ.ಶ.೧೪ನೆಯ ಶತಮಾನದ ಪೂರ್ವಾರ್ಧದವರೆಗೆ ಸೇರುವ ಹೊಯ್ಸಳ ಶಾಸನಗಳು ಭಾಷೆ, ನಿರೂಪಣೆ ಮತ್ತು ಲಿಪಿಸೌಂದರ್ಯಗಳ ದೃಷ್ಟಿಯಿಂದ ಅಗ್ರಸ್ಥಾನ ಪಡೆಯುತ್ತವೆ.

ಇದೇ ಗ್ರಾಮದ ಕೆರೆಯ ಬಳಿ ನಿಂತಿರುವ ಕಂಬದ ಮೇಲೆ ಕೊರೆಯಲಾಗಿರುವ ಶಾಸನವು ಹೊಯ್ಸಳ ದೊರೆ ಮೂರನೆಯ ನರಸಿಂಹನ ಆಳ್ವಿಕೆಯನ್ನು ಉಲ್ಲೇಖಿಸುತ್ತದೆ. ಈ ಶಾಸನದಲ್ಲಿ ಹೊಯ್ಸಳ ದೊರೆ ಮೂರನೆಯ ನರಸಿಂಹನು ಚಿಕ್ಕ ಕನ್ನೇನಹಳ್ಳಿ ಗ್ರಾಮವನ್ನು ದೋರ ಸಮುದ್ರದ ಶಾಂತಿನಾಥ ಬಸದಿಗೆ ದತ್ತಿ ನೀಡಿರುವ ವಿಚಾರವಿದೆ ಮತ್ತು ಈ ಕಂಬದಲ್ಲಿ ಹೊಯ್ಸಳರ ವಂಶಾವಳಿಯನ್ನು ಕೆತ್ತಲಾಗಿದೆ.

ಲಾಳನಕೆರೆಯ ಈಶ್ವರ ದೇವಸ್ಥಾನದೊಳಗೆ ಬಿದ್ದಿರುವ ಶಾಸನವು ಒಂದು ಪ್ರಮುಖ ಶಾಸವಾಗಿದ್ದು, ಹೊಯ್ಸಳ ದೊರೆ ವಿಷ್ಣುವರ್ಧನನ ಕಾಲದ (ಕ್ರಿ.ಶ.೧೧೩೮) ಶಾಸನವಾಗಿದೆ. ಈ ಶಾಸನ ಹೊಯ್ಸಳ ದೊರೆ ವಿನಯಾದಿತ್ಯನಿಂದ ವಿಷ್ಣುವರ್ಧನದ ಮಂತ್ರಿ ಏಚಿರಾಜ ದಂಡಾಧೀಶ ಮತ್ತು ಆತನ ಪತ್ನಿ ಕಾಮಿಅಕ್ಕನ ಮಕ್ಕಳ ವಿವರವನ್ನು ನೀಡುತ್ತದೆ. ಏಚಿರಾಜನು ದೊರೆಯಿಂದ ಲಾಳನಕೆರೆ ಗ್ರಾಮವನ್ನು ಗೌಡಿಕೆ ಉಂಬಳಿಯಾಗಿ ಪಡೆದು ಸದರೀ ಗ್ರಾಮವನ್ನು ಗ್ರಾಮದ ಮೂಲಸ್ಥಾನ ಮಲ್ಲಿಕಾರ್ಜುನ ದೇವಾಲಯದ ನಿರ್ವಹಣೆಗಾಗಿ ಕೇತಜೀಯ, ಜಕ್ಕಜೀಯ ಮುದ್ದಯ್ಯನ ಮಗ ಚಾಮಗೌಡರಿಗೆ ನೀಡಿದ ಉಲ್ಲೇಖವಿದೆ. ಲಾಳನಕೆರೆಯ ಇದೇ ದೇವಾಲಯದ ಮಹಾದ್ವಾರದ ಬಲಗಡೆ ಗೋಡೆಯ ಮೇಲಿರುವ ಶಾಸನವು ಕ್ರಿ.ಶ. ೧೨೧೮ರ ಶಾಸನವಾಗಿದ್ದು, ಹೊಯ್ಸಳರ ವಂಶಾವಳಿಯನ್ನು ಎರಡನೆಯ ಬಲ್ಲಾಳನವರೆಗೆ ನೀಡುತ್ತದೆ. ಹಾಗೂ ಬಲ್ಲಾಳನ ಮಹಾದಂಡನಾಯಕನಾದ ಮಲ್ಲನಾಯಕನ ವಂಶಾವಳಿಯ ವಿವರವನ್ನು ನೀಡುತ್ತದೆ.

ಹೊಯ್ಸಳ ವಂಶದ ಉಗಮ ಕುರಿತು ಶಾಸನಗಳಲ್ಲಿ ಕಂಡುಬರುವುದು ಸಳನ ಕಥೆ. ಶಶಪುರದ ವಾಸಂತಿಕಾದೇವಾಲಯದಲ್ಲಿ ಸಿದ್ಧಮುನೀಂದ್ರನೊಬ್ಬ 'ಸಳನಿಗೆ ವಿದ್ಯಾಭ್ಯಾಸ ಮಾಡುತ್ತಿದ್ದಾಗ' ಹುಲಿಯೊಂದು ನುಗ್ಗಿತಂತೆ, ಮುನಿ ಒಂದು ಸಲಾಕೆಯನ್ನು ಕೊಟ್ಟು 'ಪೊಯ್‌ಸಳ' ಎಂದು ಹೇಳಿದಾಗ ಸಳ ಹುಲಿಯನ್ನು ಕೊಂದುಹಾಕಿದನಂತೆ. ಆಗಿನಿಂದ ಅವನ ವಂಶಜರಿಗೆ ಹೊಯ್ಸಳ ಎಂಬ ಹೆಸರು ಬಂದಿತು ಮತ್ತು ಸಳ ಹುಲಿಯನ್ನು ಕೊಲ್ಲುತ್ತಿರುವ ಘಟನೆ ಸೂಚಿಸುವ ಲಾಂಛನವೂ ಪ್ರಾಪ್ತವಾಯಿತು. ಸಳ 'ವೀತಾಯುಧವ್ರತ'ಧಾರಿಯಾಗಿದ್ದಾಗ ಈ ಘಟನೆ ನಡೆಯಿತೆಂದು ಇನ್ನೊಂದು ಶಾಸನ ತಿಳಿಸುತ್ತದೆ.

ಮಂಡ್ಯ ಜಿಲ್ಲೆಯ ಶಾಸನಗಳಲ್ಲಿ ನಮಗೆ ಕಂಡುಬರುವ ಮೊದಲ ದೊರೆ ವಿನಯಾದಿತ್ಯ. ತ್ರಿಭುನವಮಲ್ಲ ಎಂಬ ಬಿರುದಿನಿಂದಲೇ ಈತ ಚಾಳುಕ್ಯ ಸಾಮಂತನಾಗಿದ್ದನೆಂಬುದು ಸ್ಪಷ್ಟಪಡುತ್ತದೆ. ಕೊಂಕಣ, ಆಳ್ವಖೇಡ, ಬಯಲ್ನಾಡು ಮುಂತಾದ ಪ್ರದೇಶಗಳನ್ನು ಆಳಿದ ಈತನಿಗೆ 'ದ್ವಾರಾವತೀಪುರವರಾಧೀಶ್ವರ' ಎಂಬ ಬಿರುದಿರುವುದು ಗಮನಾರ್ಹ. 'ಚಾಲುಕ್ಯ ಚಕ್ರೇಶನ ಬಲದ ಭುಜಾದಂಡ' ಎನಿಸಿದ ಎರೆಯಂಗ ವಿನಯಾದಿತ್ಯನ ಮಗ. ಮಾಳವ ದೇಶವನ್ನು ಚಾಳುಕ್ಯರಿಗಾಗಿ ಜಯಿಸಿಕೊಟ್ಟು ಅರಸನ ಪ್ರೀತಿಗೆ ಪಾತ್ರನಾಗಿದ್ದ.

ಎರೆಯಂಗನ ಮಕ್ಕಳಾದ ಬಲ್ಲಾಳ, ವಿಷ್ಣು ಮತ್ತು ಉದಯಾದಿತ್ಯರು ದೋರಸಮುದ್ರದಲ್ಲಿ ಪರಮಾರ ರಾಜಕುಮಾರ ಜಗದೇವನ ಸೇನೆಯನ್ನು ಸದೆಬಡಿದು ಆತನ ಕೊರಳಹಾರದ ಪದಕವನ್ನೂ ಭಂಡಾರವನ್ನೂ ವಶಪಡಿಸಿಕೊಂಡರು. ಇವರಲ್ಲಿ ಬಲ್ಲಾಳ ಸ್ವಲ್ಪಕಾಲ ಮಾತ್ರ ರಾಜ್ಯವಾಳಿದ. ರಾಜಕೀಯ ಮಹತ್ವದ ದೃಷ್ಟಿಯಿಂದ ವಿಷ್ಣುವರ್ಧನನ ಶಾಸನಗಳು ಗಮನಾರ್ಹ. 'ತಳಕಾಡುಗೊಣ್ಡ' ಮತ್ತು 'ನಂಗಲಿಯ ಗೆಲದ' ಈತನ ಆಡಳಿತಕ್ಕೆ ಗಂಗವಾಡಿ, ನೊಳಂಬವಾಡಿ, ಬನವಸೆ, ಹಲಸಿಗೆ ಮೊದಲಾದ ಪ್ರದೇಶಗಳು ಒಳಪಟ್ಟಿದ್ದವು. ಆತ ತಲಕಾಡನ್ನು ಗೆದ್ದುದು ಕ್ರಿ.ಶ.೧೧೧೬ರಲ್ಲಿ ಎಂದು ಭಾವಿಸಲಾಗಿದೆ. ಆದರೆ ಈಚೆಗೆ ದೊರೆತಿರುವ ಹಿರೇಮರಳಿ ಶಾಸನದ ಪ್ರಕಾರ ವಿಷ್ಣುವರ್ಧನ ಕ್ರಿ.ಶ.೧೧೧೯ರ ಜೂನ್ ೩೦ರಂದು "ತಲಕಾಡಲು ಪ್ರಿಥ್ವೀರಾಜ್ಯ" ಗೆಯ್ಯುತ್ತಿದ. ಡೆರೆಟ್ (It is even a matter of conjecture whether he became king in ೧೧೦೮ or ೧೧೧೯" ಎಂದು ಹೇಳುವ ಸಂಶಯದ ಮಾತಿಗೆ (ಪು.೪೪) ಹಿರೇಮರಳಿ ಶಾಸನ ಉತ್ತರ ನೀಡಿದೆ. ಗಂಗವಾಡಿಯನ್ನು ಗೆಲ್ಲುವಲ್ಲಿ ಪ್ರಧಾನ ಪಾತ್ರವಹಿಸಿದವನು ಹಿರಿಯದಂಡನಾಯಕ ಗಂಗರಾಜ. ತಲಕಾಡಿನ ವಿಜಯ ಹೊಯ್ಸಳ ಇತಿಹಾಸದಲ್ಲಿ ಒಂದು ಮೈಲಿಗಲ್ಲು. ಹೊಯ್ಸಳ ಶಾಸನ ಹಾಗೂ ನಾಣ್ಯಗಳಲ್ಲಿ ತಳಕಾಡುಕೊಂಡ ಎಂಬ ಬಿರುದು

ಕಂಡುಬರುತ್ತದೆ. ಈತನ ಸಾಧನೆಗಳನ್ನು ಅನೇಕ ಶಾಸನಗಳು ವರ್ಣಿಸುತ್ತವೆ. ಈತ ತನ್ನ ಅಣ್ಣನಾದ ಒಂದನೆಯ ಒಲ್ಲಾಳ ಬದುಕಿದ್ದಾಗಲೇ ರಾಜ್ಯವಾಳುತ್ತಿದ್ದನೆಂಬ ಸಂಗತಿಯನ್ನು ವಿಶೇಷವಾಗಿ ಗಮನಿಸಬೇಕು. ತಾಯಿ ತುಳುವಲದೇವಿ ಮತ್ತು 'ಆತ್ಮಾಗ್ರಜ' ನ್ರಿಪಭೂಪ (ಬಲ್ಲು)ರ ಉಪಸ್ಥಿತಿಯಲ್ಲಿ ಈತ ದಾನ ನೀಡಿದ ವಿಷಯವನ್ನು ಹೊಸಕೋಟೆಯ ಶಾಸನದಲ್ಲಿ ನಿರೂಪಿಸಿದೆ. ಈತನ ಅರಸಿಯರಲ್ಲಿ ನಾಲ್ವರನ್ನು ಮಂಡ್ಯಜಿಲ್ಲೆಯ ಶಾಸನಗಳು ಹೆಸರಿಸುತ್ತವೆ. ಪಿರಿಯರಸಿ ಪಟ್ಟಮಹಾದೇವಿ ಶಾಂತಲದೇವಿ, ಪಟ್ಟಮಹಿಷಿ ಲಕ್ಷ್ಮಾದೇವಿ, ಪಲ್ಲವರಾಜಪುತ್ರಿ ಬಮ್ಮಲದೇವಿ ಹಾಗೂ ಕೊಂಗಾಳ್ವ ರಾಜಕುಮಾರಿ ಚಂದಲದೇವಿ. ಮುರುಕನಹಳ್ಳಿಯು ಶಾಂತಲೆಯ ಭತ್ತಗ್ರಾಮವಾಗಿತ್ತು.

ಒಂದನೆಯ ನರಸಿಂಹನು ವಿಷ್ಣುವರ್ಧನ ಮತ್ತು ಲಕ್ಷ್ಮಾದೇವಿಯರ ಮಗ. ತಂದೆಯ ಅನೇಕ ಬಿರುದುಗಳನ್ನು ಈತನೂ ಧರಿಸಿದ್ಧ. ತ್ರಿಭುವನಮಲ್ಲ ಮತ್ತು ಜಗದೇಕಮಲ್ಲ ಎಂಬ ಬಿರುದುಗಳಿಂದ ಹೊಯ್ಸಳರ ಮೇಲೆ ನಾಮಮಾತ್ರದ್ದಾದರೂ-ಚಾಳುಕ್ಯರ ಸಾರ್ವಭೌಮತ್ವ ಇತ್ತೆನ್ನುವುದು ಧ್ವನಿತವಾಗುತ್ತದೆ. ಈತ 'ಚಂಗಾಳ್ವನಂ ಕೊಂದ' ಉಲ್ಲೇಖವಿದೆ. ಗಂಗವಾಡಿ, ನೊಣಂಬವಾಡಿ, ಬನವಸೆ, ಬೆಳ್ವೊಲ ಮುಂತಾದ ಪ್ರದೇಶಗಳು ಈತನ ಅಧೀನಕ್ಕೊಳಪಟ್ಟಿದವು. ಆದರೆ ಈತ 'ದ್ರವಿಳಮಗಧ ಪಾಂಚಾಲನೇಪಾಳಲೋಳ' ದೇಶಗಳ ಅರಸರನ್ನು ಜಯಿಸಿದನೆಂದು ಹೇಳಿರುವುದು ಆಡಂಬರ ಶೈಲಿಯ ಅತಿಶಯೋಕ್ತಿಮಾತ್ರ.

ಇಮ್ಮಡಿ ಬಲ್ಲಾಳ:-

ನರಸಿಂಹನ ತರುವಾಯ ಪಟ್ಟಕ್ಕೆ ಬಂದವನು ಇಮ್ಮಡಿ ಬಲ್ಲಾಳ. ಈತ ಪಾಂಡ್ಯರಿಗೆ ಸೇರಿದ ಉಚ್ಚಂಗಿಯನ್ನು ಗೆದ್ದ. ಈತನ ಆದೇಶದ ಮೇರೆಗೆ, ರಣವೀಳ್ಯ ಪಡೆದು 'ಮಹಾಪ್ರಸಾದ'ವೆಂದು ಯುದ್ಧಕ್ಕೆ ತೆರಳಿದ ಬಬ್ಬೆಯನಾಯಕ ಕಳಚುರಿ ಅರಸ ಸಂಕಮನ ಸೈನ್ಯದೊಡನೆ ಹೋರಾಡಿ ಮೃತನಾದ. ಈತನ ಸಾಮಂತ ಸಿಂದೆಯನಾಯಕ ಹಟ್ಟಿಗಾಳಗದಲ್ಲಿ ಜಯಶೀಲನಾದ. ಸುಮಾರು ಕ್ರಿ.ಶ.೧೨೦೦ ಹೊತ್ತಿಗೆ ಈತನ ರಾಜ್ಯ ಹೆದ್ದೊರೆ ಎಂದರೆ ಕೃಷ್ಣಾನದಿಯವರೆಗೆ ವಿಸ್ತರಿಸಿತ್ತು.

ಇಮ್ಮಡಿ ನರಸಿಂಹ ತರುವಾಯ ಬಂದ ದೊರೆ. ಈತ ಶತ್ರು ಅರಸರು ಹೆಣ್ಣುಡುಗೆಯನ್ನು ಧರಿಸುವಂತೆ ಮಾಡಿದ ಧೀರ! ಸೇವುಣರೊಡನೆ ಸಂಭವಿಸಿದ ಕದನದಲ್ಲಿ ಈತನ ಪರ ಹರಿಹರದಂಡನಾಯಕ ಹೋರಾಡಿದ. ಅನಂತರ ಅಧಿಕಾರಕ್ಕೆ ಬಂದ ಸೋಮೇಶ್ವರ ಕ್ರಿ.ಶ.೧೨೪೨ರಲ್ಲಿ ಚೋಳರಾಜ್ಯದ ನೆಲೆವೀಡಿನಿಂದ, ಎಂದರೆ ಕಣ್ಣಾನೂರಿನಿಂದ, ರಾಜ್ಯವಾಳಿದ.

[illegible]

ಬಾಲ್ಯದಲ್ಲಿದ್ದಾಗಲೇ ಈತ ವಿರೋಧಿ ಅರಸರ ತಲೆಗಳನ್ನು ಚೆಂಡಿನಂತೆ ಆಡುತ್ತಿದ್ದನೆಂದು ಗೋವಿಂದನಹಳ್ಳಿಯ ಕ್ರಿ.ಶ.೧೨೩೬ರ ಒಂದು ಶಾಸನ ಉತ್ಪ್ರೇಕ್ಷಿಸುತ್ತದೆ. ಕ್ರಿ.ಶ.೧೨೩೭ರ ಬಸರಾಳು ಶಾಸನದಲ್ಲಿ ಉಕ್ತನಾದ ಕೃಷ್ಣಕಂಧರ ಸೇವುಣ ಅರಸನೆಂದು ಕೆಲವರೂ ರಾಷ್ಟ್ರಕೂಟರು ಅರಸನೆಂದು ಮತ್ತೆ ಕೆಲವರೂ ಗುರುತಿಸಿದ್ದಾರೆ. ಸೋಮೇಶ್ವರನ ರಾಜ್ಯವು ಪೂರ್ವದಲ್ಲಿ ಕಂಚಿ, ಪಶ್ಚಿಮದಲ್ಲಿ ಬೇಲೂರು, ಉತ್ತರದಲ್ಲಿ ಕೃಷ್ಣಾನದಿ ಹಾಗೂ ದಕ್ಷಿಣದಲ್ಲಿ ಬಯಲ್ಲಾಡಿನವರೆಗೆ ವ್ಯಾಪಿಸಿತ್ತು.

ಮುಮ್ಮಡಿ ನರಸಿಂಹ ಸೋಮೇಶ್ವರನ ಉತ್ತರಾಧಿಕಾರಿ. ಈತ 'ಮಲೆಯದಂಡಿಗೆತ್ತಿ ನಡೆದ' ಸಂಗತಿಯನ್ನು ಕ್ರಿ.ಶ. ೧೨೬೦ರ ಕಸಲಗೆರೆ ಶಾಸನ ತಿಳಿಸುತ್ತದೆ. ಈತನ ವಿರುದ್ಧ ಹೋರಾಡಲು ಬಂದ ಸೇವುಣ ಮಹಿಪ ಮಹದೇವರಾಣಿಯನು ಯುದ್ಧ ಮಾಡಲಾಗಿದೆ. ಒಂದೆ ರಾತ್ರಿಯಲ್ಲಿ ರಣರಂಗವನ್ನು ಬಿಟ್ಟು ಓಡಿಹೋದನೆಂದು ಕ್ರಿ.ಶ.೧೨೭೧ರ ಬೆಳ್ಳೂರಿನ ಒಂದು ಶಾಸನ ಅಣಕವಾಡುತ್ತದೆ. ಮುಮ್ಮಡಿ ನರಸಿಂಹನ ಅನಂತರ ಅಧಿಕಾರಸೂತ್ರ ಹಿಡಿದ ಮುಮ್ಮಡಿ ಬಲ್ಲಾಳನ ಕಾಲದಲ್ಲಿ ಬೆಮತೂರಕಲ್ಲು ಎಂದರೆ ಚಿತ್ರದುರ್ಗದ ಸೋಮೆಯನಾಯಕ ಮತ್ತು ಕಂಪಿಲರ ನಡುವೆ ಕ್ರಿ.ಶ.೧೩೦೩ರಲ್ಲಿ ಹೊಳಲಕೆರೆಯಲ್ಲಿ ಹೋರಾಟ ನಡೆಯಿತೆಂದು ಚಿಟ್ಟನಹಳ್ಳಿಯ ಶಾಸನ ತಿಳಿಸುತ್ತದೆ. ಹೊಯ್ಸಳ ಅರಸನೊಬ್ಬ 'ದಿಗ್ವಿಜಯಂಗಳ ಮಾಡಿ ಬಂದು' ದೋರಸಮುದ್ರದಿಂದ ರಾಜ್ಯವಾಳುತ್ತಿದ್ದನೆಂದು ತೊಣ್ಣೂರಿನ ಒಂದು ಶಾಸನದಿಂದ ತಿಳಿದುಬರುತ್ತದೆ. ಆದರೆ ಈ ಅರಸನನ್ನು ಗುರುತಿಸಲು ಸಾಧ್ಯವಾಗಿಲ್ಲ. ಹೊಯ್ಸಳ ಅರಸರು ಸೊಸೆವೂರು ಅಥವಾ ಶಶಪರ, ಬೇಲೂರು ಮತ್ತು ದೋರಸಮುದ್ರಗಳಿಂದ ಮಾತ್ರವಲ್ಲದೆ ತಲಕಾಡು, ಬಂಕಾಪುರ, ಕೋಡಾಲ, ಹಳ್ಳದಬೀಡು, ಕಣ್ಣಾನೂರು, ಲೊಕ್ಕಿಗುಂಡಿ ಇತ್ಯಾದಿ ನೆಲೆವೀಡುಗಳಿಂದಲೂ ರಾಜ್ಯಭಾರ ನಡೆಸಿದರೆಂದು ಮಂಡ್ಯ ಜಿಲ್ಲೆಯ ಶಾಸನಗಳಿಂದ ವಿದಿತವಾಗುತ್ತದೆ. ಸಮಕಾಲೀನ ರಾಜಮನೆತನಗಳಾದ ಚೋಳ, ಚಾಳುಕ್ಯ, ಕಳಚುರಿ, ಸೇವುಣ, ಕೊಂಗಾಳ್ವ ಚಂಗಾಳ್ವ, ಪಾಂಡ್ಯ, ಕದಂಬ ಮತ್ತಿತರರೊಡನೆ ರಾಜಕೀಯ ಮೇಲುಗೈಗಾಗಿ ಸೆಣಸಾಡಿದರೆಂಬುದನ್ನು ಇಲ್ಲಿನ ಶಾಸನಗಳ ಅಧ್ಯಯನದಿಂದ ಅರಿಯಬಹುದು.

ವಿಜಯನಗರ:–

ಮಂಡ್ಯ ಜಿಲ್ಲೆಯ ಶಾಸನಗಳು ಒಂದನೆಯ ಬುಕ್ಕನಿಂದ ಮೂರನೆಯ ಶ್ರೀರಂಗರಾಯನವರೆಗಿನ ಒಟ್ಟು ಹದಿನಾರು ಅರಸರನ್ನು ಉಲ್ಲೇಖಿಸಿವೆ. ಇವುಗಳಲ್ಲಿ ಕೃಷ್ಣದೇವರಾಯ, ಅಚ್ಯುತರಾಯ ಹಾಗೂ ಸದಾಶಿವರಾಯರ ಶಾಸನಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ತಾಮ್ರಶಾಸನಗಳಲ್ಲಿ ವಂಶಾವಳಿಯನ್ನು ನಿರೂಪಿಸಿದೆ. ಬಹುಪಾಲು ಶಾಸನಗಳು ದಾನದತ್ತಿ ಬಿಟ್ಟ

ವಿಷಯವನ್ನು ನಿರೂಪಿಸುವ ದಾಖಲೆಗಳೇ ಆಗಿವೆ. ಶ್ರೀರಂಗಪಟ್ಟಣ ತಾಲ್ಲೂಕಿನ ಒಂದು ಶಾಸನದಲ್ಲಿ "ಉಕ್ತನಾದ ವಿಜಯರಾಯನ ಹೆಸರು ಸಾಂಪ್ರದಾಯಿಕ ವಂಶಾವಳಿಯಲ್ಲಿ ಸೇರಿರುವುದು ವಿರಳ. ಆದರೆ ಆತ ರಾಜ್ಯವಾಳುತ್ತಿದ್ದ ಸಂಗತಿ ಹೊಸಹಳ್ಳಿ ಶಾಸನದಲ್ಲಿ ಸ್ಪಷ್ಟ ಮಾತುಗಳಲ್ಲಿ ನಿರೂಪಿತವಾಗಿದೆ. "ಶ್ರೀ ವೀರಪ್ರತಾಪ ವಿಜಯ ಮಹಾರಾಯರು ರಾಜ್ಯಂಗೆಉತ್ತಿರಲು" ಈ ಶಾಸನದ ಕಾಲ ಕ್ರಿ.ಶ. ೧೪೪೬-೪೭. ಇದೇ ಕಾಲದಲ್ಲಿ ಮಲ್ಲಿಕಾರ್ಜುನನೂ ಆಳುತ್ತಿದ್ದನೆಂದು ಶ್ರೀರಂಗಪಟ್ಟಣದ ಒಂದು ಶಾಸನದಿಂದ ತಿಳಿದುಬರುತ್ತದೆ. ಏಕಾಕಾಲದಲ್ಲಿ ಇಬ್ಬರು ಅರಸರು ಆಳುತ್ತಿದ್ದ ವಿಷಯ ಕುತೂಹಲಕರವಾಗಿದೆ. ಈ ವಿಜಯರಾಯ ಇಮ್ಮಡಿ ದೇವರಾಯನ ಮಗನೆಂದು ಗುರುತಿಸಿದೆ. ತುಳುವ ನರಸನಾಯಕ ಕ್ರಿ.ಶ.೧೫೦೩ರ ಹೊತ್ತಿಗೆ ಮೃತನಾಗಿದ್ದ ವಿಷಯ ಸಂತೇಬಾಚಹಳ್ಳಿಯ ಶಾಸನದಿಂದ ಗೊತ್ತಾಗುತ್ತದೆ.[೮]

ಕ್ರಿ.ಶ.೧೬೨೩ರ ಹೊನ್ನಲಗೆರೆ ತಾಮ್ರಶಾಸನ ವೀರರಾಮದೇವರಾಯನನ್ನು ಹೆಸರಿಸಿದ್ದರೂ ವಿಜಯನಗರದ ಅರಸರ ಸಾಮಂತರಾಗಿದ್ದ ಮೈಸೂರು ಒಡೆಯರ ಸಂತತಿಗೆ ಸೇರಿದ ಚಾಮರಾಜೇಂದ್ರನನ್ನು 'ಶ್ರೀರಂಗಪಟ್ಟಣ ಖ್ಯಾತ ಭೋಜಸಿಂಹಾಸನಾಧಿಪ' ಎಂದು ಉಲ್ಲೇಖಿಸಿರುವುದು ಗಮನಿಸಬೇಕಾದ ಸಂಗತಿ. ಈ ಹೊತ್ತಿಗಾಗಲೇ ವಿಜಯನಗರ ಸಾಮ್ರಾಜ್ಯ ಛಿದ್ರಗೊಂಡು ಹತ್ತಾರು ಪಾಳೆಯಪಟ್ಟುಗಳು ಸ್ವತಂತ್ರವಾಗಿ ತಲೆಯೆತ್ತತೊಡಗಿದವು. ಶ್ರೀರಂಗಪಟ್ಟಣದ ಶಾಸನವೊಂದರಿಂದ ಮೂರನೆಯ ಶ್ರೀರಂಗರಾಯ ಪೆನುಗೊಂಡೆಯಿಂದ ಆಳುತ್ತಿದ್ದನೆಂಬ ವಿಷಯ ತಿಳಿದುಬರುತ್ತದೆ. ಈ ಪ್ರದೇಶದ ಶಾಸನಗಳಲ್ಲಿ ಇದೇ ವಿಜಯನಗರದ ಅರಸರ ಕೊನೆಯ ಶಾಸನ.

ಸುಮಾರು ಐದು ಶತಮಾನಗಳ ಕಾಲ ಆಳಿದ ಮೈಸೂರು ಒಡೆಯರ ಬಹುಪಾಲು ಶಾಸನಗಳು ಅಗ್ರಹಾರ ಸ್ಥಾಪನೆ, ಕೆರೆ-ದೇಗುಲಗಳ ಜೀರ್ಣೋದ್ಧಾರ ಇಲ್ಲವೆ ದಾನದತ್ತಿಗಳಿಗೆ ಸಂಬಂಧಿಸಿವೆ. ರಾಜವೊಡೆಯರಿಂದ ನಾಲ್ವಡಿ ಕೃಷ್ಣರಾಜ ಒಡೆಯರವರೆಗಿನ ಶಾಸನಗಳು ಮಂಡ್ಯ ಜಿಲ್ಲೆಯಲ್ಲಿ ಉಪಲಬ್ಧವಾಗಿವೆ. ಅನೇಕ ತಾಮ್ರಶಾಸನಗಳಲ್ಲಿ ಈ ಅರಸರ ವಂಶದ ಉಗಮವನ್ನು ವಿಷ್ಣುವಿನಿಂದ ಆರಂಭಿಸಿದೆ. ಈ ಪೌರಾಣಿಕ ಹಿನ್ನೆಲೆಯನ್ನು ತಿಳಿಸುವುದು ತಮ್ಮ ವಂಶಕ್ಕೆ ಪ್ರಾಚೀನತೆಯ ಬಣ್ಣ ಲೇಪಿಸುವುದಕ್ಕಾಗಿ! ಶ್ರೀರಂಗಪಟಣದ ಒಂದು ಶಾಸನ ಮತ್ತು ಮೇಲುಕೋಟೆಯ ಒಂದು ಶಾಸನಗಳಲ್ಲಿ ಇಂಥ ಪ್ರಯತ್ನಗಳನ್ನು ಕಾಣಬಹುದು. ಇತರ ಆಕರಗಳಿಂದ ತಿಳಿದುಬರುವ ಮೈಸೂರಿನ ಒಡೆಯರ ಇತಿಹಾಸವನ್ನು ಬದಲಿಸುವಂಥ ಯಾವುದೇ ಅಂಶ ಮಂಡ್ಯಜಿಲ್ಲೆಯ ಶಾಸನಗಳಲ್ಲಿ ಕಂಡುಬರುವುದಿಲ್ಲ. ಇದೇ ಮಾತು ಉಮ್ಮತ್ತೂರು, ಹದಿನಾಡು, ಕಳಲೆ, ಚನ್ನಪಟ್ಟಣ ಮತ್ತು ನಾಗಮಂಗಲದ ಅಧಿಪರಗೂ ಅನ್ವಯವಾಗುತ್ತದೆ.

ಹೈದರಾಲಿ ಮತ್ತು ಟಿಪ್ಪು:-

"ಮಂಡ್ಯ ಜಿಲ್ಲೆಯಲ್ಲಿ ನಮಗೆ ದೊರೆತಿರುವ ಹೈದರಾಲಿ ಮತ್ತು ಟಿಪ್ಪುಸುಲ್ತಾನರ ಶಾಸನಗಳು ಅವರ ರಾಜಕೀಯ ಕೊಡುಗೆಯ ಮೇಲೆ ಇನ್ನಷ್ಟು ಬೆಳಕು ಚೆಲ್ಲುತ್ತವೆ. ಈ ಶಾಸನಗಳು ಪರ್ಶಿಯನ್ ಮತ್ತು ಅರೇಬಿಕ್ ಭಾಷೆಯಲ್ಲಿವೆ. ಇವಲ್ಲದೆ ಕನ್ನಡ ಭಾಷೆಯ ಶಾಸನಗಳೂ ಇವೆ. ಅವುಗಳಲ್ಲಿ ಕೆಲವು ಶಾಸನಗಳಲ್ಲಿ ಈ ದೊರೆಗಳು ಬ್ರಾಹ್ಮಣರಿಗೂ, ದೇವಸ್ಥಾನಗಳಿಗೂ, ಮುಸಲ್ಮಾನರಿಗೂ ಅವರ ಸ್ಮಶಾನ ಭೂಮಿಗಳಿಗೂ ದತ್ತಿಕೊಟ್ಟಿರುವ ಪ್ರಸ್ತಾಪಗಳಿವೆ. ಇನ್ನು ಕೆಲವು ಶಾಸನಗಳಲ್ಲಿ ಕೋಟೆಗಳನ್ನು, ಮಸೀದಿಗಳನ್ನು ಮತ್ತು ಗೋರಿಗಳನ್ನು ಕಟ್ಟಿಸಿರುವ ಪ್ರಸ್ತಾಪಗಳಿವೆ. ಉಳಿದ ಶಾಸನಗಳಲ್ಲಿ ರಾಜ್ಯಾಡಳಿತ ವಿಷಯ, ದೇವರು (ಅಲ್ಲಾಹ್) ಮತ್ತು ಪ್ರವಾದಿಯ (ಮೊಹಮ್ಮದ್ ಪೈಗಂಬರ್) ಹೆಸರುಗಳು, ಟಿಪ್ಪುಸುಲ್ತಾನ, ಆತನ ಮಗ ದಂಡನಾಯಕ ಮುಂತಾದ ಪ್ರಮುಖ ವ್ಯಕ್ತಿಗಳು ಮರಣದ ಪ್ರಸ್ತಾಪಗಳಿವೆ.

ಡಾಲ್‌ಹೌಸಿಯ, ಭಾರತದ ಗವರ್ನರ್-ಜನರಲ್ ಆಗಿದ್ದಾಗ ಹಾಗೂ ಮೇಜರ್ ಜನರಲ್ ಮಾರ್ಕ್ ಕಬ್ಬನ್ ಮೈಸೂರಿನ ಕಮಿಷನರ್ ಆಗಿದ್ದಾಗ ೧೮೪೭-೫೦ರ ಅವಧಿಯಲ್ಲಿ ಮದ್ದೂರಿನ ಸೇತುವೆಯನ್ನು ನಿರ್ಮಿಸಲಾಯಿತೆಂದು ಮದ್ದೂರಿನ ಶಾಸನವೊಂದು ತಿಳಿಸುತ್ತದೆ.

ಕೆರೆಕಟ್ಟೆಗಳನ್ನು ತೋಡಿಸುವುದು. ದೇಗುಲಬಸದಿಗಳನ್ನು ನಿರ್ಮಿಸುವುದು ಹಾಗೂ ಅವನ್ನು ಜೀರ್ಣೋದ್ಧಾರಗೊಳಿಸುವುದು ಪುಣ್ಯದ ಕೆಲಸವೆಂಬ ಭಾವನೆ ಎಲ್ಲರಲ್ಲಿಯೂ ಹಿಂದಿನ ಕಾಲದಲ್ಲಿ ಬೇರೂರಿತ್ತು. ಹೀಗೆ ಕಟ್ಟಿಸಿದ ರಚನೆಗಳು ಅರಸನ ಹೆಸರಿನಲ್ಲೊ ಅಥವಾ ತಮ್ಮ ತಂದೆತಾಯಿಯರ ಹೆಸರಿನಲ್ಲೋ ಇರುತ್ತಿದ್ದುದು ಸ್ವಾಭಾವಿಕವೇ. ಕೆರೆ, ಕೊಳ, ಕಟ್ಟೆ, ಸಮುದ್ರ ಮುಂತಾದವುಗಳಿಂದ ಕೊನೆಗೊಳ್ಳುವ ಗ್ರಾಮಗಳನ್ನು ಹೊರತುಪಡಿಸಿಯೂ ಮಂಡ್ಯ ಜಿಲ್ಲೆಯ ಶಾಸನಗಳು ಸುಮಾರು ೧೫೦ ಕೆರೆಕಟ್ಟೆಗಳನ್ನು ಉಲ್ಲೇಖಿಸುತ್ತವೆ. ಗಂಗಾ, ತುಂಗಭದ್ರಾ, ನರ್ಮದಾ ಇತ್ಯಾದಿ ನದಿಗಳನ್ನು ಬಿಟ್ಟು ಸುಮಾರು ೫೦ ಹಳ್ಳನದಿಗಳನ್ನು ಹೆಸರಿಸುತ್ತವೆ. ಈಗೆಷ್ಟು ಉಳಿದಿವೆಯೋ ಯಾವ ಸ್ಥಿತಿಯಲ್ಲಿ ಉಳಿದಿವೆಯೋ ಎನ್ನುವುದು ಪರಿಶೋಧಿತವಾಗಬೇಕಾದ ಸಂಗತಿ! ಪುವಗಾಮದ ಪನ್ನಿರ್ವರು ಗಂಗ ಶ್ರೀಪುರುಷನ ಕಾಲದಲ್ಲಿ ಕೊಂಗಣಿಕೆರೆಯನ್ನು ಕಟ್ಟಿಸಿದುದು ಅತಿಪ್ರಾಚೀನ ಉಲ್ಲೇಖಗಳಲ್ಲೊಂದು. ಅಂತೆಯೇ ತೀರ ಈಚಿನ ಉಲ್ಲೇಖವೆಂದರೆ, ಕ್ರಿ.ಶ.೧೮೪೭ರಲ್ಲಿ ಮಂಡ್ಯ ತಾಲ್ಲೂಕಿನಲ್ಲಿ ಅಮೀಲ ಕಾಶ್ಯಪಗೋತ್ರದ ತಿರುಕುಡಿ ಶ್ರೀನಿವಾಸರಾವು ಮಂಡ್ಯದಲ್ಲಿ "ಪ್ರಾಣದೇವರ ದೇವಸ್ಥಾನ ಸರೋವರ ಜನಗಳಿಗೆ ಉಪಯೋಗ"ಕ್ಕಾಗಿ ಕಟ್ಟಿಸಿದುದು. ಕೆರೆಗಳನ್ನು ಕಟ್ಟಿಸಿದವರಿಗೆ ಇತರರು ದಾನ ನೀಡಿದ ನಿದರ್ಶಗಳು ನಮಗೆ ಕಂಡುಬರುತ್ತವೆ. ಭಟ್ಟರ ಬಾಚಿಯಪ್ಪ ಅನೇಕ

ಕೆರೆಗಳನ್ನು ಕಟ್ಟಿಸಿದನೆಂದು ಮದ್ದೂರಿನ ತಾಲ್ಲೂಕಿನ ಅರುವನಹಳ್ಳಿಯ ಒಂದು ಶಾಸನ ತಿಳಿಸುತ್ತದೆ. ಹೊಸದಾಗಿ ಕೆರೆಗಳನ್ನು ತೋಡಿಸುವುದು ಮತ್ತು ಒಡೆದುಹೋದ ಕೆರೆಗಳನ್ನು ಸುಸ್ಥಿತಿಗೆ ತರುವುದು ಇವೆರಡಕ್ಕೂ ಉದಾಹರಣೆಗಳನ್ನು ನಾವು ನೋಡಬಹುದು. ಕನ್ನೆಗೆರೆಮಲ್ಲ ಮತ್ತು ಒಡಗೆರೆಮಲ್ಲರಿಬ್ಬರೂ ಶಾಸನಗಳಲ್ಲಿ ಉಲ್ಲೇಖಿತರಾಗಿದ್ದಾರೆ. ಸಿರಿಯಕಲಸತ್ತ ಪಾಡಿಯಾದ ವಾನವನ್‌ಮಾದೇವಿ ಚತುರ್ವೇದಿ ಮಂಗಲದಲ್ಲಿ ಇನ್ನೂರು ವರ್ಷಗಳಿಂದ ಹಾಳುಬಿದ್ದಿದ್ದ ಕೆರೆಯನ್ನು ೧೧೦೨-೦೩ರಲ್ಲಿ ಚೋಳ ಮಾಂಡಲಿಕ ಪೋಮನ್ ಇರಾಮನಾದ ವಿರುದರಾಯಬಯಂಕರಮಾರಾಯನ್ ಎಂಬಾತ ಜೀರ್ಣೋದ್ಧಾರ ಮಾಡಿಸಿದ ವಿಷಯ ಬೊಮ್ಮೂರು ಅಗ್ರಹಾರದ ಶಾಸನದಲ್ಲಿ ನಿರೂಪಿತವಾಗಿದೆ. ಹರಹಿನ ಕಾಲುವೆಯನ್ನು ದುರಸ್ತಿಮಾಡಿದ ಉಲ್ಲೇಖ ತೊಣ್ಣೂರಿನ ಒಂದು ಶಾಸನದಲ್ಲಿ ಬಂದಿದೆ. 'ಕಾಲಂ ವರುಷಂ ಪ್ರತಿ ತಿದ್ದುವಲ್ಲಿಗೆ' ಎನ್ನುವ ಮಾತಿನಿಂದ ಪ್ರತಿವರ್ಷವೂ ಅದರ ಸುಸ್ಥಿತಿಗೆ ಗಮನ ನೀಡಲಾಗುತ್ತಿತ್ತೆಂದು ತಿಳಿದುಬರುತ್ತದೆ. ಹರಿಗಿಲ ಪೆರಿರಾಜ ೧೫೦ ಗದ್ಯಾಣಗಳ ವೆಚ್ಚದಲ್ಲಿ ಹೊಸಕೆರೆ ಮತ್ತು ಕೃಷ್ಣದೇವರಾಯವೊಡೆಯರ ಕೆರೆಗಳ ಕೆಲಸವನ್ನು ಮಾಡಿಸಿದನೆಂದು ಮೇಲುಕೋಟೆಯ ಒಂದು ಶಾಸನ ತಿಳಿಸುತ್ತದೆ. ಪೆರುಮಾಳೆ ದಂಡನಾಯಕ ಹಾಳುಬಿದ್ದ ಕೆರೆಯೊಂದನ್ನು 'ಹಿರಿದಹ ಅರ್ಥವನಿಕ್ಕಿ ಧ್ರುವಜಲವಹಂತಾಗಿ' ಕಟ್ಟಿಸಿದ. ಹೊಯ್ಸಳ ಅರಸ ಮುಮ್ಮಡಿ ಬಲ್ಲಾಳ ಹರಿಹರಪುರದ ಕಟ್ಟಿಗೆ 'ಬಿಜಯಂ ಗೆ ಇದು ಆರೋಗಣೆಯ ಮಾಡಿ ಕಟೆ ಕಾಲುವೆಯ ಚಿತ್ರೈಸಿ' ಆ ಕಟ್ಟೆಕಾಲುವೆಗಳ ನಿರ್ವಹಣೆಗೆ ದಾನ ನೀಡಿದ. ಸೇತುವೆ-ಅಡ್ಡಗಟ್ಟೆಗಳನ್ನು ನಿರ್ಮಿಸಿದ ನಿದರ್ಶನಗಳೂ ನಮಗೆ ಉಪಲಬ್ಧವಾಗಿವೆ. ಕ್ರಿ.ಶ.೭೧೫ರಲ್ಲಿ ಕೆರೆಗೋಡಿಗೆ ಉತ್ತರದಲ್ಲಿದ್ದ ಕಿಳಿನೀ ನದಿಗೆ ಸೇತುವೆ ಕಟ್ಟಿದುದು ಅತ್ಯಂತ ಪ್ರಾಚೀನ ಉಲ್ಲೇಖ. ಮದ್ದೂರಿನ ಸೇತುವೆಯ ನಿರ್ಮಾಣ ಇತ್ತೀಚಿನ ನಿದರ್ಶನ. ಬಳ್ಳೆಗೊಳದ ಏರಿಯನ್ನು ರಾಮಯ ಕಟ್ಟಿಸಿದ.

ಕ್ರಿ.ಶ.೭೭೬-೭೭ರಲ್ಲಿ ಕುಂದಾಚ್ಚಿ ಎಂಬಾಕೆ ಕಟ್ಟಿಸಿದ ಶ್ರೀಪುರದ ಲೋಕತಿಲಕವೆಂಬ ಬಸದಿಯೇ ಮಂಡ್ಯ ಜಿಲ್ಲೆಯ ಶಾಸನಗಳಲ್ಲಿ ಲಭ್ಯವಾಗುವ ಅತ್ಯಂತ ಪ್ರಾಚೀನ ಉಲ್ಲೇಖ. ಈಚೀನ ಉಲ್ಲೇಖಗಳಲ್ಲೊಂದು ಕುತೂಹಲಕರವಾಗಿದೆ. ಕನ್ನಂಬಾಡಿ ಸೀಮೆಯಲ್ಲಿ "ಮಹೇಶ್ವರಿವುಪದ್ರದಿಂದ ವಾಂತಿಭ್ರಾಂತಿಯಾಗಿ ಜನರು ಮೃತವಾಗುತ್ತಯಿದ್ದಲ್ಲು ಈ ವುತ್ಪಾತ ರೋಗ ನಿವತ್ಯರ್ಥವಾಗಿ ಈ ಕಣ್ವಪುರೀ ಕ್ಷೇತ್ರದಲ್ಲಿ ಇದ್ದಂಥಾ ನಾಲ್ಕನೇ ವರ್ನದಲ್ಲಿ ಗಂಗಡಿಕಾರದಲ್ಲಿ ಜನಿಸಿದ ನಂಜಮ್ಮ ಎಂಬ ಕನ್ಯೆಯ ಮೇಲೆ ಅಂಮನವರು ಅವಿರ್ಭವಿಸಿ"ದಾಗ ಭಕ್ತಾದಿಗಳಿಂದ ಬಂದ ಕಾಣಿಕೆಯಲ್ಲಿ ಕ್ರಿ.ಶ.೧೮೧೮ರಲ್ಲಿ ಮಹಾಲಕ್ಷ್ಮೀ-ಮಹಾಕಾಳಿ-ಮಹಾಸರಸ್ವತಿ ದೇವಾಲಯದ ನಿರ್ಮಾಣವಾಯಿತು. ಈ ನಂಜಮ್ಮ ಇತರ ಕೆಲವು ಶಾಸನಗಳಲ್ಲಿ ಅವೇಶದಮ್ಮ ಎಂದೇ ಉಲ್ಲೇಖಿತಳಾಗಿದ್ದಾಳೆ.

ಶೈವ, ವೈಷ್ಣವ ಹಾಗೂ ಜೈನ ಧರ್ಮಗಳು ಸಮಾನವಾಗಿ ಬೆಳೆದವೆನ್ನಲು ಹಲವು ಉದಾಹರಣೆಗಳನ್ನು ನೀಡಬಹುದು. ಗಾರಂದರ ಕುಲದ ಬಿಣ್ಣಾಂಡಿ ತನ್ನ ಮುತ್ತಾತ, ಮುತ್ತಜ್ಜ ಮತ್ತು ತಾಯಿ ಮುದುಗೆರೆಯಲ್ಲಿ ಮೃತರಾದಾಗ ಅಲ್ಲಿ ಲಿಂಗಪ್ರತಿಷ್ಠೆ ಮಾಡಿಸಿ ಗರಂಜೇಶ್ವರ ಎಂದು ಹೆಸರಿಟ್ಟು ಅದರ ಪೂಜಾದಿ ಸೇವೆಗೆ ದಾನವಿತ್ತ. ಕೊಮ್ಮೆಯರ ಕುಲದ ಹೆಮ್ಮಗೌಡ ಮತ್ತು ಆತನ ಸೋದರರು ಕೊಮ್ಮೇಶ್ವರ ದೇಗುಲ ಮಾಡಿಸಿ ದತ್ತಿಬಿಟ್ಟರು. ಜಾಗನ ಕೆರೆಯ ಕಲ್ಲಗೌಡ ತನ್ನ ಅಜ್ಜನ ಹೆಸರಿನಲ್ಲಿ ಆ ಊರಿನಲ್ಲಿ ದೇವಾಲಯವೊಂದನ್ನು ಕಟ್ಟಿಸಿದ. ಸೋಮಯ್ಯದಂಡನಾಯಕ ಅಕ್ಕ ರೇಕವ್ವೆ ಬೊಮ್ಮನಾಯಕನಹಳ್ಳಿಯ ಭೈರವೇಶ್ವರಾಲಯದ ನಿರ್ಮಾತೃ.. ಬೆಳ್ಳೂರಿನ ಮಂಡಲಸ್ವಾಮಿ ಬೆಳ್ಳೂರಿನಲ್ಲಿ ಮಂಡಲೇಶ್ವರ ದೇವಸ್ಥಾನವನ್ನು ಕಟ್ಟಿಸಿದ ಹಾಗೂ ಆರಣಿಯಲ್ಲಿ ಮರಗಳ ತೋಪು ಸ್ಥಾಪಿಸಿ ಸಂತೆ ನಡೆಯುವ ವ್ಯವಸ್ಥೆ ಮಾಡಿದ. ಗೋವಿಂದನಹಳ್ಳಿಯ ಪಂಚಲಿಂಗೇಶ್ವರ ದೇವಾಲಯ ಐದು ಗುಡಿಗಳಿಂದ ಕೂಡಿದ ವಿಶಿಷ್ಟ ವಾಸ್ತುರಚನೆ. ಮಲ್ಲಿತಮ್ಮ ಇದರ ರೂವಾರಿ. ಬಸರಾಳಿನ ಮಲ್ಲಿಕಾರ್ಜುನ ದೇವಾಲಯವನ್ನು ಕ್ರಿ.ಶ.೧೨೩೪ರಲ್ಲಿ ಹರಿಹರದಂಡನಾಯಕನು ಕಟ್ಟಿಸಿದ. ಹರೋಜ ಸೂರ್ಯಪ್ರತಿಷ್ಠೆ ಮಾಡಿಸಿದುದು ಕುತೂಹಲಕರ ಸಂಗತಿ. ಕಿಕ್ಕೇರಿಯ ಬ್ರಹ್ಮೇಶ್ವರ, ಸಿಂದಘಟ್ಟದ ಸಂಗಮೇಶ್ವರ, ವೈದ್ಯನಾಥಪುರದ ಸ್ವಯಂಭುವೈದ್ಯನಾಥ, ಬೆಳ್ಳೂರಿನ ಪ್ರಸನ್ನ ಮಾಧವ, ಹೊಸಹೊಳಲಿನ ಲಕ್ಷ್ಮೀನಾರಾಯಣ, ಮಳವಳ್ಳಿಯ ಸಾರಂಗಪಾಣಿ, ಮೇಲುಕೋಟೆಯ ಚೆಲುವನಾರಾಯಣ-ಹೀಗೆ ಹತ್ತಾರು ಊರಿನ ಹಲವಾರು ದೇವಾಲಯಗಳನ್ನು ನಮ್ಮ ಹಿಂದಿನವರು ಕಟ್ಟಿಸಿದುದಕ್ಕೆ ಉದಾಹರಣೆಗಳನ್ನು ಕೊಡಬಹುದು. ಮೇಲುಕೋಟೆ, ತೊಣ್ಣೂರು ಇತ್ಯಾದಿ ಸ್ಥಳಗಳು ಹೊಯ್ಸಳರ ಕಾಲದಿಂದ ವಿಶೇಷ ಪ್ರಸಿದ್ಧಿಗೆ ಬಂದವು.

ಜೈನಧರ್ಮಕ್ಕೆ ರಾಜಾಶ್ರಯ-ಜನಾಶ್ರಯ ಲಭಿಸಿತ್ತು. ಲೋಕತಿಲಕ ಜಿನಾಲಯದ ಬಗ್ಗೆ ಈ ಹಿಂದೆಯೇ ಉಲ್ಲೇಖಿಸಿದೆ. ಕ್ರಿ.ಶ.೧೧೬-೧೭ರಲ್ಲಿ ಮಣಲೆಯಾರ ಕನಕಗಿರಿಯಲ್ಲಿ ಬಸದಿ ಕಟ್ಟಿಸಿದ. ಕ್ರಿ.ಶ.೧೧೧೮ರಲ್ಲಿ ದೋರಸಮುದ್ರ ದೇಮಿಕಬ್ಬೆಯು ಕತ್ತರಿಘಟ್ಟದಲ್ಲಿ ತ್ರಿಕೂಟ ಜಿನಾಲಯವನ್ನು ಕಟ್ಟಿಸಿದಳು. ಮಾಣಿಕ್ಯವೊಳಲಿನ ಹೊಯ್ಸಳ ಜಿನಾಲಯ, ಬೋಗಾದಿಯ ಶ್ರೀಕರಣ ಜಿನಾಲಯ, ಪ್ರಾಯಶಃ ಶ್ರವಣನಹಳ್ಳಿಯಲ್ಲಿದ್ದ ವೀರಕೊಂಗಾಳ್ವ ಜಿನಾಲಯ. ಹೆಬ್ಬಿದಿರೂರು ವಾಡಿಯ ಪಾರ್ಶ್ವನಾಥ ಜಿನಾಲಯ, ಕ್ಯಾತನಹಳ್ಳಿಯ ಕೊಡೆಹಾಳ ಬಸದಿ ಮುಂತಾದವುಗಳನ್ನು ಶಾಸನಗಳು ಉಲ್ಲೇಖಿಸಿವೆ. ಕಂಬದಹಳ್ಳಿಯ ಪಂಚಕೂಟ ಬಸದಿ ಒಂದು ಗಮನಾರ್ಹ ರಚನೆ. ದಡಿಗನಕೆರೆಯ ಪಂಚ ಬಸದಿಯೊಳಗೆ ನಾಲ್ಕು ದೇಶಿಯಗಣಕ್ಕೆ ಮತ್ತು ಉಳಿದೊಂದು ಕಾಣೂರ್ಗಣಕ್ಕೆ ಸೇರಿತ್ತು. ಹಟ್ಟಣ, ಸೂರನಹಳ್ಳಿ, ಸುಕುದೊರೆ, ದೂರಿಗಿಹಳ್ಳಿ ಇತ್ಯಾದಿ ಗ್ರಾಮಗಳಲ್ಲಿಯೂ ಜಿನಾಲಯಗಳಿದ್ದವು.

[illegible]

ತಿಪ್ಪೂರು ಮುಖ್ಯ ಜೈನ ಕೇಂದ್ರಗಳಲ್ಲಿ ಒಂದೆನಿಸಿತ್ತು. ಬಸದಿಯ ನಿರ್ಮಾಣದ ಈಚಿನ ಉದಾರಹಣೆಗಳಲ್ಲೊಂದು ಬೆಳ್ಳೂರಿನಲ್ಲಿ ದೊರೆಯುತ್ತದೆ. ಕ್ರಿ.ಶ.೧೭ನೆಯ ಶತಮಾನದಲ್ಲಿ ಹುಲಿಕಲ್ಲು ಸಕ್ಕರೆಸೆಟ್ಟಿ ಬೆಳ್ಳೂರಿನಲ್ಲಿ ವಿಮಲನಾಥ ಚೈತ್ಯಾಲಯವನ್ನು ನಿರ್ಮಿಸಿದ.

ದೇವಾಲಯದ ವಿವಿಧ ಭಾಗಗಳನ್ನು ಕಟ್ಟಿಸಿದುದನ್ನೂ ಜೀರ್ಣೋದ್ಧಾರ ಮಾಡಿಸಿದುದನ್ನೂ ಅನೇಕ ಶಾಸನಗಳು ಉಲ್ಲೇಖಿಸುತ್ತವೆ. ಶ್ರೀಕರಣದ ಹೆಗ್ಗಡೆಯೊಬ್ಬ ಮಂಟಪವೊಂದನ್ನು ಮಾಡಿಸಿದ ಉಲ್ಲೇಖ ಪಾಂಡವಪುರದ ಒಂದು ಶಾಸನದಲ್ಲಿದೆ. ಹೀಗೆಯೇ ಗೋಪುರ ಕಂಬ, ದೀಪಮಾಲೆಯ ಕಂಬ, ಧ್ವಜಸ್ತಂಭ, ಅದಕ್ಕೆ ಹಿತ್ತಾಳೆ ತಗಡಿನ ಹೊದಿಕೆ, ರಥ, ಬಾಗಿಲುವಾಡ, ಅದಕ್ಕೆ ಹಿತ್ತಾಳೆಯ ಚೌಕಟ್ಟು, ಹಿತ್ತಾಳೆಯ ಮಾವಿನ ತೋರಣ, ದೇವತಾಮೂರ್ತಿಗಳು, ಗರುಡಪೀಠ, ಗರುಡವಾಹನ ಇತ್ಯಾದಿಗಳನ್ನು ಮಾಡಿಸಿ ದೇವರಿಗೆ ಅರ್ಪಿಸಿದ ನಿದರ್ಶನಗಳು ನಮಗೆ ಕಂಡುಬರುತ್ತವೆ. ಮುರಿದು ಹೋದ ತೊಲೆಯ ಆಧಾರಕ್ಕಾಗಿ ಒಂದು ಊರೆಕಂಬ ಮಾಡಿಸಿಕೊಟ್ಟ ಉದಾಹರಣೆಯೂ ಉಂಟು. ಕ್ರಿ.ಶ.೧೮೪೨ರಲ್ಲಿ ಕಲ್ಯಾಣಮ್ಮ ಎಂಬಾಕೆ ಶ್ರೀನಿವಾಸಕ್ಷೇತ್ರದ ನರಸಿಂಹ ದೇಗುಲದಲ್ಲಿ ಒಂಭತ್ತು ಅಂಕಣದ ಪಾಕಶಾಲೆಯನ್ನು ಕಟ್ಟಿಸಿಕೊಟ್ಟಳು. ಅಂತೆಯೇ ನಾಚಾರಮ್ಮ ಎಂಟು ಅಂಕಣದ ಶ್ರೀಮಠವನ್ನು ಕಟ್ಟಿಸಿದಳು. ಕ್ರಿ.ಶ.೧೮೨೯ರಲ್ಲಿ ತುಪ್ಪದ ವೆಂಕಟಪ್ಪ ಶ್ರೀರಂಗಪಟ್ಟಣದ ಪ್ರಸನ್ನ ವೆಂಕಟರಮಣ ದೇವಾಲಯದ ಮುಂದಿನ "ಶಿಲಾಮಂಟಪಗಳು ಭಾವಿಸಹಾ" ಕಟ್ಟಿಸಿದ.

ದೇವಾಲಯಗಳ ಜೀರ್ಣೋದ್ಧಾರಕ್ಕೆ ಸಂಬಂಧಿಸಿದಂತೆ ಅನೇಕ ಉದಾಹರಣೆಗಳು ಉಪಲಬ್ಧವಾಗಿವೆ. ಕ್ರಿ.ಶ.೧೧೩೪ರಲ್ಲಿ ಹೊಯ್ಸಳ ಅರಸಿ ಬಮ್ಮಲದೇವಿ ನಾಗಮಂಗಲದ ಶಂಕರನಾರಾಯಣ ದೇವಾಲಯದ ಜೀರ್ಣೋದ್ಧಾರವನ್ನು ಮಾಡಿಸಿ, ದೇವರ ಸೇವೆಗೆ ಗ್ರಾಮದಾನ ನೀಡಿದಳು. ಕ್ರಿ.ಶ. ೧೪೬೫ರಲ್ಲಿ ಅಪ್ಪಯ್ಯ ಮತ್ತು ಇತರರು ಮಳವಳ್ಳಿಯ ಅರ್ಕನಾಥ ದೇವಸ್ಥಾನವನ್ನು 'ಗರ್ಭಗ್ರುಹ ಸುಖನಾಸಿಕ ಮಂಟಪ ಸಿಕರಚೆಪ್ಪುಡಿ ಸಹವಾಗಿ ಕಿತ್ತು' ದುರಸ್ತಿ ಮಾಡಿಸಿದರು. ಕ್ರಿ.ಶ. ೧೮೪೫ರ ಈಚಿನ ಉದಾಹರಣೆಯೊಂದು ನಾಗಮಂಗಲದ ಒಂದು ಶಾಸನದಲ್ಲಿದೆ.

ಹೈದರ್ ಮತ್ತು ಟಿಪ್ಪುವಿನ ಕಾಲದಲ್ಲಿ ಅನೇಕ ಪ್ರಾರ್ಥನಾ ಮಂದಿರಗಳು ನಿರ್ಮಾಣಗೊಂಡವು. "ಶ್ರೀರಂಗಪಟ್ಟಣದಲ್ಲಿ ಗುಂಬಜಿಗೆ ಸೇರಿದ ಸುಮಾರು ಕ್ರಿ.ಶ.೧೭೮೭ರ ಶಾಸನವು ಶ್ರೀರಂಗಪಟ್ಟಣದಲ್ಲಿ ಟಿಪ್ಪುವು ಕಟ್ಟಿಸಿದ ಬೃಹದಾಕಾರವಾದ ಮಸೀದಿಯ ವರ್ಣನೆಯನ್ನು ಮತ್ತು ಅದರ ಕಾಲವನ್ನು ತಿಳಿಸುತ್ತದೆ." ಇದೇ ಊರಿನಲ್ಲಿ ೧೭೮೨ರಲ್ಲಿ ಸುಲೈಮಾನ್ ಮಸೀದಿಯೊಂದನ್ನು ಕಟ್ಟಿಸಿದ.

ಕೋಟೆ ಕಟ್ಟಿದ ಉದಾಹರಣೆಗಳೂ ಇವೆ. ಕ್ರಿ.ಶ.೧೬೩೩ರಲ್ಲಿ ಮುತ್ತಗೆರೆಯಲ್ಲಿ ನಳಮಾರ ಮತ್ತು ಇತರರು ಕಾಡುಕಡಿದು ಬಯಲು ಮಾಡಿ ಕೋಟೆಯನ್ನು ಕಟ್ಟಿಸಿದರು. ೧೮೯೧ರಲ್ಲಿ ಶ್ರೀರಂಗಪಟ್ಟಣದ ಕೋಟೆ ನಿರ್ಮಿತವಾಯಿತೆಂದು ಶ್ರೀರಂಗಪಟ್ಟಣದ ಒಂದು ಶಾಸನ ತಿಳಿಸುತ್ತದೆ.

ಸಾವಿರದ ಮುನ್ನೂರು ವರ್ಷಗಳ ಶಾಸನೇತಿಹಾಸ ಹೊಂದಿರುವ ಮಂಡ್ಯ ಜಿಲ್ಲೆಯಲ್ಲಿ ಅನೇಕ ಅಗ್ರಹಾರಗಳ ಸ್ಥಾಪನೆ ಮತ್ತು ಪುರ-ಪಟ್ಟಣಗಳ ನಿರ್ಮಾಣದ ಕೆಲಸ ನಡೆಯಿತೆಂದು ಗೊತ್ತಾಗುತ್ತದೆ. ಅತ್ಯಂತ ಪ್ರಾಚೀನ ಉಲ್ಲೇಖವೆಂದರೆ ಕ್ರಿ.ಶ. ೭೧೩ರಲ್ಲಿ ಕೆರೆಗೋಡಿಗೆ ಉತ್ತರವಿದ್ದ ಪಲ್ಲವ ತಟಾಕ ಎಂಬ ಅಗ್ರಹಾರದ ಸ್ಥಾಪನೆ. ಎಷ್ಟೋ ಹಳ್ಳಿಗಳು ಹೊಸ ಹೆಸರು ಧರಿಸಿ ಅಗ್ರಹಾರಗಳಾದವು. ಇಂಥ ಸುಮಾರು ಅರವತ್ತು ಅಗ್ರಹಾರಗಳನ್ನು ಶಾಸನಗಲ ಅಧ್ಯಯನದಿಂದ ಪಟ್ಟಿಮಾಡಬಹುದು. ಸಿರಿಯಕಲಸತ್ತಪಾಡಿ ವಾನವನ್ ಮಾದೇವಿ ಚತುರ್ವೇದಿ ಮಂಗಲಾಯಿತು. ಇದು ಈಗಿನ ಬೊಮ್ಮೂರು ಅಗ್ರಹಾರವಿರಬೇಕು. ತೊಣ್ಣೂರು ಯಾದವನಾರಾಯಣ ಚತುರ್ವೇದಿ ಮಂಗಲವಾಯಿತು. ಅರಕೆರೆಗೆ ಸರ್ವನಮಸ್ಯದ ಪಟ್ಟದ ಮಹಾಗ್ರಹಾರ ಸರ್ವಜ್ಞ ಶ್ರೀ ವೀರನರಸಿಂಹಪುರ ಎಂಬ ಹೆಸರು ಬಂತು. ಬಾಳುಗೂರಿಗೆ ಉದ್ಭವವಿಶ್ವನಾಥಪುರ, ಮಾಚನಕಟ್ಟಕ್ಕೆ ಬಿಜ್ಜಲೇಶ್ವರಪುರ, ಹೊಸಹೊಳಲಿಗೆ ರಾಮಸಮುದ್ರ, ಮದ್ದೂರಿಗೆ ನಾರಸಿಂಹ ಚತುರ್ವೇದಿ ಮಂಗಲ, ನಾಗಮಂಗಲಕ್ಕೆ ವೀರಬಲ್ಲಾಳ ಚತುರ್ವೇದಿ ಭಟ್ಟರತ್ನಾಕರ ಅಗ್ರಹಾರ, ಬೆಳ್ಳೂರಿಗೆ ಉದ್ಭವನಾರಸಿಂಹಪುರ. ಗುತ್ತಲಿಗೆ ಮಲ್ಲಿಕಾರ್ಜುನಪುರ ಮತ್ತು ಯಾದವನಾರಾಯಣಪುರ, ಬೆಳಗೊಳಕ್ಕೆ ವಿಷ್ಣುವರ್ಧನ ಪೊಯ್ಸಳ ಚತುರ್ವೇದಿ ಮಂಗಲ, ಶ್ರೀರಂಗಪಟ್ಟಣಕ್ಕೆ ತಿರುವರಂಗನಾರಾಯಣ ಚತುರ್ವೇದಿ ಮಂಗಲ, ಮಂಡ್ಯಕ್ಕೆ ಕೃಷ್ಣರಾಯಪುರ, ದೊಡ್ಡಜಟಕಕ್ಕೆ ಚೆನ್ನಾದೇವಿಪುರ, ಕೌಡ್ಲೆಗೆ ದೇವರಾಜಪುರ, ಕೆಳಗೆರೆಗೆ ವರದರಾಜಪುರ, ಚುಂದನಹಳ್ಳಿಗೆ ವಿರೂಪಾಕ್ಷಪುರ, ಮೇಲುಕೋಟೆಗೆ ತಿರುನಾರಾಯಣಪುರ, ಚಂದಿಗಾಲಕ್ಕೆ ಪ್ರತಾಪದೇವರಾಯಪುರ, ಹೊಸಹಳ್ಳಿಗೆ ಶ್ರೀರಾಮಸೀತಾಪುರ, ಸಿಂದಘಟ್ಟಕ್ಕೆ ಸಂಗಮೇಶ್ವರಪುರ ಇತ್ಯಾದಿ. ಆದರೆ ಬಹುಪಾಲು ಗ್ರಾಮಗಳು ಹಳೆಯ ಹೆಸರನ್ನೇ ಅನತಿಕಾಲದಲ್ಲಿ ಮತ್ತೆ ಧರಿಸಿದವು. ಮಂಡ್ಯ ಕ್ರಿ.ಶ.೧೨೭೬ ರಲ್ಲಿಯೇ ಶ್ರೀಮದನಾದಿಯಗ್ರಹಾರ ಮಂಡೆಯವಾಗಿತ್ತು ಈ ಊರಿನ ಉಲ್ಲೇಖ ನಮಗೆ ೧೨೬೭ ರಲ್ಲಿಯೇ ಕಂಡುಬರುತ್ತದೆ. ಹೊಸ ಹೆಸರೇ ಉಳಿದುಬಂದುದಕ್ಕೆ ಬೈರಾಪುರ ಒಂದು ಉದಾಹರಣೆ. ಅದರ ಹಿಂದಿನ ಹೆಸರು ಬೊಮ್ಮನಾಯಕನಹಳ್ಳಿ ಹರಿಹರಪುರ ಇನ್ನೊಂದು ನಿದರ್ಶನ. ದ್ಯಾವರಹಳ್ಳಿಯ ಪೂರ್ವದ ಹೆಸರು ಮಾಧವ ಚೋಳಯನಹಳ್ಳಿ.

ಕೆಲವು ಹಳ್ಳಿಗಳ ಹಾಗೂ ವ್ಯಕ್ತಿಗಳ ಹೆಸರು ಕೂಡ ಗಮನಿಸಬೇಕಾದುದು. ಕದವಳ್ಳಿ ಎಂಬ ಹೆಸರಿನ ಮೂಲರೂಪ ಕದಂಬೆಹಳ್ಳಿ. ಬೈರಾಪುರದ ಹೆಸರು ಭಯಿರಮೇಶ್ವರಪುರ ಎಂದು, ಪುರಿಗಾಲಿ ಮೂಲತಃ ಪುವಗ್ರಾಮ, ಬಲಮುರಿ ಬಲಂಬುತೀರ್ಥವಾಗಿತ್ತು, ಧನಗೂರು ಧನುರ್, ತಾಯಲೂರು ತೈಲೂರ್, ಅಕ್ಕಿಹೆಬ್ಬಾಳು ಹೆಬ್ಬೊಳಲು, ಕಲ್ಕುಣಿ ಕುಣಿಂಗಿಲವೂರು ಇತ್ಯಾದಿ. ಪಾಂಡವಪುರ ತಾಲ್ಲೂಕಿನಲ್ಲಿರುವ ಹಳೇಬೀಡಿಗೆ ಮೊದಲು ಬನದ ತೊಂಡನೂರು ಎಂಬ ಹೆಸರಿತ್ತು. ಅದು ಹಳೇಬಿಡು ಆಗಿ, ತಿಮ್ಮಸಮುದ್ರವಾಗಿ ಮತ್ತೆ ಹಳೇಬೀಡಾಯಿತು. ಸ್ಥಳನಾಮ ಅಧ್ಯಯನ ಮಾಡುವವರಿಗೆ ಶಾಸನಗಳು ಒಳ್ಳೆಯ ಆಕರಗಳು. ಬೆಳ್ಳುರಮ, ಕೊಳ್ಳಅಯ್ಯ, ಅಯ್ಕಣ, ಬಬ್ಬೆಯ, ಸಿಂಗಾಡಿ, ಐಯೀದ್ಯಕೆ ಮುಂತಾದ ವ್ಯಕ್ತಿನಾಮಗಳೂ ಅಧ್ಯಯನ ಮಾಡಬಹುದು.

ಬಹುಪಾಲು ಶಾಸನಗಳು ವಾಸ್ತವವಾಗಿ ದಾನದತ್ತಿಗಳನ್ನು ನಿರೂಪಿಸುವ ದಾಖಲೆಗಳಾಗಿವೆ. ತೋಟ, ಗದ್ದೆ, ಧನ, ತೆರಿಗೆಗಳ ಆದಾಯ, ಮನೆ, ನಿವೇಶನ, ಗ್ರಾಮ, ಮರ, ಮಠ, ಪೂಜಾ ಮತ್ತು ಅಲಂಕರಣ ವಸ್ತಗಳು. ಪಾತ್ರೆಪಗಡಗಳು ಮುಂತಾದ ರೂಪಗಳಲ್ಲಿ ಈ ದಾನದತ್ತಿಗಳು ನಮೂದಾಗಿವೆ. ದೇವಾಲಯಗಳಿಗೆ ಇಲ್ಲವೆ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ಸಾಮಾನ್ಯವಾಗಿ ದಾನ ನೀಡಿರುವುದನ್ನು ಶಾಸನಗಳು ಉಲ್ಲೇಖಿಸುತ್ತೆ. ಶ್ರೀರಂಗಪಟ್ಟಣ, ಮೇಲುಕೋಟೆ, ತೊಣ್ಣೂರು, ಮಾರೆಹಳ್ಳಿ, ಬೆಳ್ಳೂರು, ಬಸರಾಳು ಮುಂತಾದ ಸ್ಥಳಗಳಲ್ಲಿ ಇರುವ ದೇವಾಲಯಗಳಿಗೆ ಮಾತ್ರವಲ್ಲದೆ, ಪಕ್ಕದ ಜಿಲ್ಲೆಗಳಿಗೆ ಸೇರಿದ ತಲಕಾಡು, ನಂಜನಗೂಡು, ಹಳೇಬಿಡು, ಚಾಮುಂಡಿಬೆಟ್ಟಗಳಲ್ಲಿನ ದೇವಸ್ಥಾನಗಳಿಗೂ ದಾನವಿತ್ತ ನಿದರ್ಶನಗಳಿವೆ. ಮಾತ್ರವಲ್ಲ, ದೂರದೂರಿನ ಮಂದಿರಕ್ಕೂ ದತ್ತಿಬಿಟ್ಟುದುಂಟು. ಕಾಂಚೀಪುರ ಅಲ್ಲಾಳ ಪೆರುಮಾಳುದೇವರಿಗೆ ಶ್ರೀಕರಣದ ಕಲಿಯಣ ಭೂದಾನ ನೀಡಿದ. ವಿಷ್ಣುವರ್ದನನ ಸೇನಾನಿ ಗಂಗರಾಜ ಅರಸನಿಂದ ತಿಪ್ಪೂರು ಗ್ರಾಮವನ್ನು ಪಡೆದು ಜಿನಾರ್ಚನೆಗಾಗಿ ಮೇಘಚಂದ್ರಸಿದ್ಧಾಂತದೇವರಿಗೆ ನೀಡಿದ. ಕ್ರಿ.ಶ. ೯–೧೦ನೆಯ ಶತಮಾನದ ರಾವಂದೂರು ಶಾಸನದಲ್ಲಿ ಅಸವಯ್ಯ ಮತ್ತು ಇತರರು 'ಬಿತ್ತುವಟ್ಟ'ವಾಗಿ ಭೂದಾನ ನೀಡಿದ ವಿಷಯವನ್ನು ನಿರೂಪಿಸಿದೆ. ಕೆಲ್ಲಬಸದಿಗೆ ಗಂಗ ಅರಸರು ಅಕ್ಕಿ ಹಾಗೂ ತುಪ್ಪ ನೀಡಿದುದು ಕುತೂಹಲಕರ ಸಂಗತಿ. ಹೊಯ್ಸಳ ವಿನಯಾದಿತ್ಯ ತೊಳಂಚೆಯ ದೇವರಿಗೆ ತೆರಿಗೆಗಳ ಆದಾಯವನ್ನು ನೀಡಿದ. ಭೂಮಿಯನ್ನು ಕೊಂಡು ಅಥವಾ ಮಾರಿ ದಾನ ನೀಡಿದ ಘಟನೆಗಳನ್ನೂ ಉಲ್ಲೇಖಿಸಬಹುದು. ಕ್ರಿ.ಶ.೧೧೭೫ರಲ್ಲಿ ಶ್ರೀಕರಣದ ಕಲಿಯಣ ಎಂಬಾತನಿಂದ ಭೂಮಿಯನ್ನು ಕೊಂಡುಕೊಂಡ ಎರೆಯಣ ಅದನ್ನು ಕ್ಯಾತನಹಳ್ಳಿಯ ಕೊಡೆಹಾಳಬಸದಿಗೆ ದಾನವಿತ್ತ. ಕ್ರಿ.ಶ.೧೧೯೬ರಲ್ಲಿ ಅಣ್ಣುವಣ್ಣನ್ ೫೫ ಹೊನ್ನಿಗೆ ತನಗೆ ಸೇರಿದ ನಿವೇಶನದಲ್ಲಿ ಅರ್ಧಭಾಗವನ್ನು ಮಾರಿ ತೊಣ್ಣೂರಿನ ಲಕ್ಷ್ಮೀನಾರಾಯಣ ದೇವರ ನಂದಾದೀಪ

ಸೇವೆಗೆ ಧನದಾನ ನೀಡಿದ. ವರಂತರುಂ ಪೆರುಮಾನ್ ಶ್ರೀರಂಗಪಟ್ಟಣದ ಭಟ್ಟರಿಂದ ಗ್ರಾಮವೊಂದನ್ನು ಕೊಂಡು ದಾನವಿತ್ತ. ದೇವರ ವಿವಿಧ ತೆರನ ಪೂಜೆಸೇವೆಗಳಿಗೆ ಹಾಗೂ ದೇವಾಲಯದ ಸೇವೆಯಲ್ಲಿರುವ ವರ್ಗದವರಿಗೆ ಈ ದಾನದತ್ತಿಗಳು ಸಲ್ಲುತ್ತಿದ್ದವು. ಐಂದ್ರಪರ್ವ, ಪಂಚಿಕೇಶ್ವರ, ಆರಣಪೂಜೆ, ಚೈತ್ರಪವಿತ್ರ, ಧರ್ಮಕೃತಿಗಳ ಪಠಣ–ಪಾರಾಯಣ, ಬಾಲಶಿಕ್ಷೆ, ದೇವಾಲಯದ ಜೀರ್ಣೋದ್ಧಾರ ಮತ್ತು ವಿವಿಧ ಉತ್ಸವಗಳು, ಸತ್ರ ಮುಂತಾದುವುಗಳಿಗಾಗಿ ದತ್ತಿಬಿಟ್ಟ ಉಲ್ಲೇಖ ಶಾಸನಗಳಲ್ಲಿ ಕಂಡುಬರುತ್ತದೆ. ದೇವಾಲಯ ಆ ಕಾಲದ ಸಾಂಸ್ಕೃತಿಕ ಕೇಂದ್ರ ಕೂಡ. ಧರ್ಮ ಭಾವನೆಯ ಜೊತೆಗೆ ಅನೇಕರಿಗೆ ಜೀವನೋಪಾಯ ಕಲ್ಪಿಸಿಕೊಟ್ಟುದೂ ಗಮನಾರ್ಹ. ಉದಾಹರಣೆಗೆ ಕ್ರಿ.ಶ.೧೨೩೭ರ ಒಂದು ಶಾಸನವನ್ನು ನೋಡಬಹುದು. ದೇವಾಲಯದ ವಿವಿಧ ಉದ್ಯೋಗಿಗಳಿಗೆ ಸಲ್ಲುವ ಸಂಭಾವನೆ ಇದು. "ಪೂಜಾರಿಗಳಿರ್ವ್ವರಿಗಂ ಗ ೮ ಪರಿಚಾರಕಂಗೆ ಗ ೩ ಭಾಣಸಿಂಗಂಗೆ ಗ ೩ ಹೂದೋಟದ ತೋಟಿಗರಿಗೆ ೩ ದವಸಿಗರಿಗೆ ಗ ೯ ಅಂಗರಿಕಂಗೆ ಗ ೩. ಕುಂಬಾರಂಗೆ ಗ ೧, ದೇವರಾರತಿಯ ಸೂಳೆಯರಿಗೆ ಗ ೩" ಹಾಗೆಯೇ ಸತ್ರದಲ್ಲಿ ಹತ್ತುಜನರ ಭೋಜನಕ್ಕಾಗಿ ವರ್ಷಕ್ಕೆ ಬೇಕಾದ ಆಹಾರಸಾಮಗ್ರಿಗಳಿಗೆ ನೀಡಿದುದು. ವುಪ್ಪುಮಾನ ೧ ದರ ಲೆಕ್ಕದೆ ಪ ೪ ಮೆಳಸು ಸೊಲ್ಲಗೆಯ ಲೆಕ್ಕದೆ ಪ ೬ ಎಣ್ಣೆ ಯಿಂಮಾನರೆಯ ಲೆಕ್ಕದೆ ಗ ೨ ಆ ತೊಗರಿಯಬೇಳೆ ಬಳ್ಳ ೧ ಮಾನ ೧ ದರ ಲೆಕ್ಕದೆ ಗ ೧ ಪ ೫ ಸತ್ರದ ಬಾಣಸಿಗಂಗೆ ಗ ೩ ಇತ್ಯಾದಿ. ವಿಜಯನಗರದ ಅರಸರು ಷೋಡಶ ದಾನಗಳನ್ನು ಮಾಡುವ ಸಂದರ್ಭದಲ್ಲಿ ಹಲವು ವ್ಯಕ್ತಿಗಳಿಗೆ ಭೂದಾನ ನೀಡಿದ ವಿಷಯ ಆ ಕಾಲದ ಅನೇಕ ತಾಮ್ರಾಶಾಸನಗಳಲ್ಲಿ ನಿರೂಪಿತವಾಗಿದೆ. ಕ್ರಿ.ಶ.೧೫೧೬ರಲ್ಲಿ ಕೃಷ್ಣದೇವರಾಯ ಬ್ರಹ್ಮಣ್ಯತೀರ್ಥರ ಶಿಷ್ಯ ವ್ಯಾಸತೀರ್ಥರಿಗೆ ಗ್ರಾಮದಾನ ಮಾಡಿದ. ಕರೆಕಟ್ಟಿಸಿದುದಕ್ಕೆ ಕೆರೆಗೊಡಗಿಯಾಗಿ ಪಲ್ಲಕ್ಕಿ ಅಥವಾ ದಂಡಿಗೆಯ ಉಂಬಳಿಯಾಗಿ ಏಕಸ್ವಾಮ್ಯವಾಗಿ ಸಂಭಾವನೆಗೆ, ಉಂಬಳಿಕಾಣಾಚಿಯಾಗಿ ದಾನಬಿಟ್ಟ ನಿದರ್ಶಗಳು ಸಾಕಷ್ಟಿವೆ. ಅರಸ ಅಧಿಕಾರಗಳ ಪುಣ್ಯಪ್ರಾಪ್ತಿಗೆ ಕೂಡ ದತ್ತಿಗಳನ್ನು ಬಿಟ್ಟಿದೆ. ಕ್ರಿ.ಶ.೧೩೧೧ರಲ್ಲಿ ಹರಿಹರಭಟ್ಟೋಪಾಧ್ಯಾರು ತನ್ನ ಮಗನಿಗೆ ಅರಸನ ಹೆಸರಿಟ್ಟು ಅರಸನಿಂದ ದಾನ ಪಡೆದ ಭೂಮಿಯನ್ನು ೧೨೬ ಮಹಾಜನರಿಗೆ ಹಂಚಿದ. ಮಗುವಿನ 'ಬಾಯ್ಬೆಣ್ಣೆ'ಗೆ ದಾನವಿತ್ತ ಅಪರೂಪದ ಸಂಗತಿಯೂ ಶಾಸನಗಳಲ್ಲಿ ನಿರೂಪಿತವಾಗಿದೆ. ಟಿಪ್ಪು ಮೇಲುಕೋಟೆಯ ದೇವಾಲಯಗಳಿಗೆ ಆನೆಗಳನ್ನು ಕೊಡುಗೆಯಾಗಿ ಕಳಿಸಿಕೊಟ್ಟ. ನಾಚಿಯಾರಮ್ಮ ಎಂಬಾಕೆ ಶ್ರೀವೈಷ್ಣವರಿಗೆ ದತ್ತಿಕೊಟ್ಟರೂ ಅವರು ಹನ್ನೆರಡು ವರ್ಷಗಳ ಕಾಲ ವಿಕ್ರಮ ಮಾಡಬಾರದೆಂಬ ನಿಬಂಧನೆಯನ್ನೂ ವಿಧಿಸಿದಳು. ಕೆಸವಿನಕಟ್ಟೆ ಮತ್ತು ಹಲಸಿನಹಳ್ಳಿ ಗ್ರಾಮಗಳು ಹಾಳಾಗಿರಲು ಅವನ್ನು 'ರೂಪುಮಾಡಿಕೊಂಡು' ಬರಲು ಭೂದಾನ ನೀಡಲಾಯಿತು.

ಸಶ್ಯಾಲಪುರದ ಹೊಲವೊಂದರಲ್ಲಿ ಬಿದ್ದಿರುವ ಕಲ್ಲು. ಸಶ್ಯಾಲಪುರದ ಪ್ರಾರಂಭದಲ್ಲಿ ಬಸವೇಶ್ವರ ದೇವಸ್ಥಾನದ ಬಳಿ ಬೇಲಿಯ ಒಳಗೆ ಇರುವ ಈ ಶಾಸನವು ಒಂದು ಪ್ರಮುಖ ಶಾಸನವಾಗಿದ್ದು, ಮಳವಳ್ಳಿಯ ಗಂಗಾಧರಯ್ಯ ಎಂಬಾತ ಮಳವಳ್ಳಿ ಪಟ್ಟಣದಲ್ಲಿ ಗಂಗಾಧರೇಶ್ವರ ಸ್ವಾಮಿ ದೇಗುಲವನ್ನು ನಿರ್ಮಿಸಿ, ಆ ದೇವಾಲಯದ ನಿರ್ವಹಣೆಗಾಗಿ ಒಂದು ಗ್ರಾಮವನ್ನು ದತ್ತಿ ನೀಡಬೇಕೆಂದು ಮೈಸೂರಿನ ದೊರೆಗಳಲ್ಲಿ ಕೋರಲಾಗಿ, ಮೈಸೂರಿನ ದೊರೆಗಳಾದ ದೇವರಾಜ ಭೂಪಾಲರು ತಮ್ಮ ಆತ್ಮಸಂತೋಷದಿಂದ ಸಶ್ಯಾಲಪುರ ಗ್ರಾಮವನ್ನು ಮಳವಳ್ಳಿಯ ಶ್ರೀ ಗಂಗಾಧರೇಶ್ವರ ದೇಗುಲದ ಪಡಿತರ ಹಾಗೂ ದೀಪಾರಾಧನೆಗಾಗಿ ದಾನವಾಗಿ ನೀಡುತ್ತಾರೆ. ಶಾಸನದ ಕಾಲ ಕ್ರಿ.ಶ. ೨೧ ಅಕ್ಟೋಬರ್೧೯೭೬. ಸಶ್ಯಾಲಪುರದ ನಂಜುಂಡಪ್ಪನವರ ಮನೆ ಆವರಣದಲ್ಲಿ ಈ ಶಾಸನ ಇದೆ. ಈ ಊರಿನಲ್ಲಿ ಒಂದು ಕೆರೆ ಇದ್ದು, ಇದನ್ನು ಗಂಗಾಧರಯ್ಯನ ಕೆರೆ ಎನ್ನುತ್ತಾರೆ. ಈ ಶಾಸನದಲ್ಲಿರುವ ದಾನದ ವಿವರವನ್ನು ತಿಳಿಸುವ ಒಂದು ಶಾಸನ ಸದರಿ ದೇವಾಲಯದಲ್ಲೂ ಇರುತ್ತದೆ.

ರಾವಂದೂರು ಗ್ರಾಮದ ಮುಂದೆ ಗದ್ದೆಯಲ್ಲಿರುವ ಕಲ್ಲು ಎರಡು ಶಾಸನಗಳನ್ನು ಹೊಂದಿದ್ದು, ಬೇರೆ ಬೇರೆ ಕಾಲಕ್ಕೆ ಸೇರಿದ್ದೆಂದು ಊಹಿಸಬಹುದು. ಮೇಲಿನ ಶಾಸನವು ಕ್ರಿ.ಶ.೮ನೇ ಶತಮಾನಕ್ಕೆ ಸೇರಿದ್ದು, ಶಾಸನದ ಪಾಠ ಸ್ಪಷ್ಟವಾಗಿರುವುದಿಲ್ಲ. ಆದರೆ ಅದೇ ಕಲ್ಲನ್ನು ತಲೆಕೆಳಗಾಗಿ ಬಳಸಿ ಮತ್ತೊಂದು ಶಾಸನವನ್ನು ರಚಿಸಲಾಗಿದೆ. ಇದರ ಕಾಲ ೯-೧೦ನೇ ಶತಮಾನ ಎಂದು ಊಹಿಸಬಹುದು. ಅಸವಯ್ಯ, ದುಗ್ಗಯ್ಯ ಹಾಗೂ ನುಲಂಬ ಎಂಬುವರು ಬಿತ್ತುವಟ್ಟಕ್ಕೆ ನೆಟ್ಟ ಕಲ್ಲಿದು. ಬಿತ್ತುವಟ್ಟ ಎಂದರೆ, ಬಿತ್ತನೆ ಮಾಡಲ್ಪಡುವ ಭೂಮಿಗೆ ಅಂದರೆ, ಸಾಗುವಳಿ ಮಾಡುವ ಭೂಮಿಗೆ ಹಾಕುವ ತೆರಿಗೆ. ಈ ದತ್ತಿಯ ಕ್ರಮವನ್ನು ಉಲ್ಲಂಘಿಸಿದವರು ಕಾಶಿಯಲ್ಲಿ ಗೋವನ್ನು ಕೊಂದ ಪಾಪಕ್ಕೆ ತುತ್ತಾಗುತ್ತಾರೆ ಎಂದು ಶಾಸನದಲ್ಲಿ ಉಲ್ಲೇಖಿಸಲಾಗಿದೆ.

ಹುಸ್ಕೂರಿನ ಆಂಜನೇಯ ದೇವಸ್ಥಾನದ ಉತ್ತರ ಗೋಡೆಗೆ ಸೇರಿದಂತೆ ಮನೆಯೊಂದರ ಗೋಡೆಲೆಯಲ್ಲಿರುವ ಶಾಸನವು ಕ್ರಿ.ಶ.೧೪೪೦ಕ್ಕೆ ಸೇರಿದ ಶಾಸನವಾಗಿದ್ದು, ಸಂಗಮ ವಂಶದ ದೇರಾಯನ ಆಳ್ವಿಕೆಯ ಸಂದರ್ಭದ ಶಾಸನವಾಗಿದೆ. ಈ ಶಾಸನದ ಪ್ರಕಾರ ಕರಿನಾಗಪ್ಪನವರ ಮಗ ವೀರಣ್ಣಗೌಡನು ಬಸವರಾಜದೇವನ ಮೂರ್ತಿ ಪ್ರತಿಷ್ಠಾಪಿಸಿ, ಹೊಲ ಮತ್ತು ಗದ್ದೆಯನ್ನು ದತ್ತಿ ನೀಡಿದ ಉಲ್ಲೇಖವಿದೆ. ಹಾಗೂ ಈ ಶಾಸನವನ್ನು ಬರೆದಾತ ನಂಬಿಯೋಜ ಈ ಶಾಸನದಲ್ಲಿ ಹುಸ್ಕೂರನ್ನು 'ಹುಸುಗೂರು' ಎಂದು ಕರೆಯಲಾಗಿದೆ. ಹುಸುಗೂರು ಕಾಲಕ್ರಮೇಣ ಹುಸ್ಕೂರು ಆಗಿದೆ.

ಇ.ಸಿ.೪೪ ನಡಗಲ್‌ಪುರದ ಬಸವೇಶ್ವರ ದೇವಾಲಯದ ದಕ್ಷಿಣಕ್ಕಿರುವ ಕಲ್ಲು ಒಂದು ದತ್ತಿ ಶಾಸನವಾಗಿದ್ದು, ಘಂತಣ್ಣ ಮತ್ತು ಗಂಗಣ್ಣನವರಿಗೆ ತಿಪ್ಪಯ್ಯ ಎಂಬಾತ ನೀಡಿದ ದತ್ತಿಯ ಉಲ್ಲೇಖವಿದೆ. ಘಂತಂಣ್ಣ ಮತ್ತು ಗಂಗಣ್ಣನವರು ತಲಕಾಡಿನ ಏಳುಪುರ ಮತ್ತು ಪಂಚಮಠದ ಸ್ಥಾನಪತಿಗಳಾಗಿರುತ್ತಾರೆ. ಈ ಶಾಸನದ ವೈಶಿಷ್ಟ್ಯವೆಂದರೆ ಸ್ವತ್ತಿನ ಹಕ್ಕಿಗೆ ಸಂಬಂಧಿಸಿದ್ದು. ಅಂದರೆ ಅಣ್ಣನ ಆಸ್ತಿ ತಮ್ಮನದೆಂದೂ, ತಮ್ಮನ ಆಸ್ತಿ ಅಣ್ಣನದೆಂದೂ ಪರಿಗಣಿಸಲಾಗುವುದು ಎಂದು ಶಾಸನದಲ್ಲಿ ತಿಳಿಸಲಾಗಿದೆ. ಅಂದರೆ ಅಣ್ಣನ ಆಸ್ತಿಗೆ ತಮ್ಮ ವಾರಸುದಾರನೆಂದೂ, ತಮ್ಮನ ಆಸ್ತಿಗೆ ಅಣ್ಣ ವಾರಸುದಾರನೆಂದೂ ತಿಳಿಸಲಾಗಿದೆ. ಅಣ್ಣ ಅಥವಾ ತಮ್ಮನಿಲ್ಲದಿದ್ದರೆ ಆ ಸ್ವತ್ತು ಕೆರೆಗೆ ಅಥವಾ ಶಿವಾಲಯಕ್ಕೆ ಸೇರಬೇಕು ಎಂದು ತಿಳಿಸಲಾಗಿದೆ. ಶಾಸನದ ಕಾಲ ಕ್ರಿ.ಶ. ೧೫೧೦. ಈ ಶಾಸನದಲ್ಲೂ ತಲಕಾಡನ್ನು 'ರಾಜರಾಜಪುರ' ಎಂದು ಕರೆಯಲಾಗಿದೆ.

ದೇವಸ್ಥಾನದ ಬಾಗಿಲಿನ ದಕ್ಷಿಣಕ್ಕೆ ನೆಟ್ಟ ಕಲ್ಲು ಹೊಯ್ಸಳ ೨ನೇ ವೀರಬಲ್ಲಾಳನ ಆಳ್ವಿಕೆಯ ಸಂದರ್ಭದಲ್ಲಿ ಸ್ಥಳೀಯವಾಗಿ ಕೋಮರ ಲಕ್ಕೇಯ ದಂಡನಾಯಕನ ಆಳ್ವಿಕೆಯ ಸಮಯದಲ್ಲಿ ಪಂಡರಿದೇವ ಎಂಬಾತ ಸಿಂಗಪೆರುಮಾಳು ದೇವರಿಗೆ ನೀಡಿದ ದತ್ತಿಯ ವಿಷಯ ಈ ಶಾಸನದಲ್ಲಿದೆ. ಈ ಶಾಸನದಿಂದ ತಿಳಿದು ಬರುವ ಅಂಶವೆಂದರೆ ಆ ಸಮಯದಲ್ಲಿ ಅಡಕೆ, ಮೆಣಸು, ನೂಲು, ಕಲ್ಲು ಮತ್ತು ಉಪ್ಪಿಗೆ ಸುಂಕವಿತ್ತು ಎನ್ನು ಅಂಶ. ಶಾಸನದ ಕಾಲ ೧೨-೧೩ನೇ ಶತಮಾನ.

ಕಿರಗಸೂರಿನ ಮನೆಯೊಂದರ ಬಳಿಯಲ್ಲಿ ಬಿದ್ದಿರುವ ಕಲ್ಲು ಕ್ರಿ.ಶ. ೧೪೪೦ರ ಶಾಸನವಾಗಿದ್ದು, ಕಿರಗಸೂರಿನಿಂದ ಸಂದಾಯವಾಗಬೇಕಾಗಿದ್ದ ತೆರಿಗೆ ಬಾಕಿ ಹಣವನ್ನು ತಲಕಾಡಿನ ವೈದ್ಯನಾಥ ದೇವಾಲಯದ ನಿರ್ವಹಣೆಗೆ ವಿಜಯನಗರದ ದೊರೆ ಪ್ರತಾಪ ದೇವರಾಯನಿಗೆ (ದೇವರಾಯ-೨) ಅಭ್ಯುದಯವಾಗಲೆಂದು ಮಹಾ ಪ್ರಧಾನ ಲಕ್ಕಣ್ಣ ದಂಡನಾಯಕ ನೀಡಿದ ವಿವರಗಳಿವೆ. ಈ ಶಾಸನದಲ್ಲಿ ತಲಕಾಡನ್ನು 'ಗಜಾರಣ್ಯ ಕ್ಷೇತ್ರ' ಎಂದು ಕರೆಯಲಾಗಿದೆ. ಹಾಗೂ ಈ ಶಾಸನದಲ್ಲಿ ಆಗ ರೂಢಿಯಲ್ಲಿದ್ದ ಸುಂಕಗಲ ವಿವರಗಳನ್ನು ನೀಡುತ್ತದೆ. ಉದಾಹರಣೆಗೆ ಮಗ್ಗಗಳ ಮೇಲಿನ ಸುಂಕ, ಆಲೆಮನೆ ಗಾಣದ ಮೇಲಿನ ಸುಂಕ, ಎಣ್ಣೆ ಗಾಣಗಳ ಮೇಲಿನ ಸುಂಕಗಳ ವಿವರಗಳನ್ನು ಈ ಶಾಸನ ನೀಡುತ್ತದೆ. ತಿಗಡಹಳ್ಳಿ ಮಾರಿ ಗುಡಿಯ ಬಳಿ ಇರುವ ಕಲ್ಲು ಕ್ರಿ.ಶ.೧೩೩೭ಕ್ಕೆ ಸೇರಿದ ಶಾಸನವಾಗಿದ್ದು, ಹೊಯ್ಸಳ ದೊರೆ ಮೂರನೆಯ ವೀರಬಲ್ಲಾಳನ ಆಳ್ವಿಕೆಯನ್ನು ದೃಢಪಡಿಸುತ್ತದೆ. ಈ ಶಾಸನವು ತಲಕಾಡಿನ ಸ್ಥಾನಪತಿಯಾದ ಮಾಗಪಂಡಿತನ ಮಗ ಮಲ್ಲಪ್ಪನಿಂದ ಬರಬೇಕಾದ ತೆರಿಗೆಯ ವಿವರವನ್ನು ತಿಳಿಸುತ್ತದೆ. ಹಾಗು ಚಂದ್ರನಾಥ

ಬಸದಿಗೆ ಹಣ ಹಾಗೂ ಜಮೀನನ್ನು ದತ್ತಿ ನೀಡಿದ ವಿವರವನ್ನು ಈ ಶಾಸನ ನೀಡುತ್ತದೆ. ಕಂಚಿಗಹಳ್ಳಿಗೆ ಸೇರಿದ ಬೀರುಗಹಳ್ಳಿಯನ್ನು ಪುರವಾಗಿ ಪರಿವರ್ತಿಸಿದ ವಿವರವನ್ನು ಈ ಶಾಸನ ನೀಡುತ್ತದೆ.

ನಾಗಮಂಗಲ ಪಟ್ಟಣದಲ್ಲಿ ಇಲ್ಲಿಯವರೆಗೆ ಸುಮಾರು ೧೩ ಶಾಸನಗಳನ್ನು ಪತ್ತೆ ಹಚ್ಚಲಾಗಿದೆ. ಇದರಲ್ಲಿ ನಾಗಮಂಲದ ಸೌಮ್ಯಕೇಶವ ಸ್ವಾಮಿ ದೇವಸ್ಥಾನದ ಗರ್ಭಗುಡಿಯ ಬಲ ಗೋಡೆಯ ಮೇಲಿರುವ ಶಾಸನವು ಖರಸಂವತ್ಸರದ ಆಶಾಡ ಶುಕ್ಲ ೧೦ ಗುರುವಾರ ಅಂದರೆ ಕ್ರಿ.ಶ.೧೧೭೧ ಜೂನ್ ೧೦ನೇ ತಾರೀಖಿಗೆ ಸೇರಿದ ಶಾಸನವಾಗಿದೆ. ಇದೊಂದು ದತ್ತಿ ಶಾಸನವಾಗಿದ್ದು

ನಾಗಮಂಗಲದ ಚನ್ನಕೇಶವ ದೇವಾಲಯಕ್ಕೆ (ಈಗಿನ ಸೌಮ್ಯಕೇಶವ ದೇವಾಲಯ) ನೀಡಿದ ದತ್ತಿ ಜಮೀನಿನ ವಿಷಯವನ್ನು ಒಳಗೊಂಡಿದೆ. ಈ ಶಾಸನದ ಗಮನಾರ್ಹ ಅಂಶಗಳೆಂದರೆ ನಾಗಮಂಗಲದ ಈಗಿನ ಶ್ರೀ ಸೌಮ್ಯಕೇಶವ ದೇವಾಲಯವನ್ನು ಶ್ರೀ ಚನ್ನದೇಶವ ದೇವಾಲಯ ಎಂದು ಕರೆದಿರುವುದು. ಇದರಿಂದಾಗಿ ಈಗಿನ ನಮ್ಮ ಶ್ರೀ ಸೌಮ್ಯಕೇಶವ ದೇವಾಲಯವನ್ನು ಶ್ರೀ ಚನ್ನಕೇಶವ ದೇವಾಲಯವೆಂದು ಕರೆಯಲಾಗುತ್ತಿತ್ತು. ಹಾಗೂ ಈ ಶಾಸನದ ಪ್ರಕಾರ ನಾಗಮಂಗಲವು ಒಂದು ಅಗ್ರಹಾರವಾಗಿದ್ದು, ಇದನ್ನು ಶ್ರೀ ವೀರಬಲ್ಲಾಳ ಚತುರ್ವೇದಿ ಭಟ್ಟಾರತ್ನಾಕರ ಅಗ್ರಹಾರ ಎಂದು ಕರೆಯಲಾಗುತ್ತಿತ್ತು. ಅಗ್ರಹಾರಗಳೆಂದರೆ, ಬ್ರಾಹ್ಮಣರಿಗೆ ದಾನವಾಗಿ ಕೊಟ್ಟ ಗ್ರಾಮಗಳು. ಈ ರೀತಿಯ ಗ್ರಾಮಗಳಲ್ಲಿ ಬ್ರಾಹ್ಮಣರು ವಾಸವಾಗಿದ್ದು, ವೇದಾಧ್ಯಯನ ಮಾಡುತ್ತ ಅವುಗಳನ್ನು ವಿದ್ಯಾರ್ಥಿಗಳಿಗೆ ಕಲಿಸುತ್ತಿದ್ದರು. ಅಗ್ರಹಾರಗಳಲ್ಲಿ ಊರಿನ ಮಧ್ಯದಲ್ಲಿ ಪೂರ್ವಾಭಿಮುಖವಾಗಿ ಒಂದು ವಿಷ್ಣುದೇವಾಲಯ ಅದರ ಈಶಾನ್ಯಕ್ಕೆ ಶಿವ ದೇವಾಲಯ ಮತ್ತು ಉತ್ತರಕ್ಕೆ ಒಂದು ಕೆರೆ ಇರುತ್ತಿತ್ತು. ಇದೇ ಪ್ರಕಾರ ನಾಗಮಂಗಲದಲ್ಲಿ ಊರಿನ ಮಧ್ಯೆ ಪೂರ್ವಾಭಿಮುಖವಾಗಿ ಶ್ರೀ ಸೌಮ್ಯಕೇಶವ ದೇವಾಲಯವಿದ್ದು, ಅದರ ಈಶಾನ್ಯಕ್ಕೆ ಈಗಿನ ಭುವನೇಶ್ವರ ಗುಡಿ ಇದ್ದು, ಉತ್ತರದಲ್ಲಿ ಹಿರಿಕೆರೆ ಇದೆ.[೯]

ಈ ಶಾಸನದ ಪ್ರಕಾರ ನಾಗಮಂಗಲದ ಶ್ರೀ ಚನ್ನಕೇಶವ ದೇವರಿಗೆ ಈಗಿನ ಹಾಲ್ತಿ ಗ್ರಾಮ, ಮೊದಲಹಳ್ಳಿ, ತುಪ್ಪದಮಡು, ಅರಸೆಟ್ಟಿಯಹಳ್ಳಿ, ಹೂವಿನಹಳ್ಳಿ ಹೊನ್ನಗೊಂಡನಹಳ್ಳಿಗಳನ್ನು ಒಳಗೊಂಡ ಗ್ರಾಮಗಳು ಸೇರಿದ್ದವು.

ಅದೇ ದೇವಸ್ಥಾನದ ರಂಗಮಂಟಪದಲ್ಲಿ ಉತ್ತರ ದಿಕ್ಕಿನಿಂದ ಎರಡನೆಯ ಸಾಲಿನ ಎರಡನೆಯ ಕಂಬದ ಬುಡದಲ್ಲಿರುವ ಶಾಸನವು ಕ್ರಿ.ಶ.೧೩೯ನೇ ವರ್ಷಕ್ಕೆ ಸೇರಿದ ಶಾಸನವಾಗಿದೆ. ಇದರ ಪ್ರಕಾರ ನಾಗಮಂಗಲದಲ್ಲಿ ಶ್ರೀ ಚನ್ನಕೇಶವ ದೇವರಿಗೆ ಕರದಾಳಿನ ಮಲ್ಲಿದೇವ ಮತ್ತು ಆತನ ಪತ್ನಿ ಚನ್ನದೇವಿಯವರು ಹಾಲ್ತಿ ಗ್ರಾಮದ ಜಮೀನನ್ನು ದತ್ತಿ ನೀಡಿರುವ ಉಲ್ಲೇಖವಿದೆ. ಈ ಶಾಸನದ ಪ್ರಕಾರ ಕ್ರಿ.ಶ.೧೩೯ರ ವರೆಪಿಗೂ ಶ್ರೀ ಸೌಮ್ಯಕೇಶವ ದೇವರ ಹೆಸರು ಶ್ರೀ ಚನ್ನಕೇಶವ ಎಂದಿದ್ದ ಅಂಶ ತಿಳಿದುಬರುತ್ತದೆ. ಶ್ರೀ ಸೌಮ್ಯಕೇಶವ ಸ್ವಾಮಿ ದೇವಾಲಯದಲ್ಲಿ ಈ ದೇವಾಲಯದ ನಿರ್ಮಾಣದ ವಿವರ ನೀಡುವ ಯಾವುದೇ ಶಾಸನ ಇರುವುದಿಲ್ಲ ಆದರೆ, ಭುವನೇಶ್ವರಿ ಗುಡಿಯಲ್ಲಿರುವ ಶಾಸನವು ಇದರ ಬಗ್ಗೆ ಮಾಹಿತಿಯನ್ನು ನೀಡುತ್ತದೆ. ಭುವನೇಶ್ವರಿ ಗುಡಿಯಲ್ಲಿರುವ ಶಾಸನವು ಕ್ರಿ.ಶ.೧೧೩೪ಕ್ಕೆ ಸೇರಿದ ಶಾಸನವಾಗಿದೆ. ಈ ಶಾಸನದ ಪ್ರಕಾರ ಹೊಯ್ಸಳ ದೊರೆ ವಿಷ್ಣುವರ್ಧನನ ಪಟ್ಟದರಾಣಿ ಶಾಂತಲೆಯ ನಿಧನದ ನಂತರ ಪಟ್ಟದ ರಾಣಿಯ ಸ್ಥಾನವನ್ನು ಪಡೆದ ಬೊಮ್ಮಲಾದೇವಿಯ ಕ್ರಿ.ಶ.೧೧೩೪ರಲ್ಲಿ ಶಂಕರನಾರಾಯಣ ದೇವಾಲಯವನ್ನು (ಭುವನೇಶ್ವರಿ ಗುಡಿ) ಜೀರ್ಣೋದ್ಧಾರ ಮಾಡಿಸಿ ಸದರಿ ದೇವಾಲಯಕ್ಕೆ ಅರಿಸಿನಕಟ್ಟೆ ಎಂಬ ಗ್ರಾಮವನ್ನು ದತ್ತಿ ನೀಡುವ ಜೊತೆಯಲ್ಲಿ ನಾಗಮಂಗಲದ ಹಿರಿಕೆರೆಯ ಬಯಲಿನಲ್ಲಿ ಜಮೀನನ್ನು ನೀಡುತ್ತಾಳೆ. ದತ್ತಿಯನ್ನು ಸೂರ್ಯಾಭರಣ ಪಂಡಿತ ಸ್ವೀಕರಿಸುತ್ತಾನೆ. ಬೊಮ್ಮಲಾದೇವಿಯು ಪಲ್ಲವ ವಂಶದ ರಾಜಕುಮಾರಿಯಾಗಿದ್ದ ಗೋವಿಂದದ ಮತ್ತು ಚಾವುಣ್ಡಬ್ಬರಸಿಯ ಮಗಳಾಗಿರುತ್ತಾಳೆ. ಈ ಶಾಸನದ ಪ್ರಕಾರ ಹೊಯ್ಸಳ ಅಗ್ರಹಾರದ ನಗರ ಯೋಜನೆಯ ಪ್ರಕಾರ ಆಲೋಚಿಸಿದರೆ ಕ್ರಿ.ಶ.೧೧೩೪ರ ಬಹಳ ಹಿಂದೆಯೇ ಶ್ರೀ ಸೌಮ್ಯಕೇಶವಸ್ವಾಮಿ ದೇವಾಲಯ ಮತ್ತು ಭುವನೇಶ್ವರಿ ಗುಡಿಗಳನ್ನು ನಿರ್ಮಿಸಲಾಗಿತ್ತು ಎಂದು ಊಹಿಸಬಹುದು. ಈ ಶಾಸನದ ಮತ್ತೊಂದು ಗಮನಾರ್ಹ ಅಂಶ ಎಂದರೆ ನಾಗಮಂಗಲವನ್ನು ಕಲ್ಕುಣಿ ನಾಡಿಗೆ ಸೇರಿದ ಪ್ರದೇಶ ಎಂದು ಹೇಳಲಾಗಿದೆ. ಕಲ್ಕುಣಿ ನಾಡಿನ ಉಲ್ಲೇಖವು ನಾಗಮಂಗಲ ಬಹುತೇಕ ಶಾಸನಗಳಲ್ಲಿ ಕಂಡುಬರುತ್ತದೆ. ಆದರೆ ಕಲ್ಕುಣಿ ನಾಡಿನ ವ್ಯಾಪ್ತಿ ಎಷ್ಟೆಂದು ತಿಳಿದು ಬರುವುದಿಲ್ಲ.

ನಾಗಮಂಗಲದ ವೀರಭದ್ರಸ್ವಾಮಿ ದೇವಾಲಯದಲ್ಲಿ ಒಟ್ಟು ಮೂರು ಶಾಸನಗಳಿದ್ದು, ಅವುಗಳಲ್ಲಿ ಎರಡು ಪ್ರಮುಖ ಶಾಸನಗಳಾಗಿವೆ. ವೀರಭದ್ರಸ್ವಾಮಿ ದೇವಸ್ಥಾನದೊಳಗೆ ನವರಂಗ ಮಂಟಪದ ಬಾಗಿಲಿನ ಬಲಭಾಗದಲ್ಲಿ ಇರುವ ಶಾಸನವು ಕ್ರಿ.ಶ.೧೫೧೧ನೇ ಇಸವಿಗೆ ಸೇರಿದ ಶಾಸನವಾಗಿದೆ. ವಿಜಯನಗರದ ದೊರೆ ಶ್ರೀಕೃಷ್ಣದೇವರಾಯನು ಆಡಳಿತ ನಡೆಸುತ್ತಿದ್ದ ಸಂದರ್ಭದಲ್ಲಿ ಆತನ ಅರಮನೆಯ ಬೇಹಾರಿ (ಮ್ಯಾನೇಜರ್) ಗುಂಮಳಾಪುರದ ಅಕ್ಕನ ಚೆನ್ನಿಸೆಟ್ಟಿಯ ಮಗ ಹೊನ್ನಿಸೆಟ್ಟಿಯವರು ಶ್ರೀ ವೀರಭದ್ರಸ್ವಾಮಿದೇವರ ರಂಗಮಂಟಪದ

[illegible]

ಮುಂಭಾಗದಲ್ಲಿ ಗಂಧಗೋಡಿ ಮಂಟಪವನ್ನು ನಿರ್ಮಿಸಿದ ಉಲ್ಲೇಖವಿದೆ. ಈ ದೇವಾಲಯದ ನವರಂಗ ಮಂಟಪದ ಬಾಗಿಲಿನ ಎಡಭಾಗದಲ್ಲಿರುವ ಕ್ರಿ.ಶ.೧೫೪೯ಕ್ಕೆ ಸೇರಿದ ಶಾಸನದ ಪ್ರಕಾರ ಈ ಹಿಂದೆ ವಸೂಲಾದ ತೆರಿಗೆಯಲ್ಲಿ ಮೊದಲ ೫ ಪಣವನ್ನು ವೀರಭದ್ರನಿಗೆ (ದೇವಾಲಯಕ್ಕೆ) ನೀಡುತ್ತಿದ್ದು, ಇನ್ನು ಮುಂದೆ ವಸೂಲಾದ ಎಲ್ಲ ತೆರಿಗೆಯನ್ನು ದೇವಾಲಯಕ್ಕೆ ನೀಡಬೇಕೆಂದು ಮಹಾಜನರು ತೀರ್ಮಾನಿಸಿದಂತೆ, ಈ ತೆರಿಗೆ ನೀಡಲು ಬಾಲ್ದಳಿ ಸೆಟ್ಟಿಯ ಮಗ ಬೋಕಿಸೆಟ್ಟಿ ಒಪ್ಪಿಕೊಳ್ಳುತ್ತಾನೆ.

ಕೆಳಗೆರೆ ಗ್ರಾಮದ ಮಲ್ಲಿಕಾರ್ಜುನ ದೇವಸ್ಥಾನದ ನವರಂಗದ ಬಾಗಿಲುವಾಡದ ಮೇಲಿರುವ ವಿಜಯನಗರದ ಅರಸರ ಆಳ್ವಿಕೆಯ ಕಾಲದ ಶಾಸನದ ಪ್ರಕಾರ ಕೆಳಗೆರೆಯ ಹಿರಿಯ ಹೊನ್ನೇಯ ನಾಯಕನ ಮಗ ವರದೇಯ ನಾಯಕರು ಶೂದ್ರವಾಡವಾಗಿದ್ದ ಸದರಿ ಗ್ರಾಮದಲ್ಲಿ ಮಲ್ಲಿಕಾರ್ಜುನ ದೇವಾಲಯವನ್ನು ನಿರ್ಮಿಸಿ ಇದ್ದ ಹಳೆಯ ಕೆರೆಯನ್ನು ಜೀರ್ಣೋದ್ಧಾರ ಮಾಡಿಸಿ, ಒಂದು ಹೊಸಕೆರೆಯನ್ನು ನಿರ್ಮಿಸಿ, ಗ್ರಾಮದಲ್ಲಿ ವೇದಾಧ್ಯಯನ ಶಾಲೆಯನ್ನು ತೆರೆದು, ಅಗ್ರಹಾರವನ್ನಾಗಿ ಮಾಡಿ ಗ್ರಾಮಕ್ಕೆ ವರದರಾಜಪುರ ಎಂಬ ಹೆಸರನ್ನು ನೀಡುತ್ತಾನೆ.[೧೦]

ಲಾಳನಕೆರೆಯ ಮಾದೇಶ್ವರ ಗುಡಿಯ ಮುಂದೆ ಇರುವ ಕಲ್ಲು ಹೊಯ್ಸಳ ದೊರೆ ಎರಡನೆಯ ಬಲ್ಲಾಳನ ಕಾಲದ ಸುಂದರ ಶಾಸನವಾಗಿದ್ದು, (ಕ್ರಿ.ಶ.೧೧೬೫) ಇದರಲ್ಲಿ ಗ್ರಾಮದ ಮಧುಕೇಶ್ವರ ದೇವಾಲಯದ ನಂದಾದೀಪದ ಎಣ್ಣೆಗಾಗಿ ಒಂದು ಕಲ್ಲಿನ ಗಾಣವನ್ನು ಹಾಗೂ ದೇವಾಲಯಕ್ಕಾಗಿ ಜಮೀನನ್ನು ದಾನವಾಗಿ ನೀಡಿದ ಉಲ್ಲೇಖವಿದೆ. ದಾನವನ್ನು ನೀಡಿದವರು ಮಹಾಪ್ರಧಾನ ಹೆಗ್ಗಡೆ ಕಾಂತಿಮಯ್ಯ, ದಂಡನಾಯಕ ಚೋಕಣ್ಣ ದಂಡನಾಯಕ ಹರಿಯಣ್ಣ ಮತ್ತು ಲಾಳನಕೆರೆಯ ಎಲ್ಲ ಪ್ರಜಾಗೌಡರು. ಈ ಶಾಸನದಿಂದ ತಿಳಿಯುವ ಅಂಶವೆಂದರೆ ಹೊಯ್ಸಳರ ಆಳ್ವಿಕೆಯಲ್ಲಿ ಲಾಳನಕೆರೆಯ ಅನೇಕ ಮಂದಿ ಉನ್ನತ ಸ್ಥಾನದಲ್ಲಿ ಇದ್ದು, ರಾಜ್ಯಾಡಲಿತದಲ್ಲಿ ತಮ್ಮ ವಿಶಿಷ್ಟ ಕೊಡುಗೆಯನ್ನು ನೀಡಿದ್ದಾರೆ ಎಂಬುದು.

ದಡಗದ ಚೆನ್ನಿಗರಾಯ ದೇವಸ್ಥಾನದ ನವರಂಗ ಮಂಟಪದ ನಾಲ್ಕನೇಯ ಅಂಕಣದ ತೊಲೆಯ ಮೇಲಿರುವ ಶಾಸನವು ಕ್ರಿ.ಶ.೧೪೦೦ರ ಶಾಸನವಾಗಿದ್ದು, ಇದರಲ್ಲಿ ಪಟ್ಟಂಗಿ ವೀರಪಿಳ್ಳನ ಪತ್ನಿ ದೇವಾಲಯಕ್ಕೆ ನೀಡಿದ್ದ ಜಮೀನನ್ನು ಮಾರಿ ದೇವಾಲಯಕ್ಕೆ ಹೊಂದಿಕೊಂಡಂತೆ ಕಲ್ಲಿನ ಮಂಟಪ ನಿರ್ಮಿಸಿದ ಉಲ್ಲೇಖವಿದೆ. ಅದೇ ಸ್ಥಳದ ಪಶ್ಚಿಮ ತೊಲೆಯ ಮೇಲಿರುವ ಶಾಸನವು ಕ್ರಿ.ಶ. ೧೨೮೫ರ ಶಾಸನವಾಗಿದ್ದು, ಇದರ ಪ್ರಕಾರ ಚನ್ನಕೇಶವ ದೇವರು ದಡಿಗದ ಮಹಾಜನರ ಸಮಕ್ಷಮದಲ್ಲಿ ಸ್ವಲ್ಪ ಜಮೀನು ಮತ್ತು ಮನೆಯನ್ನು ಖರೀದಿ ಮಾಡಿ ಮಾದೇವನ ಗುಡಿಯ

[illegible] 1

[illegible]

[illegible]

[illegible]

ವಿಮಾನ ಗೋಪುರ ನಿರ್ಮಿಸಲು ದತ್ತಿ ನೀಡುತ್ತಾನೆ. ದಡಗದ ಜೈನ ಬಸದಿಯ (ನವೀನ ನಿರ್ಮಾಣ) ಹತ್ತಿರ ಇರುವ ಶಾಸನವು ಒಂದು ಪ್ರಮುಖ ಶಾಸನವಾಗಿದ್ದು ಹೊಯ್ಸಳರ ಕಾಲದ ವಿಷ್ಣುವರ್ಧನನ ಕಾಳದ ಶಾಸನವಾಗಿದೆ. ಈ ಶಾಸನದಲ್ಲಿ ಯಾವುದೇ ದಿನಾಂಕವನ್ನು ನಮೂದಿಸಿಲ್ಲ. ಈ ಶಾಸನವು ಹೊಯ್ಸಳರ ಮಹಾಮಂತ್ರಿಯಾದ ಮಹಾಪ್ರಧಾನ ಮರಿಯಾನೆ ಹಾಗೂ ಆತನ ಸಹೋದರ ಭರತಿಮಯ್ಯ ದಂಡನಾಯಕರು ದಡಗದ ಪಂಚ ಬಸದಿಗೆ ದತ್ತಿ ನೀಡಿದ ಉಲ್ಲೇಖವನ್ನು ಹೊಂದಿದೆ.

ವಳಗೆರೆಪುರದ ಪಟೇಲ್ ಸುಬ್ಬಣ್ಣನವರ ವಶದಲ್ಲಿದ್ದ ತಾಮ್ರ ಶಾಸನವು ವಿಜಯನಗರದ ಶ್ರೀ ಕೃಷ್ಣದೇವರಾಯನ ಆಳ್ವಿಕೆಯ ಕಾಲದ ಶಾಸನವಾಗಿದೆ. ಕಾಲ ಕ್ರಿ.ಶ. ೧೫೧೨. ಈ ಶಾಸನದಲ್ಲಿ ವಿಜಯನಗರದ ದೊರೆ ಶ್ರೀ ಕೃಷ್ಣದೇವಾರಾಯನು ಹೊಯ್ಸಳ ನಾಡಿನ ವೆಲ್ಲೂರು ಸೀಮೆಯ (ಬೆಳ್ಳೂರು ಸೀಮೆಯ) ಹಿರಿ ಜಟ್ಟಿಗ ಗ್ರಾಮವನ್ನು ಶಾಸ್ತ್ರ ಕಾವ್ಯ, ಪುರಾಣಗಳಲ್ಲಿ ಅಪ್ರತಿಮ ಪಂಡಿತನಾದ ಶ್ರೀನಿವಾಸ ಧವರಿ ಎಂಬವವನಿಗೆ ದತ್ತಿ ನೀಡದ ವಿಷಯದ ಉಲ್ಲೇಖ ಇದರಲ್ಲಿದೆ. ಹಿರಿಜಟ್ಟಿಗ ಗ್ರಾಮವಲ್ಲದೇ, ಕುಪ್ಪೆಮಂಚನಹಳ್ಳಿ, ಚಿಕ್ಕಜಟ್ಟಿಗಹಳ್ಳಿ, ವೆಂಕಟನಾಥಪುರ ಮತ್ತು ಕಾಡಂಕಪುರ ಗ್ರಾಮಗಳೂ ಈ ದತ್ತಿಯಲ್ಲಿ ಸೇರ್ಪಡೆಯಾಗಿವೆ. ಹಾಗೂ ದೊರೆಯು ಹಿರಿಯ ಜಟ್ಟಿಗ ಗ್ರಾಮವನ್ನು ಚಿನ್ನದೇವಿಪುರ ಎಂದು ನಾಮಕರಣ ಮಾಡುತ್ತಾನೆ. ದತ್ತಿ ಸ್ವೀಕರಿಸಿದ ಶ್ರೀನಿವಾಸಧವರಿಯು ದತ್ತಿಯು ಸ್ವಲ್ಪ ಭಾಗ ತನ್ನಲ್ಲಿ ಇಟ್ಟಿಕೊಂಡು, ಉಳಿಕೆ ಭಾಗವನ್ನು ಈ ಎಲ್ಲಾ ಬ್ರಾಹ್ಮಣರಿಗೆ ನೀಡುತ್ತಾರೆ. ಬ್ರಾಹ್ಮಣರ ಹೆಸರೂ ಸಹ ಈ ಶಾಸನದಲ್ಲಿ ದೊರೆಯುತ್ತದೆ. ಇದೊಂದು ಸಂಸ್ಕೃತ ಭಾಷೆಯಲ್ಲಿರುವ ಶಾಸನವಾಗಿದೆ. ಈ ಶಾಸನದಿಂದ ತಿಳಿಯುವ ಅಂಶವೆಂದರೆ ಈಗಿನ ದೊಡ್ಡಜಟಕ, ಚಿಕ್ಕಜಟಕ ಗ್ರಾಮಗಳು ಹಿಂದೆ ಹಿರಿಯ ಜಟ್ಟಿಗ, ಚಿಕ್ಕ ಜಟ್ಟಿಗ ಗ್ರಾಮಗಳಾಗಿದ್ದು, ಕಾಲ ಕ್ರಮದಲ್ಲಿ ಈಗ ಚಾಲ್ತಿಯಲ್ಲಿರುವ ಹೆಸರನ್ನು ಪಡೆದುಕೊಂಡಿವೆ. ದೊಡ್ಡಜಟಕ ಗ್ರಾಮವನ್ನು ದೊರೆ ಚಿನ್ನಾದೇವಿಪುರ ಎಂದು ನಾಮಕರಣ ಮಾಡಿದ್ದರೂ ಸಹ ಜನ ಹಿಂದಿನಿಂದ ರೂಢಿಯಲ್ಲಿದ್ದ ಹೆಸರನ್ನು ಬಿಡದೇ ಮುಂದುವರಿಸಿಕೊಂಡು ಹೋಗಿರುವ ಅಂಶ ತಿಳಿದು ಬರುತ್ತದೆ. ಇದೇ ಊರಿನಲ್ಲಿ ದೊರೆತಿರುವ ೧೨ನೇ ಶತಮಾನದ ಶಾಸನದಲ್ಲಿ ಊರಿನ ಹೆಸರು ಹಿರಿಯ ಜಟ್ಟಿಗ ಎಂದೇ ಇದೆ.

ಬೇಗಮಂಗಲದ ಊರಬಾಗಿಲ ಬಳಿ ನಿಂತಿರುವ ವೀರಗಲ್ಲು ಹೊಯ್ಸಳ ದೊರೆ ವಿಷ್ಣುವರ್ಧನನ ಕಾಲದ ಶಾಸನವಾಗಿದ್ದು, ಊರಿನ ಮೇಲೆ ದಂಡೆತ್ತಿ ಬಂದ ಸೈನ್ಯದೊಡನೆ ಕಾದಾಡುತ್ತಾ, ಪ್ರಾಣಾರ್ಪಣೆ ಮಾಡಿದ ಬಸವೇಗೌಡನ ಮಗ ಬಾಚೇಗೌಡ ಹಾಗೂ

ಮರಿಯನಾಯಕನ ಮಗನ ಹೆಸರನ್ನು ಸೂಚಿಸುತ್ತದೆ. ಮರಿಯ ನಾಯಕನ ಮಗನ ಹೆಸರು ಶಾಸನದಲ್ಲಿ ನಶಿಸಿಹೋಗಿದೆ. ಇದೇ ಗ್ರಾಮದ ವಾಯುವ್ಯ ಕೊಡಗಿ ಹೊಲದಲ್ಲಿ ನಿಂತಿರುವ ವೀರಗಲ್ಲು ಗೋವುಗಳನ್ನು ಅಪಹರಿಸಲು ಬಂದವರ ವಿರುದ್ಧ ಹೋರಾಡಿ ಪ್ರಾಣ ಕಳೆದುಕೊಂಡ ಎರೆಯಮ್ಮ ಎಂಬುವವರ ನೆನಪಿಗೆ ಬೀಯಮ್ಮ ಎಂಬುವರು ಕೆತ್ತಿಸಿದ ವೀರಗಲ್ಲಾಗಿದೆ.ಮೇಲಿನ ಎರಡೂ ಶಾಸನಗಳಲ್ಲಿ ಗ್ರಾಮದ ಹೆಸರು ಬೆಗೆವಡ ಹಾಗೂ ಬೇಗಿವಾಡ ಎಂದಿದೆ.ಬಹುಶ; ಇದೇ ಹೆಸರು ಕಾಲ ಕ್ರಮದಲ್ಲಿ ಬೇಗಮಂಗಲ ಆಗಿರಬಹುದು.

ಮುದಿಗೆರೆಯನ್ನು ಚಾಮಗವುಂಡನ ಮಗ ಬಿಣ್ಣಾಂಡಿ ಆಳುತ್ತಿರುತ್ತಾನೆ. ಈತ ತನ್ನ ತಾತ, ಅಜ್ಜಿ ಹಾಗೂ ತನ್ನ ತಾಯಿ ಜಾನವ್ವೆಯು ನಿಧನ ಹೊಂದಲು ಅವರನ್ನು ಕೆರೆಯ ಬಳಿ ಸಮಾಧಿ ಮಾಡಿಸಿ, ಲಿಂಗವನ್ನು ಪ್ರತಿಷ್ಠಾಪನೆ ಮಾಡಿಸಿ, ಗರಂಜೇಶ್ವರ ಎಂಬ ದೇವಾಲಯವನ್ನು ನಿರ್ಮಿಸಿ, ಆ ದೇವಾಲಯಕ್ಕೆ ಜಮೀನನ್ನು ದತ್ತಿ ನೀಡುತ್ತಾನೆ, ದತ್ತಿಯನ್ನು ಸ್ವೀಕರಿಸಿದವರು ಸೋಮನಾಥಪಂಡಿತ. ಈತನ ಮಗ ರಾಜಪಂಡಿತನಿಗೆ ಬರಬೇಕೆಂದು ಶಾಸನದಲ್ಲಿ ಸ್ಪಷ್ಟ ಪಡಿಸಲಾಗಿದೆ. ಶಾಸನದ ಕಾಲ ಕ್ರಿ.ಶ. ೧೧೩೬-೪೦. ಹೊಯ್ಸಳ ದೊರೆ ವಿಷ್ಣುವರ್ಧನನ ಆಳ್ವಿಕೆಯನ್ನು ಈ ಶಾಸನ ಸೂಚಿಸುತ್ತದೆ.

ತಾಯಲೂರು ಒಳಗೆರೆಯಲ್ಲಿ ಬಿದ್ದಿರುವ ಕಲ್ಲು. ಕಾಲ ಕ್ರಿ.ಶ.೯೦೭. ದೊರೆ ನಮೂದಾಗಿಲ್ಲ. ಈ ಶಾಸನ ಕಳೆದು ಹೋಗಿದೆ. ಶಾಸನದ ಪ್ರತಿಯನ್ನು ನೋಡಿ ಬಿ.ಎಲ್.ರೈಸ್ ರವರು ಅದರ ಪಾಠವನ್ನು ಬರೆದಿರುತ್ತಾರೆ. ಕಚ್ಚವರ ಪೊಳಿಲ ಸೆಟ್ಟಿ ಎಂಬಾತ ಒಂದು ಕೆರೆಯನ್ನು ನಿರ್ಮಿಸುತ್ತಾನೆ. ಆಗ ಕದರೂರಿನ ರೈತರು ಹಾಗೂ ಪ್ರಜಾಗೌಡರು ಈಗನಿಗೆ ಜಮೀನು ದತ್ತಿ ನೀಡುತ್ತಾರೆ.

ಶಾಸನ ಸಂ.೯೪ ಅರುವನಹಳ್ಳಿ

ಶಾಸನ ಸಂ.೯೪ ಅರುವನಹಳ್ಳಿ ಇನ್ನೊಂದು ಮನೆಯ ಪೂರ್ವಕ್ಕೆ ಇರುವ ಕಲ್ಲು ಕಾಲ ಕ್ರಿ.ಶ.೧೩೭೪. ದೊರೆ. ಬುಕ್ಕಣ್ಣ ಒಡೆಯ. ಇಂದೊಂದು ವಿಭಾಗಶಾಸನ ಅಂದರೆ ಅರುವನಹಳ್ಳಿಯ ಕೀರ್ತಿ ಅರಸನ ಮಕ್ಕಳಾದ ಹಿರಿಯ ಬಾಚಿಯಪ್ಪ ಮತ್ತು ಕಿರಿಯ ಬಾಚಿಯಪ್ಪ ಎನ್ನುವರು ತಮ್ಮ ಪಿತ್ರಾರ್ಜಿತ ಆಸ್ತಿಯನ್ನು ಬಹುಶಃ ತಮ್ಮ ಅಣ್ಣನಾದ ಬಾಚಿಯಪ್ಪನಿಂದ ಪಡೆದ ವಿವರವಿದೆ. ಇದರ ಪ್ರಕಾರ ಬಾಚಿಯಪ್ಪ ಸಹೋದರರು ಗ್ರಾಮ, ಕೆರೆ, ತೋಟ, ಗದ್ದೆ, ಹೊಲ ವಸ್ತು, ವಾಹನ, ಬಂಗಾರ, ಬೆಳ್ಳಿ, ಕಂಚು, ಕಬ್ಬು, ಎಮ್ಮೆ, ಧನ, ಆಳುಗಳು, ಧಾನ್ಯ, ಬೆಳೆ, ಹಣ, ಸಾಲ ಇತ್ಯಾದಿಗಳನ್ನು ಪಡೆಯುತ್ತಾರೆ. ಇದಕ್ಕಾಗಿ ಈ ಶಾಸನವನ್ನು ಹಾಕಿಸುತ್ತಾರೆ. ಈ ಸಂಬಂಧ ಒಂದು

ಪತ್ರವನ್ನು ಬಾಚಿಯಪ್ಪನಿಗೆ ನೀಡುತ್ತಾರೆ. ಈ ವ್ಯವಹಾರಕ್ಕೆ ಸಾಕ್ಷಿಯಾಗಿ ಹಾದರವಾಗಿಲ ಸಾಯನಾಯಕನ ಮಗ ದೆಪ್ಪ, ಮಡಿಯನಹಳ್ಳಿಯ ಮಾಯಿಗೌಡನ ಮಗ ಸಾವಂತಗೌಡ, ಹುಲಿಯಕೆರೆಯ ಜಗ್ಗಗೌಡನ ಮಗ ಮಂಚೇಗೌಡ ಮಾಲಗಾರನಹಳ್ಳಿಯ ರಂಗಗೌಡನ ಚೌಡಿಗೌಡರು ಇರುತ್ತಾರೆ. ಈ ಶಾಸನವನ್ನು ಅರಸನ ಕೆರೆಯ ಪಡುಮಣ್ಣನ ಮಗ ಇರುಗಣ್ಣ ಬರೆಯುತ್ತಾನೆ. ಶಾಸನವು ಸುಮಾರು ಏಳುನೂರು ವರ್ಷಗಳಷ್ಟು ಪ್ರಾಚೀನವಾಗಿದ್ದರೂ ಅಂದಿನ ವ್ಯವಹಾರ ಕುಶಲತೆಯ ಮೇಲೆ ಬೆಳಕು ಚೆಲ್ಲುತ್ತದೆ.

ಇದೊಂದು ವೀರಗಲ್ಲು. ಕಾಲ ಸುಮಾರು ಕ್ರಿ.ಶ.೧೨೬೪ ಕಾಡುಹಂದಿಯ ಬೇಟೆಗೆ ಬೆಲ್ಲೂರ ಬಾರದರ ತಾಳೆಗೌಡನ ಮಗ ಬೀರಗೌಡನಹಳ್ಳಿಯ ರೈತನಾದ ಅಸಗರಗೊರವನು ಹೋಗಿದ್ದಾಗ ಆತನಿಗೆ ಹಂದಿಯು ಇರಿಯಲಾಗಿ ಆತ ಸಾವನಪ್ಪುತ್ತಾನೆ. ಇರುಗುಕಾರ ಈ ವೀರಗಲ್ಲನ್ನು ಪ್ರತಿಷ್ಠಾಪಿಸುತ್ತಾನೆ. ಈ ಸಂದರ್ಭದಲ್ಲಿ ಹೊಯ್ಸಳ ಮೂರನೆಯಾ ನರಸಿಂಹ ಈ ಪ್ರದೇಶವನ್ನು ಆಳುತ್ತಿರುತ್ತಾನೆ.

ಕುಂಪೆನಾಡಿನ ಪ್ರಮುಖನೊಬ್ಬ ಚಿಕ್ಕಬೆಲ್ಲೂರ ಗೋವುಗಳನ್ನು ಅಪಹರಿಸಲು ಬಂದಾಗ ಅವನೊಡನೆ ಕಾದಾಡಿ ಸತ್ತ ಕಳಲೆನಾಡಿನ ಬಾರಂದರ ಚಿಕ್ಕಗೌಡನ ಮಗ ಕಾಬೈಯನ ವೀರಗಲ್ಲು ಈ ಸ್ಮಾರಕದ ಕಾಲ ಕ್ರಿ.ಶ.೧೨೦೦. ದೊರೆ ಹೊಯ್ಸಳ ಎರಡನೆಯ ಬಲ್ಲಾಳ ಈ ಶಾಸನದ ಪ್ರಕಾರ ಅಂದಿನ ದಿನಗಳಲ್ಲಿ ಒಂದು ಪ್ರದೇಶದ ಆಡಳಿತಗಾರರೂ (ಪಾಳೆಗಾರರೂ) ಮತ್ತೊಂದು ಊರಿನ ಗೋವುಗಳನ್ನು ಅಪಹರಿಸಲು ಹೋಗುತ್ತಿದ್ದರು ಎಂಬ ಅಂಶ ತಿಳಿದು ಬರುತ್ತದೆ. ಹೇಗೆಂದರೆ ಚಿಕ್ಕಬೆಲ್ಲೂರ ಗೋವುಗಳನ್ನು ಅಪಹರಿಸಲು ಹೋದ ವ್ಯಕ್ತಿಕುಂಪೆನಾಡಿನ ಪ್ರಮುಖ.

ಶಾಸನ ಸಂ.೭೯ ಬೇಲೂರು ಅದೇ ಸ್ಥಳದಲ್ಲಿ ಮೂರನೆಯ ಕಲ್ಲು ಈ ವೀರಗಲ್ಲಿನ ಅಕ್ಷರಗಳು ಸವಿದೆದೆ. ಹಾಗಾಗಿ ಇದರಲ್ಲಿ ಉಕ್ತವಾಗಿರುವ ವಿಷಯ ತಿಳಿದು ಬರುವುದಿಲ್ಲ. ವೀರನರಸಿಂಗನ ಆಳ್ವಿಕೆ. ಬೇಲೂರು, ಹರಿಯಣ್ಣ ಇತ್ಯಾದಿ ಮಾಹಿತಿಯನ್ನು ಈ ಶಾಸನ ನೀಡುತ್ತದೆ.

ಕೆರೆಏರಿಯ ಮೇಲಿರುವ ಕಲ್ಲು ಶಾಸನದ ಕಾಲ ಕ್ರಿ.ಶ. ೯೧೬-೧೭. ದೊರೆ ಭೂತಿಗನ ಮಗ ಎರೆಯಂಗ ಮಣಲೆಯಾರ ಎಂಬಾತ ಕನಕಗಿರಿಯಲ್ಲಿ ಜೈನ ಬಸದಿಯನ್ನು ನಿರ್ಮಿಸಿ ಕೆಲವು ತೆರಿಗೆಗಳಿಂದ ಬಂದ ಹಣವನ್ನು ಬಸದಿಯ ನಿರ್ವಹಣೆಗೆ ಕನಕಸೇನ ಭಟ್ಟಾರಕ ಎಂಬಾತನಿಗೆ ನೀಡಿದ ವಿವರ ಇದೊಂದು ಗಂಗರ ಕಾಲದ ಶಾಸನ.

ಹಿರಿಯ ಅರಸನ ಕೆರೆಯ ಮಹಾಜನರು 'ಮಹಾಪಸಾಯಿತ' ವಿರುಪಣ್ಣನ ತಮ್ಮ ನಾಗಪ್ಪನ ಇಚ್ಛೆಯಂತೆ ತಮ್ಮ ಊಳಗಕ್ಕಿದ್ದ ಜನರಿಗೆ ಜಮೀನನ್ನು ಹಂಚಿದ ಬಗ್ಗೆ ಈ ಶಾಸನ. ಈ ಜಮೀನುಗಳನ್ನು (ವೃತ್ತಿಗಳನ್ನು) ಕೋಡಿಹಳ್ಳಿ, ಬಿದರಹಳ್ಳಿ, ಹೊಸಹಳ್ಳಿ, ಕಾಳಕೊತ್ತನಹಳ್ಳಿ ಗ್ರಾಮದವರಿಗೆ ಹಂಚಲಾಗುತ್ತದೆ. ಜಮೀನನ್ನು ಪಡೆದವರು ಊಳಿಗಕ್ಕೆ ಇದ್ದರೆ ಮಾತ್ರ ಅದನ್ನು ಅನುಭವಿಸಬಹುದು. ಕೆಲಸ ಬಿಟ್ಟರೆ ಜಮೀನಿಲ್ಲ. ಸದರಿ ಒಡಂಬಡಿಕೆಯ ಮಾಧವದೇವನ ಸನ್ನಿಧಿಯಲ್ಲಿ ನಡೆಯುತ್ತದೆ. (ಈ ಶಾಸನವೂ ಹಿಂದೆ ಮಾಧವರಾಯನ ದೇಗುಲ ಬಳಿಯೇ ಇತ್ತಂತೆ)

ಈ ಶಾಸನದಲ್ಲಿ ಗಮನಿಸಬೇಕಾದ ಸಂಗತಿ ಎಂದರೆ ಇಲ್ಲೂ ದೊಡ್ಡಅರಸಿನಕೆರೆಯನ್ನು ಮುಮ್ಮಡಿ ಚೋಳ ಚತುರ್ವೇದಿ ಮಂಗಲದ ಹಿರಿಯರಸನ ಕೆರೆ ಎಂದು ಕರೆಯಲಾಗಿದೆ. ಕಾವೇರಿ ನದಿಯು ತುಂಬಿ ಹರಿಯುತ್ತಿದ್ದಾಗ ಧೈರ್ಯಗುಂದದೆ ಆ ನದಿಯನ್ನು ದಾಟಿ ಆ ರಾಜ್ಯವನ್ನು ಜಯಸಿ ಶ್ರೀರಂಗಪಟ್ಟಣವನ್ನು ಆಕ್ರಮಿಸಿಕೊಳ್ಳುತ್ತಾನೆ. ಅಲ್ಲೊದು ವಿಜಯಸ್ತಂಬವನ್ನು ನೆಡುತ್ತಾನೆ. ಚೇರ, ಚೋಳ, ಪಾಂಡ್ಯ ರಾಜ್ಯಗಳನ್ನು ಗೆಲ್ಲುತ್ತಾನೆ. ತುರುಷ್ಕರನ್ನ ಗೆಲ್ಲುತ್ತಾನೆ. ಗಜಪತಿಯನ್ನು (ಒರಿಸ್ಸಾ) ಗೆಲ್ಲುತ್ತಾನೆ. ಉತ್ತರದಿಂದ ದಕ್ಷಿಣದವರೆಗೆ ಗಂಗಾನದಿಯಿಂದ ಲಂಕಾದವರಿಗೆ ಪೂರ್ವದಿಮದ ಪಶ್ಚಿಮದವರಿಗೆ ಇವನ ರಾಜ್ಯವಿರುತ್ತದೆ. ಪವಿತ್ರ ಕ್ಷೇತ್ರ ರಾಮೇಶ್ವರ ಇವನ ಅಧೀನದಲ್ಲಿರುತ್ತದೆ. .

ಈತ ೧೬ ಬಗಯ ಮತ್ತು ಇತರೆ ಬಗೆಯ ದಾನಗಳನ್ನು ನೀಡುತ್ತಾನೆ ಈ ಮೇಲಿನ ನರಸಿಂಹನ ಪತ್ನಿಯರಾದ ತಿಪ್ಪಾಜಿ ಮತ್ತು ನಾಗಲದೇವಿಯರಿಂದ ವೀರನರಸಿಂಹ ಮತ್ತು ಕೃಷ್ಣರಾಯ ಹುಟ್ಟುತ್ತಾರೆ. (ಕೌಶಲ್ಯ ಮತ್ತು ಸುಮಿತ್ರಯರಿಂದ ಶ್ರೀರಾಮ ಮತ್ತು ಲಕ್ಷ್ಮಣ ಹುಟ್ಟಿದಂತೆ) ನರಸಿಂಹ ವಿಜಯನಗರದ ವಜ್ರ ಖಚಿತ ಸಿಂಹಾಸನದ ಮೇಲೆ ಕುಳಿತುಕೊಳ್ಳುತ್ತಾನೆ. ನಳ ಮತ್ತು ನಹುಶನು ನಾಚುವಂತ ಅವನ ರಾಜ್ಯಭಾರ ವಿರುತ್ತದೆ. ಚಿದಂಬರಂ (ತಮಿಳುನಾಡಿನಿ) ವೀರೂಪಾಕ್ಷ, ತಾಳಹಸ್ತಿ, ವೆಂಕಟಾದ್ರಿ (ತಿರುಪತಿ) ಕಂಚಿ, ಶ್ರೀ ಶೈಲ, ಸೋನಶೈಲ (ತಿರುವನ್ನಮಲೈ) ಹರಿಹರ, ಅಹೋಬಲ, ಸಂಗಮ, ಶ್ರೀರಂಗ, ಕುಂಭಕೋಣ, ಮಹಾನಂದಿ, ಗೋಕರ್ಣ, ರಾಮಸೇತು ಇನ್ನು ಮುಂತಾದ ಕಡೆ ದೇವಾಲಯಗಳನ್ನು ನಿರ್ಮಿಸಿದೆ.

ಇದರ ನಂತರ ಈ ಭೂ ಖಂಡದ ಭಾರವನ್ನು ತನ್ನ ಹೇಗಲ ಮೇಲೆ ಹೊತ್ತಿಕೊಂಡ. ಈತನ ಸೇನೆ ಎಷ್ಟು ಅಗಾಧವಾಗಿತ್ತೆಂದರೆ ಈತನ ಕುದರೇಸವಾರರ ಆರ್ಭಟದಿಂದ ಭೂಮಿ ಪುಡಿ ಪುಡಿ ಆಯಿತು ಸಪ್ತ ಸಾಗರಗಳು ಮುಚ್ಚಿಹೋದವು. ಕುದರೆಗಳು ಎಬ್ಬಿಸಿದ ಧೂಳಿನಿಂದ

ಮೂಡಗಳು ಉಂಟಾದವು. ಈತ ಕಂಬೆ, ಶ್ರೀಶೈಲ, ಸೋನಾಚಲ, ಕನಕಸಭಿ, ವೆಂಕಟಾದ್ರಿ ಇತ್ಯಾದಿ ದೇವಾಲಯಗಳಿಗೆ ಭೇಟಿ ನೀಡಿದ. (ತನಗೆ ಈಗ ಮತ್ತು ಭವಿಷ್ಯದಲ್ಲಿ ಒಳ್ಳೆಯದಾಗಲಿ ಎಂದು) ಶಾಸ್ತ್ರಗಳಲೂ ಆದೇಶಿಸದಂತೆ ದಾನ ಧರ್ಮಗಳನ್ನು ಮಾಡಿದ, ಚಿನ್ನದಿಂದ ತುಲಾಭಾರ ಮಾಡಿಸಿಕೊಂಡ ರಾಜಾಧಿರಾಜ, ರಾಜಪರಮೇಶ್ವರ, ಹಿಂದು ದೊರೆಗಳ ಸುಲ್ತಾನ ಕೆಡಕೆಂಬ ಹುಲಿಯನಾಶಕ (ದುಷ್ಟ ಶಾರ್ದೂಲ ಮರ್ಧನಃ) ಯದ್ಬಾಹು ಗಂಡ ಭೇರುಂಡ ಇತ್ಯಾದಿ ಬಿರುದುಗಳನ್ನು ಹೊಂದುತ್ತಾನೆ.

ಶ್ರೀ ಕೃಷ್ಣದೇವರಾಯನ ನಂತರ ಆತನ ತಮ್ಮ ಅಚ್ಯುತ ಸಿಂಹಾಸನವನ್ನೆರುತ್ತಾನೆ. (ತಾನು ಸೋಲಿಸಿದ ದೊರೆಗಲ ಪತ್ನಿಯನ್ನು (ರಾಣಿಯರನ್ನು) ಸೆರೆಹಿಡಿದು ತಂದು ತನಗೆ ಚಾಮರ ಬೀಸಲು ಇಟ್ಟಿಕೊಂಡಿರುತ್ತಾನೆ.

ಈತ ಈ ಪ್ರದೇಶಗಳಲ್ಲಿ ೧೬ ವಿಧವ ದಾನಗಳನ್ನು ಮಾಡುತ್ತಾನೆ ಗೋಕರ್ಣ, ಸಂಗಮ, ನಿವೃತ್ತಿ, ಸುವರ್ಣ, ಶಂಖ, ಸೋನಾದ್ರ ಪರ್ವತ, ವಿರಂಚಿ, ಕಾಳಹಸ್ತಿ, ಕುಂಭಕೋಣ.

ಈ ಅಚ್ಯುತರಾಯನು ಮಕರ ಸಂಕ್ರಾತಿಯ ದಿನ, ತುಂಗಾಭದ್ರಾ ನದಿಯ ದಡದಲ್ಲಿ ವಿರೂಪಾಕ್ಷದೇವನ ಸನ್ನಿಧಿಯಲ್ಲಿ ಮಾರಗೊಂಡನಹಳ್ಳಿ ಗ್ರಾಮವನ್ನು ಅಚ್ಯುತೇಂದ್ರ ಮಹಾರಾಯ ಸಮುದ್ರ ಎಂದು ಪುನರ್ ನಾಮಕರಣ ಮಾಡಿ ಲಕ್ಷ್ಮಣಧವರಿಯ ಮಗ ಸುಬ್ರಹ್ಮಣಾತಿರಾತ್ರಿ ಎಂಬಾತನಿಗೆ ದಾನ ನೀಡುತ್ತಾನೆ. ಈಗ ಈತ ಯಜುಶಾಖಾದ್ಯಾಯಿನಿ ಶಾಸ್ತ್ರವೇದಿನಿ, ವರಾಪಸ್ತಂಬ ಸೂತ್ರಾಯ ಗಾರ್ಗ್ಯಗೋತ್ರೋದ್ಭವ ಮಾರಗೊಂಡನಹಳ್ಳಿಯ ಚಕ್ಕುಬಂಧಿ

ಪೂರ್ವಕ್ಕೆ	–	ಕೆರಗೊಡು ಚಿಕ್ಕಹಳ್ಳಿ
ಪಶ್ಚಿಮಕ್ಕೆ	–	ಶಿವಾರ
ಉತ್ತರಕ್ಕೆ	–	ವಡಕೆಘಟ್ಟ
ದಕ್ಷಿಣಕ್ಕೆ	–	ಬಿದರಕೋಟೆ, ಗೂಳೂರು

ಇದು ಹೊಯ್ಸಳ ನಾಡಿನ ಶ್ರೀರಂಗಪಟ್ಟಣ ಸೀಮೆಯ ಬಸರುವನ ಸ್ಥಳದಲ್ಲಿದೆ. ದಾನಪಡೆದವರು ಇದನ್ನು ಮಾರಬಹುದು. ಅಡ ಇಡಬಹುದು, ಮಕ್ಕಳು, ಮೊಮ್ಮಕ್ಕಳೊಡನೆ ಅನುಭೂಗಿಸಬಹುದು. ಆಚಂದ್ರಾರ್ಕವಾಗಿ.

ಹೊಯ್ಸಳರ ಕಾಲದಲ್ಲಿ ಅನೇಕ ಆಡಳಿತ ವಿಭಾಗಗಳಿದ್ದವು. ಕಳ್ಬಪ್ಪು ಅಥವಾ ಕಬ್ಬಹು ಸಾಪಿರ ನಾಡಿಗೆ ಕೃಷ್ಣರಾಜಪೇಟೆ ತಾಲ್ಲೂಕಿನ ಮಾಳಿಗೆ ಅಥವಾ ಮಾಳಗೂರು ಕೇಂದ್ರವಾಗಿತ್ತು.

[illegible]

ಎಡದೆರೆ ಸಾವಿರ, ಕೆಳಲೆನಾಡು ಅಥವಾ ಕಿಳಲೆ ಸಹಸ್ರ, ಕಲ್ಕುಣಿನಾಡು ಅಥವಾ ಕಲ್ಕುಣಿ–ಇಪ್ಪತ್ತು, ಬಡಗೆರೆನಾಡು, ಹೆಬ್ಬೆಟ್ಟುನಾಡು, ಕೆರೆಗೋಡುನಾಡು, ಕುಂದುನಾಡು, ಬಡಗುಂದನಾಡು, ಚಿಕ್ಕಗಂಗವಾಡಿ, ಕುರುವಂಕನಾಡು, ಮೊದರುನಾಡು, ಕುರುಕಿನಾಡು, ಕಿಕ್ಕೇರಿ–ಹನ್ನೆರಡು ಮುಂತಾದ ಹಲವು ನಾಡುಗಳ ಶಾಸನಗಳಲ್ಲಿ ಉಲ್ಲೇಖಿತವಾಗಿವೆ. ಈ ನಾಡುಗಳನ್ನು ಮತ್ತು ಕೆಲವು ಕೇಂದ್ರಗಳನ್ನು ಆಳುತ್ತಿದ್ದ ಅಧಿಕಾರಿಗಳಲ್ಲಿ ಕೆಲವರು ಶಾಸನೋಕ್ತರಾಗಿದ್ದಾರೆ: ಮುಗಿಲಕುಲದ ಗಂಡನಾರಾಯಣಸೆಟ್ಟಿ ಹಾಗೂ ಅವನ ವಂಶಸ್ಥರು ಕಬ್ಬಹುನಾಡಿನ ಅಧಿಪರಾಗಿದ್ದರು: ಚಿಣ್ಣ ಎಂಬಾತ ಕಿಕ್ಕೇರಿ–೧೨ ಪ್ರದೇಶವನ್ನಾಳುತ್ತಿದ್ದ; ಗಾ(ಬಾ) ರಂದರ ಕುಲದ ಬಿನ್ನಾಂಡಿ ಮುದುಗೆರೆಯ ಪ್ರಭು; ಸುಕುದೊರೆ ಬೋಕಿಸೆಟ್ಟಿಯ ಆಡಳಿತಕ್ಕೊಳಪಟ್ಟಿದ್ದಿತು; ಸಾಮಂತ ಸೋಮ ಕಲುಕಣಿನಾಡಾಳ್ವ; ಮೊಗರನಾಡಿನ ಅಧಿಪ ಪೆರುಮಾಳನಾಯಕ; ಚಿಕೆಯನಾಯಕ ಎಂಬಾತ ಸೊಸಲಿನಾಡನ್ನು ಆಳುತಿದ್ದ. ರಾಮೆಯನಾಯಕ ಚುಂಚನಕೋಟೆಯ ಪ್ರಭು ಹೀಗೆ ಪಟ್ಟಿ ಬೆಳೆಯುತ್ತದೆ.

ಮಂಡ್ಯ ಜಿಲ್ಲೆಯ ಶಾಸನಗಳು ಅನೇಕ ಅಧಿಕಾರಿಗಳನ್ನು ಹೆಸರಿಸುತ್ತವೆ. ವಿಷ್ಣುವರ್ಧನನ ಕಾಲದಲ್ಲಿ ಹಿರಿಯ ದಂಡನಾಯಕ ಗಂಗರಾಜ, ಮಹಾಪ್ರಧಾನ ಲಿಂಗಪ್ಪಯ್ಯ, ಸಾಮಂತ ಮಾಚೆಯನಾಯಕ, ಲವಕುಶರಂತಿದ್ದ ಮರಿಯಾನೆ ಮತ್ತು ಭರತ ದಂಡನಾಯಕರು, ಬೋಕಣ, ಪುಣಿಸಮಯ್ಯ, ತಂತ್ರಾಧಿಷ್ಠಾಯಕ ಸುರಿಗೆಯ ನಾಗಯ್ಯ, ಏಚಿರಾಜದಂಡಾಧೀಶ, ಶ್ರೀಕರಣದ ಮಾದಿರಾಜ, ಪಟ್ಟಣಸ್ವಾಮಿ ಚವುಂಡಾಡಿ ಮುಂತಾದವರು ಕೆಲವು ಪ್ರಮುಖ ಅಧಿಕಾರಿಗಳು. ಬಿಟ್ಟಿದೇವ ದಂಡಾಧೀಶ ಎಂಬಾತನ ವರ್ಣನೆ ಇದು:

ನುಡಿದ ನುಡಿ ತಾಂಬ್ರಶಾಸನ
ಪಡೆದ ಧನಂ ಸದುಬುಧರ್ಗ್ಗಮಾತ್ಯರೊಳಧಿಕಂ
ಪೊಡವಿಯೊಳ್ ತೋರ್ಪ್ಪಸುರತರು
ಪಡೆಮಾತೇಂ ಬಿಟ್ಟಿದೇವ ದಂಡಾಧೀಶಂ॥

ಕಲುಕಣಿನಾಡನ್ನು ಆಳುತ್ತಿದ್ದ ಸಾಮಂತ ಸೋವೆಯ ನಾಯಕನ ಬಿರುದುಗಳಲ್ಲಿ ತೊಡರ್ದರಡೋಂಕೆ, ತೊಡರೆ ಬಲ್ಗಂಡ ಮುಂತಾದವು ಸೇರಿದ್ದವು. ಈ ಅಧಿಕಾರಿಗಳಲ್ಲಿ ಕೆಲವರು ಒಂದನೆಯ ನರಸಿಂಹ ಹಾಗೂ ಇಮ್ಮಡಿ ಬಲ್ಲಾಳರ ಕಾಲದಲ್ಲಿಯೂ ಇದ್ದರು. ಉದಾಹರಣೆಗೆ ಸುರಿಗೆಯ ನಾಗಯ್ಯ, ಕಾರಿಕುಡಿ, ಕೊತ್ತಾಂಡಿ ದಂಡನಾಯಕ, ಮಹಾಪಸಾಯಿತ ಮಾಚಯ್ಯ, ದಂಡನಾಯಕ ಅಚ್ಯುತಿಮಯ್ಯ, ಮಹಾ ಪ್ರಧಾನ ದಾಮಣ್ಣ, ಶ್ರೀಕರಣದ ಹೆಗ್ಗಡೆ ಎರೆಯಣ್ಣ,

[illegible]

[illegible]

[illegible]

[illegible]

ತಂತ್ರವೆಗ್ಗಡೆ ದೇವರಾಜ, ಕರ್ನಾಟ ವಂಶಕ್ಕೆ ಸೇರಿದ ದಂಡನಾಯಕ ಬಿಟ್ಟಿಯಣ ಮುಂತಾದವರು ನರಸಿಂಹನ ಕಾಲದಲ್ಲಿದ್ದ ಕೆಲವು ಅಧಿಕಾರಿಗಳು. ಇಮ್ಮಡಿ ಬಲ್ಲಾಳನ ಕಾಲದಲ್ಲಿದ್ದ ಅಧಿಕಾರಿಗಳಲ್ಲಿ ಮಹಾಪ್ರಧಾನ ಮಾಚಯ್ಯ, ಮಹಾಪ್ರಾಧಾನ ದೇವರಾಜ, ಹೆಗ್ಗಡೆ ಕೇಸಿಯಣ್ಣ, ಹೆಗ್ಗಡೆ ಕೊಮ್ಮಣ್ಣ, ಹೆಗ್ಗಡೆ ಮಹದೇವಣ್ಣ, ಮಹಾಪ್ರಧಾನ ಚಂದ್ರಮೌಳಿಯಣ್ಣ, ಬಬ್ಬೆಯ ನಾಯಕ, ವಾಜಿವಂಶದ ಕಂಟಿಮಯ್ಯ, ಹಿರಿಯ ದಂಡನಾಯಕ ಲಕುವಯ್ಯ, ಮಹಾಪ್ರಧಾನ ವಾಸುದೇವ, ಮಹಾಸಾಮಂತ ಧುರ್ಮಣ ಅಥವಾ ದುಮೆಯ ನಾಯಕ, ದೇಕೆಯನಾಯಕ ಮುಂತಾದವರಿದ್ದರು. ಈ ಕಾಲದಲ್ಲಿ ಅಚ್ಯುತಿಮಯ್ಯ ಮತ್ತು ವೀರಯ್ಯ ಎಂಬಿಬ್ಬರು ಯಾದವಗಿರಿಕೋಟೆಯ ರಕ್ಷಾಪಾಳಕರಾಗಿದ್ದರು. ಮಹಾಪ್ರಧಾನ ಹೆಗ್ಗಡೆಯಣ್ಣ, ಕಾಚಿದೇವ ಮುಂತಾದವರು ಇಮ್ಮಡಿ ನರಸಿಂಹನ ಕಾಲದಲ್ಲಿದ್ದ ಅಧಿಕಾರಿಗಳು, ಈತನ ಸೇನಾನಿಯಾಗಿದ್ದ ಬಾಹತ್ತರ ನಿಯೋಗಾಧಿಪತಿ ಸೇವುಣರ ಮೇಲೆ ವಿಜಯ ಸಾಧಿಸಿದ ಪರಾಕ್ರಮ:[೧೧]

ಕಡುಪಿಂ ಮುತ್ತಿದ ವೀರಸೇವುಣರ ಸೈನ್ಯಾನೀಕಮಂ ಪೊಕ್ಕು ಮೆ
ಯ್ದೊಡೆ ಕೊಂದಿಕ್ಕಿದನೊಕ್ಕಿಲಿಕ್ಕಿ ತುಳಿದಂ ಬೆಂನಟ್ಟಿದಂ ಮುಟ್ಟಿದಂ
ಪಿಡಿದಂ ಸಾಲೆ ತುರಂಗಮಂ ಹರಿಹರಂ ತಂನೊಂದೆ ಜಾತ್ಯಶ್ವದಿಂ
ಗಡ ವಿಶ್ವಾವನಿ ಮೆಚ್ಚೆ ಮಂತ್ರಿತಿಳಕಂ ವಿದ್ವಿಷ್ಟವಿದ್ರಾವಣಂ॥

ಸೋಮೇಶ್ವರನ ಆಳ್ವಿಕೆಯಲ್ಲಿ ಈ ಪ್ರದೇಶದಲ್ಲಿದ್ದ ಅಧಿಕಾರಿಗಳಲ್ಲಿ ಬಲ್ಲೆಯನಾಯಕ, ಬೋಗಯ್ಯ, ಮುರಾರಿ ಮಲ್ಲಯ್ಯ, ಹರಿಹರ ದಂಡನಾಯಕ ಮುಂತಾದವರು ಸೇರಿದ್ದಾರೆ. ಪೆರುಮಾಳೆ ದಂಡನಾಯಕ, ಮಾಧವ ದಂಡನಾಯಕ, ಸೋಮೆಯ ದಂಡನಾಯಕ, ಆತನ ಆಳಿಯ ಕೇತಚಮೂಪತಿ, ಚಿಕ್ಕ ಕೇತಯ್ಯ ಮುಂತಾದವರು ಮುಮ್ಮಡಿ ನರಸಿಂಹನ ಕಾಲದಲ್ಲಿ ಅಧಿಕಾರಿಗಳಾಗಿದ್ದರು. ಸಾಮಂತ ಸೋವಿಯನ್ನು ಬಲಗಯ್ಯ ಸೇನಾಧಿಪತಿ ಎಂಬುದಾಗಿ ವರ್ಣಿಸಿದೆ. ಇದು ಸಂಸ್ಕೃತದ ದಕ್ಷಿಣ ಭುಜಾ ದಂಡದ ಕನ್ನಡ ರೂಪ. 'ಹಟ್ಟಿಗಾಳೆಗಕ್ಕೆ ಮಲೆವ' ಕಾಚಿದೇವ ಎಡಗಯ್ಯ ಸೇನಾ ನಾಯಕನಾಗಿದ್ದ ಎಂಬುದನ್ನು ಇಲ್ಲಿ ಪ್ರಾಸಂಗಿಕವಾಗಿ ಗಮನಿಸಬಹುದು. ದಾಡಿಯ ಸೋಮೆಯ ದಂಡನಾಯಕ ಮತ್ತು ಆತನ ಮಗ ಬಲ್ಲಪ್ಪ ದಂಡನಾಯಕ ಮುಮ್ಮಡಿ ಬಲ್ಲಾಳನ ಕಾಲದಲ್ಲಿ ಅಧಿಕಾರಿಗಳಾಗಿದ್ದರು. ತೆರಿಗೆ ವಸೂಲಾತಿಗೆ, ಲೆಕ್ಕಪತ್ರಗಳನ್ನಿಡಲು ಹಾಗೂ ಶಾಂತಿ ಮತ್ತು ಕಾನೂನು ವ್ಯವಸ್ಥೆ ನೋಡಿಕೊಳ್ಳಲು ಇತರ ಅನೇಕ ಅಧಿಕಾರಿಗಳು ಬೇರೆ ಬೇರೆ ಹಂತಗಳಲ್ಲಿ ಇದ್ದರು.

[illegible] 1 [illegible]

ಸಾಮಾಜಿಕ ಜೀವನದಲ್ಲಿ ಸತ್ಯ–ಅಸತ್ಯಗಳ ನಡುವಿನ ಹೋರಾಟವನ್ನು ಪ್ರತಿಬಿಂಬಿಸುವಂಥ ಎರಡು ಶಾಸನಗಳನ್ನು ಮಂಡ್ಯ ತಾಲ್ಲೂಕಿನ ಎರಡು ಗ್ರಾಮಗಳಲ್ಲಿ ಕಾಣಬಹುದಾಗಿದೆ. ಮರಡಿಪುರ ಮತ್ತು ಗರುಡನಹಳ್ಳಿ ಗ್ರಾಮಸ್ಥರಲ್ಲಿ ತಮಗೆ ಸೇರಿದ ಸೀಮೆಯ ಬಗೆಗೆ ವಿವಾದ (ಕ್ರಿ.ಶ.1275) ಉಂಟಾಯಿತು. ಮರಡಿಪುರದ ಗ್ರಾಮಸ್ಥರು ಬಲತ್ಕಾರವಾಗಿ ಗಡಿಕಲ್ಲನ್ನು ನೆಟ್ಟಿದ್ದಾರೆಂದು ಗರುಡನಹಳ್ಳಿಯ ಕನ್ನಯ್ಯ ಎಂಬುವನು ಅಪಾದಿಸಿ ರಾಜನಾದ ಹೊಯ್ಸಳ ಮೂರನೇ ನರಸಿಂಹನ ಎದುರು ದಿವ್ಯವನ್ನು (ಬೆಂಕಿ) ಹಿಡಿಯುವುದರ ಮೂಲಕ ಸತ್ಯವನ್ನು ಸ್ಥಿರಪಡಿಸಿದನು. ಇಂಥ ದಿವ್ಯ ಪರೀಕ್ಷೆಗೆ ಒಡ್ಡಿದ ಮತ್ತೊಂದು ಪ್ರಕರಣವು ದೇವಾಲಯಗಳ ಬಗೆಗಿನ ವಿವಾದದಲ್ಲಿ (ಕ್ರಿ.ಶ.1654) ಗುತ್ತಲಿನ ಬ್ರಾಹ್ಮಣರಿಗೂ ಮತ್ತು ಸ್ಥಳದ ಅನೇಕ ದೇವರುಗಳ ಪೂಜೆಯನ್ನು ನಿರ್ವಹಿಸುತ್ತಿದ್ದ ಅರ್ಕೆ ಒಡೆಯನಿಗೂ ಉಂಟಾಗಿ ಅಂತಿಮ ಪರೀಕ್ಷೆಯಲ್ಲಿ ಅರ್ಕೆ ಒಡೆಯನು ಸ್ಥಳೀಯ ಪಾಳೆಯಗಾರನ ಎದುರಿನಲ್ಲಿ ಕುದಿಯುವ ತುಪ್ಪದಲ್ಲಿ ಮೂರು ಬಾರಿ ಕೈಯನ್ನು ಅದ್ದುವ ಮೂಲಕ ಜಯಶೀಲನಾದ ಸಂಗತಿ ತಿಳಿದು ಬರುತ್ತದೆ.

ಸಂಸ್ಕೃತಿಯ ಒಂದು ಭಾಗವಾದ ಹೈನುಗಾರಿಕೆ ಮತ್ತು ಕೃಷಿಯೂ ಇಲ್ಲಿ ಪ್ರಧಾನ ಅಂಗವಾಗಿತ್ತೆನ್ನುವುದಕ್ಕೆ ಇದೆ ತಾಲ್ಲೂಕಿನ ಹೋಬಳಿ ಕೇಂದ್ರವಾದ ದುದ್ದ ಗ್ರಾಮದ ಲಕ್ಷ್ಮೀನರಸಿಂಹಸ್ವಾಮಿ ದೇವಾಲಯದ ಬಳಿಯಲ್ಲಿರುವ ಚಿತ್ರಗಲ್ಲಿನಲ್ಲಿ ಮುದ್ದಾದ ಎಳೆಗರುವೊಂದು ಹಾಲನ್ನು ಕುಡಿಯಲು ಹಸುವಿನ ಕೆಚ್ಚಲಿಗೆ ಮುಸಡಿ ಹಾಕಿರುವುದು ಬಹು ಮನಮೋಹಕವಾಗಿದೆ. (ದುಗ್ಧ ಎಂದರೆ ಹಾಲು ಎಂದರ್ಥ ಇದೇ ಕ್ರಮೇಣ ದುದ್ದ ಆಗಿರಬಹುದು). ಶಿವಶರಣರನ್ನು ಗುರುತಿಸುವ ಮರಡಿಪುರದ ಕ್ರಿ.ಶ.1305ರ ಶಾಸನವೊಂದು ಸ್ಥಳೀಯವಾಗಿ ಶಿವಶರಣರು ಬಸವಣ್ಣನಿಗಿಂತ ಹಿಂದಿನಿಂದಲೂ ಹಾಗೂ ಕೆಲವರು ಸಮಕಾಲೀನರೂ ಇದ್ದರೆಂಬುದನ್ನು ಹೇಳುತ್ತದೆ. ಊರಿನ ಶಿವಭಕ್ತರಾದ ನಾಗಯ್ಯ, ಬೊಮ್ಮಯ್ಯ, ಅಂಕಯ್ಯ, ಜಕ್ಕಯ್ಯ ಮುಂತಾದವರ ಹೆಸರುಗಳನ್ನು ಸೂಚಿಸುತ್ತದೆ. ಮಂಡ್ಯ ಸಮೀಪದ ಹಳೇಬೂದನೂರಿನ 11ನೇ ಶತಮಾನದ ಒಂದು ವೀರಗಲ್ಲು ತನ್ನ ಊರಿನ ಗೋವುಗಳನ್ನು ಕಾಪಾಡುವ ಹೊಣೆಯಲ್ಲಿ ಕನ್ನಯ್ಯನ ಮಗ ರಾಜೇಂದ್ರ ಚೋಳ ಎಂಬುವನು ಸತ್ತು ಸ್ವರ್ಗಸ್ಥನಾದ ವಿಚಾರವನ್ನು ವ್ಯಕ್ತಪಡಿಸುತ್ತದೆ.[೧೨]

ಆತಗೂರು ಶಾಸನ:–

ತಾಲ್ಲೂಕು ಕೇಂದ್ರ ಮದ್ದೂರಿನಿಂದ ೯ ಕಿ.ಲೋ ಮೀಟರ್ ಉತ್ತರಕ್ಕಿರುವ ಹೋಬಳಿ ಕೇಂದ್ರ ಪಾಚೀನ ಶಾಸಗಳಲ್ಲೂ ಆತಗೂರು ಎಂದೇ ಉಲ್ಲೇಖಿತಗೊಂಡಿರುವ ಇದು ಹಿಂದೆ ಕಳಲೆ ನಾಡಿಗೆ ಸೇರಿದ್ದು, ೧೨ ಹಳ್ಳಿಗಳನ್ನು ಒಳಗೊಂಡ ಆಡಳಿತ ಕೇಂದ್ರವು ಆಗಿತ್ತು. ಇಲ್ಲಿಂದ ಈವರೆಗೆ ೫ ಶಾಸನಗಳು ವರದಿಯಾಗಿವೆ. ಹಿಂದೆ ಚಲ್ಲೇಶ್ವರ ದೇವಾಲಯದ ಮುಂದಿದ್ದು, ಈಗ

[illegible]

ಬೆಂಗಳೂರು ವಸ್ತು ಪ್ರದರ್ಶನಾಲಯದಲ್ಲಿರುವ, ರಾಷ್ಟ್ರಕೂಟ ಮುಮ್ಮಡಿ ಕೃಷ್ಣನ ೯೪೯ರ ಶಾಸನ (ಇದು ಎರಡು ಶಾಸನಗಳನ್ನು ಒಳಗೊಂಡಿದೆ) ಅತ್ಯಂತ ಮಹತ್ವದಾಗಿದ್ದು, ಇಮ್ಮಡಿ ಭೂತುಗನು ಗಂಗವಾಡಿ ೯೬೦೦೦ ವನ್ನು ಆಳುತ್ತಿದ್ದಾಗ ರಾಷ್ಟ್ರಕುಟ ಮುಮ್ಮಡಿಕೃಷ್ಣ, ಚೋಳರಾಜಾಧಿತ್ಯರ ನಡುವೆ ತೆಕ್ಕೋಲಂನಲ್ಲಿ ನಡೆದ ಕಾಳಗದಲ್ಲಿ ರಾಷ್ಟ್ರಕೂಟ ಸಾಮಂತ, ಗಂಗರಾಜ ಇಮ್ಮಡಿಭೂತಗನು ತನ್ನ ಮಾವುತ, ಸಗರವಂಶದ ಮಣಲಾರನ ಸಹಕಾರದೊಂದಿಗೆ ಚೋಳ ರಾಜಾದಿತ್ಯನನ್ನು ಕೊಂದ ಮಹತ್ವದ ಅಂಶವನ್ನು ದಾಖಲಿಸುತ್ತದೆ. ಮಡಿದ ನೆಚ್ಚಿನ ನಾಯಿ ಕಾಳಿಗಾಗಿ ಮಣಲಾರನು ನಿಲ್ಲಿಸಿದ ಅಪೂರ್ವ ಸ್ಮಾರಕ ಶಿಲ್ಪ ಇದಾಗಿದ್ದು, ಶಾಸನ ಕಲ್ಲಿನ ಶೀರೊಭಾಗದಲ್ಲಿರುವ ನಾಯಿ-ಹಂದಿ ಹೋರಾಟದ ಕೆತ್ತನೆ ಶಿಲ್ಪವು ಅದನ್ನೇ ಧ್ವನಿಸುತ್ತದೆ. ಊರಲ್ಲಿ ನೂರೊಂದು ಗುಡಿ ಹಾಗೂ ಬಾವಿಗಳು ಇವೆ ಎಂಬ ನಂಬಿಕೆ ಇದ್ದು, ಊರಾಚೆ ಒಳಗೆರೆದೊಡ್ಡಿ ರಸ್ತೆಯಲ್ಲಿ ಪೂರ್ವಾಭಿಮುಖವಾಗಿ ಇರುವ ಚಲ್ಲೇಶ್ವರ ದೇವಾಲಯಕ್ಕೆ ಗರ್ಭಗೃಹ, ಅಂತರಾಳ, ನವರಂಗ ಹಾಗೂ ಅರ್ಧಮಂಟಪಗಳಿದ್ದು, ಅಳಿದುಳಿದಿರುವ ಗಂಗರ ಕಾಲದ ಕೆಲವೇ ದೇವಾಲಯಗಳಲ್ಲಿ ಇದು ಒಂದೆಂಬುದು ಗಮನಾರ್ಹವಾಗಿದ್ದು, ಪುರಾತತ್ವ ಇಲಾಖೆಯಿಂದ ಸಂರಕ್ಷಿಸಲ್ಪಡುತ್ತಿದೆ. ಗರ್ಭಗೃಹದಲ್ಲಿ ಪ್ರಾಣಿ ಪೀಠ ಶಿವಲಿಂಗಗಳಿದ್ದು, ಬಾಗಿಲವಾಡುವು ಸರಳವಾಗಿದ್ದು, ಶಿಖರ ಜೀರ್ಣೋದ್ಧಾರಗೊಂಡಿದೆ.

ನವರಂಗದ ಇಕ್ಕೆಲದಲ್ಲಿ ಎರಡು ದೇವಕೋಷ್ಠಕಗಳಿದ್ದು ನಡುವೆ ನಂದಿ ಇದೆ. ಒಳಗೆ ಶಿವಲಿಂಗ ನಾಗಶಿಲ್ಪ ಹಾಗೂ ನಂದಿಗಳಿವೆ. ಊರ ನಡುವೆ ಇರುವ ತಿರುಮಲ ದೇವರ ಮುಂಭಾಗದಲ್ಲಿ ಕಲ್ಲುಗಾಣ ಹಾಗೂ ಮಂಟಪಗಳಿವೆ. ಊರಲ್ಲಿರುವ ಚನ್ನಕೇಶವ ಗುಡಿಯು ಮೂಲತಃ ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು, ನಂತರದಲ್ಲಿ ಅದಕ್ಕೆ ಸಭಾಮಂಟಪ ಹಾಗೂ ಮುಖಮಂಟಪಗಳನ್ನು ಸೇರಿಸಲಾಗಿದ್ದು, ಪೂರ್ಣವಾಗಿ ಜೀರ್ಣೋದ್ಧಾರಗೊಂಡಿದೆ. ತಿರುಮಲ ದೇವರ ಗುಡಿಗೆ ಗರ್ಭಗುಡಿ, ಅಂತರಾಳ ಹಾಗೂ ನವರಂಗಗಳಿದ್ದು, ಒಳಗೆ ಕೇಶವ ಶಿಲ್ಪವಿದೆ. ಉಳಿದಂತೆ ಊರಲ್ಲಿ ಆಂಜನೇಯ, ಮಂಟೇಸ್ವಾಮಿ, ಲಕ್ಷ್ಮೀ, ದೊಡ್ಡಮ್ಮ, ಪಟ್ಟಲದಮ್ಮ, ಆಲದಮ್ಮ ಮುಂತಾದ ಗುಡಿಗಳಿದ್ದು, ೩ ರಿಂದ ೪ ವೃಂದಾವನಗಳಿವೆ..

ಕೃಷ್ಣನು ತನ್ನ ರಾಜ್ಯ ವಿಸ್ತರಿಸುವಲ್ಲಿ ಚೋಳರಾಜಾದಿತ್ಯನ ಮೇಲೆ ಎರಗಿ ಬಂದು ತಕ್ಕೋಲದಲ್ಲಿ ಕಾದು ಅವನನ್ನು ಕೊಲ್ಲುತ್ತಾನೆ. ಶಾಸನದಲ್ಲಿ "ಗಂಗರ ಬಿರುದಾವಳಿ" ಗಳಾದ ಸತ್ಯವಾಕ್ಯ ಕೊಂಗುಣಿವರ್ಮ, ನನ್ನಿಯಗಂಗ ವಳಭಿಪುರವೇಶ್ವರ, ಸಗರ ತ್ರಿನೇತ್ರ ಇತ್ಯಾದಿ ಬಿರುದಾವಳಿಗಳು ಅನ್ವಯವಾಗಿ ಭೂತುಗನಿಗೆ ಹೇಳದಂತಿದೆ.

ಮೂಗರಿ ವೋಂ ಕದನೈಕ ಸೂದ್ರಕಂ ಭೂತುಗ ಎಂದರೆ ಶತೃಗಳನ್ನು ಬಲ್ಲ ಏಕೈಕ ಕದನವೀರ. (ಏಕಕಾಲದಲ್ಲಿ ರಥ ನಡೆಸುವಿಕೆ ಹಾಗೂ ಕದನ ಮಾಡುವ ವೀರನೆಂಬರ್ಥವಿರಬಹುದು.) ಇಂತಹ ಭೂತುಗನ ಅಂಕಕಾರ। (ಶೂರಳು) ಮನಲಾರ ತೋರಿದ ಯುದ್ಧರಂಗದಲ್ಲಿನ; ಪರಾಕ್ರಮ ಮೆಚ್ಚಿ ಬೇಡಿಕೊಳ್ಳಲು ಭೂತುಗ ಹೇಳುತ್ತಾನೆ. ಆಗ ಮನಲಾರನು ದಯೆಮಹಿರವೊಳ್ದುದ್ದು ಕಾಳಿಯೊಂ ದಯೆಗೊಡ ಎಂದು ಬೇಡುತ್ತಾನೆ.(ಕನ್ನರ ದೇವನಿಂದ ನಾಯಿಯನ್ನು ಪಡೆದನೆಂಬ ಅಭಿಪ್ರಾಯವಿದೆ) ಆದರೆ ನಾಯಿಯು ಕೃಷ್ಣನಲ್ಲಿತ್ತೇ ಭೂತುಗನಲ್ಲಿತ್ತೇ ಎಂಬುದು ಸ್ಪಷ್ಟವಿಲ್ಲ. ಕಾಳೀ ನಾಯಿಯನ್ನು ಪಡೆದ ಕಳಲೆನಾಡ (ಮಂಡ್ಯ.ಚನ್ನಪಟ್ಟಣ ನಡುವಣ ಪ್ರದೇಶ.ಬೆಳತೂರಿನ ಪಶ್ಚಿಮ ಬೆಟ್ಟದ ಬಳಿಯಲ್ಲಿ ಹಂದಿಯು ಬರುತ್ತದೆ. ಕಾಳೀ ನಾಯಿಯನ್ನು ಹಂದಿಯ ಮೇಲೆ ಎರಗಲು ಬಿಡುತ್ತಾನೆ. ಆಗ ಹೋರಾಟದಲ್ಲಿ ದೊಡ್ಡ ಹಂದಿಯೊ, ಕಾಳಿ ಎಂಬ ನಾಯಿಯೊ ಸಾವನ್ನಪ್ಪುತ್ತದೆ. ಮನಲಾರನು ತನ್ನ ಪ್ರೀತಿಯ ನಾಯಿಯ ನೆನಪಿಗಾಗಿ ಅತಕೂರ ಚಲ್ಲೇಶ್ವರ ದೇವಾಲಯದ ಮುಂದೆ ವೀರಗಲ್ಲನ್ನು ನಿಲ್ಲಿಸುತ್ತಾನೆ. ಅಲ್ಲಿನ ದೊಡ್ಡ ಕೆರೆಯ ಬಳಿ ಕಾಲುವೆ ಪಕ್ಕದ ಖಂಡುಗ ಜಮೀನನ್ನು ದಾನವಾಗಿ ಬಿಡುತ್ತಾನೆ.

ಈ ನಾಡನ್ನು ಆಳುವವರಾಗಲೀ ಈ ಊರಿನ ಇತರರಿಗಾಗಲೀ ಯಾರೆ ಈ ದಾನವನ್ನು ಅಪಹರಿಸಿದರೆ ನಾಯಿ ಮಾಡಿದ ಪಾಪವನ್ನು ಹೊರಬೇಕಾಗುತ್ತದೆ. ಅಲ್ಲದೇ ನಾಯಿಯ ಹೆಸರಿನಲ್ಲಿ ಪೂಜೆ ಮಾಡಲು ನೇಮಿಸಿದ ಗೊರವ ಪೂಜಿಸದೆ ಅದರ ಫಲ ಉಂಡನಾದರೆ ಪಾತಕಿಯಾಗುತ್ತಾನೆ ಎಂಬ ಶಾಪಾಷಯವಿದೆ.

ಉಳದಿದಿರಾಸ್ತ ಅಂದರೆ ಆವೇಶದಿಂದ ಎದುರಾದ ಚೋಳ ಚದುರಂಗಬಲವನ್ನು ಚದುರಿಸಿ ಚುಚ್ಚಿ ಇರಿದು ಸಾಯಿಸುವಲ್ಲಿ ಗರ್ವತೋರುವ ಯಾರೊಬ್ಬರಾದರೂ ಶತ್ರುವೀರರು ಕಾಣಲಿಲ್ಲ.ವೆಂಬುದಕ್ಕೆ ಚೋಳನೇ ಸಾಕ್ಷಿಯಾಗಿದ್ದ ನರಪತಿಯಾದ ಕೃಷ್ಣನು ಭೂತುಗನ ಹಿಂದೆ ಭೂತುಗನ ಮುಂದೆ ಮನಾಲರ ವೈರಿಸಮೂಹ ಓಡಿ ಬರುತ್ತಿದೆ. ವೀರರೆಲ್ಲ ಹೇಡಿಗಳಾಗಿ (ಸೆರಗುವಾಳ್ದಪೊರಿ) ವೈರಿಸಮೂಹವನ್ನು ನೋಡುತ್ತಿದ್ದಾರೆ. ಆ ಸಮಯದಲ್ಲಿ ಇನ್ತಿರೆನೆದ್ದು ಸಿಂಹದಂತೆ ಗರ್ಜಿಸಿ ಕುದುರೆಯ ಮೇಲೆ ಕುಳಿತು ಚೋಳನ ಕೋಟೆಯೆಂಬ ಆನೆಯಂತಿದ್ದ ತಲೆಯನ್ನು ಸಿಂಹದಂತೆ ನುಗ್ಗಿ ಭೂತುಗ ಹೊಡೆಯುತ್ತಾನೆ ಅಂದರೆ ಭೂತುಗನ ಅಶ್ವಸೇನೆ ಚೋಳನ ಆನೆ ಸೈನ್ಯವನ್ನು ನುಚ್ಚುನೂರುಮಾಡಿತು.ರಾಜಾದಿತ್ಯನ ತಲೆ ಹೊಡೆಯುವಂತೆ ಕದನೈಕಶೂದ್ರ ಶೂದ್ರಕನಾಗಿ ಭೂತುಗ ಶೌರ್ಯ ತೋರಿದ್ದಾನೆ.

[illegible]

[illegible]

[illegible]

ಎರೆಯಪ್ಪನ ಮಗ ರಾಚಮಲ್ಲನನ್ನು ಕಾಳಗದಲ್ಲಿ ಭೂತುಗನು ಕಾದಿಕೊಂದು 96 ಸಾಸಿರವನ್ನು ಆಳುತ್ತಿದ್ದ ಆ ಸಂದರ್ಭದಲ್ಲಿ ಕನ್ನರದೇವ ಚೋಳರ ಮೇಲೆ ಯುದ್ದಕ್ಕೆ ಹೋದ ಆಗ ಭೂತುಗ ಬಿಸುಗೆಯಕಳನಾಗಿ (ಅಂಬಾರಿ ಏರಿಹೋಗಿ) ಸುರುಗಿರದು ಕತ್ತಿಯಿಂದ ಶಿರಕಡಿದು ಕೊಂದ. ಈ ರೀತಿಯ ಶೌರ್ಯಕ್ಕಾಗಿ ಭೂತುಗನಿಗೆ ಬೆಳ್ವಲ 300 (ಬೆಳಗಾವಿ, ರಾಯಚೂರು, ಧಾರವಾಡ) ಪುರುಗೆರೆ 300 (ಲಕ್ಷೇಶ್ವರ, ಸಿಗ್ಗಾವಿ) ಕಿಸುಗಾಡಪತ್ತು (ಬಾದಾಮಿ, ರೋಣ) ಬಾಗಿನಾಡು 70 (ಬಾಗಲಕೋಟೆ) ನ್ನು ಕನ್ನರ ದೇವನು ಭೂತುಗನಿಗೆ ಕೊಡುತ್ತಾನೆ. ಭೂತುಗನು ತನ್ನ ಮುಂದೆ ನಿಂತು ವೀರಾವೇಶದಿಂದ ಹೋರಾಟದ ಮನಾಲರನಿಗೆ ಮೆಚ್ಚಿ ಅತಕೂರು 12, ಬೆಳ್ವಲದ ಕಾದಿಯಾರನ್ನು ಬಾಳ್ಗೆ ಮೆಚ್ಚುಕೊಟ್ಟನು.

ಮದ್ದೂರು ತಾಲ್ಲೂಕು ಆತಕೂರಿನ ಕ್ರಿ.ಶ.950 ರ ಒಂದು ಶಾಸನ ಕರ್ನಾಟಕದ ಶಾಸನ ಸಂಪತ್ತಿನಲ್ಲಿ ಅಪೂರ್ವವಾಗಿದೆ. ಅದು ಆತಕೂರು ಶಾಸನವೆಂದು ಪ್ರಸಿದ್ಧಿಯಾಗಿದೆ. ಪ್ರೀತಿ ಪಾತ್ರ ಪ್ರಾಣಿಗಳ ನೆನಪಿಗಾಗಿ ಹಾಕಿಸಿದ ಅಪರೂಪದ ದಾಖಲೆಗಳಲ್ಲಿ ಇದೂ ಒಂದಾಗಿದೆ. ಗಂಗವಂಶದ ಇಮ್ಮಡಿ ಬೂತುಗನ ಕೈಕೆಳಗೆ ಅಧಿಕಾರಿಯಾದ ಸಗರವಂಶದ ಮಣಲೆರ ಎಂಬಾತ ರಾಷ್ಟ್ರಕೂಟ ಅರಸು ಕಚ್ಚೆಗೆ ಕೃಷ್ಣರಾಜನು ಮೂವರು ಚೋಳರ ವಿರುಧ್ಧ ಹೂಡಿದ ತಕ್ಕೋಲದ ಸಮರದಲ್ಲಿ ಸಾಹಸದಿಂದ ಹೋರಾಡಿದ. ಆತನ ಶೌರ್ಯಕ್ಕೆ ಮೆಚ್ಚಿದ ಅರಸು ಕೃಷ್ಣರಾಜನಿಂದ ಬಳುವಳಿಯಾಗಿ **'ಕಾಳಿ'** ಎಂಬ ಹೆಸರಿನ ಬೇಟೆ ನಾಯಿಯೊಂದನ್ನು ಮಣಲೆರೆನು ಬೇಡಿ ಪಡೆದನೆಂಬ ಸಂಗತಿಯನ್ನು ಆತಕೂರು ಶಾಸನ ತಿಳಿಸುತ್ತದೆ. ಮುಂದೊಮ್ಮೆ ಮಣಲೆರ ಬೇಡಿ ಪಡೆದನೆಂಬ ಸಂಗತಿಯನ್ನು ಆತಕೂರು ಶಾಸನ ತಿಳಿಸುತ್ತದೆ. ಮುಂದೊಮ್ಮೆ ಮಣಲೆರನು ಬೇಟೆಯಾಡುವ ಸಂದರ್ಭದಲ್ಲಿ ಕಾಳಿಯು ಒಂದು ದೊಡ್ಡ ಕಾಡು ಹಂದಿಯೊಂದಿಗೆ ಬೆಳೆತೂರು ಎಂಬಲ್ಲಿ ಹೋರಾಡಿ ಅದರೊಂದಿಗೆ ಪ್ರಾಣಕಳೆದು ಕೊಳ್ಳುತ್ತದೆ. ಸ್ವಾಮಿನಿಷ್ಠೆ ನಾಯಿಗಾಗಿ ಮಣಲೆರೆನು ದತ್ತಿ ಬಿಟ್ಟ ಶಾಸನಕಲ್ಲೊಂದನ್ನು ಆತಕೂರಿನ ಚಲ್ಲೇಶ್ವರ ದೇವಸ್ಥಾನದ ಮುಂದೆ ನೆಡೆಸಿದನು. ಈ ವೀರಗಲ್ಲನ್ನು ಪ್ರತಿನಿತ್ಯವೂ ಪೂಜಿಸುವುದಕ್ಕಾಗಿ ಒಬ್ಬ ಗೊರವನನ್ನು ನೇಮಿಸಿ ಆತನಿಗೆ ಪಿರಿಯ ಕೆರೆಯ ಕೆಳಗೆ ಎರಡು ಖಂಡುಗದ ಭೂಮಿಯನ್ನು ದಾನವಾಗಿ ನೀಡುತ್ತಾನೆ. ಈ ಭೂಮಿಯನ್ನು ಹಾಳು ಮಾಡಿದವರಿಗೆ ಉಂಟಾಗುವ ಪಾಪದ ಬಗ್ಗೆ ಹಾಗೂ ಈ ಭೂಮಿಯನ್ನು ಉಪಯೋಗಿಸಿಕೊಳ್ಳುವ ಅರ್ಚಕನಾದ ಗೊರವ ದೇವಾಲಯ ಮತ್ತು ಶಾಸನಕಲ್ಲನ್ನು ಸರಿಯಾಗಿ ಪೂಜಿಸದೆ, ನೋಡಿಕೊಳ್ಳದೆ ಕೈಬಿಟ್ಟರೆ ಆತನಿಗೂ ಅಂಟುವ ಪಾಪದ ಬಗ್ಗೆ ಹೇಳಲಾಗಿದೆ. ಮುಂದೆ ಈ ಶಾಸನದಲ್ಲಿ ಪಾಲ್ಗೊಂಡ ಯುದ್ಧದ ವರ್ಣನೆ ಇದೆ. ಈ ಶಾಸನದಲ್ಲಿ ನಾಯಿಯು ಹಂದಿಯೊಡನೆ ಹೋರಾಡುತ್ತಿರುವ ದೃಶ್ಯವನ್ನು ಚಿತ್ರಿಸಲಾಗಿದೆ. ಅದರ ಸುತ್ತಲೂ ಶಾಸನವಿದೆ.

[illegible]

ಒಟ್ಟಿನಲ್ಲಿ ಇದೊಂದು ಅಪರೂಪದ ಅಪೂರ್ವ ಶಾಸನವಾಗಿದೆ. (ಸದ್ಯಕ್ಕೆ ಈ ಶಾಸನ ಬೆಂಗಳೂರಿನ ರಾಜ್ಯ ಪ್ರಾಚ್ಯ ವಸ್ತು ಇಲಾಖೆಯ ವಸ್ತು ಸಂಗ್ರಾಹಾಲಯದಲ್ಲಿದೆ) ಇಲ್ಲಿ ಗಮನಿಸಬೇಕಾದ ಒಂದು ಅಂಶವೆಂದರೆ ಶಾಸನದ ಹಿಂದಿನ ಪಾಠಾಂತರದಲ್ಲಿ ಕಾಳಿ ನಾಯಿಯನ್ನು ಬೂತುಗ ಕೊಟ್ಟನೆಂದು ಹೇಳಲಾಗಿದೆ. ನಂತರ ಅದನ್ನು ತಿದ್ದುಪಡಿ ಮಾಡಿದ ಶಾಸನ ತಜ್ಞರು ಬೇಟೆ ನಾಯಿಯನ್ನು ಕೊಡುಗೆಯಾಗಿ ನೀಡಿದವನು ಅರಸು ಕಚ್ಚೆಗೆ ಕೃಷ್ಣರಾಜನೇ ಹೊರತು ಬೂತುಗನಲ್ಲ ಎಂದು ಧೃಡಪಡಿಸಿದ್ದಾರೆ. ನಾಗವರ್ಮನ ಕಾವ್ಯಾಲೋಕದ ಪದ್ಯವೊಂದರ ಆಧಾರದ ಮೇಲೆ (ಸಂಖ್ಯೆ 183) ಮುಮ್ಮಡಿ ಕೃಷ್ಣ (ರಾಷ್ಟ್ರಕೂಟ) ತನ್ನ ಬಳಿ ಬೇಟೆನಾಯಿಗಳ ಹಿಂಡೊಂದನ್ನು ಇಟ್ಟುಕೊಂಡಿದ್ದನೆಂಬ ಸಂಗತಿಯೂ ತಿದ್ದುಪಡಿಗೆ ಪುಷ್ಠಿ ನೀಡಿದೆ. ಶಾಸನದಲ್ಲಿ ಭೂತುಗನು ಮಣಲೆರನ ಪ್ರಭುವಾಗಿ ಮಾತ್ರ ಕಾಣಿಸಿಕೊಂಡಿದ್ದಾನೆ.[೧೩]

ಶಾಸನಗಳಲ್ಲಿರುವ ವಿಷಯ ವೈವಿದ್ಯ ವಿಪುಲವಾದುದು. ಸಾಮಾನ್ಯವಾಗಿ ರಾಜರೋ ಅವರ ಅಧಿಕಾರಿಗಳೋ ಶಾಸನಗಳನ್ನು ಹಾಕಿಸುತ್ತಿದ್ದುದರಿಂದ ಅವುಗಳಲ್ಲಿ ಆಯಾ ರಾಜರ ಬಗೆಗೆ ಅವರ ಪೀಳಿಗೆಯ ಬಗೆಗೆ ವಿವರಗಳಿರುತ್ತವೆ. ಇತರರು ಶಾಸನಗಳನ್ನು ಹಾಕಿಸಿದಾಗಲೂ ಅಗ ಆಳುತ್ತಿದ್ದ ತಮ್ಮ ರಾಜರ ಹೆಸರು ಇತರ ವಿವರಗಳಿರುವುದುಂಟು. ಅದ್ದರಿಂದ ರಾಜಮನೆತನಗಳ ರಾಜರ ಅವರ ಸಾಮಂತರ ಅಧಿಕಾರಿಗಳ ಇತಿಹಾಸವನ್ನರಿಯಲು ಈ ಶಾಸನಗಳು ಮೂಲಾಧಾರವಾಗುತ್ತವೆ. ಹಾಗೆಯೇ ಆಡಳಿತ ಪದ್ಧತಿ ಆಡಳಿತ ಸೂತ್ರಗಳನ್ನು ಹಿಡಿದ ಅಧಿಕಾರಿಗಳ ಅಧಿಕಾರಸ್ಥಾನಗಳ ಹೆಸರುಗಳು ಅವರ ಅಧಿಕಾರ ವ್ಯಾಪ್ತಿ ಒಬ್ಬೊಬ್ಬ ಅಧಿಕಾರಿಗೂ ಗೊತ್ತುಪಡಿಸಿದ್ದ ಕೆಲಸ ಇದರಂತೆಯೇ ವ್ಯಾಪಾರ.

ಶ್ರೀನಿವಾಸರಾಯರ ಸತ್ರದಲ್ಲಿ ಮುಖ್ಯ ಪ್ರಾಣದೇವಾಲಯದ ಒಳಬಾಗಿಲ ಬಳಿ ಎಡಗಡೆ ಗೋಡೆಯಲ್ಲಿ ಇರುವಂತಹ ಶಾಸನ.

ತಿರುಕಾಡಿ ಶ್ರೀನಿವಾಸ್‌ರಾವ್‌ರವರು ಜನಗಳಿಗೆ ಉಪಯೋಗವಾಗಲೆಂದು ಒಂದು ಕೊಳ. ಎರಡು ಮನೆ, ತೆಂಗಿನ ಮರ ಇವುಗಳನ್ನು ದೇವಾಲಯದ ಬಳಿ ನಿರ್ಮಿಸಿ ದಾನ ನೀಡಿರುವುದು.

ಗ್ರಾಮದ ಪೂರ್ವಕ್ಕೆ ತಿರುಮಲಾಚಾರ್ಯರ (ಈಗ ಸಂಗಪ್ಪನ) ಕೊಳದ ನೈರುತ್ಯ ಮೂಲೆಯಲ್ಲಿರುವ ಶಾಸನ ತಿರುಮಲಾಚಾರ್ಯರು ಒಂದು ಕೊಳ ಮತ್ತು ತೋಪು ಹಾಗೂ ತಮ್ಮ ತಂದೆ ಗೋವಿಂದರಾಜರ ನೆನಪಿನಲ್ಲಿ ಗೋವಿಂದರಾಜ ಎಂಬ ಉದ್ಯಾನವನ್ನು ನಿರ್ಮಿಸಿ ದಾನವನ್ನು ನೀಡಿರುವುದು ಹೊಯ್ಸಳ ದೊರೆ ವೀರನರಸಿಂಹದೇವ ಮರಡಿಪುರ ಮತ್ತು

ಗರುಡನಹಳ್ಳಿಯ ಗಡಿಗಳಿಗೆ ಸಂಬಂಧಿಸಿದ ವಾಜ್ಯವನ್ನು ತೀರ್ಮಾನಿಸಿದ ಬಗ್ಗೆ 'ದಿವ್ಯ' ಶಾಸನವನ್ನು ತಿಳಿಯಬಹುದು. ಹೊಯ್ಸಳರ ಪ್ರದಾನ ಹರಿಹರ ದಂಡನಾಯಕನು ಬಸರಾಳಿನಲ್ಲಿ ಮಲ್ಲಿಕಾರ್ಜುನ ದೇವಾಲಯ ಮತ್ತು ಒಂದು ಕೆರೆಯನ್ನು ನಿರ್ಮಿಸಿ ಜಮೀನನ್ನು ದತ್ತಿ ನೀಡಿದ ಬಗ್ಗೆ ತಿಳಿಯಬಹುದು.

ಗಂಗದೊರೆ ಶಿವಮಾರನು ಕೆರೆಗೋಡು ಮತ್ತು ಅದರ ಉಪಗ್ರಾಮಗಳನ್ನು ಮಾಧವಶರ್ಮ ಎಂಬ ಬ್ರಾಹ್ಮಣರಿಗೆ ದತ್ತಿ ನೀಡಿದ ಬಗ್ಗೆ ತಿಳಿಯಬಹುದು.

ಪುರುಷೋತ್ತಮದೇವ (ಈತ ಗುತ್ತಲಿನ ಕೇಶವ ದೇವಾಲಯದ ಸ್ಥಾನಿಕ) ಸರ್ವಜ್ಞ ಪದ್ಮನಾಭಪುರದ ಮಹಾಜನರಿಗೆ ದೇವ.



ಕಂಬದಹಳ್ಳಿ ಗ್ರಾಮವು ನಾಗಮಂಗಲ ತಾಲ್ಲೂಕಿನಲ್ಲಿದೆ.

ಇದೊಂದು ಪ್ರಸಿದ್ಧ ಜೈನಕೇಂದ್ರ ಈ ಊರಿನಲ್ಲಿರುವ ಬೃಹದಾಕಾರದ ಕಂಬದಿಂದಾಗಿ ಈ ಊರಿಗೆ ಕಂಬದಹಳ್ಳಿ ಎಂಬ ಹೆಸರು ಬಂದಿದೆ. ಈ ಕಂಬವು ಒಂದು ಸ್ತಂಭ ಶಾಸನವಾಗಿದ್ದು ಸುಮಾರು ೫೦ ಅಡಿ ಎತ್ತರವಿದೆ. ಕಂಬವು ಸುಮಾರು ೧೦ ಅಡಿ ವೇದಿಕೆಯ ಮೇಲೆ ನಿಂತಿದೆ. ವೇದಿಕೆಯ ಮೇಲೆ ಕಂಬದ ಬುಡದಲ್ಲಿ ಪುಷ್ಪಾಕಾರದ ಒಂದು ಶಿಲಾ ರಚನೆ ಇದೆ. ಇದರ ಮೇಲೆ ಕಂಬವನ್ನು ನಿಲ್ಲಿಸಿದ್ದಾರೆ. ಕಂಬದ ಮೇಲೆ ಅನೇಕ ಅಕರ್ಷಕವಾದ ಕೆತ್ತನೆಗಳು, ಉಂಗುರಗಳೂ

1

ಇವೆ. ಕಂಬದ ತುದಿಯಲ್ಲಿ ಆಯಾತಾಕಾರದ ಒಂದು ಕಲ್ಲಿನ ಚಪ್ಪಡಿಯಿದ್ದು, ಅದರ ಮೇಲೆ **'ಯಕ್ಷನ'** ಶಿಲ್ಪವಿದೆ. ಈ ಸ್ತಂಭದ ಬುಡದಲ್ಲಿರುವ ಶಾಸನವು ಹೊಯ್ಸಳರ ವಿಷ್ಣುವರ್ಧನನ ಮಹಾಪ್ರದಾನಿ ಗಂಗರಾಜನು ತಲಕಾಡನ್ನು ಗೆದ್ದ ಸಂದರ್ಭದಲ್ಲಿ ಹೊಯ್ಸಳರ ದೊರೆ ವಿಷ್ಣವರ್ಧನನು ಗಂಗರಾಜನಿಗೆ ಬಿಂಡಿಗನವಿಲೆ ತೀರ್ಥಕ್ಕೆಂದು ಜಮೀನನ್ನು ದತ್ತಿನೀಡಿದ್ದ ವಿಷಯ ಇದರಲ್ಲಿದೆ. ಶಾಸನದ ಕಾಲ ಕ್ರಿ.ಶ. ೧೧೧೮–೧೯



ಚಟ್ಟಂಗೆರೆ ಶಾಸನ (ಹೈದರಾಲಿ)

ಚಟ್ಟಂಗೆರೆ ಗ್ರಾಮವು ಕೃ.ಪೇ.ತಾಲ್ಲೂಕಿನಲ್ಲಿದೆ. ಈ ಗ್ರಾಮದಲ್ಲಿ ಹೈದರಾಲಿ ಕಾಲದ ಮೂರು ಶಾಸನಗಳಿವೆ. ಈ ಶಾಸನದ ಪ್ರಕಾರ ಹೈದರಾಲಿಯು ಚಟ್ಟಂಗೆರೆ ಗ್ರಾಮವನ್ನು ೪೩೦೦/– ರೂಪಾಯಿಗಳಿಗೆ ಮೈಸೂರು ಅರಸರಿಂದಕೊಂಡು ತೋಣ್ಣೂರಿನ ನೀಲಂ ಖಾದರಿದರ್ಗಾಕ್ಕೆ ದತ್ತಿ ನೀಡಿರುತ್ತಾನೆ. ಈ ಶಾಸನದ ವಿಶೇಷತೆ ಎಂದರೆ ಹಿಂದೂ ಶಾಸನಗಳಲ್ಲಿ ಸಾಮಾನ್ಯವಾಗಿ ಶಾಸನದ ಮೇಲಿನ ಪಟ್ಟಿಕೆಯಲ್ಲಿ ಈಶ್ವರ ಲಿಂಗ, ನಂದಿ ಇತ್ಯಾದಿ ಇರುವುದು ವಾಡಿಕೆ. ಆದರೆ ಹೈದರಾಲಿಯ ಈ ಶಾಸನದಲ್ಲಿ ಮೇಲಿನ ಪಟ್ಟಿಕೆಯಲ್ಲಿ ಪಂಜದ (ಹಸ್ತ) ಕೆತ್ತನೆಯಿದೆ. ಬಿಲ್ಲು ಬಾಣಗಳ ಕೆತ್ತನೆಯಿದೆ. ವಾಡಿಕೆಯಂತೆ ಸೂರ್ಯ ಚಂದ್ರರ ಕೆತ್ತನೆಯಿದೆ.

1

ಮದ್ದೂರಿನ ಗ್ರಾಮದೇವತೆ:

ಊರಾಚೆ ಹೆದ್ದಾರಿ ಬದಿಯಲ್ಲಿರುವ ಮದ್ದೂರಮ್ಮನ ಗುಡಿಯು ಛಾವಣಿ ರಹಿತ ಬಯಲು ಗುಡಿಯಾಗಿದ್ದು, ಈ ದೇವತೆಯು ಮದ್ದೂರಿನ ಗ್ರಾಮದೇವತೆಯಾಗಿ ನೆಲೆಸಿದ್ದಾಳೆ. ಮದ್ದೂರಮ್ಮನು ಕೊಡಗಿನ ಕಡೆಗೆ ವ್ಯಾಪಾರಕ್ಕೆ ಹೋಗಿದ್ದ ಮದ್ದೂರಿನ ವ್ಯಾಪಾರಿಗಳ ಜೊತೆ ಇಲ್ಲಿಗೆ ಬಂದು ನೆಲಸಿರುವಳೆಂಬ ಅಭಿಪ್ರಾಯವಿದೆ. ವಿಶಾಲವಾದ ಪ್ರಕಾರದಲ್ಲಿ ನಡುವೆ ಮಂಡಿಮಟ್ಟದ ತಗ್ಗಿನಲ್ಲಿ ಸಪ್ತ ಮಾತೃಕೆಯರು ಹಾಗೂ ತ್ರಿಶೂಲಗಳಿದ್ದು ಅಲ್ಲಿ ಅಲಂಕಾರವಾಗಿದೆ.

ಈ ದೇವಾಲಯದ ಆವರಣದಲ್ಲಿ ಒಂದು ಬನ್ನಿ ಮರ ಇದೆ. ಮದ್ದೂರಮ್ಮನು ಕೊಡಗಿನಿಂದ ಅಡಿಕೆಯ ಬಂಡಿಯಲ್ಲಿ ಬಂದು ಮೊದಲು ಪಾದದ ಗುರುತನ್ನು ತೋರಿಸಿದಳು ಎಂದು ಹೇಳಿದ್ದಾರೆ.

ಮದ್ದೂರಮ್ಮನನ್ನು ಪೂಜೆ ಮಾಡುವವರು ತಿಗುಳರಾಗಿದ್ದು ಇಂದಿಗೂ ಸಹ ಅವರೇ ಪೂಜೆಯನ್ನು ಮಾಡುತ್ತಿದ್ದಾರೆ. ಈ ದೇವಾಲಯವು ಊರಾಚೆಯ ಮಾವಿನ ತೋಪಿನಲ್ಲಿ ಶಿಂಷಾನದಿಯ ದಂಡೆಯಲ್ಲಿದ್ದು ಈ ದೇವತೆಗೆ ಶಿಂಷಾ ನದಿಯ ನೀರಿನಲ್ಲಿ ಮೊದಲು ಅಭಿಷೇಕವಾಗುತ್ತದೆ. ಏಕೆಂದರೆ ಕೊಡಗಿನಿಂದ ಬಂದವಳಿಗೆ ಕೊಡಿನ ಕಾವೇರಿಯಿಂದ ಅಭಿಷೇಕವಾಗುತ್ತದೆ.

ಈ ದೇವಾಲಯದಲ್ಲಿ ದೇವತೆಯ ಅಸ್ತ್ರವನ್ನು ಹಿಡುಕೊಂಡು ನಿಂತಿದ್ದಾಳೆ. ಕೆಳಭಾಗದಲ್ಲಿ ಸರ್ಪದ ಚಿತ್ರಣವೂ ಸಹ ಇದೆ. ಈ ದೇವಾಲಯದ ಪಕ್ಕದಲ್ಲಿ ಒಂದು ದೊಡ್ಡ ಹುತ್ತವು ಸಹ ಇದೆ. ವರುಷಕ್ಕೊಮ್ಮೆ ನಡೆಯುವ ಜಾತ್ರೆಯ ಉತ್ಸವಕ್ಕೆ ಕೊಂಡದ ಜಾಗವು ಸಹ ಇದೆ.

ಶ್ರೀ ಮದ್ದೂರಮ್ಮನು ಗ್ರಾಮದೇವತೆಯಾಗಿ ನೆಲೆಸಿದ್ದಾಳೆ. ಮದ್ದೂರಮ್ಮನ ಜಾತ್ರೆಯ ಒಂದು ವಾರ ನಡೆಯುತ್ತದೆ. ಈ ಜಾತ್ರೆಯು ವರ್ಷಂಪ್ರತಿ ಚೈತ್ರ ಶುಕ್ಲಪಕ್ಷದಲ್ಲಿ ಅಂದರೆ ಯುಗಾದಿ ಮುಗಿದ ಹದಿನೈದು ದಿನಗಳ ನಂತರದಲ್ಲಿ ಈ ಜಾತ್ರೆಯು ನಡೆಯುತ್ತದೆ.

ಮದ್ದೂರಮ್ಮನು ಹಬ್ಬ ಹದಿನೈದು ಮತ್ತು ತಿಂಗಳು ಇರುವಾಗಲೇ ಊರು ಊರುಗಳಲ್ಲಿ ಸುತ್ತಿಕೊಂಡು ಬರುತ್ತಾಳೆ. ಇದರ ಉದ್ದೇಶವೇನೆಂದರೆ ಅವಳು ಸುತ್ತೇಳು ಏಳು ಹಳ್ಳಿಗಳಿಗೂ ಸಹ ಸೇರಿದವಳಾಗಿರುತ್ತಾಳೆ. ಆದ್ದರಿಂದ ಜನಗಳು ತಮ್ಮ ಹರಕೆಯನ್ನು ಸಲ್ಲಿಸುತ್ತಾರೆ. ಅವರು ಒಡವೆ, ವಸ್ತ್ರ, ಅಕ್ಕಿ ಇನ್ನೂ ಮುಂತಾದ ದವಸ ಧಾನ್ಯಗಳನ್ನು ಅವಳ ಹರಕೆಗೆ ಒಪ್ಪಿಸಿ ಕಳುಹಿಸುತ್ತಾರೆ.

ಕೆಲವರು ತಮ್ಮ ಹರಕೆಯನ್ನು ಕುರಿಯನ್ನು ಕಡಿದು ನಿನ್ನ ಪಾದಕ್ಕೆ ಒಪ್ಪಿಸುತ್ತೇವೆ ಎಂದು ಹರಕೆಮಾಡಿಕೊಂಡು ಅವರು ಕುರಿಯನ್ನು ಕಡಿದು ಜನಗಳಿಗೆ ಅನ್ನ ಸಂತರ್ಪಣೆಯನ್ನು ಮಾಡುತ್ತಾರೆ. ಈ ಒಂದು ಜಾತ್ರೆಯ ಉತ್ಸವಕ್ಕೆ ಸುಮಾರು ಹದಿನೈದು ದಿನಳ ಮುಂಚಿತವಾಗಿಯೇ ದನಗಳ ಜಾತ್ರೆಯು ಸಹ ನಡೆತಯುತ್ತದೆ. ತುಂಬಾ ಹಿಂದಿನ ಕಾಲದಲ್ಲಿ ಬಹು ಸಂಖ್ಯೆಯಲ್ಲಿ ದನಗಳು ಸೇರುತ್ತಿದ್ದವು. ಆದರೆ ಈಗ ಆಧುನಿಕ ಪರಿಸರ ಒಳಗೊಂಡಿರುವ ಜನರು ಹೆಚ್ಚು ಬರಲು ಇಷ್ಟ ಪಡುವುದಿಲ್ಲ. ಆದ್ದರಿಂದ ಇತ್ತೀಚೇಗೆ ತುಂಬಾ ಕಡಿಮೆಯಾಗುತ್ತಿದೆ.

ಮದ್ದೂರಮ್ಮ ಸುತ್ತ ಏಳೂರಮ್ಮ ಸುತ್ತಿಕೊಂಡು ತನ್ನ ಪೂಜೆಯ ಸಿದ್ದತೆಗೆ ಒಳಗಾಗುತ್ತಾಳೆ. ಹಬ್ಬವು ಸೋಮವಾರ ಮದ್ದೂರಮ್ಮನ ಅಣ್ಣನಾದ ನರಸಿಂಹ ಸ್ವಾಮಿಯವರ ಪೂಜೆಯಿಂದ ಆರಂಭವಾಗುತ್ತದೆ. ಮಂಗಳವಾರ ಶ್ರೀ ಮದ್ದೂರಮ್ಮ ಅಣ್ಣನಾದ ನರಸಿಂಹ ಸ್ವಾಮಿಯವರ ಪೂಜೆಯಿಂದ ಆರಂಭವಾಗುತ್ತದೆ. ಮಂಗಳವಾರ ಶ್ರೀ ಮದ್ದೂರಮ್ಮನ ವಾರವಾಗಿರುತ್ತದೆ. ಅವಳು ತನ್ನ ಮಠ ಮನೆಯಿಂದ ಹೊರೆಗೆ ಹೋಗಿ ಹೊಳೆಯಿಂದ ಮಡಿ, ಮೈಲಿಗೆಗಳಿಂದ ಹೆಬ್ಬಾರೆ, ತಮಟೆ, ವಾದ್ಯ ಸದ್ದುಗಳಿಂದ ಅಮ್ಮನನ್ನು ಕುಣಿಸಿ ಮೆರೆಸಿ ತರುತ್ತಾರೆ.

ಮದ್ದೂರಮ್ಮ ಹೇಳಿರುವ ಹಾಗೆ ವಾಜರ ಮನೆಯಿಂದ ತಾಳಿ, ಅಗಸರ ಮನೆಯಿಂದ ಮಡಿ ಬಟ್ಟೆ ಹಾಗೂ ಹೆಣ್ಣು ಮಕ್ಕಳು ಇವಳಿಗೆ ಕನ್ನಡಿ ಕಳಸವನ್ನು ಹಿಡಿಯಬೇಕು. ಇದು ಇಂದಿಗೂ ಸಹ ನಡೆದು ಬರುತ್ತಾ ಇದೆ. ಈ ದೇವಾಲಯದ ಬಗ್ಗೆ ಜನರು ಹೇಳಿರುವ ಜನಪದ ಕಥೆಯು ಸಹ ಇದೆ.

ಜನಪದ ಕಥೆ

ಕೆರೆಯ ಹಿನ್ನಲೆ: ನರಸಪ್ಪ ಶೆಟ್ಟರು ಎಂಬುವವರ ಕನಸಿನಲ್ಲಿ ಹೊನ್ನಮ್ಮದೇವಿ ಎಂಬ ದೇವರು ಹೋಗಿ ನಿನ್ನ ಹಿರಿಯ ಸೊಸೆಯನ್ನು ಕೆರೆಗೆ ಬಲಿಕೊಟ್ಟರೇ ಕೆರೆಯಲ್ಲಿ ನೀರು ಬರುತ್ತದೆ ಎಂದು ಹೇಳುತ್ತದೆ. ಆಗ ನರಸಪ್ಪನು ಕೆಲವು ದಿನ ಯೋಚಿಸಿ ಊರಿಗೆ ಒಳ್ಳೆಯದಾಗುವ ಹಾಗಿದ್ದರೆ ನನ್ನ ಸೊಸೆಯನ್ನು ಬಲಿಕೊಡುವುದರಲ್ಲಿ ಏನೂ ತಪ್ಪಿಲ್ಲ ಎಂದು ಒಂದು ದಿನ ಸೊಸೆಯನ್ನು ಹೊಸ ಕೆರೆಗೆ ಹೋಗೋಣ ಎಂದು ಹೇಳಿ ಕರೆದುಕೊಂಡು ಹೋಗುವಾಗ ಆ ಸೊಸೆಯು ಹೋಗುವಾಗ ಹುಣಸೇ ಬೀಜಗಳನ್ನು ತಾನು ಹೋಗುವ ದಾರಿಯಲ್ಲಿ ಹುದುರಿಸಿಕೊಂಡು ಹೋಗುತ್ತಾಳೆ. ಅವಳು ಹೋದ ದಾರಿಯಲ್ಲಿ ಅವಳು ಹೋದ ದಾರಿಯಲ್ಲಿ ಹುಣಸೇಮರಗಳು ಬೆಳೆದು ನಿಂತಿವೆ.

[illegible]

[illegible]

[illegible]

[illegible]

ನಂತರ ಸೊಸೆ ಮತ್ತು ಮೊಮ್ಮಗ ಇಬ್ಬರು ಸಹ ಆ ಕೆರೆಯ ಹತ್ತಿರ ಹೋಗಿ ನಿಂತುಕೊಂಡ ಕೂಡಲೇ ಅವಳ ಮಂಡಿಯ ಬಳಿಗೆ ನೀರು ಬರುತ್ತದೆ. ಸೊಸೆಯೂ ಸಂತೋಷದಿಂದ ಕೆರೆಯಲ್ಲಿ ನೀರು ಬಂದಿತು ಮಗುವನ್ನು ಎತ್ತಿಕೊಳ್ಳಿ ಎಂದಾಗ ಅವರ ಗಂಡನ ಮನೆಯವರಾಗಲೀ ತಂದೆಯ ಮನೆಯವರಾಗಲೀ ಯಾರು ಸಹ ಮುಂದಕ್ಕೆ ಬರುವುದಿಲ್ಲ. ಕೆರೆಯ ನೀರು ನೋಡು ನೋಡುತ್ತಿದ್ದಂತೆಯೇ ಹೆಚ್ಚಾಗಿ ಸೊಸೆ ಮತ್ತು ಮೊಮ್ಮಗ ಇಬ್ಬರು ಸಹ ನೀರಿನಲ್ಲಿ ಮುಳಗಿ ಹೋಗುತ್ತಾರೆ. ಅಂದಿನಿಂದ ಮದ್ದೂರು ಕೆರೆಯಲ್ಲಿ ನೀರು ಬಂದಿತು ಎಂದು ಜನಪದರ ಹೇಳಿಕೆಯಾಗಿದೆ.

ಈ ಮನೆಯವರು ಇಂದಿಗೂ ಸಹ ಆದೇವಿಯನ್ನು ಪೂಜೆಮಾಡುತ್ತಾ ಬಂದಿದ್ದಾರೆ. ಪ್ರತಿ ವರ್ಷ ಗೌರಿಹಬ್ಬದ ದಿನದಂದು ಅವರ ಮನೆಯವರು 'ಬಾಗಿನ'ವನ್ನು ನೀರಿನಲ್ಲಿ ತೇಲಿಬಿಡುತ್ತಾರೆ. ಅದು ಹಾಗೇ ಹರಿದು ಹೋಗಿ ದೇವತೆ ಇರುವ ಜಾಗದಲ್ಲಿ ಮುಳುಗಿಕೊಳ್ಳುತ್ತದೆ.

ಹಾಗೂ ಆದೇವಿಯು ಹೊನ್ನಾದಿವಿಯಾಗಿದ್ದು, ಯಾರದರೂ ಹೋಗಿ ಇಂದು ನನಗೆ ಒಡವೆಗಳು ಬೇಕು ಎಂದು ಕೇಳಿದಾಗ ಒಂದು ಸೇತುವೆಯ ಬಳಿಯಲ್ಲಿ ಬಂದು ಒಂದ ಬುತ್ತಿಯನ್ನು ಇಟ್ಟು ಹೋಗುತ್ತಿದ್ದಳಂತೆ, ಆನಂತರ ಅವರು ಹಾಗೆಯೇ ತಂದು ವಾಪಸ್ಸು ಕೊಡುತ್ತಿದ್ದರಂತೆ.

ಒಂದು ದಿನ ದೇಶಹಳ್ಳಿಯ ಒಬ್ಬ ಹೊಲೆಯ ಬಂದು ಹೊನ್ನಮ್ಮ ಎಂದು ಕೂಗಿದಾಗ ಆದೇವಿಯು ಒಹೋ ಎಂದು ಹೇಳಿದಾಗ, ನಿನ್ನ ಸೊಲ್ಲು ಇನ್ನು ನಿಂತಿಲ್ಲವಲ್ಲ ಎಂದು ಬಿಟ್ಟ ಅಂದಿನಿಂದ ಹೊನ್ನಾದೇವಿಯು ತನ್ನ ಮಾತನ್ನು ನಿಲ್ಲಿಸಿಬಿಟ್ಟಳಂತೆ ಎಂದು ಜನಪದೀಯ ಮಾತುಗಳಾಗಿವೆ.

ನರಸಪ್ಪ ಎಂಬುವವರು ಬೀದಿಯಲ್ಲಿ ಬರುವಾಗ ಒಂದು ಮಗುವು ಆಳುತ್ತಾ ಕುಳಿತಿರುವುದನ್ನು ಕಂಡು ಅದನ್ನು ಮೇಲೆತ್ತಿಕೊಂಡು ಮನೆಗೆ ಹೋಗುವಷ್ಟರಲ್ಲಿ ಅದು ಶಿಲೆಯಾಗಿಬಿಟ್ಟಿತು. ನಂತರ ಅದನ್ನು ತನ್ನ ಮನೆಗೆ ತೆಗೆದುಕೊಂಡು ಹೋಗಿ ಟ್ರಂಕ್‌ನಲ್ಲಿ ಇಟ್ಟಿರುತ್ತಾನೆ.

ಒಂದು ದಿನ ಮೈಸೂರು ರಾಜರ ಮನೆಯ ಸಂಬಂಧಿಕರು ಇವರ ಮನೆಯಲ್ಲಿ ಹೆಣ್ಣು ಕೇಳಲು ಬರುತ್ತಾರೆ. ಅವರು ಮನೆಯ ಹತ್ತಿರ ಬಂದಾಗ ಹೂ ರಾಶಿ ಇರುತ್ತದೆ. ಅನಂತರ ಅದು ಮಾಂಡದ ರಾಶಿಯಾಗಿ ಬಿಡುತ್ತದೆ. ಅದಕ್ಕೆ ಅವರು 'ಬಾಡು ತಿನ್ನೋ ಬಂಜಗರ' ಮನೆಯಲ್ಲಿನ ಹೆಣ್ಣು ನಮಗೆ ಬೇಡ ಎಂದು ಅವರು ವಾಪಸ್ಸು ಹೋಗುತ್ತಾರೆ. ನಂತರ ಶಿಲೆಯನ್ನು ಇಟ್ಟ

ಜಾಗದಲ್ಲಿ ಮೊರೆಯಲು ಶುರುವಾಯಿತು. ಇದನ್ನು ಕಂಡು ಭಯವಾಗಿ ನಾಡಗೌಡರಿಗೆ ಹೇಳಿದಾಗ ಅವರು ಇದು ಯಾವುದೋ ದೇವರು ಇರಬಹುದು ಇದು ದೇವರಾದರೆ ಯಾರ ಮೈಮೇಲೆ ಬರಲಿ ಎಂದು ಊರಲ್ಲಿ ಸಾರಿಸಿಸುತ್ತಾರೆ ಎಲ್ಲ ಜಾತಿಯವರು ಹಸಿದು ಪೂಜೆಯನ್ನು ಮಾಡಬೇಕೆಂದು. ನಂತರ ಎಲ್ಲರೂ ಹಾಗೆ ಮಾಡಿ ಮಾವಿನ ತೋಪಿಗೆ ಹೋಗುತ್ತಾರೆ. ಅಷ್ಟರಲ್ಲಿ ಅಲ್ಲಿ ದೇವರು ಮೂಡಿರುತ್ತದೆ. ಗುರುವಪ್ಪ ಎಂಬುವವನ ಕನಸಿನಲ್ಲಿ ಬಂದು ನನು ಆದಿಲಕ್ಷ್ಮೀಯಾಗಿ ಮೈಸೂರಿನಿಂದ ಬಂದಿರುವೆ. ನಾನು ಇಲ್ಲೇ ದೇವತೆಯಾಗಿ ನೆಲೆಸಬೇಕು ಎಂದು ಹೇಳಿದಾಗ ನಂತರ ಅದಕ್ಕೆ ಮದ್ದೂರಮ್ಮ ಎಂದು ನಾಮಕರಣ ಮಾಡುತ್ತಾರೆ.

ನಂತರ ಮದ್ದೂರಮ್ಮ ಗುರುವಪ್ಪನವರ ಕನಸಿನಲ್ಲಿ ಬಂದು ನನಗೆ ವಾಜರ ಮನೆಯಿಂದ ಹೊಸತಾಳಿಯನ್ನು ತಂದುಕೊಡಬೇಕು. ಅಗಸರ ಮಡಿ ಬಟ್ಟೆಯನ್ನು, ಕೈ ಪಂಜನ್ನು ತರಬೇಕು. ಇವರೆಲ್ಲಾ ನನ್ನ ಮಕ್ಕಳು. ಹೆಣ್ಣು ಮಕ್ಕಳು ಕಳಸ, ಕನ್ನಡಿ, ಹೊಂಬಾಳೆ ಹೂವು, ಹಣ್ಣನ್ನು ಹಿಡಿದು ಬರಬೇಕು. ಹಾಗೂ ಏಳು ಊರುಗಳಿಂದ ನನಗೆ ಹಸಿ ಬನ್ನಿ ಸೌದೆಯನ್ನು ತರಬೇಕು. ಹಾಗೂ ಶಿವಪುರದಲ್ಲಿರುವ ಬಸವಣ್ಣ ಹಾಗೂ ನರಸಿಂಹಸ್ವಾಮಿಯವರ ಪೂಜೆ ಮೊದಲು ಆಗಬೇಕು. ಆನಂತರ ನಾನು ವೈಭೋಗದಿಂದ ಕೊಂಡ ಹಾಯುತ್ತೇನೆ ಎಂದು ಹೇಳುತ್ತಾಳೆ.

ಮದ್ದೂರಮ್ಮ ಮಾಂಸಹಾರಿಯಲ್ಲ, ಆದರೆ ನಾವು ಮಾಡುವ ಮಾಂಸದ ಊಟವು ಅವರ ಭಂಟರಿಗೆ ಮಾತ್ರ ಸಲ್ಲುತ್ತದೆ. ಮದ್ದೂರಮ್ಮನಿಗೆ ಬರಿ ಸಿಹಿಊಟ ಮಾತ್ರ ಸಲ್ಲುತ್ತದೆ.

ಕೊಂಡ ಹಾಯುವವರ ಆಹಾರ:

ಕೊಂಡದ ದಿನ ದೇವರು ಕುರಿಗಳ ಬಲಿಯನ್ನು ಕೊಟ್ಟಿರುವ ರಕ್ತದ ಹೊಳೆಯಲ್ಲಿ ನಡೆದು ಬರುತ್ತಾಳೆ. ಬಂದು ಕೊಂಡ ಹಾಯ್ದು ಹೋಗುತ್ತದೆ.

ಕೊಂಡ ಹಾಯುವವರು ಒಂದು ವಾರದ ಮುಂಚೆಯೇ ಬೇಯಿಸಿದ ಆಹಾರವನ್ನು ತಿನ್ನುವುದನ್ನು ಬಿಟ್ಟಿರುತ್ತಾರೆ. ಎಳನೀರು, ಹಣ್ಣು, ಹಂಪಲುಗಳನ್ನು ತಿನ್ನುತ್ತಾರೆ. ಕೊಂಡವನ್ನು ಹಾಯ್ದ ನಂತರವೂ ಅವರು ಬೆಲ್ಲದ ಅನ್ನವನ್ನು ತಿನ್ನುತ್ತಾರೆ. ಈ ಅನ್ನವನ್ನು ಭತ್ತವನ್ನು ಕುಟ್ಟಿಯಾಗಲೀ ಅಥವಾ ಮಿಷನ್‌ನಲ್ಲಾಗಲೀ ಬಿಡಿಸುವುದಿಲ್ಲ. ಭತ್ತವನ್ನು ಕೊಯ್ದುತಂದು ಒಂದೊಂದನ್ನು ಕೈಯಿಂದ ಬಿಡಿಸಿ ಅನ್ನವನ್ನು ತಯಾರಿಸುತ್ತಾರೆ. ಅದನ್ನು ಕೊಂಡ ಹಾಯ್ದ ವ್ಯಕ್ತಿ ಬಂದು ಅನ್ನವನ್ನು ತಿನ್ನುತ್ತಾನೆ. ಅದು ಈಗಲೂ ಸಹ ರೂಢಿಯಲ್ಲಿದೆ.

ಬ್ರಾಹ್ಮಣ ಮತ್ತು ಲಿಂಗಾಯಿತ ವರ್ಗದವರು ಸಹ ಇದ್ದು ಅವರು ಸಸ್ಯಹಾರಿಗಳಾಗಿದ್ದು, ನರಸಿಂಹಸ್ವಾಮಿಯ ರಥೋತ್ಸವದ ದಿನ ಹಬ್ಬವನ್ನು ಆಚರಿಸುತ್ತಾರೆ. ಮದ್ದೂರಿನಲ್ಲಿ ಶ್ರೀ ಗುರುರಾಘವೇಂದ್ರರ ಮಠವು ಸಹ ಇದೆ. ಇದು ಇತ್ತೀಚಿಗೆ ಸ್ಥಾಪನೆಗೊಂಡಿದೆ. ವಾರದ ದಿನ ಗುರುವಾರ ವಿಶೇಷಪೂಜೆ ಇರುತ್ತದೆ. ಪ್ರತಿ ವರ್ಷವೂ ಆರಾಧನೆಯು ಸಹ ನಡೆಯುತ್ತದೆ.

ಹೆಬ್ಬಾರೆ: ಇದು ಹೊಲೆಯರ ಮನೆಯಿಂದ ಹೋಗಬೇಕು. ಈ ಹೆಬ್ಬರೆ ಹೋಗಲಿಲ್ಲವೆಂದರೆ ಅಮ್ಮ ಮೈದುಂಬಿ ಕುಣಿಯುವುದೇ ಇಲ್ಲ. ದಲಿತರು ಇದರಲ್ಲಿ ಮುಂದೆ ಇದ್ದಾರೆ ಎಂದು ಗಮನಿಸಬಹುದು. ಅಂದರೆ ದೇವರಿಗಿಂಗ ಇವರು ಮುಂದೆ ಇದ್ದಾರೆ ಎಂದು.

ಮಂಗಳವಾರ ಮದ್ದೂರಮ್ಮನಿಗೆ ಸಿಹಿ ಊಟವನ್ನು ಮಾಡಿ ಮನೆಯಲ್ಲಿ ರಾತ್ರಿ ಎಡೆಯನ್ನು ಹಾಕಿ ಪೂಜೆಯನ್ನು ಮಾಡಬೇಕು. ನಂತರ ರಾತ್ರಿಯಲ್ಲಿ ತಂಬಿಟ್ಟನ್ನು ಕಲಿಸಿ ಇಟ್ಟುಕೊಳ್ಳಬೇಕು. ಬುಧವಾರ ಬೆಳಿಗ್ಗೆ ಹೆಬ್ಬಾರೆಯನ್ನು ಇಟ್ಟಿರುವವರ ಮನೆಯವರು ತಂಬಿಟ್ಟನಾರತಿಯನ್ನು ತೆಗೆದುಕೊಂಡು ಹೋಗಿ ಮದ್ದೂರಮ್ಮನ ಹೆಬ್ಬಾಗಿಲಿನ ಬಳಿಯಲ್ಲಿ ಹೆಬ್ಬರೆಯನ್ನು ಇಟ್ಟು ಪೂಜೆಯನ್ನು ಸಲ್ಲಿಸುತ್ತಾರೆ. ಇದಕ್ಕೂ ಮೊದಲು ಮಂಗಳವಾರ ರಾತ್ರಿ ಏಳೂರಿನಿಂದ ಬನ್ನಿ ಹಸಿಸೌದೆಯನ್ನು ತಂದು ಕೊಂಡಕ್ಕೆ ಅಣಿಮಾಡಿರುತ್ತಾರೆ. ದೇವರು ಈ ಕುರಿಯನ್ನು ಕಡಿದ ರಕ್ತದೊಳಗೆ ನಡೆದುಕೊಂಡು ಹೋಗಿ ಕೊಂಡವನ್ನು ಹಾಯುತ್ತಾಳೆ. ಅಲ್ಲಿ ಕೊಂಡವನ್ನು ಹಾಯ್ದಾಗ ಹೆಬ್ಬರೆಯನ್ನು ಜೋರಾಗಿ ಬಡಿದಾಗ ಊರಿನಲ್ಲಿ ಇರುವ ಎಲ್ಲ ಜಾತಿಯವರು ಸಹ ಅವರವರ ಮನೆಯ ಮುಂದೆ ಕೋಳಿ, ಕುರಿಯನ್ನು ಬಲಿಕೊಡುತ್ತಾರೆ. ನಂತರ ಅದನ್ನು ಬಂದ ಜನಗಳಿಗೆ ಮಾಡಿ ಬಡಿಸುತ್ತಾರೆ.

ಆದರೆ ಈ ಮಾಂಸವು ಮದ್ದೂರಮ್ಮನಿಗೆ ಸಲ್ಲುವುದಿಲ್ಲ. ಅದು ಅವಳ ಭಂಟರಿಗೆ ಮಾತ್ರ. ಗುರುವಾರ ಮದ್ದೂರಮ್ಮನ ಸಿಡಿಯ ಆಚರಣೆ ನಡೆಯುತ್ತದೆ. ಈ ಸಿಡಿಯು ೩ ಸಲ ಆಡುತ್ತದೆ. ಈ ಸಿಡಿಯು ಮದ್ದೂರಮ್ಮ ತನ್ನ ಮಗನಾದ ಸಿಡಿರಣ್ಣನ ಜೊತೆಯಲ್ಲಿ ಆಡುತ್ತಾಳೆ.

ಈ ಸಿಡಿಯು ಆಚರಣೆಯಲ್ಲಿ ತೊಟ್ಟಿಲನ್ನು ಆಡಿಸುತ್ತಾರೆ. ಮಕ್ಕಳು ಹಾಗದೇ ಇರುವವರು ಮತ್ತು ಮಕ್ಕಳಿಗೆ ಏನಾದರೂ ಖಾಯಿಲೆ ಬಂದರೇ ಅವರು ನನ್ನ ಮಗುವಿಗೆ ಹುಷಾರಾದರೆ ಸಿಡಿಯನ್ನು ಆಡಿಸುತ್ತೇನೆ ಎಂದು ಹರಸಿಕೊಳ್ಳುತ್ತಾರೆ. ಅದಕ್ಕಾಗಿ ಒಂದು ಕಡೆ ಸಿಡಿಯನ್ನು ಕಟ್ಟಿ ಮತ್ತೊಂದು ಕಡೆ ತೊಟ್ಟಿಲಿನಲ್ಲಿ ಮಕ್ಕಳನ್ನು ಕೂರಿಸುತ್ತಾರೆ. ನಂತರ ಸಿಡಿಯನ್ನು ಆಡಿಸುತ್ತಾರೆ. ಇದರಿಂದ ತಮ್ಮ ಮಕ್ಕಳು ಚೆನ್ನಾಗಿ ಆಗುತ್ತಾರೆ ಒಂಬ ಒಂದು ನಂಬಿಕೆ ಈಗಲು ಇದೆ. ಸಿಡಿಯು

ಆಡುವಾಗ ಹಣ್ಣು-ಜವನವನ್ನು ಅದಕ್ಕೆ ಹೊಡೆಯುತ್ತಾರೆ. ನಂತರ ಶುಕ್ರವಾರ ಅಂದು ಹಂದಿಯನ್ನು ಬಲಿಕೊಟ್ಟು ಎಲ್ಲರಿಗೂ ಸಹ ಬಣ್ಣದ ಓಕುಳಿಯನ್ನು ಹಾಡುತ್ತಾರೆ. ಪ್ರತಿ ದಿನದಂತೆ ಅಂದು ಪೂಜೆ ನಡೆಯುತ್ತದೆ.

ಶನಿವಾರದ ಮದ್ದೂರಮ್ಮ ಮಠ ಮನೆಗೆ ಹೋಗುವ ದಿನ. ಅಂದು ಅವಳಿಗೆ ವಿಶೇಷ ಪೂಜೆ ನಡೆಯುತ್ತದೆ. ಪ್ರತಿಯೊಂದು ಮನೆಯಿಂದಲೂ ಎಲ್ಲರೂ ಬಂದು ಪೂಜೆಯನ್ನು ಸಲ್ಲಿಸುತ್ತಾರೆ. ಅಂದು ಅಮ್ಮನಿಗೆ ಉಯ್ಯಾಲೆಯಾಡಿಸುತ್ತಾರೆ. ಅಂದು ನಂತರ ಮದ್ದೂರಮ್ಮನನ್ನು ಹೆಚ್ಚೆ ಹೆಚ್ಚಿಗೂ ಈಡುಗಾಯಿಯನ್ನು ಹೊಡೆದು ಕೊಂಡು ಬಹಳ ವೈಭವದಿಂದ ತಾಯಿಯನ್ನು ಮಠಮನೆಗೆ ಸೇರಿಸುತ್ತಾರೆ. ಅಂದು ತಾಯಿ ಮಠಮನೆಗೆ ಸೇರುವುದು ರಾತ್ರಿ ೧೨ ಗಂಟೆಯಾಗುತ್ತದೆ.

ತಾಯಿ ಒಂದು ವರುಷಕ್ಕೆ ಒಂದೇ ಬಾರಿ ಮಠಮನೆಯಿಂದ ತೋಪಿಗೆ ಬರುವುದು. ಆದರೆ ಅವಳು ಬರುವಾಗ ಮಗನಾದ ಸಿಡಿರಣ್ಣನ ಜೊತೆ ಬಂದು ಜೊತೆಯಲ್ಲೇ ಇಬ್ಬರು ಕುಣಿದು ಕುಪ್ಪಳಿಸುತ್ತಾರೆ. ಅವರ ಕುಣಿತವನ್ನು ನೋಡಲು ಸುತ್ತೇಳು ಊರಿನಿಂದ ಅವಳ ಪರುಸೆ ಬರುತ್ತಾರೆ ಅವರಿಗೆ ಈ ತಾಯಿಯ ಮೇಲೆ ತುಂಬಾ ನಂಬಿಕೆ ಇದೆ.

ಈ ತಾಯಿಯ ಈ ಊರಿನಲ್ಲಿ ಹುಟ್ಟಿದ ಮಕ್ಕಳು ಇಲ್ಲೇ ಇದ್ದು ಊರಿನಲ್ಲಿ ಹೆಚ್ಚು ಬೆಳೆಯುತ್ತಾ ಇರುತ್ತಾರೆ. ಅವರು ಯಾವುದೊ ಬೇರೆ ಊರಲ್ಲಿ ಹೋಗಿ ಬದುಕುವುದು ಕಷ್ಟ ಎನ್ನುವುದನ್ನು ತೋರಿಸುತ್ತಾಳೆ.

ಮದ್ದೂರಮ್ಮನ ವಾರದ ದಿನಗಳಾದ ಮಂಗಳವಾರ ಮತ್ತು ಶುಕ್ರವಾರ ಭಕ್ತರು ಮಾಂಸವನ್ನು ಮಾಡಿ ಎಲ್ಲರಿಗೂ ಬಡಿಸುತ್ತಾರೆ. ಇವರು ಹರಕೆಯನ್ನು ಮಾಡಿಕೊಂಡಿರುತ್ತಾರೆ. ಅದಕ್ಕಾಗಿ ಒಂದು ತಮ್ಮ ಹರಕೆ ಮತ್ತು ಕಾಣಿಕೆಗಳನ್ನು ಒಪ್ಪಿಸುತ್ತಾರೆ. ಮಡಿಲು ಅಕ್ಕಿಯನ್ನು ಸಹ ತುಂಬುತ್ತಾರೆ. ಪ್ರತಿ ತಿಂಗಳು ಬರುವ ಅಮವಾಸೆ ಮತ್ತು ಹುಣ್ಣಿಮೆಯ ದಿನ ಮದ್ದೂರಮ್ಮನ ಮಠಮನೆಯಲ್ಲಿ ವಿಶೇಷ ಪೂಜೆಯು ನಡೆಯುತ್ತದೆ. ಅಲ್ಲಿ ಯಂತ್ರವನ್ನು ಸಹ ಹಾಕುತ್ತಾರೆ ಹಾಗೂ ತಡೆಯನ್ನು ಹೊಡೆಯುತ್ತಾರೆ.

ಮದ್ದೂರಮ್ಮನ ಬಗ್ಗೆ ದಲಿತ ಮಹಿಳೆಯರ ಹಾಡುಗಳನ್ನು ಹಾಡುತ್ತಾರೆ. ಏಕೆಂದರೆ ಬೇರೆ ಯಾವ ವರ್ಗದವರಿಗೂ ಸಹ ಹಾಡುಗಳನ್ನು ಹೇಳಲು ಬರುವುದಿಲ್ಲ. ಅವರೇ ಎಲ್ಲಾ

ಕಾರ್ಯಕ್ರಮಗಳಿಗೂ ಅವರೇ ಹಾಡನ್ನು ಹಾಡಬೇಕು. ಮದುವೆ, ದೇವರ ಉತ್ಸವ, ಶೋಭಾನೆ ಎಲ್ಲ ಸಂದರ್ಭದಲ್ಲಿಯೂ ಅವರೇ ಹಾಡನ್ನು ಹೇಳಲು ಮುಂದೆ ಬರುತ್ತಾರೆ.[೧೩]

ಈ ಮುಂದಿನ ಸಾಲುಗಳಲ್ಲಿ ಬರುವ ಹಾಡುಗಳನ್ನು ಅವರೇ ಹಾಡಿರುವುದು.

॥ ಹೊಳೆಗೆ ಹೋಗುವಾಗ ಹೊಳೆದಾವು ಹೊಂಬಾಳೆ
ಹೊಳೆದಾವು ನಿನ್ನ ಸರದಾಗಿ
ವಾಜಗೇರಿಗೆಹೋದಾಳೋ ಮದ್ದೂರವ್ವ
ವಾಜರಣ್ಣಯ್ಯನ ಕರೆದು ಕೇಳಾಳೊ
ಎಲ್ಲಪ್ಪ ಮಗನೇ ಹೊಸತಾಳಿ
ತಾಳಿ ಮಾಡಿವ್ನಿ ಚಿತ್ರರವಗೇಯಲಿಲ್ಲ
ತತ್ತೀನೀ ನಡೀ ತಾಳೂ ಹೊಳೆತಾಕೆ॥
ಕುಂಬಾರ ಗೇರಿಗೆ ಹೋದಾಳೊ ಮದ್ದೂರವ್ವ
ಕುಂಬಾರಣ್ಣನ ಕರೆದಾಳೊ
ಕುಂಬಾರಣ್ಣನ ಕರದೀ ಕೇಳಾಳೊ
ಎಲ್ಲಪ್ಪ ಮಗನೇ ಹಸಿ ಕರಗ
ಕರಗ ಮಾಡೀವ್ನಿ ಚಿತ್ರವ ಗೇಯಲಿಲ್ಲ
ತತ್ತೀನೀ ನಡಿ ತಾಯಿ ಹೊಳೆತಾಕೆ.

ಮಡಿವಾಳ ಗೇರಿಗೆ ಹೋದಾಳೊ ಮದ್ದೂರವ್ವ
ಮಡಿವಾಳಣ್ಣಯ್ಯನ ಕರೆದಾಳೊ
ಮಡಿವಾಣ್ಣಯ್ಯನ ಕರೆದು ಕೇಳಾಳು
ಎಲ್ಲಪ್ಪ ಮಗನೇ ಮಡಿಬಟ್ಟೆ ಹೊಸಪಂಜು
ಬಟ್ಟೆ ಕುಕ್ಕಿವ್ನಿ ಇಸ್ತ್ರಿ ಗೇಯಲಿಲ್ಲ
ತತ್ತೀನೀ ನಡಿ ತಾಯಿ ಹೊಳೆತಾಕೆ.

ಪೂಜೆ ಹೊರುವವನಿಗೆ ಗಾಜಿನ ನಿಲುವಂಗಿ
ನಾಗರ ಹೂವಿನ ನಡುಕಟ್ಟು ಮದ್ದೂರವ್ವಂಗೆ

ನಿನ್ನ ಪೂಜೆ ಹೊರುವ ಮಗನಿಗೆ
ಹೊನ್ನಿನ ತಾಳಿ ಕಿರಿದೆಂದು ಮದ್ದೂರವ್ವ ಚಂಡಿ
ಕುಂತವಳೇ ಹೊಳೆಯಲ್ಲಿ ಮದ್ದೂರವ್ವ
ಗುಡ್ಡರೇ ಹೋಗಿ ಕರೆತನ್ನಿ ಓಡ್ಡಿ ಒಲಗದಗರತೀಯ
ಕಂಚೀನ ಹೆಬ್ಬರೆ ಮಿಂಚುಟ್ಟಿ ನಲಿವಾಗ
॥ಸಂತೋಷದ ಗರತಿ ಮದ್ದೂರವ್ವ ॥ ನ ಹೆಬ್ಬಾರೆ
ಸೇತೇ ಬೀದಿಲೀ ಮೆರೆದಾವೊ.

ಗಾಜೀನ ಹೆಬ್ಬರೆ ಮೀಜುಟ್ಟಿ ಮೆರೆದಾಗ
॥ಲಾಜೋಕ ಗರತಿ ಮದ್ದೂರವ್ವ॥ ನ ಹೆಬ್ಬರೆ
ರಾಜ ಬೀದಿಲೀ ಮರೆದ್ಯಾವೊ.

ಅಕ್ಕ ಮದ್ದೂರವ್ವಗೆ ಕುಕ್ಕೇಲಿ ಕುಂಕುಮ
॥ಶೆಟ್ಟಿ ತಿಗಳಿಗರು ಸಿಡಿಯಾಡಿ ॥ ಬರುವಾಗ
ಅಕ್ಕ ಮದ್ದೂರವ್ವಗೆ ಹುಸುನೆಗೆ.

ಒಕ್ಕಲಗೇರಿಗೆ ಹೊಕ್ಕಾಳೊ ಮದ್ದೂರವ್ವ
॥ಹೊಕ್ಕಳ ಧೂಪ ಮಡಿಲಲ್ಲಿ॥ ಕಟ್ಟಿಕೊಂಡು
ಉಕ್ಕಿ ಬರುವ ಹೊತ್ತಿಗೆ ಬೆಳಕಾದೂ.

ಇಲಿ ಕಟ್ಟಿದ ಮುಂಡೆ ಎಲೆ ಬಿಟ್ಟೆ ಮದ್ದೂರವ್ವ
ಶ್ರೀರಂಗಪಟ್ಟಣದ ಸೇತುವೆಯ ಕಲ್ಲಿನ ಮೇಲೆ
ಅವಳ ಹೂಕಂಡಿ ಜಡೆಯ ಒದರಾಳು॥ ಮದ್ದೂರವ್ವ
ಅವಳ ಮೊಗ್ಗು ಕಂಡೆ ಜಡೆಯ ಮುದುರಾಳೊ

ಪಕ್ಕದ ತೋಟದಿಂದ ಒಪ್ಪಿದ ಹೊಂಬಾಳೆ ಬಂದು
ಇನ್ನೇನು ಬರಬೇಕೇ ಮಹಾತಾಯಿ ॥ ಮದ್ದೂರಮ್ಮ
ಹೆಣ್ಣು ಮಕ್ಕಳ ತಾಳಿ ಬರಬೇಕೇ

ವಾಜಿಗ ಗೇದವನೇ ಸೂಜಿಗವ ನೋಡಬನ್ನಿ
ಸೂಜಿ ಕಣ್ಣಲೀಗಳ ಬೀಸಿ ಗೇದವನೇ ಮದ್ದೂರವ್ವ
ನನ್ನ ಸೊಜಿಗಾರ ಮದ್ದೂರವ್ವನ ಮಠ ಮನೆಯ
ಕೊಂಡ ತೆಗೆಯಾರೋ ಚೆಂದದಿಂದತಗೀರಯ್ಯ
ಗಚ್ಚಕ್ಕಿ ಗಾರೆ ಎರೆದಂಗೆ ॥ ತದಗದ್ಯಾರೆ
ಗಂಡು ಸಂತಾನದ ಕೊಡುವಾಳು.

ಕಾಲುಕಡಗದೊಳ ಕೀಲು ಮಂಚದೊಳೆ
ಸೋಲುಗರ ಸೀಮೆ ಸೊಗಸು ಗರತಿ ॥ ಮದ್ದೂರವ್ವ॥
ಸೋಲಿಸಬೇಡ ಗೆಲ್ಸವ್ವಾ
ತಿಂಗಳಾದಬ್ಬದೊಳೇ ರಂಗದ ಕುಣಿತದವಳೇ
ಗಂದನಿಲ್ಲಾದ ಬಳೆಯೊಳೆ ॥ ಮದ್ದೂರವ್ವ ॥
ಏನೇ ನಿನ್ನ ಹಬ್ಬ ವೈಭೋಗ

ತಾಯಿ ಕುಣಿದಾರೆ ತಾಳಿಯೆಲ್ಲ ಕುಣಿದಾವು
ತಾಳಿಮೇಲಾ ಕಿರುಗೆಜ್ಜೆ ಕುಣಿದಾರೆ
ಪೂಜಾರಿ ಹೊತ್ತಿ ಬೆವುತಾನೊ ॥

ಮದ್ದೂರೊಳಗೆ ಹೊಯ್ತು ಮಂದ್ರೆ ಚೆಂಡಾಡುತ್ತಾ
ಅವಳಪ್ಪರಂಜಿ ಜಡೆಯ ಒದರುತ್ತಾ ॥ಮದ್ದೂರವ್ವ॥
ತಿರುಗಿ ನೋಡ್ಯಾಳೊ ಪುರುಸೆಯ ತನ್ನ ಒಕ್ಕಲ
ತೊಟ್ಲು ಸಹಿತ ಬರುತಾಳೆ.

ಹೆಣ್ಣು ಮಕ್ಳೆ ಉಣ್ಣಾದೇ ಉಣ್ಣಲು ಮದ್ದೂರವ್ವ
ಅವಳ ಉಣ್ಣಲಲ್ಲೆ ಮಾಕವ ತೊಳೆಯಾಗಿ
ಹೊಂಬೆ ಮೇಗಳ ಭತ್ತ ತಂಬಿಟ್ಟಿಗೆ ಹದವಾದ
ಕುಂಬಾರ ಮನೆಯ ಹೊಸ ಮಡಿಕೆ ಹೊಳೆಯ ನೀರು.

ತಾಯಿ ಮದ್ದೂರವ್ವಂಗೆ ಎಡೆಯೊದು
ಬಂದು ಪೂಜೆ ಮೆರಾವಗ ಚಂದ ಕಣೊ ಮದ್ದೂರು
ಒಂಭತ್ತು ಪೂಜೆ ಹೊನಗುಡಿ ಮರೆವಾಗ
ಚೆಂದಕಾಣೊ ಮದ್ದೂರ ರಜಬೀದಿ.

ಕೊಂಡಾದ ಸುತ್ತ ಹಿಂಡಮ್ಮೆ ಮೇಯಿಸೊಳೆ
ಹಂಡೆ ತುಂಬಿ ಕೂಡಿ ಹರಿದಾವು ॥ ಮದ್ದೂರವ್ವ ॥
ಹಂಡಲೇ ಹಾಲು ಕರೆಯೊಳೆ.

ದೂರ ಹೊಗವನೇ ನಿನ್ನ ಮಗ ಸಿಡಿರಣ್ಣ
ಮೂಗುತಿ ಮತ್ತು ತರೊದಕ್ಕೆ ಮದ್ದೂರಮ್ಮ
ದೂರ ಹೋಗವನೇ ನಿನ್ನ ಮಗ
ನಡೆಮುಡಿ ಮೇಲೆ ನಡೆದಾಳು ಮದ್ದೂರಿ
ನಡೆಮೂಡಿ ಮೇಲೆ ಹಿಡಿಹೊನ್ನು ಚೆಲ್ಲಿದರೇ
ನಡೆದಾಳೊ ನವುಲ ಗರಿಯಾಂಗೆ

ಏನು ಮಾಡಿದರೇನು ಗ್ಯಾನವಿಲ್ಲ ನಮ್ಮ ಮೇಲೆ
ಹಾದೀಲಿ ಅವರೇ ಹಗೆಯವರೋ ॥ಮದ್ದೂರವ್ವ॥
ಗ್ಯಾನವಿರಲಿ ತಾಯಿ ನಮ್ಮ ಮೇಲೆ

ಎಷ್ಟು ಮಾಡಿದರೇನು ದೃಷ್ಟಿ ಇಲ್ಲ ನಮ್ಮ ಮೇಲೆ
ಹಟ್ಟೀಲಿ ಅವರೇ ಹಗೆಯಾರು ॥ಮದ್ದೂರವ್ವ॥
ದೃಷ್ಟಿಯಿರಲಿ ತಾಯಿ ನಮ್ಮ ಮೇಲೆ
ಪೂಜೆಗೆ ನೀನು ಬರುವಾಗ ಮದ್ದೂರವ್ವ
ಸುಂದರವಾದ್ದು ರಜಬೀದಿ ॥ಮದ್ದೂರವ್ವ॥
ಸುಂದರಿ ನೀ ಬರುವ ರವಸೀಗೆ

ಕೊಂಡದ ಸುತ್ತ ಒಂದೇ ತೆಂಗಿನ ಮರ
ಎಂಟೆಂಟು ದಿವಸಕ್ಕೆ ಎಳಗಾಯಿ ಸುಳಿಗಾಯಿ ಮದ್ದೂರವ್ವ
ನಿನ್ನ ಹಬ್ಬದ ಹೊತ್ತಿಗೆ ಈಡುಗಾಯಿ

ಹಸಿಯ ಗೋಡೆಯ ಮೇಲೆ ಮಸಿಯಾರು ಬರೆದೋರು
ಹಸುಳೆ ಮದ್ದೂರವ್ವ ಸೊಸೆಯರು ॥ಹೆಣ್ಣು॥
ಮಕ್ಕಳು ಅವರ ಹೆಸಳು ಹೊಂಬಾಳೆ ಬರೆದೊರು॥

ಹೆಣ್ಣು ಎಡಿಗೆಯು ಮುಂದೆ ಹೆಣ್ಣು ಮಕ್ಕಳು ಮುಂದೆ
ಬಣ್ಣದ ಸೆರಗಿನ ಸೊಸೆ ಮುಂದೆ ॥ಮದ್ದೂರವ್ವ॥
ನೀ ಮುಂದೆ ನಿನ್ನ ಗುಡಿಗಂಟ
ಮಲ್ಲಿ ಹೂವಿನ ಮೇಲೆ ನೆಲ್ಲಿಯ ನೇಸ್ಯಾ
ಒಲ್ಲೆ ಎಂದಳೊ ಮನೆತಾಯಿ ಮದ್ದೂರವ್ವ
ಜಾಲದ ಹೂವಲ್ಲಿ ಜಾಡಿ ನೆಯ್ಸಿದ್ದೆ
ಅವಳು ಬ್ಯಾಡ ಅಂದಾಳೋ ಮನೆತಾಯಿ

ಅಚ್ಚು ಮರುತ್ತಾವೋ ಮುಚ್ಚಾಳೊ ಮದ್ದೂರವ್ವ
ಮದ್ದೂರ ಗದ್ದೆ ಬಯಲಾ
ಹಲಸ ಮರದ ಕೆಳಗೆ ನೀಲಸವ್ವ ಕುದುರೆಯ
ಹರಸಿ ಮದ್ದೂರವ್ವ ತೆಂಗಿನ ಕಾಯಿಯಲ್ಲಿ
ಹೊಲೆಹೊರಿ ಮದ್ದೂವ್ವ – ನಿಲಸವ್ವಾ ನೀವು
ನೀಲಾದ ಕುದುರೆಯ
ಹಿಪ್ಪೆ ತೊಪ್ಪೊಳೇ ಹೂವಿನ ಚ್ಪರದೊಳೆ
ಊರಿಗೆ ಎದುರಾಗಿ ಇರುವೊಳೆ ॥ಮದ್ದೂರವ್ವ॥
ನಾ ಊರಿಗೆ ಹೊಯ್ತು ಕೈ ಮುಗಿದೇನು

ಈ ಮೇಲಿನ ಸಾಲುಗಳು ಜನಪದರು ಅಂದರೆ ಶೋಭಾನೆಯನ್ನು ಹೇಳುವವರು ಹಾಡಿರುವುದಾಗಿದೆ. ಅವರಿಗೆ ರೀತಿಯ ವಿದ್ಯಾವಂತರಾಗಿರುವುದಿಲ್ಲ. ಆದರ ಬಾಯಿಂದ ಬಾಯಿಗೆ ಬೆಳೆದು ಬಂದಂತರೂ ಬಂದು ಗೀತೆಗಳಾಗಿವೆ. ಇವರು ನಾಟಿ ಮಾಡುವಾಗ, ಭತ್ತ ಕುಯ್ಯುವಾಗ, ರಾಗಿ ಜೀಸುವಾಗ ತಮಗೆ ಬೇಸರವಾಗದಂತೆ ಇದರೇ ತಮಗೆ ಬಂದ ರೀತಿಯಲ್ಲಿ ಹಾಡುಗಳನ್ನೇ ಕಟ್ಟಿಕೊಂಡು ಹಾಡುತ್ತಿದ್ದರು ಎನ್ನಲಾಗಿದೆ.

ಈ ಮದ್ದೂರಮ್ಮನಿಗೆ ಹೆಣ್ಣು ಮಕ್ಕಳ ತಾಳಿ ಬೇಕು. ಅಂದರೆ ಮದುವೆಯಾಗುವಾಗ ದೇವರ ತಾಳಿಯೆಂದು ಮಾಡಿಸುತ್ತಾರೆ. ಅದನ್ನು ಮದುವೆಯಾದ ಮೇಲೆ ಅದರೊಂದಿಗೆ ಮಡಿಲಕ್ಕಿಯನ್ನು ಸೇರಿಸಿ ಅದನ್ನು ಮದ್ದೂರವ್ವನಿಗೆ ಒಪ್ಪಿಸಬೇಕು. ಇಲ್ಲದಿದ್ದರೆ ಅವರ ಮನೆಯನ್ನು ಹಾಳು ಮಾಡುವುದಾಗಿದೆ. ಅವರ ಏಳಿಗೆಯನ್ನು ಸಹ ಮಾಡದೇ ಕಾಡುತ್ತಾಳೆ. ಎನ್ನುವ ನಂಬಿಕೆ ಇಂದಿಗೂ ಸಹ ಇದೆ. ಮದ್ದೂರವ್ವ ಪ್ರತಿವರ್ಷದ ಜಾತ್ರೆಯಲ್ಲಿ ಕೊನೆಯದಿನ ಅಂದರೆ ಅವಲು ಮಠಮನೆಗೆ ಹೋಗುವ ಮೊದಲು ಅವಳನ್ನು ತೊಟ್ಟಿಲಲ್ಲಿ ಕೂರಿಸಿ ಉಯ್ಯಾಲೆಯನ್ನು ಆಡಿಸುತ್ತಾರೆ. ಇದಕ್ಕೆ ಕಾರಣ ಮಕ್ಕಳಿಲ್ಲದ ಒಂದು ಕುಟುಂಬದವರು ನಮಗೆ ಮಕ್ಕಳಾದರೇ ನನ್ನ ತೊಟ್ಟಿಲನ್ನು ನೀನು ತೂಗಿದರೆ ನಿನ್ನ ತೊಟ್ಟಿಲನ್ನು ನಾನು ಪ್ರತಿ ವರ್ಷವು ತೂಗಿಸುತ್ತೇನೆ ಎಂದು ಹರಕೆ ಮಾಡಿಕೊಂಡಿರುತ್ತಾರೆ. ಅವರ ಹರಕೆಯಂತೆ ಪ್ರತಿವರ್ಷವಾರದ ಕೊನೆಯದಿನ ಅಂದರೆ ಶನಿವಾರ ಅವರು ತೊಟ್ಟಿಲನ್ನು ತೂಗಿಸುತ್ತಾರೆ.

ಇವಳು ಮದ್ದೂರಿನ ಗ್ರಾಮದೇವತೆಯಾಗಿ ನೆಲೆಸಿದ್ದಾಳೆ. ವಾಜರ ಮನೆಯಿಂದ ತಾಳಿ, ಮಡಿವಾಳರ ಮನೆಯಿಂದ ಬಟ್ಟೆ, ಪಂಜು ಹಾಗೂ ಹೊಲೆಯರ ಮನೆಯಿಂದ ಹೆಬ್ಬರೆಯನ್ನು ತರಿಸಿಕೊಂಡು ಪ್ರತಿ ವರ್ಷವೂ ಬಹಳ ವೈಭೋಗದಿಂದ ಮಾಡಿಸಿಕೊಳ್ಳುತ್ತಾರೆ.

ಇವಳ ಮಗನಾದ ಸಿಡಿರಣ್ಣನು ಮೂಗಿತಿಯನ್ನು ತರಲು ಹೋಗಿ ಬಾರದೇ ಇರುವುದಕ್ಕೆ ಇವಳಿಗೆ ಮೂಗುತಿ ಇರುವುದಿಲ್ಲ ಎಂಬುದು ಜನರ ಒಂದು ನಂಬಿಕೆಯಾಗಿದೆ.

ಮದ್ದೂರಮ್ಮನನ್ನು ಪೂಜಿಸುವ ಭಕ್ತರು ಬರೀ ಮದ್ದೂರಿನಲ್ಲಿ ಮಾತ್ರ ಇಲ್ಲದೇ ಸುತ್ತೇಳು ಊರು, ಹಳ್ಳಿಗಳಿಂದಲೂ ಬರುತ್ತಾರೆ. ಅತಾಯಿಯ ದರ್ಶನಕ್ಕೆ ಅತಾಯಿಯ ವಾರದ ದಿನವಾದ ಮಂಗಳವಾರ, ಶುಕ್ರವಾರ ಎಲ್ಲ ಕಡೆಯಿಂದಲೂ ಬಂದು ತೊಪಲ್ಲಿ ಮರಿಯನ್ನು ಕಡಿದು ಅವರ ಹರಕೆಯನ್ನು ತೀರಿಸಿಕೊಂಡು ಎಲ್ಲರಿಗೂ ಅನ್ನದಾನವನ್ನು ಮಾಡಿ ಆ ತಾಯಿಯ ಕೃಪೆಗೆ ಪಾತ್ರರಾಗಿದ್ದಾರೆ.

ಅನೇಕ ಜನರು ಈ ತಾಯಿಯ ಹೆಸರನ್ನು ಅವರ ಮಕ್ಕಳಿಗೆ "ಮದ್ದೂರಿ", "ಮದ್ದೂರಮ್ಮ" ಎಂದು ಕರೆಯುತ್ತಾರೆ. ಒಟ್ಟಿನಲ್ಲಿ ಮದ್ದೂರಿನ ಜನತೆ ಇವಳನ್ನು ಬಿಟ್ಟು ಬೇರೆಯಾರನ್ನು ಸಹ ಅವರು ನಂಬಿರುವುದಿಲ್ಲ. ಆ ತಾಯಿಯು ತನ್ನ ಎಲ್ಲ ಮಕ್ಕಳನ್ನು ಅವಳೇ ಮುಂದೆ ತರುತ್ತಾಳೆ ಎಂಬುದು ಜನರ ನಂಬಿಕೆಯಾಗಿದೆ.

ಊರಿನಲ್ಲಿ ವಾಸವಾಗಿರುವ ಅವಳ ಎಲ್ಲ ಭಕ್ತರು ಅವಳ ಪೂಜೆಯನ್ನು ತಪ್ಪದೇ ಸಲ್ಲಿಸುತ್ತಾರೆ. ಅವಳ ತೋಪಿನಲ್ಲಿ ಅನೇಕ ಶುಭ ಸಮಾರಂಭಗಳು ಅಂದರೆ ಮದುವೆಗಳು ನಡೆಯುತ್ತದೆ. ಈ ತೋಪಿನ ದೇವಾಲಯದಲ್ಲಿರುವ ಪಕ್ಕದಲ್ಲಿ ಕೆಲವು ಶಾಸನಗಳನ್ನು ಹಾಕಿದ್ದಾರೆ. ಅವು ವೀರಗಲ್ಲುಗಳೆಂದು ಗುರುತಿಸಬಹುದು.

ಮಂಡ್ಯ ಜಿಲ್ಲೆಯ ಸಂಸ್ಕೃತಿ ಎಂದಾಕ್ಷಣ ಕರ್ನಾಟಕ ಸಂಸ್ಕೃತಿಯಿಂದ ವಿಭಿನ್ನವಲ್ಲ ಕರ್ನಾಟಕದ ದೀರ್ಘಕಾಲದ ಇತಿಹಾಸದೊಂದಿಗೆ ಮಂಡ್ಯ ಜಿಲ್ಲೆಯಾ ಮಿಳಿತಗೊಂಡಿದೆ ಪುರಾಣೋಕ್ತಿಯಲ್ಲಿ ಇದು ದಂಡಕಾರಣ್ಯ, ಮೃಗಪಕ್ಷಿಗಳ ಆಶ್ರಯಧಾಮ, ಮಾಂಡವ್ಯ, ಕದಂಬ, ಅಗಸ್ತ್ಯ, ಗೌತಮ, ಕಣ್ವ ಮಹಾಋಷಿಗಳ ತಪೋಭೂಮಿ, ಕಾವೇರಿ, ಹೇಮಾವತಿ, ಲೋಕಪಾವನಿ, ಶಿಂಷಾ ವೀರವೈಷ್ಣವಿ, ನದಿಗಳು ಪ್ರಾಚೀನದಿಂದಲೂ ಹರಿದು ನಾಗರಿಕತೆಯ ತೊಟ್ಟಿಲುಗಳಾಗಿವೆ. ಗಗನಚುಕ್ಕಿ, ಭರಚುಕ್ಕಿ, ಶಿಂಷಾ ಜಲಪಾತಗಳು ಕಂಗೊಳಿಸಿವೆ. ರಂಗನತಿಟ್ಟು, ಕೊಕ್ಕರೆ, ಬೆಳ್ಳೂರು, ಗೆಂಡೆ ಹೂಸಳ್ಳಿ, ಪಕ್ಷಿಧಾಮಗಳು, ಬಸವನ ಬೆಟ್ಟದ ಸಾಲು, ಹುಲಿಕೆರೆ ಮತ್ತು ಕರಿಘಟ್ಟ ಬೆಟ್ಟಗಳು, ಕುಂತಿಬೆಟ್ಟ, ನಾರಾಯಣದುರ್ಗ, ಆದಿಚುಂಚನಗಿರಿ ಬೆಟ್ಟಗಳು ಜಿಲ್ಲೆಗೆ ಕಳಸ ಪ್ರಾಯವಾಗಿವೆ. ಮುತ್ತತ್ತಿ, ಕುಂತಿಬೆಟ್ಟಗಳು ನಮ್ಮ ಅಮರ ಕಾವ್ಯಗಳಾದ ರಾಮಾಯಣ, ಮಹಾಭಾರತ ಕಥೆಗಳಿಗೆ ಸಾಕ್ಷೀಭೂತವಾಗಿವೆ. ಪ್ರಾಗೈತಿಹಾಸಿಕ ಕಾಲದಲ್ಲಿ ಜನವಸತಿಗೆ ಇದ್ದ ಕುರುಹುಗಳು ಕಂಡುಬಂದಿವೆ. ಇತಿಹಾಸವನ್ನು ಇಣುಕಿನೋಡಿದಾಗ ವೀರಗಲ್ಲು, ಮಾಸ್ತಿಕಲ್ಲು, ದಾನದತ್ತಿಯ ಶಾಸನಗಳು ಕೆರೆಯನ್ನು ಕಟ್ಟಿಸಿದ ಬಾವಿಯನ್ನು ತೋಡಿಸಿದ ಮಠ, ಮಂದಿರ ದೇವಾಲಯಗಳನ್ನು ಕಟ್ಟಿಸಿದ ಅಗ್ರಹಾರಗಳನ್ನು ನಿರ್ಮಿಸಿದ ಸಾಂಸ್ಕೃತಿಕ ಪರಂಪರೆಯೇ ಹರಿದು ಬಂದಿದೆ ಇಲ್ಲಿ ಪೌರುಷ, ಪರಾಕ್ರಮ, ಅರ್ಪಣೆತ್ಯಾಗ, ಪ್ರೀತಿ, ಸತ್ಯ ಇವೆಲ್ಲವೂ ಮಿಳಿತಗೊಂಡಿದೆ.

ಸತ್ಯವೇ ನಮ್ಮ ತಾಯಿ ತಂದೆ
ಸತ್ಯವೇ ನಮ್ಮ ಸರ್ವ ಬಳಗವು
ಸತ್ಯ ವಾಕ್ಯಕೆ ತಪ್ಪಿದರೆ
ಅಚ್ಯುತಾ ಹರಿ ಮೆಚ್ಚನು

ಎಂಥ ದೊಡ್ಡ ಮಾತು "ಗೋವಿನಕಥೆಯ"ಲ್ಲಿ ಬರುವ ಈ ಸತ್ಯ ವಾಕ್ಯಗಳನ್ನು ಹಾಡಿ ಕುಣಿಯದ ಮಕ್ಕಳಿಲ್ಲ ಪುರಾಣ ಕಥೆಗಳ ಗ್ರಂಥದಲ್ಲೇ ಈ ಕಥೆ ಬರುತ್ತದೆ. ಬಹುಲಾ ಎಂಬುದು ಹಸುವಿನ ಹೆಸರು, ಕಾಮರೂಪಿ ಎಂಬುದು ಹುಲಿಯ ಹೆಸರು ಕಥೆಯೆಲ್ಲಾ ಬಹುಮಟ್ಟಿಗೆ ಗೋವಿನಹಾಡಿನಲ್ಲಿ ಇರುವಂತಯೇ ಇದೆ. ಈ ನೀತಿಯ ಕಥೆಯನ್ನು ತಿಳಿಗನ್ನಡದಲ್ಲಿ ಕಟ್ಟಿ ಕನ್ನಡಿಗರಿಗೆ ಪಸರಿಸಿದ ಅಜ್ಞಾತ ಕವಿ ಮಂಡ್ಯ ಜಿಲ್ಲೆಯ ಮದ್ದೂರು ಸಮೀಪವಿರುವ ವೈದ್ಯನಾಥಪುರದವನೇ ಎಂದು ಹೇಳುವುದು ಉಂಟು. ಇವರು ಒಂದು ಹಳ್ಳಿಯವರು ಇರಬೇಕೆಂದು ವಿದ್ವಾಂಸರ ಖಚಿತ ಅಭಿಪ್ರಾಯವಾದೆ. ಈ ಹಾಡಿನಲ್ಲಿ ಮದ್ದೂರಿನ ಅಗ್ರದೇವತೆ ಪುರಾಣಪ್ರಸಿದ್ದ ಶ್ರೀ ನಾರಸಿಂಹ (ಶ್ರೀ ಉಗ್ರನರಸಿಂಹ)ನ ಅಂಕಿತವಿದೆ. ರಚಿಸಿದಾತ ಈ ದೇವನ ಒಕ್ಕಲಿನವನೆಂದೂ ಹೇಳಬಹುದಾಗಿದೆ.

ಪದ್ಮನಾಭನ ಪರಂಧಾಮನೆ
ಮದ್ದುರ ಶ್ರೀ ನಾರಸಿಂಹನೆ
ಮುದ್ದು ವರಗಳ ಕೊಡುವ ನಿಮಗೆಯು
ನಮೋ ನಮೋ ಮಂಗಳಂ

ಒಟ್ಟಿನಲ್ಲಿ ಸತ್ಯದ ನೆಲೆಗಟ್ಟಿನ ಈಪ್ರದೇಶದಲ್ಲಿ ಗೋವು ಮತ್ತು ಕೃಷಿಯ ಲಾಲನೆ ಪಾಲನೆ ಜನ ಜೀವನದ ಮುಖ್ಯ ಸಂಸ್ಕೃತಿ ಎಂದು ತಿಳಿಯಬಹುದಾಗಿದೆ.[೧೪]

ಒಬ್ಬ ಸಾಮಾನ್ಯ ಗೌಡನ ಗುಣಾವಳಿಯನ್ನು ಪ್ರಶಂಸಿಸಿರುವ ಶಾಸನವೊಂದು ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿದೆ. ಇದು ಕ್ರಿ.ಶ. ೧೨೪೨ರ ಶಾಸನ ಕಲ್ಲೇಗೌಡ ಎಂಬ ಒಕ್ಕಲಿಗ ಊರಿಗೇನು ಜಗತ್ತಿಗೆ ಆದರ್ಶಪುರುಷನಾಗಿದ್ದ ಆತ ಶಿವಭಕ್ತ ಕಲಿಮೇಲಾಗಿ ದಾನಿಯಾಗಿದ್ದ. ಆತನ ಬದುಕು ಶುಭ್ರವಾಗಿದ್ದು ಜಗತ್ತಿಗೆ ಪೂಜಿತನಾಗಿದ್ದ, ಪುಣ್ಯ ಜೀವಿಯಾಗಿದ್ದ ಎಂದು ಶಾಸನದಲ್ಲಿ ಕೊಂಡಾಡಿದೆ.

ಅದೆ ತಾಲ್ಲೂಕಿನ ಸಿಂದಘಟ್ಟದ ಶಾಸನವೊಂದು ಊರಿನ ಒಗ್ಗಟ್ಟಿಗೆ ಸಾಕ್ಷಿಭೂತವಾಗಿದೆ. ಸಿಂಧಘಟ್ಟದ ಮಹಾಜನಗಳು ಅಲ್ಲಿನ ಶ್ರೀ ಲಕ್ಷೀನಾರಾಯಣ ದೇವಸ್ಥಾನಕ್ಕೆ ಸಲ್ಲುವ ಎರಡು ವೃತ್ತಿಗಳನ್ನು ಮಾದಣ್ಣ ಮತ್ತು ಬೊಮ್ಮಣ್ಣರಿಗೆ ೪೬ ವರಾಹ ಗದ್ಯಾಣವನ್ನು ಪಡೆದು ಮಾರಿದರು. ಆ ದೇವಸ್ಥಾನದ ಪೂಜೆಯ ಹಕ್ಕನ್ನು ಅವರೀರ್ವರು ಪಡೆದರು. ಅದೇ ಊರಿನಿಂದ ದೇವರಿಗೆ ಬರುವ ಅದಾಯವನ್ನು ಪಡೆಯುವ ಹಕ್ಕನ್ನು ಮಹಾಜನಗಳು ತಾವೇ ಉಳಿಸಿಕೊಂಡರು. ಅದರ ಫಲವಾಗಿ ದೇವಸ್ಥಾನದ ಜೀರ್ಣೋದ್ದಾರ ಸಹಿತ ಹಲವು ಜವಾಬ್ದಾರಿಗಳನ್ನು ಮಹಾಜನರೇ ಹೊರಬೇಕಾಯಿತು.

[illegible]

ಕನ್ನಡ ಸಾಹಿತ್ಯಕ್ಕೆ ಅತ್ಯಂತ ಪ್ರಾಚೀನ ಕಾಲದಿಂದಲೂ ಮಹತ್ವದ ಕೊಡುಗೆಯನ್ನು ನೀಡಿರುವ ಜಿಲ್ಲೆಗಳಲ್ಲಿ ಮಂಡ್ಯ ಜಿಲ್ಲೆಗೆ ಅಗ್ರಸ್ಥಾನ. ಪ್ರಸಿದ್ಧ ಗೋವಿನ ಹಾಡು ಬರೆದ ಅನಾಮಧೇಯ ಕವಿ ಕೂಡ ಈ ಜಿಲ್ಲೆಯವನು. ಈ ಜನಪದ ಕವಿ ಮದ್ದೂರು ತಾಲ್ಲೂಕಿನ ವೈದ್ಯನಾಥಪುರದವನೆಂದು ಅನೇಕ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಇದಕ್ಕೆ ಪೂರಕವಾಗಿ ಈ ಪದ್ಯದ ಬಳಕೆಯಾಗಿರುವ ದೊಡ್ಡಿ ಎನ್ನುವ ಶಬ್ದ ಗಿಡ ಮರಗಳ ಹೆಸರಿನ ಬಳಕೆ ಮದ್ದೂರು ತಾಲ್ಲೂಕಿನ ದೇಶಿಭಾಷೆಯಿಂದ ಕೂಡಿದ್ದಾಗಿವೆ.

ಮಂಡ್ಯ ಜಿಲ್ಲೆಯಲ್ಲಿ ಕ್ರಿ.ಶ ೫೪೦ ರಿಂದ ೬೦೦ರವರೆಗೆ ಆಳಿದ ಗಂಗರ ದೊರೆಯಾದ ದುರ್ವಿನೀತನೆ ಈ ಜಿಲ್ಲೆಯ ಮೊದಲ ಕವಿ ಎಂದು ಪರಿಗಣಿಸಲ್ಪಟ್ಟಿದ್ದಾನೆ. ಈತನು ಶಬ್ದಾವತಾರ ಎಂಬ ವ್ಯಾಕರಣ ಗ್ರಂಥವನ್ನು ರಚಿಸಿರುವನು. ಈ ಜಿಲ್ಲೆಯಲ್ಲಿ ದೊರೆಯುವ ಅನೇಕ ಶಾಸನಗಳ ಮೂಲಕ ಜನ್ನ ಕವಿಯ ಹೆಂಡತಿಯಾದ ಲಕುಮಾದೇವಿಗೆ ಗುರುವಾಗಿದ್ದ ಬಾಳಚಂದ್ರ ಕಂದರ್ಪ ಮದ್ದೂರು ತಾಲ್ಲೂಕಿನ ತಿಪ್ಪೂರಿನವನೆಂದು. ಬಾಳಿನಕೆರೆ ಶಾಸನ ಬರೆದ ಶಾಂತ ಮಹಂತ ಶೈವ ನಾಗಮಂಗಲ ತಾಲ್ಲುಕು ಎಲೆಕೊಪ್ಪದವನೆಂದು, ಬಸರಾಳು ಶಾಸನ ಬರೆದ ಚಿದಾನಂದ ಸೂಕ್ತಿಸುಧಾರ್ಣವ ರಚಿಸಿದ ಮಲ್ಲಿಕಾರ್ಜುನ ಹಾಗೂ ಇದೇ ರೀತಿ ಬಂಡಯ್ಯ, ಬ್ರಹ್ಮದೇವ ಅಲ್ಲಾಳದೇವ ಹೀಗೆ ಅನೇಕ ಹೆಸರುಗಳು ದೊರೆಯುತ್ತವೆ.

ಕರಿರಾಯ ಚರಿತ್ರೆ. ನಳಚರಿತ್ರೆ, ಶನಿಚರಿತ್ರೆ ಮೂರು ಯಕ್ಷಗಾನ ಮಹಾಕಾವ್ಯ ಬರೆದ ಕವಿ ಕೆಂಪಣ್ಣಗೌಡ ನಾಗಮಂಗಲ ತಾಲ್ಲೂಕು ಅಂದೇನಹಳ್ಳಿಯವನಾಗಿದ್ದು, ಈ ಕಾವ್ಯಗಳ ಆ ಕಾಲದಲ್ಲಿ ಜನಪ್ರಿಯವಾಗಿದ್ದವು. ಕಂಠೀರವ ನರಸರಾಜ ವಿಜಯ ಬರೆದ ಭಾರತೀಯನಾದ ಮತ್ತೊಬ್ಬ ಮಂಡ್ಯ ಜಿಲ್ಲೆಯ ಪ್ರಾಚೀನ ಕವಿ ಭರವೇಶ್ವರ ಕಾವ್ಯವನ್ನು ಕವಿ ನಂಜುಂಡ; ಕೆ.ಆರ್. ಪೇಟೆ ತಾಲ್ಲೂಕಿನ ಕಿಕ್ಕೇರಿಯವನು. ಈತನ ಕಾಲ ೧೫೫೦ ಎಂದು ಕವಿ ಚರಿತೆಕಾರರು ಅಭಿಪ್ರಾಯಪಟ್ಟಿದ್ದಾರೆ. ಚಿಕ್ಕದೇವರಾಜ ಮೈಸೂರು ದೊರೆಗಳಲ್ಲಿ ಅತ್ಯಂತ ಪ್ರಸಿದ್ದವಾಗಿದ್ದು, ಕ್ರಿ.ಶ. ೧೬೭೩ ರಿಂದ ೧೭೦೪ ರವರೆಗೆ ಶ್ರೀರಂಗಪಟ್ಟಣದಿಂದ ಆಳಿದ ಈತ ಸ್ವಂತ ಪಂಡಿತ ಹಾಗೂ ಕವಿಯಾಗಿದ್ದು ಗೀತಗೋಪಾಲ, ಚಿಕ್ಕದೇವರಾಜ ಭಿನ್ನಪ, ಭಾಗವತ ಭಾರತ ಮತ್ತು ಶೇಷಧರ್ಮ ಮುಂತಾದ ಕೃತಿಗಳನ್ನು ರಚಿಸಿದ್ದಾನೆ. ಈತನ ಆಸ್ಥಾನದಲ್ಲಿದ್ದ ತಿರುಮಲಾರ್ಯ, ಷಡಕ್ಷರದೇವ, ಸಂಚಿಹೊನ್ನಮ್ಮ ಕನ್ನಡದಲ್ಲಿ ಇಂದಿಗೂ ಮಹತ್ವದ ಕವಿಗಳೆಂದೇ ಪರಿಗಣಿಸಲ್ಪಟ್ಟಿದ್ದಾರೆ.

ಕನ್ನಡ ಸಾಹಿತ್ಯದಲ್ಲಿ ಹದಿನೇಳನೇ ಶತಮಾನದಲ್ಲಿ ಮತ್ತೇ ಚಂಪೂ ಕಾವ್ಯದ ಪರಂಪರೆಯನ್ನು ಮುಂದುವರೆಸಿ ಬೆಳೆಸಿದ ಕವಿ ಎಂದೇ ಪ್ರಸಿದ್ದನಾದ ಮಳವಳ್ಳಿ ತಾಲ್ಲೂಕು

ಧನಗೂರಿನ ಷಡಕ್ಷರದೇವರಾಜಶೇಖರ ವಿಳಾಸ ಕೃತಿಯನ್ನು ರಚಿಸಿದರೆ,ಕನ್ನಡದ ಮೊದಲನೇ ಕವಯತ್ರಿ ಎಂದು ಕರೆಯಲ್ಪಡುವ, ಹದಿಬದೆಯಧರ್ಮ ಕಾವ್ಯ ಬರೆದ ಸಂಚಿಹೊನ್ನಮ್ಮ ಮಂಡ್ಯ ತಾಲ್ಲೂಕಿನ ಕೆರಗೋಡು ಸಂಸ್ಥಾನದವಳು. ಸಂಚಿಯ ಹೊನ್ನಮ್ಮ ಗಂಡ ಹೆಂಡತಿಯ ನಡುವೆ ಇರಬೇಕಾದ ಪ್ರೀತಿ, ಪ್ರೇಮ, ಸರಸ-ವಿರಸ, ನೋವು-ನಲಿವುಗಳ ಬಗ್ಗೆ ತುಂಬಾ ಆಳವಾಗಿ ತಿಳಿಸಿದ್ದಾಳೆ. ಪತಿಯು ತನ್ನನ್ನು ನಂಬಿ ಬಂದಿರುವ ಹೆಣ್ಣನ್ನು ಯಾವ ರೀತಿ ಒಲೊಸಿಕೊಳ್ಳಬೇಕು ಹಾಗೂ ಮುಗ್ಧ ಬಾಲಕಿಯ ಮನಸ್ಸು ಎಷ್ಟು ಮೃದು ಹಾಗೂ ಭಯದಿಂದ ಕೂಡಿರುತ್ತದೆ, ಆಭಯವನ್ನು ಅವಳಿಂದ ಸ್ವಲ್ಪ ಸ್ವಲ್ಪವಾಗಿ ಹೇಗೆ ದೂರ ಮಾಡಬೇಕು ಎಂಬುದನ್ನು ತಿಳಿಸಿತ್ತಾಳೆ.

ಅಡಿ ಟಿಪ್ಪಣಿಗಳು:–

೧. ಮಂಡ್ಯ ಜಿಲ್ಲೆಯ ಸಾಂಸ್ಕೃತಿಕ ಪರಂಪರೆ: ತೈಲೂರು ವೆಂಕಟಕೃಷ್ಣ, ಪ್ರಕಾಶನ ಬಾನು ಪ್ರಕಾಶನ ೨೯೫೮, ನೆಹರು ನಗರ, ಮಂಡ್ಯ. ಪೀಠಿಕೆ–೧

೨. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ; ಡಾ॥ ಎಂ, ಚಿದಾನಂದಮೂರ್ತಿ. ಸ್ವಪ್ನ ಬುಕ್ ಹೌಸ್ ಬೆಂಗಳೂರು. ಪು. ೪

೩. ಅದೇ ಪು ೬

೪. ಮಂಡ್ಯ ಜಿಲ್ಲೆಯ ಸಾಂಸ್ಕೃತಿಕ ಪರಂಪರೆ: ತೈಲೂರು ವೆಂಕಟಕೃಷ್ಣ, ಪ್ರಕಾಶನ ಬಾನು ಪ್ರಕಾಶನ ೨೯೫೮, ನೆಹರು ನಗರ, ಮಂಡ್ಯ. ಪು.ಸಂ ೨

೫. ಅದೇ ಪು ೩

೬. ಸಿಂಗಾರ: ಶ್ರೀ.ಕೆ.ಸಿಂಗಾರಿಗೌಡ ಅಭಿನಂದನ ಸಮಿತಿ ಸಂ.ಹ.ಕ.ರಾಜೇಗೌಡ, ಮಂಡ್ಯ ಪು. ೧೯೮

೭. ಮಂಡ್ಯ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ಸಂ. ಡಾ॥ ಆರ್.ಗೋಪಾಲ್, ಪ್ರಾಚ್ಯವಸ್ತು ಮತ್ತು ಸಂಗ್ರಾಲಯಗಳ ನಿರ್ದೇಶನಾಲಯ ಅರಮನೆ ಆವರಣ ಮೈಸೂರು. ಪು.೧೮

೮. ಅದೇ ಪು. ೨೧

೯. ಶಾಸನ ಪರಿಚಯ ನಾಗಮಂಗಲ ತಾಲ್ಲೂಕು, ಮಹಮ್ಮದ್ ಕಲಿಂ ಉಲ್ಲಾ ಪು.೧೭

೧೦. ಅದೇ ಪು. ೨೫

೧೧. ಸಿಂಗಾರ: ಶ್ರೀ.ಕೆ.ಸಿಂಗಾರಿಗೌಡ ಅಭಿನಂದನ ಸಮಿತಿ ಸಂ.ಹ.ಕ.ರಾಜೇಗೌಡ, ಮಂಡ್ಯ ಪು. ೨೦೨

೧೨. ಮಂಡ್ಯ ಜಿಲ್ಲೆಯ ಸಾಂಸ್ಕೃತಿಕ ಪರಂಪರೆ: ತೈಲೂರು ವೆಂಕಟಕೃಷ್ಣ, ಪ್ರಕಾಶನ ಬಾನು ಪ್ರಕಾಶನ ೨೯೫೮, ನೆಹರು ನಗರ, ಮಂಡ್ಯ. ಪು. ೩

೧೩. ಜನಪದ ಹೇಳಿಕೆ

೧೪. ಅದೇ ಪು. ೪

ಅಧ್ಯಾಯ ೭

ಜಿಲ್ಲೆಯ ಶಾಸನಗಳ ಭಾಷಿಕ ಗುಣ (ಭಾಷಾ ಸ್ವರೂಪ)

ಅಧ್ಯಾಯ ೭

ಜಿಲ್ಲೆಯ ಶಾಸನಗಳ ಭಾಷಿಕ ಗುಣ (ಭಾಷಾ ಸ್ವರೂಪ)

ಜಿಲ್ಲೆಯ ಶಾಸನಗಳ ಭಾಷಿಕ ಗುಣ (ಭಾಷಾ ಸ್ವರೂಪ)ವು ಯಾವ ಸ್ಥಿತಿಯಲ್ಲಿತು. ಯಾವ ಯಾವ ರಾಜರ ಆಳ್ವಿಕೆ ಇತ್ತು. ಅವರ ಭಾಷೆ ಹೇಗಿತ್ತು. ಮೊದಲಾದ ಎಲ್ಲಾವನ್ನು ಸಹ ಭಾಷಾ ಸ್ವರೂಪಕ್ಕೆ ಸಂಬಂಧಿಸಿದ ವಿಚಾರಗಳನ್ನು ಇಲ್ಲಿ ಅಧ್ಯಾಯ ಮಾಡಲಾಗಿದೆ. ಶಾಸನಗಳ ಭಾಷೆಯ ಗ್ರಂಥಸ್ಥ ಮಾದರಿ, ಆಡುಮಾತು, ನಾಮಪದ, ಕ್ರಿಯಾರೂಪಗಳು, ವಾಕ್ಯ ರಚನೆ, ಇತರ ವಿಶಿಷ್ಟ ವ್ಯಾಕರಣಾಂಶಗಳು, ಜಿಲ್ಲೆಯ ಪ್ರದೇಶದಿಂದ ಪ್ರದೇಶಕ್ಕೆ ಭಾಷಾ ಬಳಕೆಯಲ್ಲಿ ಕಂಡುಬರುವ ವ್ಯತ್ಯಾಸ, ಕಾಲಾನುಕ್ರಮದ ವ್ಯತ್ಯಾಸ ಇತ್ಯಾದಿ ಅಂಶಗಳನ್ನು ಈ ಅಧ್ಯಯನದಲ್ಲಿ ಅಧ್ಯಯನ ನಡೆಸಲಾಗಿದೆ.

ಮಂಡ್ಯ ಜಿಲ್ಲೆಯ ಅತೀ ಹೆಚ್ಚು ಕನ್ನಡ ಮಾತಾಡುವ ಒಂದು ಜಿಲ್ಲೆಯಾಗಿದ್ದು, ಇಲ್ಲಿನ ಭಾಷೆಯು ತುಂಬಾ ಸರಳವಾಗಿಯೂ, ಸುಂದರವಾಗಿಯೂ ಇದೆ. ಇಲ್ಲಿ ಹೆಚ್ಚು ಹಳ್ಳಿಗಳಿಂದ ಕೂಡಿದ್ದು, ಹಳ್ಳಿಯ ಜನರಿಗೆ ಯಾವುದೇ ಭಾಷೆಯ ಪರಿಚಯವಿಲ್ಲದ ಕಾರಣ ಹೆಚ್ಚು ಕನ್ನಡ ಭಾಷೆಯನ್ನು ಮಾತನಾಡುತ್ತಾರೆ.

ಮನುಷ್ಯನ ಬದುಕಿನ ಅನಿವಾರ್ಯವಾದ, ಅವಿಭಾಜ್ಯವಾದ, ಭಾಗವಾದ ಭಾಷೆಯ ಉಗಮದ ಹಿನ್ನೆಲೆ ಮಾತ್ರ ನಿಗೂಡವಾಗಿಯೇ ಉಳಿದಿದೆ. ಭಾಷೆ ಎಂಬುದು ಎಲ್ಲಿ? ಯಾರಿಂದ? ಯಾವಾಗ? ಹೇಗೆ? ಉಗಮವಾಯಿತು ಎಂಬುದು ಇಂದಿನವರೆಗೂ ನಿಗೂಡವಾಗಿಯೇ ಉಳಿದಿದೆ. ಭಾಷೆಯ ಉಗಮವನ್ನು ಕುರಿತಂತೆ ಹಲವಾರು ವಿದ್ವಾಂಸರು ಹಲವಾರು ರೀತಿಯಲ್ಲಿ ವಿಚಾರ ಮಾಡಿದ್ದಾರೆ. ಅವುಗಳಲ್ಲಿ ಮೂರು ದೃಷ್ಟಿಕೋನಗಳನ್ನು ಪ್ರಮುಖವಾಗಿ ಪರಿಗಣಿಸಬಹುದು.

ಕೆಲವು ಭಾಷಾ ವಿಜ್ಞಾನಿಗಳ ಪ್ರಕಾರ ಭಾಷೆ ನೈಸರ್ಗಿಕವಾದದ್ದು. ಅದು ಪ್ರಕೃತಿದತ್ತವಾಗಿಯೇ ಮನುಷ್ಯನಿಗೆ ಸಿದ್ದಿಸುತ್ತದೆ ಎಂದು ಅಭಿಪ್ರಾಯ ಪಡುತ್ತಾರೆ. ಸ್ವಭಾವ, 'ಸಿದ್ದವಾದ ಕೂಗುಗಳು, ಉತ್ಕಟಭಾವವೇಶದ ಫಲವಾಗಿ ಮಾಡುವ ಉದ್ಗಾರಗಳು ಇವು ಕ್ರಮೇಣ ಭಾವಗಳನ್ನು ಸೂಚಿಸಲು ಆರಂಭವಾಗಿ ಕಾಲಕ್ರಮೇಣ ಹೊಸ ಹೊಸ ಧ್ವನಿಗಳು ಹೊಸ ಹೊಸ ವಸ್ತುಗಳಿಗೆ ಸಂಕೇತಗಳಾಗಿ ಪರಿಣಮಿಸಿದೆ. ಹೀಗೆ ಭಾಷೆ ವಿಕಾಸವಾಗಿದೆ ಎಂಬುದು ನೈಸರ್ಗಿಕವಾಗಿದ್ದರೆ ಅದು ಮಾನವನ ಹುಟ್ಟಿನೊಡನಯೇ ಬರಬೇಕಿತ್ತು. ಭಾಷೆ ಮಾನವನ ಅವಶ್ಯಕತೆಗೆ ಅನುಗುಣವಾಗಿ

ಹುಟ್ಟಿಕೊಂಡಿರುವುದಾಗಿದೆ. ಹಾಗಾಗಿ ಭಾಷೆ ಮನುಷ್ಯನ ಕಲಿಕೆಯಿಂದ ಬಂದಿರುವಂತದ್ದು. ಮನುಷ್ಯ ತನ್ನ ಹುಟ್ಟಿನಿಂದಲೇ ಭಾಷೆ ಕಲಿತ್ತಿಲ್ಲ. ಆರಂಭದಲ್ಲಿ ತನ್ನ ಅವಶ್ಯಕತೆ ಪೂರೈಸಿಕೊಳ್ಳಲು ಅಂಗಿಕ ಸಂಜ್ಞೆ ಬಳಸುತ್ತಿದ್ದರು. ಆ ಸಂಜ್ಞೆಗಳಿಂದ ಮನುಷ್ಯನ ಎಲ್ಲ ಅವಶ್ಯಕತೆಗಳನು ಪೂರೈಸದಿದ್ದಾಗ ಭಾಷೆಯೊಂದನ್ನು ರೂಪಿಸಿಕೊಂಡಾಗ ಕಂಡು ಬರುತ್ತದೆ. ಹೀಗೆ ಭಾಷೆ ಒಂದು ಕಲಿತ ಕ್ರಿಯೆ ಎಂಬುದು ಸ್ಪಷ್ಟವಾಗುತ್ತದೆ. ಹಾಗೆ ಇದೊಂದು ಕಣ್ಣಿಗೆ ಕಾಣದ ಅಮೂರ್ತ ಕ್ರಿಯೆ ಹಾಗೂ ಅನುಭವ ವೇದ್ಯವಾದುದು. ಒಬ್ಬ ವ್ಯಕ್ತಿ ಮತ್ತೊಬ್ಬ ವ್ಯಕ್ತಿಯೊಂದಿಗೆ ವ್ಯವಹರಿಸುವಾಗ ಇಬ್ಬರಿಗೂ ಸಮನಾಗಿ ತಿಳಿದಿರಬಹುದಾದ ಭಾಷೆಯೊಂದು ಈ ಕಾಲದ ವ್ಯವಹಾರಕ್ಕೆ ಮಾತ್ರ ಸ್ವರೂಪವಾಗುತ್ತದೆ. ಇದರಿಂದಾಗಿ ಸಾಮಾಜಿಕ ಬಾಂಧವ್ಯವನ್ನು ಗುರುತಿಸಬಹುದು. ಸಾಮಾಜಿಕ ಸಂಬಂಧವಿಲ್ಲದೇ ಭಾಷೆಯೊಂದು ಅಸ್ಥಿತ್ವದಲ್ಲಿರಲು ಸಾಧ್ಯವಿಲ್ಲ ಎಂಬ ಅಂಶವನ್ನು ಗಮನಿಸಬಹುದು.

ಕನ್ನಡ ವ್ಯಾಕರಣದ ಮುಖ್ಯಾಂಶಗಳು

ಕನ್ನಡ ವ್ಯಾಕರಣ ವಿಷಯವಾಗಿ ಗ್ರಂಥಗಳು ಕ್ರಿ.ಶ. ೯ ರಿಂದಲೇ ಉಪಲಬ್ಧವಿವೆ. ಕವಿಗಳಿಗೆ ರಾಜಮಾರ್ಗವನ್ನು ಹಾಕಿಕೊಡಲು ಹೊರಟ ನೃಪತುಂಗನಿಗೆ ಕಾವ್ಯವಿಷಯಕವಾದ ಅಲಂಕಾರ ರಸ–ರೀತಿಗಳಷ್ಟೇ ವ್ಯಾಕರಣ ವಿವರಣೆಯೂ ಅವಶ್ಯಕವಾಯಿತು. ಆ ರೀತಿ, ಕೆಲಮಟ್ಟಿನ ವ್ಯಾಕರಣಾಂಶಗಳನ್ನು ನೃಪತುಂಗನು ತನ್ನ ಗ್ರಂಥದಲ್ಲಿ ವಿವರಿಸಿದನು. ಅನಂತರ ಕ್ರಿ.ಶ. ೧೧ರಲ್ಲಿ ನಾಗವರ್ಮನು ಕೂಡ ಹೆಚ್ಚು ಕಡಿಮೆ ನೃಪತುಂಗನ ರೀತಿಯನ್ನು ಅನುಸರಿಸಿದ್ದರೂ, ತನ್ನ 'ಕಾವ್ಯಾವಲೋಕನ'ವೆಂಬ ಗ್ರಂಥದ 'ಶಬ್ದಸ್ಮೃತಿ' ಯ ಭಾಗವನ್ನು ವ್ಯಾಕರಣಕ್ಕಾಗಿಯೇ ಮೀಸಲಿಟ್ಟನು. ಆದರೆ, ಶುದ್ಧವಾಗಿ ಕೇವಲ ವ್ಯಾಕರಣ–ವಿಷಯವನ್ನೇ ಪ್ರಧಾನವಾಗಿಟ್ಟುಕೊಂಡು ಗ್ರಂಥಗಳು ಬರೆಯುವ ಕ್ರಮವು 'ಭಾಷಾಭೂಷಣ'ದಿಂದ ಪ್ರಾರಂಭವಾಯಿತು. ಈ ಭಾಷಾಭೂಷಣವು ತುಂಬಾ ಸೂತ್ರಬದ್ಧವಾಗಿದ್ದು ಸಂಸ್ಕೃತ ಭಾಷೆಯಲ್ಲಿದೆ. ಆದರೆ, ನಿಜವಾಗಿ 'ಸಂಬಂಧ ಅಭಿಧೇಯ ಶಕ್ಯಾನುಷ್ಠಾನ'ಗಳ ಮೂಲಕವೂ, ಮತ್ತು ತನ್ನ ಕನ್ನಡ ವೈಶಿಷ್ಟ್ಯವುಳ್ಳ ದೃಷ್ಟಿಯ ಮೂಲಕವೂ ಹೆಚ್ಚು ಉಪಾದೇಯ ಗ್ರಂಥವೆಂದರೆ, ೧೨೬೦ರ ಕೇಶಿರಾಜನ 'ಶಬ್ದಮಣಿದರ್ಪಣ' ಎಂಬುದು. ಈ ಎಲ್ಲ ಗ್ರಂಥಗಳು ಮುಗಿದಮೇಲೆ ಕ್ರಿ.ಶ.೧೭ರಲ್ಲಿ ಭಟ್ಟಾಕಲಂಕನೆಂಬ ಜೈನಪಂಡಿತನು ಪುನಃ ಸಂಸ್ಕೃತ ಭಾಷೆಯಲ್ಲಿ ಕನ್ನಡಭಾಷಾವಿಷಯಕವಾದ 'ಶಬ್ದಾನುಶಾಸನ' ವೆಂಬ ವ್ಯಾಕರಣಗ್ರಂಥವನ್ನು ಬರೆದನು. ಇವನ ಗ್ರಂಥವು ತುಂಬಾ ಪಾಂಡಿತ್ಯಪೂರ್ಣವಾಗಿದ್ದರೂ ಕೂಡ, ಇದರ ನಿರ್ವಹಣದ

ರೀತಿ ಹೆಚ್ಚಾಗಿ ಸಂಸ್ಕೃತಮಾರ್ಗದ್ದು. ಇವಲ್ಲದೆ ರನ್ನಜನ್ನರು ಬರೆದಿರಬಹುದಾದ 'ಜಿನಮನಿತನಯ' ವ್ಯಾಕರಣ ಗ್ರಂಥಗಳು ಇಂದು ಉಪಲಬ್ಧವಿಲ್ಲ.

ಹೀಗಾಗಿ, ಸಾಕಷ್ಟು ವಿವರಗಳನ್ನೊಳಗೊಂಡುದೂ ಮತ್ತು ಬಹುಮಟ್ಟಿನ ಕನ್ನಡ ದೃಷ್ಟಿಯನ್ನಿಟ್ಟುಕೊಂಡುದೂ ಆದ ಕೇಶಿರಾಜನ ಶಬ್ದಮಣಿದರ್ಪಣದಿಂದ ನಮ್ಮ ಭಾಷೆಯ ಶಾಸ್ತ್ರಕ್ಕೆ ಸಂಬಂಧಪಟ್ಟಷ್ಟು ಭಾಗವನ್ನು ಸದ್ಯ ನಾವು ಸಂಗ್ರಹಿಸಬಹುದು.

ಕೇಶಿರಾಜನು ತನ್ನ ಗ್ರಂಥವನ್ನು 'ಸಂಧಿ, ನಾಮ, ಸಮಾಸ, ತದ್ಧಿತ, ಅಖ್ಯಾತ, ಧಾತು, ಅಪಭ್ರಂಶ ಮತ್ತು ಅವ್ಯಯ' ಎಂದು ಎಂಟು ವಿಧವಾಗಿ ವರ್ಗೀಕರಿಸಿದ್ದಾನೆ. ಇವುಗಳಲ್ಲಿ ಭಾಷೆಯ ದೃಷ್ಟಿಯಿಂದ ಮುಖ್ಯವಾದ ನಾಮಪದ, ಗುಣವಚನ, ಅಖ್ಯಾತ, ತದ್ಧಿತ ಮತ್ತು ಅಪಭ್ರಂಶಗಳನ್ನು ಮಾತ್ರ ನಾವು ಇಲ್ಲಿ ವಿವರಿಸಬಯಸುತ್ತೇವೆ.

ಭಾಷಾಸ್ವೀಕರಣ

ಮನುಷ್ಯ ಸಮಾಜಜೀವಿ. ಅವನು ತನ್ನ ಸುತ್ತಮುತ್ತಣ ಜನರೊಡನೆ ಒಂದಲ್ಲ ಒಂದು ರೀತಿಯ ಸಂಪರ್ಕವಿಟ್ಟುಕೊಳ್ಳಬೇಕಾಗುತ್ತದೆ ಅನೇಕ ಅವಶ್ಯಕತೆಗಳಿಗಾಗಿ ಇತರರನ್ನು ಅವಲಂಬಿಸಬೇಕಾಗುತ್ತದೆ. ಹಾಗೆಯೇ ಒಂದು ಸಮಾಜವೂ ಕೂಡ, ಒಂದು ಜನಾಂಗವೂ ಕೂಡ. ಒಂದು ಪ್ರದೇಶದ ಸುತ್ತುಮುತ್ತ ದಾಟಿಹೋಗಲಾಗದಂತಹ ಅಡ್ಡಿಗಳಿದ್ದರೆ-ಉದಾ: ದೊಡ್ಡನದಿ, ಎತ್ತರವಾದ ಪರ್ವತ-ಆ ಪ್ರದೇಶದಲ್ಲಿ ವಾಸಮಾಡುವವರು ಸುತ್ತಮುತ್ತಣ ಅಥವಾ ದೂರದ ಜನರೊಡನೆ ಸಂಪರ್ಕವನ್ನಿಟ್ಟುಕೊಳ್ಳದೇ ಇರಬಹುದು, ಅಥವಾ ಬಹು ಕಡಿಮೆ ಸಂಪರ್ಕವಿಟ್ಟುಕೊಳ್ಳಬಹುದು. ಇಂತಹ ಕೆಲವು ಅಪವಾದಗಳನ್ನು ಬಿಟ್ಟರೆ ಒಂದು ಸಮಾಜ ಅಥವಾ ಸಂಸ್ಕೃತಿಯು ಇತರ ಸಮಾಜ ಅಥವಾ ಸಂಸ್ಕೃತಿಗಳೊಡನೆ ಒಂದಲ್ಲ ಒಂದು ರೀತಿಯಲ್ಲಿ ಸಂಪರ್ಕವನ್ನಿಟ್ಟುಕೊಂಡಿರುತ್ತದೆ.[೧] ಇದನ್ನು ಸಾಂಸ್ಕೃತಿಕ ಸಂಘರ್ಷವೆಂದು ಕರೆಯಬಹುದು. ಎರಡು ಸಂಸ್ಕೃತಿಗಳು. ಒಂದನ್ನೊಂದು ಅರಿಯುವ ಪ್ರಸಂಗ ಒದಗಿದಾಗಿ ಒಂದು ಮತ್ತೊಂದರಿಂದ ಅನೇಕ ಹೊಸ ಭಾವನೆಗಳನ್ನೂ ಹೊಸ ವಸ್ತುಗಳನ್ನೂ ಸ್ವೀಕರಿಸುತ್ತದೆ. ಆ ಹೊಸ ಭಾವನೆಗಳ ಮತ್ತು ಹೊಸ ವಸ್ತುಗಳ ಜೊತೆಯಲ್ಲಿ ಅವುಗಳಿಗೆ ಆ ಭಾಷೆಯಲ್ಲಿರುವ ಹೆಸರುಗಳೂ ಪ್ರಯಾಣ ಮಾಡಿ ಹೊಸ ಭಾಷೆಯನ್ನು ಪ್ರವೇಶಿಸುತ್ತವೆ. ಏಳನೆಯ ಶತಮಾನದಲ್ಲಿ ಇಂಗ್ಲೆಂಡಿನ ಜರ್ಮಾನಿಕ್ ಜನರು ಕ್ರಿಶ್ಚಿಯನ್ನರಾದರು. ಅದರ ಫಲವಾಗಿ, ರೋಮಿನ ಪಾದ್ರಿಗಳು ಅನೇಕ ಲ್ಯಾಟಿನ್ ಪದಗಳನ್ನು ಬಳಕೆಗೆ ತಂದರು. Church, bishop ಮುಂತಾದುವು ಅಲ್ಲಿಂದಲೇ ಬಂದದ್ದು. ಒಂಬತ್ತು, ಹತ್ತು,

ಹನ್ನೊಂದನೇ ಶತಮಾನಗಳಲ್ಲಿ ಡೇನಿಷ್ ಜನಾಂಗದ ದಾಳಿಯ ಕಾಲದಲ್ಲಿ ಅನೇಕ ಸ್ಕಾಂಡಿನೇವಿಯನ್ ಪದಗಳು ಬಂದುವು. ಉದಾಹರಣೆಗೆ they, them, their, are, call, die, egg ಇತ್ಯಾದಿ. (ಇವು ನಿತ್ಯೋಪಯೋಗಿ ಪದಗಳು. ಇಂತಹ ಪದಗಳನ್ನು ಸ್ವೀಕರಿಸಿರುವುದು ಆಶ್ಚರ್ಯದ ಸಂಗತಿ.) ಹಾಗೆಯೇ ಇಂಗ್ಲೀಷ್ ಭಾಷೆಯು ಫ್ರೆಂಚಿನಿಂದ annual. Cordial. Corpse, chamber ಮುಂತಾದ ಪದಗಳನ್ನು ಸ್ವೀಕರಿಸಿದೆ. ಹಿಂದಿಯಿಂದ jungle, toddy ಮುಂತಾದ ಪದಗಳನ್ನೂ ಬೆಂಗಾಲಿಯಿಂದ bungalow ಮುಂತಾದ ಪದಗಳನ್ನೂ ಸ್ವೀಕರಿಸಿದೆ. ಈಚಿನ ಬರಹಗಳಲ್ಲಿ pundit, avatar ಮುಂತಾದ ಭಾರತೀಯ ಪದಗಳು ಕಾಣಿಸಿಕೊಳ್ಳುತ್ತಿವೆ. ಕನ್ನಡವೂ ಕಾಲದಿಂದ ಕಾಲಕ್ಕೆ ಅನೇಕ ಭಾಷೆಗಳಿಂದ ಪದಗಳನ್ನು ಸ್ವೀಕರಿಸಿದೆ. ಸಂಸ್ಕೃತದಿಂದ, ಪ್ರಾಕೃತಗಳಿಂದ, ಸೋದರಭಾಷೆಗಳಾದ ತಮಿಳು, ತೆಲುಗು ಇತ್ಯಾದಿ ಭಾಷೆಗಳಿಂದ, ಪೋರ್ಚುಗೀಸ್, ಅರೇಬಿಕ್, ಹಿಂದುಸ್ತಾನಿ, ಇಂಗ್ಲೀಷ್ ಮುಂತಾದ ಭಾಷೆಗಳಿಂದ ಯಥೇಚ್ಚವಾಗಿ ಸ್ವೀಕರಿಸಿದೆ.

ಒಂದು ಭಾಷೆಯಿಂದ ಸ್ವೀಕರಣಗಳು ಹೆಚ್ಚಾಗಿದ್ದರೆ ಆ ಭಾಷೆಯ ಪದಗಳ ರಚನೆಯನ್ನು ಅನುಕರಿಸಿ ಸ್ವೀಕರಿಸುವ ಭಾಷೆಯ ಪದಗಳು ಮಾರ್ಪಾಟಾಗಬಹುದು. ಕನ್ನಡದ ಕೈಗಾರಿಕೆ ಪದವನ್ನೇ ತೆಗೆದುಕೊಳ್ಳಬಹುದು. (ಅದರಲ್ಲಿರುವ–ಕಾರ ಪ್ರತ್ಯಯದ ಪ್ರಸ್ತಾಪ ಬೇಡ.) ಅದು 'ಕೈಗಾರಿಕಾ ಪ್ರಗತಿ' 'ಕೈಗಾರಿಕಾಭಿವೃದ್ಧಿ' ಮುಂತಾದ ಕಡೆಗಳಲ್ಲಿ ಸಂಸ್ಕೃತ ಪದದ ರೂಪವನ್ನು ('ಕೈಗಾರಿಕಾ') ಪಡೆಯುವುದನ್ನು ನಾವು ನೋಡಬಹುದು.

ಒಂದು ಭಾಷೆಯನ್ನಾಡುವವರು ಪರಸಂಸ್ಕೃತಿಯಿಂದ ವಸ್ತುಗಳನ್ನು ಸ್ವೀಕರಿಸಿ ಅವುಗಳ ಜೊತೆಗೆ ಅಲ್ಲಿಯ ಪದಗಳನ್ನೂ ಸ್ವೀಕರಿಸಬಹುದು. ರೇಡಿಯೋ, ರೈಲು, ಕಾಲೇಜು ಇತ್ಯಾದಿಗಳು ಇದಕ್ಕೆ ಉದಾಹರಣೆಗಳು. ಆದರೆ ಕೆಲವೊಮ್ಮೆ ತಮ್ಮಲ್ಲೇ ಇರುವ ಪದಗಳನ್ನು ಹೊಸ ವಸ್ತುಗಳನ್ನು ಸೂಚಿಸಲು ಬಳಸಬಹುದು. ಪಾದ್ರಿಗಳು ಕ್ರಿಶ್ಚಿಯನ್ ಆವರಣದಲ್ಲಿ ಭಾರತೀಯ ಪದಗಳಾದ ಭಗವಾನ್, ಸ್ವರ್ಗ ಮುಂತಾದುವನ್ನು ಬಳಸುತ್ತಾರೆ. ನಮ್ಮಲ್ಲಿ ವಿದ್ಯುತ್, ವಿಮಾನ, ಸ್ನಾತಕ ಮುಂತಾದ ಪದಗಳಿದ್ದುವು. ಅವು ಸೂಚಿಸುತ್ತಿದ್ದ ವಸ್ತುಗಳಿಗೂ ನಾವು ಹೊಸದಾಗಿ ಸ್ವೀಕರಿಸಿದ ವಸ್ತುಗಳಿಗೂ ಬಹು ಹತ್ತಿರದ ಸಂಬಂಧವಿದ್ದಂತೆ ಕಂಡುಬಂದಿತು. ಆದ್ದರಿಂದ ಅವುಗಳನ್ನು electricity, aeroplane, graduate ಎಂಬರ್ಥದಲ್ಲಿ ಬಳಸುತ್ತಿದ್ದೇವೆ. ಹೊಸ ವಸ್ತುವನ್ನು ಸೂಚಿಸಲು ಸರಿಯಾದ ಪದವು ತನ್ನಲ್ಲಿ ರದಿದ್ದರೆ ಆ ಹೊಸ ವಸ್ತುವನ್ನು ತನ್ನ ಪದಗಳಲ್ಲಿ

ವಿವರಿಸಬಹುದು. Pin ಎನ್ನುವುದು ಬರಿಯ ಸೂಜಿ ಅಲ್ಲ; ಅದರ ತಲೆ ಗುಂಡಗಿರುವುದರಿಂದ ಅದನ್ನು 'ಗುಂಡುಸೂಜಿ' ಎಂದು ಕರೆದರು. ರೈಲನ್ನು 'ಹೊಗೆಬಂಡಿ' ಎಂದು, ರೇಡಿಯೋವನ್ನು 'ಆಕಾಶವಾಣಿ' ಎಂದು ಟೆಲಿಪೋನನ್ನು 'ದೂರವಾಣಿ' ಎಂದು ವಿವರಿಸಿರುವುದು ಕಂಡುಬರುತ್ತದೆ. ಅಮೆರಿಕದ ರೆಡ್-ಇಂಡಿಯನ್ನರು ವ್ಹಿಸ್ಕಿಯನ್ನು 'ಬೆಂಕಿ-ನೀರು' ಎಂಬರ್ಥ ಬರುವಂತೆ ವಿದ್ಯುತ್ತನ್ನು 'ಅವನ (ಎಂದರೆ ಗುಡುಗಿನ) 'ಕುಡಿನೋಟ' ಎಂಬರ್ಥ ಬರುವಂತೆ ಅನುವಾದಿಸಿಕೊಂಡಿದ್ದಾರೆ.

ಪರಭಾಷೆಯ ಪದವೇ ವಿವರಣರೂಪವಾಗಿದ್ದರೆ ಅದನ್ನು ಸ್ವೀಕರಿಸುವ ಭಾಷೆಯಲ್ಲಿ ಹಾಗೆಯೇ ಅನುವಾದ ಮಾಡಿಕೊಳ್ಳಬಹುದು. ಇವುಗಳನ್ನು ಭಾಷಾಂತರ-ಸ್ವೀಕರಣಗಳು ಎಂದು (Translation-loans) ಕರೆಯುತ್ತಾರೆ. ಪದಗಳು ಈ ಭಾಷೆಯವೇ ಅದರೂ ಅವುಗಳ ಮಾದರಿ ಮಾತ್ರ ಪರಭಾಷೆಯದು. ನಮ್ಮಲ್ಲಿ 'ಹಂಸ' ಎಂಬ ಪದವೂ 'ಗೀತ' ಎಂಬ ಪದವೂ ಇತ್ತು. Swan-song ಎಂಬುದನ್ನು ನಾವು 'ಹಂಸ-ಗೀತ' ಎಂದು ಅನುವಾದ ಮಾಡಿಕೊಂಡಿದ್ದೇವೆ. ಪಾಶ್ಚಾತ್ಯದ ಹರ್ಕ್ಯುಲಿಸನ ಸಾಹಸಕ್ಕೆ ಸಮಾನವಾದುದು ನಮ್ಮಲ್ಲಿ ಭಗೀರಥನ ಸಾಹಸ, ಆದ್ದರಿಂದ 'Herculean effort' ಎಂಬುದನ್ನು 'ಭಗೀರಥ-ಪ್ರಯತ್ನ' ಎಂದು ಅನುವಾದಿಸಿಕೊಂಡಿದ್ದೇವೆ. Cry in the wilderness=ಅರಣ್ಯ ರೋದನ, Superman=ಅತಿಮಾನವ, Cold War=ಶೀತಲ ಸಮರ, Foreword=ಮುನ್ನುಡಿ-ಇವೆಲ್ಲವೂ ಭಾಷಾಂತರ ಸ್ವೀಕರಣಗಳು. 'ಭಾಷಾಂತರ-ಸ್ವೀಕರಣ' ಎಂಬ ಉಕ್ತಿಯೇ ಭಾಷಾಂತರ-ಸ್ವೀಕರಣಕ್ಕೆ ಒಳ್ಳೆಯ ನಿದರ್ಶನವಾಗಬಲ್ಲದ್ದು.

ಸಾಂಸ್ಕೃತಿಕ ಸ್ವೀಕರಣಗಳಿಂದ ಒಂದು ಜನಾಂಗವು ಇನ್ನೊಂದು ಜನಾಂಗದಿಂದ ಏನನ್ನು ಕಲಿತಿದೆ ಎಂಬುದನ್ನು ನಾವು ತಿಳಿಯಬಹುದು. ಸಂಸ್ಕೃತದಿಂದ ಕನ್ನಡವು ಸ್ವೀಕರಿಸಿರುವ ಪದಗಳನ್ನು ನೋಡಿದರೇ, ನಮ್ಮ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಜೀವನದ ಮೇಲೆ ಆರ್ಯಸಂಸ್ಕೃತಿಯ ಪ್ರಭಾವವನ್ನು ಗುರುತಿಸಬಹುದು. ಕಳೆದ ಒಂದೆರಡು ಶತಮಾನಗಳಲ್ಲಿ ಕನ್ನಡವು ಪರ್ಷಿಯನ್, ಅರೇಬಿಕ್, ಹಿಂದೂಸ್ತಾನಿಗಳಿಂದ ನೂರಾರು ಪದಗಳನ್ನು ಸ್ವೀಕರಿಸಿದೆ. ಇವುಗಳಲ್ಲಿ ಬಹುಪಾಲು ಆಡಳಿತಕ್ಕೆ ಸಂಬಂಧಪಟ್ಟವು. ಈಚೆಗೆ ಇಂಗ್ಲೀಷ್ ಭಾಷೆಯಿಂದ ಸ್ವೀಕರಿಸಿರುವ ಪದಗಳನ್ನು ನೋಡಿದರೆ ನಮಗೆ ಇಂಗ್ಲಿಷ್ ಆಧುನಿಕ ಸಂಸ್ಕೃತಿಯ ಹೆಬ್ಬಾಗಿಲಾಗಿ ಪರಿಣಮಿಸಿರುವುದನ್ನು ಗುರುತಿಸಬಹುದು. ಆಧುನಿಕ ವಿಜ್ಞಾನ, ಯಂತ್ರವಿಜ್ಞಾನ, ತತ್ವಶಾಸ್ತ್ರ, ರಾಜ್ಯಶಾಸ್ತ್ರ, ಕಲೆ, ಸಾಹಿತ್ಯ ಇವುಗಳ ಪ್ರಭಾವವು ಕನ್ನಡನಾಡಿನ ಜನಜೀವನದ ಮೇಲೆ

[illegible]

ಪೂರ್ಣಪ್ರಮಾಣದಲ್ಲಿ ಆಗಿರುವುದನ್ನು ಗಮನಿಸಬಹುದು. ಪಾಶ್ಚಾತ್ಯರ ಸಂಸ್ಕೃತಿಯಿಂದ ಭಾರತೀಯ ಸಂಸ್ಕೃತಿಯು ಗಣನಾರ್ಹ ಪ್ರಮಾಣದಲ್ಲಿ ವ್ಯತ್ಯಾಸಗೊಂಡಿರುವುದನ್ನೂ ಗುರುತಿಸಬಹುದು. ಇದಕ್ಕೆ ಬಹುಮಟ್ಟಿಗೆ ಕಾರಣ ಇಂಗ್ಲಿಷ್ ಭಾಷೆ. ಈಚೆಗೆ ಇಂಗ್ಲಿಷ್ ಭಾಷೆಯು ಫ್ರೆಂಚ್ ಭಾಷೆಯಿಂದ ಮುಖ್ಯವಾಗಿ ಸ್ತ್ರೀಯರ ವೇಷಭೂಷಣಗಳು, ಅಲಂಕಾರ ಸಾಮಗ್ರಿಗಳು, ಭೋಗಸಾಮಾಗ್ರಿಗಳು ಇತ್ಯಾದಿಗಳಿಗೆ ಸಂಬಂಧಿಸಿದ ಪದಗಳನ್ನು ಸ್ವೀಕರಿಸಿದೆ. ಆದ್ದರಿಂದ ಒಂದು ಭಾಷೆಯು ಇನ್ನುಳಿದ ಭಾಷೆಗಳಿಂದ ಸ್ವೀಕರಿಸಿರುವ ಪದಗಳ ಅಧ್ಯಯನದಿಂದ ಆ ಭಾಷೆಯನ್ನಾಡುವವರು ಇತರ ಸಂಸ್ಕೃತಿಗಳಿಗೆ ಅಥವಾ ಜನಾಂಗಗಳಿಗೆ ಸಾಂಸ್ಕೃತಿಕವಾಗಿ ಎಷ್ಟು ಋಣಿಗಳಾಗಿದ್ದಾರೆಂಬುದನ್ನು ಅರಿಯಬಹುದು. ಹೀಗೆ ಸ್ವೀಕರಣಗಳ ಅಧ್ಯಯನವು ಒಂದು ನಾಡಿನ ಸಾಂಸ್ಕೃತಿ ಅಧ್ಯಯನಕ್ಕೆ ಪೂರಕವಾಗಿ ಪರಿಣಮಿಸಬಲ್ಲುದು.

ಮಾನವನು ತನ್ನ ಅನಿಸಿಕೆಗಳನ್ನು ಅಭಿವ್ಯಕ್ತಿ ಪಡಿಸುವುದಕ್ಕಾಗಿ ರೂಪಿಸಿಕೊಂಡಿರುವ ಸಂಕೇತಗಳ ವ್ಯವಸ್ಥೆಯೇ ಭಾಷೆ. ಯಾವುದೇ ಒಂದು ಭಾಷೆಯನ್ನು ತೆಗೆದುಕೊಂಡರೂ ತನ್ನದೇ ಆದ ಒಂದು ವ್ಯವಸ್ಥೆ ಕ್ರಮ ಇರುತ್ತದೆ. ಒಂದು ಮನೆಯನ್ನು ಕಟ್ಟಬೇಕಾದರೆ ಮಣ್ಣು, ಸಿಮೆಂಟು, ಇಟ್ಟಿಗೆ, ಕಲ್ಲು, ಬಣ್ಣ ಇತ್ಯಾದಿ ಹೇಗೆ ಕ್ರಮವಾಗಿ ಬೇಕಾಗುತ್ತದೆಯೋ ಹಾಗೆಯೇ ಭಾಷೆಯಲ್ಲಿಯೂ ಕೂಡ ಧ್ವನಿ, ಸಂಕೇತ, ಶಬ್ದ, ಅರ್ಥವಾಕ್ಯ ಮುಂತಾದವುಗಳು ವ್ಯವಸ್ಥಿತವಾದ ರೀತಿಯಲ್ಲಿ ಬಳಕೆಯಾಗಬೇಕಾಗುತ್ತದೆ.

ಭಾಷೆಯ ಮೂಲ ಉದ್ದೇಶವೇ ಜನರಲ್ಲಿ ಪರಸ್ಪರ ವ್ಯವಹಾರ ಸರಳವಾಗಿ ನಡೆಯಲು ಸಹಕಾರಿಯಾಗಿದೆ. ಮಾತೆ ಬರದ ವ್ಯಕ್ತಿ ಹಣ್ಣು ಇರುವ ಮರದ ಪಕ್ಕ ನಿಂತು ಬೇರೆ ವ್ಯಕ್ತಿಗೆ ಆ ಹಣ್ಣು ತೋರಿಸಿ ಕೈ ಬಾಯಿಗಳ ಸಂಕೇತಗಳ ಮೂಲಕ ಹಣ್ಣು ಕಿತ್ತುಕೊಡಲು ಸೂಚಿಸಬಹುದು. ಈ ಸೂಚನೆಯನ್ನು ಅರ್ಥ ಮಾಡಿಕೊಂಡು ವ್ಯಕ್ತಿ ಮರ ಹತ್ತುವುದು ಬಂದರೆ ಹತ್ತಿ ಹಣ್ಣು ಕಿತ್ತು ಕೊಡಬಹುದು. ಇಲ್ಲದಿದ್ದರೆ ಮರ ಹತ್ತುವುದು ಬರುವುದಿಲ್ಲ ಎಂದು ಸಂಜ್ಞೆ ಮೂಲಕ ಸೂಚಿಸಬಹುದು. ಆದರೆ ಇದು ಎಲ್ಲಾ ಸಂದರ್ಭದಲ್ಲಿ ಸಾಧ್ಯವಿಲ್ಲ.

ಮಾನವನು ತನ್ನ ಭಾವನೆ ವಿಚಾರ ಅನಿಸಿಕೆಗಳನ್ನು ಇತರರಿಗೆ ಅಭಿವ್ಯಕ್ತಿ ಪಡಿಸಲು ಇರುವ ಅತ್ಯಂತ ಸಮರ್ಥ ಮಾಧ್ಯಮವಾಗಿರುವ ಭಾಷೆ ಮಾನವ ಮಾನವರಲ್ಲಿ ಸಂಪರ್ಕವನ್ನುಂಟು ಮಾಡಿ ಅದರಲ್ಲಿ ಪರಸ್ಪರ ಸಹಕಾರಕ್ಕೆ ಅನುವು ಮಾಡಿಕೊಡುತ್ತದೆ. ಈ ಭಾಷೆಗೆ ಲಿಪಿಯೊಂದನ್ನು ರೂಪಿಸಿದರೆ ತಲತಲಾಂತರದ ಅನುಭವ ಪ್ರಾಚೀನ ಸಂಸ್ಕೃತಿ, ನಾಗರೀಕತೆಗಳನ್ನು ನಾಡಿನ ಇತಿಹಾಸವನ್ನು ದಾಖಲೆಯಾಗಿ ಬಳಸಬಹುದಾಗಿದೆ.ಈ ರೀತಿಯ ಭಾಷೆ ಸಾಮಾಜಿಕ ಕ್ರಿಯೆಯಾಗಿ

ಸಾಮಾಜಿಕ ಸಹಕಾರವನ್ನು ಪರಸ್ಪರ ವ್ಯವಹಾರವನ್ನು ಬಳಸುವ ಪ್ರಮುಖ ಮಾಧ್ಯಮವಾಗಿ ಮುಂದುವರೆಯುತ್ತದೆ.

ಯಾವುದೇ ಒಂದು ಪ್ರದೇಶ ತನ್ನದೇ ಆದ ಭಾಷೆ,ಉಡುಗೆ,ತೊಡುಗೆ,ಆಹಾರ,ನೆಲ,ಜಲ ಇವುಗಳಿಂದ ಪ್ರತ್ಯೇಕವಾಗಿರುವುದು ಸಹ ಎಲ್ಲವೂ ಸಹ ಅದರದೇ ಆದ ಮಹತ್ವವನ್ನು ಹೊಂದಿರುತ್ತದೆ.ಆಯಾ ಪ್ರದೇಶದ ಜನರು ಆಯಾ ಭಾಷೆಗೆ, ಸಂಸ್ಕೃತಿಗೆ ಹೊಂದಿಕೆಯನ್ನು ಮಾಡಿಕೊಂಡಿರುತ್ತಾರೆ. ಕರ್ನಾಟಕ ರಾಜ್ಯದ ಜಿಲ್ಲೆಗಳಲ್ಲಿ ಅತಿ ಹೆಚ್ಚು ಪ್ರಸಿದ್ಧಿಯನ್ನು ಪಡೆದಿರುವ ಜಿಲ್ಲೆ **'ಸಕ್ಕರೆಯ ನಾಡು'**ಎಂದು ಪ್ರಖ್ಯಾತಿ ಪಡೆದಿರುವ ಸಮೃದ್ಧವಾದ ಹಚ್ಚ ಹಸುರಾಗಿರುವ ಜಿಲ್ಲೆ ಈ ಜಿಲ್ಲೆಯ ಮೇಲ್ಕಂಡ ಎಲ್ಲ ಲಕ್ಷಣಗಳನ್ನು ಒಳಗೊಂಡಿದ್ದು ತನ್ನದೇ ಆದ ಪ್ರಾಚೀನ ಇತಿಹಾಸ, ಸಾಹಿತ್ಯ ಹಾಗೂ ಸಾಂಸ್ಕೃತಿಕ ದಾಖಲೆಗಳನ್ನು ತನ್ನ ಒಡಲಲ್ಲಿರಿಸಿಕೊಂಡು ತನ್ನ ಅಸ್ತಿತ್ವವನ್ನು ದಾಖಲು ಮಾಡಿಕೊಟ್ಟಿದೆ.

ರಾಷ್ಟ್ರಕೂಟರ ಕನ್ನರಭೂತುಗ (ಮನಾಲರ) ಇವರ ಬಿರುದಾವಳಿಗಳ ಪ್ರಸ್ತಾಪ ಚೋಳನನ್ನು ಕೊಂದ ವರ್ಣನೆ ಇದಕ್ಕೂ ಮೊದಲು ನಾಯಿ, ಕಾಳಿ ಹಾಗೂ ಮನಾಲರ ನಡುವಿನ ಅಮರ ಪ್ರೇಮದ ಚಿತ್ರ, ವೀರ, ಪ್ರಾಣಿ ಸ್ಮಾರಕ, ಪೂಜಾ ಸಂಗತಿ ಇತ್ಯಾದಿ. ಮದ್ಯದಲ್ಲಿ ತೂಗಿಯುದ್ದದ ವೀರ ಸನ್ನಿವೇಶವನ್ನು ಸ್ವಲ್ಪ ಲಘುಕರಿಸಿದಂತೆ ಕಾಣುತ್ತದೆ. ಆದರೆ ನಾಯಿ ಮತ್ತು ಹಂದಿಯ ವೀರ ಹೋರಾಟದ ವರ್ಣನೆ ಯನ್ನು ಮೊರಡಿಯೋಳ ಪಿರಿಯಪನ್ನಿಗೆ ಬಿಟ್ಟೊಡೆ ಎಂಬ ಒಂದೇ ಸಾಲಿನಲ್ಲಿ ಹೋರಾಟದ ಚಿತ್ರವನ್ನು ಸುಂದರವಾಗಿ ಹಿಡಿದಿಡಲಾಗಿದೆ. ಭೂತುಗನ ಶೌರ್ಯ ಚೋಳನನ್ನು ಅಂಬಾರಿಯ ಮೇಲೆ ಹೋಗಿ ಇರಿದ ಸಂಗತಿ ವೀರರಸವನ್ನು ಕನ್ನಡದ ಸತ್ಯಪೂರ್ಣ ಗದ್ಯದಲ್ಲಿ ಹೀಳಿರುವುದು ಪ್ರಶಂಸೆಗೆ ಪಾತ್ರವಾಗಿದೆ.

ಪ್ರಸ್ತುತ ಶಾಸನದಲ್ಲಿ ಅರಸನನ್ನು ಕಚ್ಚೆಗ ಎಂದು ವರ್ಣಿಸಿದೆ. ಅದರೆ ಈ ಶಾಸನದಕಾಲದ ವೇಳೆಗೆ ಕೃಷ್ಣನು ಕಾಂಚಿಪುರವನ್ನು ಮಾತ್ರ ಗೆದ್ದ ಅಂಶ ತಿಳಿಯುತ್ತದೆ. ಬೇಟೆಗಳಲ್ಲಿ ಹಾಗೂ ಯುದ್ದ ಸಂದರ್ಭಗಳಲ್ಲಿ ತಮಗೆ ನೇರವಾಗಿ, ವೀರೋಚಿತವಾಗಿ ಹೋರಾಡಿ ಮಡಿದ. ಪ್ರಾಣಿಗಳಿಗೆ ಅವುಗಳ ಒಡೆಯರು ಅವುಗಳ ಪರಾಕ್ರಮ, ಸ್ವಾಮಿನಿಷ್ಟೇ ಲೋಕಕ್ಕೆ ತಿಳಿಯುವಂತೆ ವೀರಗಲ್ಲು ಹಾಕಿಸಿ, ಅವುಗಳ ಬಗ್ಗೆ ಇದ್ದ ಪ್ರೇಮ ಈ ಶಾಸನದಿಂದ ತಿಳಿಯುತ್ತದೆ.

ಪ್ರಸ್ತುತ ಶಾಸನದಲ್ಲಿ ನಾಯಿಯ ಹೆಸರಿನಲ್ಲಿ ಗೊರವನಿಂದ ಪೂಜೆ ಮಾಡಿಸಿದ ಬಗ್ಗೆ ಹಾಗೂ ಪಾಶುಪತ ಅರ್ಚಕರಿಗೆ ಪೂಜಾ ನಿಯಮಗಳನ್ನು ವಿದಿಸಿದ ಬಗ್ಗೆ ತಿಳಿಯುತ್ತದೆ. ಯುದ್ದದ

ಗೆಲುವಿನಲ್ಲಿ ನೆರವಾದ ಸಾಮಾನ್ಯ ವೀರಸೈನಿಕರಿಗೂ ತೋರುತ್ತಿದ್ದ ಮರ್ಯಾದೆ, ಗೌರವ, ನೀಡುತ್ತಿದ್ದ ದತ್ತಿ ಬಗ್ಗೆ ತಿಳಿಯುತ್ತದೆ. ಈ ಶಾಸನದಲ್ಲಿ ಉಲ್ಲೇಖಿತ ಮನಾಲರನು ತನಗೆ ಮೆಚ್ಚಿಕೊಟ್ಟ ಅತಕೂರನ್ನು ಯುದ್ಧದ ನಂತರ ಸಾಕು ನಾಯಿಗಾಗಿ ಧಾರೆ ಎರೆದು ಮಾನವೀಯ ಪ್ರೀತಿ ಮನುಷ್ಯ–ಪ್ರಾಣಿ ಪ್ರೀತಿಯ ಸಂಬಂದದ ಚಿತ್ರವು ಇಲ್ಲಿದೆ.

ತೆಕ್ಕೂಲದಲ್ಲಿ ನಡೆದ ಯುದ್ಧದಲ್ಲಿ ಚೋಳ ರಾಜಾದಿತ್ಯನನ್ನು ಬೇಸುಗೆಯ ಕಳನಾಗಿ ಏರಿಹೋಗಿ ಕೊಂದವನು ಗಂಗರ ಭೂತುಗ ಎಂದು ಈ ಶಾಸನದಿಂದ ತಿಳಿತಯತ್ತದೆ. ಪ್ರಸಿದ್ದ ದೊರೆ ಚೋಳರಾಜಾದಿತ್ಯನ ಪ್ರಾಬಲ್ಯದಿಂದ ರಾಷ್ಟ್ರಕೂಟ ಕನ್ನರದೇವನು ತಲ್ಲಣಿಸಿದಾಗ ಕನ್ನರ ಭಾವ ನಂಟನಾದ ಗಂಗರಸ ಭೂತುಗ ರಪಿಕಾಲಬಲಕ ರಾಜಾದಿತ್ಯನನ್ನು ಬೆಸುಗೆಯ ಕಳನಾಗಿ ಬಂದು ಇರಿದು ಕೊಂದ ಬಗ್ಗೆ ಮೊಟ್ಟಮೊದಲಿಗೆ ಈಶಾಸನ ಲಬ್ಯವಾಗುವವರೆಗೆ ರಾಷ್ಟ್ರಕೂಟ ಕೃಷ್ಣನೇ ಈ ರಾಜಾದಿತ್ಯನನ್ನು ಕೊಂದನೆಂಬುದು, ನಂಬಿಕೆಯಾಗಿತ್ತು (ಬ್ರಿಟಿಷ್ ವಸ್ತುಸಂಗ್ರಹಾಲಯದ ಶಾಸನವೊಂದು ಈ ವಿಷಯವನನ್ನು ಹೇಳುತ್ತಾ ಸೂರ್ಯವಂಶದ ರಾಜಾದಿತ್ಯ ವೀರಾವೇಶದಿಂದ ಹೋರಾಡಿ ಶತ್ರುಸೈನ್ಯವನ್ನು ದಿಕ್ಕಾಪಾಲಾಗಿ ಓಡಿಸಿ ಸ್ವರ್ಗಸ್ಥನಾದ ಎಂದಿದೆ) ಈ ಹಿನ್ನೆಲೆಯಲ್ಲಿ ಅತಗೂರು ಶಾಸನ ಐತಿಹಾಸಿಕ ಮಹತ್ವದ್ದಾಗಿದೆ.

ಹುಂಚ ಶಾಸನದಿಂದ ಗಂಗರ ಎರೆಯಪ್ಪನ ನಂತರ ಅವನ ಮಕ್ಕಳಾದ ರಾಜಮಲ್ಲ ಮತ್ತು ಭೂತುಗ ಸಿಂಹಾಸನಕ್ಕಾಗಿ ಹೋರಾಡಿ, ಭೂತುಗ ಅಣ್ಣನನ್ನು ಕೊಂದು ಗಂಗರಾಜನಾದ ಎಂದಿದೆ. ಬಹುಶ: ಇವರಿಬ್ಬರೂ ಒಂದೇ ತಂದೆಯ ಮಕ್ಕಳಾದರೂ ಸಹೋದರರಲ್ಲವೆಂಬ ಅಭಿಪ್ರಾಯವಿದೆ. ಭೂತುಗನು ಗಂಗವಾಡಿ 96 ಸಾವಿರವನ್ನು ಆಳುತ್ತಿದ್ದ ಸಂಗತಿ ಈ ಶಾಸನದಿಂದ ತಿಳಿಯುತ್ತದೆ. ಈ ಶಾಸನದಿಂದ ಭೂತುಗನಿಗೆ ವಳಭೀಪುರವೇಶ್ವರ ನನ್ನಿಯಗಂಗೆ ಎಂಬ ಬಿರುದುಗಳು ಹೇಳಿದೆ. ಇದರಿಂದ ಹೊಸ ಬಿರುದು ಗಂಗವಂಶಕ್ಕೆ ಸೇರ್ಪಡೆಯಾಯಿತು.

ಭೂತುಗ ವೀರನಾಗಿದ್ದಂತೆ ಚಾಣಾಕ್ಷ ಹಾಗೂ ರಾಜತಂತ್ರ ನಿಪುಣನಾಗಿದ್ದನೆಂದು ತಿಳಿಯುತ್ತದೆ. ಒಟ್ಟಾರೆ ರಾಷ್ಟ್ರಕೂಟಗಂಗರ ಬಾಂಧವ್ಯ ಸಾಮರಸ್ಯದಿಂದ ಕೂಡಿತ್ತೆಂದು ತಿಳಿಯುತ್ತದೆ. ಚೋಳರನ್ನು ಎದುರಿಸಲು ರಾಷ್ಟ್ರಕೂಟರಿಗೆ ಗಂಗರ ಸಹಾಯ ಅಗತ್ಯವಾತ್ತೆಂದು ತಿಳಿಯುತ್ತದೆ.

ರಾಷ್ಟ್ರಕೂಟ ದೊರೆ 'ತೆಕ್ಕೂಲಂ' ನಲ್ಲಿ ಚೋಳರೊಡನೆ ಏಕೆ ಯುದ್ಧ ಮಾಡಿದನೆಂಬುದು ಸ್ಪಷ್ಟವಿಲ್ಲ. ಕೃಷ್ಣನಿಗೆ ಭೂತುಗ ಸಹಾಯ ಮಾಡಿದ್ದೇಕೆ? ಭೂತುಗನ ಶೌರ್ಯ ಪ್ರದರ್ಶನದ ಬಗ್ಗೆ ಪ್ರಶ್ನೆಗಳೇಳುತ್ತವೆ. ಪ್ರಸ್ತುತ ಶಾಸನದಿಂದ ಚೋಳ ಚತುರಂಗ ಬಲವನ್ನು ಅಟ್ಟಿಹೋಗಿ ಚೋಳನ

ಪ್ರತಾಪದಲ್ಲಿ ಹೋರಾಡುವ ಶಕ್ತಿ ರಾಷ್ಟ್ರಕೂಟ ಸೈನ್ಯದಲ್ಲಿ ಯಾರಿಗೂ ಸಾಧ್ಯವಾಗದೇ ಇದ್ದಾಗ ಭೂತುಗ ಕನ್ನರನನ್ನು ಮುಂದಿಟ್ಟುಕೊಂಡು ಚೋಳಸೈನ್ಯವನ್ನು ಭೇದಿಸಿ ಅಂಬಾರಿಯ ಮೇಲಿದ್ದ ರಾಜಾದಿತ್ಯನನ್ನು ಕೊಂದು ಇರಿದ ಚಾಕಚಕ್ಯತೆ ಸಾಹಸ ಅಸಮಾನ್ಯ. ಇದನ್ನೇ ಮೆಚ್ಚಿ ಕನ್ನರ ಕೃಷ್ಣ ತನ್ನ ನಾಡಿನ ಹಲವು ಭಾಗಗಳನ್ನು ದತ್ತಿ ನೀಡಿದ್ದಲ್ಲದೇ ಭೂತುಗನ ಮಗಳನ್ನು ಕನ್ನರ ತನ್ನ ಮಗನಿಗೆ ತಂದುಕೊಂಡ ಬಗ್ಗೆ ಬಿ.ಎಲ್. ರೈಸ್‌ರವರು ತಿಳಿಸುತ್ತಾರೆ.

ಪ್ರೀತಿಪಾತ್ರ ಪ್ರಾಣಿಗಳ ನೆನಪಿಗಾಗಿ ಹಾಕಿಸಿದ ಕೆಲವೇ ಕೆಲವು ಅಪೂರ್ವ ದಾಖಲೆಗಳಲ್ಲಿ ಇದು ಒಂದು ಪಿರಿಯಪ್ಪನಿಗೆ ವಿಟಿಲ್ವಾಂತೆ ಎಂಬ ಶಬ್ದದಲ್ಲಿ ಹಂದಿಯು ದೊಡ್ಡ ಗಾತ್ರವೆಂಬ ಕಲ್ಪನೆ ಬರುತ್ತದೆ. ಅದಕ್ಕೆ ಅನುಗುಣವಾಗಿ ಕಾಳಿ ಎಂಬ ನಾಯಿಯ ಗಾತ್ರವೂ ಹೊಳೆಯುತ್ತದೆ. ಹೆಸರೇ ಹೋರಾಟದ ಉಗ್ರತೆಗೆ ಪೋಷಕವಾಗಿದೆ.ಶಿಲ್ಪವನ್ನು ಗಮನಿಸಿದಾಗ ಹೋರಾಟದ ಬೆಂಕಿ ಹೆಸರಿಗೆ ಅನ್ವಯವಾದ ಯಗ್ರತೆಯನ್ನು ತೋರುತ್ತದೆ. ಅನುಗುಣವಾಗಿ ಹಂದಿಯ ಮೂತಿಯ ಮೇಲೆ ಹಿಡಿದಿರುವುದನ್ನು ಕಾಣಬಹುದು. ಮುಂಗಾಲುಗಳನ್ನು ಹಂದಿಯ ಕೆಳದವಡೆ ಮೇಲಿಟ್ಟು ಬಾಯಿ ಸಿಗಿಯುತ್ತಿರುವಂತಿರುವುದು. ಹಂದಿಯ ಮುಂಗಾಲುಗಳು ಬಾಗಿ ಜೋತು ಬೀಳುವ ಭಂಗಿಯಲ್ಲಿರುವುದು.ಹಂದಿಯ ಬಾಲ ಜೋತು ಬಿದ್ದಿರುವುದು ಅಸಹಾಯಕತೆಯನ್ನು ತೋರುತ್ತದೆ. ಹಾಗೆ ನಾಯಿಯ ಬಾಲ ಮೇಲೆದ್ದುದು ಶೌರ್ಯಸೂಚಿತ ಭಂಗಿಯಲ್ಲಿದೆ ಹಾಗೂ ಹಿಂಗಾಲುಗಳ ಆಧಾರದ ಮೇಲೆ ಗಟ್ಟಿ ಭಂಗಿಯಲ್ಲಿದೆ. ಶಿಲ್ಪಿಯು ಪ್ರಾಣಿಗಳ ಹೋರಾಟದ ಚಿತ್ರವನ್ನು ಅತ್ಯಂತ ಕಲಾತ್ಮಕವಾಗಿ ನಿರೂಪಿಸಿದ್ದಾನೆ. ರಾಷ್ಟ್ರಕೂಟರ ವಿಜಯದ ಮುಂದೆ ಈ ನಾಯಿ ಮತ್ತು ಹಂದಿಯ ಹೋರಾಟದ ಶಿಲ್ಪವು ಮಾತ್ರ ಬಂದಿದೆ. ಮನಾಲರನಿಗೆ ಸಾಮಾನ್ಯ ವೀರರ ಬದುಕು ರಾಜರಿಗಿಂತ ಹೆಚ್ಚು ಮೌಲಿಕ ಹಾಗೂ ಸಹಜವೆಂಬ ಭಾವವಿರುವಂತಿದೆ.

ಕನ್ನಡ ಸಾಹಿತ್ಯಕ್ಕೆ ಅತ್ಯಂತ ಪ್ರಾಚಿನ ಕಾಲದಿಂದಲೂ ಮಹತ್ವ ಕೊಡುಗೆಯನ್ನು ನೀಡಿರುವ ಜಿಲ್ಲೆಗಳಲ್ಲಿ ಮಂಡ್ಯ ಜಿಲ್ಲೆ ಅಗ್ರಸ್ಥಾನವಿದೆ. ಮಂಡ್ಯ ಜಿಲ್ಲೆಯಲ್ಲಿ ಪ್ರಕಟಿಸಿರುವ ಶಾಸನಗಳಲ್ಲಿ ತಮಿಳು ಹಾಗೂ ಗ್ರಂಥಲಿಪಿಯ ತಮಿಳು ಶಾಸನಗಳು, ಗ್ರಂಥಲಿಪಿ ಮತ್ತು ಸಂಸ್ಕೃತ ಭಾಷೆಯ ಒಂದು ಹಾಗೂ ನಾಗರಲಿಪಿ ಮತ್ತು ಕನ್ನಡ ಭಾಷೆಯ ಶಾಸನ, ತಮಿಳು ಮತ್ತು ಗ್ರಂಥಲಿಪಿಯ ಸಂಸ್ಕೃತ ತಮಿಳು ಶಾಸನ, ಕನ್ನಡ ಲಿಪಿ ಮತ್ತು ತಮಿಳು ಭಾಷೆಯ ಶಾಸನ. ನಾಗರಲಿಪಿ ಮತ್ತು ಹಿಂದೂಸ್ತಾನಿ ಭಾಷೆಯ ಶಾಸನಗಳು ಸಂಸ್ಕೃತದಲ್ಲಿಯೂ, ತೆಲುಗಿನಲ್ಲಿಯೂ, ಪರ್ಷಿಯನ್ ಭಾಷೆಯಲ್ಲಿಯೂ ಇವೆ. ಅನೇಕ ಕನ್ನಡ ಶಾಸನಗಳು ಕೆಲಭಾಗಗಳು ಸಂಸ್ಕೃತದಲ್ಲಿರುವುದುಂಟು. ಬಹು ಪಾಲು ಶಾಸನಗಳು ಮೊದಲಲ್ಲಿ ಬರುವ ಪ್ರಾರ್ಥನಾ ಶ್ಲೋಕಗಳು ಮತ್ತು ಕಡೆಯಲ್ಲಿ ಬರುವ ಶಾಪವಾಕ್ಯಗಳು ಸಂಸ್ಕೃತದಲ್ಲಿಯೇ ಇರುವುದು ತಿಳಿದು ಬರುತ್ತದೆ.

ಮಂಡ್ಯ ಜಿಲ್ಲೆಯಲ್ಲಿ ಸುಮಾರು ೨೦ ಪರ್ಶಿಯನ್ ಭಾಷೆಗಳಿವೆ. ಅವು ಬಹುತೇಕ ಶ್ರೀರಣಗಪಟ್ಟಣ ಹಾಗೂ ಅದರ ಸುತ್ತಮುತ್ತಲ ಪ್ರದೇಶಗಳಲ್ಲಿ ಕೆಲವು ಮಳವಳ್ಳಿಯಲ್ಲಿ ಹಾಗೂ ಒಂದು ನಾಗಮಂಗಲ ತಾಲ್ಲೂಕಿನಲ್ಲಿದೆ. ಪಾರ್ಸಿ ಭಾಷೆಯು ಪರ್ಶಿಯಾ ದೇಶದ ಭಾಷೆ. ಅಷ್ಟು ದೂರದ ದೇಶದ ಭಾಷೆಯೊಂದು ಕರ್ನಾಟಕದ ದಕ್ಷಿಣ ತುದಿಯ ಈ ಪ್ರಾಂತ್ಯದ ಆಡಳಿತ ಭಾಷೆಯಾಗಿತ್ತು ಎಂದರೆ ಸೋಜಿಗಪಡುವಂತಹ ವಿಚಾರ.[೨]

ಪಾರ್ಸಿ ಪ್ರಾಚೀನ ಭಾಷೆ. ಈ ಭಾಷೆಗೂ ಸಂಸ್ಕೃತ ಭಾಷೆಗೂ ನಿಕಟ ಸಂಪರ್ಕವಿದೆ. ಮಧ್ಯ ಏಶಿಯಾದಿಂದ ಹೊರಟ ಆರ್ಯರು ಎರಡು ಭಾಗಗಳಾಗಿ ಅವರಲ್ಲಿ ಕೆಲವರು ಪರ್ಶಿಯಾದಲ್ಲಿ ಉಳಿದರೆ ಮತ್ತೆ ಕೆಲವರು ಭಾರತವನ್ನು ಸೇರಿಸಿದರು. ಇವರ ಮೂಲಕ ಭಾಷೆ ಒಂದೇ ಆಗಿತ್ತು. ಅದು ಸ್ಥಳೀಯ ಭಾಷೆಯೊಡನೆ ಸೇರಿ ಪರ್ಶಿಯಾದಲ್ಲಿ ಪಾರ್ಶಿಯಾಗಿ ಭಾರತದಲ್ಲಿ ಸಂಸ್ಕೃತವಾಗಿ ಪರಿವರ್ತನೆಗೊಂಡಿತು. ಈ ಕೆಳಗಿನ ಕತಲವು ನಿಕಟವಾದದ್ದು ಎಂಬುದು ಸ್ಪಷ್ಟವಾಗುತ್ತದೆ.

ಪಿದರ್–ಪಿತೃ, ಮಾದರ್–ಮಾತೃ, ಸರ್–ಶಿರ, ಕ್ಷೀರ್–ಕ್ಷೀರ; ಚಷ್ಮ–ಚಕ್ಷು.

ಭಾರತದಲ್ಲಿ ಪರ್ಶಿಯನ್ ಸಾಹಿತ್ಯದ ಆರಂಭವು ಘಝ್ನಿ ಮಹಮ್ಮದ್ ಹಾಗೂ ಘೋರಿ ಮುಹಮ್ಮದ್‌ನ ಕಾಲದಿಂದ ಪ್ರಾರಂಭವಾಗುತ್ತದೆ. (ಕ್ರಿ.ಶ. ೧೦–೧೨ನೇ ಶತಮಾನ) ಪರ್ಶಿಯನ್ ಭಾಷೆ ಕುತಾಬ್ ಉದ್ದೀನ್ ಐಬಕ್ ಮತ್ತು ಇಲ್ತಮಿಶ್‌ನ ಕಾಲದಲ್ಲಿ ಉಚ್ಚ್ರಯ ಸ್ಥಿತಿಯನ್ನು ತಲುಪಿತು.

ಖಿಲ್ಜಿಗಳ ಕಾಲವು ಒಂದು ವೈಭವಶಾಲಿಯಾದ ಯುಗವಾಗಿತ್ತು. ಆಗಿನ ಸಮಕಾಲೀನ ಇತಿಹಾಸಕಾರರಲ್ಲಿ ವಿಖ್ಯಾತನಾದ ಬರನಿಯ ಅನುಸಾರ ಬುಖಾರಾ, ಸಮರಕಂದ ಹಾಗೂ ತಬ್ರೀಜ್‌ಗಳಲ್ಲಿಯೂ ಕಾಣಸಿಗದಂತಹ ಶ್ರೇಷ್ಟ ಪಂಡಿತರು ದಿಲ್ಲಿಯಲ್ಲಿ ವಾಸಿಸುತ್ತಿದ್ದರಂತೆ. ಖಿಲ್ಜಿಗಳ ಕಾಲದ ಶ್ರೇಷ್ಠ ಕವಿ ಅಮೀರ್ ಖುಸ್ರೋ ವಿಶ್ವದ ಅಗ್ರಗಣ್ಯ ಕವಿಗಳ ಸಾಲಿನಲ್ಲಿ ನಿಲ್ಲುವಂತಹ ಕವಿ. ಈತ ಐದು ಲಕ್ಷ ಕವಿತೆಗಳನ್ನು ೯೯ ಗ್ರಂಥಗಳನ್ನು ರಚಿಸಿದ್ದನಂತೆ ಮೊಹಮ್ಮದ್ ಬಿನ್ ತೊಘಲಕನ ಆಸ್ಥಾನದಲ್ಲಿ ಅನೇಕ ಪರ್ಶಿಯನ್ ಕವಿಗಳು ಹಾಗೂ ಇತಿಹಾಸಕಾರರೂ ಇದ್ದರು. ಇವರಲ್ಲಿ ಬರನಿ ಒಬ್ಬ ಶ್ರೇಷ್ಠ ಇತಿಹಾಸಕಾರ. ತೊಘಲಕ್ ತನ್ನ ರಾಜಧಾನಿಯನ್ನು ದಿಲ್ಲಿಯಿಂದ ದೌಲತಾಬಾದಿಗೆ ಸ್ಥಳಾಂತರಿಸಿದ ಪರಿಣಾಮವಾಗಿ ಪರ್ಶಿಯನ್ ಭಾಷೆ ದಕ್ಷಿಣ ಭಾರತಕ್ಕೂ ವ್ಯಾಪಿಸಿತು.[೩]

ಬಹುಮನಿ ವಂಶದ ಸ್ಥಾಪಕ ಸುಲ್ತಾನ್ ಅಲ್ಲಾವುದ್ದೀನ್ ಬಹಮನ್ ಶಾಹ್ ವಿದ್ಯೆಯ ಮಹಾಪೋಷಕನಾಗಿದ್ದನು. ಹಾಗಾಗಿ ಪರ್ಷಿಯಾದಿಂದ ಬಂದ ಪ್ರಮುಖ ಕವಿಗಳು, ವಿದ್ವಾಂಸರು.

ಕಲಾವಿದರು ಈತನ ಆಸ್ಥಾನ ಸೇರಿದರು. ವಿಜಾಪುರದ ಆದಿಲ್‌ಶಾಹಿಗಳು (೧೪೯೦-೧೬೮೬) ಪರ್ಶಿಯನ್ ಭಾಷೆಯ ಮಹಾಪೋಷಕರಾಗಿದ್ದರು. ಭಾರತದಲ್ಲಿ ಮೊಗಲ್ ಸಾಮ್ರಾಜ್ಯದ ಸ್ಥಾಪನೆಯು ಭಾರತದ ಪರ್ಶಿಯನ್ ಸಾಹಿತ್ಯ ಚರಿತ್ರೆಯಲ್ಲಿ ಒಂದು ಹೊಸ ಯುಗವನ್ನು ಪ್ರಾರಂಭಿಸಿತು. ಅಕ್ಬರನ ಕಾಲ ಭಾರತದ ಪರ್ಶಿಯನ್ ಸಾಹಿತ್ಯ ಚರಿತ್ರೆಯಲ್ಲಿ ಒಂದು ಉಜ್ವಲ ಯುಗವಾಗಿತ್ತು. ಪರ್ಶಿಯಾದ ಎಲ್ಲಾ ಭಾಗಗಳಿಂದಲೂ ಕವಿಗಳ ತಂಡವೇ ಬಂದು ಅಕ್ಬರನ ಆಸ್ಥಾನ ಸೇರಿತು. ಸಾಮ್ರಾಟ್ ಶಹಜಾನನ ಪುತ್ರ ದಾರಶೂಕೋ ಶ್ರೇಷ್ಠ ವಿದ್ವಾಂಸನಾಗಿದ್ದು ಐವತ್ತೆರಡು ಉಪನಿಷತ್ತುಗಳನ್ನು ಪರ್ಶಿಯನ್ ಭಾಷೆಗೆ ಭಾಷಾಂತರಿಸಿ, ಅದಕ್ಕೆ **'ಸಿರೇ ಅಕ್ಬರ್'** ಎಂದು ಕರೆದಿದ್ದಾನೆ. ರಾಮಾಯಣ, ಮಹಾಭಾರತ, ಅಥರ್ವಣವೇದ, ರಾಜತರಂಗಿಣಿ, ಪಂಚತಂತ್ರ ಇನ್ನೂ ಅನೇಕ ಸಂಸ್ಕೃತ ಗ್ರಂಥಗಳು ಪರ್ಶಿಯನ್ ಭಾಷೆಗೆ ತರ್ಜುಮೆಗೊಂಡವು. ಇದರಿಂದ ಜ್ಞಾನದ ವಿನಿಮಯವಾಯಿತು.

ಪರ್ಶಿಯನ್ ನಿಘಂಟು ರಚನೆ ಭಾರತವು ಕೊಟ್ಟ ಶ್ರೇಷ್ಠ ಕಾಣಿಕೆಯಾಗಿದೆ. ಏಕೆಂದರೆ ಈ ಒಂದು ಕ್ಷೇತ್ರವನ್ನು ಭಾರತದ ಹೊರಗಿನ ಪಂಡಿತರು ಅಲಕ್ಷಿಸಿದ್ದರು.

ಟಿಪ್ಪು ಸುಲ್ತಾನನ ಆಳ್ವಿಕೆಯಿಂದಾಗಿ ಮಂಡ್ಯ ಜಿಲ್ಲೆಯಲ್ಲಿ ಪರ್ಶಿಯನ್ ಭಾಷೆ ಬಳಕೆಗೆ ಬಂದಿತೆಂದು ಭಾವಿಸಬಹುದು. ಏಕೆಂದರೆ ಪರ್ಶಿಯನ್ ಭಾಷೆ ಟಿಪ್ಪುವಿನ ಆಡಳಿತ ಭಾಷೆಯಾಗಿತ್ತು. ಟಿಪ್ಪುವಿನ ನಂತರ ಕ್ರಿ.ಶ.೧೮೩೫ ರವರೆಗೂ ಪರ್ಶಿಯನ್ ಭಾಷೆ ಮೈಸೂರಿನ ಆಡಳಿತ ಭಾಷೆ ಆಗಿತ್ತು. ಇತ್ತೀಚಿನ ದಿನಗಳಲ್ಲಿ ಇಂಗ್ಲೀಷ್ ಭಾಷೆಗೆ ಹೇಗೆ ಮಾನ್ಯತೆ ಇದೆಯೋ ಹಾಗೆಯೇ ಭಾರತಾದ್ಯಂತ ಪರ್ಶಿಯನ್ ಭಾಷೆಗೆ ವಿಶೇಷ ಮಾನ್ಯತೆ ಇತ್ತು. ಕರ್ನಾಟಕದಲ್ಲೂ ಸುಮಾರು ೬೦೩ ಪರ್ಶಿಯನ್ ಶಾಸನಗಳನ್ನು ಗುರ್ತಿಸಲಾಗಿದೆ. ಇವುಗಳಲ್ಲಿ ಸುಮಾರು ೨೦ ಶಾಸನಗಳು ಮಂಡ್ಯ ಜಿಲ್ಲೆಯಲ್ಲಿವೆ. ಇವುಗಳಲ್ಲಿ ಬಹುತೇಕ ಶಾಸನಗಳು ಟಿಪ್ಪು ಸುಲ್ತಾನನ ಆಳ್ವಿಕೆಗೆ ಸಂಬಂಧಿಸಿದ್ದು, ಹಾಗೂ ವ್ಯಕ್ತಿಯ ಮರಣ ಹೊಂದಿದಾಗ ಗೋರಿಗಳ ಬಳಿ ಇರುವ ಫಲಕಗಳಾಗಿವೆ.[೪]

ಭಾಷೆಯ ವಿಷಯದಲ್ಲಿ ಬಂದರೆ ಪ್ರತಿ ಶಾಸನವೂ ಒಂದು ಕವನದಂತಿವೆ. ಪ್ರಪಂಚದ ಕವಿತ್ವವೆಲ್ಲಾ ಒಂದು ಕಡೆ, ಪರ್ಶಿಯನ್ ಕವಿತ್ವ ಒಂದು ಕಡೆ ಎನ್ನುತ್ತಾರೆ. ಹಾಗಾಗಿ ಪರ್ಶಿಯನ್ ಶಾಸನಗಳು ಕಾವ್ಯಮಯವಾಗಿ ವಿಶೇಷ ಲಾಲಿತ್ಯವನ್ನು ಪಡೆದಿವೆ. ಶಾಸನಗಳ ಒಂದು ಅದ್ಭುತ ಆಕರ್ಷಣೆ ಎಂದರೆ ಅವುಗಳ ಸುಂದರ ಬರವಣಿಗೆ

ಶ್ರೀರಂಗಪಟ್ಟಣದ ಬಹುತೇಕ ಪರ್ಶಿಯನ್ ಶಾಸನಗಳು ಶ್ರೀರಂಗಪಟ್ಟಣದ ದೊಡ್ಡ ಮಸೀದಿ ಹಾಗೂ ಟಿಪ್ಪುವಿನ ಸಮಾಧಿ ಸ್ಥಲವಾದ 'ಗುಂಬಜ್'ನಲ್ಲಿ ಕೇಂದ್ರೀಕೃತವಾಗಿವೆ. ಇಲ್ಲಿರುವ ಬಹುತೇಕ ಶಾಸನಗಳು ಗೋರಿಗಳ ಮುಂದಿರುವ ಫಲಕಗಳಾಗಿವೆ. ಮತ್ತೆರಡು ಶಾಸನಗಳು ಹಾಸುಪಾಸಿನ ಶ್ಮಶಾನಗಳಲ್ಲಿ ದೊರೆತಿವೆ. ಒಂದು ಶಾಸನ ಕೃಷ್ಣರಾಜಸಾಗರದ ಪ್ರವೇಶದ್ವಾರದಲ್ಲಿದೆ.

ಮೊದಲಿಗೆ ಶ್ರೀರಂಗಪಟ್ಟಣದ ದೊಡ್ಡಮಸೀದಿಯಲ್ಲಿರುವ ಪರ್ಶಿಯನ್ ಶಾಸನಗಳ ಬಗ್ಗೆ ದೃಷ್ಟಿ ಹಾಯಿಸಿದಾಗ ಮಸೀದಿಯ ಪಶ್ಚಿಮದ ಗೋಡೆಯಲ್ಲಿರುವ ಶಾಸನವು (ಇ.ಸಿ.೪೮) ಮಸೀದಿಯ ನಿರ್ಮಾಣಕ್ಕೆ ಸಂಬಂದಿಸಿದ ಶಾಸನವಾಗಿದೆ. ಮಸೀದಿಯ ನಿರ್ಮಾಣದ ಕಾಲ ಕ್ರಿ.ಶ. ೧೭೮೭. ಶಾಸನದ ಪಾಠ ಈ ರೀತಿ ಇದೆ: ದೊರೆ ಸುಲೇಮಾನ್ ಭವ್ಯ ಮಸೀದಿಯನ್ನು ನಿರ್ಮಿಸಿ, ಅದಕ್ಕೆ ಅಕ್ಸ ಎಂದು ಹೆಸರಿಟ್ಟಿದ್ದರೆ, ಈ ಸಂತೋಷದ ದಿನಗಳಲ್ಲಿ ಧರ್ಮದ ದೊರೆಯೊಂದು ಮಸೀದಿಯನ್ನು ನಿರ್ಮಿಸಿದ. ಅದಕ್ಕೆ ದೇವದೂತರು **"ಅಲಾ"** ಎಂದರು. ಈ ಮಸೀದಿಯ ಪ್ರತಿಕಮಾನುಗಳ ಮೂಲಕ ಬೀಸುವ ಗಾಳಿ ಒಂದು ಉತ್ಸಾಹದ ಚಿಲುಮೆಯಂತಿದ್ದು, ಆಹ್ಲಾದವನ್ನುಂಟುಮಾಡುತ್ತದೆ. ಮಸೀದಿಯ ಸುಂದರ ಪ್ರಾಂಗಣವು 'ಮರ್ವಾ ಬೆಟ್ಟದ ದಿಕ್ಕಿನಲ್ಲಿದೆ. ಮಸೀದಿಯ ಪ್ರತಿಮೆಯೊಂದು ಮಹರಾಬ್‌ಗಳು 'ಬತಾ'ದಂತಿದೆ. ಈ ಮಸೀದಿಯ ನಿರ್ಮಾಣದ ಬಗ್ಗೆ ನಾನು ಆಲೋಚಿಸುತ್ತಿದ್ದಾಗ ನನಗೆ ಸ್ವರ್ಗದಿಂದ ಒಂದು ಧ್ವನಿ ಕೇಳಿಸಿತು 'ಇದು ಪ್ರಾರ್ಥನೆಗೆ ಅರ್ಹ ಸ್ಥಳವೆಂದು'

(ಅಕ್ಸ ಮಸೀದಿಯು ಈಗಿನ ಇಸ್ರೇಲಿನಲ್ಲಿದೆ, ಮರ್ವಾ ಬೆಟ್ಟವು ಸೌದಿ ಅರೇಬಿಯಾದ ಮೆಕ್ಕಾದಲ್ಲಿದೆ. ಇಲ್ಲಿರುವ ಸಫಾ ಮತ್ತು ಮರ್ವಾ ಬೆಟ್ಟದ ಪ್ರದಕ್ಷಿಣೆಯನ್ನು ಹಜ್ ಯಾತ್ರಿಗಳು ಮಾಡುತ್ತಾರೆ. 'ಬತಾ' ಎದಂರೆ ಮೆಕ್ಕಾದಲ್ಲಿರುವ ಕಾಬ ಎಂಬ ಸ್ಮಾರಕಕ್ಕೆ ಇರುವ ಮತ್ತೊಂದು ಹೆಸರು.)

ಇದೇ ಮಸೀದಿಯ ಉತ್ತರದ ಗೋಡೆಯ ಮೇಲಿರುವ ಶಾಸನವು (ಇ.ಸಿ.೪೭) ಮುಸ್ಲಿಮರಲ್ಲಿ ಒಗ್ಗಟ್ಟನ್ನು ಮೂಡಿಸುವ ಉದ್ದೇಶದಿಂದ ಹಾಗೂ ಧರ್ಮವಿರೋಧಿಗಳ ವಿರುದ್ಧ ಹೋರಾಡಲು ಕರೆ ನೀಡಿರುವ ಶಾಸನವಾಗಿದೆ. ಈ ಶಾಸನದಲ್ಲಿ ಪ್ರವಾದಿ ಮೊಹಮ್ಮದರು ಮುಸ್ಲಿಮರ ಒಗ್ಗಟ್ಟಿಗಾಗಿ ಕರೆ ಕೊಟ್ಟಿದ್ದ ಸಂದರ್ಭವನ್ನು ಉಲ್ಲೇಖಿಸಲಾಗಿದೆ. ಹಾಗೂ ಯಾರು ಧರ್ಮವಿರೋಧಿಗಳೊಡನೆ ಕೈಜೋಡಿಸುತ್ತಾರೋ ಅವರನ್ನೂ ಸಹ ಧರ್ಮ ವಿರೋಧಿಗಳೆಂದು ತೀರ್ಮಾನಿಸಲಾಗುವುದು ಎಂದು ಈ ಶಾಸನದಲ್ಲಿ ಪ್ರವಾದಿ ಮೊಹಮ್ಮದರು ಮುಸ್ಲಿಮರ ಒಗ್ಗಟ್ಟಿಗಾಗಿ ಕರೆ ಕೊಟ್ಟಿದ್ದ ಸಂದರ್ಭವನ್ನು ಉಲ್ಲೇಖಿಸಲಾಗಿದೆ. ಹಾಗೂ ಯಾರು

ಧರ್ಮವಿರೋಧಿಗಳೊಡನೆ ಕೈಜೋಡಿಸುತ್ತಾರೋ ಅವರನ್ನೂ ಸಹ ಧರ್ಮ ವಿರೋಧಿಗಳೆಂದು ತೀರ್ಮಾನಿಸಲಾಗುವುದು ಎಂದು ಈ ಶಾಸನದಲ್ಲಿ ಬರೆಯಲಾಗಿದೆ. ಯುದ್ಧದ ಸಂದರ್ಭದಲ್ಲಿ ಶತ್ರುವಿನ ಶಕ್ತಿಯನ್ನು ಕುಂದಿಸುವಂತೆ ಮಾಡುವ ಕೃತ್ಯಗಳು 'ಧರ್ಮಸಮ್ಮತ' ಎಂದು ಪರಿಗಣಿಸಲಾಗುವುದು ಎಂದು ತಿಳಿಸಲಾಗಿದೆ. ಶಾಸನದ ಕಾಲ ಕ್ರಿ.ಶ.೧೭೮೮. (ರೈಸ್)

ಶಾಸನ ೫೦ ಇ.ಸಿ. ಇದೇ ಮಸೀದಿಯ ದಕ್ಷಿಣದ ಗೋಡೆಯ ಮೇಲಿದೆ. ಈ ಶಾಸನವು ಪ್ರವಾದಿ ಮುಹಮ್ಮದರ ಕಾಲದಲ್ಲಿ ಮುಸ್ಲಿಮರ ಮತ್ತು ಯಹೂದಿಗಳ ವಿರುದ್ಧ ನಡೆದ ಯುದ್ಧದ ಪ್ರಸ್ತಾಪವಿದೆ. ಯುದ್ಧದ ಸಂದರ್ಭದಲ್ಲಿ ದೊರೆಯುವ ಶತ್ರುಗಳ ಆಸ್ತಿಪಾಸ್ತಿಯನ್ನು 'ದೇವರ ಕೊಡುಗೆ' ಎಂದು ಭಾವಿಸಬೇಕೆಂದು ತಿಳಿಸಲಾಗಿದೆ. ಶಾಸನದ ಕಾಲ ಕ್ರಿ.ಶ.೧೭೮೭.

ಹೀಗೆ ಮಂಡ್ಯ ಜಿಲ್ಲೆಯಲ್ಲಿ ನಮಗೆ ಸಿಕ್ಕಿರುವ ಮಹಮ್ಮದೀಯ ಶಾಸನಗಳು ಇತರ ಶಾಸನಗಳ ಹಾಗೆ ನಮ್ಮ ನಾಡಿನ ಭಾಷೆ, ಸಾಹಿತ್ಯ, ಸಂಸ್ಕೃತಿ ಇತಿಹಾಸಗಳ ಅಧ್ಯಯನಕ್ಕೆ ಬಹುಮುಖ್ಯವಾದ ಆಕರಗಳೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಈ ಜಲ್ಲೆಯಲ್ಲಿ ನಮಗೆ ಸಿಕ್ಕಿರುವ ಮಹಮ್ಮದೀಯ ಶಾಸನಗಳಲ್ಲಿ, ಐತಿಹಾಸಿಕ ದೃಷ್ಟಿಯಿಂದ ಬಹಳ ಮುಖ್ಯವಾದ ಶಾಸನಗಳೆಂದರೆ ಹೈದರಾಲಿ ಮತ್ತು ಆತನ ಮಗ ಟಿಪ್ಪುಸುಲ್ತಾನರ ಶಾಸನಗಳು. ಇವು ಈ ಅರಸರ ರಾಜಕೀಯ ಕೊಡುಗೆ ಮೇಲೆ ಇನ್ನಷ್ಟು ಬೆಳಕು ಚೆಲ್ಲುತ್ತವೆ. ಅವುಗಳಲ್ಲಿ ಕೆಲವು ಶಾಸನಗಳಲ್ಲಿ ಈ ದೊರೆಗಳು ಬ್ರಾಹ್ಮಣರಿಗೂ, ದೇವಸ್ಥಾನಗಳಿಗೂ, ಮುಸ್ಲಿಮರಿಗೂ, ಅವರ ಸ್ಮಶಾನ ಭೂಮಿಗಳಿಗೂ ದತ್ತಿಕೊಟ್ಟಿರುವ ಪ್ರಸ್ತಾಪಗಳಿವೆ. ಇನ್ನು ಕೆಲವು ಶಾಸನಗಳಲ್ಲಿ ಕೋಟೆಗಳನ್ನು, ಅಣೆಕಟ್ಟನ್ನು, ಮಸೀದಿಗಳನ್ನು, ಗೋರಿಗಳನ್ನು ಕಟ್ಟಿಸಿರುವ ಪ್ರಸ್ತಾಪಗಳಿವೆ. ಉಳಿದ ಶಾಸನಗಳಲ್ಲಿ ರಾಜ್ಯಾಡಳಿತದ ವಿಷಯ, ದೇವರು (ಅಲ್ಲಾಹ್) ಮತ್ತು ಪ್ರವಾದಿ ಮೊಹಮ್ಮದ್ ಪೈಗಂಬರ್ (ಸ.ಅ.ಸ)ರ ತೊಂಬತ್ತೊಂಬತ್ತು ಹೆಸರುಗಳು, ಟಿಪ್ಪುಸುಲ್ತಾನ, ಆತನ ಮಗ, ದಂಡನಾಯಕ ಮುಂತಾದ ಪ್ರಮುಖ ವ್ಯಕ್ತಿಗಳು ದೈವಾಧೀನರಾದ ಪ್ರಸ್ತಾಪಗಳಿವೆ.

ಇಮ್ಮಡಿ ಕೃಷ್ಣರಾಜ ಒಡೆಯರ ಕಾಲದ, ಕೃಷ್ಣರಾಜಪೇಟೆ ತಾಲ್ಲೂಕಿನ ಚಟ್ಟಂಗೆರೆ ಗ್ರಾಮಕ್ಕೆ ಸೇರಿರುವ ಹಾಗೂಕನ್ನಡ ಭಾಷೆಯಲ್ಲಿರುವ, ಕ್ರಿ.ಶ. ೧೭೫೯ ರ ಮೂರು ಶಾಸನಗಳಲ್ಲಿ ಅರಸನು 'ಹೈದರ್ ಅಲಿ ಬಹದೂರ'ನಿಗೆ ಚಟುಮಗೆರೆ (ಚಟ್ಟಂಗೆರೆ) ಗ್ರಾಮವನ್ನು ಕೊಟ್ಟನೆಂದು ಹೇಳಿದೆ. ತೊಣ್ಣೂರಿನ 'ನಿಲಮಸೂ(ಶೂ)ದ ಖಾದರ್ರಿ ದರಗಾ' [ನೀಲಮಸ(ಶೂ)ದ ಗಾಜದರಗಾ]ದಲ್ಲಿ ನಡೆಸುವ ದರಿದ್ರರ ಧರ್ಮಕ್ಕೆ -- ಅಂದರೆ ಅವರ ಆಹಾರದಾನಕ್ಕೆ – ಈ ಗ್ರಾಮವನ್ನು ದಾನಮಾಡಲಾಯಿತೆಂದು ಮೊದಲನೆಯ ಶಾಸನದಲ್ಲಿ ಹೇಳಿದೆ. ಎರಡನೆಯ ಶಾಸನದಲ್ಲಿ ಗ್ರಾಮದ

ಹುಟ್ಟುವಳಿಯ ಜೊತೆಗೆ ಅಡಕೆ ತೋಟದ ಹುಟ್ಟುವಳಿಯನ್ನು ದಾನಮಾಡಲಾಯಿತೆಂದಿದೆ. ಈ ತೋಟವನ್ನು ಹೈದರ್ ಅಲಿಯು ೪೩೦೦ ವರಹಗಳಿಗೆ ಕೊಂಡು ದಾನ ಮಾಡಿದನು. ಮೂರನೆಯ ಶಾಸನದಲ್ಲಿ ಫಕೀರರ ಪ್ರಸ್ತಾಪವಿದೆ. ಬಹುಶಃ ಅವರಿಗೂ ಇಂತಹ ವ್ಯವಸ್ಥೆಯನ್ನು ಮಾಡಲಾಯಿತು. ಶಾಸನದ ಕಾಲದ ವೇಳೆಗಾಗಲೇ ದಳವಾಯಿ ನಂಜರಾಜಯ್ಯನು ಹೈದರಾಲಿಗೆ ನವಾಬ್ ಹೈದರಾಲಿ ಬಹದ್ದೂರ್ ಎಂಬ ಬಿರುದನ್ನಿತ್ತಿದ್ದು, ಆ ಬಿರುದನ್ನೇ ಈ ಶಾಸನಗಳಲ್ಲಿ ಹೇಳಿದೆ. ಮೊದಲ ಎರಡು ಶಾಸನಗಳಲ್ಲಿ ಬರುವ ಶಾಪ-ವಾಕ್ಯಗಳು ಗಮನಾರ್ಹ "ಹಿಂದುರವ, ಯಾರು ಅಡಿಸಾಸಿದರೆ ಕಾಶಿಯಲಿ ಗೋಹತ್ಯಾದಿ ಮಾಡಿದ ದ್ರೋಹ; ಮುಸಲ್ಮಾನರು ಯಾರು ಈ ಧರ್ಮಕ್ಕೆ ಅಡ್ಡಿ ನೆಡಿಸಿದರೂ ಮೆಕ್ಕಾದಲ್ಲಿ ಹಂದಿ ಚರ್ವಣೆ ಮಾಡಿದ ದೋಷಕ್ಕೆ ಹೋಗುವರು" ಅಂದರೆ ಈ ಧರ್ಮವನ್ನು ಹಿಂದುಗಳು ನಾಶಮಾಡಿದರೆ ಅವರು ಕಾಶಿಯಲ್ಲಿ ಗೋಹತ್ಯೆಯನ್ನು ಮಾಡಿದ ಪಾಪಕ್ಕೆ ಹೋಗುತ್ತಾರೆ ಹಾಗೂ ಮುಸಲ್ಮಾನರು ನಾಶಮಾಡಿದರೆ ಅವರು ಮೆಕ್ಕಾದಲ್ಲಿ ಹಂದಿಯನ್ನು ತಿಂದ ದೋಷಕ್ಕೆ ಹೋಗುತ್ತಾರೆ.

ಶ್ರೀರಂಗಪಟ್ಟಣದ 66 ನೇಯ ಶಾಸನ ಐದು ಹಲಗೆಗಳ ಮೇಲೆ ಕೆತ್ತಲಾಗಿರುವ ತಾಮ್ರ ಶಾಸನ ಕನ್ನಡ ಲಿಪಿಯ ಈ ಶಾಸನ ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿದೆ. ಕೊಂಗಣಿವರ್ಮನಿಂದ ಆರಂಭಿಸಿ ಗಂಗಮನೆತನದ ವಂಶಾವಳಿಯನ್ನು ಇಲ್ಲಿ ಕೊಟ್ಟಿದೆ. ಹರಿವರ್ಮನ ಮಗ ವಿಷ್ಣುಗೋಪನನ್ನು ಹೆಸರಿಸಿದ ಈ ಶಾಸನದಲ್ಲಿ ಶ್ರೀವಿಕ್ರಮನ ಮಗನನ್ನುದುಗ್ಗನೆಂದು ಕರೆದಿದೆ. ಇಮ್ಮಡಿ ಶಿವಮಾರನ ಮಗ ಮಾರಜ್ಗ ಎರೆಯಪ್ಪನ ಆಳ್ವಿಕೆಯ ಕಾಲದಲ್ಲಿ ಆತನ ಅನುಮತಿಯಿಂದ ಕಲಿನೊಳಂಬಾಧಿರಾಜ ಕೊಲ್ಲಿಯಸನು ಮತ್ತು ಆತನ ಮಗನೂ ಕೂಡಿಕೊಂಡು ಅರ್ಪೊಳೆ ಗ್ರಾಮದ ಪೊನ್ನಾದಿ ಎಂಬಾತನಿಗೆ ತಿಪ್ಪೆರೊರು ಗ್ರಾಮವನ್ನು ಬ್ರಹ್ಮದೇಯವಾಗಿ ಕೊಟ್ಟರೆಂದೂ ಶಾಸನದಲ್ಲಿ ಹೇಳಿದೆ. ಕಲಿನೊಳಂಬಾದಿರಾಜ ಕೊಲ್ಲಿಯರಸನ ಮಗನ ಹೆಸರನ್ನು ಹೇಳಿಲ್ಲ. ಆತನನ್ನು ನಿಜಮನಯಧೀರ ಎಂದು ವರ್ಣಿಸಲಾಗಿದೆ. ಶಾಸನದಲ್ಲಿ ತೇದಿಯ ಉಲ್ಲೇಖವಿಲ್ಲ. ಇಮ್ಮಡಿ ಶಿವಮಾರನ ಮಗ ಮಾರಸಿಜ್ಗ ಎರೆಯಪ್ಪನು ರಾಜ್ಯವಾಳಲಿಲ್ಲ, ಕಾರಣವೇನೆಂದರೆ ಅವನು ವಯಸ್ಸಿಗೆ ಬರುವ ಹೊತ್ತಿಗೆ ಅವನು ಸಾವಿಗೀಡಾಗಿರಬಹುದೆಂದು ತಿಳಿಯಲಾಗಿದೆ. ಕ್ರಿ.ಶ 796 ರ ಆಲೂರು ತಾಮ್ರಶಾಸನವನ್ನು ಆಧರಿಸಿ ಹೇಳುವುದಾದರೆ, ಮಾರಸಿಂಹನು ರಾಷ್ಟ್ರಕೂಟರ ಅಧೀನದಲ್ಲಿ ಗಂಗಮಂಡ ಶಾಸನವನ್ನು ಬರೆಯುತ್ತಿದ್ದವರು ಸಾಹಿತ್ಯಾಭ್ಯಾಸಿಗಳೇ ಆಗಿರುತ್ತಿದ್ದರು. ತಾವು ತುಂಬಾ ಮೆಚ್ಚಿಕೊಂಡ ಕೆಲವು ಪದ್ಯಗಳನ್ನು ತಮ್ಮ ಶಾಸನಗಳಲ್ಲಿ ತರುವ ಪ್ರಯತ್ನ ಮಾಡಿತ್ತಿದ್ದರು. ಕೆಲವೊಮ್ಮೆ ಕೆಲವು ಪದ್ಯಗಳಿಂದ ಪ್ರಭಾವಿತರಾಗಿ ಹಿಂದಿನ ಕವಿಗಳ ಪದ್ಯಗಳ ವೈಖರಿಯನ್ನು ಅನುಸರಿಸಿರುವುದೂ ಉಂಟು.

ಬೇರೆ ಬೇರೆಯ ಕಾವ್ಯಗಳಿಂದ ಪದ್ಯಗಳನ್ನು ಸ್ವೀಕರಿಸಿರುವ ಹಲವಾರು ನಿದರ್ಶನಗಳು ದೊರೆಯುತ್ತವೆ. ಶ್ರೀ ಎಂ.ಎಂ.ಕಲಬುರ್ಗಿಯವರು ಬಳ್ಳಾರಿ ಜಿಲ್ಲೆಯ ಬೆಣ್ಣಕಲ್ಲು, ಮಗಲ, ಸೋಗಿ ಗ್ರಾಮಗಳ ಶಾಸನಗಳು ಮತ್ತು ಹಾಸನ ಜಿಲ್ಲೆಯ ಶಿವರದ ಗ್ರಾಮದ ಶಾಸನಗಳಲ್ಲಿ ಪಂಪಪೂರ್ವ ಯುಗದ ಕವಿಗಳಲ್ಲಿ ಒಬ್ಬನಾದ ಗುಣವರ್ಮನ ಪದ್ಯಗಳನ್ನು ಗುರುತಿಸಿದ್ದಾರೆ. ಶ್ರೀ ಪರಬ್ರಹ್ಮ ಶಾಸ್ತ್ರಿಗಳು ಮತ್ತು ಎಂ.ಎಂ.ಕಲಬುರ್ಗಿಯವರು ಕರೀಂ ಪ್ರಥಮಾಶ್ವಾಸದ ಐದು ಕಂದ ಪದ್ಯಗಳನ್ನು ಗುರುತಿಸಿದ್ದಾರೆ. ಆದಿಪುರಾಣದಿಂದ ತೆಗೆದುಕೊಂಡು ಬಳಸಿಕೊಂಡಿರುವ ಶಾಸನವೊಂದು ಹಾಸನ ಜಿಲ್ಲೆಯಲ್ಲಿ ದೊರೆಯುತ್ತದೆ. ಹಾಗೆಯೇ ರನ್ನನ ಅಜಿತಪುರಾಣದ ಕೆಲವು ಪದ್ಯಗಳು ಲಕ್ಕುಂಡಿಯ ಶಾಸನವೊಂದರಲ್ಲಿ ದೊರೆಯುತ್ತದೆ. ಈ ಶಾಸನವನ್ನು ರನ್ನನೇ ಬರೆದಿರಬಹುದು ಎಂಬ ಸಂಶಯ ಹಲವಾರು ವಿದ್ವಾಂಸರಲ್ಲಿದೆ. ಅದರ ಚರ್ಚೆ ಇಲ್ಲಿ ಅಪ್ರಸ್ತುತ. ಜೈನ ಸಂಪ್ರದಾಯದ ರಾಮಾಯಣವನ್ನು ಬರೆದ ನಾಗಚಂದ್ರನ ರಾಮಚಂದ್ರಚರಿತ ಪುರಾಣದಿಂದ ಆಯ್ಕೆಮಾಡಿಕೊಂಡ ಪದ್ಯಗಳನ್ನುಳ್ಳ ಶಾಸನಗಳು ವಿಜಾಪುರ ಮತ್ತು ಶ್ರವಣಬೆಳಗೊಳಗಳಲ್ಲಿ ನಮಗೆ ದೊರೆಯುತ್ತವೆ.

ಚೋಳರ ನಾಲ್ಕು ಶಾಸನಗಳಲ್ಲಿ ಎರಡು ಒಂದನೆಯ ರಾಜರಾಜನಿಗೆ ಸೇರಿದುವು. ಇವೆರಡೂ ಕನ್ನಡ ಲಿಪಿ ಹಾಗೂ ಭಾಷೆಯಲ್ಲಿದೆ. ಮೊದಲನೆಯ ಶಾಸನ (ಪಾಂಪು ೫೧)ದ ಕಾಲ ಕ್ರಿ.ಶ.೧೦೧೧. ಎರಡನೆಯ ಶಾಸನ (ಶ್ರೀ ಪ ೭೮) ಒಂದು ವರ್ಷದ ನಂತರದ್ದು (೧೦೧೨-೧೩). ಈ ಬಲಮುರಿಯ ಶಾಸನವನ್ನು ಕುರಿತು ಈಗಾಗಲೇ ಚರ್ಚಿಸಿದ್ದೇವೆ. ರಾಜರಾಜ ಚೋಳನ ಆಳ್ವಿಕೆಯ ಕಾಲದಲ್ಲಿ ರಾಜರಾಜನ ಪಾದಪಂಕಜಭ್ರಮರನೆನಿಸಿದ ಪಳ್ಳವರ್ಮರಾಯನು ವೆಂಗಿ ಹಾಗೂ ಗಂಗಮಂಡಲಗಳ ಮಹಾದಣ್ಣ ನಾಯಕಪದವಿಯನ್ನು ಪಡೆದಿದ್ದನೆಂದು ಹೇಳಿದೆ. ಅಲ್ಲದೆ ಈತನು ತನ್ನ ದಿಗ್ವಿಜಯಗಳಲ್ಲಿ ಬೆಳ್ವಲದೇಶದವರೆಗೂ ಹೋಗಿದ್ದನೆಂದು ಸೂಚಿಸಿರುವುದರಿಂದ ಈ ಪಳ್ಳವನ್ ಮಹಾರಾಯನು ಯುವರಾಜನಾಗಿದ್ದ ಮೊದಲನೆಯ ರಾಜೇಂದ್ರನೆಂಬುವುದರಲ್ಲಿ ಯಾವ ಸಂದೇಹವೂ ಇಲ್ಲ. ಇದೇ ಸುಮಾರಿಗೆ ರಾಜೇಂದ್ರನು ಚಾಲುಕ್ಯವಿಕ್ರಮಾದಿತ್ಯ(೫)ನ ವಿರುದ್ಧ ದಂಡೆತ್ತಿ ಹೋಗಿದ್ದನೆಂಬುದು ನಮಗೆ ಇತರ ಆಧಾರಗಳಿಂದಲೂ ತಿಳಿದಿದೆ. ಪ್ರಸ್ತುತ ಶಾಸನದಲ್ಲಿ ರಾಜೇಂದ್ರನನ್ನು ಚೋಳನ ಗನ್ಧವಾರಣ, ಮುಮ್ಮಡಿಚೋಳನ ಗನ್ಧವಾರಣನೆಂದೆಲ್ಲಾ ವರ್ಣಿಸಿದೆ. ಮುಮ್ಮಡಿ ಚೋಳ ಎಂಬುದು ರಾಜರಾಜನ ಬಿರುದುಗಳಲ್ಲಿ ಒಂದು ಎಂಬುದು ಗಮನಾರ್ಹ.[೫]

ಶ್ರೀ ಪ ೬೭ ತಮಿಳು, ಗ್ರಂಥಲಿಪಿ ಹಾಗೂ ತಮಿಳು ಭಾಷೆಗಳಲ್ಲಿನ ಕುಲೋತ್ತುಂಗನ ಶಾಸನ. ಅರಸನ ಆಳ್ವಿಕೆಯ ೩೩ನೆಯ ವರ್ಷದ ಈ ಶಾಸನದಲ್ಲಿ ಆತನ ಮಾಂಡಲಿಕನಾದ ಪೋಮನ್ ಇರಾಮನ್ ಎಂಬಾತನು ವಾನವನ್‌ಮಾದೇವಿ ಚತುರ್ವೇದಿಮಂಗಲವೆನಿಸಿದ ಸಿರೆಯ

ಕಲಸತ್ತಪಾಡಿ ಗ್ರಾಮದ ಕೆರೆಯನ್ನು ಜೀರ್ಣೋದ್ಧಾರಗೊಳಿಸಿದನೆಂದು ಹೇಳಿದೆ. ಈತನಿಗೆ ವಿರುದರಾಯಭಯಂಕರಮಾರಾಯನ್ ಎಂಬ ಇನ್ನೊಂದು ಹೆಸರು ಇದ್ದಿತೆಂದು ಶಾಸನದಿಂದ ತಿಳಿದಿದೆ. ವಿರುದರಾಜ(ಯ) ಭಯಂಕರ ಎಂಬುದು ಮೊದಲನೆಯ ಕುಲೋತ್ತುಂಗನ ಬಿರುದುಗಳಲ್ಲಿ ಒಂದು. ಅರಸನ ಬಿರುದುಗಳನ್ನು ಮಂಡಲಿಕರು ತಮ್ಮ ಹೆಸರಿನೊಡನೆ ಸೇರಿಸಿ ಬಳಸುತ್ತಿದ್ದುದನ್ನು ಚೋಳರು ಶಾಸನಗಳಲ್ಲಿ ಸಾಮಾನ್ಯವಾಗಿ ಕಾಣುತ್ತೇವೆ. ಶಾಸನೋಕ್ತ ಕುಲೋತ್ತುಂಗನು ಮೊದಲನೆಯ ಕುಲೋತ್ತುಂಗನಾಗಿರಬಹುದೆಂದು ಊಹಿಸಿ ಶಾಸನದ ಕಾಲವನ್ನು ಕ್ರಿ.ಶ. ೧೧೦೨-೦೨ ಎಂದು ನಿಶ್ಚಯಿಸಿದ್ದೇನೆ.

ಕನ್ನಂಬಾಡಿಯಲ್ಲಿರುವ ಪಾಂಪು ೪೪ ಇದೇ ಅರಸನ ಇನ್ನೊಂದು ಶಾಸನ. ಈ ಕನ್ನಡ ಶಾಸನ ಮಾದಿಯಣ್ಣ ಮತ್ತು ಲಕ್ಕಣರು ಕಟ್ಟಿಸಿದ ಎರಡು ದೇಗುಲಗಳಿಗೆ ಗಾವುಂಡುಗಳಿಬ್ಬರು ನೀಡಿದ ಭೂಮಿದಾನವನ್ನು ಕುರಿತದ್ದಾಗಿದೆ. ದೇವಾಲಯ ಕಟ್ಟಿಸಿದ ಈರ್ವ್ವರು ವಡುಗವೇಳೆಕಾರನಾದ ಮುತಹಡೆಯರಾಯನ ಮಕ್ಕಳು. ವೇಳೆಕಾಲ ಎಂಬುದು ವೇಳೆವಾಳಿಗೆ ಸಮಾನವಾದ ಪದ. ಸ್ವಾಮಿಗಾಗಿ ತಮ್ಮ ಜೀವನವನ್ನೇ ಮುಡುಪಾಗಿಡುವ ಯೋಧರು ಇವರು. ವಡುಗವೇಳೆಕಾಲ ಎಂದರೆ ರಾಜ್ಯದ ಉತ್ತರ ಭಾಗದಲ್ಲಿದ್ದ ವೇಳೆಕಾಲ ಎಂದು ಅರ್ಥೈಸಬಹುದು.

ಪಾಂಪು ೧೩೨ ನೆಯ ಶಾಸನದ ಕಾಲ ಶಕವರ್ಷ ೧೪೯೨ನೆಯ ಪ್ರಮೋದೂತಸಂವತ್ಸರದ ಚೈತ್ರ ಶುದ್ಧ ೨ಕ್ಕೆ ಸಮನಾದ ಕ್ರಿ.ಶ. ೧೫೭೦ನೆಯ ಮಾರ್ಚ್ ೮; ಶಾಸನದಲ್ಲಿ ಸದಾಶಿವದೇವಮಹಾರಾಯನು ಆಳುತ್ತಿದ್ದಂತೆ ಹೇಳಿದೆ. ಆದರೆ ಈ ವೇಳೆಗೆ ತಾಳೀಕೋಟೆ ಕದನ ಮುಗಿದಿದ್ದು ಸದಾಶಿವರಾಯನು ಪೆನುಗೊಂಡೆಗೆ ಓಡಿಹೋಗಿ ಅಲ್ಲಿ ಅರವೀಡು ಶ್ರೀರಂಗ ಮತ್ತು ತಿರುಮಲರ ಅಧೀನದಲ್ಲಿದ್ದನು. ಆದರೂ ಶಾಸನದಲ್ಲಿ ಈತನನ್ನೇ ಹೆಸರಿಸಿರುವುದು ಗಮನಾರ್ಹ, ಸದಾಶಿವನು ಆತನಕ ಬದುಕಿದ್ದನೆಂದು ಊಹಿಸಬಹುದು. ಶಾಸನದಲ್ಲಿ ಪ್ರಸ್ತಾಪಿಸಿರುವ ವಿಷಯ ಸ್ವಾರಸ್ಯವಾಗಿದೆ. ಹಿಂದೆ ವೆಲುಗೋಡು ಮನೆತನದ ವಸಂತರಾಯನು ಮೈಲನಹಳ್ಳಿ ಮತ್ತು ಇನ್ನೊಂದು ಗ್ರಾಮವನ್ನು ದೇವಾಲಯದ ಶ್ರೀಭಂಡಾರದಿಂದ ಕ್ರಯಕ್ಕೆ ಪಡೆದು ಅದರಿಂದ ಬಂದ ಉತ್ಪನ್ನವನ್ನು ದೇವರಿಗೆ ದಾನವಾಗಿ ನೀಡಿದುದಲ್ಲದೆ ಆ ಧರ್ಮ ಸರಿಯಾಗಿ ನಡೆಯಲೆಂದು ಅನಂತಯ್ಯನೆಂಬ ಒಬ್ಬ ಧರ್ಮಕರ್ತನನ್ನು ಸಹ ನೇಮಿಸಿದನು. ಆದರೆ ಕೆಲಕಾಲಾನಂತರ ಆ ಧರ್ಮವು ಲುಪ್ತವಾದ ಕಾರಣ ವೆಲುಗೋಡ ಚಿತ್ರ ಕೊಂಡಮನಾಯಕನ ಮಗ ರಾಯಪನಾಯಕನು ಜಿಲೆಳ ರಂಗಪತಿರಾಜಯ್ಯನವರಿಗೆ ಹೇಳಿ ಪೂರ್ವದ ದಾನವನ್ನು ನವೀಕರಿಸಿದನು. ಈ ಬಾರಿ ಅನಂತಯ್ಯನ ಮೊಮ್ಮಗನಾದ ಆಳ್ವಾರು ಸಿಂಗಯ್ಯನು ಧರ್ಮಕರ್ತ್ತನಾಗಿ ನಿಯಮಿಸಲ್ಪಟ್ಟನು.

೧೬ನೆಯ ಶತಮಾನದ ಶ್ರೀಪ ೬ನೆಯ ಶಾಸನದಲ್ಲಿ ಕೊಟ್ಟಿರುವ ತೇದಿಯ ವಿವರಗಳು (ಪ್ರಜೋತ್ಪತ್ತಿಸಂವಸತ್ಸರ, ಕಾರ್ತ್ತಿಕ ಶು ೧) ತಾಳೆನೋಡಲು ಸಾಲದಾದರೂ ಅಂದಿನ ತಿಥಿಯು ಕ್ರಿ.ಶ. ೧೫೭೧ನೆಯ ವರ್ಷಕ್ಕೆ ಸರಿಹೊಂದುತ್ತದೆ. ಶಾಸನದಲ್ಲಿ ತಿರುಮಲದೇವ ಮಹಾರಾಯನ ಮಗ ರಾಮರಾಜರಸನು ಗ್ರಾಮವೊಂದನ್ನು ಕಾಣಾಚಿಯಾಗಿ ದಾನಮಾಡಿದುದರ ಪ್ರಸ್ತಾಪವಿದೆ. ಶಾಸನಕಾಲದಂದು ಅಳಿಯರಾಮರಾಯನ ಸೋದರ ತಿರುಮಲನು ಆಳುತ್ತಿದ್ದರೂ ಆತನ ಮಗ ರಾಮ (ರಾಮರಾಜ)ನು ಮೈಸೂರಿನ ಸುತ್ತಲಿನ ಪ್ರದೇಶದ ಅಧಿಕಾರಿಯಾಗಿದ್ದನೆಂಬುದು ಇತರ ಆಧಾರಗಳಿಂದ ತಿಳಿದಿದೆಯಾಗಿ ಶಾಸನೋಕ್ತ ರಾಮರಾಜ ಈ ರಾಮನೇ ಆಗಿರಬಹುದು.

ಮೇಲುಕೋಟೆಯ ಇನ್ನೊಂದು ಶಾಸನ (ಪಾಂಪು ೧೩೬)ದಲ್ಲಿ ಶ್ರೀರಂಗರಾಯ(೧)ನು ಆಳುತ್ತಿದ್ದಾಗ ಆತನೂ ಕೊಮಾರ ರಾಮರಾಜಮಹಾಅರಸುವೂ ಮೇಲುಕೋಟೆಯ ದೇವಾಲಯದಲ್ಲಿ ಯತಿರಾಜಸಪ್ತತಿಯನ್ನು ಪಠಿಸಲು ಸೂಕ್ತ ಏರ್ಪಾಡನ್ನು ಮಾಡಿದರೆಂದು ಶಾಸನ ಹೇಳುತ್ತದೆ. ಇಲ್ಲಿ ಉಕ್ತನಾದ ರಾಮರಾಜಮಹಾಅರಸುವು ಮೇಲ್ಕಂಡ ಶಾಸನದ ರಾಮರಾಜರಸನೇ ಆಗಿರಬೇಕು. ಈತನು ಶ್ರೀರಂಗನ ಸೋದರನಾಗಿದ್ದನು. ಈ ಶಾಸನದ ಕಾಲ ೧೫೭೪. ಕೊಮಾರ ಎಂಬುದು ಆತನು ಯುವರಾಜನಾಗಿದ್ದನೆಂಬುದನ್ನು ಸೂಚಿಸುತ್ತದೆ. ಈ ರಾಮರಾಜನ ಮಗ ತಿರುಮಲರಾಜ. ಪಾಂಪು ೨೨೩ನೆಯ ನರಿಹಳ್ಳಿಯ ಮತ್ತು ಪಾಂಪು ೨೩೦ನೆಯ ಮೇನಾಗರ ಶಾಸನಗಳಲ್ಲಿ ಈತನು ತನ್ನ ತಂದೆ ರಾಮರಾಜಯ್ಯನಿಗೆ ಪುಣ್ಯವಾಗಬೇಕೆಂದು ಶ್ರೀರಂಗಧಾಮಸ್ವಾಮಿಗೆ (ಶ್ರೀರಂಗಪಟ್ಟಣದ ರಂಗನಾಥನಿಗೆ) ನಾಲ್ಕು ಗ್ರಾಮಗಳನ್ನು ದಾನಮಾಡಿದ ಪ್ರಸ್ತಾಪವಿದೆ. ಮೊದಲನೆಯ ಶಾಸನದ ಕಾಲ ಕ್ರಿ.ಶ.೧೫೮೫ನೆಯ ಮಾರ್ಚ್ ೨೨. ಎರಡನೆಯದು ಒಂದು ವರ್ಷ ಹಿಂದಿನದು. ಅದರ ಕಾಲ ಕ್ರಿ.ಶ. ೧೫೮೪ನೆಯ ಮಾರ್ಚ್ ೩. ಆದ್ದರಿಂದ ಎರಡನೆಯ ಶಾಸನದ ಕಾಲವಾದ ಕ್ರಿ.ಶ. ೧೫೮೪ನೆಯ ವರ್ಷಕ್ಕೆ ಮೊದಲೇ ರಾಮರಾಜನು ತೀರಿಕೊಂಡು ಆತನ ಮಗ ತಿರುಮಲರಾಜನು ಅಧಿಕಾರಕ್ಕೆ ಬಂದಿರಬೇಕು. ಎರಡೂ ಶಾಸನಗಳಲ್ಲಿ ಅರಸನ ಉಲ್ಲೇಖವಿಲ್ಲದಿದ್ದರೂ ಆಳುತ್ತಿದ್ದ ಅರಸ ಶ್ರೀರಂಗರಾಯನೇ. ಅದುದರಿಂದ ರಾಮರಾಜ ತಿರುಮಲರಾಜನು ಆತನ ಅಧಿಕಾರಿಯಾಗಿದ್ದನೆಂಬುದು ಹಳೇಬೀಡಿನ ಶಾಸನ (ಪಾಂಪು ೨೩೪) ದಿಂದ ಸ್ಪಷ್ಟವಾಗುತ್ತದೆ.[೬]

ಇದೇ ಅರಸನ ಮೇಲುಕೋಟೆಯ ಕ್ರಿ.ಶ. ೧೫೮೫ನೆಯ ವರ್ಷದ ಎರಡು ಶಾಸನಗಳಲ್ಲಿ (ಪಾಂಪು ೧೩೯, ೧೪೦)ಯೂ ಉಭಯವೇದಾಂತಾಚಾರ್ಯನೆನಿಸಿದ ಪೆರಿಯಮಲನಂಬಿಯ ಮಗ (?) ಏಟೂರು ತಾತಾಚಾರ್ಯ್ಯನಿಗೆ ನೀಡಲಾದ ಕೆಲವು ಹಕ್ಕುಗಳನ್ನು ಹೇಳಿದೆ.

[illegible]

ಮೊದಲನೆಯ ಶಾಸನ ಸಂಸ್ಕೃತ ಭಾಷೆಯಲ್ಲಿದ್ದು ಶಿಥಿಲವಾಗಿರುವುದರಿಂದ ಕೆಲವು ವಿವರಗಳು ಹಾಳಾಗಿವೆ. ಶ್ರೀಭಾಷ್ಯ, ಕೈ(ಕೌ)ಶಿಕಪುರಾಣ, ಶತಾರಿಸೂಕ್ತ ಮುಂತಾದ ಧರ್ಮಕೃತಿಗಲ ಪಠನಕ್ಕೆ ಮಾಡಿದ ಏರ್ಪಾಡಿಗೆ ಈ ಶಾಸನಗಳು ಸಂಬಂಧಿಸಿವೆ.

ದುರ್ವಿನೀತನು (ಸು.೫೨೯-೫೭೯) ಗಂಗ ವಂಶದಲ್ಲೇ ಅತ್ಯಂತ ಪ್ರಭಾವಶಾಲಿ ದೊರೆಯಾಗಿದ್ದನು. ದುರ್ವಿನೀತನು ಪರಾಕ್ರಮಶಾಲಿ ರಾಜನಾಗಿದ್ದುದು ಮಾತ್ರವಲ್ಲದೇ ಸ್ವತಃ ಸಂಸ್ಕೃತ ಹಾಗೂ ಕನ್ನಡ ಭಾಷೆಗಳಲ್ಲಿ ಅಪರಿಮಿತ ಪಾಂಡಿತ್ಯವನ್ನು ಹೊಂದಿದ್ದನು.ಈತನು ೧೫ ಸರ್ಗಗಳಲ್ಲಿ ಮೂಲತಃ ಸಂಸ್ಕೃತದಲ್ಲಿ ಭಾರವಿ ರಚಿಸಿದ ಕಿರಾತಾರ್ಜುನೀಯ ಕಾವ್ಯಕ್ಕೆ ಟೀಕೆಯನ್ನು ರಚಿಸಿರುವನೆಂದು ಪ್ರತೀತಿಯಿದೆ. ಈತನ ಆಳ್ವಿಕೆಯ ಅವಧಿಯಲ್ಲಿ ಪುನ್ನಾಟ ಹಾಗೂ ಪನ್ನಾಡ (ಬಾಣ?)ಭಾಗಗಳು ಗಂಗ ಸಾಮ್ರಾಜ್ಯದಲ್ಲಿ ವಿಲೀನಗೊಂಡವು. ಈತನು ಪ್ರಾಕೃತ ಭಾಷೆಯಲ್ಲಿ ರಚಿತವಾಗಿದ್ದ ಗುಣಾಢ್ಯನ 'ವಡ್ಡಕಥಾ' ಕೃತಿಯನ್ನು ಕನ್ನಡ ಭಾಷೆಗೆ ಭಾಷಾಂತರಿಸಿದನೆಂದು ದಾಖಲೆಗಳಿಂದ ವ್ಯಕ್ತವಾಗುತ್ತದೆ. ಇವನ ಕಾಲಕ್ಕೆ ಸೇರಿದ ನಲ್ಲಾಳ ತಾಮ್ರ ಶಾಸನದಲ್ಲಿ ದುರ್ವಿನಿತನು ಅಂಗೀತ, ನೃತ್ಯ, ಆನೆಗಳನ್ನು ಪಳಗಿಸುವ ಹಾಗೂ ಆಯುರ್ವೇದ ಶಾಸ್ತ್ರದ ಬಗ್ಗೆ ಜ್ಞಾನ ಹೊಂದಿದ್ದ ವಿವರಗಳು ಉಲ್ಲೇಖಗೊಂಡಿವೆ. ಈತನು ವಿವಿಧ ಶಾಸ್ತ್ರಗಳಲ್ಲಿ ಪಾಂಡಿತ್ಯವನ್ನು ಹೊಂದಿದಂತೆಯೇ ಚಾಣಕ್ಯ ಅಥವಾ ಕೌಟಿಲ್ಯನ ಅರ್ಥಶಾಸ್ತ್ರಕ್ಕೆ ಸರಿಸಮವಾದ ನೀತಿಶಾಸ್ತ್ರದ ಬಗ್ಗೆ ಆಳವಾದ ಜ್ಞಾನವನ್ನು ಹೊಂದಿದ್ದನೆಂದು ತಿಳಿದುಬರುತ್ತದೆ. ಅಲ್ಲದೆ ಸಂಸ್ಕೃತ ವ್ಯಾಕರಣಕ್ಕೆ 'ಶಬ್ದಾವತಾರ' ಎಂಬ ವ್ಯಾಖ್ಯಾನವನ್ನು ಈತನೇ ರಚಿಸಿರುವನೆಂದು ನಂಬಿಕೆಯಿದ್ದರೂ, ಇದನ್ನು ಮೂಲತ: ಜೈನ ವಿದ್ವಾಂಸ ಪೂಜ್ಯಪಾದನು ಸಂಸ್ಕೃತ ಭಾಷೆಯಲ್ಲಿ ರಚಿಸಿದ್ದು ದುರ್ವಿನೀತನು ಕನ್ನಡ ಭಾಷೆಗೆ ಬಾಷಾಂತರಿಸಬಹುದೆಂಬ ಖಚಿತ ಅಭಿಪ್ರಾಯವಿದೆ.

ಬಾದಾಮಿ ಚಾಳುಕ್ಯರನ್ನು ಕ್ರಿ. ಶ. ೭೫೩ರಲ್ಲಿ ಸೋಲಿಸಿ ಬೃಹತ್ ಸಾಮ್ರಾಜ್ಯದ ಭವಿಷ್ಯತ್ತನ್ನು ಹೊಂದಿದ್ದ ಈತನು ರಾಷ್ಟ್ರಕೂಟರನ್ನು ಹಲವಾರು ನಿರ್ಣಯಕ ಯುದ್ಧಗಳಲ್ಲಿ ಎದುರಿಸಿದ ಬಗ್ಗೆ ದಾಖಲೆಗಳಿವೆ.

ಹೆಚ್ಚು ಕಡಿಮೆ ಇದೇ ಸಮಯದಲ್ಲಿ ರಾಷ್ಟ್ರಕೂಟ ಮೊದಲನೇ ಕೃಷ್ಣನು ಮಣ್ಣೆಯನ್ನು ವಶಪಡಿಸಿಕೊಳ್ಳಲು ತನ್ನ ಸೈನ್ಯ ಸಮೇತನಾಗಿ ಧಾಳಿ ಮಾಡಿದಾಗ ಗಂಗ ಶ್ರೀಪುರುಷನು ಈತನನ್ನು ಬಳ್ಳಾರಿ ಜಿಲ್ಲೆಯ ಕಂಪಿಲಿಯವರೆಗೂ ಹಿಮ್ಮೆಟ್ಟಿಸಿಕೊಂಡು ಹೋದನೆಂದು ದಾಖಲೆಗಳಿಂದ ತಿಳಿದುಬರುತ್ತದೆ. ಶ್ರೀಪುರುಷನು ಚಾಳುಕ್ಯ ಹಾಗೂ ನೊಳಂಬರು ಈತನ ವಿರುದ್ಧ ಸಂಚು ನಡೆಸಿ ರಾಷ್ಟ್ರಕೂಟರೊಡನೆ ಕೈಜೋಡಿಸಿದ ಘಟನೆಯು ಶಾಸನಗಳಿಂದ ದೃಢಪಡುತ್ತದೆ. ಶ್ರೀಪುರುಷನು

[illegible]

ಸ್ವತ: ಉತ್ತಮ ಪಂಡಿತನಾಗಿದ್ದು ಸಂಸ್ಕೃತ ಬಾಷೆಯಲ್ಲಿ ಗಜಶಾಸ್ತ್ರ ವೆಂಬ ವೈದ್ಯಶಾಸ್ತ್ರ ಕೃತಿಯನ್ನು ರಚಿಸಿದನೆಂದು ಪ್ರತೀತಿಯಿದೆ. ಮಂಡ್ಯ ಜಿಲ್ಲೆಯಲ್ಲಿ ಈತನ ಮೂರು ಶಾಸನಗಳು ಮಾತ್ರ ಲಭ್ಯವಾಗಿದ್ದು, ಅವುಗಳ ಪೈಕಿ ನಾಗಮಂಗಲ ತಾಲೂಕಿನ ದೇವರಹಳ್ಳಿಯ (ನಾಗಮಂಗಲ ೧೪೯ ಎ.ಕ.ಸಂ೬) ತಾಮ್ರಶಾಸನವು ಪ್ರಮುಖವಾಗಿದೆ. ಸಂಸ್ಕೃತ ಭಾಷೆಯಲ್ಲಿರುವ ಈ ಶಾಸನದಲ್ಲಿ ಶ್ರೀಪುರುಷನವರೆವಿಗೂ ಗಂಗ ವಂಶಾವಳಿಯನ್ನು ನೀಡಿ ಈತನನ್ನು ಪ್ರಥ್ವಿ ಕೊಂಗುಣಿ ಮಹಾರಾಜ ಎಂದು ಕರೆಯಲಾಗಿದೆ ಹಾಗೂ ಈ ಸಮಯದಲ್ಲಿ ಈತನು ಮಾನ್ಯಪುರದಲ್ಲಿ ಈಮಣ್ಣೆ) ವಾಸಿಸುತ್ತಿದ್ದನೆಂದೂ ದಾಖಲಿಸಲಾಗಿದೆ.

ಮಂಡ್ಯ ಜಿಲ್ಲೆಯ ಶಾಸನಗಳಲ್ಲಿ ಹೊಯ್ಸಳರದು ಸಿಂಹಪಾಲು. ಏಕೆಂದರೆ, ಈ ವಂಶದಲ್ಲಿ ಸುಮಾರು ೨೪೬ ಶಾಸನಗಳಲ್ಲಿ ಇಲ್ಲಿಯವರೆಗೂ ವರದಿಯಾಗಿವೆ. ಇವರ ಶಾಸನಗಳು ಹೊಯ್ಸಳ ಸಾಮ್ರಾಜ್ಯದ ಕುತೂಹಲಕರ ಸಂಗತಿಗಳನ್ನು ತಿಳಿಸುವುದಲ್ಲದೇ ಕನ್ನಡ . ತಮಿಳು ಹಾಗೂ ಸಂಸ್ಕೃತ ಮಿಶ್ರ ಭಾಷೆಗಳಲ್ಲಿ ರಚಿಸಲ್ಪಟ್ಟಿವೆ. ಹೊಯ್ಸಳರ ಇತಿಹಾಸವನ್ನು ಕುರಿತು ಹಾಗೂ ಅವರ ಉದಯದ ಬಗ್ಗೆ ಪ್ರಚಲಿತವಿರುವ ಪಾರಂಪರಿಕ ಕಥೆಯನ್ನು ತಿಳಿಸುವ ಹಲವು ಶಾಸನಗಳಿವೆ(ಎ.ಕ.ಸಂ೬&ಕೃಪೇ:೩೯,೬೯) ಹಾಗೂ ಹೊಯ್ಸಳರ ಆಡಳಿತಕ್ಕೆ ಸಂಬಂಧಿಸಿದಂತೆ ಕ್ರಿ.ಶ. ೧೧ನೇ ಶತಮಾನದ ಮಧ್ಯಭಾಗದಲ್ಲಿಯೇ ಅವರು ಚೋಳರ ಆಡಳಿತವನ್ನು ಮಂಡ್ಯ ಜಿಲ್ಲೆಯ ಕೆಲವು ಭಾಗಗಳಲ್ಲಿ ವಿರೋಧಿಸಿ ಅಲ್ಲಿ ತಳೂರಿದ ವಿಚಾರವನ್ನು ಸೂಚಿಸುತ್ತವೆ. ಆ ಸಮಯದಲ್ಲಿ ಅವರು ಕಲ್ಯಾಣ ಚಾಳುಕ್ಯರ ಮಾಂಡಲಿಕರಾಗಿದ್ದರು. ವಿನಯಾದಿತ್ಯನ ಕ್ರಿ.ಶ. ೧೦೪೮ ಮತ್ತು ೪೯ರ ತೊಣಚಿಯ ಶಾಸನ ಹಾಗೂ ಎರೆಯಂಗನ ಕ್ರಿ.ಶ. ೧೦೫೨ರ ಹಳೆಯಬೂದನೂರು ಶಾಸನಗಳು ಇವುಗಳ ಪೈಕಿ ಉಲ್ಲೇಖನೀಯ. ವಿಷ್ಣುವರ್ಧನನ ಸೋದರ ವಿನಯಾದಿತ್ಯನು ಕ್ರಿ.ಶ ೧೧೨೦ರ ಸುಮಾರಿಗೆ ಶ್ರೀರಂಗಪಟ್ಟಣದಲ್ಲಿ ಅಧಿಕಾರಿಯಾಗಿದ್ದು ನಂತರ ಬಹುಶ: ಅವನು ಚೋಳನ ವಿರುದ್ಧ ಯುದ್ಧದಲ್ಲಿ ಹತನಾದನೆಂದು ತಿಳಿದುಬರುತ್ತದೆ. ಇದಲ್ಲದೇ ಮಂಡ್ಯ ಜಿಲ್ಲೆಯ ತೊಣ್ಣೂರು ಹೊಯ್ಸಳರ ಕಾಲದಲ್ಲಿ ಒಂದು ಪ್ರಮುಖ ಆಡಳಿತ ಕೇಂದ್ರವಾಗಿತ್ತು. ತೊಣ್ಣೂರು ಇವರ ದ್ವಿತೀಯ ರಾಜಧಾನಿಯಾಗಿತ್ತೆಂಬ ಅಭಿಪ್ರಾಯವೂ ಇದೆ. ಮಂಡ್ಯ ತಾಲ್ಲೂಕಿನ ಹಳೇಬೂದನೂರಿನ ಸೋಮೇಶ್ವರ ದೇವಾಲಯದ ಬಳಿ ಇರುವ ವೀರಗಲ್ಲು ಶಾಸನವು ಭಗ್ನಗೊಂಡಿದ್ದು ಕ್ರಿ.ಶ.೧೦೫೨ರಲ್ಲಿ ಹೊಯ್ಸಳ ಮಂಡಳೇಶ್ವರ ಎರೆಯಂಗನು ನಂದನ ಸಂವತ್ಸರದಲ್ಲಿ ಆಳುತ್ತಿದ್ದಾಗ ವೀರನೊಬ್ಬನ ಮರಣದ ಬಗ್ಗೆ ಉಲ್ಲೇಖಿಸುತ್ತದೆ.

ವಿರೂಪಾಕ್ಷ ದೇವರಾಯ ಮತ್ತು ಇಮ್ಮಡಿ ಬುಕ್ಕರಾಯನನ್ನು ಪ್ರಾಂತಾಧಿಕಾರಿಗಳಾಗಿ ನೇಮಿಸುವುದರ ಮೂಲಕ ಇಮ್ಮಡಿ ಹರಿಹರನು ರಾಜ್ಯದ ಆಡಳಿತದ ಪದ್ಧತಿಯಲ್ಲಿ ಪ್ರಮುಖ ಬದಲಾವಣೆಗಳನ್ನು ಜಾರಿಗೆ ತಂದನು. ರಾಜನೀತಿಯಲ್ಲೂ ಆಧ್ಯಾತ್ಮಿಕ ಜೀವನದಲ್ಲೂ ಈತನಿಗೆ ಕಾಳಾಮುಖ ಪಂಥದ ಗುರುಗಳಾಗಿದ್ದ ಕ್ರಿಯಾಶಕ್ತಿ ವಿದ್ಯಾರಣ್ಯರು ಮಾರ್ಗದರ್ಶಕರಾಗಿದ್ದರು. ಈತನ ಮರಣಾನಂತರ ಮೂವರು ಸೋದರರಾಗಿ ಇಮ್ಮಡಿಬುಕ್ಕ, ಇಮ್ಮಡಿ ವಿರೂಪಾಕ್ಷ ಮತ್ತು ಒಂದನೇ ದೇವರಾಯರಲ್ಲಿ ರಾಜ್ಯಾಧಿಕಾರಕ್ಕಾಗಿ ಅಂತಃಕಲಹಗಳೇರ್ಪಟ್ಟವು.ಇದು ಎರಡು ವರ್ಷಗಳ ಕಾಲ ಮುಂದುವರಿದು ಅಂತಿಮವಾಗಿ ಮೊದಲನೇ ದೇವರಾಯನು (ಕ್ರಿ.ಶ. ೧೪೦೬–೨೨) ಪಟ್ಟಕ್ಕೆ ಬಂದನು. ದೇವರಾಯನ ಬಳಿಕ ಅಧಿಕಾರಕ್ಕೆ ಬಂದ ನಂತರ ಮಗ ವಿಜಯರಾಯನು ಕೇವಲ ಎರಡು ವರ್ಷಗಳ ಕಾಲ ಅಂದರೆ ಕ್ರಿ.ಶ. ೧೪೨೪ರವರೆಗೂ ಆಳ್ವಿಕೆ ಮಾಡಿದನು. ಈತನ ತರುವಾಯ ಬಂದ ಪ್ರೌಢದೇವರಾಯನನ್ನು 'ಅಭಿನವ ವೀರದೇವರಾಯ' ಮತ್ತು 'ಪ್ರತಾಪ ದೇವರಾಯ' ಎಂಬ ಅಭಿದಾನಗಳಿಂದಲೂ ಕರೆಯಲಾಗುತ್ತಿತ್ತು. ಇಮ್ಮಡಿ ದೇವರಾಯನು ಉತ್ತರಾಧಿಕಾರಿಯಾದ ಮೇಲೆ ಎರಡು ದಶಕಗಳಿಗೂ ಹೆಚ್ಚು ಕಾಲ (ಕ್ರಿ.ಶ. ೧೪೨೬–೧೪೪೬) ಆಳಿದನು. ಈತನು 'ಗಜವೇಂಟಿಕಾರ' ನೆಂಬ ಪ್ರಶಸ್ತಿಯನ್ನು ಹೊಂದಿದ್ದನೆಂದು ದಾಖಲೆಗಳಿಂದ ವ್ಯಕ್ತವಾಗುತ್ತದೆ. ಮಂಡ್ಯ ಜಿಲ್ಲೆಯಲ್ಲಿ ಇಮ್ಮಡಿ ದೇವರಾಯನ ಐದು ಶಾಸನಗಳು ವರದಿಯಾಗಿವೆ. ಮದ್ದೂರು ತಾಲ್ಲೂಕಿನ ಹಾಗಲಹಳ್ಳಿಯ ಕ್ರಿ.ಶ.೧೪೨೦ರ ಅಸ್ಪಷ್ಟ ಶಾಸನವು ಪ್ರತಾಪ ಅಥವಾ ಇಮ್ಮಡಿ ದೇವರಾಯನ ಕಾಲಕ್ಕೆ ಸೇರಿದ್ದು, ಹಾದಿರವಾಗಿಲ ಗ್ರಾಮದ ಮಾದಿಗೌಡ ಎಂಬ ಅಧಿಕಾರಿಯ ಬಗ್ಗೆ ಮಾತ್ರ ತಿಳಿಸುತ್ತದೆ. ಶ್ರೀರಂಗಪಟ್ಟಣದ ಶ್ರೀರಂಗನಾಥ ದೇವಾಲಯದ ಭಂಡಾರದಲ್ಲಿರುವ ಕ್ರಿ.ಶ.೧೪೩೦ರ ತಾಮ್ರ ಶಾಸನವು ಸಂಸ್ಕೃತ ಭಾಷೆಯಲ್ಲಿದ್ದು ಇಮ್ಮಡಿ ದೇವರಾಯನ ಆಳ್ವಿಕೆಯ ಕಾಲಕ್ಕೆ ಸೇರಿದೆ.

ಕ್ರಿ.ಶ. ೧೧೪೮ ಮವ. ೬೨ ರಲ್ಲಿ ಜಾತಿಗ್ರಾಮ (?) ನರಸಿಂಹದೇವರಿಗೆ ಗಾಜ್ಜನೂರನ್ನು ದತ್ತಿಬಿಟ್ಟ ವಿಷಯವಿದೆ. ಜಾತಿ ಎಂಬುದರ ಹಿಂದೆ ಎರಡು ಅಕ್ಷರಗಳು ತ್ರುಟಿತವಾಗಿದ್ದು ಜಾತಿ ಎಂಬುದು ಊರಿನ ಹೆಸರೇ ಎಂದು ಹೇಳಲಾಗದು. ಆದರೆ ಅದೇ ದೇವಾಲಯದಲ್ಲಿರುವ ಕ್ರಿ.ಶ. ೧೪೦೬ ರ ಮವ. ೬೧ ರಲ್ಲಿ ಅದೇ ಊರನ್ನು (ಮುದ) ಜಾತಿಗ್ರಾಮ ಎಂದಿದೆ. ಇಲ್ಲಿ (ಮುದ) ಎಂಬ ಪಾಠ ಅಷ್ಟು ಸ್ಪಷ್ಟವಾಗಿಲ್ಲ. ತಮಿಳಿನಲ್ಲಿರುವ ಮವ. ೬೨ ನೆಯ ಶಾಸನದಲ್ಲಿ ಬರುವ 'ಸಕಲ..ಜಾತಿಗ್ರಾಮ ಎಂಬುದನ್ನು '(ಒಂದು ಕಾಲದಲ್ಲಿ) ಹಲವು ಜಾತಿಯವರು ವಾಸಿಸುತ್ತಿದ್ದ' (Which was once occupied by several castes) ಎಂದು ಅರ್ಥೈಸಿರುವುದನ್ನು

[illegible]

[illegible]

ಗಮನಿಸಬಹುದು. ಆದರೆ ಮವ. ೭೧ ಸ್ಪಷ್ಟವಾಗಿ ಮುದಜಾತಿ ಗ್ರಾಮವೆಂದು ತಿಳಿಸಿರುವುದರಿಂದ ಅದು ಆ ಗ್ರಾಮದ ಹೆಸರೇ ಆಗಿರಬೇಕು. ಈ ಶಾಸನದಲ್ಲಿ ಬೇರೆ ಯಾವ ಗ್ರಾಮದ ಹೆಸರೂ ಇಲ್ಲ; ಆದರೆ ಮವ. ೬೨ ರಲ್ಲಿ ಗಾಞ್ಜನೂರಿನ ಹೆಸರಿದ್ದು ಅದಕ್ಕೆ ಸೇರಿದಂತೆ 'ಸಕಲ..ಜಾತಿಗ್ರಾ ಮತ್ತು' ಎಂಬುದನ್ನು ಹಾಗೆ ಭಾಷಾಂತರಿಸಿದೆ.[೨]


ಬೇಚಿರಾಕ್ ಪುರದಕಟ್ಟೆಯ ನಾಮಂ. ೧೭ ಕ್ರಿ.ಶ. ೧೧೩೯ ರ ಕಾಲದ್ದು. ಕೆಲಮಟ್ಟಿಗೆ ತ್ರುಟಿತವಾಗಿರುವ ಈ ಶಾಸನವು ಸುಕುದೊರೆಯನ್ನಾಳುತ್ತಿದ್ದ ಒಬ್ಬ ಸೆಟ್ಟಿಯನ್ನು ಕುರಿತಿದೆ. ಸುಕುದೊರೆಯು ನಾಮಂ. ೧೪ನೇ ಶಾಸನವು ದೊರೆತಿರುವ, ಸಮೀಪದಲ್ಲಿಯೇ ಇರುವ ಈಗಿನ ಸುಕದರೆ ಎಂಬ ಊರು. ಇಲ್ಲಿ ತಿಳಿಸಿರುವ ಸೆಟ್ಟಿಯು ಇದೇ ಶಾಸನದ ೧೨-೧೩ ನೇ ಪಂಕ್ತಿಗಳಲ್ಲಿ ದಾನಿಗಳ ಹೆಸರುಗಳನ್ನು ತಿಳಿಸುವಾಗ ಹೇಳಿರುವ (ಬೋಕಿ) ಸೆಟ್ಟಿಯೇ ಇರಬೇಕು. ನಾಮಂ ೧೪ ಬಹುಪಾಲು ತ್ರುಟಿತವಾದ ಶಾಸನ. ಅದರಲ್ಲಿ ಜಕ್ಕಿಸೆಟ್ಟಿ ಎನ್ನುವವನು ಸುಕ್ಕುದರೆಯಲ್ಲಿ ಬಸದಿಯೊಂದನ್ನು ಕಟ್ಟಿಸಿ ಕೆಲವು ದತ್ತಿಗಳನ್ನು ಬಿಟ್ಟ ಪ್ರಸ್ತಾಪವಿರುವಂತೆ ತೋರುತ್ತದೆ. ಈ ಇಬ್ಬರು ಸೆಟ್ಟಿಗಳೂ ಬಂಧುಗಳಾಗಿರುವುದು ಸಾಧ್ಯ. ಆದರೆ ನಾಮಂ ೧೭ ರಲ್ಲಿ ಬರುವ ಬೋಕಿಸೆಟ್ಟಿ ಎಂಬ ಹೆಸರನ್ನು ಬೇರೆ ರೀತಿಯಲ್ಲಿ (ಜಕ್ಕಿಸೆಟ್ಟಿ ಎಂದು) ಓದಿದರೂ ಈ ಇಬ್ಬರೂ ಒಬ್ಬರೇ ಎಂದು ಹೇಳಲು ಸಾಧ್ಯವಿಲ್ಲ.

ವಿಷ್ಣುವರ್ಧನನ ಇತ್ತೀಚಿನ ಶಾಸನವೆಂದರೆ ಬೋಗಾದಿಯಲ್ಲಿರುವ ಬಹುಪಾಲು ತ್ರುಟಿತವಾಗಿರುವ ಕ್ರಿ.ಶ. ೧೧೪೪ನೆಯ ವರ್ಷದ ಶಾಸನ (ನಾಮಂ.೧೮೩). ಈ ಶಾಸನ ಮೊದಲು ಚಾಲುಕ್ಯರಾಜನ (ಹೆಸರು ಹೋಗಿದೆ) ಆಳ್ವಿಕೆಯನ್ನು ಸೂಚಿಸಿ ಅನಂತರ ಆತನ ಸಾಮಂತನೊಬ್ಬನನ್ನು ಪಾದಪದ್ಮೋಪಜೀವಿಯೆಂದು ವರ್ಣಿಸಿದೆ. ಈತನು ಬಹಶ: ವಿಷ್ಣುವರ್ಧನನೇ ಆಗಿರಬೇಕು. ಮುಂದೆ ವಿಷ್ಣುವರ್ಧನನ ಮಂತ್ರಿ ಶ್ರೀಕರಣದ ಮಾದಿರಾಜನ ಪ್ರಶಸ್ತಿಯಿದೆ. ಈತ ಜೈನ ಧರ್ಮಿಯ. ಅನಂತರ ದ್ರಮಿಳಸಂಘಕ್ಕೆ ಸೇರಿದ ಆತನ ಗುರುವಿನ ಪರಂಪರೆಯನ್ನು ಕೊಟ್ಟಿದ್ದರೂ ವಿವರಗಳೂ ಉಳಿದುಬಂದಿಲ್ಲ. ಇದು ಕ್ರಿ.ಶ. ೧೧೪೧ ಕ್ಕಿಂತ ಈಚಿನ ಕಾಲದ ವಿಷ್ಣುವರ್ಧನನ ಮತ್ತೊಂದು ಶಾಸನವಾಗಿದ್ದು ಅವನು ಕ್ರಿ.ಶ. ೧೧೪೧ ರಲ್ಲಿ ತೀರಿಕೊಂಡನೆಂಬ ವಿಲಿಯಂ ಕೊಯೆಲ್ಹೊ ಅವರ ವಾದವನ್ನು ಅಲ್ಲಗಳೆಯುತ್ತದೆ.

ಇದರ ಮರುವರ್ಷಕ್ಕೆ ಎಂದರೆ ಕ್ರಿ.ಶ.೧೧೪೫ಕ್ಕೆ ಸೇರಿದ ನಾಮಂ ೩೦ ನರಸಿಂಹನ ಆಳ್ವಿಕೆಗೆ ಸೇರಿದ್ದು ಅವನಿಗೆ 'ಜಗದೇಕಮಲ್ಲ' 'ತಲಕಾಡುಗೊಂಡ' ಎಂಬ ಬಿರುದುಗಳಿರುವುದು ಕಂಡುಬರುತ್ತದೆ. ವಿಷ್ಣುವರ್ಧನ ಮತ್ತು ಒಂದನೆಯ ನರಸಿಂಹ ಇಬ್ಬರೂ ಒಟ್ಟಾಗಿ ಆಳುತ್ತಿದ್ದರೂ

ನರಸಿಂಹನು ಸ್ವತಂತ್ರವಾಗಿ ಶಾಸನಗಳನ್ನು ಹಾಕಿಸುತ್ತಿದ್ದುದನ್ನು ನಾವು ಹಿಂದೆಯೇ ನೋಡಿದ್ದೇವೆ. ಪ್ರಕೃತ ಶಾಸನವು ದಾನವಿತ್ತ ರಾಜನನ್ನು ಸ್ಪಷ್ಟವಾಗಿ ನರಸಿಂಹ ಪೊಯ್ಸಳನೆಂದು ಹೆಸರಿಸಿರುವುದು ಮೇಲಿನ ಅಭಿಪ್ರಾಯವನ್ನು ಎತ್ತಿಹಿಡಿಯುತ್ತದೆ ಮತ್ತು ತನ್ನ ತಂದೆಯಂತೆ ಆತನೂ ಜಗದೇಕಮಲ್ಲ ಎಂಬ ಬಿರುದು ಹೊಂದಿದ್ದು ಅವನು ಚಾಲುಕ್ಯ ಇಮ್ಮಡಿ ಜಗದೇಕಮಲ್ಲನ ಅಧೀನದಲ್ಲಿದ್ದನೆಂಬುದನ್ನು ಸೂಚಿಸುತ್ತದೆ. ಬಸದಿಯ ತೊಲೆಯ ಮೇಲೆ ಮೂರು ಸಾಲುಗಳಲ್ಲಿ ಕಂಡರಿಸಿರುವ ಈ ಶಾಸನದಲ್ಲಿ ಹಿಂದೆ ಹಿರಿಯದೇವನು ದತ್ತಿಯೊಂದನ್ನು ಬಿಟ್ಟಿದ್ದುದ್ದನ್ನೂ ಅದು ಸಾಕಾಗದಿರಲು ನರಸಿಂಹನು ಹೆಚ್ಚಿನ ದತ್ತಿಯನ್ನು ಮತ್ತೆ ಬಿಟ್ಟುದನ್ನೂ ತಿಳಿಸುತ್ತದೆ. ಈ ಬಸದಿಯನ್ನು (ಬಹುಶಃ ಶಾಂತಿನಾಥ ಬಸದಿ) ಗಂಗರಾಜನ ಮಗ ಬೊಪ್ಪದೇವನು ಕಟ್ಟಿಸಿದುದಾಗಿ ನಾಮಂ ೩೨ ರಿಂದ ತಿಳಿದುಬರುತ್ತದೆ. ಈ ಶಾಸನವು ಹನ್ನೆರಡನೆಯ ಶತಮಾನದ ಲಿಪಿಯಲ್ಲಿದೆ. ಆದ್ದರಿಂದ ನಾಮಂ ೩೦ ರಲ್ಲಿ ತಿಳಿಸಿರುವ ಹಿರಿಯದೇವನು ಬಿಷ್ಣುವರ್ಧನನಾಗಿರಬೇಕು. ಗಂಗರಾಜನು ಅವನ ದಂಡನಾಯಕರಲ್ಲೊಬ್ಬ. ಇದೇ ದಂಡನಾಯಕನು ಬಿಷ್ಣುವರ್ಧನನ ಅಧೀನದಲ್ಲಿದ್ದುದನ್ನು ತಿಳಿಸುವ ಈ ಹಿಂದೆಯೇ ಚರ್ಚಿಸಿರುವ ನಾಮಂ ೩೩ ನ್ನು ಇಲ್ಲಿ ಗಮನಿಸಬಹುದು.

ಯಲ್ಲಾದಹಳ್ಳಿಯ ನಾಮಂ ೬೪ ಬಿಷ್ಣುವರ್ಧನನ ಮಹಾಪ್ರಧಾನ, ಕೌಶಿಕಗೋತ್ರದ ದೇವರಾಜನನ್ನು ಉಲ್ಲೇಖಿಸುತ್ತದೆ. ದೊರೆಯು ಆತನಿಗೆ ತಂತ್ರವೆರ್ಗಡೆತನವನ್ನು ಕೊಟ್ಟುದಾಗಿ ಶಾಸನ ತಿಳಿಸುತ್ತದೆ. ಈ ಅಧಿಕಾರಿಯು ಸೂರನಹಳ್ಳಿಯಲ್ಲಿ ತ್ರಿಕೂಟಬಸದಿಯನ್ನು ಕಟ್ಟಿಸಿ ದೇವರ ಅಷ್ಟವಿಧಾರ್ಚನೆ ಮತ್ತು ಆಹಾರ ದಾನಕ್ಕಾಗಿ ತಾನು ರಾಜನಿಂದ ಪಡೆದ, ಬಹುಶಃ ೪೦ ಹೊನ್ನಿನ ವಾರ್ಷಿಕ ಉತ್ಪನ್ನವಿದ್ದ, ಆ ಹಳ್ಳಿಯ ಮೊದಲ ಹತ್ತು ಹೊನ್ನಿನ ಹುಟ್ಟುವಳಿಯ ಭೂಮಿಯನ್ನು ಮುನಿಚಂದ್ರದೇವರಿಗೆ ಧಾರೆಯೆರೆದಿದ್ದಾನೆ. ಈ ಗುರುವಿನ ಪರಂಪರೆಯನ್ನೂ ಶಾಸನ ಕೊಟ್ಟಿದೆ. ದತ್ತಿ ಬಿಟ್ಟ ಗ್ರಾಮದ ಭಾಗಕ್ಕೆ ಪಾರ್ಶ್ವಪುರುಷವೆಂಬ ಹೆಸರು ಕೊಟ್ಟಂತೆ ತೋರುತ್ತದೆ. ದೇವರಾಜನ ವಂಶಾವಳಿ ಈ ರೀತಿ ಇದೆ:



ಈ ಶಾಸನ ಒಂದನೆಯ ನರಸಿಂಹನು ಚಂಗಾಳ್ವರನನ್ನು ಕೊಂದುದಾಗಿ ತಿಳಿಸುತ್ತದೆ. ಈ ಚಂಗಾಳ್ವನನ್ನು ಗುರುತಿಸುವುದು ಕಷ್ಟ. ಒಂದನೆಯ ನರಸಿಂಹನ ಆಳ್ವಿಕೆಯಲ್ಲಿ ಒಬ್ಬ ಚಂಗಾಳ್ವಾನು ಬಣ್ಣಿಗವಾಡಿಯ ಮೇಲೆ ದಂಡೆತ್ತಿ ಬಂದಿದ್ದನು. ಪ್ರಕೃತ ಶಾಸನದ ಚಂಗಾಳ್ವನೇ ಅವನಾಗಿರಬಹುದು.

ಮದ್ದೂರಿನ ನರಸಿಂಹಸ್ವಾಮಿ ದೇವಾಲಯದಲ್ಲಿರುವ ಮೂರು ತ್ರುಟಿತ ತಮಿಳು ಶಾಸನಗಳು (ಮ. ೩, ೪ ಮತ್ತು ೬) ಈ ರಾಜನ ಆಳ್ವಿಕೆಗೆ ಸೇರಿವೆ. ಅವುಗಳಲ್ಲಿ ಎರಡು (೩, ೪) ಚಿನ್ನದ ನಾಣ್ಯಗಳನ್ನು (ಪೊನ್ ಕಚ್ಚಾಣ = ಗದ್ಯಾಣ) ದತ್ತಿ ಬಿಟ್ಟುದನ್ನೂ ಮೂರನೆಯದು ಒಬ್ಬಾಕೆಯು ನಂದಾದೀಪವನ್ನು ಕೊಟ್ಟುದನ್ನೂ ತಿಳಿಸಿದೆ. ಮ. ೩ರ ದಾನಿ ವಿಟ್ಟಯಣ್ಣ ಪೆರ್ಗಡಿ. ಧರ್ಮಾಪುರ ಶಾಸನದಲ್ಲಿ ದಾನಕೊಟ್ಟಿರುವ ಕರ್ನಾಟ ವಂಶದ ದಂಡನಾಯಕ ಬಿಟ್ಟಯಣ್ಣನೇ ಈತನಾಗಿರಬಹುದೇ ಎಂದು ಹೇಳಲು ಸಾಧ್ಯವಿಲ್ಲ. ದ್ಯಾವರಹಳ್ಳಿ ಶಾಸನದಲ್ಲಿಯೂ (ಮ. ೧೪೦) ಈತನ ಹೆಸರಿದೆ.[೮]

ಇಮ್ಮಡಿ ವೀರಬಲ್ಲಾಳನ ೨೫ಕ್ಕೂ ಹೆಚ್ಚು ಶಾಸನಗಳಿವೆ. ಸುಂದರವಾಗಿ ಕಂಡರಿಸಿರುವ ಲಾಲನಕೆರೆಯ (ನಾಮಂ. ೬೩) ಶಾಸನದಲ್ಲಿ ಹೊಯ್ಸಳ ವಂಶಾವಳಿಯನ್ನೂ ವಾಜಿವಂಶಕ್ಕೆ ಸೇರಿದ ಮಹಾಪ್ರಧಾನ ಕಂಟಿಮಯ್ಯನನ್ನೂ ವರ್ಣಿಸಿದೆ. ತನ್ನ ತಂದೆ ಮಧುಸೂದನನ ನೆನಪಿಗಾಗಿ ಕಂಟಮಯ್ಯನು ಮಧುಕೇಶ್ವರ ದೇವಾಲಯವನ್ನು ಕಟ್ಟಿಸಿದನು. ಈತನು ಹೊಯ್ಸಳರಲ್ಲಿ ದಂಡ ನಾಯಕನಾಗಿದ್ದ ಪ್ರಸಿದ್ಧನಾದ ಹುಳ್ಳಚಮೂಪನ ಅಣ್ಣ.

ನಾಗಮಂಗಲದ ಶಾಸನ (ನಾಮಂ. ೧) ಆ ಊರನ್ನು ವೀರಬಲ್ಲಾಳನು ಚತುರ್ವೇದಿಭಟ್ಟರತ್ನಾಕರವೆಂಬ ಅಗ್ರಹಾರವೆಂದು ಕರೆದಿದ್ದು ಚೆನ್ನಕೇಶವದೇವರಿಗೆ ದೇವದಾನವಾಗಿ

ಭೂಮಿಯನ್ನು ಬಿಟ್ಟುದಾಗಿ ತಿಳಿಸುತ್ತದೆ. ಈ ಶಾಸನವನ್ನು **'ವಲಯ ಶಾಸನ'** ವೆಂದು ವರ್ಣಿಸಿದ್ದು ಬಹುಶಃ ಅದನ್ನು ಸರದಿಯ ಮೇಲೆ ಅನುಭವಿಸಲು ವೃತ್ತಿಯಾಗಿ ಕೊಟ್ಟಿರಬೇಕು. ಹಾಗಿದ್ದಲ್ಲಿ ವೃತ್ತಿಯ ಭೂಮಿಗೆ **ಹಲತ್ತಿ** ಎಂಬ ಹೆಸರಿದ್ದಿರಬೇಕು. ಅದುದರಿಂದ ಭಾಷಾಂತರವನ್ನು ಹೀಗೆ ಓದಿಕೊಳ್ಳಬೇಕು: (This) is the charter of grant of tenure (of land) on rotation, furnishing the boundaries of Halatti: ವಿಷ್ಣುವರ್ಧನ, ಹೊಯ್ಸಳ, ವೀರಬಲ್ಲಾಳನು ರಾಜಧಾನಿ ದೋರಸಮುದ್ರದಿಂದ ಆಳುತ್ತಿದ್ದುದಾಗಿ ಶಾಸನ ತಿಳಿಸುತ್ತದೆ. ಶಾಸನದ ಕಾಲ ಖರಸಂವತ್ಸರ ಆಷಾಢ ಶು. ೧೦ ಗುರುವಾರ. ಇದು ಕ್ರಿ.ಶ. ೧೧೭೧ ಜೂನ್ ೧೦ ಸೋಮವಾರಕ್ಕೆ ಸರಿಹೊಂದುತ್ತದೆ. ಆದರೆ ಆ ಹೊತ್ತಿಗೆ ವೀರಬಲ್ಲಾಳನಿನ್ನೂ ಸಿಂಹಾಸನವನ್ನೇರಿರಲಿಲ್ಲ. ಆದರೂ ಒಂದನೆಯ ನರಸಿಂಹನ ಆಳ್ವಿಕೆಯ ಕಡೆಯ ವರ್ಷಗಳಲ್ಲಿ ರಾಜಕುಮಾರನು ಪ್ರಕ್ಷುಬ್ಧಗೊಂಡು ತನ್ನ ತಂದೆಯ ವಿರೋಧವಾಗಿ ಬಂಡೆದ್ದಿದ್ದನೆಂಬುದು ತಿಳಿದಿದೆ. ಪ್ರಸ್ತುತ ಶಾಸನ ಆತ ರಾಜಕುಮಾರನಾಗಿದ್ದಾಗ ಇಂಥ ಸಂದರ್ಭದಲ್ಲಿ ಹಾಕಿಸಿದ ಶಾಸನವಾಗಿರಬೇಕು. ವಿಷ್ಣುವರ್ಧನನೆಂಬ ಬಿರುದನ್ನು ಹೊಂದಿದ್ದ ಈ ಯುವರಾಜಕುಮಾರನು. ತನ್ನ ತಾತನಂತೆ ಮಹತ್ವಾಕಾಂಕ್ಷಿಯಾಗಿದ್ದ ಸ್ವತಂತ್ರವಾಗಿ ಸಾಮ್ರಾಜ್ಯವನ್ನಾಳುವ ಸಮಯವನ್ನು ನಿರೀಕ್ಷಿಸುತ್ತಿದ್ದರು.

ಲಾಲನಕೆರೆಯ ನಾಮಂ. ಊರಲ್ಲಿ ಅಷ್ಟು ಪ್ರಸಿದ್ಧವಲ್ಲದ ಶಂಭುವರಾಯ-ಕಾಡವರಾಯರ ವಂಶವನ್ನು ತಿಳಿಸಿದೆ. ಪಡೆಗಯ್ಯಸೇನಾನಾಯಕನಾಗಿದ್ದ ಈ ವಂಶದ ಮಲ್ಲನಾಯಕನು ದಾನಿಯಾಗಿ ಈ ಶಾಸನದಲ್ಲಿ ಕಾಣಿಸಿಕೊಂಡಿದ್ದಾನೆ. ಶೆಂಗೇಣಿ ವಂಶದ ಶಂಭುವರಾಯರು ಅನಂತರ ಕಾಲದಲ್ಲಿ ಪಡೈವೀಡುರಾಜ್ಯವೆಂದು ಹೆಸರು ಪಡೆದ ಉತ್ತರ ಆರ್ಕಾಟ್ ಮತ್ತು ಚಂಗಲ್ಪೇಟೆ ಜಿಲ್ಲೆಗಳ ಸುತ್ತಮುತ್ತಲ ಪ್ರದೇಶದಲ್ಲಿದ್ದ ಚೋಳರ ಪ್ರಸಿದ್ಧ ಸಾಮಂತರು. ಈ ಶಂಭುವರಾಯರು ಅನಂತರ ಚೋಳರಮೇಲೆ ತಿರುಗಿಬಿದ್ದರು. ಇವರನ್ನು ಇಮ್ಮಡಿ ನರಸಿಂಹನು ಅಡಗಿಸಿದನೆಂದು ಹೇಳಲಾಗಿದೆ. ಪ್ರಕೃತಿ ಶಾಸನದ ಶಂಭುವರಾಯವಂಶವು ಆ ವಂಶಕ್ಕೆ ಸಂಬಂಧಪಟ್ಟದೆಯೇ ಎಂದು ಹೇಳಲು ಸಾಧ್ಯವಿಲ್ಲ. ಅಲ್ಲಿ ಬರುವ ಹೆಸರುಗಳನ್ನು ನೋಡಿದಲ್ಲಿ ಹಾಗೆ ಯಾವ ಸಂಬಂಧವೂ ಇದ್ದಂತೆ ತೋರುವುದಿಲ್ಲ. ಬಹುಶಃ ಅವರು ಅದೇ ವಂಶದ ಬೇರೆ ಶಾಖೆಯವರಾಗಿರಬಹುದು.[೯]

ಅಂತರವಳ್ಳಿಯ ತಮಿಳು ಶಾಸನದಲ್ಲಿ (ಮವ. ೩೪) ವೀರಬಲ್ಲಾಳನಿಗೆ ಜಗದೇಕಮಲ್ಲನೆಂಬ ಬಿರುದಿದೆ. ಮಹಾಪ್ರಧಾನಿ ಚಂದ್ರಮೂಲಿಯಣ್ಣನು (ಚಂದ್ರಮೌಳಿ) ತೆಂಪಾಗ್ಯೆ

[illegible]

ಅನದಾನಪಳ್ಳಿಯ ಕೈಲಾಸಸ್ಥಾನದಲ್ಲಿ ಚಂದ್ರಮೌಳೀಶ್ವರನ ಗುಡಿಯನ್ನು ಕಟ್ಟಿಸಿದುದಾಗಿ ಅದು ತಿಳಿಸುತ್ತದೆ. ಕೆಳಲೆನಾಡಿನಲ್ಲಿದ್ದ ಈ ಹಳ್ಳಿಯನ್ನು ಹಿಂದೆ ಪೆರಿಯ ವಿಟ್ಟದೇವನು ಅಗ್ರಹಾರವನ್ನಾಗಿ ಮಾಡಿ ಚಂದ್ರಮೂಲಿಯಣ್ಣನ ಚಿಕ್ಕಪ್ಪ ಪಟ್ಟಯಾಂಗನಿಗೆ ದತ್ತಿಬಿಟ್ಟದ್ದನು. ಚಂದ್ರಮೂಲಿಯಣ್ಣನನ್ನು ಶಾಸನವು ಪೆರಿಯ ಮನ್ನೈಪೆರ್ಗ್ಗಡಿ ಎಂದು ವರ್ಣಿಸಿದೆ. ಹಿರಿಯಮನೆ ಹೆಗ್ಗಡೆ ಎಂಬುದರ ತಮಿಳು ರೂಪಾಂತರವಿದಾಗಿದ್ದು, ಅವನು ಅರಮನೆಯಲ್ಲಿ ಮುಖ್ಯಾಧಿಕಾರಿಯಾಗಿ ರಾಜಕಾರ್ಯವನ್ನು ನಿರ್ವಹಿಸುತ್ತಿದ್ದನೆಂಬುದನ್ನು ಸೂಚಿಸುವಂತೆ ತೋರುತ್ತದೆ. ಮೂಲದತ್ತಿಯನ್ನು ಬಿಟ್ಟವನು ಪೆರಿಯ ವಿಟ್ಟದೇವ ಎಂದರೆ ವಿಷ್ಣುವರ್ಧನ. ಆದ್ದರಿಂದ ತೇದಿಯಿಲ್ಲದ ಈ ಶಾಸನವನ್ನು ಇಮ್ಮಡಿ ಬಲ್ಲಾಳನ ಕಾಲಕ್ಕೆ ಒಯ್ಯಬಹುದು.

ಬಸರಾಳು ಶಾಸನದಲ್ಲಿ ಕಂಡುಬರುವ ಈ ಕೆಳಗಿನ ಪದ್ಯದ ಅರ್ಥಪ್ರತಿಪಾದನೆ ಮಹತ್ತ್ವದ್ದಾಗಿದೆ. ಈ ಶಾಸನದ ಕಾಲ ಸೋಮೇಶ್ವರನ ಆಳ್ವಿಕೆಯ ಕಾಲದ ಹೇಮಳಂಬಿಸಂವತ್ಸರದ ಕಾರ್ತ್ತಿಕ ಶು. ೧೨ ಗುರುವಾರ. ಇದು ಕ್ರಿ.ಶ. ೧೨೩೭, ಆಕ್ಟೋಬರ್ ೨೨ಕ್ಕೆ ಸರಿ ಹೊಂದುತ್ತದೆ. ರೈಸ್ ಮಾಡಿದ ಈ ಪದ್ಯದ ಭಾಷಾಂತರ ಮತ್ತು ವಿವರಣೆಯನ್ನಾಧರಿಸಿ ವಿದ್ವಾಂಸರು ಸೂಕ್ತಿಸುಧಾರ್ಣವವು ರಚಿತವಾದುದು ಕ್ರಿ.ಶ. ೧೨೪೫ ಎಂದು ವಾದಿಸಿದ್ದಾರೆ; ಅದಕ್ಕಿಂತ ಈಚಿನ ಕಾಲ ಸೂಚಿಸಿರುವುದೂ ಉಂಟು. ಪದ್ಯ ಹೀಗೆದೆ:

ಮುನ್ನಂ ರೂಢಿಯ ಕೃಷ್ಣಕಂಧರನುಮಂ ಮಾರ್ಕ್ಕೊಂಡು ಚೋಳೋರ್ವಿಯಂ
ನಿನ್ನಂತಾರೊಳಪೊಕ್ಕು ಸಾಧಿಸಿದರಾಪ್ಪಾಂಡ್ಯೇಶನಂ ಶೌರ್ಯ್ಯದಿಂ
ಬೆನ್ನಂ ಪತ್ತಿಸೆ ಸೋವಿದೇವಘಟೆಯಂ ಕೈಕೊಂಡರಾಚ್ಚೋಳನಂ
ತನ್ನಾಮ್ನಾಯದ ರಾಜ್ಯದೊಳ್ನಿ ರವಸಿದಸ್ಸೋಮಾನ್ವಯೋರ್ವ್ವೀಶ್ವರರ್

ರೈಸ್ ಅವರು ಈ ಅಭಿಪ್ರಾಯಬರುವಂತೆ ಭಾಷಾಂತರ ಮಾಡಿದ್ದಾರೆ. ಮೊದಲು ಪ್ರಸಿದ್ಧನಾದ ಕೃಷ್ಣಕಂಧರನನ್ನೆದುರಿಸಿ ಯಾರು ನಿನ್ನಂತೆ ಚೋಳ ರಾಜ್ಯದ ಒಳಹೊಕ್ಕವರು? ಯಾರು ಪಾಂಡ್ಯೇಶನನ್ನು ಗೆದ್ದವರು? ಸೋವಿದೇವ, ಯಾರು ಅವನನ್ನು ಬೆನ್ನುಹತ್ತಿ ಅವನ ಆನೆಗಳನ್ನು ಹಿಡಿದವರು? ಸೋಮವಂಶದ ರಾಜರಲ್ಲಿ ಯಾರು ಚೋಳನನ್ನು ಅವನ ಪಂರಂಪರಾಗತವಾದ ರಾಜ್ಯದಲ್ಲಿ ಸ್ಥಾಪಿಸಿದವರು?

ದಕ್ಷಿಣದ ರಾಜಕೀಯದಲ್ಲಿ ಕೈಹಾಕಿ ಚೋಳರಾಜನನ್ನು ಅವನ ಸಿಂಹಾಸನದ ಮೇಲೆ ಪುನಃ ಸ್ಥಾಪಿಸಿದ ಹೊಯ್ಸಳ ಸೋಮೇಶ್ವರನಿಗೆ ಸೇರಿದುದು ಈ ಶಾಸನ. ಈ ಶಾಸನವನ್ನು ವಿವರಿಸುತ್ತ

ಸೋಮೇಶ್ವರನು ಮೊದಲು ಪ್ರಸಿದ್ಧನಾದ ಕೃಷ್ಣ ಕಂಧರನ ಮೇಲೆ ಯುದ್ಧಮಾಡಿ ಅನಂತರ ಚೋಳ ರಾಜ್ಯದೊಳಕ್ಕೆ ನುಗ್ಗಿದನು. ಈ ಕೃಷ್ಣಕಂಧರನು ಅದೇ ಹೆಸರಿನ ದೇವಗಿರಿಯ ಯಾದವರ ದೊರೆ ಎಂಬುದರಲ್ಲಿ ಸಂಶಯವಿಲ್ಲ ಎಂದು ರೈಸ್ ಹೇಳಿದ್ದಾರೆ.

ಈ ಭಾಷಾಂತರವನ್ನೂ ಮತ್ತು ಕೃಷ್ಣ ಕಂಧರನನ್ನು ಸೇವುಣರ ದೊರೆ ಕನ್ನರ (ಕ್ರಿ.ಶ. ೧೨೪೭-೬೧)ನೆಂದು ಗುರುತಿಸಿರುವುದನ್ನು ಮುಂದೆ ಬಂದ ಎಲ್ಲಾ ವಿದ್ವಾಂಸರೂ ಒಪ್ಪಿದ್ದಾರೆ. ಆದರೆ ಇದರಿಂದ ಕೆಲವು ಸಮಸ್ಯೆಗಳು ಹುಟ್ಟಿಕೊಂಡಿವೆ. ಪ್ರಕೃತ ಶಾಸನದ ಕಾಲ ಕ್ರಿ.ಶ. ೧೨೩೭; ಈ ಕಾಲಕ್ಕಾಗಲೇ ಹೊಯ್ಸಳದೊರೆ ಸೇವುಣನನ್ನೆದುರಿಸಿದ್ದಿರಬೇಕು. ಆದರೆ ಆಗ ಕನ್ನರನು ಆಳುತ್ತಲೇ ಇರಲಿಲ್ಲ. ಇದು ಕನ್ನರನು ಯುವರಾಜನಾಗಿದ್ದಾಗಲೇ ತನ್ನ ತಾತ ಇಮ್ಮಡಿ ಸಿಂಘಣನು ನಡೆಸಿದ ಯುದ್ಧಗಳಲ್ಲಿ ಪಾಲ್ಗೊಂಡಿದ್ದನೆಂಬ ಊಹೆಗೆ ಎಡೆಮಾಡಿತು. ಸೂಕ್ತಿಸುಧಾರ್ಣವದಲ್ಲಿ ಮತ್ತೊಂದು ಪದ್ಯವಿದ್ದು ಅದರಲ್ಲಿ ಕನ್ನರನ ತಮ್ಮನೂ ಮತ್ತು ಉತ್ತರಾಧಿಕಾರಿಯೂ ಆದ ಮಹದೇವನು ಯುದ್ಧವಲ್ಲಿ ಸೋತುದನ್ನು ಸೂಚಿಸುತ್ತದೆ ಎನ್ನಲಾಗಿದೆ. ಎ.ವೆಂಕಟಸುಬ್ಬಯ್ಯನವರು ಈ ಕಾರಣದಿಂದ ಈ ಕೃತಿಯ ಕಾಲವನ್ನು ಕ್ರಿ.ಶ.೧೨೬೩ಕ್ಕೆ ಒಯ್ದರು; ಆರ್. ನರಸಿಂಹಾಚಾರ್ಯರು ಮತ್ತು ಎಂ.ಹೆಚ್.ಕೃಷ್ಣ ಅವರು ಅದನ್ನು ಕ್ರಮವಾಗಿ ಕ್ರಿ.ಶ.೧೨೪೫ ಅಥವಾ ೧೨೪೦ರಲ್ಲಿ ರಚಿತವಾಯಿತೆಂದರು. ಕವಿ ಮಲ್ಲಿಕಾರ್ಜುನನೂ ಶಾಸನ ರಚಿಸಿದ ಚಿದಾನಂದನೂ ಒಬ್ಬನೇ ಎನ್ನುವುದರಲ್ಲಿ ಮಾತ್ರ ಅಭಿಪ್ರಾಯ ಭೇದವಿಲ್ಲ.

ಹೀಗೆ ಈ ಕೃತಿಯ ಕಾಲವನ್ನು ನಿರ್ಧರಿಸುವಲ್ಲಿ ಶಾಸನದಲ್ಲಿನ ಪದ್ಯವನ್ನೇ ಆಧಾರವಾಗಿ ಹೊಂದಲಾಗಿದೆ ಮತ್ತು ಈ ಪದ್ಯವನ್ನು ಕ್ರಿ.ಶ.೧೨೩೭ರ ಕಾಲದನಂತರ ಈ ಕೃತಿಯಲ್ಲಿ ಸೇರಿಸಲಾಗಿದೆ ಎಂದು ಭಾವಿಸಲಾಗಿದೆ. ಆದರೆ ಪದ್ಯದಲ್ಲಿನ ಆ ಭಾಗದ ಭಾಷಾಂತರವೇ ತಪ್ಪಾಗಿದೆ. 'ಮುನ್ನಂ' ಎಂಬುದನ್ನು 'ಮೊದಲು' ಎಂದೂ 'ಮಾರ್ಕೊಂಡು' ಎಂಬುದನ್ನು ಎದುರಿಸಿ ಎಂದೂ ಅರ್ಥಮಾಡಲಾಗಿದೆ. 'ಮುನ್ನಂ' ಎಂಬುದನ್ನು 'ಗತಕಾಲದಲ್ಲಿ' ಎಂದೂ 'ಮಾರ್ಕೊಂಡು' ಎಂಬುದನ್ನು **'ಹುರುಡಿಸಿ'** ಎಂದೂ ಅರ್ಥೈಸುವುದು ಸೂಕ್ತವೆಂದು ತೋರುತ್ತದೆ. ಈ ಪದ್ಯವು ಪ್ರಾಸಂಗಿಕವಾಗಿ ಇತಿಹಾಸದಲ್ಲಿ ನಡೆದುಹೋದ ಮುಖ್ಯವಾದ ಒಂದು ಪೂರ್ವಘಟನೆಯನ್ನು ಸೂಚಿಸುತ್ತದೆ. ಕರ್ನಾಟಕದ ಹಿಂದಿನ ರಾಜರಲ್ಲಿ ಚೋಳರೊಡನೆ ಯುದ್ಧವಾಡಿ ಅವರ ರಾಜ್ಯದೊಳಗೆ ನುಗ್ಗಿದ್ದವನು ರಾಷ್ಟ್ರಕೂಟರ ಮುಮ್ಮಡಿ ಕೃಷ್ಣ. ಈಗ ಹೀಗೆ ಇನ್ನೂ ಹೆಚ್ಚುದೂರ ಒಳನುಗ್ಗಿ ಚೋಳ ಮತ್ತು ಪಾಂಡ್ಯ ರಾಜರಿಬ್ಬರನ್ನೂ ಪುನಃಸ್ಥಾಪಿಸಿದ ಹೆಗ್ಗಳಿಕೆಯನ್ನು ಪಡೆದುದು ಸೋಮೇಶ್ವರನ ಸರದಿ. ಇದೇ ಅಭಿಪ್ರಾಯವೇ ಪದ್ಯದ ಮೊದಲ ಭಾಗದಲ್ಲಿ ಸೂಚಿತವಾಗಿದ್ದು ಅದನ್ನು ಹೇಗೆ ಭಾಷಾಂತರಿಸಲಾಗಿದೆ:

ಹಿಂದಿನ ಕಾಲದಲ್ಲಿದ್ದ ಪ್ರಸಿದ್ಧವಾದ ಕೃಷ್ಣಕಂಧರನ ಮೇಲಿನ ಹುರುಡಿನಿಂದ ನಿನ್ನಂತೆ ಯಾರು ಒಳನುಗ್ಗಿ ಚೋಳರ ಪ್ರಾಂತರನ್ನು ಸ್ವಾಧೀನಪಡಿಸಿಕೊಂಡರು ಮತ್ತು ಪರಾಕ್ರಮದಿಂದ ಬೆನ್ನಟ್ಟಿ ಪಾಂಡ್ಯದೊರೆಯನ್ನು ಸೋಲಿಸಿದರು?

ಇದುವರೆಗೆ ವಿಮರ್ಶಿಸಿದ ಪದ್ಯವೇ ಭೀಮನಹಳ್ಳಿಯಲ್ಲಿ ದೊರೆತ ಕ್ರಿ.ಶ.೧೨೩೦ರ ಶಾಸನದಲ್ಲಿಯೂ (ನಾಮಂ. ೧೭೩) ದೊರೆಯುತ್ತದೆಂಬುದನ್ನು ಗಮನಿಸಬೇಕು.

ಈ ಶಾಸನದಲ್ಲಿ ಸೋಮೇಶ್ವರನು ದೋರಸಮುದ್ರದಿಂದ ಆಳುತ್ತಿದ್ದನೆಂದು ಸ್ಪಷ್ಟವಾಗಿ ಹೇಳಿದೆ. ಮೇಲೆ ನೋಡಿದ ಇಮ್ಮಡಿನರಸಿಂಹನ ಬಸರಾಳು ಶಾಸನವೇ ಇದಕ್ಕಿಂತ ೪ವರ್ಷ ಈಚಿನದಾಗಿದ್ದು ಕ್ರಿ.ಶ.೧೨೩೪ಕ್ಕೆ ಸೇರಿದ್ದಾಗಿದೆ. ಆದರೆ ನಾವು ಆಗಲೇ ಗಮನಿಸಿರುವಂತೆ ಕ್ರಿ.ಶ.೧೨೨೮ರಷ್ಟು ಮುಂಚೆಯೇ ಸೋಮೇಶ್ವರನು ಯುವರಾಜನಾಗಿಯೋ ಅಥವಾ ತಂದೆಯ ಜೊತೆರಾಜನಾಗಿಯೋ ಕಣ್ಣಾನೂರಿನ ರಾಜಧಾನಿಯಿಂದ ಆಳುತ್ತಿದ್ದನು.

ಅದೇ ಊರಿನ ಕ್ರಿ.ಶ.೧೨೮೪ನೆಯ ವರ್ಷದ ನಾಮಂ ೭೩ನೆಯ ಶಾಸನದಲ್ಲಿಯೂ ಮೇಲೆ ಉಕ್ತನಾದ ಪ್ರತಿಗ್ರಹಿಯೇ ಉಲ್ಲೇಖಿತನಾಗಿದ್ದಾನೆ. ಉದ್ಭವನರಸಿಂಹಪುರವಾದ ಬೆಳ್ಳೂರಿನ ಪ್ರಸನ್ನ ಮಾಧವ, ರಾಮಕೃಷ್ಣ ಮತ್ತು ವರದಿ ಅಲ್ಲಾಳನಾಥ ದೇವಾಲಯಗಳ ಅಧಿಕಾರಿಯಾದ ಈತ ದೇವರುಗಳ ಪೂಜೆ ಪುನಸ್ಕಾರಗಳಿಗಾಗಿ ಮೂರು ಹಳ್ಳಿಗಳನ್ನು ಅರಸನಿಂದ ತಾಮ್ರಶಾಸನದ ಮೂಲಕ ದತ್ತಿ ಪಡೆದನು. ದೇವಾಲಯದ ಒಡೆತನವನ್ನು ಈತನಿಗೇ ವಹಿಸಲಾಗಿತ್ತು. ನಂತರ ಈತನೇ ಆ ದತ್ತಿಯನ್ನು ೯೭ ಮಹಾಜನರಿಗೆ ಹಂಚಲು ಅವರು ಆ ಹಳ್ಳಿಗಳ ಉತ್ಪನ್ನವನ್ನು ೭ ವೃತ್ತಿಗಳನ್ನಾಗಿ ವಿಭಾಗಿಸಿ ಒಂದು ಭಾಗವನ್ನು ಪೆರುಮಾಳ ದೇವನಿಗೇ ಪ್ರೀತಿಗೊಡಗೆಯಾಗಿ ಕೊಟ್ಟುದನ್ನು ನಿರೂಪಿಸಿದೆ. ಆ ಗ್ರಾಮಗಳಿಗೆ ವಿವಿಧ ಸುಂಕಗಳನ್ನು ಮಾನ್ಯಮಾಡಿದ್ದು ಅವುಗಳಲ್ಲಿ ಆನೆಯಸೇಸೆ, ಕುದುರೆಯಸೇಸೆ, ಕಟಕಸೇಸೆ ಮತ್ತು ದಂಡಿನಭ್ಯಾಗತ ಮುಂತಾದ ತೆರಿಗೆಗಳು ಗಮನಾರ್ಹವಾಗಿವೆ. ಈ ಪದಗಳು ಚತುರಂಗಬಲಗಳಾದ ಆನೆ, ಕುದುರೆ ಮತ್ತು ಪದಾತಿಗಳ ರಕ್ಷಣೆಗಾಗಿ ವಿಧಿಸುತ್ತಿದ್ದ ತೆರಿಗೆಗಳನ್ನು ನಿರ್ದೇಶಿಸುತ್ತವೆ. ರಾಜಧಾನಿಯಲ್ಲಿರುತ್ತಿದ್ದ ಬಲಗಳಿಗಾಗಿ ಈ ತೆರಿಗೆಗಳನ್ನು ವಿಧಿಸುತ್ತಿದ್ದರೇ? ಎಂಬುದನ್ನು ಊಹಿಸುವುದು ಕಠಿಣ. ಅಧಿಕಾರಿಗಳೂ ಸಾಮಂತರುಗಳು ತಮ್ಮದೇ ಆದ ಸೈನ್ಯವನ್ನು ಸಜ್ಜುಗೊಳಿಸಿ ಯುದ್ಧದ ಸಮಯದಲ್ಲಿ ಅರಸನ ನೆರವಿಗೆ ಕಳುಹಿಸುತ್ತಿದ್ದರೆಂಬ ವಿಷಯ ನಮಗೆ ತಿಳಿದಿದೆ. ಅದುದರಿಂದ ಕೆಲವು ಪ್ರಮುಖ ಸ್ಥಳಗಳಲ್ಲೂ ಇಂತಹ ಸೈನಿಕ ವಿಭಾಗವಿರುತ್ತಿತ್ತೆಂದು ಊಹಿಸಬಹುದಾಗಿದ್ದು, ಬೆಳ್ಳೂರಿನಲ್ಲೂ ಅಂತಹ ಒಂದು ವಿಭಾಗವಿದ್ದು ಅದರ ನಿರ್ವಹಣೆಗಾಗಿ ತೆರಿಗೆಗಳನ್ನು ವಿಧಿಸುತ್ತಿದ್ದರೆನ್ನಬಹುದು.

[illegible]

ದಂಡಿನಭ್ಯಾಗತೆ ಎಂಬುದು ಸಂಚರಿಸುತ್ತಿರುವ ಸೈನ್ಯಬಲ ಒಂದು ಕಡೆ ನಿಂತಾಗ ಅದರ ಊಟೋಪಚಾರಗಳ ವೆಚ್ಚಕ್ಕಾಗಿ ಪ್ರಜೆಗಳಿಂದ ವಸೂಲು ಮಾಡಲಾಗುತ್ತಿದ್ದ ಕರ.

ಕ್ರಿ.ಶ. ೧೨೭೬ರ ಹೊಸಬೂದನೂರು ಶಾಸನವು (ಮಂ. ೫೬) ಸ್ಥಾನಿಕ ನಂಬಿಪಿಳ್ಳೆಯ ಮಗ ಪುರುಷೋತ್ತಮದೇವ ಮತ್ತು ಅವನ ಅಣ್ಣ ಅದೂರನ ಮಗ ನಂಬಿಪಿಳ್ಳೆಯೂ ಉದ್ಧವಸರ್ವಜ್ಞ ಪದ್ಮನಾಭಪುರದ ಮಹಾಜನರಿಗೆ ಕೇಶವದೇವರ ದೇವದಾನವಾಗಿದ್ದ ಒಂದು ಊರನ್ನು ಕುಡಿನಿಂಕಾದೇವದಾನವಾಗಿ ಕೊಟ್ಟಂತೆ ತಿಳಿಸುತ್ತದೆ. ಕುಡಿನಿಂಕಾದೇವದಾನ ಎನ್ನುವುದು ತಮಿಳು ಪದವಾಗಿದ್ದು ಹೀಗೆಂದರೆ ಈಗಾಗಲೇ ಭೂಮಿಯನ್ನು ಉಳುತ್ತಿದ್ದ ಒಕ್ಕಲುಗಳನ್ನು ಹೊರದೂಡದೆ ದೇವರಿಗೆ ದತ್ತಿ ಬಿಟ್ಟ ಭೂಮಿ. ಆದ್ದರಿಂದ ಯಾದವನಾರಾಯಣಪುರವಾದ ಗುತ್ತಲಿನ ಕೇಶವದೇವರ ದೇವಾಲಯದ ಸ್ಥಾನಿಕರಾಗಿದ್ದ ಮತ್ತು ದತ್ತಿಬಿಟ್ಟ ಭೂಮಿಯ ಸ್ವಾಮ್ಯವನ್ನು ವಾಸ್ತವವಾಗಿ ಹೊಂದಿದ್ದ ದಾತೃಗಳು ಅವುಗಳನ್ನು ಆ ದೇವಾಲಯಕ್ಕೋಸ್ಕರ ಮಹಾಜನಗಳಿಗೆ ವಹಿಸಿಕೊಟ್ಟರೆಂದು ತೋರುತ್ತದೆ. ಅಲ್ಲಿ ಮಹಾಜನಗಳು ಕಸಿ ಕಟ್ಟಿ ತೋಟಗಳನ್ನು ಬೆಳೆಸಲು ಅವಕಾಶವಾಯಿತು. ಅದೇ ದಾನಿಯು ಕೆಲ ಭೂಮಿಯನ್ನು ಕೊಂಡು ದೇವರ ಪೂಜೆ ಅಮೃತಪಡಿಗಳಿಗಾಗಿ ಮಹಾಜನಗಳಿಗೆ ವಹಿಸಿಕೊಟ್ಟನು. ಈ ವ್ಯವಹಾರದಲ್ಲಿ ಕೇವಲ ಭೂಮಿಯ ಒಡೆತನದಲ್ಲಿ ಬದಲಾವಣೆಯಾಯಿತೇ ಹೊರತು, ಉಳುಮೆಯಲ್ಲಿ ಅಂದರೆ ಉಳುತ್ತಿದ್ದ ಒಕ್ಕಲುಗಳಲ್ಲಿ ಯಾವ ಬದಲಾವಣೆಯೂ ಆಗಲಿಲ್ಲ. ಆದರೆ ಈ ಏರ್ಪಾಟಿನ ಪರಿಣಾಮವಾಗಿ ಅವರಿಗೆ ಹೆಚ್ಚು ಅನುಕೂಲವೇ ಆಯಿತು. ದೇವಸ್ಥಾನವೂ ಹಿಡುವಳಿಯ ಪ್ರಯೋಜನವನ್ನು ಪಡೆಯುವಂತಾಯಿತು.

ವೈದ್ಯನಾಥಪುರದ ಕ್ರಿ.ಶ. ೧೨೭೯ರ ತಮಿಳು ಶಾಸನವು (ಮ. ೭೪) ನಾರಸಿಂಹಚತುರ್ವೇದಿಮಂಗಲವಾದ ಮರುದೂರಿನ ವೈದ್ಯನಾಥದೇವರ ನಂದಾದೀಪಕ್ಕಾಗಿ ದೇವದಾನದಲ್ಲಿ 'ನಿಮಂದ ಕಾಣಕ್ಕೈ' ಆಗಿ ದತ್ತಿ ಬಿಟ್ಟುದನ್ನು ತಿಳಿಸುತ್ತದೆ. ನಿಮಂದ ಅಥವಾ ನಿಬಂಧ ಎಂದರೆ ದೇವಾಲಯದ ಕೆಲಸಕಾರ್ಯಗಳು ನಿಗಧಿಗೊಳಿಸಿದಂತೆ ನಡೆಯುವ ಏರ್ಪಾಡು. ಇಲ್ಲಿ ದೇವಾಲಯಕ್ಕೆ ಬಿಟ್ಟ ದೇವದಾನದ ಸ್ವಲ್ಪಭಾಗವನ್ನು ಒಂದು ಗೊತ್ತಾದ ಉದ್ದೇಶಕ್ಕಾಗಿ ಎಂದರೆ ನಂದಾದೀಪವನ್ನು ಉರಿಸುವುದಕ್ಕಾಗಿ ಕಾಣಿಕೆಯಾಗಿ ತೆಗೆದಿಡಲಾಗಿದೆ. ಈ ಏರ್ಪಾಡು ಮಾಡಿದವನು ರಾಜನ ಶ್ರೀಕರಣನಾಗಿದ್ದ ಸರ್ವಾಧಿಕಾರಿ ಮಹಾಪಸಾಯಿತ ತಿರುವಿಂದಳೂರಿನ ಪ್ರಯಾಗೈಪ್ಪೆರುಮಾಳ್ ದಂಡನಾಯಕ. ಆತನು ತಮಿಳು ಪ್ರಾಂತದಿಂದ ಬಂದ ಅಧಿಕಾರಿ ಎಂಬುದು ಸ್ಪಷ್ಟ.

ನೀಲಕಂಠನಹಳ್ಳಿಯ ಕ್ರಿ.ಶ.೧೨೮೬ರ ಇದೇ ರಾಜನ ಆಳ್ವಿಕೆಗೆ ಸೇರಿದ ತಮಿಳು ಶಾಸನದಲ್ಲಿ (ಮ.೭೬) ಇನ್ನೊಂದು ತಮಿಳು ಪದವಿದೆ. ಈ ಶಾಸನವು ಮರುದೂರಿನ ಅಶೇಷಮಹಾಜನಗಳು ಮದ್ದಿಕ್ಕಿರೈ ಮೊದಲಾದ ಹಲವು ಹಳ್ಳಿಗಳ ವೃತ್ತಿಗಳಿಗೆ ಸಂಬಂಧಿಸಿದಂತೆ ಅವುಗಳ ತೆರಿಗೆಗಳನ್ನು ಪರಿಹರಿಸಿ ನಡೆಸಿದ ವ್ಯವಹಾರವನ್ನು ಕುರಿತದ್ದಾಗಿದೆ. ಇಲ್ಲಿ ಇರೈಇರುಚ್ಚಿ ಎಂಬ ಪದವನ್ನುಪಯೋಗಿಸಿದೆ. ಇರೈ ಎಂದರೆ ಸರ್ಕಾರಕ್ಕೆ ಕೊಡಬೇಕಾದ ಕಂದಾಯ, ತೆರಿಗೆ, ಇಲ್ಲಿ ಬರುವ ಇರೈಇರುಚ್ಚಿ ಎಂಬ ಪದದ ಅರ್ಥ 'ತೆರಿಗೆಗಳನ್ನು ಪರಿಹರಿಸಿ' ಎಂದು ಇದು ಇರೈಯಿಳಿಚ್ಚು (ಇರೈಇರುತ್ತು) ಎಂಬುದರ ತಪ್ಪಾದ ರೂಪ.

ಮುಮ್ಮಡಿ ಬಲ್ಲಾಳನ ಸುಮಾರು ೧೨ ಶಾಸನಗಳು ಮಾತ್ರ ಇದ್ದು ಅವುಗಳಲ್ಲಿ ಕೆಲವು ಗಮನಿಸಬೇಕಾದುವು. ಕ್ರಿ.ಶ.೧೨೯೭ರ ಸುಜ್ಜಲೂರು ಶಾಸನದಲ್ಲಿ (ಮವ. ೧೩೬) ಸರ್ವಜ್ಞ ಪ್ರಸನ್ನ ಚನ್ನಕೇಶವಪುರವಾದ ಆಲುಗೋಡಿನ ಮಹಾಜನರು ನಾಲ್ವರು ಸೆಟ್ಟಿಗಳಿಗೆ ಸೆಟ್ಟಿಗುತ್ತಗೆಯಾಗಿ ಊರೊಂದರಲ್ಲಿ ಭೂಮಿಯನ್ನು ಬಿಟ್ಟಿದ್ದಾರೆ. ಆದರೆ ಆ ಸಂದರ್ಭದಲ್ಲಿ ಹಾಕಿರುವ ಕೆಲವು ಷರತ್ತುಗಳು ಸ್ಪಷ್ಟವಾಗಿಲ್ಲ. ಹೀಗೆ ಕೊಟ್ಟಿರುವ ಭೂಮಿಯು ಕೆರೆಯ ಕೆಳಗೆ ಇರುವುದರಿಮದ ಸೆಟಕಾರನು ಭೂಮಿಗೆ ನೀರು ಸರಿಯಾಗಿ ಹರಿಯುವಂತೆ ಸ್ವತಃ ನೋಡಕೊಳ್ಳಬೇಕಾಗಿತ್ತು. ಭೂಮಿ ಪಡೆದವರು ಮಹಾಜನಗಳಿಗೆ ಬೆಳೆಯಲ್ಲಿ ಸರಿಪಾಲು ಕೊಡುವುದಲ್ಲದೆ ೩ ಹಣವನ್ನು ಕಟ್ಟುಗುತ್ತಗೆಯಾಗಿ ತೆರಬೇಕಾಗಿತ್ತು. ಆಸ್ತಿಯ ಹಕ್ಕುದಾರಿಯ ಬಗೆಗೂ ಹಾದರಕ್ಕೆ ಕೊಡಬೇಕಾದ ಶಿಕ್ಷೆಯ ಬಗೆಗೂ ವಿವರಗಳಿವೆ. ಆದರೆ ಅದು ಸ್ಪಷ್ಟವಾಗಿಲ್ಲ.

ಕ್ರಿ.ಶ.೧೩೧೪ರ ಮ. ೧೧೧ನೇ ತಮಿಳುಶಾಸನವನ್ನು ಪಗುದಿಶಾಸನವೊಂದು ವರ್ಣಿಸಿದೆ. ತಮಿಳಿನಲ್ಲಿ ಪಗುದಿ ಎಂದರೆ ಸಮಭಾಗ ಎಂದು. ಸ್ಥಾನಾಪತಿಗಳು ಮತ್ತು ಇತರರು ರಾಜರಾಜಪುರವಾದ ತಳೈಕ್ಕಾಡಿನ ನಿವಾಸಿಗಳಿಗೆ ಗೃಹನಿವೇಶನಗಳು, ತೋಟ, ಮರಗಳು ಮುಂತಾದುವುಗಳು ಹಂಚಿದುದರ ವಿವರಣೆ ಈ ಶಾಸನದಲ್ಲಿದೆ. ಆದರೆ ಶಾಸನವು ತೃಟಿತವಾಗಿರುವುದರಿಂದ ವಿವರಗಳು ಸ್ಪಷ್ಟವಾಗಿಲ್ಲ.

ವೀರನರಸಿಂಹನ ಆಳ್ವಿಕೆಗೆ ಸೇರಿದ ಕ್ರಿ.ಶ.೧೩೧೮ರ ಕಲ್ಲುಣಿ ಶಾಸನವು (ಮವ ೧೪೪) ಕಲ್ಲುಣಿಯ ನಾಗೇಶ್ವರದೇವರಿಗೆ ನಾಡೆದೇವರೇ ಮೊದಲಾದ ತೆರಿಗೆಗಳ ಉತ್ಪನ್ನವನ್ನು ದತ್ತಿಯಾಗಿ ಬಿಟ್ಟುದನ್ನು ತಿಳಿಸುತ್ತದೆ. ಆ ಕಾಲದಲ್ಲಿ ಮುಮ್ಮಡಿ ಬಲ್ಲಾಳನು ಆಳುತ್ತಿದ್ದುದು ನಮಗೆ ಗೊತ್ತು. ಶಾಸನದಲ್ಲಿ ಕೊಟ್ಟಿರುವ ಶಕವರ್ಷವು ೧೧೭೭ಕ್ಕೆ ತಪ್ಪಾಗಿ ಬಂದಿದೆ ಎಂದಿಟ್ಟುಕೊಂಡರೆ ಆಗ ಅದು ಮುಮ್ಮಡಿ ನರಸಿಂಹನ ಕಾಲಕ್ಕೆ ಸೇರುತ್ತದೆ ಮತ್ತು ತೇದಿಯ ವಿವರಗಳು ಕ್ರಿ.ಶ.೧೨೫೮, ಮಾರ್ಚ

೧೬ ಶನಿವಾರಕ್ಕೆ ಹೊಂದುತ್ತವೆ. ಮಹಾಪ್ರಧಾನ ಹರಿಹರದಂಡನಾಯಕ ಮತ್ತು ಬಡಗರೆನಾಡಿನ ಪ್ರಭುಗೌಡುಗಳು ದಾನಮಾಡಿದ ವಿಷಯ ಇದರಲ್ಲಿದೆ. ಈತನು ಬಹುಶಃ ಮೇಲೆ ನೋಡಿದ ಬಸರಾಳು ಶಾಸನಗಳಲ್ಲಿ ಬಹುವಾಗಿ ಹೊಗಳಿರುವ ಇಮ್ಮಡಿ ನರಸಿಂಹನ ದಂಡನಾಯಕ ಹರಿಯಣ್ಣ ಅಥವಾ ಹರಿಹರದಂಡನಾಯಕನಾಗಿರಲಾರ. ಶಾಸನದಲ್ಲಿರುವ ಕಾಲವನ್ನು ಸರಿಯಾಗಿದೆಯೆಂದು ಭಾವಿಸಿ ಶಾಸನವನ್ನು ಮುಮ್ಮಡಿ ಬಲ್ಲಾಳನ ಕಾಲಕ್ಕೆ ಸೇರಿಸಿದ್ದೇವೆ. ಶಾಸನದಲ್ಲಿ ನರಸಿಂಹದೇವನು ಆಳುತ್ತಿದ್ದನೆಂದು ಹೇಳಿರುವುದು ಬಹುಶಃ ತಪ್ಪಾಗಿರಬಹುದು. ಇಂಥದೇ ಒಂದು ದೃಷ್ಟಾಂತ ಮದ್ದೂರಿನ ಒಂದು ಶಾಸನದಲ್ಲೂ (ಮ.೧೫) ಕಂಡುಬರುತ್ತದೆ. ಅದರಲ್ಲಿ ನರಸಿಂಹನು ದೋರಸಮುದ್ರದಿಂದ ಆಳುತ್ತಿದ್ದಂತೆ ತಿಳಿಸಿದೆ. ಆದರೆ ತೇದಿಯ ವಿವರಗಳು ಕ್ರಿ.ಶ.೧೩೨೫, ಮಾರ್ಚಿ ೨೮ ಗುರುವಾರಕ್ಕೆ ಹೊಂದುತ್ತವೆ. ಆಗ ವಾಸ್ತವಿಕವಾಗಿ ಮುಮ್ಮಡಿ ಬಲ್ಲಾಳನು ಆಳುತ್ತಿದ್ದನು.[೧೦]

ಕ್ರಿ.ಶ. ೧೫೫೪-೫೫ನೆಯ ವರ್ಷದ ದಾಸನದೊಡ್ಡಿಯ ಮವ ೮೯ನೆಯ ಶಾಸನವು ಧಬಡಗಾಪಸ ಅಯ್ಯನು ಆಚನಹಳ್ಳಿ ಗ್ರಾಮವನ್ನು ತಲಕಾಡ ಸೀಮೆಯ ಪ್ರಭು ಚಂದ್ರಶೇಖರವೊಡೆಯರಿಗೆ ದತ್ತಿ ನೀಡಿದ ವಿಷಯವನ್ನು ದಾಖಲುಮಾಡಿದೆ. ಈ ತಲಕಾಡುಸೀಮೆಯನ್ನು ಸದಾಶಿವರಾಯ ಮತ್ತು ರಾಮರಾಯರು ಅಯನಮಲುಕವೊಡೆಯರಿಗೆ ಪಾಲಿಸಿದ್ದು ಅವರು ಅದನ್ನು ಮೇಲೆ ಉಲ್ಲೇಖಿಸಿರುವ ದಾನಿಗೆ ದಾನವಾಗಿತ್ತಿದ್ದರು. ಆಯನಮಲುಕ ಎಂಬುದು ಐನ್-ಉಲ್-ಮುಲ್ಕ್ ಎಂಬ ಮುಸ್ಲಿಂ ಹೆಸರು ಅಥವಾ ಬಹುಮಟ್ಟಿಗೆ ಬಿರುದಿನ ಅಶುದ್ಧರೂಪವಾಗಿದ್ದು ಈತ ಅರಸನ ಕೈಕೆಳಗೆ ಅಧಿಕಾರಿಯಾಗಿದ್ದ. ಹೊನ್ನಾವರದ (ನಾಮಂ. ೪೦) ಕ್ರಿ.ಶ.೧೫೬೩ನೆಯ ವರ್ಷದ ಶಾಸನವೂ ಸದಾಶಿವರಾಯನ ಆಳ್ವಿಕೆಗೆ ಸೇರಿದ್ದು, ಇದು ತಮ್ಮೋಜಿಪಂಡಿತನು ಲಕ್ಷ್ಮೀಕಾಂತದೇವಾಲಯದಲ್ಲಿ ನಂದಾದೀಪವನ್ನು ಉರಿಸಲು ಮಾಡಿದ ಭೂದಾನವನ್ನು ಉಲ್ಲೇಖಿಸುತ್ತದೆ. ಈ ದಾನವನ್ನು ಜಗದೇಕರಾಯವೊಡೆಯನ ಕಾರ್ಯಕರ್ತನಾದ ಅಲಲುಮಲುಕವೊಡೆಯನ ಶ್ರೇಯಸ್ಸಿಗಾಗಿ ಮಾಡಲಾಯಿತು. ಅಲಲುಮಲುಕ ವೊಡೆಯ ಎಂಬುದು ಸಹ ಐನ್-ಉಲ್-ಮುಲ್ಕ್ (ಅಥವಾ ಅಲಾ-ಉಲ್-ಮುಲ್ಕ್) ಎಂಬ ಮುಸ್ಲಿಂ ಹೆಸರು ಅಥವಾ ಬಿರುದಿನ ಅಶುದ್ಧ ರೂಪವಾಗಿರಬೇಕು. ಈ ಕಾಲದಲ್ಲಿ ಹಲವಾರು ಮುಸ್ಲಿಮರು ಉನ್ನತ ಅಧಿಕಾರಿಗಳಾಗಿ ನೇಮಿಸಲ್ಪಟ್ಟರೆಂಬುದು ತಿಳಿದಿದೆ. ಈತ ಅಂತಹ ಒಬ್ಬ ಅಧಿಕಾರಿ. ಬಹುಮಟ್ಟಿಗೆ ಈತ ಮೇಲೆ ಹೇಳಿದ ಐನ್-ಉಲ್-ಮುಲ್ಕನೇ ಆಗಿರಬಹುದು. ಪ್ರತಿಗ್ರಹಿಯಾದ ಚಂದ್ರಶೇಖರವೊಡೆಯನ್ನು ತಲಕಾಡುಸೀಮೆಯ ಪ್ರಭುವೆಂದು ವರ್ಣಿಸಲಾಗಿದ್ದರೂ ದಾನಿಯಾದ

ಧಬಡಗಾಪಸ ಅಯ್ಯನು ಪ್ರಭುವಾಗಿದ್ದನು. ಬಹುಶಃ ಚಂದ್ರಶೇಖರವೊಡೆಯನು ಧರ್ಮಾಧಿಕಾರಿಯಾಗಿದ್ದುದರಿಂದ ಆತನನ್ನು ಪ್ರಭುವೆಂದು ವರ್ಣಿಸಲಾಗಿದೆ ಎಂದು ಊಹಿಸುವುದು ಸಮಂಜಸವೆಂದು ತೋರುತ್ತದೆ. ಧಬಡಗಾಪಸ ಅಯ್ಯನೆಂಬ ಹೆಸರೂ ಗಮನಾರ್ಹ.

ಕೌಶಿಕಗೋತ್ರದ ಚನ್ನಮ್ಮೆಯು ೩ ಹೊನ್ನಿನ ಬಡ್ಡಿ ಹಣದಿಂದ ದೊಡ್ಡಅರಸಿನಕೆರೆಯ ಮಾಧವದೇವರ ನಂದಾದೀಪವನ್ನು ನಡೆಸಲು ಪುದುವಟ್ಟಾಗಿ ಕೊಟ್ಟ ವಿಷಯವನ್ನು ಸು. ೧೩–೧೪ನೆಯ ಶತಮಾನದ ಮ. ೧೨೬ನೆಯ ಶಾಸನ ನಿರೂಪಿಸಿದೆ. ಈಕೆಯು ಪುಂಗನೂರಿಗೆ ಸೇರಿದವಳೆಂದು ಹೇಳಲಾಗಿದ್ದು ಹೆಸರಿನ ಆಧಾರದಿಂದ ಈ ಊರನ್ನು ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯಲ್ಲಿರುವ ಈಗಿನ ಪುಂಗನೂರೆಂದು ಗುರುತಿಸಬಹುದು. ದಕ್ಷಿಣಭಾರತದ ಹಲವು ಪ್ರದೇಶಗಳಿಗೆ ಸೇರಿದ ಜನರು ದೂರದ ಊರುಗಳಿಗೆ ವಲಸೆ ಹೋಗುತ್ತಿದ್ದರೆಂದು ಹೇಳಲು ಇದೊಂದು ನಿದರ್ಶನವಾಗಿರುವುದಲ್ಲದೆ ಇಂಥಹ ವಿಷಯಗಳಲ್ಲಿ ಭಾಷೆ ಯಾವ ವಿಧದ ಅಡ್ಡಿಯನ್ನೂ ಉಂಟುಮಾಡುತ್ತಿರಲಿಲ್ಲವೆನ್ನಬಹುದು. ಪ್ರಸ್ತುತ ಶಾಸನವು ತಮಿಳು ಮತ್ತು ಗ್ರಂಥಲಿಪಿಯಲ್ಲಿದೆ.

ಸು.೧೭ನೆಯ ಶತಮಾನಕ್ಕೆ ಸೇರಿದ ಒಂದು ಸಂಸ್ಕೃತ ಶಾಸನವು (ನಾಮಂ ೯೩) ಬೆಳ್ಳೂರಿನ ವಿಮಲನಾಥ ಬಸದಿಯನ್ನು ಪದ್ಮಕುಲಕ್ಕೆ ಸೇರಿದ ಹುಲಿಕಲ್ಲಿನ ವರ್ತಕ ಶರ್ಕರನು ಕಟ್ಟಿಸಿದನೆಂಬ ವಿಷಯವನ್ನು ನಿರೂಪಿಸಿದೆ. ಆ ಹೆಸರಿನ ಕುಲ ಆಸ್ತಿತ್ವದಲ್ಲಿದ್ದುದು ತಿಳಿದುಬಂದಿಲ್ಲ. ತದನಂತರದ ಕನ್ನಡ ಶಾಸನದಲ್ಲಿ (ನಾಮಂ ೯೪) ಅದೇ ವಿಷಯವನ್ನು ತಿಳಿಸಿದ್ದು ಸಕ್ಕರೆಶೆಟ್ಟಿ (ಶರ್ಕರ)ಯನ್ನು ದೊಡ್ಡಾದಣ್ಣಶೆಟ್ಟಿಯ ಮಗ ಪದುಮಣಶೆಟ್ಟಿಯ ಮೊಮ್ಮಗನೆಂದು ಹೇಳಿದೆ. ಆದ್ದರಿಂದ ದಾನಿಯು ತಾನು ಪದುಮಣ್ಣನ ವಂಶ ಎಂದರೆ ಪದ್ಮಕುಲಕ್ಕೆ ಸೇರಿದವನೆಂದು ಹೇಳಿಕೊಂಡಿರಬಹುದು. ಪದ್ಮಕುಲ (ನಾಮಂ ೯೩) ವೆಂಬುದನ್ನು ಸಂಸ್ಕೃತ ವೃತ್ತಕ್ಕೆ ಹೊಂದಿಕೊಳ್ಳುವುದಕ್ಕಾಗಿ ಬಳಸಿಕೊಂಡಿರುವ ಸಾಧ್ಯತೆ ಉಂಟು.

ಕ್ರಿ.ಶ. ೧೮೧೦ರ ಮಂಡ್ಯದ ಮಂ. ೨–೫ ಶಾಸನಗಳಾಗಿದ್ದು ಅವು ಗೋವಿಂದರಾಜಪುಷ್ಕರಣಿ ಮತ್ತು ಗೋವಿಂದರಾಜೋದ್ಯಾನಗಳು ಶ್ರೀರಂಗಪಟ್ಟಣದ ತಿರುಮಲೆ ಅನಂದಾಂಪಿಳ್ಳೆ ಗೋವಿಂದರಾಜನ ಮಗ ತಿರುಮಲಾಚಾರ್ಯನ ಧರ್ಮವೆಂದು ಹೇಳಿವೆ. ಈ ತಿರುಮಲಾಚಾರ್ಯನು ರಂಗಪುರಿಯ (ಶ್ರೀರಂಗಪಟ್ಟಣದ) ಸಚಿವನಾಗಿದ್ದನೆಂಬ ವಿಷಯ ಮಂ. ೫ನೆಯ ಶಾಸನದಿಂದ ನಮಗೆ ತಿಳಿದುಬರುತ್ತದೆ. ಈ ಶಾಸನದಲ್ಲಿ ಶಕವರ್ಷ ಹಾಗೂ ಸಂವತ್ಸರಗಳನ್ನು ಕಾಲಲೇಖಕ್ರಮದಲ್ಲಿ ಉಲ್ಲೇಖಿಸಿರುವುದು ಕುತೂಹಲಕರ ಅಂಶ. ಶಕವರ್ಷವನ್ನು

'ಲಿಬ್‌ಸಾಕೇ' ಎಂದು ಸೂಚಿಸಿದ್ದು ಇದು ೧೭೩೩ ಕ್ಕೆ ಹೊಂದುತ್ತಿದ್ದು ಅದು ಪ್ರಚಲಿತ ವರ್ಷವಾಗಿತ್ತು. ಸಂವತ್ಸರವನ್ನು 'ವೇದಸಂಖ್ಯಾ' ಎಂದು ಹೇಳಲಾಗಿದೆ. ವೇದಗಳ ಸಂಖ್ಯೆ ನಾಲ್ಕಾದ್ದರಿಂದ ಇದು ೪ನ್ನು ಸೂಚಿಸುತ್ತದೆ. ಸಾಮಾನ್ಯವಾಗಿ ಈ ಭಾಗದಲ್ಲಿ ಪ್ರಚಲಿತದಲ್ಲಿರುವ ೬೦ ಸಂವತ್ಸರಗಳಲ್ಲಿ ನಾಲ್ಕನೆಯದು ಪ್ರಮೋದೂತವಾಗುತ್ತದೆ. ಸಂವತ್ಸರವನ್ನು ಕಾಲಲೇಖಕ್ರಮದಲ್ಲಿ ಸೂಚಿಸುವುದು ಅತಿ ವಿರಳವಾದುದರಿಂದ ಕುತೂಹಲಕರ ವೆನಿಸಿದೆ.

ಈ ಎಲ್ಲಾ ಅಂಶಗಳಿಂದ ಒಂದು ವಿಷಯವನ್ನು ಗುರುತಿಸಬಹುದು. ಯಾವುದೇ ಒಂದು ಕಾವ್ಯದಲ್ಲಿ ಒಬ್ಬ ಕವಿ, ಯಾವುದಾದರೂ ಒಂದು ರಾಜ ವಂಶಾವಳಿಯನ್ನು ಸಮರ್ಥವಾಗಿ ನಿರೂಪಿಸಿದ್ದರೆ, ಅಥವಾ ಯಾವುದೇ ವ್ಯಕ್ತಿಯ ಸುಂದರ ವ್ಯಕ್ತಿ ಚಿತ್ರವನ್ನು ನೀಡಿದ್ದರೆ ಅಥವಾ ಮಹತ್ತರವಾದ ಭಾವನೆಯನ್ನು ಒಡಮೂಡಿಸಿದ್ದರೆ ಅದರ ಸಾಹಿತ್ಯಕ ಸೌಂದರ್ಯಕ್ಕೆ, ಸಂಕ್ಷಿಪ್ತತೆಗೆ ಮಾರುಹೋದ ಶಾಸನಕಾರರು ಆ ಪದ್ಯಗಳನ್ನು ಹಾಗೆಯೇ ತಮ್ಮ ಶಾಸನಗಳಲ್ಲಿ ಸೇರಿಸಿಕೊಳ್ಳುತ್ತಿದ್ದರು. ಈ ದಾಖಲೆಗಳು ನಮಗೆ ಕವಿ ಕಾಲದಲ್ಲಿ ನಿಷ್ಕರ್ಷೆ ಮಾಡುವಲ್ಲಿ ಕೆಲಮಟ್ಟಿಗೆ ಪಾಠವನ್ನು ತಿದ್ದುವಲ್ಲಿ ಸಹಾಯವಾಗುತ್ತದೆ. ಇದಕ್ಕಿಂತಲೂ ಮಿಗಿಲಾಗಿ ಕಾವ್ಯಗಳು ಎಷ್ಟರ ಮಟ್ಟಿಗೆ ತಮ್ಮ ಪ್ರಭಾವವನ್ನು ಬಿರಿದ್ದವು ಎಂಬ ಅಂಶವೂ ವ್ಯಕ್ತವಾಗುತ್ತದೆ.

ಅಡಿಟಿಪ್ಪಣಿಗಳು:-

೧. ಡಾ.ಎಂ.ಚಿದಾನಂದಮೂರ್ತಿ, ಭಾಷಾವಿಜ್ಞಾನದ ಮೂಲ ತತ್ವಗಳು, ಪು. ೬೫

೨. ಮಂಡ್ಯ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ: ಸಂ, ಡಾ॥ ಆರ್.ಗೋಪಾಲ್, ಪ್ರಾಚ್ಯವಸ್ತು ಮತ್ತು ಸಂಗ್ರಾಲಯಗಳ ನಿರ್ದೇಶನಾಲಯ ಅರಮನೆ ಆವರಣ ಮೈಸೂರು. ಪು. ೧೦೧

೩. ಅದೇ, ಪು. ೧೦೨

೪. ಅದೇ, ಪು. ೧೦೩

೫. ಎಫಿಗ್ರಾಫಿಯ ಮೈಸೂರು ವಿಶ್ವವಿದ್ಯಾನಿಲಯ ಸಂ. ೬ ಪು. ಪೀಠಿಕೆ ಪು XI

೬. ಅದೇ ಪೀಠಿಕೆ ಪು lvi

೭. ಎಫಿಗ್ರಾಫಿಯ ಮೈಸೂರು ವಿಶ್ವವಿದ್ಯಾನಿಲಯ ಸಂ. ೭ ಪು. ಪೀಠಿಕೆ ಪು liv

೮. ಅದೇ ಪೀಠಿಕೆ ಪು lvi

೯. ಅದೇ ಪೀಠಿಕೆ ಪು lix

೧೦. ಅದೇ ಪೀಠಿಕೆ ಪು lxvi

ಅಧ್ಯಾಯ ೮

ಉಪಸಂಹಾರ

ಅಧ್ಯಾಯ ೮

ಉಪಸಂಹಾರ

ಪ್ರಾಚೀನ ಸಂಸ್ಕೃತಿಯ ಅಧ್ಯಯನಕ್ಕೆ ಪೂರಕವಾಗಿ ಶಾಸನಗಳು ಹೇಗೆ ನೆರವಾಗುತ್ತದೆ ಎಂಬುವುದನ್ನು ತಿಳಿಯುವುದೇ ಈ ಅಧ್ಯಯನದ ಮುಖ್ಯ ಉದ್ದೇಶ. ಇದರ ಜೊತೆಯಲ್ಲಿಯು ಕಲಾಮಾಧ್ಯಮವಾಗಿ ಶಾಸನಗಳು ಬೆಳೆದು ಬಂದಿರುವ ರೀತಿಯನ್ನು ತಿಳಿಯುವುದು ಈ ಅಧ್ಯಯನದ ಇನ್ನೊಂದು ಉದ್ದೇಶವಾಗಿದೆ. ಈ ಉದ್ದೇಶಗಳಿಗೆ ಅನುಗುಣವಾಗಿ ನಡೆಸಿದ ಅಧ್ಯಯನದ ಸಂದರ್ಭದಲ್ಲಾದ ಅನುಭವಗಳು, ನಡೆಸಿದ ಅಧ್ಯಯನದ ಮೌಲಿಕತೆ ಮುಂದಿನ ಅಧ್ಯಯನದ ಸಾಧ್ಯತೆ ಇತ್ಯಾದಿ ವಿಚಾರಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ನಿರೂಪಿಸಲಾಗುತ್ತಿದೆ.

ಪ್ರಾಚೀನ ಸಂಸ್ಕೃತಿಯ ಅಧ್ಯಯನಕ್ಕೆ ಶಾಸನಗಳು ಬೇಕೆ ಬೇಕು. ಜೊತೆಗೆ ಇತಿಹಾಸವೂ ಕೂಡಬೇಕು ಮಂಡ್ಯದ ಯಾವುದೇ ಪ್ರದೇಶದ ಸಾಂಸ್ಕೃತಿಕ ಇತಿಹಾಸ ರಚನೆಗೆ ನೆರವಾಗುವ ಆಕಾರ ಸಾಮಾಗ್ರಿಗಳಲ್ಲಿ ಶಾಸನಗಳು ಪ್ರಮುಖವಾಗಿ ನಮ್ಮ ಹಿಂದಿನವರ ಜೀವನ ಹೇಗಿತ್ತು ಅವರ ಭಾಷಾ ಶೈಲಿ ಹೇಗಿತ್ತು. ಎಂಬುದನ್ನು ತಿಳಿಯಲು ನಮಗೆ ಯಾವುದೇ ಆಧಾರಗಳು ಉಳಿಯುವುದಿಲ್ಲ ಆದರೆ ಶಾಸನಗಳಿಂದ ನಾವು ಅವುಗಳನ್ನು ತಿಳಿದುಕೊಳ್ಳಬಹುದು.

ಕರ್ನಾಟಕ ರಾಜ್ಯದ ಜಿಲ್ಲೆಗಳಲ್ಲಿ ಒಂದೆನ್ನಿಸಿರುವ ಮಂಡ್ಯ ಜಿಲ್ಲೆಯು ೧೯೨೯ರಲ್ಲಿ ಮೈಸೂರು ಜಿಲ್ಲೆಯಿಂದ ಬೇರ್ಪಡೆಯಾಗಿ ಸ್ವತಂತ್ರ ಜಿಲ್ಲೆಯಾಗಿ ರೂಪುಗೊಂಡಿತು. ಮಂಡ್ಯ ಜಿಲ್ಲೆಯು ಶಾಸನ ಸಂಸ್ಕೃತಿಯಿಂದ ಕಂಗೊಳಿಸುತ್ತಿದೆ. ಈ ಜಿಲ್ಲೆಯಲ್ಲಿ ಇದುವರೆಗೂ ದೊರೆಕಿರುವ ಶಾಸನಗಳ ಎರಡು ಪರಿಷ್ಕೃತ ಸಂಪುಟಗಳು, ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಿಂದ ಪ್ರಕಟವಾಗಿದ್ದು, ಎಪಿಗ್ರಾಫಿಯಾ ಕರ್ನಾಟಕ ಸಂಪುಟ ೬ರಲ್ಲಿ ಕೃಷ್ಣರಾಜಪೇಟೆ–೧೧೪, ಪಾಂಡವಪುರ–೨೬೩, ಶ್ರೀರಂಗಪಟ್ಟಣ–೧೨೨ ಶಾಸನಗಳು ಪ್ರಕಟವಾಗಿವೆ. ಎಪಿಗ್ರಾಫಿಯಾ ಕರ್ನಾಟಕ ಸಂಪುಟ ೭ರಲ್ಲಿ ನಾಗಮಂಗಲ–೧೮೫, ಮಂಡ್ಯ–೮೭, ಮದ್ದೂರು–೧೪೫, ಮಳವಳ್ಳಿ–೧೪೯ ಶಾಸನಗಳು ಪ್ರಕಟವಾಗಿದ್ದು, ಒಟ್ಟು ಶಾಸನಗಳ ೧೦೬೫ ಆಗಿದೆ. ಜೊತೆಗೆ ಇದುವರೆಗೆ ಹೊಸ ಅನೇಕ ಶಾಸನಗಳು ದೊರೆತು ಪ್ರಕಟವಾಗಿವೆ. ಒಟ್ಟಾರೆ ಮಂಡ್ಯ ಜಿಲ್ಲೆಯಲ್ಲಿ ದೊರಕಿರುವ ಶಾಸನಗಳು ಸಂಖ್ಯೆ ಸುಮಾರು ೧೧೦೦ ಆಗಬಹುದು.

ಈ ಶಾಸನಗಳಲ್ಲಿ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಪ್ರಮುಖ ವಿಚಾರಗಳು ಮಡುಗಟ್ಟಿ ನಿಂತಿವೆ. ಕರ್ನಾಟಕದ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಮರು ವ್ಯಾಖ್ಯಾನಕ್ಕೆ ಈ ಶಾಸನಗಳು ತಮ್ಮದೇ ಆದೇ ಕೊಡುಗೆಯನ್ನು ನೀಡುತ್ತಾ ಬಂದಿವೆ. ಇದುವರೆಗೂ ಶಾಸನಗಳನ್ನು ಉಪಯೋಗಿಸಿಕೊಂಡು ಇತಿಹಾಸ ಸಂಸ್ಕೃತಿ, ವಾಸ್ತು, ಸ್ಥಳನಾಮ ಮೊದಲಾದ ಹಲವು ವಿಷಯಗಳಿಗೆ ಸಂಬಂಧಿಸಿದಂತೆ ಅಧ್ಯಯನಗಳು ನಡೆದಿರುತ್ತವೆ. ಈ ಅಧ್ಯಯನಗಳಲ್ಲಿ ಸಂಧರ್ಭೋಚಿತವಾಗಿ ಕೆಲವು ಶಾಸನಗಳನ್ನು ಮಾತ್ರ ಉಲ್ಲೇಖ ಮಾಡಲಾಗಿದೆ. ಆದರೆ ಜಿಲ್ಲೆಯ ಎಲ್ಲಾ ಶಾಸನಗಳನ್ನು ಸಮಗ್ರವಾಗಿ ಒಂದೇ ಅಧ್ಯಯನದಲ್ಲಿ ಸಂಶೋಧನೆ ಶಿಸ್ತಿಗೆ ಒಳಪಡಿಸಿ ವಿವರವಾದ, ವಿಶ್ಲೇಷಣಾತ್ಮಕವಾದ ಅಧ್ಯಯನವು ಇರುವುದಿಲ್ಲ. ಮಂಡ್ಯ ಜಿಲ್ಲೆಯ ಎಲ್ಲಾ ಶಾಸನಗಳನ್ನು ವಿವಿಧ ಮುಖಗಳಿಂದ ವಿವರವಾಗಿ ವಿಶ್ಲೇಷಣೆ ಮಾಡಿ ಅಧ್ಯಯನ ಮಾಡುವ ಅವಶ್ಯಕತೆ ಕಂಡು ಬಂದಿರುವುದರಿಂದ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಇತಿಹಾಸ ಪೂರ್ವ ಕಾಲವು ಕಳೆದು ಲಿಖಿತ ದಾಖಲೆಗಳುಳ್ಳ ಇತಿಹಾಸ ಕಾಲಕ್ಕೆ ಬರುವಾಗ ಮಂಡ್ಯ ಜಿಲ್ಲೆಯು ವಿಪುಲ ಐತಿಹಾಸಿಕ ಚಟುವಟಿಕೆಗಳ ರಂಗಸ್ಥಳವಾಗಿ ಧಾರ್ಮಿಕ, ಸಾಂಸ್ಕೃತಿಕ ಹಾಗೂ ಆರ್ಥಿಕ ಚಟುವಟಿಕೆಗಳ ಕೇಂದ್ರವಾಗಿದ್ದುದು ಕಂಡು ಬರುತ್ತದೆ. ಜಿಲ್ಲೆಯಲ್ಲಿ ಅನೇಕ ರಾಜರು, ಗಂಗರು, ಹೊಯ್ಸಳರು, ರಾಷ್ಟ್ರಕೂಟರು, ವಿಜಯನಗರ ಅರಸರು, ಒಡೆಯರು, ಹೈದರ್, ಟಿಪ್ಪು ಹಾಗೂ ಪಾಳೇಗಾರರ ಮನೆತನಗಳು ಆಳ್ವಿಕೆಗಳನ್ನು ನಡೆಸಿ ಜಿಲ್ಲೆಯನ್ನು ಸಾಂಸ್ಕೃತಿಕವಾಗಿ ಶ್ರೀಮಂತಗೊಳಿಸಿದ್ದಾರೆ. ಮಂಡ್ಯ ಜಿಲ್ಲೆಯು "ಸಕ್ಕರೆಯನಾಡು" "ಭತ್ತದಕಣಜ" ಎಂಬ ಬಿರುದಾವಳಿಗಳನ್ನು ಉಳಿಸಿಕೊಂಡು ಬಂದಿದೆ. ಶಾಸನಗಳಲ್ಲಿ ಪದ್ಯ ಶಾಸನಗಳನ್ನೂ, ಗದ್ಯ ಶಾಸನಗಳನ್ನೂ ನಾವು ಕಾಣಬಹುದು. ಶಾಸನಗಳಲ್ಲಿ ಹೆಚ್ಚು ದಾನಶಾಸನಗಳನ್ನೂ, ವೀರಗಲ್ಲುಗಳನ್ನೂ, ಮಾಸ್ತಿಗಲ್ಲುಗಳನ್ನೂ, ಶಿಲಾಶಾಸನಗಳು, ತಾಮ್ರಶಾಸನಗಳು ಮುಂತಾದುವುಗಳನ್ನು ಕಾಣಬಹುದು. ಇಲ್ಲಿನ ಶಾಸನಗಳನ್ನು ಸಾಹಿತ್ಯಿಕ ದೃಷ್ಟಿಯಿಂದಲೂ, ಸಾಂಸ್ಕೃತಿಕ ದೃಷ್ಟಿಯಿಂದಲೂ ಕಾಣಬಹುದಾಗಿದೆ.

"ಜನನೀ ಜನ್ಮ ಭೂಮಿಶ್ವ ಸ್ವರ್ಗಾದಪಿ ಗರೀಯಸಿ" ಅಂದರೆ ಜನನಿ ಮತ್ತು ಜನ್ಮ ಭೂಮಿಗಳೆರಡೂ ಸ್ವರ್ಗಕ್ಕಿಂತ ಮಿಗಿಲು. ನಮ್ಮನ್ನು ಹೆತ್ತವರ, ನಮ್ಮನ್ನು ಹೊತ್ತು ಪೊರೆದ ಅಂದರೆ ನಮಗೆ ಭೂಮಿಯ ಬದುಕಲು ಅಶ್ರಯ ನೀಡಿರುವವಳೇ ಭೂತಾಯಿಯ ಹಿನ್ನಲೆ, ಹುಟ್ಟು ಹೆಸರಿನ ಐತಿಹ್ಯ ನಮಗೆ ಹರ್ಷ ತರುತ್ತದೆ. ಹಾಗೇ ಸಾಮಾನ್ಯವಾಗಿ ತಾಮ್ರಶಾಸನಗಳು ಸಂಸ್ಕೃತ ಭಾಷೆಯಲ್ಲಿದ್ದು ದಾನವಿತ್ತ ಗ್ರಾಮದ ಸೀಮಾವಿವರ ಕೂಡುವಾಗ ಕನ್ನಡದ ಬಳಕೆ ಯಾಗುತ್ತಿತ್ತು

ಗಂಗರಸ ಶ್ರೀ ಪುರುಷನ ದೇವರಹಳ್ಳಿ ಶಾಸನದಲ್ಲಿರುವ "ದುಣ್ಣು ಸಮುದ್ರದಾ ವಯಲು ಮೂವತ್ತಾ ಒನ್ದು ಮನೆಯ ಮನೆ ತಾಣಂ" ಎಂಬ ಭಾಗ ಜಿಲ್ಲೆಯ ಶಾಸನಗಳಲ್ಲಿ ಅತಿಪ್ರಾಚೀನ ಸುಮಾರು 8ನೆಯ ಶತಮಾನದ ಕನ್ನಡಭಾಷಾ ರೂಪವನ್ನು ಪ್ರತಿನಿಧಿಸುತ್ತದೆ. ಗಂಗರ ಶಿಲಾಶಾಸನಗಳ ವಸ್ತುನಿಷ್ಠ ಕಿರುಗದ್ಯ ಶಾಸನಗಳು ಚೋಳ-ಹೊಯ್ಸಳ ಕಾಲದಲ್ಲಿ ಕೆಲವು ಪ್ರದೇಶಗಳಲ್ಲಿ ತಮಿಳಿನ ಬಳಕೆಯಾಗಿದೆ. ಹೊಯ್ಸಳ ಕಾಲಕನ್ನಡ ಲಿಪಿ ಮತ್ತು ಭಾಷಾ ಸೌಂದರ್ಯ ಹಾಗೂ ನಿರೂಪಣೆಯ ಸೊಗಸಿನ ದೃಷ್ಟಿಯಿಂದ ಸುವರ್ಣಯುಗ ಗದ್ಯ ಪದ್ಯ ಮಿಶ್ರಿತ ಶೈಲಿಯ ಸುದೀರ್ಘಶಾಸನಗಳು ಈ ಕಾಲದ ವೈಶಿಷ್ಟ ಆದರೆ ಹೊಯ್ಸಳರ ಅಳ್ವಿಕೆಯ ಕೊನೆಗಾಲಕ್ಕೆ ಶಾಸನಗಳ ಭಾಷಾಬಂಧ ಸಡಿಲವೂ ಶೈಲಿ ನೀರಸವೂ ಆಯಿತು, ವಿಜಯನಗರ ಶಿಲಾಶಾಸನಗಳ ಭಾಷೆ ಅಷ್ಟೇನೂ ಹಿತಕರವಲ್ಲ.

ಚಂಪೂ ಶೈಲಿಯಲ್ಲಿ ರಚಿತವಾಗಿರುವ ಅನೇಕ ಶಾಸನಗಳು ಮಂಡ್ಯ ಜಿಲ್ಲೆಯಲ್ಲಿ ದೊರೆತಿವೆ. ಸುಮಾರು 35 ವೃತ್ತಗಳು ಪದ್ಯಗಳ ರಚನೆಯಲ್ಲಿ ಅಳವಡಿಕೆಯಾಗಿರುವುದನ್ನು ನಾವು ಕಾಣಬಹುದು. ಕಂದ-ಶ್ಲೋಕಗಳೇ ಹೆಚ್ಚು ಶಾಸನ ಕವಿತ್ವದದೃಷ್ಟಿಯಿಂದಲೂ, ಹೊಯ್ಸಳ ಶಾಸನಗಳಿಗೆ ಅಗ್ರಮಾನ್ಯತೆ ನೀಡಬೇಕಾಗುತ್ತದೆ. ಅಗ್ರಹಾರ ಬಾಚಹಳ್ಳಿ, ಎಲೇಕೊಪ್ಪ, ಲಾಲನಕೆರೆ, ಬಸರಾಳು. ತಿಪ್ಪೂರು ಮುಂತಾದ ಸ್ಥಳಗಳಲ್ಲಿರುವ ಶಾಸನಗಳ ಸಾಹಿತ್ಯಮೌಲ್ಯ ಶ್ರೇಷ್ಠ ಮಟ್ಟದ್ದು ಎಂದು ಹೇಳಬಹುದು.

ಕನ್ನಡ ಸಾಹಿತ್ಯದ ಎಲ್ಲ ಪ್ರಕಾರಗಳಿಗೂ ಇಲ್ಲಿ ಮೊದಲ ಮಣೆ ಸಲ್ಲುತ್ತದೆ. ಎಂದೇ ಹೇಳಬೇಕು. ಕವಿತೆ, ಕಥೆ, ಕಾದಂಬರಿ, ನಾಟಕ, ಪ್ರಬಂಧ, ಅಷ್ಟೇ ಅಲ್ಲದೆ ಭಾಷಾಂತರ ರೂಪಾಂತರ ಮೊದಲಾದವುಗಳಿಗೆ ಸಂಬಂದಿಸಿದಂತೆ, ಹಲವು ಪ್ರಥಮಗಳಿಗೆ ಇಲ್ಲಿ ಸ್ಥಾನವಿದೆ. ನವೋದಯ ಸಾಹಿತ್ಯಕ್ಕೆ ನಾಂದಿಯನ್ನು ಹಾಡಿದ ಈ ಕೆಲವು ಪ್ರಕಾರಗಳಿಗೆ ಉಜ್ವಲ ಸ್ವರೂಪವನ್ನು ಕೊಟ್ಟ ಅನೇಕ ಮಹನೀಯರನ್ನು ನಾವು ಸ್ಮರಿಸಬಹುದು. ಆಧುನಿಕ ಕನ್ನಡ ಸಾಹಿತ್ಯವನ್ನು ನಿಶ್ಚಿತ ಹಾಗೂ ಶ್ರೀಮಂತ ಮಾರ್ಗದಲ್ಲಿ ಕೊಂಡೊಯ್ಯಲು ಇಲ್ಲಿ ಪ್ರತಿಯೊಬ್ಬರ ಕೊಡುಗೆಯೂ ಅಪಾರವಾದುದು. ಈ ಪರಂಪರೆಯಲ್ಲಿಯೇ ಮುಂದುವರಿದ ನಂತರದ ಪೀಳಿಗೆಯವರು ಅದನ್ನು ಮುನ್ನಡೆಸಿಕೊಂಡು ಹೋಗುತ್ತಿರುವುದು ನಿರಾಶಾದಾಯಕವಾಗಿಯೇನೂ ಇಲ್ಲ ಎಂಬುದು ಸಮಧಾನವಾದ ಸಂಗತಿ.

ವ್ಯವಹಾರಿಕ ಭೇದಗಳು ಗೋಚರಿಸಿದರೂ. ಮೇಲ್ನೋಟಕ್ಕೆ ಭಿನ್ನತೆ ಕಂಡು ಬಂದರೂ ಮೂಲತತ್ವ ಒಂದೇ, ಅಭಿನ್ನ ಎನ್ನುವುದನ್ನು ಹೃದಯಸ್ಪರ್ಶಿಯಾಗಿ ಈ ಕೆಳಗಿನ ಪದ್ಯ ಸಾರುತ್ತದೆ :

ಭೇದಂ ಮೂರ್ತಿಯೊಳಲ್ಲದೆ
ಭೇದಂ ಪರಮಾರ್ಥ ತತ್ವದೊಳು ಸಲ್ಲದೆನಲು ।
ಮೂದೇವರಾದಭೇದದ
ಮಾದೇವಂ ದೇವನೀಗೆ ಸುಖಸಂಪದಮಂ ॥

ಈ ಹೃದಯ ಸ್ಪರ್ಶಿಯಾದ ಕಂದಪದ್ಯದಿಂದ ಮಂಡ್ಯ ಜಿಲ್ಲೆಯ ಶಾಸನಗಳ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಅಧ್ಯಯನ ಎಂಬ ಮಹಾಪ್ರಬಂದವನ್ನು ಮುಕ್ತಾಯ ಗೊಳಿಸಬಹುದೆಂದು ತೋರುತ್ತದೆ.

ಗ್ರಂಥ ಋಣ

ಮಂಡ್ಯ ಜಿಲ್ಲೆಯ ತಾಲ್ಲೂಕುಗಳಿಗೆ ಹೀಗೆ ಸಂಕೇತಾಕ್ಷರಗಳನ್ನು ಬಳಸಿದೆ.

ಮಂಡ್ಯ: ಮಂ.

ಮದ್ದೂರು: ಮ.

ಮಳವಳ್ಳಿ- ಮ,ವ.

ಕೃಷ್ಣರಾಜಪೇಟೆ–ಕೃ,ಪೇ.

ಪಾಂಡವಪುರ–ಪಾಂ,ಪು.

ಶ್ರೀರಂಗಪಟ್ಟಣ–ಶ್ರೀ,ಪ.

ನಾಗಮಂಗಲ–ನಾ,ಮಂ

ನಿಘಂಟುಗಳು–ವಿಶ್ವಕೋಶಗಳು

೧. **ಸಂಕ್ಷಿಪ್ತ ಕನ್ನಡ ನಿಘಂಟು**	–	ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು– ೧೯೭೭
೨. **ಕನ್ನಡ–ಕನ್ನಡ ನಿಘಂಟು ಸಂಪುಟಗಳು**	–	ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು
೩. **ಇಂಗ್ಲೀಷ್–ಕನ್ನಡ ನಿಘಂಟು**	–	ಪ್ರಸಾರಾಂಗ–ಮೈಸೂರು ವಿಶ್ವವಿದ್ಯಾನಿಲಯ ಮೈಸೂರು ೧೯೮೫
೪. **ಇಂಗ್ಲೀಷ್–ಕನ್ನಡ ನಿಘಂಟು**	–	ಪರಿಷ್ಕೃತ ಪ್ರಸಾರಾಂಗ–ಮೈಸೂರು ವಿಶ್ವವಿದ್ಯಾನಿಲಯ ಮೈಸೂರು

ಪರಾಮರ್ಶನ ಗ್ರಂಥಗಳು

ಜಿ.ವೆಂಕಟಸುಬ್ಬಯ್ಯ, ಕನ್ನಡ ಶಾಸನ ಪರಿಚಯ

ಪಿ.ಬಿದೇಸಾಯಿ, ಕನ್ನಡ ನಾಡಿನ ಶಾಸನಗಳು

ಕನ್ನಡ ಸಂಕ್ಷಿಪ್ತ ವ್ಯಾಕರಣ, **ಡಾ. ಕೆ.ಕುಶಾಲಪ್ಪಗೌಡ,** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ

ಮೇವುಂಡಿ ಮಲ್ಲಾರಿ, ಕನ್ನಡ ನಾಡಿನ ಶಾಸನಗಳು

ಮಂಡ್ಯ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, **ಡಾ.ಆರ್.ಗೋಪಾಲ್,** ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ, ನಿರ್ದೇಶನಾಲಯ, ಮೈಸೂರು.

ಕನ್ನಡ ಶಾಸನಗಳು, **ಡಾ. ಬಾ.ರಾ.ಗೋಪಾಲ** ೨೦೦೪

ವೀರಗಲ್ಲುಗಳು ಮತ್ತು ಮಾಸ್ತಿಗಲ್ಲುಗಳು, **ಡಾ.ಎಂ.ಚಿದಾನಂದಮೂರ್ತಿ**

ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, **ಎಂ.ಚಿದಾನಂದಮೂರ್ತಿ,** ಸ್ವಪ್ನ ಬುಕ್ ಹೌಸ್, ಬೆಂಗಳೂರು.

ಸಿರಿನಾಡು, **ಎನ್.ಜಗದೀಶ್‌ಕೊಪ್ಪ** ೧೯೯೯

ಶಾಸನ ಮತ್ತು ಗದ್ಯ, ಹು.ಕಾ.ಜಯದೇವ, ಬೆಂಗಳೂರು ವಿಶ್ವವಿದ್ಯಾನಿಲಯ– ೨೦೧೦

ಸಿರಿಯೊಡಲು, **ದೇ.ಜೆ.ಗೌ. (ಪ.ಸಂ.) ಹ.ಕಾ.ರಾಜೇಗೌಡ** (ಸಂ), ಸ್ವಾಗತ ಸಮಿತಿ ೬೩ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಮಂಡ್ಯ ೧೯೯೪

ಸುವರ್ಣ ಮಂಡ್ಯ, **ದೇ.ಜವರೇಗೌಡ,** ಸ್ವಾಗತ ಸಮಿತಿ ೬೩ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಮಂಡ್ಯ ೧೯೯೪

ಮಂಡ್ಯ ಜಿಲ್ಲೆಯ ಸಾಂಸ್ಕೃತಿಕ ಪರಂಪರೆ, **ತೈಲೂರು ವೆಂಕಟಕೃಷ್ಣ,** ಭಾನು ಪ್ರಕಾಶನ, ಮಂಡ್ಯ ೧೯೯೨

ಕನ್ನಡ ಲಿಪಿ ಶಾಸ್ತ್ರ, **ಜಿ.ಕೆ.ದೇವರಾಜಸ್ವಾಮಿ**

ಕನ್ನಡ ಶಾಸನಗಳಲ್ಲಿ ಶಾಪಾಶಯ. ಡಾ. ದೇವಕೊಂಡರೆಡ್ಡಿ ೨೦೦೮

ಭಾರತದ ಗ್ಯಾಸೆಟಿಯರ್ ಕರ್ನಾಟಕ ರಾಜ್ಯ ಮಂಡ್ಯ ಜಿಲ್ಲೆ, ಡಿ.ವಿ. ಪಾರ್ಥಸಾರಥಿ, ಕರ್ನಾಟಕ ಸರ್ಕಾರ ೨೦೦೩

ಕರ್ನಾಟಕ ಶಾಸನ ಸಂಶೋಧನೆ. ಡಾ॥ ಕೆ.ಜಿ. ಭಟ್‌ಸೂರಿ ೨೦೦೯

ನಾಗಮಂಗಲ ತಾಲ್ಲೂಕು ದರ್ಶನ. ಮಹಮ್ಮದ್ ಕಲೀಂ ಉಲ್ಲಾ

ಮಳವಳ್ಳಿ ತಾಲ್ಲೂಕು ದರ್ಶನ, ಮಹಮ್ಮದ್ ಕಲೀಂ ಉಲ್ಲಾ

ತೊಣ್ಣೂರು, ಡಾ. ಸಿ.ಮಹದೇವು ೨೦೦೯

ಕನ್ನಡಲಿಪಿ ಶಾಸ್ತ್ರ, ಎಂ.ಜಿ.ಮಂಜುನಾಥ್

ಶಾಸನ ಪರಿಚಯ ನಾಗಮಂಗಲ ತಾ, ಮಹಮ್ಮದ್ ಕಲೀಂ ಉಲ್ಲಾ

ಸಿರಿಯೊಡಲು, ಹ.ಕ. ರಾಜೇಗೌಡ (ಸಂ), ಸ್ವಾಗತ ಸಮಿತಿ ೬೩ನೇ ಅಖಿಲ ಭಾರತ ಕನ್ನಡ. ಸಾಹಿತ್ಯ ಸಮ್ಮೇಳನ, ಮಂಡ್ಯ ೧೯೯೪

ಕರ್ನಾಟಕದ ವೀರಗಲ್ಲುಗಳು, ಡಾ॥ ಆರ್.ಶೇಷಶಾಸ್ತ್ರಿ, ಕನ್ನಡ ಸಾಹಿತ್ಯ ಪರಿಷತ್ತು ೨೦೦೪

ಶಾಸನ ಪರಿಚಯ, ಆರ್.ಶೇಷಶಾಸ್ತ್ರಿ ೨೦೦೫

ಹಲ್ಮಿಡಿ ಶಾಸನಗಳ ಒಂದು ಪರಿಚಯ. ಡಾ॥ ಶ್ರೀವತ್ಸ ಎಸ್.ಭಟ್ ೨೦೦೨

ಭಾರತೀಯ ಶಾಸನಶಾಸ್ತ್ರ ಪರಿಚಯ. ಸಿ.ಪಿ.ಕೆ. (ಅನು)

ಸಿಂಗಾರ, ಶ್ರೀ ಕೆ.ಸಿಂಗಾರಿಗೌಡ ಅಭಿನಂದನಾ. ಸಮಿತಿ, ಮಂಡ್ಯ ಹ.ಕ. ರಾಜೇಗೌಡ

ಎಪಿಗ್ರಾಫಿಯಾ ಕರ್ನಾಟಕ ಸಂಪುಟ-೬, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು. ವಿಶ್ವವಿದ್ಯಾನಿಲಯ ೧೯೭೭

ಎಪಿಗ್ರಾಫಿಯಾ ಕರ್ನಾಟಕ ಸಂಪುಟ-೭. ಕನ್ನಡ ಅಧ್ಯಯನ ಸಂಸ್ಥೆ ಮೈಸೂರು, ವಿಶ್ವವಿದ್ಯಾನಿಲಯ ೧೯೭೯

ಕನ್ನಡ ನಾಡಿನ ಚರಿತ್ರೆ (ಭಾಗ-೨), ಡಾ. ಎಸ್.ಸಿ.ನಂದಿಮಠ, ಕನ್ನಡ ಸಾಹಿತ್ಯ ಪರಿಷತ್ತು, ೧೯೭೫

ಕನ್ನಡ ಶಾಸನಗಳು, ಡಾ. ಬಾ.ರಾ.ಗೋಪಾಲ್, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೧೯೯೫

ಕನ್ನಡ ಶಾಸನ ಶಿಲ್ಪ, ಡಾ.ಡಿ.ವಿ.ಪರಮಶಿವಮೂರ್ತಿ, ಪ್ರಸಾರಾಂಗ, ಕನ್ನಡ ವಿ.ವಿ., ಹಂಪಿ, ೧೯೯೯ ಕನ್ನಡ ಶಾಸನಾಧ್ಯಯನದ ಬಹುಮುಖಿ ಆಯಾಮಗಳು, ಡಾ. ಡಿ.ಚಿತ್ತಯ್ಯ ಪೂಜಾರ್, ಪ್ರಸಾರಾಂಗ, ಕನ್ನಡ ವಿವಿ, ಹಂಪಿ ೨೦೧೦

ಕನ್ನಡ ಶಾಸನ ಸಂಪದ, ಸಂ: ಡಾ. ಆರ್.ಸಿ. ಹಿರೇಮಠ್ ಮತ್ತು ಡಾ. ಎಂ.ಎಂ.ಕಲಬುರ್ಗಿ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ, ೧೯೮೨

ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಡಾ. ಎಂ.ಚಿದಾನಂದಮೂರ್ತಿ, ಪ್ರಸಾರಾಂಗ, ಮೈಸೂರು ವಿವಿ. ೧೯೬೪

ಕನ್ನಡ ಸಂಸ್ಕೃತಿ, ಡಾ. ದೇ.ಜವರೇಗೌಡ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೨೦೧೦

ಕನ್ನಡ ಸಂಶೋಧನಾ ಶಾಸ್ತ್ರ, ಡಾ.ಎಂ.ಎಂ.ಕಲಬುರ್ಗಿ, ಚೇತನ ಬುಕ್ ಹೌಸ್, ಮೈಸೂರು, ೧೯೯೫ ಕನ್ನಡ ಸಾಹಿತ್ಯ ಸಂಶೋಧನೆಯ ಇತಿಹಾಸ, ಡಾ.ಸಂಗಮೇಶ ಸವದತ್ತಿಮಠ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ೨೦೦೩

ಕನ್ನಡ ಸಾಹಿತ್ಯದ ಭಾಗವತ ಕವಿಗಳು, ಎ.ಎಸ್.ವೇಣುಗೋಪಾಲರಾವ್, ಪ್ರಸಾರಾಂಗ, ಮೈಸೂರು ವಿ.ವಿ., ೧೯೮೩

ಕನ್ನಡ ಸಾಹಿತ್ಯ ಚರಿತ್ರೆ, ಹೆಚ್.ನಂಜೇಗೌಡ, ಚೇತನ ಪುಸ್ತಕಾಲಯ, ಮೈಸೂರು, ೨೦೦೦

ಕನ್ನಡ ಸಾಹಿತ್ಯ ಚರಿತ್ರೆ, ಮೂರು ಸಂಪುಟಗಳು, ರಾ.ನರಸಿಂಹಾಚಾರ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ೨೦೦೫

ಕನ್ನಡ ಸಾಹಿತ್ಯ ಚರಿತ್ರೆ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿವಿ. ಸಂಪುಟ ೧ ರಿಂದ ೪, ೧೯೭೭

ಕರ್ನಾಟಕ ಇತಿಹಾಸ ದರ್ಶನ, ಡಾ. ಎಂ.ವಿ.ಕೃಷ್ಣರಾವ್, ಟಿ.ಕೇಶವಭಟ್ಟ, ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಬೆಂಗಳೂರು, ೧೯೭೦

ಕರ್ನಾಟಕ ಚರಿತ್ರೆ, ಸಂಪುಟಗಳು, ೧ ರಿಂದ ೭, ಪ್ರಧಾನ ಸಂಪಾದಕರು: ಡಾ.ಬಿ.ಶೇಖ್‌ಅಲಿ, ಕನ್ನಡ ವಿವಿ. ಹಂಪಿ. ೧೯೯೭,

ಕರ್ನಾಟಕ ಮತ್ತು ಜೈನ ಸಂಸ್ಕೃತಿ (ಆರು ಉಪನ್ಯಾಸಗಳು), ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ, ೧೯೭೫

ಕರ್ನಾಟಕ ಶಾಸನಗಳಲ್ಲಿ ಶಾಪಾಶಯ, ಡಾ. ದೇವರಕೊಂಡಾರೆಡ್ಡಿ, ಕರ್ನಾಟಕ ಇತಿಹಾಸ ಸಂ.ಮಂ, ಧಾರವಾಡ, ೨೦೦೮

ಕರ್ನಾಟಕ ಶಾಸನ ಸಮೀಕ್ಷೆ, ಡಾ. ಕೆ.ವಿ.ರಮೇಶ್, ಬೆಂಗಳೂರು ವಿವಿ. ೧೯೭೧

ಕರ್ನಾಟಕ ಸಂಸ್ಕೃತಿಯ ಸಂಶೋಧನೆ, ಕಪಟರಾಳ್ ಕೃಷ್ಣರಾವ್, ಉಷಾ ಸಾಹಿತ್ಯ ಮಾಲೆ, ಮೈಸೂರು, ೧೯೭೦

ಕರ್ನಾಟಕ ಇತಿಹಾಸ ಸಂಶೋಧನಾ ಮಂಡಲ, ಧಾರವಾಡ, ೨೦೦೮

ಕರ್ನಾಟಕ ಗ್ರಾಮಸೂಚಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ಬೆಂಗಳೂರು ೧೯೮೫

ಕರ್ನಾಟಕ ಜನಜೀವನ, ಬೆಟಗೇರಿ ಕೃಷ್ಣಶರ್ಮ, ಸಾಗರ್ ಪ್ರಕಾಶನ, ಬೆಂಗಳೂರು, ೨೦೦೫

ಕರ್ನಾಟಕ ನಾಣ್ಯ ಸಂಪತ್ತು, ಡಾ. ಎ.ವಿ.ನರಸಿಂಹಮೂರ್ತಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಕರ್ನಾಟಕ ಮತ್ತು ಜೈನಧರ್ಮ, ಡಾ. ಹಂ.ಪ.ನಾಗರಾಜಯ್ಯ, ಐಬಿಎಚ್ ಪ್ರಕಾಶನ, ಬೆಂಗಳೂರು ೧೯೮೧

ಕರ್ನಾಟಕ ಶಾಸನ ಸಂಶೋಧನೆ, ಸಂ. ಡಾ. ಕೆ.ಜಿ.ಭಟ್‌ಸೂರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ೨೦೦೯

ಕರ್ನಾಟಕ ಶಾಸನಗಳಲ್ಲಿ ಶಾಪಾಶಯ, ಡಾ.ದೇವರಕೊಂಡಾರೆಡ್ಡಿ, ಕರ್ನಾಟಕ ಇತಿಹಾಸ ಸಂಶೋಧನಾ ಮಂಡಲ, ಧಾರವಾಡ, ೨೦೦೭-೨೦೦೮

ಕರ್ನಾಟಕದ ಇತಿಹಾಸ (ಇತಿಹಾಸಪೂರ್ವ ಕಾಲದಿಂದ ೧೦ನೆಯ ಶತಮಾನದವರೆಗೆ), ಆರ್.ಎಸ್.ಪಂಚಮುಖಿ, ಪ್ರಕಾಶಕರು: ಕರ್ನಾಟಕ ಇತಿಹಾಸ ಸಂಶೋಧನಾ ಮಂಡಲ, ಧಾರವಾಡ, ೧೯೬೭

ಕರ್ನಾಟಕದ ಅರಸು ಮನೆತನಗಳು, ನೆಲಮಂಗಲ ಲಕ್ಷ್ಮೀನಾರಾಯಣರಾಯರು, ಆರ್.ಎಸ್.ಪಂಚಮುಖಿ ಪ್ರ: ಕರ್ನಾಟಕ ಇತಿಹಾಸ ಸಂಶೋಧನಾ ಮಂಡಲ, ಧಾರವಾಡ ೨೦೦೮

ಗಂಗ ಶಿಲ್ಪಕಲೆ, ಡಾ. ದೇವರಕೊಂಡಾರೆಡ್ಡಿ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ೨೦೦೮

ಗಂಗರ ದೇವಾಲಯಗಳು, ಡಾ.ದೇವರಕೊಂಡಾರೆಡ್ಡಿ, ಕನ್ನಡ ಸಾಹಿತ್ಯ ಪರಿಷತ್ತು,

ಗಂಗರಾಜಮಡು, ಮ.ಸಿ.ನಾರಾಯಣ, ಶ್ರೀ ಮಂಜುಪ್ರಕಾಶನ, ಮಳವಳ್ಳಿ, ೨೦೦೬

ಗ್ರಾಮ ದರ್ಶನ, ಶಿವಳ್ಳಿ ಕೆಂಪೇಗೌಡ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಮಂಡ್ಯ, ೨೦೧೧

ತಲಕಾಡಿನ ಗಂಗರ ದೇವಾಲಯಗಳು – ಒಂದು ಅಧ್ಯಯನ, ಡಾ.ದೇವರಕೊಂಡಾರೆಡ್ಡಿ, ಕನ್ನಡ ಸಾಹಿತ್ಯ ಪರಿಷತ್ತು, ೧೯೯೪

ತಿರುಮಲಾರ್ಯ, ಸಂ: ವಿ.ಸೀತಾರಾಮಯ್ಯ, ಐಬಿಎಚ್, ಪ್ರಕಾಶನ, ಬೆಂಗಳೂರು, ೧೯೮೦
ತಿರುಮಲಾರ್ಯ, ಎಚ್.ಎಸ್.ಹರಿಶಂಕರ್, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು, ೨೦೦೨

ತೊಣ್ಣೂರು, ಸಂ: ಡಾ. ಸಿ. ಮಹಾದೇವ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ೨೦೦೯

ನಾಗಮಂಗಲ ತಾಲ್ಲೂಕು ದರ್ಶನ, ಹೊ.ಶ್ರೀನಿವಾಸಯ್ಯ, ಐ.ಬಿ.ಎಚ್.ಪ್ರಕಾಶನ, ಬೆಂಗಳೂರು.

ನಾಗಮಂಗಲ, ಸಂಪಾದಕರು ಡಾ. ಸಿ.ಮಹದೇವ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ೨೦೧೧

ಮಂಡ್ಯ ಜಿಲ್ಲೆ ದರ್ಶನ, ಮನ್ನೇಕೋಟೆ ಕೇಶವರಾವ್, ಐಬಿಎಚ್ ಪ್ರಕಾಶನ, ಬೆಂಗಳೂರು, ೧೯೭೮

ಮಂಡ್ಯ ಜಿಲ್ಲೆಯ ಜಾತ್ರೆಗಳು, ಡಾ.ಜಿ.ವಿ.ದಾಸೇಗೌಡ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ೨೦೦೦

ಮಂಡ್ಯ ಜಿಲ್ಲೆಯ ದೇವಾಲಯಗಳು–ಒಂದು ಅವಲೋಕನ, ತೈಲೂರು ವೆಂಕಟಕೃಷ್ಣ, ಭಾನು ಪ್ರಕಾಶನ, ಮಂಡ್ಯ, ೨೦೧೦

ಮಂಡ್ಯ ಜಿಲ್ಲೆಯ ಸ್ಥಳನಾಮಗಳು–ಭಾಗ ೧, ತೈಲೂರು ವೆಂಕಟಕೃಷ್ಣ, ಭಾನು ಪ್ರಕಾಶನ, ಮಂಡ್ಯ ೨೦೧೦

ಮಂಡ್ಯ ಜಿಲ್ಲೆಯ ಸಾಂಸ್ಕೃತಿಕ ಪರಂಪರೆ, ತೈಲೂರು ವೆಂಕಟಕೃಷ್ಣ, ಭಾನುಪ್ರಕಾಶನ, ಮಂಡ್ಯ ೨೦೦೨

ಮಂಡ್ಯ ಜಿಲ್ಲೆಯ ಪರಂಪರೆ ಮತ್ತು ಪತ್ರಿಕೋದ್ಯಮ, ಎಂ.ಎಸ್.ಕೆಂಪೇಗೌಡ, ವಿದ್ಯಮಾನ ಪ್ರಕಾಶನ, ಗೋಪಾಲಪುರ, ಮಂಡ್ಯ, ೨೦೦೭

ಮದ್ದೂರು ತಾಲ್ಲೂಕು ಸ್ಥಳನಾಮಗಳು–ಒಂದು ಅಧ್ಯಯನ, ಡಾ.ಎಸ್.ಕೆ.ಶಂಕರಯ್ಯ, (ಅಪ್ರಕಟಿತ ಪಿಎಚ್.ಡಿ ಪ್ರಬಂಧ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೦೯

ಮಂಡ್ಯ ತಾಲ್ಲೂಕಿನ ಪಾರಂಪರಿಕ ಕೃಷಿ ತಂತ್ರಜ್ಞಾನ, ಡಾ. ಎಚ್.ಮಂಜು, (ಅಪ್ರಕಟಿತ ಪಿಎಚ್.ಡಿ. ಪ್ರಬಂಧ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ೨೦೧೦

ಮದ್ದೂರು ತಾಲ್ಲೂಕು ದರ್ಶನ, ಡಾ.ಅರ್ಜುನಪುರಿ ಅಪ್ಪಾಜಿಗೌಡ, ಮದ್ದೂರು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು, ಮದ್ದೂರು ೧೯೯೯

ಮಾನವಿಕ ಕರ್ನಾಟಕ, ಪ್ರಸಾರಾಂಗ ಮೈಸೂರು ವಿ.ವಿ.ಬೆಳ್ಳಿ ಸಂಪುಟ ೧೯೯೪

ಮಾಸ್ತಿಕಲ್ಲು, ವೀರಗಲ್ಲು ಮತ್ತು ನಿಸಿದಿ ಶಾಸನಗಳು, ಡಾ.ಎಂ.ಜಿ.ಮಂಜುನಾಥ್, ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು ೨೦೧೧

ವಿಜಯನಗರ ಸಾಮ್ರಾಜ್ಯ, ಡಾ. ಪಿ.ಬಿ.ದೇಸಾಯಿ, ಕರ್ನಾಟಕ ಇತಿಹಾಸ ಸಂಶೋಧನಾ ಮಂಡಳಿ, ಧಾರವಾಡ, ೨೦೦೮

ಶಾಸನ ಅಧ್ಯಯನ, ಸಂಪುಟ ೨, ಸಂ. ಡಾ. ದೇವರಕೊಂಡಾರೆಡ್ಡಿ, ಪ್ರಸಾರಾಂಗ, ಕನ್ನಡ ವಿವಿ. ಹಂಪಿ, ೨೦೦೪

ಶಾಸನ ಅಧ್ಯಯನ, ಸಂಪುಟ ೪ ಸಂಚಿಕೆ ೧ ಮತ್ತು ೨ (ಸಂಯುಕ್ತ ಸಂಚಿಕೆ), ಸಂ. ಡಿ.ವಿ.ಪರಮಶಿವಮೂರ್ತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ೨೦೦೨

ಶಾಸನ ಪರಿಭಾಷೆ, ಹಿರೇಮಠ್, ಡಾ. ಎಸ್.ಎಂ.ವಿದ್ಯಾನಿಧಿ ಪ್ರಕಾಶನ, ಗದ್, ೨೦೦೫

ಶಾಸನ ಪರಿಶೋಧನೆ, ಡಾ. ಎಂ.ಜಿ.ಮಂಜುನಾಥ್, ಶಾರದಾಮಂದಿರ, ಮೈಸೂರು, ೨೦೦೮

ಶಾಸನ ಮಂಥನ, ಡಾ. ಪಿ.ವಿ.ಕೃಷ್ಣಮೂರ್ತಿ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು, ೨೦೧೧

ಶಾಸನ ಶಾಸ್ತ್ರ, ಡಾ. ಸಿ.ಪಿ.ಕೃಷ್ಣಕುಮಾರ್, ಚೇತನ ಬುಕ್ ಹೌಸ್, ಮೈಸೂರು, ೧೯೯೩

ಶಾಸನಗಳ ಹಿನ್ನೆಲೆಯಲ್ಲಿ ಕಲ್ಯಾಣ ಚಾಲುಕ್ಯ ದೇವಾಲಯಗಳು, ಗೋಪಾಲರಾವ್, ಡಾ.ಎಚ್.ಎಸ್., ಪ್ರ: ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು ೧೯೯೨

ಶಾಸನ ಸಂಗ್ರಹ, ಸಂ: ಎ.ಎಂ.ಅಣ್ಣಿಗೇರಿ, ಆರ್.ಶೇಷಶಾಸ್ತ್ರಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೧೯೮೨

ಶಾಸನ ಸಂಪದ, ಡಾ. ಎಂ.ಎಚ್.ನಾಗರಾಜರಾವ್, ಪ್ರಸಾರಾಂಗ, ಕರ್ನಾಟಕರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮೈಸೂರು, ೨೦೧೧

ಶಾಸನ ಸೂಕ್ತಿಸುಧಾರ್ಣವ, ಡಾ. ಎಂ.ಎಂ.ಕಲಬುರ್ಗಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೭

ಶಾಸನಾಧ್ಯಯನ, ಡಾ. ಎಸ್.ಎಮ್.ಹಿರೇಮಠ್, ವಿದ್ಯಾನಿಧಿ ಪ್ರಕಾಶನ, ಗದಗ, ೧೯೯೮

ಸಕ್ಕರೆಯ ಸೀಮೆ, ಡಾ. ಕೆ.ಅನಂತರಾಮು, ಕನ್ನಡ ಪುಸ್ತಕ ಪ್ರಾಧಿಕಾರ, ೨೦೦೮

ಸಮಾಧಿ, ಬಲಿದಾನ, ವೀರಮರಣ ಸ್ಮಾರಕಗಳು, ಡಾ. ಎಂ.ಎಂ.ಕಲಬುರ್ಗಿ, ಐಬಿಎಚ್ ಪ್ರಕಾಶನ, ಬೆಂಗಳೂರು ೧೯೮೦

ಸಂಶೋಧನೆ, ಡಾ. ಎಂ.ಚಿದಾನಂದಮೂರ್ತಿ, ಕನ್ನಡ ಸಾಹಿತ್ಯ ಪರಿಷತ್ತು, ೧೯೮೪

ಸಂಶೋಧನಾ ಮಾರ್ಗ, ಮಹಾಬಲೇಶ್ವರ ರಾವ್, ನವಕರ್ನಾಟಕ ಪ್ರಕಾಶನ, ಬೆಂಗಳೂರು ೧೯೯೬

ಹುಲ್ಲಹಳ್ಳಿ ದರ್ಶನ, ಹು.ಭೀ.ನಾಗರಾಜ, ತೃಣಪುರಿ ಪ್ರಕಾಶನ, ಹುಲ್ಲಹಳ್ಳಿ, ನಂಜನಗೂಡು ತಾ. ೧೯೮೮

ಹೊಯ್ಸಳ ಶಿಲ್ಪಕಲೆ, ಡಾ. ಕೆ.ವಸಂತಲಕ್ಷ್ಮಿ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ೨೦೦೮